"ಬುಲಾಯಿ ಹಾಡುಗಳ ಸಾಂಸ್ಕೃತಿಕ ಅಧ್ಯಯನ"

(ಕ.ರಾ.ಶಿ. ಸಂಸ್ಥೆ ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ, ಬೀದರ
ಇವರಿಗೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ
ಸಂಶೋಧನಾ ಮಹಾಪ್ರಬಂಧ)

ಸಂಶೋಧಕರು
ಶ್ರೀಮತಿ ಅರುಣಾ ಎಸ್.
ಮೆಥೋಡಿಸ್ಟ ಕಲಾ ಕಾಲೇಜು, ಬೀದರ

ಮಾರ್ಗದರ್ಶಕರು
ಡಾ. ಸೋಮನಾಥ ಯಾಳವಾರ
ಎಂ.ಎ., ಪಿಎಚ್.ಡಿ.
ಕ.ರಾ.ಶಿ. ಸಂಸ್ಥೆಯ ಸ್ನಾತಕೊತ್ತರ
ಕನ್ನಡ ಸಂಶೋಧನ ಕೇಂದ್ರ, ಬೀದರ.

ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

೨೦೦೮

"ಬುಲಾಯಿ ಹಾಡುಗಳ ಸಾಂಸ್ಕೃತಿಕ ಅಧ್ಯಯನ"

(ಕ.ರಾ.ಶಿ. ಸಂಸ್ಥೆ ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ, ಬೀದರ
ಇವರಿಗೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ
ಸಂಶೋಧನಾ ಮಹಾಪ್ರಬಂಧ)

ಸಂಶೋಧಕರು

ಶ್ರೀಮತಿ ಅರುಣಾ ಎಸ್.

ಮೆಥೋಡಿಸ್ಟ ಕಲಾ ಕಾಲೇಜು, ಬೀದರ

ಮಾರ್ಗದರ್ಶಕರು

ಡಾ. ಸೋಮನಾಥ ಯಾಳವಾರ

ಎಂ.ಎ., ಪಿಎಚ್.ಡಿ.

ಕ.ರಾ.ಶಿ. ಸಂಸ್ಥೆಯ ಸ್ನಾತಕೊತ್ತರ
ಕನ್ನಡ ಸಂಶೋಧನ ಕೇಂದ್ರ, ಬೀದರ.

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೦೯

ಪ್ರಮಾಣ ಪತ್ರ

"ಬುಲಾಯಿ ಹಾಡುಗಳ ಸಾಂಸ್ಕೃತಿಕ ಅಧ್ಯಯನ" ಎಂಬ ಸಂಶೋಧನಾ ಮಹಾ ಪ್ರಬಂಧವನ್ನು **ಡಾ. ಸೋಮನಾಥ ಯಾಳವಾರ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಪಿಎಚ್.ಡಿ ಪದವಿಗಾಗಿ ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ ಬೀದರ ಅವರಿಗೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾ ಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಇಲ್ಲವೆ ಪ್ರಕಟಣೆಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಶ್ರೀಮತಿ ಅರುಣಾ ಎಸ್.

ಸಂಶೋಧನ ವಿದ್ಯಾರ್ಥಿನಿ

ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ

ಕನ್ನಡ ಸಂಶೋಧನ ಕೇಂದ್ರ, ಬೀದರ.

ಸ್ಥಳ : ಬೀದರ

ದಿನಾಂಕ : ೨೮/೦೩/೨೦೦೯

ಮಾರ್ಗದರ್ಶಕರ ಪ್ರಮಾಣ ಪತ್ರ

"ಬುಲಾಯಿ ಹಾಡುಗಳ ಸಾಂಸ್ಕೃತಿಕ ಅಧ್ಯಯನ" ಎಂಬ ಸಂಶೋಧನಾ ಮಹಾ ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಪಿಎಚ್.ಡಿ ಪದವಿಗಾಗಿ **ಶ್ರೀಮತಿ ಅರುಣಾ ಎಸ್.** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಮಹಾ ಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಇಲ್ಲವೆ ಪ್ರಕಟಣೆಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ. ಸೋಮನಾಥ ಯಾಳವಾರ
ಮಾರ್ಗದರ್ಶಕರು,
ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ
ಕನ್ನಡ ಸಂಶೋಧನ ಕೇಂದ್ರ,
ಬೀದರ.

ಸ್ಥಳ : ಬೀದರ
ದಿನಾಂಕ : ೨೮/೦೩/೨೦೦೯

ಪರಿವಿಡಿ

ಅಧ್ಯಾಯ - ೧

ಅಧ್ಯಯನ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ - ೧

ಅಧ್ಯಯನ ಉದ್ದೇಶ ಮತ್ತು ವ್ಯಾಪ್ತಿ

ಮಾನವ ಸಂಸ್ಕೃತಿಯ ಅಧ್ಯಯನ ನಡೆಸುವ ಪ್ರಮುಖ ಶಾಖೆಗಳಲ್ಲಿ ಜಾನಪದ ಪ್ರಧಾನವಾದುದು. ಸಾಮಾನ್ಯವಾಗಿ ಸಂಸ್ಕೃತಿಯನ್ನು **ಜನಪದ ಸಂಸ್ಕೃತಿ** ಮತ್ತು **ಶಿಷ್ಟ ಸಂಸ್ಕೃತಿ** ಎಂದು ಎರಡು ಅಂಗಗಳಲ್ಲಿ ಗುರುತಿಸಲಾಗುತ್ತದೆ. ಮಾನವಶಾಸ್ತ್ರ ಸಮಗ್ರ ಸಂಸ್ಕೃತಿಯನ್ನು ಅಧ್ಯಯನ ಮಾಡಿದರೆ, ಜಾನಪದ ಪರಂಪರಾಗತ ವಿಷಯಗಳನ್ನು ಪ್ರತ್ಯೇಕಿಸಿಕೊಂಡು ತನ್ನ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಿಕೊಳ್ಳುತ್ತದೆ. ಸಹಸ್ರಾರು ವರ್ಷಗಳ ಮಾನವ ಜೀವನ ಯಾತ್ರೆಯಲ್ಲಿ ಒಂದು ಕಾಲಕ್ಕೆ ಜೀವನದ ಸಮಸ್ತ ವ್ಯಾಪಾರವೂ ಕಂಠಸ್ಥ ಸಂಸ್ಕೃತಿಯ ಮೂಲಕವೇ ತಲೆಮಾರಿನಿಂದ ತಲೆಮಾರಿಗೆ ಸಾಗಿಬರುತ್ತಿತ್ತು. ಈ ಸಂಸ್ಕೃತಿ ಶಿಷ್ಟ ಸಂಸ್ಕೃತಿಯ ಉದಯದಿಂದ ಮುಕ್ಕಾಗಲಿಲ್ಲ. ತನಗೆ ಅನುಕೂಲವಾದ ಪರಿಸರದಲ್ಲಿ ಅದು ಉಳಿದುಕೊಂಡೇ ಬಂದಿತು. ಇದನ್ನೇ ವಿದ್ವಾಂಸರು **'ಜಾನಪದ'** ಎಂದು ಕರೆದರು. ಜಾನಪದದ ಸಾಂಸ್ಕೃತಿಕ ಮಹತ್ವವನ್ನು ಅರಿತ ವಿದ್ವಾಂಸರು ಅದನ್ನು ಶಿಷ್ಟ ಸಂಸ್ಕೃತಿಯಿಂದ ಪ್ರತ್ಯೇಕಿಸಿಕೊಂಡು ಅಧ್ಯಯನ ಮಾಡತೊಡಗಿದರು. ೧೯ನೇ ಶತಮಾನದ ಮಧ್ಯಭಾಗದಲ್ಲಿ Folklore ಶಬ್ದದ ಸೃಷ್ಟಿಯಾದ ಮೇಲೆ ಅದರ ವಿವರಣೆಗೆ ಅನೇಕ ವಿದ್ವಾಂಸರು ಪ್ರಯತ್ನಿಸಿದರು. ಎಡ್ವಿನ್ ಸಿಡ್ನಿ ಹಾರ್ಸ್ಲ್ಯಾಂಡರ ಪ್ರಕಾರ **'ಜೀವನದ ರೀತಿನೀತಿಗಳು, ಆಚಾರವಿಚಾರಗಳು, ಸಂಪ್ರದಾಯ, ನಂಬಿಕೆಗಳು, ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಸಾಗಿಬರುತ್ತವೆ'**[೧] ಎಂಬುವುದು ಗಮನಾರ್ಹವಾಗಿದೆ.

ಆದಿಮಾನವರು ರೂಢಿಸಿಕೊಂಡ ಜೀವನ ವಿಧಾನ ನಿರಂತರವಾಗಿ ವಿಕಾಸವಾಗುತ್ತಿದೆ. ಎಂದೋ ರೂಪಿತವಾದ ನಂಬುಗೆ, ಆಚರಣೆ, ಪದ್ಧತಿ ಎಲ್ಲವೂ ಹಾಗೆಯೇ ಉಳಿಯವು, ಸಾಮಾಜಿಕ, ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ ಹಾಗೂ ನೈಸರ್ಗಿಕ ವ್ಯತ್ಯಾಸಗಳಾದಾಗ ಅಂದಂದಿನ ಅಗತ್ಯಕ್ಕೆ ತಕ್ಕಂತೆ ಹೊಸ ಹೊಸ ಆಚಾರ, ವಿಚಾರ, ರೂಢಿಪದ್ಧತಿ, ಕಲೆ, ಸಾಹಿತ್ಯ ರೂಪಿತಗೊಂಡವು.

ಜನರ ಪದ್ಧತಿಗಳಲ್ಲಾಗಲಿ, ಸಾಹಿತ್ಯದಲ್ಲಾಗಲಿ, ಒಂದೇ ದಿನದಲ್ಲಿ ಕ್ರಾಂತಿಯಾದಂತೆ ವ್ಯತ್ಯಾಸಗಳಾಗುವುದಿಲ್ಲ. ನಿರಂತರ ಬದಲಾಗುತ್ತಿದ್ದು ಒಂದು ಘಟ್ಟದಲ್ಲಿ ಎದ್ದು ಕಾಣುವಂತೆ ಕಂಡುಬಂದಾಗ ಎಲ್ಲರ ಗಮನಕ್ಕೆ ಬರುವುದು. ಒಂದು ಕಾಲದ ಜನರ ಜೀವನ ವಿಧಾನವು ಹಲವಾರು ವಿಷಯಗಳಲ್ಲಿ ದಾಖಲಾಗಿರುತ್ತದೆ. ಜನಪದ ಸಾಹಿತ್ಯವೂ ಅವುಗಳಲ್ಲೊಂದು ಜನಪದರ ಸುಖ-ದುಃಖ, ಹಾಸ್ಯ, ವಿಡಂಬನೆ, ಸೋಲು-ಗೆಲವು, ಒಲವು-ಚೆಲವು, ಹೋರಾಟ-ಆರಾಧನೆ, ಈರ್ಷೆ-ಮತ್ಸರ ಮುಂತಾದವುಗಳ ನೇರ ನಿರೂಪಣೆಯು ಗೀತೆ, ಕಥೆ, ಒಗಟು, ಗಾದೆ ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ ವ್ಯಕ್ತವಾಗಿರುತ್ತವೆ.

ಜನಪದ ಸಾಹಿತ್ಯದ ಪ್ರಮುಖ ಪ್ರಕಾರ ಗೀತೆಗಳು. ಜನಪದ ಗೀತೆಗಳನ್ನು ಮೂರು

ಪ್ರಕಾರಗಳಾಗಿ ವಿಂಗಡಿಸಲಾಗಿದೆ. ಅವುಗಳು

೧) ಗಂಡಸರ ಹಾಡುಗಳು

೨) ಹೆಂಗಸರ ಹಾಡುಗಳು

೩) ಮಕ್ಕಳ ಹಾಡುಗಳು

ಇವುಗಳಲ್ಲಿ ಹೆಂಗಸರ ಹಾಡುಗಳಿಗೆ ಪ್ರಮುಖ ಸ್ಥಾನ ಕಂಡುಬರುತ್ತದೆ.

ಕುಟ್ಟುವಾಗ, ಬೀಸುವಾಗ ಹಾಡುವ ಹಾಡುಗಳು ತ್ರಿಪದಿಗಳು ತುಂಬಾ ಜನ ಪ್ರಿಯತೆಯನ್ನು ಪಡೆದಿವೆ. ಹಬ್ಬ, ಉತ್ಸವ, ವಿಶೇಷ, ಪೂಜೆ, ಪ್ರಾರ್ಥನೆಗಳ ಸಂದರ್ಭಗಳಲ್ಲಿ ಹಾಡುವ ಆರಾಧನೆ - ಉತ್ಸಾಹದ ಹಾಡುಗಳು, ಹಲವು ಆಚರಣೆಗಳಲ್ಲಿ ಹಾಡುವ ಸಂಪ್ರದಾಯದ ಹಾಡುಗಳು ಇತ್ಯಾದಿ. ದ್ವಿಪದಿ, ತ್ರಿಪದಿ, ಚೌಪದಿ, ಕಥನಗೀತೆ ಮುಂತಾದ ರೂಪಗಳಲ್ಲಿವೆ. ವೈವಿದ್ಯಮಯವಾದ ಹಾಡುಗಳು ವಿಷಯ ವೈವಿದ್ಯತೆಯಿಂದ ಒಂದು ವಿಶ್ವಕೋಶದಂತೆ ಕಂಡುಬರುತ್ತವೆ.

ಕರ್ನಾಟಕದ ಕಿರೀಟ ಪ್ರಾಯವಾದ ಬೀದರ ಜಿಲ್ಲೆ ಶರಣರ ಸಂತರ ನೆಲವಿಡು. ಬಿದರಿ ಕಲೆಯ ತವರು ಮನೆ ಜಾನಪದ ಸಾಹಿತ್ಯ, ಕಲೆಗಳ ಆಗರ. ಸಾಹಿತಿಗಳು, ಕವಿಗಳು, ಸಂಗೀತಗಾರರು, ಸಮಾಜ ಸೇವಕರು, ಶಿಕ್ಷಣ ತಜ್ಞರು, ಅನುಭಾವಿಗಳು, ತತ್ವಪದಕಾರರು ಮುಂತಾಗಿ ಈ ಜಿಲ್ಲೆಯು ನಾಡಿಗೆ ನೀಡಿರುವ ಕೊಡುಗೆ ಅಪಾರವಾಗಿದೆ. ಗಡಿ ಜಿಲ್ಲೆಯಾದ ಕಾರಣ ಭಾಷೆ ಮತ್ತು ಸಂಸ್ಕೃತಿಗಳೆರಡೂ ದೃಷ್ಠಿಯಿಂದ ಸಮ್ಮಿಶ್ರ ಸ್ವರೂಪ ಪಡೆದ ಭಾಗ. ಅನ್ಯ ಭಾಷೆಗಳ ಆಧಿಪತ್ಯಗಳ ಒತ್ತಡದಲ್ಲಿ ಕನ್ನಡವನ್ನು ವಿಶಿಷ್ಟ ರೀತಿಯಲ್ಲಿ ಉಳಿಸಿ, ಬೆಳೆಸಿಕೊಂಡು ಬಂದುದು ಗಮನಾರ್ಹವಾಗಿದೆ.

ಕರ್ನಾಟಕದ ಇಂತಹ ವಿಶಿಷ್ಟ ಜಿಲ್ಲೆಯಾದ ಬೀದರ ಜಿಲ್ಲೆಯಲ್ಲಿ ವಿಶಿಷ್ಟವಾಗಿರುವ ಬುಲಾಯಿ ಹಾಡುಗಳಿವೆ. ಬುಲಾಯಿ ಹಾಡುಗಳು ಇಲ್ಲಿಯ **ಜನಪದ ಸಂಸ್ಕೃತಿಯ ತಿರುಳಿನಂತಿವೆ.** ಹೆಣ್ಣು ಮಕ್ಕಳೇ ಹಾಡುವ ಈ ಹಾಡುಗಳು ನಾಡಿಗೆ ದೊಡ್ಡದಾದ ನಾಗರಪಂಚಮಿ ಹಬ್ಬದ ಸಂದರ್ಭದಲ್ಲಿ ಹಾಡುವಂತಹವು, ಹೆಣ್ಣುಮಕ್ಕಳು ಕೈ ಕೈ ಹಿಡಿದು ಗೋಲಾಕಾರದಲ್ಲಿ ಸುತ್ತುತ್ತಾ ಭುಲಾಯಿ ಹಾಕುತ್ತಾ ಕಲೆಯನ್ನು ಪ್ರದರ್ಶಿಸುತ್ತಾ ಹಾಡುವ ಈ ಹಾಡುಗಳೇ **ಬುಲಾಯಿ** [illegible]ಷ್ಟ ಹಾಡುಗಳ ಹಿನ್ನೆಲೆ, ಸ್ವರೂಪ, ಸಂದರ್ಭ, ವ್ಯಾಪ್ತಿ, ಅರ್ಥ ಶ್ರೀಮಂತಿಕೆ, ಪ್ರೇರಣ-ಧೋರಣೆ, ಸಾಂಸ್ಕೃತಿಕ ನೆಲೆಗಳು, ಇತರ ಜನಪದ ಗೀತೆಗಳಲ್ಲಿಯ ಸ್ಥಾನಮಾನ, ಮೊದಲಿದ್ದ ಸಂಭ್ರಮ, ಪ್ರಸ್ತುತ ಆಚರಣೆ, ಹಾಡುಗಳ ಪ್ರಸ್ತುತತೆ ಮುಂತಾದವುಗಳನ್ನು ವಿಶ್ಲೇಷಣೆಗೆ ಒಳಪಡಿಸುವ ಯತ್ನವೇ ಪ್ರಸ್ತುತ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ.

ಪ್ರಸ್ತುತ ಅಧ್ಯಯನವು ಸಂಪೂರ್ಣವಾಗಿ ನಿರ್ಲಕ್ಷಿತವಾದ ಯಾರೂ ಗಮನಹರಿಸದ ಅಧ್ಯಯನವೇನಲ್ಲ. ಈ 'ಬುಲಾಯಿ ಹಾಡುಗಳ ಕುರಿತು ಇದುವರೆಗೆ ಬೆರಳೆಣಿಕೆಯಷ್ಟು ಲೇಖನಗಳು, ಸಂಗ್ರಹಣೆ ಮತ್ತು ಪ್ರಸ್ತಾವನೆ, ವಿವಣೆಗಳು ನಡೆದಿವೆ. ಆದರೆ 'ಬುಲಾಯಿ ಹಾಡುಗಳ ಸಾಂಸ್ಕೃತಿಕ ಅಧ್ಯಯನ' ಇಲ್ಲಿಯವರೆಗೆ ನಡೆದಿಲ್ಲ. ಈಗಾಗಲೇ ನಡೆದಿರುವ ಕೆಲವು

ಅಧ್ಯಯನಕ್ಕಿಂತ ಭಿನ್ನದೃಷ್ಟಿಕೋನದಿಂದ 'ಬುಲಾಯಿ ಹಾಡು'ಗಳನ್ನು ಅರ್ಥೈಸಿಕೊಳ್ಳಲು ಹಲವಾರು ಆಯಾಮಗಳಿರುವುದರಿಂದ ಇವುಗಳ ಸಾಂಸ್ಕೃತಿಕ ಅಧ್ಯಯನವನ್ನು ಇಲ್ಲಿ ಕೈಕೊಳ್ಳಲಾಗಿದೆ.

ಬೀದರ ಜಿಲ್ಲೆಯಲ್ಲಿಯೇ ಹುಟ್ಟಿ ಬೆಳೆದು ಬದುಕುತ್ತಿರುವ ನನಗೆ ಬುಲಾಯಿ ಹಾಡುಗಳು, ಭುಲಾಯಿ ಹಾಕುವುದು ಸುಪರಿಚಿತ ಚಿಕ್ಕಂದಿನಲ್ಲಿ ನಾನೂ ಭುಲಾಯಿ ಹಾಕಿದವಳೇ. ಆದರೆ ಆಗ ಈ ಹಾಡುಗಳ ಅಧ್ಯಯನದ ನೆಲೆಗಳ ಅರಿವು ನನಗಿರಲಿಲ್ಲ. ಮುಂದೆ ಸ್ನಾತಕೋತ್ತರ ಅಧ್ಯಯನದಲ್ಲಿ ಶಿಷ್ಟ ಸಾಹಿತ್ಯವನ್ನೇ ಓದಿದೆ. ಆದರೆ ಉಪನ್ಯಾಸಕಿಯಾಗಿ ಬಿ.ಎ. ತೃತೀಯ ವರ್ಷದ ವಿದ್ಯಾರ್ಥಿಗಳಿಗೆ ಐಚ್ಛಿಕ ಕನ್ನಡದಲ್ಲಿ ಜಾನಪದವನ್ನು ಬೋಧಿಸುವಾಗ ಜಾನಪದ ಕ್ಷೇತ್ರದಲ್ಲಿ ಆಸಕ್ತಿ, ಒಲವು ಮೂಡಿದವು ಅದರಲ್ಲೂ 'ಗರತಿಯ ಹಾಡು' ಹಾಗೂ 'ಮಲ್ಲಿಗೆ ದಂಡೆ' ಪಠ್ಯಗಳನ್ನು ಬೋಧಿಸುವಾಗ ಅವುಗಳೊಂದಿಗೆ ತಾದಾತ್ಮ್ಯತೆಯ ಅನುಭೂತಿಯೂ ಆಗುತ್ತಿತ್ತು. ಹೀಗಾಗಿ ಜಾನಪದದ ಅಧ್ಯಯನಕ್ಕೆ ತೊಡಗಿದೆ.

ಪಿಎಚ್.ಡಿ. ಅಧ್ಯಯನಧ ವಿಷಯ ಆಯ್ಕೆ ಕುರಿತು ಜಿಜ್ಞಾಸೆಯುಂಟಾಯಿತು. ಬೀದರ ಸಾಂಸ್ಕೃತಿಕವಾಗಿ ಅತ್ಯಂತ ಶ್ರೀಮಂತವಾದ ನೆಲ. ಈ ನೆಲದ ಸಂಸ್ಕೃತಿಯಲ್ಲಿ ಸತ್ವವಿದೆ, ಬಲವಿದೆ, ಬೇರೆಡೆಯಲ್ಲಿ ಕಾಣಸಿಗದ ಕೆಲವೊಂದು ಸಾಂಸ್ಕೃತಿಕ ಅಂಶಗಳು ಬೀದರ ಜಿಲ್ಲೆಯ ಜಾನಪದದಲ್ಲಿ ಕಂಡುಬರುತ್ತವೆ. ಚಿಕ್ಕಂದಿನಲ್ಲಿ ನಮ್ಮ ಸೋದರ ಮಾವನ ಮನೆಯಲ್ಲಿ (ಬಸವಕಲ್ಯಾಣ) ಹಾಕುತ್ತಿದ್ದ **'ಭುಲಾಯಿ'** ಸುಮಾರು ೧೫-೨೦ ವರ್ಷಗಳಿಂದ ನಿಂತುಹೋಗಿದೆ. ಹೀಗೆ ಮನೆ, ಓಣಿ, ಊರುಗಳಲ್ಲಿ ಹಾಕುತ್ತಿದ್ದ **'ಭುಲಾಯಿ'** ಬಹಳಷ್ಟು ಕಡೆ ಕಣ್ಮರೆಯಾಗುತ್ತಿದೆ. ತಿಂಗಳು, ವಾರ, ದಿನಗಟ್ಟಲೇ ಹಾಡುವವರ ಸಂಖ್ಯೆಯೂ ಗಣನೀಯವಾಗಿ ಕಡಿಮೆಯಾಗಿದೆ.

ಹೀಗಾಗಿ ನಮ್ಮ ಜನಪದ ಸಂಸ್ಕೃತಿಯ ಒಂದು ಪ್ರಮುಖ ಅಂಗವಾಗಿರುವ ವಿವಿಧ ಆಚರಣೆಗಳೇ ಇಂದು ಮರೆಯಾಗುತ್ತಿದ್ದು, ಮುಂದಿನ ಪೀಳಿಗೆಗೆ ಇವುಗಳ ಅರ್ಥವೇ ಆಗುವುದಿಲ್ಲ. ಈ ಅಧ್ಯಯನದೊಂದಿಗೆ ಬುಲಾಯಿ ಹಾಡುಗಳನ್ನು ಬಿಡಿ ಬಿಡಿ ಮಾಡಿಟ್ಟು, ಅವುಗಳಲ್ಲಿ ಅಡಕವಾದ ಸಂಗತಿಯನ್ನು ವಿಶ್ಲೇಷಿಸಬೇಕಾಗಿದೆ. ಒಂದೊಂದು ಹಾಡುಗಳು ಒಂದೊಂದು ವಿಷಯವನ್ನು ತಿಳಿಯಪಡಿಸುವಂತಹುಗಳಾಗಿರುವುದರಿಂದ ಅವುಗಳ ಮಹತ್ವ ಮತ್ತು ವೈಶಿಷ್ಟ್ಯವನ್ನು ಎತ್ತಿ ತೋರಿಸಬೇಕಾಗಿದೆ. **'ಹಿತ್ತಲಗಿಡ ಮದ್ದಲ್ಲ'** ಎನ್ನುವಂತೆ ನಮ್ಮಲ್ಲಿಯ ವಿಶಿಷ್ಟವಾದ ಜನಪದ ಗೀತೆಯ ಪ್ರಕಾರದ ಬಗ್ಗೆ ನಮ್ಮವರೇ ಗುರುತಿಸಿದ ಪರಿಸ್ಥಿತಿಯನ್ನು ಹೋಗಲಾಡಿಸಿ, ಅದು ಜನಜನಿತವಾಗುವಂತೆ ಮಾಡಬೇಕಾಗಿದೆ. ಈ ಅಧ್ಯಯನದೊಂದಿಗೆ ಬುಲಾಯಿ ಹಾಡುಗಳ ಮಹತ್ವ ಹಾಗೂ ಇತರ ಜನಪದ ಗೀತೆಗಳಲ್ಲಿ ಅವುಗಳ ಸ್ಥಾನಮಾನವನ್ನು ಗುರುತಿಸುವುದು ಕೂಡಾ ಒಂದು ಉದ್ದೇಶವಾಗಿದೆ.

ಈ ಹಾಡುಗಳಲ್ಲಿ ಹೆಣ್ಣುಮಕ್ಕಳು ತಮ್ಮ ಅನಿಸಿಕೆಗಳನ್ನು ಹಾಗೂ ವಾಸ್ತವಿಕ, ಕಾಲ್ಪನಿಕ ಘಟನೆಗಳ ಸ್ಪಷ್ಟ ಚಿತ್ರಣವನ್ನು ನೀಡಿದ್ದಾರೆ. ಹೆಣ್ಣಿನ ನೋವು-ನಲಿವು, ಸಮಸ್ಯೆಗಳು,

ವೀರ-ತ್ಯಾಗ-ಬಲಿದಾನ, ಸ್ವಾರ್ಥ ಸಹಬಾಳ್ವೆ, ಸಹಕಾರ ಮುಂತಾದ ಸಂಗತಿಗಳನ್ನು ಕುರಿತು ಮಾರ್ಮಿಕವಾಗಿ ವಿವರಿಸಿದ್ದಾರೆ. ಸಾಮಾಜಿಕ ಶಾಂತಿಗಾಗಿ ಜೀವನ ಮೌಲ್ಯಗಳನ್ನು ಎತ್ತಿಹಿಡಿದಿದ್ದಾರೆ. ಮಾನವೀಯತೆಯನ್ನು ಮೆರೆದಿದ್ದಾರೆ. ನೀತಿಯನ್ನು ನಿರೂಪಿಸಿದ್ದಾರೆ. ಕಾಲವಶವಾದ ಕೆಲವು ಐತಿಹಾಸಿಕ, ಸಾಮಾಜಿಕ ಮತ್ತು ಧಾರ್ಮಿಕ ಆದರ್ಶಗಳನ್ನು ಪ್ರಕಟಿಸಿದ್ದಾರೆ. ಹೀಗೆ ಬೀದರದ ಸರಳವಾದ ಭಾಷೆಯ ಮೂಲಕ ಬದುಕಿನ ಹಲವು ವಿಷಯ, ಪ್ರಸಂಗಗಳನ್ನು ಹಾಡಿದ್ದಾರೆ. ಆದರೆ ಈ ಹಾಡುಗಳ ಕುರಿತು ಇದುವವರೆಗೆ ಅಷ್ಟೇನು ಹೇಳಿಕೊಳ್ಳುವಂತಹ ಅಧ್ಯಯನವಾಗಿಲ್ಲ. ಮಾತ್ರವಲ್ಲದೆ ಬಹುತೇಕ ಹಾಡುಗಳು ಬೆಳಕಿಗೂ ಬಂದಿಲ್ಲ. ಆದ್ದರಿಂದ ಚರಿತ್ರೆ ಮರೆತಿರುವ ಇಂತಹ ಹಾಡುಗಳನ್ನು ಇತರ ಜನಪದ ಹಾಡುಗಳೊಂದಿಗೆ ಗುರುತಿಸಿ ಪರಿಚಯಿಸುವುದೂ ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ.

'ಆಡು ಮುಟ್ಟದ ಸೊಪ್ಪಿಲ್ಲ ಬುಲಾಯಿ ಹಾಡುಗಳು ಹೊಂದದ ವಿಷಯ' ವಿಲ್ಲವೆನ್ನುವಷ್ಟು ಬುಲಾಯಿ ಹಾಡುಗಳು ವಿಷಯವನ್ನು ಹೊಂದಿವೆ. ಹಲವಾರು ವಿಷಯವನ್ನು ಒಳಗೊಂಡಿರುವ ಇವು ವಿವಿಧ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತವೆ. ವೈವಿಧ್ಯತೆಯಿಂದ ಕೂಡಿದ ಈ ಹಾಡುಗಳ ಅಧ್ಯಯನ ಮಾಡಲು ಇಲ್ಲಿ ಸಾಕಷ್ಟು ಅವಕಾಶವಿದೆ. ಕಾರಣ ಜೀವನದ ಎಲ್ಲಾ ಕ್ಷೇತ್ರಗಳನ್ನೊಳಗೊಂಡ ಬುಲಾಯಿ ಹಾಡುಗಳ ಸಾಂಸ್ಕೃತಿಕ ಅಧ್ಯಯನದಿಂದ ಹೆಚ್ಚಿನ ತಿಳುವಳಿಕೆಯನ್ನು ಪಡೆಯುವ ಉದ್ದೇಶವು ಇಲ್ಲಿ ಪ್ರಮುಖವಾಗಿದೆ.

'ವಿಸ್ತಾರವಾದ ಕರ್ನಾಟಕದ ಭೂಭಾಗವನ್ನು ಭೌಗೋಲಿಕ ಮತ್ತು ಭಾಷೆಯ ದೃಷ್ಠಿಯಿಂದ ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಮತ್ತು ಕರಾವಳಿ ಕರ್ನಾಟಕವೆಂದು ಮೂರು ಭಾಗ [೨] ಮಾಡಲಾಗಿದೆ. ಭಾಷೆ, ಭೌಗೋಳಿಕ ಪರಿಸರ, ಆಹಾರ ಪದ್ಧತಿ, ಸಂಪ್ರದಾಯಗಳ ಆಚರಣೆ ನಂಬುಗೆಗಳಲ್ಲಿ ಹಲವು ವ್ಯತ್ಯಾಸಗಳಿರುವುದರಿಂದ ಈ ರೀತಿಯವಾದ ವರ್ಗೀಕರಣ ಅನಿವಾರ್ಯವಾಗುತ್ತದೆ. ನಾಗರ ಪಂಚಮಿಯ ಸಂದರ್ಭದಲ್ಲಿ ಹಾಡುವ 'ಬುಲಾಯಿ ಹಾಡುಗಳು' ಕರ್ನಾಟಕದಲ್ಲಿ ಕೇವಲ ಬೀದರ ಜಿಲ್ಲೆಗೆ ಮಾತ್ರ ಸೀಮಿತವಾಗಿವೆಯೆಂಬುದು ವಿದ್ವಾಂಸರ ಅಭಿಪ್ರಾಯವೂ ಆಗಿದೆ. ಕಾರಣ ನನ್ನ ಅಧ್ಯಯನದ ವ್ಯಾಪ್ತಿಯು ಬೀದರ ಜಿಲ್ಲೆಯ ಸೀಮಿತ ಗಡಿಯನ್ನು ಮಾತ್ರ ಒಳಗೊಂಡಿರುತ್ತದೆ. ಬುಲಾಯಿ ಹಾಡುಗಳ ಧಾರ್ಮಿಕ, ಸಾಮಾಜಿಕ, ರಾಜಕೀಯ, ಸಾಹಿತ್ಯಿಕ ಹಾಗೂ ಭಾಷಿಕ ಪ್ರಭಾವಗಳನ್ನು ಗುರುತಿಸುವ, ಸಾಂಸ್ಕೃತಿಕ ಎಳೆಗಳನ್ನು ಸಂಶೋಧಿಸಿ ಪರಿಶೀಲಿಸುವುದೂ ಈ ಅಧ್ಯಯನದ ವ್ಯಾಪ್ತಿಗೊಳಪಟ್ಟಿದೆ.

ಜನಪದ ಸಾಹಿತ್ಯದಲ್ಲಿ ಸ್ತ್ರೀಯರು ಹಾಡುವ ಹಾಡುಗಳು ಬಹು ಪ್ರಾಚೀನ ಕಾಲದಿಂದಲು ಇದ್ದರೂ, ಶಿಷ್ಟ ಸಾಹಿತ್ಯಕ್ಕೆ ಮಾರುಹೋದ ಪಂಡಿತರು ಇವುಗಳನ್ನು ಕಡೆಗಣಿಸಿದುದೆ ಅಧಿಕವಾಗಿದೆ. ಇಪ್ಪತ್ತನೆಯ ಶತಮಾನದ ಆರಂಭದದಲ್ಲಿ ಕನ್ನಡ-ಸಂಸ್ಕೃತಿ ಸಾಹಿತ್ಯದಲ್ಲಿ ಆಸಕ್ತಿ ಹೊಂದಿದ ಆಂಗ್ಲ ಅಧಿಕಾರಿಗಳು ಅವುಗಳ ಸಂಗ್ರಹ ಪ್ರಕಟಣ ಕಾರ್ಯ ಆರಂಭಿಸಿದರು. ಇದರಿಂದ ಸ್ಫೂರ್ತಿಗೊಂಡ ನವೋದಯ ಕಾಲದ ಕನ್ನಡಿಗರು ಜನಪದ ಸಾಹಿತ್ಯದಲ್ಲಿ

ಆಸಕ್ತಿ ಹೊಂದಿ ತಾವೂ ಸಂಗ್ರಹಿಸತೊಡಗಿದರು. ಅವರಲ್ಲಿ ಹಲಸಂಗಿ ಸೋದರರು ಮೊದಲಿಗರು. ೧೯೩೧ ರಲ್ಲಿ 'ಗರತಿಯ ಹಾಡು' ಹಾಗೂ ೧೯೩೫ ರಲ್ಲಿ ಮಲ್ಲಿಗೆ ದಂಡೆ' ಯನ್ನು ಸಂಗ್ರಹಿಸಿ ಪ್ರಕಟಿಸಿದರು. ಅಂದಿನಿಂದ ಹೆಂಗಸರ ಹಾಡುಗಳ ಅನೇಕ ಸಂಗ್ರಹಗಳು ಬಂದಿವೆ. ಅವುಗಳಲ್ಲಿ ಮದುವೆ, ಜೋಗಳ ಮೊದಲಾದ ಶುಭಸಂದರ್ಭದ ಹಾಡುಗಳ ಸಂಗ್ರಹ ಕೆಲವಾದರೆ, ಎಲ್ಲ ಹಾಡುಗಳನ್ನೊಳಗೊಂಡ ಸಂಗ್ರಹಗಳೇ ಹೆಚ್ಚು. ದಕ್ಷಿಣ ಕರ್ನಾಟಕ ಮತ್ತು ಮೈಸೂರು ಕರ್ನಾಟಕದ ಹಾಡುಗಳ ಸಂಗ್ರಹಗಳು ಅಧಿಕವಾಗಿವೆ. ಉತ್ತರ ಕರ್ನಾಟಕದ ಹಾಡುಗಳನ್ನೊಳಗೊಂಡ ಸಂಗ್ರಹಗಳು ಬೆರಳೆಣಿಕೆಯಷ್ಟು ಮಾತ್ರ ಕಂಡುಬರುತ್ತವೆ. 'ಗರತಿಯ ಹಾಡು', 'ಮಲ್ಲಿಗೆ ದಂಡೆ','ಜೀವನ ಜೋಕಾಲಿ' ಭಾಗ-೨, ಬಿ.ಎಸ್. ಗದ್ದಿಗಿಮಠರ 'ಜಾನಪದ ಗೀತೆಗಳು','ಕ್ಯಾತನಹಳ್ಳಿ ರಾಮಣ್ಣನವರ ಬೀದರ ಜಿಲ್ಲೆಯ ಜನಪದ ಗೀತೆಗಳನ್ನು ಹೆಸರಿಸಬಹುದು. ಬೀದರ ಜಿಲ್ಲೆಯ ಜನಪದ ಗೀತೆಗಳಲ್ಲಿ ವಿವಿಧ ಹಾಡುಗಳ ಜೊತೆ 'ಬುಲಾಯಿ ಹಾಡುಗಳ' ಸಂಗ್ರಹಗೊಂಡ ಮೊದಲ ಗ್ರಂಥವಾಗಿದೆ.

ಪ್ರಸ್ತುತ ಅಧ್ಯಯನದ ವಿಷಯ ಕುರಿತು ಇದುವರೆಗೆ ನಡೆದ ಅಧ್ಯಯನಗಳಲ್ಲಿ ಕೆಲವು ಬಿಡಿ ಲೇಖನಗಳಿವೆ. ಕೆಲವು ಪ್ರಸ್ತಾವನೆಗಳಿವೆ. ಒಂದೆರಡು ಸಂಪಾದಕರ ನುಡಿಗಳಿವೆ. ಈ ಹಿನ್ನೆಲೆಯಲ್ಲಿ ಕ್ಯಾತನಹಳ್ಳಿ ರಾಮಣ್ಣನವರ ಬೀದರ ಜಿಲ್ಲೆಯ ಜನಪದ ಗೀತೆಗಳು ಸಂಗ್ರಹದಲ್ಲಿ ಬುಲಾಯಿ ಹಾಡುಗಳು ಪ್ರಕಟವಾಗಿದ್ದು, ಮೊದಲ ಪ್ರಯತ್ನವಾಗಿದೆ.

ಶ್ರೀವಿರೂಪಾಕ್ಷ ಸ್ವಾಮಿ ಗೋರಟಾ ಅವರು ರಚಿಸಿದ 'ರಜಾಕಾರರ ಹಾಡು' ಬುಲಾಯಿ ಪದ 108 ನುಡಿಗಳ ಕಿರುಕೃತಿಯಾಗಿದ್ದು, ನಿಜಾಮರ ಆಳ್ವಿಕೆ, ದಬ್ಬಾಳಿಕೆ, ದೌರ್ಜನ್ಯ, ಅದರಲ್ಲೂ ಗೋರ್ಟಾ (ಬಿ)ದಲ್ಲಿ ನಡೆದ ಹತ್ಯಕಾಂಡವನ್ನು ತಿಳಿಸುವ ಕ್ರಾಂತಿಕಾವ್ಯವಾಗಿದೆ. ಇತಿಹಾಸದಲ್ಲಿ ನಡೆದ ಅತ್ಯಾಚಾರ, ಅನ್ಯಾಯ, ಹತ್ಯಾಕಾಂಡದ ದಾಖಲೆಯನ್ನು ಮಾಡಿದೆ.

ಡಾ॥ ಎಂ. ಎಸ್. ಲಠ್ಠೆಯವರು ಸಂಪಾದಿಸಿರು, ಡಾ॥ ಎಂ.ಎಸ್. ಸುಂಕಾಪುರ ಅವರ ಅಭಿನಂದನ ಗ್ರಂಥ 'ಜಾನಪದ ಸಂಪದ' ದಲ್ಲಿ ಶಶಿಕಲಾ ವಸ್ತ್ರದ ಅವರು 'ಬುಲಾಯಿ ಹಾಡುಗಳಲ್ಲಿ ಜೀವನದೃಷ್ಟಿ' ಎಂಬ ಲೇಖನವನ್ನು ಬರೆದಿರುವರು. ಇದರಲ್ಲಿ ಬುಲಾಯಿ ಪದದ ಅರ್ಥ, ಹಾಡುವ ವೇಳೆ, ರೀತಿ, ವಿಷಯ ಮುಂತಾದವುಗಳನ್ನು ಕುರಿತು ವಿವರಿಸಿ, ಇಂದು ಅವು ಮರೆಯಾಗುತ್ತಿರುವ ಬಗ್ಗೆ ವಿಷಾದವನ್ನು ವ್ಯಕ್ತಪಡಿಸಿದ್ದಾರೆ. ಅವು ಪ್ರಸ್ತುತ ಬದುಕಿಗೆ ಎಷ್ಟು ಪ್ರಯೋಜನಕಾರಿ ಎಂಬುದನ್ನು ವಿವರಿಸಿದ್ದಾರೆ.

ಶ್ರೀಮತಿ ಯಶೋದಮ್ಮ ಸಿದ್‌ಬಟ್ಟೆಯವರು ಕನ್ನಡ ಸಾಹಿತ್ಯ ಪರಿಷತ್ತು ಬೀದರದ ನೆನಪಿನ ಸಂಚಿಕೆ 'ಚೆಂಬೆಳಕು' ದಲ್ಲಿ ಬೀದರ ಜಿಲ್ಲೆಯ ಬುಲಾಯಿ ಹಾಡುಗಳು ಎಂಬ ಲೇಖನವನ್ನು ಬರೆದಿದ್ದು, ಇದರ ಬಗ್ಗೆ ಇನ್ನೂ ಸಂಶೋಧನೆ ನಡೆಯಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಡಾ॥ ಜಗನ್ನಾಥ ಹೆಬ್ಬಾಳೆಯವರು 'ಬೀದರ ಜಿಲ್ಲೆಯ ಬುಲಾಯಿ ಹಾಡುಗಳು' ಹಾಗೂ 'ಬುಲಾಯಿ ಹಾಡುಗಳು' ಎಂಬೆರಡು ಬುಲಾಯಿ ಹಾಡುಗಳನ್ನು ಸಂಗ್ರಹಿದ್ದಾರೆ. ಪ್ರಕಟಿತ ಸಂಕಲನದಲ್ಲಿ ಬುಲಾಯಿ ಪದದ ಅರ್ಥ, ಹಾಡುಗಳ ಸಂದರ್ಭ, ಸ್ವರೂಪ, ಸಂಪ್ರದಾಯ ವೈಶಿಷ್ಟ್ಯ, ದಾಟಿ, ಭಾಷೆಯ ಸಂಕೀರ್ಣತೆ, ಹಾಡುಗಳ ಪ್ರಸ್ತುತತೆ, ಅಂತರಾಳ ಮುಂತಾದ ವಿಷಯಗಳ ಪ್ರಸ್ತಾವನೆಯೊಂದಿಗೆ ೩೦ ಹಾಡುಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದು, ಇದು ಆಕರವೆಂದು ಪರಿಗಣಿಸಬಹುದು.

ಡಾ॥ ಡಿ.ಬಿ. ನಾಯಕರು 'ಬುಲಾಯಿ ಹಾಡುಗಳ' ಸಂಗ್ರಹ ಹಾಗೂ 'ಬುಲಾಯಿ ಹಾಡುಗಳ ಸಮಾಜೋ-ಸಾಂಸ್ಕೃತಿಕ ಅಧ್ಯಾಯನ' ಎಂಬ ಲೇಖನವನ್ನು ಪ್ರಕಟಿಸಿದ್ದಾರೆ. ಇದರಲ್ಲಿ ಹಾಡುಗಳ ಮೂಲ, ನಾಗರ ಪಂಚಮಿ ಹಿನ್ನೆಲೆ, ಶಿರೋಳ ಶೆಟ್ಟಿ, ಹಾಡುಗಳ ಸ್ವರೂಪ, ಲಕ್ಷಣ, ದಾಟಿ, ಪ್ರಕಾರ ಮುಂತಾಗಿ ವೈವಿಧ್ಯತೆಯನ್ನು ಸರಳವಾಗಿ ಓದುಗರ ಮುಂದೆ ಮಂಡಿಸುತ್ತಾರೆ. ಕರ್ನಾಟಕದ ರಾಜ್ಯದ ಬೀದರ ಜಿಲ್ಲೆಯ ಸಾಂಸ್ಕೃತಿಕ ಹಾಗೂ ಭಾಷಿಕ ವಿಶೇಷತೆಯನ್ನು ಈ ಸಂಗ್ರಹ ಪ್ರತಿನಿಧಿಸುತ್ತದೆ.[೩] ಬುಲಾಯಿ ಪದ ಮರಾಠಿ ಮೂಲದ್ದು ಎಂಬ ಅಂಶವನ್ನು ವ್ಯಕ್ತಪಡಿಸಿದ್ದು, ಈ ನಿಟ್ಟಿನ ಮೊದಲ ಪ್ರಯತ್ನವಾಗಿದೆ.

'ದೇಶಿ ಸಂಸ್ಕೃತಿ' ಸಂಗ್ರಹದಲ್ಲಿ ಪ್ರಕಟಗೊಂಡ ಅವರ ಲೇಖನವು 'ಬುಲಾಯಿ ಹಾಡುಗಳ' ಸಂಶೋಧನಾತ್ಮಕ ಲೇಖನವಾಗಿದೆ. ಇದರಲ್ಲಿ 'ಬುಲಾಯಿ' ಪದ ಮರಾಠಿ ಮೂಲದೆಂಬುದಕ್ಕೆ ಉದಾಹರಣೆಗಳನ್ನು ನೀಡಿದ್ದಾರೆ. ಬುಲಾಯಿ ಹಾಡುಗಳ ಪ್ರಕಾರವನ್ನು ಸೋದಹರಣೆಯೊಂದಿಗೆ ವಿವರಿಸಿದ್ದಾರೆ.

ಶ್ರೀ ಜಗನ್ನಾಥ ಕಮಲಾಪೂರೆ ಅವರ 'ಬೀದರ ಜಿಲ್ಲೆಯ ಬುಲಾಯಿ ಹಾಡುಗಳು ಒಂದು ಅಧ್ಯಯನ' ವಿಷಯದ ಮೇಲೆ ಎಂ.ಫಿಲ್. ಸಂಪ್ರಬಂಧವು ೬ ಅಧ್ಯಾಯಗಳು, ೯ ಬುಲಾಯಿ ಹಾಡುಗಳು ಹಾಗೂ ಬುಲಾಯಿ ಹಾಕುವ ದೃಶ್ಯ ಚಿತ್ರಗಳಿಂದ ಕೂಡಿದೆ.

ಇತ್ತೀಚಿಗೆ ಗು.ವಿ.ವಿ. ಪ್ರಸಾರಾಂಗದಿಂದ ಪ್ರಕಟವಾದ 'ಬೀದರ ಜಿಲ್ಲಾ ದರ್ಶನ' ಸಂಪುಟವು ಡಾ॥ ಸೋಮನಾಥ ಯಾಳವಾರ, ಡಾ॥ ಪ್ರೇಮಾ ಸಿರ್ಸೆಯವರು ಸಂಪಾದಿಸಿದ್ದಾರೆ. ಜನಪದ ಸಾಹಿತ್ಯದಲ್ಲಿ 'ಬುಲಾಯಿ ಹಾಡುಗಳು' ಲೇಖನವು ಶ್ರೀಮತಿ ಮಲ್ಲೇಶ್ವರಿ ಉದಯಗಿರಿ ಬರೆದಿದ್ದಾರೆ. ಇದರಲ್ಲಿ ಬುಲಾಯಿ ವೈಶಿಷ್ಟ್ಯ, ನಾಗರ ಪಂಚಮಿ ಜನಪದ ಕಲೆ, ಭಾಷಾ ಸಂಕೀರ್ಣತೆ, ಬುಲಾಯಿ ಪ್ರಸ್ತುತತೆ ಕುರಿತು ವಿವರಿಸಿದ್ದು ಬುಲಾಯಿಯ ಸಂಕ್ಷಿಪ್ತ ಮಾಹಿತಿಯನ್ನು ಹಾಡುಗಳೊಂದಿಗೆ ನೀಡಿದ್ದಾರೆ.

ಡಾ॥ ಕಾಶಿನಾಥ ಅಂಬಲಗೆ ಅವರು ತಮ್ಮ '**ಕೌದಿ**' ಮತ್ತು **ಇನ್ನಷ್ಟು ಕವನಗಳು** ಎಂಬ ಸಂಕಲನಗಳಲ್ಲಿ 'ಭುಲಾಯಿ ಹಾಡುಗಳು' ಎಂದು ಬರೆದಿದ್ದಾರೆ. ಈ ಭಾಗದ ಜನತೆಗೆ ಸಾಕ್ಷರತೆಯ ಮಹತ್ವ, ಅಡ್ಡ ಪಲ್ಲಕ್ಕಿ ಉತ್ಸವದ ವಿಡಂಬನೆಯನ್ನು ಈ ಹಾಡುಗಳ ಮೂಲಕವೇ

ಬರೆದು ತಿಳಿಸಿರುವುದು ಗಮನಾರ್ಹ. ಇದು ಬೀದರ ಜಿಲ್ಲೆಯಲ್ಲಿ ಬುಲಾಯಿ ಹಾಡುಗಳ ಪ್ರಭಾವವೆಷ್ಟಿತ್ತೆಂಬುದನ್ನು ತಿಳಿಸಿಕೊಡುತ್ತದೆ.

ಶ್ರೀ ನಾಗನಾಥ ಪ್ರಭಾ ಹಳ್ಳಿಖೇಡ ಅವರು ತಮ್ಮ 'ಆತ್ಮಜ್ಞಾನ' ಸಂಕಲನದ **'ಅಧ್ಯಾತ್ಮ ಭಜನಾಮೃತ'** ಹಾಗೂ **'ಅಧ್ಯಾತ್ಮ ಭಜನ ಮಾಲಾ'** ಗಳಲ್ಲಿಯ ಬುಲಾಯಿ ಹಾಡುಗಳು ವಿಶಿಷ್ಟವಾಗಿವೆ. ಕನ್ನಡ ಪದಗಳಿಗೆ ಹಿಂದಿ ಲಿಪಿಯನ್ನು ಬಳಸಿ ಬರೆದ ಈ ಹಾಡುಗಳು ಆಧ್ಯಾತ್ಮಿಕ ಬುಲಾಯಿ ಪದಗಳಾಗಿದ್ದು, ಬೇರೆಲ್ಲೂ ಕಾಣಸಿಗದ ವಿಶಿಷ್ಟ ಪ್ರಕಾರವಾಗಿದೆ.

ಡಾ॥ ಡಿ.ಬಿ. ನಾಯಕರ 'ಬುಲಾಯಿ ಹಾಡುಗಳು' ಸಂಗ್ರಹದ ಮುನ್ನುಡಿಯಲ್ಲಿ ಡಾ॥ ಚೆನ್ನಣ್ಣ ವಾಲಿಕಾರ ಅವರು ಈ ಹಾಡುಗಳ ಮೇಲೆ ಒಂದು ಮಹಾ ಪ್ರಬಂಧ ಬರೆಯುವಷ್ಟು ಬೀದರ ಜಿಲ್ಲೆಯಲ್ಲಿ ಬುಲಾಯಿ ಹಾಡುಗಳು ಸಿಗುವವು. ಇದರಲ್ಲಿ ಎಲ್ಲ ಮಾಹಿತಿ ಅಡಗಿರುವುದು. ಒಬ್ಬ ಸಂಶೋಧನಾ ವಿದ್ಯಾರ್ಥಿ ಈ ಮಹಾಕಾರ್ಯ ಮಾಡಲು ಡಿ.ಬಿ. ನಾಯಕರ ಈ ಕೃತಿ ದಾರಿದೀಪವಾಗುವುದೆಂದು ಆಶಿಸುವೆ"[೪] ಎಂಬ ಅವರ ಮಾತು ಕೂಡ ಈ ಹಾಡುಗಳ ಅಧ್ಯಯನದ ಅಗತ್ಯವನ್ನೇ ಸೂಚಿಸುವಂತಿದೆ.

ನಮ್ಮ ಸಮಾಜದ ರೀತಿ ನೀತಿಗಳು, ಆಚರಣೆಗಳು, ಪರಂಪರೆ, ಸಂಪ್ರಾದಾಯಗಳೆಲ್ಲ ಯಾವತ್ತೂ ಪುರುಷ ಪರವಾಗಿಯೇ ನಿರ್ಮಿತವಾಗಿದ್ದು, ಇದರಿಂದ ಸ್ತ್ರೀಯರು ಅನುಭವಿಸುವ ಸಮಸ್ಯೆಗಳಿಗೆ ಕೊರತೆಯಿಲ್ಲ. ಸಮಾಜದ ಅಲಿಖಿತ ಕಟ್ಟುಪಾಡುಗಳು ಹೆಣ್ಣಿನ ಸ್ವಾತಂತ್ರ್ಯಕ್ಕೆ ಬಂಧನದ ಬೇಡಿಯನ್ನು ತೊಡಸಿವೆ. ಹೆಣ್ಣಿನ ಬದುಕು, ಸ್ಥಾನಮಾನಗಳು ಯಾವತ್ತೂ ಒಂದು ರೀತಿಯ ವಿರೋಧಾಭಾಸದಲ್ಲಿಯೇ ಬೆಳೆದುಕೊಂಡು ಬಂದಿವೆ. ಪಂಚಪತಿವ್ರತೆಯರನ್ನು ಪೂಜಿಸುವ ಈ ನಾಡಿನಲ್ಲಿ ಹೆಣ್ಣಿನ ಅನಾದರ ಅವಮಾನಗಳು ನಿರಂತರವಾಗಿ ನಡೆಯುತ್ತಲೇ ಬಂದಿವೆ. ಕಾಲಾನುಕಾಲದಿಂದಲೂ **ಕೆರೆ-ಕೋಟೆಗಳಿಗೆ ಬಲಿಯಾಗುವುದು, ಶೀಲದ ಕಾರಣದಿಂದಾಗಿ ತೊಂದರೆ ಅನುಭವಿಸುವುದು. ಬಂಜೆತನದ ಬವಣೆ, ಕೌಟುಂಬಿಕ ದಾಂಪತ್ಯದ ಸಮಸ್ಯೆಗಳು ಇತ್ಯಾದಿ.** ಇವೆಲ್ಲವುಗಳು ಹೆಣ್ಣನ್ನು ಜರ್ಜರಿತಳನ್ನಾಗಿ ಮಾಡಿವೆ. ಅವಳ ನೋವು ನಲಿವು. ಜೀವನ ಮೌಲ್ಯಗಳು ವಾಸ್ತವಿಕ ಘಟನೆಗಳ ಅನಿಸಿಕೆಗಳನ್ನು ವ್ಯಕ್ತಪಡಿಸುವ ಮಾಧ್ಯಮವನ್ನಾಗಿ ಬುಲಾಯಿ ಹಾಡುಗಳನ್ನು ನೋಡಬೇಕಾದ ಅವಶ್ಯಕತೆಯನ್ನು ಮನಗಾಣಬೇಕಿದೆ. ಹೀಗೆ **ಹೆಣ್ಣಿನ ನೋವು-ನಲಿವುಗಳನ್ನು ಸಮರ್ಥವಾಗಿ ಪ್ರತಿ ಬಿಂಬಿಸಿರುವ ಹಾಗೂ ತನ್ನ ಸುತ್ತಮುತ್ತ ನಡೆದ ಹಾಗೂ ಕೇಳಿದ ವಾಸ್ತವ ಘಟನೆಗಳ ಸತ್ಯ ಸಂಗತಿಗಳನ್ನು ತಿಳಿಸುವ ಮತ್ತು ಪೌರಾಣಿಕ ಧಾರ್ಮಿಕ, ಆರ್ಥಿಕ, ಐತಿಹಾಸಿಕ ಮುಂತಾದ** ವಿಷಯಗಳ ಕುರಿತಾದ ಬುಲಾಯಿ ಹಾಡುಗಳನ್ನು ಹಿನ್ನೆಲೆಯಾಗಿಟ್ಟುಕೊಂಡು, ಅವುಗಳನ್ನು ಬಿಚ್ಚಿಡುವ ನಿಟ್ಟಿನಲ್ಲಿ ಒಂದು ಪ್ರಾಮಾಣಿಕ ಪ್ರಯತ್ನವನ್ನು ಈ ಸಂಶೋಧನಾ ಅಧ್ಯಯನದಲ್ಲಿ ಕೈಗೊಳ್ಳಲಾಗಿದೆ.

'ಬುಲಾಯಿ ಹಾಡುಗಳ ಸಾಂಸ್ಕೃತಿಕ ಅಧ್ಯಯನ' ವಿಷಯದ ಈ ಸಂಶೋಧನಾ

ಅಧ್ಯಯನವನ್ನು ಏಳು ಪ್ರಮುಖ ಅಧ್ಯಾಯಗಳಲ್ಲಿ ವಿಂಗಡಿಸಿ, ಬುಲಾಯಿ ಹಾಡುಗಳ ಹಿನ್ನೆಲೆಯಲ್ಲಿ ಬುಲಾಯಿ ಸಂಸ್ಕೃತಿಯನ್ನು, ಹಾಡುಗಳ ವೈಶಿಷ್ಟ್ಯ ಹಾಗೂ ಪ್ರಸ್ತುತತೆಯನ್ನು ಪರಾಮರ್ಶಿಸಿ ಅಧ್ಯಯನವನ್ನು ಮಾಡಲಾಗಿದೆ -

೧. **ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ :**

೨. **ಬುಲಾಯಿ ಸಂಸ್ಕೃತಿಯ ಇತಿಹಾಸ ಮತ್ತು ಪರಂಪರೆ :**

೩. **ಬುಲಾಯಿ ಹಾಡುಗಳ ಪ್ರೇರಣೆ - ಧೋರಣೆ :**

೪. **ಬುಲಾಯಿ ಹಾಡುಗಳ ಸಾಂಸ್ಕೃತಿಕ ನೆಲೆಗಳು :**

೫. **ಬುಲಾಯಿ ಹಾಡು ಹಾಗೂ ಇತರ ಜನಪದ ಹಾಡುಗಳ ತೌಲನಿಕ ಅಧ್ಯಯನ :**

೬. **ಜನಪದ ಹಾಡುಗಳಲ್ಲಿ ಬುಲಾಯಿ ಹಾಡುಗಳ ಸ್ಥಾನಮಾನ :**

೭. **ಸಮಾರೋಪ :**

ಎಂಬ ಏಳು ಅಧ್ಯಾಯಗಳು ಈ ಕೆಳಗಿನ ಅಧ್ಯಯನವನ್ನು ಒಳಗೊಂಡಿವೆ.

೧) ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ:

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿಯನ್ನು ಕುರಿತು ವಿವೇಚಿಸಲಾಗಿದೆ. ಇದುವರೆಗೆ ಬುಲಾಯಿ ಹಾಡುಗಳನ್ನು ಕುರಿತು ಬರೆದ ಬಿಡಿ ಲೇಖನಗಳು, ಪ್ರಕಟಿತ ಸಂಗ್ರಹಗಳಾದ 'ಬೀದರ ಜಿಲ್ಲೆಯ ಬುಲಾಯಿ ಹಾಡುಗಳು', 'ಬುಲಾಯಿ ಹಾಡುಗಳು' ಕೃತಿಗಳನ್ನು ಅವಲೋಕಿಸಿ, ಈಗಾಗಲೇ ನಡೆದಿರುವ ಅಧ್ಯಯನಕ್ಕಿಂತ ಭಿನ್ನ ದೃಷ್ಟಿಯಿಂದ ಬುಲಾಯಿ ಹಾಡುಗಳ ಸಾಂಸ್ಕೃತಿಕ ಅಧ್ಯಯನವನ್ನು ಹಾಡುಗಳ ಹಿನ್ನೆಲೆಯಲ್ಲಿ ಕೈಗೊಳ್ಳಲಾಗಿದೆ. ಬುಲಾಯಿ ಹಾಡುಗಳು ಕರ್ನಾಟಕದಲ್ಲಿ ಬೀದರ ಜಿಲ್ಲೆಯಲ್ಲಿ ಮಾತ್ರ ಕಂಡು ಬರುತ್ತವೆ. ನಾಗರಪಂಚಮಿಯ ಸಂದರ್ಭದಲ್ಲಿ 'ಭುಲಾಯಿ ಹಾಕುತ್ತಾ' ಹಾಡುವರು. ಹೀಗಾಗಿ ಅಧ್ಯಯನಕ್ಕೆ ಬೀದರ ಜಿಲ್ಲೆಯ ಪ್ರಾದೇಶಿಕ ಚೌಕಟ್ಟನ್ನು ಹಾಕಿಕೊಂಡು, **ಈ ಅಧ್ಯಯನದ ವ್ಯಾಪ್ತಿಯು ಬೀದರ ಜಿಲ್ಲೆಗೆ ಮಾತ್ರ ಸೀಮಿತಿವಾಗಿಟ್ಟುಕೊಳ್ಳಲಾಗಿದೆ.**

ಕರ್ನಾಟಕದ ಏಕೀಕರಣದ ಪೂರ್ವದಲ್ಲಿ ಬೀದರ ಜಿಲ್ಲೆ ಹೈದ್ರಾಬಾದ ನಿಜಾಮನ ಆಳ್ವಿಕೆಯಲ್ಲಿತ್ತು. ೧೯೫೬ ರಲ್ಲಿ ಕರ್ನಾಟಕ ರಾಜ್ಯದಲ್ಲಿ ಇದು ವಿಲೀನಗೊಂಡಾಗ ಕೇವಲ ನಾಲ್ಕು ತಾಲ್ಲೂಕುಗಳನ್ನು ಮಾತ್ರ ಹೊಂದಿತ್ತು. ೧೯೬೫ ರಲ್ಲಿ ಬಸವಕಲ್ಯಾಣ ತಾಲ್ಲೂಕದೊಂದಿಗೆ ಪ್ರಸ್ತುತ ಐದು ತಾಲ್ಲೂಕುಗಳನ್ನೊಳಗೊಂಡ ಜಿಲ್ಲೆಯಾಗಿ ರೂಪಗೊಂಡಿದೆ. ಈ ಜಿಲ್ಲೆಯ ಬುಲಾಯಿ ಹಾಡುಗಳ ಸಾಂಸ್ಕೃತಿಕ ಅಧ್ಯಯನವು ಪ್ರಸ್ತುತ ಅಧ್ಯಯನದ ವ್ಯಾಪ್ತಿಯಾಗಿರುತ್ತದೆ.

ಬೀದರ ಜಿಲ್ಲೆಯ ಬುಲಾಯಿ ಹಾಡುಗಳೇ ಪ್ರಸ್ತುತ ಅಧ್ಯಯನದ ಮೂಲ ಆಕರಗಳಾಗಿವೆ. ಅವುಗಳ ಸಾಂಸ್ಕೃತಿಕ ಅಧ್ಯಯನಕ್ಕೆ ಪ್ರಕಟಿತ ಬುಲಾಯಿ ಹಾಡುಗಳ ಸಂಗ್ರಹ ಹಾಗೂ ಬಿಡಿ

ಲೇಖನಗಳನ್ನು ಸಂಗ್ರಹಿಸಿಡಲಾಗಿದೆ. ಪ್ರಕಟಿತ ಬುಲಾಯಿ ಹಾಡುಗಳ ಹೊರತುಪಡಿಸಿ ಬುಲಾಯಿ ಹಾಡುಗಳನ್ನು ಸಂಗ್ರಹಿಸಲು ಕ್ಷೇತ್ರ ಕಾರ್ಯವನ್ನು ಕೈಗೊಳ್ಳಲಾಗಿದೆ. ಹೀಗಾಗಿ ಪ್ರಕಟಿತ ಹಾಡುಗಳು ಹಾಗೂ ಕ್ಷೇತ್ರ ಕಾರ್ಯದಲ್ಲಿ ಸಂಗ್ರಹಿಸಿದ ಹಾಡುಗಳನ್ನು ಹಾಗೂ ಮಾಹಿತಿಗಳನ್ನು ಈ ಅಧ್ಯಯನವು ಅವಲಂಬಿಸಿದೆ. ಒಟ್ಟಾರೆ, ಲಭ್ಯವಾದ ಬುಲಾಯಿ ಹಾಡುಗಳ ಹಿನ್ನಲೆಯಲ್ಲಿ ಸಾಂಸ್ಕೃತಿಕ ಅಧ್ಯಯನವನ್ನು ಕೈಗೊಳ್ಳಲು ಪ್ರಯತ್ನಿಸಲಾಗಿದೆ.

೨) **ಬುಲಾಯಿ ಸಂಸ್ಕೃತಿಯ ಇತಿಹಾಸ ಮತ್ತು ಪರಂಪರೆ:**

ಈ ಅಧ್ಯಾಯದಲ್ಲಿ ಬುಲಾಯಿಯ ಮೂಲ ಕುರಿತು ಚರ್ಚಿಸಲಾಗಿದೆ. **ಬುಲಾಯಿ ಪದದ** ಅರ್ಥವನ್ನು ಚರ್ಚಿಸುತ್ತಾ ಅದು ಬಳಕೆಗೆ ಬಂದ ಬಗೆಯನ್ನು ವಿವಿಧ ವಿದ್ವಾಂಸರ ಹಾಗೂ ವಕ್ತಾರರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ. ಬುಲಾಯಿ ಹಾಡುಗಳ ಸ್ವರೂಪವನ್ನು ವಿವಿಧ ಹಾಡುಗಳ ಉದಾಹರಣೆ ಹಾಗೂ ಛಂದಸ್ಸಿನ ವಿವರಣೆ ಮತ್ತು ವಿದ್ವಾಂಸರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ. 'ಸಂಸ್ಕೃತಿ'ಯ ಅರ್ಥವನ್ನು ವಿವಿಧ ವ್ಯಾಖ್ಯೆ ಹಾಗೂ ವಿದ್ವಾಂಸರ ಅಭಿಪ್ರಾಯಗಳ ಹಿನ್ನಲೆಯಲ್ಲಿ ವಿವರಿಸಲಾಗಿದೆ. 'ಭುಲಾಯಿ ಹಾಕು'ವುದು ಎಂದರೇನು ? ಅದನ್ನು ಹೇಗೆ ಹಾಕಲಾಗುವುದು ? ಅದರ ಸ್ವರೂಪ, ರೀತಿ ಅದನ್ನು ಹಾಕುವ ಸಂದರ್ಭ ಮುಂತಾದವುಗಳನ್ನು ಕುರಿತು ವಿವರಿಸಲಾಗಿದೆ. **ಭುಲಾಯಿ ಒಂದು ಕಲೆ** ಎಂಬುದನ್ನು ವಿವಿಧ ಜನಪದ ಕಲೆಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ. ಆರಾಧನಾ ಕಲೆಯನ್ನು ಕುರಿತು ವಿವರಿಸಿ, 'ಭುಲಾಯಿ ಕೇವಲ ಒಂದು ಕಲೆ' ಮಾತ್ರ ಆಗಿರದೆ ಅದೊಂದು **ಕಲೆಗಳ ಸಂಗಮ** ಎಂಬುದನ್ನು ಸಹ ವಿದ್ವಾಂಸರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ. **ಬುಲಾಯಿ ಸಂಸ್ಕೃತಿ**ಯ ವಿವೇಚನೆಯಲ್ಲಿ ಕೆಲವು ವಿದ್ವಾಂಸರ ಅಭಿಪ್ರಾಯಗಳನ್ನು ಆಧಾರವಾಗಿಟ್ಟುಕೊಂಡು ಇದೊಂದು **'ಸಂಕರ ಸಂಸ್ಕೃತಿ'** ಎಂಬ ವಿವೇಚನೆಯನ್ನು ಮಾಡಲಾಗಿದೆ.

ನಾಗರ ಪಂಚಮಿಯ ಹಬ್ಬದ ಆಚರಣೆಯನ್ನು ವಿವರಿಸುವ ಪೂರ್ವದಲ್ಲಿ 'ನಾಗ' ಎಂದರೇನು? ಅದರ ಮೂಲ, ಅರ್ಥ ಹಾಗೂ ಚರಿತ್ರೆ ಕುರಿತು ವಿವಿಧ ವಿದ್ವಾಂಸರ ಅಭಿಪ್ರಾಯಗಳನ್ನು ಚರ್ಚಿಸಲಾಗಿದೆ. ನಾಗಪೂಜೆಯ ಮೂಲವನ್ನು ಕುರಿತು ಶೋಧಿಸಲು ವಿವಿಧ ವಿದ್ವಾಂಸರ ಹೇಳಿಕೆಗಳನ್ನು ಪರಿಶೀಲಿಸಲಾಗಿದೆ. ಅಧ್ಯಯನದ ಅನುಕೂಲತೆಗಾಗಿ ದಕ್ಷಿಣ ಭಾರತ ಕರಾವಳಿಯ ನಾಗಪೂಜೆ ಮತ್ತು ಬೀದರ ಜಿಲ್ಲೆಯ ನಾಗಪೂಜೆಗಳ ಮೂಲವನ್ನು ಕುರಿತು ಚರ್ಚಿಸಲಾಗಿದೆ. ನಾಗಪೂಜೆಯ ಪ್ರಕಾರಗಳು, ನಂಬಿಕೆಗಳು ಮತ್ತು ಆಚರಣೆಯ ಬಗೆಗಳನ್ನು ಮಾಡುವ ಅಡುಗೆ ಪದಾರ್ಥಗಳು ಇದರ ವ್ರತನಿಯಮಗಳನ್ನು ಜನಪದ ಕಥೆ ಹಾಗೂ ಬುಲಾಯಿ ಹಾಡುಗಳ ಹಿನ್ನೆಲೆಯಲ್ಲಿ ಚರ್ಚಿಸಿ, ವಿವರಿಸಲಾಗಿದೆ. ಇಲ್ಲಿಯೂ ಮಲೆನಾಡಿನ ಸಂಪ್ರದಾಯಗಳ ತುಲನೆಯನ್ನು ಮಾಡಲಾಗಿದೆ. ನಾಗಪೂಜೆಯ ಸಂದರ್ಭದಲ್ಲಿ ಕಟ್ಟಿಕೊಳ್ಳುವ '**ಹಂಗನೂಲು**' ಪದದ ಅರ್ಥ ಹಾಗೂ ನಿಷ್ಪತ್ತಿಯ ಕುರಿತು ಚರ್ಚಿಸಲಾಗಿದೆ.

ಆಚರಣೆಯ ವಿಧಾನವನ್ನು ಬುಲಾಯಿ ಹಾಡುಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಲಾಗಿದೆ. ಒಟ್ಟಾರೆ ಬುಲಾಯಿ ಸಂಸ್ಕೃತಿಯ ಇತಿಹಾಸ ಮತ್ತು ಪರಂಪರೆಯಲ್ಲಿ ಸವಿಸ್ತಾರವಾಗಿ 'ಬುಲಾಯಿ'ಯ ವಿವಿಧ ಆಯಾಮಗಳನ್ನು ಗುರುತಿಸಿ, ಇಂದು ನಾಗರ ಪಂಚಮಿಯ ಆಚರಣೆಯ ರೀತಿ ಹಾಗೂ ನಂಬಿಕೆಗಳು ಕಡಿಮೆಯಾಗುತ್ತ ಬಂದರೂ, ಹಿಂದಿನ ನಂಬಿಕೆ ಹಾಗೂ ಆಚರಣೆಗಳು ಹೇಗೆ ಚಾಚೂ ತಪ್ಪದೆ ಅನುಸರಿಸಿ, ಆಚರಿಸುತ್ತಿದ್ದರೆಂಬುದನ್ನು ಹಾಡುಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ. ಹಾಗೂ ಬೀದರ ಜಿಲ್ಲೆಯು ಪ್ರಾಚೀನ ಕಾಲದಲ್ಲಿ **'ನಾಗಜನಾಂಗದ'** ಮೂಲ ಸ್ಥಾನವಾಗಿತ್ತೆಂಬುದನ್ನು ಕಂಡುಕೊಳ್ಳಲಾಗಿದೆ.

೩) ಬುಲಾಯಿ ಹಾಡುಗಳ ಪ್ರೇರಣೆ - ಧೋರಣೆ :

ಮೂರನೆಯ ಅಧ್ಯಾಯದಲ್ಲಿ ಬುಲಾಯಿ ಹಾಡುಗಳಿಗೆ ಸಿಕ್ಕ ಪ್ರೇರಣೆಗಳಾವವು ? ಹಾಗೂ ಅವುಗಳ ಧೋರಣೆ ಕುರಿತು ಚರ್ಚಿಸಲಾಗಿದೆ. ಹೆಣ್ಣು ಮಕ್ಕಳು ಬುಲಾಯಿ ಹಾಡುಗಳನ್ನು ಯಾವ ಸಂದರ್ಭಗಳಲ್ಲಿ ಕಟ್ಟಿದರೆಂಬುದನ್ನು ಹಾಡುಗಳ ಹಿನ್ನೆಲೆಯಲ್ಲಿ ಚರ್ಚಿಸಿ, ವಿವರಿಸಲಾಗಿದೆ. ಈ ಹಾಡುಗಳು ಆಗಿನ ಕಾಲದ ಮೌಲ್ಯಗಳ ಹಿನ್ನೆಲೆಯಲ್ಲಿ ಹುಟ್ಟಿಬಂದ ರೀತಿಯನ್ನು ಚರ್ಚಿಸಲಾಗಿದೆ. **ತ್ಯಾಗ, ಬಲಿದಾನ, ಚಾರಿತ್ರ್ಯಗಳು ಮೌಲ್ಯಗಳ ರೂಪದಲ್ಲಿ** ಈ ಹಾಡುಗಳಿಗೆ ಪ್ರೇರಣೆಯಾದ ರೀತಿ ಹಾಗೂ ಅವು ಹೊಂದಿದ ಧೋರಣೆಯನ್ನು ಹಾಡುಗಳ ಉದಾಹರಣೆಗಳೊಂದಿಗೆ ವಿವೇಚಿಸಲಾಗಿದೆ. **ಸಂಬಂಧಗಳು** ಪ್ರೇರಣೆಯಾದ ರೀತಿಯನ್ನು ವಿವಿಧ ರಕ್ತ ಸಂಬಂಧಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ. ಇತರ ಪ್ರೇರಣಾಂಶಗಳಿಗಿಂತಲೂ ಇವು ಹೆಚ್ಚು ಪ್ರಭಾವಶಾಲಿಯಾಗಿರುವಂತೆ ತೋರುವುದನ್ನು ಗಮನಿಸಲಾಗಿದೆ. ಇಂತಹ ಹಾಡುಗಳನ್ನು ಉದಾಹರಿಸಲಾಗಿದೆ. ತ್ಯಾಗದ ಮಹತ್ವದ ಮತ್ತು ಬಲಿದಾನದಲ್ಲಿ ಸ್ವಇಚ್ಛೆಯ ಬಲಿದಾನ ಹಾಗೂ ಬಲವಂತದ ಬಲಿದಾನಗಳ ಕುರಿತು ಚರ್ಚಿಸಲಾಗಿದೆ. ಹೋರಾಡಿ ಮಡಿದ ವೀರರು ಆದರ್ಶ ಪುರುಷರಾಗಿ, ಪೂಜೆಗೆ ಪಾತ್ರರಾಗುವುದನ್ನು ಕುರಿತು ಚರ್ಚಿಸಲಾಗಿದೆ.

೪) ಬುಲಾಯಿ ಹಾಡುಗಳ ಸಾಂಸ್ಕೃತಿಕ ನೆಲೆಗಳು :

ನಮ್ಮ ಬದುಕಿಗೆ, ಸಾಧಿತ ಸಂಸ್ಕೃತಿಗೆ, ಪ್ರಾಚೀನ ನಡವಳಿಕೆಯ ನಂಬುಗೆಗಳ ಎರಕಗಳೇ ಕಾರಣವೆನ್ನಬಹುದು. ಅವು ಹತ್ತುಹಲವು ವಿಧದಲ್ಲಿ ಬದುಕನ್ನು ಕಾಡುತ್ತ, ರೂಪಕೊಡುತ್ತ, ಅರ್ಥಕಲ್ಪಿಸುವಂತಹವು. ಬದುಕನ್ನು ಸಹನೀಯವಾಗಿಸಿದ **ಬುಲಾಯಿ ಸಂಸ್ಕೃತಿಯ ನೆಲೆಗಳನ್ನು** ವಿವಿಧ ಬಗೆಗಳಲ್ಲಿ ವಿಂಗಡಿಸಲಾಗಿದೆ. ಅವುಗಳಲ್ಲಿ **ಐತಿಹಾಸಿಕ ಘಟನೆಗಳು ಹಾಗೂ ರಾಜಕೀಯ ವಾತಾವರಣ** ಎಂಬಲ್ಲಿ ಮಹತ್ವದ ಘಟನೆಗಳು ಹಾಗೂ ವ್ಯಕ್ತಿಗಳು ಈ ಪ್ರದೇಶದ ಬುಲಾಯಿ ಸಂಸ್ಕೃತಿಯ ನೆಲೆಯಾಗಿರುವುದನ್ನು ಹಾಡುಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ. **ಸಾಮಾಜಿಕ ಸಂದರ್ಭ**ಗಳಲ್ಲಿ ಕುಟುಂಬ, ತಾಯಿ-ತವರು, ಅಣ್ಣ-ತಮ್ಮ, ಅಕ್ಕ-ತಂಗಿ, ದಾಂಪತ್ಯ ಜೀವನ, ಬಂಜೆ-ತಾಯ್ತನ, ಮುತ್ತೈದೆ-ಪಾತಿವ್ರತ್ಯ

ಮುಂತಾದವುಗಳು ಬುಲಾಯಿ ಸಂಸ್ಕೃತಿಯ ನೆಲೆಯಾಗಿರುವುದನ್ನು ಹಾಡುಗಳ ಹಿನ್ನೆಲೆಯಲ್ಲಿ ವಿವೇಚಿಸಲಾಗಿದೆ. ಧರ್ಮ ನಮ್ಮ ಸಮಾಜದ ಕೇಂದ್ರ ಬಿಂದು. ಪ್ರತಿಯೊಬ್ಬರ ಬದುಕಿನ ಚಟುವಟಿಕೆಗಳು ಅದರ ಸುತ್ತಲು ಸುತ್ತುತ್ತವೆ. ಧರ್ಮ ದೇವರಿಲ್ಲದೆ ಯಾವುದೂ ಸಾಧ್ಯವಿಲ್ಲ ಎಂಬುದು ಜನಪದರ ಬಲವಾದ ನಂಬಿಕೆ. ಹೀಗಾಗಿ ಧಾರ್ಮಿಕ ಹಿನ್ನೆಲೆಯಲ್ಲಿ ಮೂಡಿಬಂದಿರುವ ಹಲವಾರು ಬುಲಾಯಿ ಹಾಡುಗಳಲ್ಲಿ ಶಿವಶರಣರು, ಪೌರಾಣಿಕ ಪುರುಷರು, ಸಾಧು-ಸಂತರು, ಧಾರ್ಮಿಕ ಪುರುಷರು ಮುಂತಾದವರನ್ನು ಗುರುತಿಸಿ, **ಧಾರ್ಮಿಕ ವ್ಯವಸ್ಥೆ**ಯು ಬುಲಾಯಿ ಸಂಸ್ಕೃತಿಯ ನೆಲೆಯೆಂಬುದನ್ನು ಹಾಡುಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ. ಬದುಕಿಗೆ ಅನ್ನ, ನೀರು ಅವಶ್ಯಕ, ಅವುಗಳಿಲ್ಲದೆ ಜೀವನವಿಲ್ಲ. ಇಂತಹ ಜೀವನದ ಅತಿ ಅವಶ್ಯಕವಾದ 'ಅನ್ನ' ಸಿಗದಿದ್ದಾಗ ಬದುಕು ಯಾವ ರೀತಿಯಲ್ಲಿ ಬರ್ಬರ ಆತ್ಮಾಹುತಿಗೆ ಒಳಗಾಗುವುದೆನ್ನುವುದನ್ನು ಹಾಗೂ ಬಡತನ ಮನುಷ್ಯನನ್ನು ಸಾವಿನ ದವಡೆಗೂ ತಳ್ಳಬಲ್ಲುದೆಂಬುದನ್ನು ಬುಲಾಯಿ ಹಾಡುಗಳಲ್ಲಿ ಗುರುತಿಸಿ, ಇಂತಹ **ಆರ್ಥಿಕ ಸ್ಥಿತಿ** ಕೂಡ ಬುಲಾಯಿ ಸಂಸ್ಕೃತಿಯ ನೆಲೆಯಾಗಿರುವುದನ್ನು ಹಾಡುಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ. ಪರಸ್ಪರ ಸಹಕಾರ ಭಾವನೆ, ಪ್ರೇಮ, ಹೊಂದಾಣಿಕೆ, ಜೀವನ ಮೌಲ್ಯಗಳಲ್ಲಿ ಮಾನವೀಯ ಮೌಲ್ಯಗಳು, ಸಾಮಾಜಿಕ ಮೌಲ್ಯಗಳು ಮಾನವನ ಬದುಕಿನ ಸಿರಿತನದ ಅಂಶಗಳು. ಇಂತಹ **ಸುಸಂಸ್ಕೃತ ಬದುಕಿನ** ಬಗೆಗಳನ್ನು ಬುಲಾಯಿ ಹಾಡುಗಳಲ್ಲಿ ಗುರುತಿಸಿ, ಹಾಡುಗಳ ಉದಾಹರಣೆಗಳೊಂದಿಗೆ ಚರ್ಚಿಸಲಾಗಿದೆ. ಪರಂಪರೆಯನ್ನು ಮುಂದೊರೆಸಿಕೊಂಡು ಹೋಗಿ **ಪಾರಂಪರಿಕ ಆಚರಣೆ**ಯಲ್ಲಿ **ಐದೇಸಿ, ತೊಟ್ಟಿಲಲ್ಲಿ ಹಾಕುವುದು, ಮೈನೆರೆಯುವುದು, ಮದುವೆಯಲ್ಲಿ-ಕುಂಕುಮ ಹಚ್ಚುವುದು, ಭಾಸುಣಕಿ, ಸುರಗಿ ಸುತ್ತುವುದು, ಬೋರಜಗಲಿ ನಿರ್ಮಾಣ, ಹಂದರ ಇತ್ಯಾದಿ, ಸೋಬಾನ, ಬಸುರು - ಬಯಕೆ, ನಂಬಿಕೆಗಳು** ಮುಂತಾದವು ಬುಲಾಯಿ ಸಂಸ್ಕೃತಿಯ ನೆಲೆಗಳಾಗಿರುವ ಬಗೆಯನ್ನು ಹಾಡುಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ. **ಜನರು ಹೊಂದಿದ ಮನೋಭಾವನೆ**ಯಲ್ಲಿ ಆಕಳ ಕುರಿತ ಕಾಳಜಿಯನ್ನು ಅದರ ವ್ಯಥೆಯನ್ನು ಕುರಿತು ವಿವೇಚಿಸಲಾಗಿದೆ. **ಸಾಹಿತ್ಯಿಕ ನೆಲೆಯಲ್ಲಿ ಸ್ತ್ರೀವಾದಿ ಚಿಂತನೆ** ಎಂದರೇನು ಎಂಬುದನ್ನು ವ್ಯಾಖ್ಯೆಗಳ ಮೂಲಕ ಚರ್ಚಿಸಿ, ಸ್ತ್ರೀವಾದಿ ಚಿಂತನೆಯ ದಿಟ್ಟತನ, ಸ್ವಾಭಿಮಾನ ಮುಂತಾದ ಮಹಿಳಾಪರ ಅಂಶಗಳನ್ನು ಬುಲಾಯಿ ಹಾಡುಗಳಲ್ಲಿ ಗುರುತಿಸಿ, ತನ್ನ ತನವನ್ನು ಕಾಯ್ದುಕೊಳ್ಳುವ, ತನ್ನ ಸ್ವಾಭಿಮಾನಕ್ಕೆ ಕುಂದುಂಟಾದಾಗ ಪ್ರತಿಭಟಿಸುವ, ಧೈರ್ಯದಿಂದ ಸಮಸ್ಯೆಗಳನ್ನು, ಸಂದರ್ಭಗಳನ್ನು ಎದುರಿಸುವ, ಅನೈತಿಕತೆಯನ್ನು ಅನ್ಯಾಯವನ್ನು ಧಿಕ್ಕರಿಸುವ ಮುಂತಾದ ಅಂಶಗಳನ್ನು ಬುಲಾಯಿ ಹಾಡುಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ.

೫) ಬುಲಾಯಿ ಹಾಡು ಹಾಗೂ ಇತರ ಜನಪದ ಹಾಡುಗಳ ತೌಲನಿಕ ಅಧ್ಯಯನ :

ತೌಲನಿಕ ಅಧ್ಯಯನದಿಂದ ವಿವಿಧ ಸಾಹಿತ್ಯ ಪ್ರಕಾರಗಳ ಸಾಮ್ಯ - ವೈಷಮ್ಯಗಳನ್ನು ಅರಿತುಕೊಳ್ಳಲು ಸಹಾಯವಾಗುವುದು. ಹೀಗಾಗಿ ಪ್ರಸ್ತುತ ಅಧ್ಯಾಯದಲ್ಲಿ ಬುಲಾಯಿ

ಹಾಡುಗಳಿಗೆ ಹೋಲುವ, ಅಂದರೆ ವಿಷಯವಸ್ತು, ಸೊಲ್ಲು ಹಾಗೂ ನಿರೂಪಣೆಯಲ್ಲಿ ಸಾಮ್ಯತೆ ಹೊಂದಿರುವಂತೆ ಕಂಡುಬರುವ ಇತರ ಜನಪದ ಗೀತ ಪ್ರಕಾರಗಳಾದ ಅಲಾಯಿ ಹಾಡು, ಕೋಲಿನ ಪದ ಹಾಗೂ ಕಥನಗೀತೆಗಳಿಗೂ ಬುಲಾಯಿ ಹಾಡುಗಳಿಗೂ ಇರುವ ಸಾಮ್ಯ ವೈಷಮ್ಯತೆಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.

ಅಲಾಯಿ ಕುಣಿತ ಎಂದರೇನು ? ಕುಣಿತದ ಸಂದರ್ಭ, ವೇಷಭೂಷಣ, ಹಿನ್ನೆಲೆ ಅಲಾಯಿ (ಮೊಹರಂ) ಪದಗಳ ವಿಷಯ ವಸ್ತು, ಹಾಡುವ ಸಂದರ್ಭ, ರೀತಿ, ಆಚರಣೆ, ಭಾವೈಕ್ಯತೆಯ ನೆಲೆ ಮುಂತಾದವುಗಳನ್ನು ವಿದ್ವಾಂಸರ ಅಭಿಪ್ರಾಯಗಳೊಂದಿಗೆ ವಿಶ್ಲೇಷಿಸಿ, ಅಲಾಯಿ-ಬುಲಾಯಿ ಹಾಡುಗಳ-ಕಲೆಯ ಸಾಮ್ಯ ಹಾಗೂ ವೈಷಮ್ಯತೆಗಳನ್ನು ಕುರಿತು ಚರ್ಚಿಸಲಾಗಿದೆ.

ಕೋಲಾಟ ಆಡುವ ರೀತಿ, ಸಂದರ್ಭ, ಪರಿಕರಗಳು, ಕೋಲು ಪದ, ಅವುಗಳ ವಿಷಯ ವಸ್ತು, ಸೊಲ್ಲು, ಹಾಡುವ ರೀತಿ ಮುಂತಾದವುಗಳನ್ನು ವಿದ್ವಾಂಸರ ಅಭಿಪ್ರಾಯಗಳೊಂದಿಗೆ ವಿವರಿಸಿ ಕೋಲುಪದ ಹಾಗೂ ಬುಲಾಯಿ ಪದಗಳ ಸಾಮ್ಯ ವೈಷಮ್ಯತೆಗಳನ್ನು ವಿವೇಚಿಸಲಾಗಿದೆ.

ಕಥನಗೀತೆಗಳ ವಿಷಯ ವಸ್ತು, ಹಾಡುವ ರೀತಿ, ಸಂದರ್ಭ, ಬಳಸುವ ವಾದ್ಯಪರಿಕರ ಮುಂತಾದವುಗಳನ್ನು ವಿದ್ವಾಂಸರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಚರ್ಚಿಸಿ, ಕಥನ ಗೀತೆಗಳಿಗೂ ಹಾಗೂ ಬುಲಾಯಿ ಹಾಡುಗಳಿಗೂ ಇರುವ ಸಾಮ್ಯತೆ ಹಾಗೂ ವೈಷಮ್ಯಗಳನ್ನು ಕುರಿತು ಚರ್ಚಿಸಲಾಗಿದೆ. ಒಟ್ಟಾರೆ ಬುಲಾಯಿ ಹಾಡುಗಳ ಮೇಲಾದ ಇತರ ಜನಪದಗೀತ ಪ್ರಕಾರಗಳ ಪ್ರಭಾವವನ್ನು ಗುರುತಿಸಲಾಗಿದೆ. ಜೊತೆಗೆ ಬುಲಾಯಿ ಹಾಡುಗಳ, ಧಾಟಿ, ಸೊಲ್ಲು, ನಿರೂಪಣಾ ಶೈಲಿ ಮುಂತಾದವುಗಳಿಂದ ಅವುಗಳ ರಚನಾ ಸ್ವಂತಿಕೆಯನ್ನು ಕುರಿತು ಚರ್ಚಿಸಲಾಗಿದೆ. ಇತರ ಜನಪದ ಗೀತೆಗಳ ವಿಷಯ ವಸ್ತುವನ್ನು ಪಡೆದರು ತನ್ನದೇ ಆದ ರೀತಿಯಲ್ಲಿ ರಚಿಸಿ ಹಾಡುವ ವೈಶಿಷ್ಟ್ಯವನ್ನು ಕುರಿತು ಚರ್ಚಿಸಲಾಗಿದೆ.

೬) ಜನದ ಹಾಡುಗಳಲ್ಲಿ ಬುಲಾಯಿ ಹಾಡುಗಳ ಸ್ಥಾನಮಾನ:

ಜನಪದ ಗೀತ ಪ್ರಕಾರಗಳಲ್ಲಿ ಅದರಲ್ಲೂ ಹೆಂಗಸರ ಹಾಡುಗಳಾದ ಕ್ರಿಯಾತ್ಮಕ, ಆಚರಣೆ, ವೃತ್ತಿ ಹಾಗೂ ಆರಾಧನೆಯ ಹಾಡುಗಳನ್ನು, ಅವುಗಳು ಹಾಡುವ ಸಂದರ್ಭಗಳನ್ನು ವಿವರಿಸಲಾಗಿದೆ. ಅವುಗಳಲ್ಲಿ ಕುಟ್ಟುವ ಹಾಡು, ಬೀಸುವ ಹಾಡು, ಹಚ್ಚೆಯ ಹಾಡು, ಜೋಗುಳ ಪದ, ಮದುವೆಗೆ ಸಂಬಂಧಿಸಿದ ಒಳ್ಳಕಲ್ಲಿಡುವ ಹಾಡು, ಕುಂಕುಮ ಹಚ್ಚೋ ಪದ, ಬಾಗಿಲು ಹಿಡಿಯುವ ಪದ, ಸೋಬಾನೆ ಹಾಡುಗಳು, ಜೋಕುಮಾರನ ಹಾಡು, ಸತ್ತವರ ಹಾಡು, ಬುರ್ ಬುರ್ ಪೋಚಮ್ಮನಹಾಡು ಮುಂತಾದವುಗಳನ್ನು ಉದಾಹರಣೆಗಳೊಂದಿಗೆ ವಿವರಿಸಲಾಗಿದೆ. ಈ ಜನಪದ ಹಾಡುಗಳಲ್ಲಿ ಬುಲಾಯಿ ಹಾಡುಗಳ ವೈಶಿಷ್ಟ್ಯಗಳನ್ನು ಕುರಿತು ಚರ್ಚಿಸಲಾಗಿದೆ.

[illegible]

2) [illegible] :

[illegible]

[illegible]

ಅಡಿ ಟಿಪ್ಪಣಿ

೧. ರಾಜಪ್ಪ ದಳವಾಯಿ : ಕನ್ನಡ ಸಾಹಿತ್ಯ ಕೋಶ, ೨೦೦೩. ಪುಟ ೪೫

೨. ಎಂ.ಎಂ. ಕಲಬುರ್ಗಿ : ಮಾರ್ಗ - ೨, ಪುಟ ೪೮೭

೩. ಡಾ.ಡಿ.ಬಿ.ನಾಯಕ : ಬುಲಾಯಿ ಹಾಡುಗಳು, ೨೦೦೧, ಎರಡು ಮಾತು

೪. ಡಾ.ಡಿ.ಬಿ.ನಾಯಕ : ಬುಲಾಯ ಹಾಡುಗಳು, ೨೦೦೧, ಮುನ್ನುಡಿ

ಅಧ್ಯಾಯ - ೨

ಬುಲಾಯಿ ಸಂಸ್ಕೃತಿಯ ಇತಿಹಾಸ ಮತ್ತು ಪರಂಪರೆ

ಅಧ್ಯಾಯ - ೨

ಬುಲಾಯಿ ಸಂಸ್ಕೃತಿಯ ಇತಿಹಾಸ ಮತ್ತು ಪರಂಪರೆ

ನಮ್ಮ ದೇಶದಲ್ಲಿ ಆದಿಕಾಲದಿಂದಲೂ ನಾಗಪೂಜೆ ಮಾಡುವ ರೂಢಿ ಇದೆ. ಋಗ್ವೇದದ ಪ್ರಧಾನ ದೈವ ಸರ್ಪ ಎಂಬುದು ವಿದ್ವಾಂಸರ ಮತ. ಹರಪ್ಪ ಸಂಸ್ಕೃತಿಯಲ್ಲಿ ನಾಗಗಳ ಉಲ್ಲೇಖವಿರುವುದು ಕಂಡು ಬರುತ್ತದೆ. ನಾಗಾರಾಧನೆಯಿಂದ ಧನ-ಧಾನ್ಯ, ಆಯುಷ್ಯ ಸಂತಾನದ ಅಭಿವೃದ್ಧಿ ಆಗುತ್ತದೆಂಬ ನಂಬಿಕೆ ಇದೆ. ಹೀಗಾಗಿ ನಾಗರಪಂಚಮಿಯಂದು ಕುಟುಂಬದ ಅಭಿವೃದ್ಧಿ, ಸಂತಾನ ಲಾಭ ಮೊದಲಾದ ಉದ್ದೇಶಗಳಿಂದ ನಾಗನನ್ನು ಆರಾಧಿಸುವ ರೂಢಿ ಎಲ್ಲೆಡೆ ಕಂಡು ಬರುತ್ತದೆ. ಆದರೆ ಆಚರಣೆಯ ಪದ್ಧತಿ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿದೆ. ಆಷಾಢ ಮಾಸ ಕಳೆದ ಬಳಿಕ ಶ್ರಾವಣ ಮಾಸದಲ್ಲಿ ಕಾಲಿಡುವ ಮೊದಲ ಹಬ್ಬ ಪಂಚಮಿ. ಮನೆ ಮನೆಯಲ್ಲೂ ಸಡಗರದ ವಾತಾವರಣ. ನಾನಾ ಬಗೆಯ ಉಂಡೆಗಳ ಸವಿ ನಾಲಗೆಗೆ, ಬನದೊಳಗೆ ಕೇದಿಗೆಯ ಕಂಪು, ವರ್ಷಾ ಋತುವಿನ ತುಂತುರ ಹನಿಗಳ ತಂಪು, ಮೈತುಂಬಾ ಹಚ್ಚ ಹಸಿರನ್ನುಟ್ಟು ಮದುವಣಗಿತ್ತಿಯಂತೆ ಸುಂದರವಾಗಿ ಕಂಗೊಳಿಸುವ ಭೂತಾಯಿ, ಇಂತಹ ವೇಳೆಯಲ್ಲಿ

> ಹಬ್ಬ ಬಂದಿತೆಂದು ಹಿಗ್ಗಿಲಿ ಇರತಾರ
> ಅಣ್ಣ ಯಾವಾಗ ಬರುವನು ಕಲಿಯಾಕ ಕೋಲುಕೋಲ[೧]

ಎನ್ನುವ ತವರು ಮನೆಯ ಹಂಬಲ ಮಗಳಿಗೆ, ಮಗಳನ್ನು ಕರೆಯಿಸಿಕೊಳ್ಳುವ ಆತುರ ಅವ್ವನಿಗೆ. ಹೀಗೆ ಸಾಮಾನ್ಯವಾಗಿ ಎಲ್ಲಾ ಕಡೆಯಲ್ಲೂ ಕಂಡು ಬರುವ ಈ ಸಂಭ್ರಮಗಳ ಜೊತೆಗೆ ಮರಕ್ಕೆ ಕಟ್ಟಿದ ಜೋಕಾಲಿಯಲ್ಲಿ ಜೀಕುವ ಉತ್ಸಾಹ ಮಹಿಳೆಯರಿಗೆ.

ಇವೆಲ್ಲವುಗಳ ಜೊತೆಗೆ ಕರ್ನಾಟಕದ ಬೀದರ ಜಿಲ್ಲೆಯಲ್ಲಿ ಮಾತ್ರ **'ಭುಲಾಯಿ'** ಹಾಕುವ ಸಂಪ್ರದಾಯ ವಿಶೇಷವಾಗಿ ಕಾಣಸಿಗುತ್ತದೆ. ಭುಲಾಯಿ ಹಾಕುವಾಗ ಕೆಲವೊಂದು ಹಾಡುಗಳನ್ನು ಹಾಡುತ್ತಾರೆ. ಅಂತಹ ಹಾಡುಗಳಿಗೆ 'ಬುಲಾಯಿ ಹಾಡುಗಳು' ಎಂದು ಕರೆಯುತ್ತಾರೆ. ಪಂಚಮಿ ಹಾಗೂ ಮರುದಿವಸ ಸಿರಿಯಾಳ ಸೆಟ್ಟಿಯ ಆಚರಣೆಯಿದ್ದು, ಆ ಸಂದರ್ಭದಲ್ಲಿ ಕೆಲವು ಶ್ರಾವಣ ಮಾಸದ ಸೋಮವಾರಗಳಂದು ಊರ ದೇವರ ಗುಡಿಯ ಮುಂದೆಯೂ ಭುಲಾಯಿ ಹಾಕುತ್ತಾ ಈ ಹಾಡುಗಳನ್ನು ಹಾಡುತ್ತಿದ್ದರಂತೆ.[೨] ಆದರೆ ಈಗ ಪಂಚಮಿಯ ದಿನದಂದೇ ಹಾಡುವುದು ಕೇವಲ ಹಳ್ಳಿಗಳಲ್ಲಿ ಉಳಿದುಕೊಂಡಿದೆ. ಉಳಿದಂತೆ ಈ ಸಂಸ್ಕೃತಿ ತುಂಬಾ ಕಡಿಮೆಯಾಗುತ್ತಿದೆ. ಹಳ್ಳಿಗಳಲ್ಲಿಯೂ ವಯಸ್ಸಾದ ಹಾಗೂ ನಡುವಯಸ್ಸಿನ ಹೆಣ್ಣು ಮಕ್ಕಳು ಮಾತ್ರ ಹಾಡುಗಳನ್ನು ಹಾಡುತ್ತಾರೆ. ಇತ್ತೀಚಿಗಿನ ಹೆಣ್ಣು ಮಕ್ಕಳು 'ಭುಲಾಯಿ' ಹಾಕುವುದಕ್ಕಾಗಲಿ, ಹಾಡುವುದಕ್ಕಾಗಲಿ ಆಸಕ್ತಿ ತೋರದೇ ಇರುವುದರಿಂದಲೇ ಅದು ಮರೆಯಾಗುತ್ತ ಸಾಗಿರುವುದು ಒಂದು ಸಂಸ್ಕೃತಿಯ ಅವನತಿ ಎಂದೇ ಹೇಳಬೇಕಾಗುತ್ತದೆ.

'ಭುಲಾಯಿ ಹಾಕುವುದು' ಎಂದರೆ, ಸುಮಾರು ೧೦-೧೨ ಹೆಣ್ಣು ಮಕ್ಕಳಿಂದ ೨೦-೩೦ ಹೆಣ್ಣುಮಕ್ಕಳವರೆಗೆ ಎಷ್ಟಾದರೂ ಸರಿ ವರ್ತುಲಾಕಾರದಲ್ಲಿ ಸುತ್ತುತ್ತಾ ಇರುವುದು. ಹೀಗೆ ಸುತ್ತುವಾಗ ಹಾಡುವ ಹಾಡುಗಳನ್ನೇ 'ಬುಲಾಯಿ ಹಾಡುಗಳು' ಎನ್ನಲಾಗುತ್ತದೆ. ಹಿಂದೆ ನಾಗರಪಂಚಮಿ ಇನ್ನೂ ೧೫-೨೦ ದಿವಸಗಳಿರುವಾಗಲೇ ಹೆಣ್ಣು ಮಕ್ಕಳು ತಾವು ಹೊಲಕ್ಕೆ ಕಳೆ ತೆಗೆಯಲು ಹೋದಾಗ ಅಥವಾ ಮನೆಯ ಕೆಲಸಗಳನ್ನೆಲ್ಲಾ ಮುಗಿಸಿಕೊಂಡು ಎಲ್ಲರೂ ಒಂದೆಡೆ ಸೇರಿದಾಗ ಈ ಹಾಡುಗಳನ್ನು ಹಾಡುತ್ತಿದ್ದರೆಂದು ಹೇಳುವುದು ಕಂಡುಬರುತ್ತದೆ. ಬಹುಶಃ ವರ್ಷವಿಡೀ ಹಾಡದೆ ಮರೆತು ಹೋದ ನುಡಿ, ಸಾಲುಗಳನ್ನು ನೆನಪಿಸಿಕೊಳ್ಳಲು ಅನುಸರಿಸುತ್ತಿದ್ದ ಕ್ರಮವಿದ್ದಿರಬಹುದು. ಏಕೆಂದರೆ ಕಂಠಸ್ಥವಾಗಿದ್ದ ಹಾಡುಗಳನ್ನು ಪುನ: ನೆನಪಿಸಿಕೊಳ್ಳಲು ಅವರಿಗಿದ್ದ ಪ್ರಮುಖ ಮಾರ್ಗ ಇದೊಂದೇ ಎನ್ನಬಹುದು.

ಭುಲಾಯಿಯ ಮೂಲ :

ಯಾವುದೇ ಜನಪದ ಕಲೆಯ ಮೂಲವನ್ನು ಕಂಡು ಹಿಡಿಯುವುದು ತುಂಬಾ ಕಷ್ಟದ ಕೆಲಸ ಜಾನಪದದಲ್ಲಿ ಕೊಡುಕೊಳ್ಳುವಿಕೆ, ರೂಪಾಂತರಗೊಳ್ಳುವಿಕೆ ಸಹಜವಾಗಿ ನಡೆಯುವ ಪ್ರಕ್ರಿಯೆ. ಹೀಗಾಗಿ ಅಲ್ಪ ಸ್ವಲ್ಪ ಬದಲಾವಣೆಗಳ ಹಿನ್ನೆಲೆಯಲ್ಲಿ ಸಮಾನಾಂತರವಾದ ಕಲೆಗಳು ಬೇರೆ ಬೇರೆ ಸಂಸ್ಕೃತಿಯಲ್ಲಿ ಕಂಡು ಬರುವುದು ಸಹಜವಾಗಿದೆ. ಆದ್ದರಿಂದ ಇವುಗಳ ಮೂಲದ ಶೋಧನೆಯು ಪ್ರಯಾಸದ ಕೆಲಸವೇ ಸರಿ. ಈ ಮಾತು ಬುಲಾಯಿ ಹಾಡುಗಳಿಗೂ ಅನ್ವಯಿಸುತ್ತದೆ.

'ಭುಲಾಯಿ' ಜೀದರ ಪ್ರದೇಶದ ಒಂದು ಜನಪದ ಸಂಸ್ಕೃತಿಯಾಗಿದ್ದು, ಬಹಳ ವೈಶಿಷ್ಟ್ಯ ಪೂರ್ಣವಾಗಿದೆ. ಇದು ರಾಗ, ಸುತ್ತುವರೆಯುವ ನಿಧಾನಗತಿ, ಹಾಡುವ ರೀತಿ ಮುಂತಾದವುಗಳಿಂದ ಜನಮನವನ್ನು ಸೂರೆಗೊಳ್ಳುತ್ತದೆ.

'ಭುಲಾಯಿ' ಪದ ಉರ್ದುವಿನ 'ಭುಲರ್' 'ಬಹಲಾವ್' 'ಬೋಲನಾ' ಪದಗಳಿಂದ ಬಂದಿರಬಹುದೆಂದು, ಮುಸ್ಲೀಮರಿಂದ ಈ ಪದ್ಧತಿ ಸ್ವೀಕೃತಿಯಾಗಿರಬಹುದೆಂದೂ, ಕಲಬುರ್ಗಿ ಜಿಲ್ಲೆಯಲ್ಲಿಯ ಚಪ್ಪಳಗಿ ಹಾಡುಗಳನ್ನು ಇವು ಹೋಲುತ್ತವೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.[೩]

ಡಾ॥ ಹೆಬ್ಬಾಳೆ ಅವರು "ಬುಲಾಯಿ ಎಂದರೆ ಬನ್ನಿ ಎಂದರ್ಥ, ಮುಸ್ಲಿಂ ಮಹಿಳೆಯರು ಹೆಣ್ಣು ಮಕ್ಕಳಿಗೆ ಕರೆಯುವಾಗ ಮಾತ್ರ ಈ ಪದ ಬಳಕೆಯಾಗುತ್ತದೆ. ಉರ್ದುವಿನ ಪದವೇ ಬುಲಾಯಿ ಹಾಡುಗಳಿಗೆ ಮೂಲ"[೪] ಎಂದಿರುವುದು ಸಮಂಜಸವೆನಿಸುವುದಿಲ್ಲ. ಮುಸ್ಲಿಂ ಮಹಿಳೆಯರು ಹೆಣ್ಣು ಮಕ್ಕಳಿಗೆ ಕರೆಯುವಾಗ ಮಾತ್ರ ಈ ಪದ ಬಳಕೆಯಾದರೆ ಹಾಡುಗಳಿಗೆ ಇದು ಹೇಗೆ ಬಂತು ? ಎಂಬ ಪ್ರಶ್ನೆ ಮೂಡುತ್ತದೆ. ಬುಲಾಯಿ ಹಾಕುವುದು ದೇವರ ಗುಡಿಯಲ್ಲಿ ಅಥವಾ ಗುಡಿಯ ಮುಂದೆ, ಗೌಡರ, ಶಟಗಾರ, ಮಹಾಜನರ ಮನೆಗಳಲ್ಲಿ, ಬೇರೆ ಬೇರೆ

ಜಾತಿಯವರ ಓಣಿಯಲ್ಲಿ ಎಲ್ಲರಿಗೂ ಬೇಕಾದವರ ಮನೆಯಲ್ಲಿ ಅಥವಾ ಮನೆಯ ಮುಂದೆ. ಹೀಗಿರುವಾಗ ಮುಸ್ಲಿಂ ಮಹಿಳೆಯರು ಹೆಣ್ಣು ಮಕ್ಕಳಿಗೆ ಕರೆಯುವ ಪ್ರಸಂಗವೇ ಇಲ್ಲ ಬಾರದು. ಶ್ರೀಮತಿ ಶಶಿಕಲಾ ವಸ್ತ್ರದ ಅವರು 'ಬುಲಾಯಿ ಹಾಡುಗಳಲ್ಲಿ ಜೀವನ ದೃಷ್ಟಿ' ಎಂಬ ಲೇಖನದಲ್ಲಿ "ಈ ಹಾಡುಗಳನ್ನು ಹಿಂದೂಗಳಲ್ಲದೆ ಕೆಲವು ಕಡೆ ಮುಸ್ಲಿಂ ಮಹಿಳೆಯರೂ ಹಾಡುತ್ತಾರೆ. ಸ್ಪಷ್ಟವಾಗಿ ಕನ್ನಡವನ್ನು ಉಚ್ಚರಿಸುತ್ತಾರೆ. ಇಸ್ಲಾಂ ಧರ್ಮದ ಕರ್ಬಲ್ ಹಾಡುಗಳು ಹೈದ್ರಾಬಾದ ನಿಜಾಮರ ಹಾಡುಗಳು ಇಲ್ಲವೆ"[*] ಎಂದು ಹೇಳಿರುವುದನ್ನು ಗಮನಿಸಿದರೆ ಇವುಗಳ ಮೇಲೆ ಮುಸ್ಲಿಂ ಸಂಸ್ಕೃತಿಯ ಪ್ರಭಾವಬಿದ್ದಿರಬಹುದೆಂದು ಊಹಿಸಬಹುದಾಗಿದೆ.

ಡಾ॥ ಕೆಬ್ಬಾಳೆಯವರು ಮುಂದೊರೆಸುತ್ತ 'ಬಹಲಾವ್' ಶಬ್ದದಿಂದ 'ಬುಲಾಯಿ' ಆಗಿರಬಹುದು. 'ಬಹಲಾವ್' ಎಂದರೆ 'ಮನರಂಜನೆ' ಎಂದರ್ಥ"[1] ಎನ್ನುತ್ತಾರೆ. ಮನರಂಜನೆಗಾಗಿ ಈ ಹಾಡುಗಳು ಹಾಡಲಾಗುತ್ತಿದ್ದರೂ ಅದು 'ಬಹಲಾವ್' ಶಬ್ದದಿಂದ ಬುಲಾಯಿ ಆಗಿರಬಹುದೆಂಬುದಕ್ಕೆ ಇನ್ನು ಹೆಚ್ಚಿನ ಆಧಾರಗಳು ಬೇಕಾಗುತ್ತವೆ ಎನಿಸುತ್ತದೆ.

ಡಾ॥ ಡಿ. ಬಿ. ನಾಯಕರು "ಮುಸ್ಲಿಂ ಸಂಸ್ಕೃತಿಯಲ್ಲಿ 'ಬುಲಾಯಿ' ಪದ್ಧತಿ ಕಂಡು ಬರುವುದಿಲ್ಲ. ಹಾಗೂ ಕಲಬುರ್ಗಿ ಜಿಲ್ಲೆಯಲ್ಲಿ ಹಾಡುವ 'ಜಪ್ಪಳಗಿ ಹಾಡುಗಳು' ಧಾರ್ಮಿಕ ಹಿನ್ನೆಲೆಯನ್ನು ಹೊಂದಿರುವುದಿಲ್ಲ. ಹೀಗಾಗಿ ಈ ಪದ್ಧತಿಯ ಮೂಲವನ್ನು ಮುಸ್ಲಿಂ ಸಂಸ್ಕೃತಿಯಲ್ಲಿ ಕಾಣಲು ಪ್ರಯತ್ನಿಸುವುದು ಪ್ರಯೋಜನಕಾರಿಯೆನಿಸುವುದಿಲ್ಲ ಎಂದು ಹೇಳುತ್ತ, ಮಹಾರಾಷ್ಟ್ರದಲ್ಲಿಯ ನಾಗರಪಂಚಮಿಯ ಆಚರಣೆಯನ್ನು ಉದಾಹರಿಸುತ್ತ ಅಲ್ಲಿ ಮನುಷ್ಯನ ಮಣ್ಣಿನ ಮೂರ್ತಿಯನ್ನು ತಯಾರಿಸಿ, ಸುತ್ತುಗಟ್ಟಿ ಹೆಣ್ಣು ಮಕ್ಕಳು ವಿವಿಧ ಹಾಡುಗಳನ್ನು ಹಾಡುವ ಸಂಪ್ರದಾಯವಿದೆ.

ಉದಾ: ಫರಾಕಡಿ ಉಯಿಲದರೋ ಜಾ ತಡುಅಲ

ಕುಂಕಾಚೆ ಪೂಜಾತುಮಿ ಘ್ಯಾಹೋ ನಾಗನಾಥ

ಫರಾಕಡಿ ಮಜ್ಯಾಯಾ

ಹಳದಿಳ ಪೂಜಾತುಮಿ ಘ್ಯಾಹೋ ನಾಗನಾಥ

ಫರಾಕಡಿ ಮಜ್ಯಾಯಾ

ಕನೋಲ್ಯಾಚಿ ಪೂಜಾ ತುಮಿ ಘ್ಯಾಹೋ ನಾಗನಾಥ

ಫರಾಕಡಿ ಮಜ್ಯಾಯಾ ....

ಎಂದು ಮುಂತಾಗಿ ಹಾಡುತ್ತಾರೆ. ಇದನ್ನು ಗಮನಿಸಿ ಡಾ॥ ನಾಯಕರು.

'ಭೂಲ್' ಹಿಂದಿ ಪದವಾಗಿದ್ದು ಇದರ ಅರ್ಥ 'ಮರೆ' ಎಂಬುದಾಗಿದೆ. ಹೆಣ್ಣು ಮಕ್ಕಳು ತಾವು ಮರೆತು ಹೋಗಿರುವ ಹಾಡುಗಳನ್ನು ನೆನಪಿಸಿಕೊಂಡು ಹಾಡುವುದು ಎಂಬರ್ಥದಲ್ಲಿ ಬುಲಾಯಿ ಪದ ಬಳಕೆಯಾಗಿದೆ. ಹೀಗಾಗಿ ಮುಸ್ಲಿಂ ಸಂಸ್ಕೃತಿಯಲ್ಲಿ ಕಂಡುಬರದ ಕರ್ನಾಟಕ ಸಂಸ್ಕೃತಿಯ ಗಡಿಭಾಗದ ಜಿಲ್ಲೆಯಲ್ಲಿ ಮಾತ್ರ ಕಂಡುಬರುವ ಈ ಬುಲಾಯಿ ಪದ್ಧತಿಯ ಮೂಲ

ಮರಾಠಿ ಸಂಸ್ಕೃತಿಯೇ ಆಗಿದೆ", [೭] ಎಂದು ಅಭಿಪ್ರಾಯ ಪಡುತ್ತಾರೆ. ಆದರೆ ಇದು ಚರ್ಚಿಸಬೇಕಾದ ವಿಷಯವಾಗಿದೆ ಎನಿಸುತ್ತದೆ.

'ಭುಲಾಯಿ' ಮತ್ತು 'ಬುಲಾಯಿ ಹಾಡುಗಳ' ಕುರಿತಾಗಿ ಹಿಂದೆ ಜಾನಪದ ವಿದ್ವಾಂಸರು ಗಮನ ಹರಿಸದೇ ಇರುವುದರಿಂದ 'ಭುಲಾಯಿ' ಪದದ ಮೂಲ ಕುರಿತು ಹೈದ್ರಾಬಾದ ಕರ್ನಾಟಕದ ಅದರಲ್ಲೂ ಬೀದರ ಮತ್ತು ಗುಲ್ಬರ್ಗಾದವರು ೧೯೯೦ ರಿಂದೀಚೀಗೆ ಚರ್ಚಿಸಿದ್ದು, ಕಂಡು ಬರುತ್ತದೆ. ಹೀಗಾಗಿ ಇದರ ಮೂಲದ ಬಗ್ಗೆ ಭಿನ್ನಾಭಿಪ್ರಾಯಗಳು ಕಂಡು ಬರುತ್ತವೆ. ಆದರೆ ೧೯೭೬ ರಲ್ಲಿ ಡಾ॥ ಎಂ.ಎಸ್. ಸುಂಕಾಪುರ ಅವರು 'ಜೀವನ ಜೋಕಾಲಿ' ಕೋಲು ಪದದ ಪ್ರಸ್ತಾವನೆಯಲ್ಲಿ ಹೇಳಿರುವ ಅಭಿಪ್ರಾಯ ಮತ್ತೊಂದು ಹೊಸ ಹೊಳವಿಗೆ ಆಸ್ಪದ ಕಲ್ಪಿಸಿಕೊಡುತ್ತದೆ.[೮]

ಡಾ॥ ನಾಯಕರು ಮಹಾರಾಷ್ಟ್ರದಲ್ಲಿ ನಾಗರ ಪಂಚಮಿಯ ಸಂದರ್ಭದಲ್ಲಿ ಮನುಷ್ಯನ ಮಣ್ಣಿನ ಮೂರ್ತಿಯನ್ನು ತಯಾರಿಸಿ, ಸುತ್ತುಗಟ್ಟಿ ಹೆಣ್ಣು ಮಕ್ಕಳು ವಿವಿಧ ಹಾಡುಗಳನ್ನು ಹಾಡುವ ಸಂಪ್ರದಾಯವಿದೆ............ ಈ ಬುಲಾಯಿ ಪದ್ಧತಿಯ ಮೂಲ ಮರಾಠಿ ಸಂಸ್ಕೃತಿಯೆ ಆಗಿದೆ ಎಂಬ ಅಭಿಪ್ರಾಯವನ್ನು ಡಾ॥ ಎಂ ಎಸ್. ಸುಂಕಾಪುರ ಅವರ ಅಭಿಪ್ರಾಯದೊಂದಿಗೆ ಗಮನಿಸುವುದು ಸೂಕ್ತವೆನಿಸುತ್ತದೆ.

ಬಹು ಸಂಸ್ಕೃತಿಯ ದೇಶವಾದ ಭಾರತವೇ ಒಂದು ಪುಟ್ಟ ಪ್ರಪಂಚ (ಜಗತ್ತಿನ) ದಂತಿದೆ. ಪ್ರಪಂಚವೆಂದರೆ ಅದರಲ್ಲಿ ಹಲವಾರು ದೇಶಗಳು, ದೇಶಕ್ಕೊಂದು ಭಾಷೆ, ಧರ್ಮ, ಪ್ರಾದೇಶಿಕತೆ, ಉಡುಗೆ, ತೊಡುಗೆ, ಆಹಾರ-ವಿಹಾರ, ನಂಬಿಕೆ-ಆಚಾರಗಳಿರುತ್ತವೆ. ಆದರೆ ಭಾರತದಲ್ಲಿಯೇ ವೈವಿಧ್ಯಮಯವಾದ ಹಲವಾರು ಭಾಷೆ, ಮತ, ಧರ್ಮ, ರಾಜ್ಯ ಪ್ರಾದೇಶಿಕ ವೈವಿಧ್ಯತೆ, ಉಡುಗೆ, ತೊಡುಗೆ, ಆಹಾರ, ವಿಹಾರ, ನಂಬಿಕೆ, ಆಚಾರ ವಿಚಾರಗಳು ಹೀಗೆ ಹಲವಾರು ಸಾಂಸ್ಕೃತಿಕ ವೈಶಿಷ್ಟ್ಯಗಳಿವೆ. ಇಂತಹ ವಿಶಿಷ್ಟ ಬಹು ಸಂಸ್ಕೃತಿಯ ನಾಡಾದ ಭಾರತದಲ್ಲಿ ಆಯಾ ಸಂಸ್ಕೃತಿಯಲ್ಲಿ ಹೆಣ್ಣು ಮಕ್ಕಳು ಸುತ್ತುವರಿದು ವಿವಿಧ ಭಂಗಿಗಳಲ್ಲಿ ಹಾಡುವುದು. ಕುಣಿದು ಕುಪ್ಪಳಿಸುವುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ.

ಉದಾ : ಲಂಬಾಣಿ ನೃತ್ಯ, ಕೊಡವರ ಗಿಡ್ಡಾ, ಹುತ್ತರಿ ಕುಣಿತ, ಕೊಂಕಣಿ ನೃತ್ಯ, ತುಳು, ಆಸ್ಸಾಮಿ ನೃತ್ಯ, ಮುಂತಾದವು ಇಲ್ಲಿ ಹೆಜ್ಜೆ, ತಾಳ, ಭಂಗಿಗಳು ವಿಭಿನ್ನವಾದರೂ ಎಲ್ಲರೂ ವರ್ತುಲಾಕಾರದಲ್ಲಿ ಸುತ್ತುವುದು ಗಮನಾರ್ಹ ಸಂಗತಿಯಾಗಿದೆ. ಇದೇ ವಿಭಿನ್ನತೆಯಲ್ಲಿ ಏಕತೆ, ಇದೇ ಭಾರತದ ವೈಶಿಷ್ಟವೆನಿಸಿದೆ.

'ಕೋಲಾಟ' ಕನ್ನಡ ನಾಡಿನ ಎಲ್ಲಾ ಭಾಗಗಳಲ್ಲಿಯೂ ಪ್ರಚಾರದಲ್ಲಿದೆ. ಹಾಗೆ ನೋಡಿದರೆ ಇಡೀ ಭಾರತದಲೆಲ್ಲ ಕಾಣಬಹುದು. ಗುಡಿಯಿಲ್ಲದ ಊರಿಲ್ಲ; ಕೋಲಾಟ ಆಡದ ಹಳ್ಳಿಯಿಲ್ಲ, ಅಷ್ಟೊಂದು ಈ ಆಟದ ಪ್ರಸಾರವಿದೆ. ಕೋಲಾಟ ತೋರಿಕೆಗೆ ಒಂದೇ ರೀತಿಯಾಗಿ ಕಂಡರೂ

ಅದರಲ್ಲಿ ಹತ್ತಾರು ಪ್ರಕಾರಗಳನ್ನು ವಿದ್ವಾಂಸರು ಗುರುತಿಸಿದ್ದಾರೆ.[೯] ಅವು ಒಂದರಂತೆ ಇನ್ನೊಂದಿಲ್ಲ. ಈ ಕುರಿತು ಡಾ॥ ಎಂ.ಎಸ್.ಸುಂಕಾಪುರರ ಅಭಿಪ್ರಾಯ ಹೀಗಿದೆ. "ಉತ್ತರ ಕರ್ನಾಟಕದ ಗೌಳಿಗರು ದೀಪಾವಳಿಯ ಹಟ್ಟಿ ಹಬ್ಬದಲ್ಲಿ ಆಕಳುಗಳನ್ನು ಶೃಂಗಾರ ಮಾಡಿ ಸಂಜೆಯ ಮುಂದೆ ಮೆರವಣಿಗೆ ಮಾಡಿ ಕೋಟೆ ಕಟ್ಟಿ ಕೋಲು ಹಾಕುವರು. ಲಮಾಣಿಗರು ಇದೇ ಸಮಯದಲ್ಲಿ ಹೆಜ್ಜೆ ಹಾಕಿ ಕುಣಿಯುವರು. ಇವರ ಕೋಲಾಟ ನಮ್ಮ ಕೋಲಾಟಗಳ ಮೇಲೆ ಪ್ರಭಾವ ಬೀರಿದುದು ಕಂಡು ಬರುತ್ತದೆ. ಮಥುರೆಯ ಕೃಷ್ಣನ ಸಂಪರ್ಕ ಕನ್ನಡದವರಿಗೆ ಆದುದು ಈ ಜನಾಂಗದವರಿಂದಲೇ ಎಂದು ಸ್ಪಷ್ಟವಾಗಿ ಹೇಳಬಹುದು. ಉಡುಪಿಯ ಕೃಷ್ಣನನ್ನು ಪೂಜಿಸುವ ಬ್ರಾಹ್ಮಣರು ಮಥುರೆಯ ಬಾಲಕೃಷ್ಣನನ್ನು ಲೋಲಾಡುವ ಕೃಷ್ಣನ ಲೀಲೆಗಳು ನಮ್ಮ ಜನತೆಯ ಮೇಲೆ ಕೂಡಲೇ ಪರಿಣಾಮ ಬೀರಿದವು. ಅದರಂತೆ ಕೋಲಾಟ ಮಾಡಲು ಬ್ರಾಹ್ಮಣ ಬಾಲಿಕೆಯರು ಮುಂದಾದರು.

ಗೋಕುಲಾಷ್ಟಮಿ ಒಂದು ಪವಿತ್ರ ದಿನ. ಕೃಷ್ಣನ ಬಾಲಲೀಲೆಗಳನ್ನು ನೆನೆಸಿಕೊಳ್ಳುವ ಕಾಲ ಬ್ರಾಹ್ಮಣ ಬಾಲಕಿಯರು ವರ್ತುಲಾಕಾರವಾಗಿ ಕೈ ಕೈ ಹಿಡಿದು ನಿಂತು ಮಧ್ಯದಲ್ಲಿ ಕೃಷ್ಣನ ವೇಷದಲ್ಲಿರುವ ಹುಡುಗಿಗೆ ಕೈಯಲ್ಲೊಂದು ಕೊಳಲು ಕೊಟ್ಟು ನಿಲ್ಲಿಸುವರು.ಕೋಲುಪದಗಲನ್ನು ಹೇಳುತ್ತಲೇ ಕೋಲಾಟವಾಡುವರು. ಕೋಲಾಟದ ಮಧ್ಯದಲ್ಲಿ ಗೋಪು ಹೆಣೆಯುವರು. ಗೋಪು ಹೆಣೆಯುವುದಕ್ಕೆ ಇನ್ನೊಂದು ಹೆಸರು ಕೋಟೆ ಕಟ್ಟುವುದು ಎಂದು. ಈ ಸಂಪ್ರದಾಯ ನಮ್ಮ ನಾಡಿನಲ್ಲಿ ಬಹು ದಿವಸಗಳಿಂದಲೂ ನಡೆದು ಬಂದಿದೆ".[೧೦]

ಮೇಲಿನ ಅಭಿಪ್ರಾಯದಿಂದ ವರ್ತುಲಾಕಾರವಾಗಿ ಕೈ ಕೈ ಹಿಡಿದು ನಿಂತು ಮಧ್ಯದಲ್ಲಿ ಕೃಷ್ಣನನ್ನು ನಿಲ್ಲಿಸಿ, ಕೋಲುಪದಗಳನ್ನು ಹೇಳುತ್ತಲೇ ಕೋಲಾಡುವ ಸಂಪ್ರದಾಯ ಉತ್ತರ ಕರ್ನಾಟಕದಲ್ಲಿ ಬಹುದಿನಗಳಿಂದ ನಡೆದು ಬಂದದ್ದು ನಿರ್ವಿವಾದವೆನ್ನಬಹುದು. ಬ್ರಾಹ್ಮಣರ ಹುಡುಗಿಯರು ವರ್ತುಲಾಕಾರದಲ್ಲಿ ಕೈ ಕೈ ಹಿಡಿದು ನಿಂತದನ್ನೇ ಸಾಮಾನ್ಯ ಸ್ತ್ರೀಯರು ಅನುಸರಿಸಿ 'ಭುಲಾಯಿ' ಹಾಕುಲು ಪ್ರಾರಂಭಿಸಿರಬಹುದೆಂದು ಊಹಿಸಬಹುದಾಗಿದೆ. ಹೇಗೆಂದರೆ ವರ್ತುಲಾಕಾರದಲ್ಲಿ ನಿಂತು ಕೈ ಕೈ ಹಿಡಿದು ಅಲ್ಲಿ ಕೋಲು ಪದ ಹೇಳುತ್ತಾ ಕೋಲಾಟವಾಡಿದರೆ, ಇಲ್ಲಿ ಭುಲಾಯಿ ಪದ ಹೇಳುವಾಗ ಮುಮ್ಮೇಳದಲ್ಲಿ ಇಬ್ಬರು ತಲೆಗೆ ತಲೆ ಹಚ್ಚಿ ಸ್ವಲ್ಪ ನಿಂತು, ಇಬ್ಬರು ಹಿಡದ ಕೈಗಳನ್ನು ಹಿಂದೆ-ಮುಂದೆ ಜೀಕುತ್ತಾರೆ. ನಂತರ ಉಳಿದವರು ಹಿಮ್ಮೇಳದಲ್ಲಿ ಹಾಡುತ್ತಾ ಪುನಃ ಸುತ್ತುತ್ತಾರೆ. ಇದೇ 'ಭುಲಾಯಿ ಹಾಕು'ವುದು. ಕೋಲಾಟದಲ್ಲಿ ಕೃಷ್ಣ ಮಧ್ಯದಲ್ಲಿ ನಿಂತರೆ 'ಭುಲಾಯಿ ಹಾಕು'ವಲ್ಲಿ ಚಿಕ್ಕ ಮಕ್ಕಳನ್ನು ನಿಲ್ಲಿಸುವುದು ಕಂಡುಬರುತ್ತದೆ.

ಕೋಲಾಟದಲ್ಲಿಯ ಕೋಲು ಕೋಲೆನ್ನ ಕೋಲ, ಕೋಲು ಕೋಲೆ, ರನ್ನದ ಕೋಲುಕೋಲ ಮುಂತಾದ ಸೊಲ್ಲುಗಳನ್ನು ಬುಲಾಯಿ ಹಾಡುಗಳಲ್ಲೂ ಹಾಡುವುದು ಕಂಡುಬರುತ್ತದೆ. ಕೆಲವೊಂದು ಜನಪದ ಕಥನ ಗೀತೆಗಳನ್ನು, ಕೋಲು ಪದಗಳನ್ನು ಭುಲಾಯಿ ಹಾಡುಗಳಲ್ಲಿಯೂ ಹಾಡುವುದು ಗಮನಾರ್ಹ. ಉದಾ: ಕಾಳಿಂಗರಾಯನ ಹಾಡು,

ನೀಲಕಂಠರಾಜನ ಹಾಡು, ಚೆನ್ನಮ್ಮನ ಹಾಡು, ಕಾಶಿಬಾಯಿಯ ಹಾಡು, ಅಕ್ಕನಾಗಮ್ಮನ ಹಾಡು, ಗೋವಿನ ಹಾಡು, ನೀಲಗಂಗಾನ ಹಾಡು ಇತ್ಯಾದಿ. ಕೋಲುಪದದ 'ಶಿವನಲ್ಲಿ ಹೋಗ್ಯಾರು' ಎಂಬುದನ್ನು ಬುಲಾಯಿಯಲ್ಲಿ 'ಬರದ ಹಾಡು' ಎಂದು ಹಾಡುತ್ತಾರೆ.

ಹೀಗೆ 'ಕೋಲು ಪದ' 'ಕೋಲಾಟದ' ರೀತಿಯಲ್ಲಿ 'ಭುಲಾಯಿ ಪದ' 'ಭುಲಾಯಿ ಹಾಕು'ವಲ್ಲಿ ತುಂಬಾ ಸಾಮ್ಯತೆಗಳಿರುವುದರಿಂದ ಬುಲಾಯಿ ಕನ್ನಡ ಮೂಲ ಸಂಸ್ಕೃತಿಯೇ ಆಗಿದ್ದಿರಬಹುದೆನಿಸುತ್ತದೆ. ಏಕೆಂದರೆ ಮೊದಮೊದಲು ಪ್ರಸಿದ್ಧ ಕೋಲು ಪದ ಜನಪದ ಕಥನಗೀತೆಗಳನ್ನೇ ಬುಲಾಯಿ ಹಾಡುಗಳಿಗೆ ಪಾಠಾಂತರ ಮಾಡಿ ಬಳಸಿಕೊಂಡಿರಬಹುದು. ಕ್ರಮೇಣ ಪ್ರಾದೇಶಿಕ ವ್ಯಕ್ತಿ, ಘಟನೆ, ಸಂದರ್ಭ, ರಾಜಕೀಯ ಧಾರ್ಮಿಕ, ಪೌರಾಣಿಕ, ಹೆಣ್ಣಿನ ತ್ಯಾಗ, ನೋವು ನಲಿವು, ಶೀಲ, ಚಲಿತ್ರೆ, ಮುಂತಾದ ವಿಷಯಗಳ ಕುರಿತು ಸ್ವತಃ ತಾವೇ ಹಾಡುಗಳನ್ನು ಕಟ್ಟಿರಬಹುದು. ಕೋಲುಪದ, 'ಭುಲಾಯಿ ಪದಗಳೆರಡು ದ್ವಿಪದಿಗಳಲ್ಲಿಯೇ ರಚನೆಯಾಗಿರುವುದು ಗಮನಾರ್ಹ. ಹೀಗಾಗಿ 'ಭುಲಾಯಿ'ಯ ಮೇಲೆ 'ಕೋಲಾಟ'ದ ಪ್ರಭಾವಿರುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು ಎನಿಸುತ್ತದೆ. ಡಾ॥ ಜಗನ್ನಾಥ ಹೆಬ್ಬಾಳೆಯಯವರ ಅಭಿಪ್ರಾಯವೂ ಇದಕ್ಕೆ ಪುಷ್ಟಿ ನೀಡುವಂತಿದೆ. "ಹಾಡಿನ ಪ್ರತಿ ನುಡಿಯ ಕೊನೆಗೆ ಕೋಲೆಣ್ಣ ಕೋಲೆ ಎನ್ನುತ್ತಾರೆ. ಆದರೆ ಯಾರೂ ಕೋಲು ಹಾಕುವುದಿಲ್ಲ. ಹಿಂದಿನ ಕಾಲದಲ್ಲಿ ಕೈಯಲ್ಲಿ ಹಿಡಿದು ಕೋಲನ್ನು ನುಡಿಸುತ್ತ ಹೇಳುತ್ತಿದ್ದ ಈ ಹಾಡುಗಾರಿಕೆಯಲ್ಲಿ ಕೋಲೆಣ್ಣ ಕೋಲು ಎಂಬ ಪಾಠ ಉಳಿದುಕೊಂಡಿದ್ದರೂ ಇತ್ತೀಚಿಗೆ ಕೋಲು ಮಾಯವಾಗಿ ಹೋಗಿದೆ."[೧೧] ಎನ್ನುವಲ್ಲಿ ಕೋಲಾಟ, ಕೋಲುಪದಗಳ ಪ್ರಭಾವ 'ಭುಲಾಯಿ' ಬುಲಾಯಿ ಹಾಡುಗಳ ಮೇಲಿರುವುದು ಖಚಿತಪಡಿಸುತ್ತವೆ,

ಆದರೆ ಇಲ್ಲಿ ಎಲ್ಲ ಕೋಲುಪದಗಳನ್ನು ಬುಲಾಯಿ ಹಾಡುಗಳೆಂದು ಕರೆಯಲಾಗುವುದಿಲ್ಲ. ಹಾಗೆಯೇ ಇಲ್ಲಿಯ ಎಲ್ಲ ಬುಲಾಯಿ ಹಾಡುಗಳು ಕೋಲು ಪದಗಳಲ್ಲ, ಅಲ್ಲಲ್ಲಿ ಕೆಲವು ಕಡೆ ಅವರೆಡನ್ನು ಮಿಶ್ರಗೊಳಿಸಿ ಹೇಳುತ್ತಿರುವುದು ಕಂಡು ಬರುತ್ತದೆ. ಈ ಕೋಲಾಟದ ಪದಗಳಿಗೂ ಬುಲಾಯಿ ಪದಗಳಿಗೂ ಇರುವ ಸೌಮ್ಯ ವೈಷಮ್ಯಗಳನ್ನು ಮುಂದಿನ ಅಧ್ಯಾಯದಲ್ಲಿ ಚರ್ಚಿಸಲಾಗುತ್ತದೆ.

ಡಾ॥ ಡಿ. ಬಿ. ನಾಯಕರು ಮುಸ್ಲಿಂ ಸಂಸ್ಕೃತಿಯನ್ನು ಸಂಪೂರ್ಣವಾಗಿ ಬದಿಗೆ ಸರಿಸಿದ್ದು, ಸಮಪರ್ಕವೆನಿಸದು ಏಕೆಂದರೆ ರೆ.ಕಿಟಲ್ ಅವರ **A Kannada English Dictionary** ಯಲ್ಲಿ ಅಲಾಯಿ ಬುಲಾಯಿ ಶಬ್ದ ಕುರಿತು **An affectionate greeting, an embrace**[೧೨] ಎಂದು ಬರೆದದ್ದನ್ನು ಗಮನಿಸಿದರೆ ಅಲಾಯಿ-ಬಲಾಯಿ ಕೇವಲ ಪ್ರಾಸಬದ್ಧ ಪದಗಳಾಗಿರದೆ ಭಿನ್ನ ಸಂಸ್ಕೃತಿಯನ್ನು ಬಿಂಬಿಸುವ ಪದಗಳಾಗಿರುವು ಕಂಡುಬರುತ್ತವೆ. ಅಲಾಯಿ ಪುರುಷ ಪ್ರಧಾನವಾಗಿದ್ದು, ಮೊಹರಂ ತಿಂಗಳಲ್ಲಿ ಆಚರಿಸುವ ಸಂಪ್ರದಾಯವಾಗಿದೆ. 'ಭುಲಾಯಿ' ಸ್ತ್ರೀಪ್ರಧಾನವಾಗಿದ್ದು ಶ್ರಾವಣ ಮಾಸದಲ್ಲಿ ಆಚರಿಸುವ ಸಂಪ್ರದಾಯ. ಮೊಹರಂ (ಕರ್ಬಲ್)

ಹಾಡುಗಳಲ್ಲಿ ದುಃಖ, ಶೌರ್ಯ, ಬಲಿದಾನಗಳ ಕುರಿತಾದ ಹಾಡುಗಳಿದ್ದರೆ, ಬುಲಾಯಿ ಹಾಡುಗಳಲ್ಲಿ ಸ್ತ್ರೀಯರ ಅಂತರಂಗದ ಭಾವನೆಗಳನ್ನು, ಸಾಮಾಜಿಕ ಮೌಲ್ಯಗಳನ್ನು ಪ್ರತಿಬಿಂಬಿಸುವ ವಸ್ತು ವಿವೇಚನೆ ಕಂಡುಬರುತ್ತದೆ. ಅಗಲವಾದ ವೃತ್ತಾಕಾರದ ಗುಂಡಿಯೊಂದನ್ನು ತೋಡಿ ಅದರಲ್ಲಿ ಬೆಂಕಿಹಾಕಿ, ಕೊಂಡವನ್ನು ನಿರ್ಮಿಸಿಕೊಂಡು ಅದರ ಸುತ್ತ ಹಾಡುತ್ತ ಕುಣಿಯುವ ನೃತ್ಯಕ್ಕೆ "ಅಲಾವಿ ಹೆಜ್ಜೆ" ಎಂದು ಕರೆಯುತ್ತಾರೆ. ಕೈ ಕೈ ಹಿಡಿದು ವೃತ್ತಾಕಾರದಲ್ಲಿ ಸುತ್ತುತ್ತಾ ಹಾಡುಗಳನ್ನು ವಿಶಿಷ್ಟ ರೀತಿಯಲ್ಲಿ ಕೈ ಬೀಸುತ್ತಾ ತಲೆಹಜ್ಜೆ ಹಾಡುವುದಕ್ಕೆ 'ಭುಲಾಯಿ ಹಾಕು'ವುದು ಎನ್ನುತ್ತಾರೆ.

ಹೀಗೆ ಎರಡರಲ್ಲಿ ಹೆಚ್ಚಿನ ಸೌಮ್ಯತೆಗಳು ಕಂಡು ಬರುವುದರಿಂದ ಇವೆರಡು ಸಂಸ್ಕೃತಿಗಳ ಕೊಡುಕೊಳ್ಳುವಿಕೆಯ ಸಾಧ್ಯತೆಯನ್ನು ಕಲ್ಪಿಸಬಹುದು. "ಮೊಹರಂ ಹಾಡುಗಳ ಸ್ವರೂಪದಂತೆ ಇರುವ ಬುಲಾಯಿ ಪದಗಳು ಮುಂದೆ ಹಾಡುವವರ ಗತಿಗೆ ತಕ್ಕಂತೆ ಹಾಡಿನ ದಾಟಿಯನ್ನು ಪಡೆದಿರುತ್ತವೆ"[೧೩] ಎಂಬ ಮಾತು ಗಮನಾರ್ಹವಾಗಿದೆ. "ಮೊಹರಂ ಪದಗಳು ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಮಾತ್ರ ಕಂಡು ಬರುತ್ತವೆ, ಮುಸ್ಲಿಮರು ಹಿಂದೂಗಳು ಬೆರೆತು ಈ ಹಬ್ಬವನ್ನು ಆಚರಿಸುವುದು ಹಿಂದೂ ಮುಸ್ಲಿಂ ಭಾವೈಕ್ಯದ ಒಂದು ಸಂಕೇತ. ಮೊಹರಂ ಪದಗಳು ಧಾರ್ಮಿಕ ಜನಪದ ಕಾವ್ಯವಾಗಿದ್ದು, ಅನಂತರ ಸೌಲಭ್ಯಕಾಂಕ್ಷಿ ಗಾಯಕರು ಅವುಗಳನ್ನು ಜಿಡಿಜಿಡಿಯಾಗಿ ಹಾಡತೊಡಗಿದಂತೆ ಕಾಣುತ್ತದೆ. ಮೊಹರಂ ಪದಗಳಲ್ಲಿ ಕಥನ ಪರವಾದ ಗೀತೆಗಳೇ ಹೆಚ್ಚು. ಮುಸ್ಲಿಂ ಮೂಲಕ್ಕೆ ಸಂಬಂಧಪಟ್ಟ ಹಾಡುಗಳ ಜೊತೆಗೆ ಹಿಂದೂ ಮೂಲಕ್ಕೆ ಸಂಬಂಧಪಟ್ಟ ಹಾಡುಗಳೂ ಸೇರಿಕೊಳ್ಳುತ್ತವೆ".[೧೪] ಹೀಗೆ ಅಲಾಯಿಯಲ್ಲಿ ಕಂಡು ಬರುವ ಹಾಡುಗಳಲ್ಲಿ ವಿಷಯ, ವಸ್ತು ಬುಲಾಯಿಯಲ್ಲಿರುವುದು ಸೋಜಿಗವೆನಿಸುತ್ತದೆ. ಅದರಲ್ಲಿಯೂ ನೋವಿನಿಂದ ಕೂಡಿದ ಹಲವು ಸಂದರ್ಭವನ್ನೇ ಪ್ರಧಾನವಾಗಿ ಬಿಂಬಿಸುತ್ತಿದ್ದ 'ಅಲಾಯಿ' ಹಾಡುಗಳೇ 'ಬುಲಾಯಿ' ಹಾಡುಗಳಲ್ಲಿ ಹೆಣ್ಣು ಮಕ್ಕಳ ನೋವಿನ ಕತೆಗಳ ಎಳೆಗಳನ್ನು ಬಿಚ್ಚಿಡಲು ನೆರವಾಯಿತೇನೋ ? ಎನಿಸುತ್ತದೆ. ಹೀಗಾಗಿ ಈಗಾಗಲೇ ಗಮನಿಸಿರುವಂತೆ ಮುಸ್ಲಿಂ ಮಹಿಳೆಯರು ಕರ್ಬಲಾದ ನೋವಿನ ಹಾಡುಗಳನ್ನು ಬುಲಾಯಿಯಲ್ಲಿ ಹಾಡಿರುವುದೂ ಇಲ್ಲಿ ಮರೆಯಲಾಗದು.

ಡಾ॥ ನಾಯಕರು ಚಪ್ಪಳಗಿ ನಾಡುಗಳ ಕುರಿತಾಗಿ ನೀಡಿರುವ ಅಭಿಪ್ರಾಯವೂ ಗಮನೀಯವಾಗಿದೆ. ಹೈದ್ರಾಬಾದ ಕರ್ನಾಟಕ ಜಿಲ್ಲೆಯಾದ ಗುಲಬರ್ಗಾ ಹೈದ್ರಾಬಾದ ನಿಜಾಮನ ಆಳ್ವಿಕೆಗೂ ಮುನ್ನ ಮುಸ್ಲಿಂರ ಆಳ್ವಿಕೆಯಲ್ಲಿತ್ತು. ಹೀಗಾಗಿ ಮುಸ್ಲಿಂ ಸಂಸ್ಕೃತಿಯ ಪ್ರಭಾವವು ಈ ಜಿಲ್ಲೆಯಲ್ಲಿ ಸಹಜವಾಗಿದೆ. ಇಂದಿಗೂ ಹೆಣ್ಣಮಕ್ಕಳು ಗೋಲಾಕಾರದಲ್ಲಿ ಸುತ್ತುತ್ತ ಕೈ ಚಪ್ಪಾಳೆ ಹಾಕುತ್ತಾ ಹಾಡುಗಳನ್ನು ಹಾಡುತ್ತಾರೆ. ಅವುಗಳೇಂದರೆ 'ಚಪ್ಪಳಗಿ ಹಾಡುಗಳು' "ಈ ಪ್ರಕಾರದ ಹಾಡುಗಳನ್ನು ಕೆಲವು ಕಡೆಗೆ ವಾದ್ಯದ ಜೊತೆಗೆ ಹಾಡಿದರೆ ಗುಲಬರ್ಗಾ ಜಿಲ್ಲೆಯಲ್ಲಿಯ ಹೆಣ್ಣುಮಕ್ಕಳು ಕೈಚಪ್ಪಾಳೆ ಹಾಕುತ್ತ ಹಾಡುವರು."[೧೫] ಎಂಬ ಡಾ॥ ಚೆನ್ನಣ್ಣ ವಾಲೀಕಾರರ ಅಭಿಪ್ರಾಯ ಉಲ್ಲೇಖನೀಯವಾಗಿದೆ.

ಚಪ್ಪಳಗಿ ಹಾಡುಗಳನ್ನು ಹಾಡುವ ವಿಧಾನದಲ್ಲಿಯೂ ಅಲಾಯಿಯ ಕೆಲವು ಅಂಶಗಳು ನಮ್ಮ ಗಮನವನ್ನು ಸೆಳೆಯುತ್ತವೆ. ಚಪ್ಪಳಗಿ ಹಾಡು ಹಾಡುವಾಗ ನಡುವೆ ಒಂದು ದೀಪವನ್ನು ಹಚ್ಚಿಟ್ಟು ಹೆಣ್ಣುಮಕ್ಕಳು ಕೈ ಚಪ್ಪಾಳೆ ಹಾಕುತ್ತಾ ವರ್ತುಲಾಕಾರದಲ್ಲಿ ಸುತ್ತುತ್ತ ಹಾಡುತ್ತಾರೆಂಬುದು ನನ್ನ ಕ್ಷೇತ್ರಕಾರ್ಯದಲ್ಲಿ ತಿಳಿದು ಬಂದ ಅಂಶ. ಇತ್ತೀಚಿಗೆ ಅಲ್ಲಿಯೂ ಈ ಪದ್ಧತಿಯು ಕಣ್ಮರೆಯಾಗುತ್ತಿದೆ ಎಂಬ ನೋವನ್ನು ವಕ್ತಾರರು ವ್ಯಕ್ತಪಡಿಸಿದರು.[೧೬] 'ಅಲಾಯಿ'ಯಲ್ಲಿ ಬೆಂಕಿಯ ಕುಂಡವಿದ್ದರೆ ಇಲ್ಲಿ ದೀಪ, ಅಲ್ಲಿ ಪುರುಷರು ವಿಶಿಷ್ಟ ರೀತಿಯಲ್ಲಿ ಕಾಲಿನ ಹೆಜ್ಜೆ ಹಾಕಿದರೆ, ಇಲ್ಲಿ ಹೆಣ್ಣುಮಕ್ಕಳು ವಿಶಿಷ್ಟ ರೀತಿಯಲ್ಲಿ ಕೈ ಚಪ್ಪಾಳೆ ಹಾಕುತ್ತಾರೆ. ವರ್ತುಲಾಕಾರದಲ್ಲಿ ಸುತ್ತುವುದು ಮಾತ್ರ ಎರಡರಲ್ಲಿಯ ಸಾಮ್ಯತೆಯನ್ನು ತೋರಿಸುತ್ತದೆ.

ಹೀಗಾಗಿ ಬುಲಾಯಿ ಹಾಡುಗಳು ಕೋಲಾಟ ಪದಗಳಿಗಿಂತ ಹಾಗೂ ಚಪ್ಪಳಗಿ ಹಾಡಿಗಿಂತ ಭಿನ್ನ ಎಂಬುದು ಸ್ಪಷ್ಟವಾಗುತ್ತದೆ. ಬುಲಾಯಿ ಸಂಸ್ಕೃತಿಯು ಒಂದು ವಿಶಿಷ್ಟವಾದ ಜನಪದ ಸಂಸ್ಕೃತಿ ಎನಿಸುತ್ತಿದ್ದು, ಕನ್ನಡ ನಾಡಿನ ಬೀದರ ಜಿಲ್ಲೆಯಲ್ಲಿ ಇದು ಇದುವುದರಿಂದ ಇದರ ಮೂಲವು ಇಲ್ಲಿಯೇ ಇದೆ ಎನಿಸುತ್ತದೆ.

'ಭುಲಾಯಿ' ಪದವೇ ಸ್ತ್ರೀವಾಚಕ ಪದವಾಗಿದ್ದು, ಹೆಣ್ಣು ಮಕ್ಕಳು ಹಾಡುವ, ಬುಲಾಯಿ ಹಾಕುವ, 'ಭುಲಾಯಿ' ಪದವನ್ನು ಭೂಲ್+ಆಯಿ= ಭೂಲಾಯಿ ಎಂದು ವಿಗ್ರಹಿಸಬಹುದು ಭೂಲ್ ಎಂದರೆ ಮರೆ ಆಯಿ ಎಂದರೆ ತಾಯಿ (ಅವ್ವ).

ಡಾ॥ಚಿದಾನಂದ ಮೂರ್ತಿಯವರು 'ಆಯಿ' ಶಬ್ದದ ಜ್ಞಾತಿ ಪದಗಳು ದ್ರಾವಿಡ್ ಭಾಷೆಗಳಲ್ಲೂ, ಇಂಡೋ ಆರ್ಯನ್ ಭಾಷೆಗಳಲ್ಲೂ ವ್ಯಾಪಕವಾಗಿ ಕಂಡು ಬರುತ್ತವೆ......

ಉದಾ : ದ್ರಾವಿಡ್ ಭಾಷೆಗಳಲ್ಲಿ

ತಮಿಳು = ಆಯ,ಆಯಿ ಯಾಯ್, ಇಯ್ (ಅವ್ವ)

ಕನ್ನಡ = ಆಯಿ (ಅವ್ವ)

ಆರ್ಯನ್ ಭಾಷೆಗಳಲ್ಲಿ,

ಬೆಂಗಾಲಿ - ಆ ಇ

ಮರಾಠಿ - ಆ ಈ

ದ್ರಾವಿಡ್ ಭಾಷೆಗಳ ಆಯಿ ಗೂ ಆರ್ಯನ್ ಭಾಷೆಗಳ 'ಆಈ' ಗೂ ಒಂದೇ ಮೂಲವೆಂಬಲ್ಲಿ ಅನುಮಾನವಿಲ್ಲ ಬರೋ ಮತ್ತು ಎಮಿನೋ ಕೋಶದ ಪ್ರಕಾರ ಅದು ದ್ರಾವಿಡ್ ಪದ : ಮತ್ತು ಆರ್ಯನ್ ಭಾಷೆಗಳು ಅದನ್ನು ದ್ರಾವಿಡದಿಂದ ಸ್ವೀಕರಿಸಿವೆ. ಅದೇ ಕೋಶದಲ್ಲಿ ಸೂಚಿಸಿರುವಂತೆ 'ತಾಯಿ' ಪದವು ಪದಾದಿಯ ವ್ಯಂಜನ ತ್ ಕಳೆದುಕೊಂಡು ಆಯಿ ಆಗಿದೆ [೧೭] ಎಂದಿರುವ ಮಾತು ತುಂಬಾ ಗಮನಾರ್ಹವಾಗಿದೆ.

ವಿಗ್ರಹಪದಗಳಲ್ಲಿಯ ಉತ್ತರ ಪದ ಆಯಿ ಡಾ॥ ಮೂರ್ತಿಯವರ ಪ್ರಕಾರ ದ್ರಾವಿಡ್

ಪದವೇ ಆಗಿದೆ. ಇನ್ನು 'ಭೂಲ್' ಪದದ ನಿಷ್ಪತ್ತಿಗೆ ತೊಡಗಿದಾಗ, ಸಿಕ್ಕದ್ದು ರೆ ಕಿಟ್ಟೆಲ್‌ರ ಕನ್ನಡ ಇಂಗ್ಲೀಷ್ ಡಿಕ್ಷನರಿಯಲ್ಲಿ ಬುಲ್ಲಯಿಸು : ಬುಲ್ಲಯ್ಸ ಬುಲ್ಲಬಿಸು Te ಬೆಲ್ಲಿಂಬು mhr ಭುಲಬಿಣೇಂ, To become large, externsive, make forget ಎಂಬ ಅರ್ಥಗಳಿವೆ.

ಉದಾ : ಹೇಳಿಗೆಯ ಮುಚ್ಚಳ ಜಾಳಿಸಿದ ಫಣಿಯನ್ತೆ ಬುಲ್ಲಯಿಸಿತ್ತು
ಕುರುಸೇನೆ,[೧೮]

ಹಳ್ಳವ ಜಿಡೆ ಭುಲ್ಲೈಸಿದವು ಹಯಕುಳವರೂಥವನಿಳಿದು ಸೂತರು
ನಿಲಿಸಿದರಂ ರಥವ.[೧೯]

ಇಲ್ಲಿ ಬುಲ್ಲಯಿಸು ಎಂಬುದಕ್ಕೆ **to bceome large, Extensive** ಎಂದು, ಮರಾಠಿಯ ಭುಲಬಿಣೇಂಗೆ **Make forget** ಎಂಬ ಅರ್ಥಗಳನ್ನಿಟ್ಟು ಕೊಳ್ಳಬಹುದು.

ಬುಲಾಯಿ ಹಾಕುವಾಗ ಇಂತಿಷ್ಟೇ ಜನ ಸ್ತ್ರೀಯರಿರಬೇಕೆಂಬ ನಿರ್ಬಂಧವಿಲ್ಲದ ಕಾರಣ ವಿಶಾಲವಾದ ಸ್ಥಳದಲ್ಲಿ ಮೊದಲು ಬಂದ ಹೆಣ್ಣುಮಕ್ಕಳು 'ಭುಲಾಯಿ ಹಾಕ'ಲು ಪ್ರಾರಂಭಿಸುತ್ತಾರೆ. ನಂತರ ಬಂದವರೆಲ್ಲಾ ಅದರಲ್ಲಿ ಕೂಡಿಕೊಳ್ಳುತ್ತಾರೆ. ಆಗ ಅದು ವಿಸ್ತರಿಸುತ್ತ ಹೋಗುತ್ತದೆ. ಹೀಗಾಗಿ ಕನ್ನಡದ ಬುಲ್ಲಯಿಸು ಎಂಬುದು 'ಭುಲಾಯಿ' ಕ್ರಿಯೆಯನ್ನು ಸೂಚಿಸುತ್ತದೆ. ಇದರಿಂದ 'ಭುಲಾಯಿ' ಪದವು 'ಬುಲ್ಲಯಿಸು' ಪದದಿಂದಲೇ ನಿಷ್ಪನ್ನವಾಗಿರಬಹುದು ಎನಿಸುತ್ತದೆ.

ಮಹಾರಾಷ್ಟ್ರ ಶಬ್ದಕೋಶ ದಾತೆ ಮತ್ತು ಕರ್ವೆಯವರ ಐದನೆಯ ಸಂಪುಟದಲ್ಲಿ 'ಭುಲವಿಣೇ' ಎಂದರೆ 'ಭುಲವಿ', 'ವಿಸರನ್ಯಾಸ', 'ಚುಕವಿನೆ' ಎಂಬ ಅರ್ಥಗಳಿವೆ [೨೦] ಅಂದರೆ ಮರೆತಂತೆ ಮಾಡು (Make forget) ಭುಲವಿಣೇಯ ಮೂಲಧಾತು 'ಭೂಲ'. ಭೂಲ್ ಎಂದರೆ ಮರೆ, ಇಲ್ಲಿ ಮರೆ ಎಂಬುದು ಹಾಡುಗಳಿಗೆ ಸೂಚಿಸಿದಂತಾಗುತ್ತದೆ.

ಇದೇ ಶಬ್ದಕೋಶದಲ್ಲಿ 'ಭುಲಾಯಿ' ಶಬ್ದಕ್ಕೆ ಸ್ತ್ರೀಲಿಂಗ, ನಟವಿ, ಸ್ತ್ರೀ [೨೧] ಎಂಬ ಅರ್ಥವಿದೆ ಅಂದರೆ ನಟನೆ, ಅಥವಾ ನಾಟ್ಯಕ್ಕೆ ತಯ್ಯಾರಾದ ಸ್ತ್ರೀವಾಚಕ ಪದವೆಂದು ಹೇಳಬಹುದು.

ಕ್ಷೇತ್ರ ಕಾರ್ಯದಲ್ಲಿ ವಕ್ತೃರು ನೀಡಿದ ಮಾಹಿತಿಯು ಇಲ್ಲಿ ತುಂಬಾ ಮಹತ್ವದ್ದೆನಿಸುತ್ತದೆ. ಭುಲಾಯಿ ಎಂದರೇನು? ಯಾಕೆ ಹಾಕುತ್ತಾರೆ ? ಎಂದು ಕೇಳಿದ್ದಕ್ಕೆ "ಹಿಂದೆ ಹೆಣ್ಣು ಮಕ್ಕಳಿಗೆ ಹೊರಗೆ ಹೋಗಲು ಅವಕಾಶ ಇರಲಿಲ್ಲ. ಭುಲಾಯಿ ಹಾಕುವಾಗ ಹೆಣ್ಣುಮಕ್ಕಳು ನಾಗರ ಪಂಚಮಿಯಲ್ಲಿ ಹೊರಗೆ ಬರುತ್ತಿದ್ದರು. ಸಾಮಾನ್ಯವಾಗಿ ತವರಿಗೆ ಬಂದ ಹೆಣ್ಣುಮಕ್ಕಳು ತವರಿಗೆ ಹೋಗದ ಸೊಸೆಯಂದಿರು ಹಾಗೂ ಹಿರಿಯ ಹೆಣ್ಣುಮಕ್ಕಳೆಲ್ಲಾ ಒಟ್ಟಿಗೆ ಸೇರಲು ಇದೊಂದು ಅವಕಾಶ ಈ ಸಂದರ್ಭದಲ್ಲಿ ಬಹುಶಃ ಹೆಣ್ಣು ಮಕ್ಕಳು ಸಂಸಾರದ ತಾಪತ್ರಯವನ್ನು ಮರೆಯುವಂತೆ ಮಾಡಲು ಭುಲಾಯಿ ಹಾಕುತ್ತಿದ್ದರು. ಜೊತೆಗೆ ನೆರಹೊರೆಯವರಲ್ಲಿ ಉಂಟಾಗಿದ್ದ ಜಗಳ ಮನಸ್ತಾಪಗಳನ್ನು ಮರೆತು, ಹೆಣ್ಣು ಮಕ್ಕಳೆಲ್ಲಾ ಒಂದಾಗಿ 'ಭುಲಾಯಿ' ಹಾಕುತ್ತಿದ್ದರು. ಹೀಗೆ ಮರೆ ಎಂಬ ಅರ್ಥದಲ್ಲಿ ಬಳಸಿರಬಹುದು [೨೨] ಎಂದು ವಿವರಿಸಿದರು. ಇವರ ಹೇಳಿಕೆಯನ್ನು

ಗಮನಿಸಿದರೆ ಮನೆಯ ಸಂಸಾರದ ತಾಪತ್ರಯಗಳನ್ನು ನೆರೆ ಹೊರೆಯ ಮನಸ್ತಾಪಗಳನ್ನು 'ಮರೆ' ಎಂಬ ಅರ್ಥದಲ್ಲಿಯೂ 'ಭುಲಾಯಿ' ಪದದ ಬಳಕೆಯಾದಂತೆ ಕಂಡು ಬರುತ್ತದೆ.

ಭುಲಾಯಿ ಪದ ಬಳಕೆಯಾದ ಹಾಡೊಂದು ಹೀಗಿದೆ,

ನಾಗರ ಪಂಚಮಿ ನಾಡಿಗೆ ದೊಡ್ಡದ್ದು.
ನಾರಿಯರೆಲ್ಲಾ ನೆರದಾರೆ ಕೋಲೆಣ್ಣ ಕೋಲೆ
ನಾರಿಯರೆಲ್ಲಾ ನೆರೆದು ಹಾಡುತ್ತ ತಿರುಗುತ್ತ
ಭುಲಾಯಿ ಹಾಕುತ್ತಾರೆ. ಕೋಲೆಣ್ಣ ಕೋಲೆ
ಭುಲಾಯಿ ಹಾಕುತ್ತ ಕತಿಗಳ ಹಾಡುತ್ತ
ಮಲ್ಲಮ್ಮನ ಭಕ್ತಿಯ ಮೆರದಾರೆ ಕೋಲೆಣ್ಣ ಕೋಲೆ [೨೩]

ಮತ್ತೊಂದು ತತ್ತ್ವಪದಲ್ಲಿಯ ಸಾಲುಗಳು ಹೀಗಿವೆ :

ಅಪ್ಪ ಬಂದಾರ ಕರಿಲಾಕ
ತಂಗೀ ಬಾರೇ ಹೋರಾಕ
ಹೋಗಾರಿ **ಭುಲಾಯಿ** ಹಾಕಲಾಕ [೨೪]

ತತ್ತ್ವಪದದ ವಾಚ್ಯಾರ್ಥದಲ್ಲಿ ಹೊರಗೆ ಬಾ ಎಂದು ಕರೆದಂತೆ ತೋರಿದರೂ, ಮನೆ ಸಂಸಾರದ ಮೋಹ ತೊರೆದು ಹೋಗೋಣ ಎಂಬಲ್ಲಿ **'ಮರೆ'**ವಂತೆ ಮಾಡು ಎಂಬ ಧ್ವನ್ಯಾರ್ಥವೂ ಇರುವುದನ್ನು ಗಮನಿಸಬಹುದಾಗಿದೆ.

"ಪ್ರಾಚೀನ ಕನ್ನಡನಾಡು ವಿಶಾಲವಾದ ಭೌಗೋಳಿಕ ವ್ಯಾಪ್ತಿಯನ್ನು ಹೊಂದಿತ್ತು. ಇದನ್ನೇ ಕವಿರಾಜ ಮಾರ್ಗಕಾರ **'ಕಾವೇರಿಯಿಂದ ಗೋದಾವರಿವರಮಿರ್ದ ನಾಡದಾ ಕನ್ನಡ'** ಎಂದಿರುವುದು. ಕನ್ನಡ ನಾಡಿನ ಉತ್ತರದ ಗಡಿ ಗೋದಾವರಿಯಾಗಿತ್ತು ಎಂಬುದನ್ನು ಇಲ್ಲಿನ ಕನ್ನಡ ಶಾಸನಗಳು ಶ್ರುತಪಡಿಸುತ್ತವೆ. ಇಂದಿನ ಮಹಾರಾಷ್ಟ್ರದ ಗೋದಾವರಿ ನದೀ ತೀರದವರೆಗೆ ನೂರಾರು ಕನ್ನಡ ಶಾಸನಗಳು ಉಪಲಬ್ಧವಾಗಿವೆ. ಒಂದು ಕಾಲದಲ್ಲಿ ಮಹಾರಾಷ್ಟ್ರದ ಬಹುಭಾಗವೆಲ್ಲ ಸಾಂಸ್ಕೃತಿಕ ಕರ್ನಾಟಕದ ಅಂಗವೇ ಆಗಿತ್ತು. ಮಹಾರಾಷ್ಟ್ರ ಎಂಬ ಪರಿಕಲ್ಪನೆ ಈಚಿನದಂತೆ ಕಂಡುಬರುತ್ತದೆ. ಹದಿಮೂರನೆಯ ಶತಮಾನದ ಅಂತ್ಯದವರೆಗೂ ಇಂದಿನ ಮಹಾರಾಷ್ಟ್ರದ ಬಹುಭಾಗ ಕನ್ನಡ ನಾಡಿನಲ್ಲಿ ಅಂತರ್ಗತವಾಗಿತ್ತು. ಅಲ್ಲದೇ ಅದು ಕನ್ನಡ ರಾಜವಂಶಗಳ ಹತೋಟಿಯಲ್ಲಿತ್ತು. ಆದ್ದರಿಂದ ಇಂದು ಪ್ರಾಚೀನ ಮಹಾರಾಷ್ಟ್ರದ ಇತಿಹಾಸ ಎಂದು ಯಾವುದನ್ನು ಕರೆಯಲಾಗುತ್ತದೋ ಅದು ಪ್ರಾಚೀನ ಕರ್ನಾಟಕದ ಇತಿಹಾಸವೇ ಆಗಿದೆ ಎಂಬುದು ಮಹಾರಾಷ್ಟ್ರದ ಕನ್ನಡ ಶಾಸನಗಳ ಅಧ್ಯಯನದಿಂದ ಶ್ರುತಪಟ್ಟಿದೆ.[೨೫] ಎಂಬುದು ಗಮನಾರ್ಹವಾಗಿದೆ.

ಬುಲಾಯಿ ಹಾಡುಗಳು ಮರಾಠಿಯ ಭುಲಾಯಿ ಹಾಡುಗಳಿಗಿಂತ ಭಿನ್ನ ವಿದ್ದಂತೆ ಕಾಣುತ್ತವೆ. ಅಲ್ಲಿ ಓವಿ, ಅಭಂಗ, ಕೃಷ್ಣಲೀಲೆ ಮುಂತಾದವುಗಳನ್ನು ಹಾಡುವುದು ಕಂಡು

ಬರುತ್ತದೆ.[೨೬] ವರ್ತುಲಾಕಾರದಲ್ಲಿ ಸುತ್ತುವುದು ಇತರೇ ಪ್ರಾದೇಶಿಕ ಭಾಷೆಗಳಲ್ಲಿಯೂ ಸಾಮಾನ್ಯವಾಗಿ ಎಲ್ಲಾ ಕಡೆಯಲ್ಲೂ ಕಂಡು ಬರುತ್ತದೆ. ಹೀಗಾಗಿ ಮರಾಠರ ಆಳ್ವಿಕೆಯಲ್ಲಿ ನಮ್ಮ ಉತ್ತರ ಕರ್ನಾಟಕದಲ್ಲಿ ಬೀದರದ ಹೆಣ್ಣುಮಕ್ಕಳು, ತಮ್ಮ 'ಕೋಲಾಟ' ಪದ ಬಿಟ್ಟು 'ಭುಲಾಯಿ' ಎಂಬ ಮರಾಠಿ ಪದವನ್ನೇ ಬಳಸಿರಬಹುದೆಂದೂ ಊಹಿಸಬಹುದು ಏಕೆಂದರೆ ಕ್ರಿ.ಶ. ಆರಂಭದಿಂದ ಹದಿಮೂರನೆಯ ಶತಮಾನದವರೆಗೆ ಕರ್ನಾಟಕದ ಪ್ರಭಾವ ಮಹಾರಾಷ್ಟ್ರದ ಮೇಲಾದರೆ ತದನಂತರ ಮಹಾರಾಷ್ಟ್ರದ ಕರ್ನಾಟಕದ ಮೇಲಾಯಿತು. ಕರ್ನಾಟಕದ ರಾಜವಂಶಗಳಾದ ಚಾಲುಕ್ಯ, ರಾಷ್ಟ್ರಕೂಟ ಕಲ್ಯಾಣದ ಚಾಲುಕ್ಯ ಕಲಚುರಿ, ಶಿಲಾಹಾರ ಮೊದಲಾದವು ಇಂದಿನ ಮಹಾರಾಷ್ಟ್ರ ಭಾಗದಲ್ಲಿ ತಮ್ಮ ಪ್ರಭುತ್ವವನ್ನು ಸ್ಥಾಪಿಸಿ ಇಲ್ಲಿ ಕನ್ನಡ ಸಂಸ್ಕೃತಿ ನೆಲೆಸುವಂತೆ ಮಾಡಿದ್ದು ಐತಿಹಾಸಿಕ ಸಂಗತಿ. ಮರಾಠರ ಕಾಲದಲ್ಲಿ ಕರ್ನಾಟಕದ ಕೆಲವು ಭಾಗ ಅವರ ಹಿಡಿತದಲ್ಲಿತ್ತು, ಹೀಗಾಗಿ ಇಂದಿನ ಉತ್ತರ ಕರ್ನಾಟಕದಲ್ಲಿ ಮರಾಠಿ, ಸಂಸ್ಕೃತಿ, ತಲೆ ಎತ್ತುವಂತಾಯಿತು.

ಹದಿಮೂರನೆಯ ಶತಮಾನದವರೆಗೆ ಕರ್ನಾಟಕದಿಂದ ಪೋಷಿತವಾದ ಮುಂದಿನ ಶತಕಗಳಲ್ಲಿ ತನ್ನ ಸಾಂಸ್ಕೃತಿಕ ಋಣವನ್ನು ಬಡ್ಡಿ ಸಹಿತ ಮುಟ್ಟಿಸಿದ ಕತೆಯೂ ಅಷ್ಟೇ ರೋಚಕವಾಗಿದೆ ಎಂಬ ಕುರ್ತಕೋಟಿ ಅವರ ಮಾತಿನಲ್ಲಿ ತಥ್ಯವಿದೆ[೨೭] ಎಂಬ ಅಭಿಪ್ರಾಯವನ್ನು ಗಮನಿಸಿದರೆ, ಮರಾಠಿ ಭಾಷೆ ಹಾಗೂ ಸಂಸ್ಕೃತಿಯ ಪ್ರಭಾವ ಕರ್ನಾಟಕದ ಮೇಲೆ ಆಗಿರುವಂತೆ ಕಂಡುಬರುತ್ತದೆ.

ಹೀಗಾಗಿ ಮರಾಠಿಯ ಭುಲಾಯಿ ಎಂಬ ಪದವನ್ನೇ ಬಳಸಿರುವ ಸಾಧ್ಯತೆ ಕಂಡುಬರುತ್ತದೆ. ಆದರೆ ಬುಲಾಯಿ ಹಾಡುಗಳು ಶುದ್ಧ ಕನ್ನಡ ಜನಪದ ರಚನೆಗಳಾಗಿರುವುದು, ಕೋಲೆಣ್ಣ ಕೋಲೆ ಮುಂತಾದ ಸೊಲ್ಲುಗಳಿರುವುದು ಗಮನಾರ್ಹವಾಗಿದೆ.

ಬುಲಾಯಿ ಪದದ ಎಲ್ಲಾ ಚರ್ಚೆಗಳನ್ನು ಗಮನಿಸಿದರೆ ಬುಲಾಯಿ ಪದ ಮೂಲದಲ್ಲಿ ಹೀಗಿರಲಿಕ್ಕಿಲ್ಲ ಎಂದೆನಿಸುತ್ತದೆ. ಮೂಲದಲ್ಲಿ ಅದು **'ಭುಲಾಯಿ'** ಎಂದೇ ಉಪಯೋಗಿಸಿದ್ದು, ಕಂಡು ಬರುತ್ತದೆ. ೧೯೭೬ ರಲ್ಲಿ ಕ್ಯಾತನಹಳ್ಳಿ, ರಾಮಣ್ಣನವರು ಸಂಗ್ರಹಿಸಿರುವ ಬೀದರ ಜಿಲ್ಲೆಯ ಜನಪದ ಗೀತೆಗಳು ಸಂಗ್ರಹದಲ್ಲಿ **ಭುಲಾಯಿ ಹಾಡುಗಳೆಂದೇ** ಬಳಸಿದ್ದಾರೆ. ೧೯೮೬ ರಲ್ಲಿ ಇನ್ನಷ್ಟು ಕವನಗಳು ೧೯೯೩ ರಲ್ಲಿ ಕೌದಿ, ಕವನ ಸಂಕಲನಗಳಲ್ಲಿ ಬೀದರ ಜಿಲ್ಲೆಯವರೇ ಆದ ಡಾ॥ ಕಾಶಿನಾಥ ಅಂಬಲಗೆ ಅವರೂ **ಭುಲಾಯಿ ಹಾಡು**ಗಳೆಂದೇ ಬರೆದಿದ್ದು ಕಂಡು ಬರುತ್ತದೆ. ಇಂದಿಗೂ ಹೆಣ್ಣು ಮಕ್ಕಳು 'ಭುಲಾಯಿ' ಹಾಡು ಭುಲಾಯಿ ಹಾಕುವುದು ಎಂದೇ ಹೇಳುವುದು ರೂಢಿಯಲ್ಲಿದೆ. ಏಕೆಂದರೆ ಭೂಲ್ ಎಂಬುದು **ಭೂ** ಮಹಾಪ್ರಾಣದಿಂದ ಕೂಡಿದೆ. ಧರಿನಾಡಿನಲ್ಲಿಯೂ ರನ್ನನ ಭಾಷೆಯೇ ಬಳಯಲ್ಲಿದೆ. ಹಾಗೆ ನೋಡಿದರೆ ಕೋಲೆನ್ನ ಕೋಲು ಎಂಬ ಕೋಲು ಪದದ ಸೊಲ್ಲು ಧರಿನಾಡಿನ ಹೆಣ್ಣು ಮಕ್ಕಳ ಭುಲಾಯಿ ಪದದಲ್ಲಿ ಕೋಲೆಣ್ಣಾ ಕೋಲೆ ಆಗಿಯೇ ಬಳಕೆಗೊಂಡಿರುವುದು ಬೀದರ ಭಾಷೆಯ ವೈಶಿಷ್ಟ್ಯಗೆ ನಿದರ್ಶನವೆನ್ನಬಹುದು.

ಹೀಗೆ ಜನಪದದ '**ಭುಲಾಯಿ**' ಎಂಬುದು ಶಿಷ್ಟ ಪದದಲ್ಲಿ '**ಬುಲಾಯಿ**' ಎಂದು ಬಳಕೆಗೊಳ್ಳುತ್ತಿರಬಹುದು.

ಬುಲಾಯಿ ಹಾಡುಗಳ ಸ್ವರೂಪ :

ಈ ಹಾಡುಗಳು ದ್ವಿಪದಿಯಲ್ಲಿದ್ದು, ಸಾಮಾನ್ಯವಾಗಿ ಕಥನ ಗೀತೆಗಳ ಹಾಗೆ ದೀರ್ಘವಾಗಿರುವಂತೆ ಕಂಡು ಬರುತ್ತವೆ. ಪ್ರತಿ ಎರಡು ಸಾಲಿನ ಕೊನೆಯಲ್ಲಿ ಕೋಲೆ, ಕೋಲು ಕೋಲೆ, ಕೋಲೆಣ್ಣ ಕೋಲೆ, ರನ್ನದ ಕೋಲು ಕೋಲೆ, ಯೇ ಹೂವಿನ ಕೋಲು ಕೋಲೆ ಮುಂತಾದ ಸೊಲ್ಲುಗಳಲ್ಲಿ ಯಾವುದಾದರೊಂದನ್ನು ಬಳಸುವುದು ಕಂಡುಬರುತ್ತದೆ. ಇನ್ನು ಕೆಲವು ಹಾಡುಗಳಲ್ಲಿ ಧಾಟಿ ಬದಲಾದಾಗ ಸೂಯ್, ಶಿವ, ಬಸವ ಎನ್ನುವ ಪದ ಪ್ರಯೋಗವಿರುವುದು ಕಂಡು ಬರುತ್ತದೆ.

ಉದಾ :

1) ಅತ್ತಿಗೆ ನಾದನಿಯರು ಜೋಡಾಗಿ ನೀರಿಗೆ ಹೋಗಿ
ಹೊತ್ತಾದ ಮುಗಿಲ ಮುಣಗ್ಯಾದ ಕೋಲೆ
ಭಡಭಡ ಹೋಗ್ಯಾರ ಕೊಡನಾದರ ತುಂಬ್ಯಾರ
ತಮ್ಮ ತಮ್ಮ ಮನಿಗಿ ಹೋಗ್ಯಾರೋ ಕೋಲೆ
ಮನಿಗೆರೆ ಹೋಗ್ಯಾರೆ ಕೊಡನಾದ ಇಳಿಸ್ಯಾರೆ
ಈಗಿನ ಕೊಡಕ್ಯಾಕ ತಡವಾಯಿತು ಕೋಲೆ.[೨೮]

2) ಬಸವಂತರಾಯನ ಕರೆಯ ಹೆಸರಾದ
ಜೈಯದ ಹಸುರಂತಲ್ಲೊಬ್ಬ ಸಾಹುಕಾರ ಕೋಲ
ಹಸುರಂತಲ್ಲಿ ಒಬ್ಬ ಸಾಹುಕಾರನ ಹೊಟ್ಟೇಲಿ
ಮಲ್ಲಿಕಾರ್ಜುನನೆಂಬ ಮಗ ಹುಟ್ಟಿ ಕೋಲ [೨೯]

3) ಪಂಚಮಿ ಹಬ್ಬ ಹೆಣ್ಣ ಮಕ್ಕಳಕರಿಯುವ ಹಬ್ಬ
ಅಣ್ಣ ಯಾವಾಗ ಬರುವನು ಕರಿಯ್ಯಾಕ ಕೋಲು ಕೋಲೆ
ವಾರಿಗಿ ಗೆಳತ್ಯಾರು ಎಲ್ಲರುನೇ ಕೂಡಿ
ಹಿಗ್ಗಿಲೀ ಜೋಕಾಲಿ ಆಡುವ ಹಬ್ಬ ಕೋಲು ಕೋಲೆ [೩೦]

4) ಶ್ರೀಗುರು ಬಸವನೆಂದು ಹರಣೋಪಾದಕ್ಕೆ ಹೊಂದಿ
ಶರಣು ಬಸಪ್ಪಾ ಹುಟ್ಟಿ ಬಂದಿ ಕೋಲೆಣ್ಣ ಕೋಲೆ
ತಾಯಿ ತಂದೆ ಹೊಟ್ಟಿಲಿ ಹುಟ್ಟಿ ಮರತೇಕ ಬರುವುದೆ ಘಟ್ಟಿ
ಶರಣು ಬಸಪ್ಪಾ ಏಕ ನಿಷ್ಠ ಕೋಲೆಣ್ಣ ಕೋಲೆ [೩೧]

5) ಹಿಂದೂ ಪ್ರಸ್ತಾಳದಲ್ಲಿ ಇದ್ದಾರೆ ಪಾಂಡವರು,
ರಾಜ್ಯ ರಾಜ್ಯಕ್ಕೆ ಪತ್ತರ ಬರುದಾರೆ
ರನ್ನದೇ ಕೋಲು ಕೊಲ ಯೇ ಹೂವಿನ ಕೋಲು ಕೋಲ.

ರಾಜ್ಯ ರಾಜ್ಯಕ್ಕೆ ಪತ್ತರು ಬರುದಾರೆ ಪಾಂಡವರು
ಶೆಕುಣಿ ಸಾಧುನ ಪತ್ತರು ಬರುದಾರೆ
ರನ್ನದೇ ಕೋಲು ಕೋಲ ಯೇ ಹೂವಿನ ಕೋಲು ಕೋಲ.[೩೨]

ಹೀಗೆ ಬುಲಾಯಿ ಹಾಡುಗಳು ವಿವಿಧ ಸೊಲ್ಲುಗಳನ್ನು ಕೊನೆಯಲ್ಲಿ ಹೊಂದಿರುವುದು ಅದರ ಲಕ್ಷಣವೆನ್ನಬಹುದು. ಕೆಲವೊಂದು ಹಾಡುಗಳಲ್ಲಿ ಎರಡನೆಯ ನುಡಿಯ ಪುನರಾವರ್ತನೆಯಾಗುತ್ತದೆ. ಇನ್ನು ಕೆಲವೊಂದು ಹಾಡುಗಳಲ್ಲಿ 'ಹಾಡ ಹಾಡಂದರ ಪಾಪ ಹಾಡದಿದ್ದರೆ ಪಾಪ' ಹಾಡ ಕೇಳವರ ಪರಚಿತ್ತು ಕೋಲೆ,[೩೩] ಎಂಬ ಪಲ್ಲದಿಂದ ಹಾಡು ಪ್ರಾರಂಭವಾಗುವುದು ಕಾಣಬಹುದು. ಇಂತಹ ಪಲ್ಲವಿರುವ ಹಾಡುಗಳು ಹೆಚ್ಚಾಗಿ ಪೌರಾಣಿಕ ಹಾಡುಗಳಲ್ಲಿ ಕಂಡು ಬರುತ್ತವೆ. ಉದಾ: ದ್ರೌಪದಿ, ಸೀತೆ, ಹರಿಶ್ಚಂದ್ರ, ಲವಕುಶ, ಶ್ರವಣಕೂಮರ ಮುಂತಾದವರ ಹಾಡುಗಳಲ್ಲಿ ಕಾಣಬಹುದು. ಉಳಿದಂತೆ ಇತರ ಹಾಡುಗಳಲ್ಲಿ ತಮ್ಮ ಇಷ್ಟದೇವತೆಗಳನ್ನು ನೆನೆಯುವುದು ಕಂಡು ಬರುತ್ತದೆ.

ನೆನೆದನೋ ಗಣಪತಿ ಮಾಡುವೆ ನಿಮ್ಮ ಸ್ಮರಣೆ,
ವಿದ್ಯೆಕ್ಕೆ ನೀವು ಅಧಿಪತಿ ರನ್ನದ ಕೋಲು ಕೋಲ,[೩೪]

ಎಂದು ತಮ್ಮ ಇಷ್ಟದೇವರಾದ ಶಿವ, ಪಾರ್ವತಿ, ಬಸವಣ್ಣ, ಸರಸ್ವತಿ ಮುಂತಾದವರನ್ನು ಪ್ರಾರಂಭದಲ್ಲಿ ಸ್ತುತಿಸುವುದು ಕಂಡು ಬರುತ್ತದೆ. ಮತ್ತೆ ಕೆಲವೊಂದು ಹಾಡುಗಳು ನೇರವಾಗಿಯೇ ಹಾಡಲ್ಪಡುತ್ತವೆ. ಹಾಗೂ ಒಂದೇ ಸಾಲಿದ್ದು ಕಥೆ ಮುಂದೊರೆಯುತ್ತದೆ.

ತಂಗಿ ಸಂಗಮ್ಮಾಗ ಬಡತನ ಬಂದಾದ ಕೋಲು ಕೋಲೆ,
ಬಡತನ ಬಂದಾದ ತವರ ಮನಿಗಿ ಹೋಗ್ಯಾಳ ಕೋಲು ಕೋಲೆ
ಭಾಯಿಮಾಲ ಘಾರಗಿ ಅದಕಾಲು ತೊಳೆದ ಸಂಗಮ್ಮ ಕೋಲು ಕೋಲೆ,
ಮೂರು ದಿನದ ನುಚ್ಚ ಎಂಟುದಿನದ ಮಜ್ಜಿಗಿ ಅದ ಕೋಲು ಕೋಲೆ,
ಉಪ್ಪಿಲ್ಲ ಸಪ್ಪಗ ಒಪ್ಪಿಕೊಂಡು ಉಂಡಾಳ ಕೋಲು ಕೋಲೆ,[೩೫]

ಹೀಗೆ ಸಾಮಾನ್ಯವಾಗಿ ಎರಡು ಸಾಲುಗಳಿಗೊಮ್ಮೆ ಸೊಲ್ಲು ಬಂದು ಹಾಡು ಮುಮ್ಮೇಳ ಹಿಮ್ಮೇಳದಲ್ಲಿ ಹಾಡಲ್ಪಡುತ್ತದೆ. ಮೊದಲನೆ ಹಾಗೂ ಎರಡನೆ ಸಾಲುಗಳನ್ನು ಮುಮ್ಮೇಳದಲ್ಲಿ ಹಾಡಿದ ಮೇಲೆ ಎರಡನೆಯ ಸಾಲನ್ನು ಮಾತ್ರ ಹಿಂದೆ ಹಾಡುತ್ತಾರೆ. ಪುನಃ ಮುಮ್ಮೇಳನದಲ್ಲಿ ಮತ್ತೆರಡು ಸಾಲು ಹಾಡಿದ ಮೇಲೆ ಕೊನೆಯ ಸಾಲನ್ನು ಮಾತ್ರ ಹಿಮ್ಮೇಳದಲ್ಲಿ ಮತ್ತೆರಡು ಸಾಲು ಹಾಡಿದ ಮೇಲೆ ಕೊನೆಯ ಸಾಲನ್ನು ಮಾತ್ರ ಹಿಮ್ಮೇಳದಲ್ಲಿ ಹಾಡುತ್ತಾರೆ. ಮೊದಲೇ

ಹೇಳಿದಂತೆ ಈ ಹಾಡುಗಳು ಹೆಚ್ಚಾಗಿ ದ್ವಿಪದಿಯಲ್ಲಿವೆ. ಅಪರೂಪಕ್ಕೆ ಒಂದೇ ಸಾಲಿನಲ್ಲಿ ಅಥವಾ ಮೂರು ಸಾಲಿನಲ್ಲಿಯೂ ಕಂಡು ಬರುತ್ತವೆ. ಆದರೆ ತುಂಬಾ ಕಡಿಮೆ. ದ್ವಿಪದಿಯಲ್ಲಿಯೇ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುವದರಿಂದ ಬುಲಾಯಿ ಹಾಡುಗಳು ದ್ವಿಪದಿಯಲ್ಲಿವೆ ಎಂಬ ವಿದ್ವಾಂಸರ ಅಭಿಪ್ರಾಯವನ್ನು ಅಲ್ಲಗಳೆಯುವಂತಿಲ್ಲ.

ಕೋಲೆಣ್ಣ ಕೋಲೆ ಎಂಬ ಸೊಲ್ಲಿದ್ದಾಗ ಎರಡನೆಯ ಸಾಲನ್ನು ಮುಮ್ಮೆಳದಲ್ಲಿ ಹಾಡಿದಂತೆ ಹಿಮ್ಮೇಳದಲ್ಲೂ ಹಾಡುವುದು ಕಂಡು ಬರುತ್ತದೆ. ರನ್ನದ ಕೋಲು ಕೋಲು ಯೇ ಹೂವಿನ ಕೋಲು ಕೋಲೆ ಎಂಬ ಸೊಲ್ಲಿದ್ದಾಗ ಹಿಮ್ಮೇಳದಲ್ಲಿ ಇದನ್ನು ಮಾತ್ರ ಹಾಡುವುದು ಕಂಡು ಬರುತ್ತದೆ. ಕೋಲೆ ಎಂಬುದೊಂದೇ ಇದ್ದಾಗ ಒಂದೇ ಸಾಲು ಪುನರಾವರ್ತನೆಯಾಗಿ ಹಿಮ್ಮೇಳದಲ್ಲಿ ಹಾಡುವುದು ಕಂಡು ಬರುತ್ತದೆ.

ಪ್ರತಿ ಚರಣದ ಕೊನೆಯ ಸಾಲಿನ ಪುನರಾವರ್ತಿ ಉಂಟಾಗಲು ಹಾಡುವ ಅನುಕೂಲತೆಯೇ ಕಾರಣವಾಗಿರಬಹುದು ಉಸಿರು ತೆಗೆದುಕೊಳ್ಳಲು ಹಾಗೂ ಹಾಡಿನ ಮುಂದಿನ ಚರಣವನ್ನು ನೆನಪಿಸಿಕೊಳ್ಳಲು ಇದು ಅನುಕೂಲತೆಯನ್ನು ಒದಗಿಸುವುದರ ಜೊತೆಗೆ ಕೇಳುಗರಿಗೆ ಕೂಡ ನಿಧಾನವಾಗಿ ಕಥೆ ತಿಳಿದುಕೊಳ್ಳಲು ಸಹಾಯಕಾರಿಯಾಗುವಂತಿದೆ. ಹಾಡುಗಳು ಸಂಭಾಷಣಾ ಹಾಗೂ ವಿವರಣಾ ರೂಪದ ಸರಪಳಿಯಂತಿದ್ದು, ಘಟನೆಯಗಳನ್ನು ಕಣ್ಮುಂದೆ ನಿಲ್ಲುವಂತೆ ಚಿತ್ರಿಸುವ ಹಾಗೆ ಕಂಡು ಬರುತ್ತವೆ. ಹಾಡುವವರ (ಮುಮ್ಮೇಳದಲ್ಲಿ) ಗತಿಗೆ ತಕ್ಕಂತೆ ಧಾಟಿ ಇರುತ್ತದೆ. ಹೀಗಾಗಿ ಹಾಡುವಾಗ ತಮಗೆ ಬೇಕಾದಂತೆ ಹಾಡನ್ನು ಕುಗ್ಗಿಸಿ ಹಿಗ್ಗಿಸಿ, ಹಾಡವುದು ಕಂಡು ಬರುತ್ತದೆ.

ಛಂದಸ್ಸು:

ಪದ್ಯ ರಚನೆಯಲ್ಲಿ ಅನುಸರಿಸುವ ನಿಯಮಗಳ ಮೊತ್ತವನ್ನು 'ಛಂದಸ್ಸು' ಎಂದು ಕರೆಯುತ್ತಾರೆ. ಕಾರಣ ಛಂದಸ್ಸು ಪದ್ಯ ರಚನಾಗಣ ಪರಿಮಿತಿಯನ್ನು ಹೇಳುವ ರೀತಿ, ಎನ್ನಬಹುದು. ಯಾವುದೇ ಪದ್ಯವಾಗಲೀ ಅದು ಛಂದವಿಲ್ಲದೆ ಇರಲಾರದು. ವ್ಯಾಕರಣ ಸೂತ್ರಗಳಿಂದ ಬದ್ಧವಾದ ಗದ್ಯವನ್ನು ಪದ್ಯವಾಗಿ ಮಾಡುವ ಶಕ್ತಿಯು ಛಂದದಲ್ಲಿರುತ್ತದೆಂಬುದು ವಿದ್ವಾಂಸರ ಮತ. ಕನ್ನಡ ಕವಿಗಳ ಕಾವ್ಯ ರಚನೆಗೆ ಎರಡು ಛಂದಗಳು ಬಳಸಲ್ಪಟ್ಟಿವೆ. ಸಂಸ್ಕೃತ ಅನುಕರಣ ಮಾಡಿ ಬಳಸಿಕೊಂಡ **ಸಂಸ್ಕೃತ ಛಂದಸ್ಸು** ಒಂದು. ಕನ್ನಡದಲ್ಲಿಯೇ ಹುಟ್ಟಿ ಬೆಳೆದು ಬಂದ **ದ್ರಾವಿಡ ಭಾಷೆಗಳ ಛಂದಸ್ಸು** ಮತ್ತೊಂದು. ಆದಿಯಲ್ಲಿ ಕನ್ನಡ ಕವಿಗಳು ತಮ್ಮ ಸಂಸ್ಕೃತ ಪಾಂಡಿತ್ಯದ ಮೂಲಕ ತಮ್ಮ ಕಾವ್ಯಗಳಲ್ಲಿ ಸಂಸ್ಕೃತ ಛಂದಸ್ಸಿಗೆ ಮುಖ್ಯ ಸ್ಥಾನವನ್ನು ಕೊಟ್ಟಂತೆ ಕಂಡು ಬರುತ್ತದೆ. ಸಂಸ್ಕೃತದಲ್ಲಿ **ವೈದಿಕ ಛಂದಸ್ಸು, ಲೌಕಿಕ ಛಂದಸ್ಸೆಂದು** ಎರಡು ಛಂದ ಪ್ರಕಾರಗಳುಂಟು. ವೈದಿಕ ಛಂದಸ್ಸನ್ನು ಯಾವ ಕನ್ನಡ ಕವಿಯೂ ಗಮನಿಸಿದಂತೆ ಕಾಣದು. ಇದರಲ್ಲಿ ತಾಳದ ಕಲ್ಪನೆಯೇ ಕಂಡುಬರದು. ಹೀಗಾಗಿ ಕನ್ನಡ

ಕವಿ ಮೆಚ್ಚಿದ್ದು ಲೌಕಿಕ ಛಂದಸ್ಸು ಅದನ್ನೇ ಹಿನ್ನೆಲೆಯಾಗಿಟ್ಟುಕೊಂಡು ಚಂಪೂ ಶೈಲಿಯನ್ನು ನಿರ್ಮಿಸಿ ಕಾವ್ಯಗಳನ್ನು ಬರೆದಂತೆ ಕಂಡು ಬರುತ್ತದೆ. ಸಂಸ್ಕೃತ ಛಂದಸ್ಸು **'ವರ್ಣ ಛಂದಸ್ಸು'**. ಅಲ್ಲಿ ಅಕ್ಷರ ಗಣಗಳ ಎಣಿಕೆಯೊಡನೆ ವೃತ್ತಗಳ ಬಂಧವು ಗಮನಿಯ ವೆನ್ನಬಹುದು. ಡಾ॥ ಬಿ.ಎಸ್. ಗದ್ದಗಿಮಠರು ಜಾನಪದ ಛಂದಸ್ಸನ್ನು ಕುರಿತು ಕೆಳಗಿನಂತೆ ಹೇಳುತ್ತಾರೆ.

"ಸಂಗೀತ ತಾಳಗಳಲ್ಲಿ ಸಮೃದ್ಧವಾದ ಕಲೆ ದ್ರಾವಿಡರದು. ಐದು ಜಾತಿಯ ಸಪ್ತ ತಾಳಗಳನ್ನು ಎಂದರೆ ಮೂವತ್ತೈದು ಪ್ರಕಾರದ ಅನೇಕ ರಾಗ ರಾಗಿಣಿಗಳನ್ನು ಪರಿಶೀಲಿಸಿದರೆ ಕರ್ನಾಟಕ ಸಂಗೀತದ ಮಹತಿ ಮತ್ತು ವಿಸ್ತಾರ ತಾನೇ ಹೋಳೆಯುತ್ತದೆ. ಹನ್ನೆರಡನೆಯ ಶತಮಾನಕ್ಕಿಂತ ಪೂರ್ವದಲ್ಲಿ ಕರ್ನಾಟಕದಲ್ಲಿ ಸಂಗೀತವು ಶಾಸ್ತ್ರೀಯವಾಗಿ ಬೆಳೆದು ಹೋಗಿತ್ತು. ಅದರ ಅನುಭವ ನಮಗೆ ಹರಿಹರನ ರಗಳೆಗಳಲ್ಲಿ, ರಾಘವಾಂಕನ ಷಟ್ಪದಿಗಳಲ್ಲಿ ದೊರೆಯುತ್ತದೆ. ವಚನಕಾರರ ಷಟ್ಪದಿಗಳಲ್ಲಿಯೂ ಅದು ಅನುಭವಕ್ಕೆ ಬರುತ್ತದೆ. ಷಟ್ಪದಿ, ಅಕ್ಕರ, ತ್ರಿಪದಿ ಮುಂತಾದ ಛಂದಸ್ಸುಗಳನ್ನು ಜಾನಪದ ಸಾಹಿತ್ಯದಲ್ಲಿ ಉಪಯೋಗಿಸ ಹತ್ತಿದ್ದರಿಂದ ನಾಗವರ್ಮನು ತನ್ನ ಕಾಲದಲ್ಲಿ ಅವುಗಳಿಗೆ ಮೆಚ್ಚಿ ಅವುಗಳನ್ನು ತನ್ನ ಛಂದೋಂಬುಧಿಯಲ್ಲಿ ಸೇರಿಸಿಕೊಂಡಿದ್ದಾನೆ.

ಮಾತ್ರಾಗಣ ಬಂಧಗಳು ಪ್ರಾಕೃತ ಛಂದಸ್ಸಿನ ವೈಶಿಷ್ಟ್ಯವೆಂಬುದು ಪಂಡಿತರ ಮತ ಸ್ವರ ಪರಿಣಾಮವುಳ್ಳ ಸರಿ ಮಾತ್ರೆಗಳ ಚರಣಗಳು ಗೇಯವಾದ ಲಯವೂ ತಾಳವೂ, ಮಾತ್ರಾಗಣ ಬಂದಗಳ ಸಾಮಾನ್ಯ ಲಕ್ಷಣಗಳಾಗಿವೆ. ತಾಳದ ಕಲ್ಪನೆಯು ಪ್ರಾಕೃತದಲ್ಲಿ ಬಂದರೂ ದ್ರಾವಿಡರ ಛಾಯೆ ಬಿದ್ದಿರಬಹುದು ತಾಳಲಯಗಳ ಪ್ರಾಧಾನ್ಯ ಕನ್ನಡ ಛಂದಗಳಿಗಿರುವುದರಿಂದ ಮಾತ್ರಾಗಣ ಬಂಧುಗಳು ಕನ್ನಡ ಛಂದಗಳಾಗಿರಬಹುದೆ ? ಅಲ್ಲದೆ ಅಚ್ಚಗನ್ನಡ ಛಂದಗಳೆಂದು ಗಣಿಸಲ್ಪಡುವ ಷಟ್ಪದಿ, ರಗಳೆ, ತ್ರಿಪದಿ, ಮೊದಲಾದವುಗಳು ಅಂಶಗಣ ಬಂಧುಗಳಾಗಿದ್ದರೂ ಮಾತ್ರಾಗಣ ಬಂಧಗಳಾಗಿ ತಿರುಗಿದೆ. ಈ ಬಂಧಗಳು ೧೨ನೆಯ ಶತಮಾನದಿಂದ ವೀರಶೈವ ಕವಿಗಳ ಕಾಲದಿಂದ ಬಳಕೆಯಲ್ಲಿ ಬಂದಿವೆ.

ಅಂಶಗಣ ಬಂಧಗಳೇ ಅಚ್ಚಗನ್ನಡ ಛಂದ, ಇವು ಅಕ್ಷರ ಹಾಗೂ ಮಾತ್ರಾಗಣ ಬಂಧಗಳಿಂದ ತೀರ ಭಿನ್ನವಾಗಿದೆ. ಈ ಕ್ರಮವು ದ್ರಾವಿಡ ಭಾಷೆಗಳಿಗೆ ವಿಶಿಷ್ಟವಾದ ಛಂದ, ಇಲ್ಲಿ ಅಕ್ಷರಗಳ ಎಣಿಕೆಗಾಗಲಿ, ಮಾತ್ರೆಗಳ ಎಣಿಕೆಗಾಗಲಿ, ಪ್ರಧಾನ್ಯವಿಲ್ಲ."[೩೬] ಎಂಬ ಅಭಿಪ್ರಾಯವನ್ನು ಗಮನಿಸಿದರೆ ಜನಪದಗೀತೆಗಳನ್ನು ತಾಳಲಯದೊಡನೆ, ಹಿಗ್ಗಿಸಿಯೋ ಕುಗ್ಗಿಸಿಯೋ ಹಾಡುವ ರೀತಿಯೇ ಇಲ್ಲಿ ಸ್ಪಷ್ಟವಾಗಿ ಕಾಣುತ್ತದೆ. 'ಗುರು' ಒಮ್ಮೆ ಕುಗ್ಗಬಹುದು 'ಲಘು' ಒಮ್ಮೆ ಹಿಗ್ಗಬಹುದು. ಹಿಗ್ಗಿದಾಗ ಅದರ ಮಾತ್ರೆಗಳು ಇಷ್ಟೇ ಎಂದು ನಿರ್ಧರಿಸಲಾಗದು. ಅದು ಅದನ್ನು ಕೋಚೆತ್ತಿ ಹಾಡುವುದನ್ನು ಪೂರ್ಣ ಅವಲಂಬಿಸಿದೆ. ಹೀಗೆ ಹೆಚ್ಚು ಕಡಿಮೆ ಮಾತ್ರೆಗಳು ಸೇರುವುದರಿಂದ ಈ ಬಂಧಗಳನ್ನು ಪರಿಗಣಿಸಲು ಲಾಕ್ಷಣಿಕರು ಬೇರೆ ಯೋಜನೆಯನ್ನು ಕೈಗೊಂಡಿದ್ದಾರೆ. ಅದಕ್ಕಾಗಿಯೇ ಬ್ರಹ್ಮ, ವಿಷ್ಣು, ರುದ್ರ ಗಣಗಳ ಕಲ್ಪನೆಗೆ

ಅವಕಾಶವಾಯಿತು. ಈ ತ್ರಿಮೂರ್ತಿ ಗಣಗಳೇ ಕನ್ನಡ ಛಂದದ ಮೂಲ ನೆಲೆಯಾಗಿವೆ ಎಂಬ ವಿದ್ವಾಂಸರ ಅಭಿಪ್ರಾಯ ಸೂಕ್ತವೆನಿಸುತ್ತದೆ. ನಾಗವರ್ಮನು ತನ್ನ ಛಂದೋಂಬುದಿಯ ಪಂಚಮಾಶ್ವಾಸದ ಪ್ರಾರಂಭ ಪದ್ಯದಲ್ಲಿ **ಕರ್ನಾಟಕ ಭಾಷೆಯಿಂದಮಂ ಕೇಳ್ಪೇಳ್ವೆಂ** ಎಂದು ಸೂಚಿಸಿ

ಎರಡು ಮೂರುಂ ನಾಲ್ಕುಂ
ಗುರುವಿಂ ಪ್ರಸ್ತರಿಸಲಂಬುನಿಧಿ ಗಜ ಧರಣೀ ।
ಶ್ವರ ಗಣ ಮೊಗೆಗುಮವರ್ಕಂ
ಸರಸಿಜಭವ, ವಿಷ್ಣು, ರುದ್ರ ಸಂಜ್ಞೆಗಳನ್ನುಕ್ಕುಂ ॥[೩೨]

ಎಂದು ಬ್ರಹ್ಮ ವಿಷ್ಣು ರುದ್ರ ಗುಣಗಳ ಮೂಲಾಂಶಗಳನ್ನು ಹೇಳಿ ಅವುಗಳ ನಾಮನಿರ್ದೇಶ ಮಾಡಿದ್ದಾನೆ. ಅವನು ತನ್ನ ಕಾಲದಲ್ಲಿ ಜನತೆಯಲ್ಲಿದ್ದ ಛಂದಸ್ಸನಲ್ಲಿ ಸೂಚಿಸಿರಬಹುದು. ಭಾವದಂತೆ ಹಾಡಿರಿ ಎಂಬುದೇ ಅಂಶಗಣ ಛಂದಸ್ಸು, ಛಂದಸ್ಸು **ಸ್ವಚ್ಛಂದ ವೃತ್ತಿ** ಎಂಬರ್ಥವನ್ನೇ ಸೂಚಿಸುವುದು. ಛಂದಸ್ಸಿನ ಡೌಲು ಹಾಡುವುದರಲ್ಲಿ ಅಂಶಗಳ ಛಂದದಲ್ಲಿ ಮಾತ್ರೆಗಳನ್ನು ಹಿಗ್ಗಿಸುವ ಕುಗ್ಗಿಸುವ ಯೋಜನೆಯಿಂದ ಲಘು ಗುರುವಿನ ಪ್ರಶ್ನೆಯು ಹೋಗಬಹುದು ಅಲ್ಲಿ ಮಹತ್ವವಾಗಿ ಬಂದದ್ದು ಲಯದೊಂದಿಗೆ ತಾಳ ಎಂಬುದು ಗಮನಾರ್ಹ.

"ಎಲ್ಲ ಜಾನಪದ ಹಾಡುಗಳು ಅಂಶಗಣ ಬಂಧಗಳಲ್ಲಿವೆ ಅವುಗಳ ಪ್ರಸ್ತಾರವನ್ನು ತಾಳದೊಂದಿಗೆ ಪರೀಕ್ಷಿಸಿ ಹಾಕಬೇಕಾಗುವುದು. ಈ ಹಾಡುಗಳನ್ನು ಕಟ್ಟಿ (ರಚಿಸಿ) ಹಾಡುವ ಹಳ್ಳಿಗನಿಗೆ ಛಂದದ ಯಾವ ಅರಿವೂ ಇರುವುದಿಲ್ಲ. ಅವನಿಗೆ ಸಂಗೀತ ಜ್ಞಾನವೂ ಇರುವುದಿಲ್ಲ. 'ಲಟಕಿ'ಯೊಡನೆ, 'ಹುಸಿ ಪೆಟ್ಟು'ಗಳ ಗತ್ತು ಹಾಗೂ ತಾಳಗಳು ಮಾತ್ರ ಅವನಿಗೆ ತನ್ನತನದಲ್ಲಿ ಗೊತ್ತಿರುವುವು. ಈ ಹುಸಿ ಪೆಟ್ಟುಗಳನ್ನೇ ಲಾಕ್ಷಣಿಕರು ಅಂಶಗಣಗಳೆಂದು ಕರೆದಿದ್ದಾರೆ. ಹಳ್ಳಿಗರು ಹಾಡುವಾಗ ಹುಸಿ ಬಿದ್ದಲ್ಲಿ ತಾಳವಿಲ್ಲ. ಪೆಟ್ಟು ಬಿದ್ದಲ್ಲಿ ತಾಳ ಬಿದ್ದೆ ತೀರುವುದು. ಆ ತಾಳ ಬಿದ್ದಲ್ಲಿಯೇ ಒಂದು ಅಂಶಗಣವಾಗುವುದು.[೩೫] ಎಂಬ ಡಾ॥ ಗದ್ದಿಗಿಮಠ ಅಭಿಪ್ರಾಯವು ಗಮನಾರ್ಹವಾಗಿದೆ.

ಈ ಜನಪದ ಛಂದಸ್ಸಿನ ಹಿನ್ನೆಲೆಯಲ್ಲಿ ಬುಲಾಯಿ ಹಾಡುಗಳನ್ನು ಹಾಗೂ ಅವುಗಳ ಛಂದಸ್ಸುಗಳ ಕುರಿತು ಚರ್ಚಿಸಬಹುದು. ಈಗಾಗಲೇ ಬುಲಾಯಿ ಹಾಡುಗಳ ದ್ವಿಪದಿಯಲ್ಲಿರುತ್ತವೆ. ದ್ವಿಪದಿ ಎಂದರೆ ಎರಡು ಪಾದಗಳುಳ್ಳ ಪದ್ಯಗಳು [೩೬] ಎಂದಿಟ್ಟುಕೊಂಡರೂ ಛಂದಸ್ಸನ್ನು ಕುರಿತು ಹೇಳಬೇಕಾದರೆ ಇದು **ಏಳೆ** ಎಂಬ ಅಂಶಗಣ ಛಂದಸ್ಸಿಗೆ ಹೋಲುವಂತೆ ಕಂಡು ಬರುತ್ತದೆ. **ಏಳೆ ಎಂದರೆ ಎರಡು ಸಾಲಿನ ಛಂಧೋರೂಪ.** ಅಂಶ ಛಂದಸ್ಸು ಮೂಲತ: ದ್ರಾವಿಡ ಛಂದಸ್ಸಾದ ಅಂಶ ಗಣಾನಿತ್ವ ರಚನೆಯಾದ ತಮಿಳಿನ ಕರಳ್ ಹಾಗೂ 'ವೆಣ್ಬಾ'ಗಳನ್ನು ಹೋಲುವ ಪುಟ್ಟ ಪದ್ಯವೊಂದನ್ನು ಏಳೆ ಎಂಬ ಹೆಸರಿನಿಂದ ನಾಗವರ್ಮ ತನ್ನ ಛಂದೋಂಬುಧಿಯಲ್ಲಿ ಪ್ರಸ್ತಾಪಿಸಿದ್ದಾನೆ. ಬಹುಶಃ ಏಳೆಯೇ ತ್ರಿಪದಿ, ಅಂಶ, ಷಟ್ಪದಿ, ಅಕ್ಕರ,

ಸಾಂಗತ್ಯ ಮುಂತಾದ ರಚನೆಗಳಿಗೆಲ್ಲಾ ಮೂಲವೆಂದು ಕಾಣುತ್ತದೆ. ತನ್ನ ಛಂಧೋಂಬುದಿಯಲ್ಲಿ ನಾಗವರ್ಮ ಇದರ ಲಕ್ಷಣವನ್ನು ಹೇಳಿದ ನಂತರ ಜಯಕೀರ್ತಿ (೧೦೫೦) ಛಂದೋನುಶಾಸನವೆಂಬ ಸಂಸ್ಕೃತ ಛಂಧೋ ಗ್ರಂಥದಲ್ಲಿಯೂ, ಶಾರ್ಙ್ಗ ದೇವನ (೧೨೫೦) ಸಂಗೀತ ರತ್ನಾಕರದಲ್ಲಿಯೂ ಏಳೆಯು ಕಂಡು ಬರುತ್ತದೆ. ಇದರ ಲಕ್ಷಣವನ್ನು ಛಂದೋಂಬುದಿಯಲ್ಲಿ ನಾಗವರ್ಮ ಹೀಗೆ ಹೇಳಿದ್ದಾನೆ.

ಭುಜ ಪಕ್ಷ ಪ್ರರಗಣ ವ್ರಜದೊಳಾರರೊಳಕ್ಕು

ಮಜಗಣ / ಮೇಳೆಗಿ ಭಗತೀ

ವಿ+ವಿ+ವಿ+ವಿ

ವಿ+ಬ್ರ+ವಿ.

ಕ್ರಮವಾಗಿ ೨.೨ ಮತ್ತು ೩ ಗಣಗಳ ಗುಂಪಿನಲ್ಲಿ ಒನೆಯದು ಬ್ರಹ್ಮವಾಗಿರುವುದು, ಏಳೆಯ ಲಕ್ಷಣ ಎಂಬುದು ಈ ಪದ್ಯದ ಆಶಯ.

ಕನ್ನಡವು ಒಂದು ದ್ರಾವಿಡ್ ಭಾಷೆ ಈ ಭಾಷೆಗೆ ಮೂರು ನಾಲ್ಕು ಮತ್ತು ಐದು ಮಾತ್ರೆಯ ಲಯಗಳು ಬಹಳ ಸಹಜವಾದುವು. ಆದ್ದರಿಂದಲೇ ಬಹುಪಾಲು ಕನ್ನಡ ಕವಿತೆಯು ಈ ಲಯಗಳನ್ನು ಅವುಗಳ ಜೋಡಣೆಗಳನ್ನು ಬಳಸುತ್ತದೆಂಬುದು ವಿದ್ವಾಂಸರ ಅಭಿಪ್ರಾಯ. ಈ ಹಿನ್ನೆಲೆಯಲ್ಲಿ ಬುಲಾಯಿ ಹಾಡುಗಳ ಕುರಿತು ನೋಡುವಾ.

ಉದಾ : ಗಿರಿಯರ ರಾಜದೊರ ಕರಿಯಲ ಬಂದಾರ

ಕಿಡಿಗೇಡಿ ! ಅಪ್ಪ ! ಖಳವಲ್ಲ ! ಕೋಲ್ಲೊ ಕೋಲೆ [೮]

ಬುಲಾಯಿ ಹಾಡಿನ ಈ ಎರಡು ಚರಣಗಳಲ್ಲಿ

ವಿ+ವಿ+ವಿ+ವಿ

ವಿ+ಬ್ರ+ವಿ

ಗಣಗಳು ಬರುವುದರಿಂದ ಬುಲಾಯಿ ಹಾಡುಗಳು ಏಳೆ ಲಕ್ಷಣಗಳನ್ನು ಹೊಂದಿದ್ದು ಆ ಛಂದಸ್ಸಿಗೆ ಸೇರುತ್ತವೆ ಎಂದು ಹೇಳಬಹುದು. ಆದರೆ ಪ್ರತಿಯೊಂದು ಹಾಡಿನ ಚರಣಗಳಲ್ಲಿ ಇದೇ ರೀತಿಯ ಮಾತ್ರೆಗಳು ಕಾಣಸಿಗುವುದಿಲ್ಲ. ಏಕೆಂದರೆ ಡಾ॥ ಗದ್ದಗಿಮಠರು ಹೇಳಿದಂತೆ ಛಂದದಲ್ಲಿ ಮಾತ್ರೆಗಳನ್ನು ಹಿಗ್ಗಿಸುವ ಕುಗ್ಗಿಸುವ ಯೋಜನೆಯಿಂದ ಲಘು ಗುರುವಿನ ಪ್ರಶ್ನೆಯು ಹೋಗಬಹುದು ಆದರೆ ಇಲ್ಲಿ ಗಮನಿಸಬೇಕಾಗಿರುವುದು ಲಯ ಮತ್ತು ತಾಳ ಎನ್ನುವುದನ್ನು ಒಪ್ಪಿಕೊಳ್ಳಲೇಬೇಕು.

ಇಂತಹ ಹಾಡುಗಳನ್ನು ಅನ್ನುವುದರ ಮೇಲಿಂದಲೇ ಅವುಗಳ ಛಂದವನ್ನರಿಯಬೇಕು. ಅವುಗಳಿಗೆ ಮಾತ್ರಾಗಣಗಳ ಪರಿಮಿತಿಯನ್ನು ಉಪಯೋಗಿಸಿದರೆ ಅವುಗಳಲ್ಲಿಯ ತಾಳಲಯಗಳು ಮಾಯವಾಗಿ ಹಾಡೇ ಅಪಸ್ವರವಾಗಬಹುದು.

ನೆಲಕ್ಕೆ ಬಿ/ದ್ದ ರಾವ/ಣ ಎನಂತ/ಅನುತಾನೆ

ಐದಿನ/ಸೀತಾಗ/ಒಯುವನು/ಕೋಲ [೪೩]

"ಎಲ್ಲಾ ಕಡೆ ಇದೇ ಲಕ್ಷಣ ಇರಬೇಕೆಂದೇನಿಲ್ಲ. ಕೆಲವೊಮ್ಮೆ ಅಪವಾದಗಳಿವೆ ಎಂಬ ರಾಜಪ್ಪ ದಾಳವಾಯಿಯವರ ಅಭಿಪ್ರಾಯವನ್ನು ಇಲ್ಲಿ ಮರೆಯಲಾಗದು."[೪೪]

ಒಟ್ಟಾರೆ ಬುಲಾಯಿ ಹಾಡುಗಳು ಏಳೆ ಛಂದಸ್ಸಿಗೆ ಸೇರಿದ ದ್ವಿಪದಿಗಳೆಂದು ಹೇಳಬಹುದು. ಆದಿ ಪ್ರಾಸಕ್ಕಿಂತ ಅಂತ್ಯಪ್ರಾಸಗಳೇ ಹೆಚ್ಚಾಗಿ ಕಂಡು ಬರುತ್ತವೆ. ಅಲ್ಲಲ್ಲಿ ಛೇಕಾನುಪ್ರಾಸಗಳೂ ಬರುವುದುಂಟು.

ಉದಾ :

ಆದಿಪ್ರಾಸಕ್ಕೆ :

ನನ್ನ ಹೆಸರು ತಾರಾಮತಿ ನನ ಪುರುಷ ಹರಿಶ್ಚಂದ್ರ

ನನ್ನ ಪುತ್ರ ಲೋಹಿತ ಕೋಲೆಣ್ಣಾ ಕೋಲೆ.

ಅಂತ್ಯ ಪ್ರಾಸಕ್ಕೆ:

ಸತ್ಯವಂತರ ಕತಿ ಕೇಳರೀಗ ಇಟ್ಟು ಪ್ರೀತಿ,

ಹರಿಚಂದರ ರಾಜ ಏಕೋರತಿ ಕೋತ್ಲೂ ಕೋಲೆ,

ಛೇಕಾನು ಪ್ರಾಸಕ್ಕೆ :

ಹೊಡಕೋತ ಬಡಕೋತ ಅತಕೋತ ಕರಕೋತ

ಹುಡಕಿ ತೆಗೆದಾಳ ತನ್ನ ಮಗನ ಕೋ ಕೋ.[೪೫]

ವಿಶಿಷ್ಟ ಛಂದಸ್ಸಿನ ಪ್ರಕಾರವಾದ ಬುಲಾಯಿ ಹಾಡುಗಳು ಅಭಿವ್ಯಕ್ತಿ ಸ್ವಾತಂತ್ರ್ಯದ ಪ್ರತೀಕದಂತೆ ಕಂಡು ಬರುತ್ತವೆ. ಈ ಹಾಡು ನಿರ್ದಿಷ್ಟವಾಗಿ ಪ್ರಾರಂಭಗೊಂಡರೆ ನಿರ್ದಿಷ್ಟವಾಗಿ ಮುಕ್ತಾಯಗೊಳ್ಳುತ್ತವೆ, ಇಲ್ಲಿಗೆ ಹರಹರ ಇಲ್ಲಿಗೆ ಶಿವ ಶಿವ ಅಥವಾ ಮುತ್ತೈದಿತನ, ಸಂತಾನ ಜಯವಿರಲೆಂದು, ಇಲ್ಲಿಗೆ ಸರೀತ ಅವರ ಕಥಿ ಕೋಲೆ ಎಂದು ಅಥವಾ 'ಕಟ್ಟಿದ ಕವಿಗಾರ' ಊರ ಹೆಸರಿನೊಂದಿಗೆ ಮುಗಿಸುವುದು ಕಂಡು ಬರುತ್ತದೆ.

ಈ ಹಾಡುಗಳಲ್ಲಿ ತ್ಯಾಗ, ನಿಸ್ವಾರ್ಥ, ನಿಷ್ಠೆ, ಚಾರಿತ್ರ್ಯ, ಸಹಬಾಳ್ವೆ, ಸಾಮಾಜಿಕ ಮೌಲ್ಯಗಳು, ಧಾರ್ಮಿಕ ರಾಜಕೀಯ, ಐತಿಹಾಸಿಕ ಘಟನೆಗಳು, ಮುಂತಾದ ವಿಷಯ ವಸ್ತುಗಳನ್ನು ಕಾಣಬಹುದು ಬೀದರ ಜಿಲ್ಲೆಯ ಕನ್ನಡ ಭಾಷೆಯು ಬುಲಾಯಿ ಹಾಡುಗಳ ಲಕ್ಷಣಗಳಲ್ಲಿ ವಿಶಿಷ್ಟವೆನ್ನಬಹುದು.

'ಬೀದರ ಜಿಲ್ಲೆಯ ಜನಪದ ಗೀತೆಗಳ ಸಂಗ್ರಹ'ದ ಭುಲಾಯಿ ಹಾಡಿನಲ್ಲಿ 'ಹೊಯಿಂದಲ್ಲ್ಯೆಕ್ಕಾ'[೪೬] ಎಂಬ ಪದದ ಸೊಲ್ಲಿ ನೊಂದಿಗಿರುವ ಹಾಡನ್ನು ಕ್ಯಾತನಹಳ್ಳಿ

ರಾಮಣ್ಣನವರು ಪ್ರಕಟಿಸಿರುತ್ತಾರೆ. ಕ್ಷೇತ್ರ ಕಾರ್ಯದಲ್ಲಿ ಈ ಹಾಡನ್ನು ಕುರಿತು ವಿಚಾರಿಸಿದಾಗ ವಕ್ತಾರು ಕೊಟ್ಟ ವಿವರಣೆ ಹೀಗಿದೆ. ಮೈನೆರದ ಸಮಯದಲ್ಲಿ ಸೋಬಾನೆ ಪದಗಳನ್ನು ಹಾಡುತ್ತಿದ್ದರು. ಸುಮಾರು ಹೊತ್ತಿನವರೆಗೆ ಸೋಬಾನೆ ಪದಗಳನ್ನು ಹಾಡಿ, ಅಲ್ಲಿ ಹಾಸ್ಯದ ವಾತಾವರಣ ಮೂಡಿಸಲು ಬಹುಶಃ ನಿದ್ದೆ ಹೋಗಲಾಡಿಸಲು ? ಈ ಹಾಡನ್ನು ಹೆಸರುಗಳನ್ನು ಸೇರಿಸಿ ಹಾಡುತ್ತಿದ್ದರು. ಇದಲ್ಲದೆ ಸೊಲ್ಲು, ಧಾಟಿ ಬದಲಾಯಿಸಿ ಹಾಡು ಸಂದರ್ಭಕ್ಕನುಗುಣವಾಗಿಯೂ ಹಾಡುತ್ತಿದ್ದರು. ಈಗ ಈ ಎಲ್ಲಾ ಹಾಡುಗಳೂ ಮರೆಯಾಗುತ್ತಿವೆ.[೪೭] ಎಂದು ಹೇಳಿದರು, ಅಂದರೆ ಕ್ಯಾತನಹಳ್ಳಿ ರಾಮಣ್ಣನವರು ಚಿಲ್ಲರಗಿಗೆ ಹೋದಾಗ ಈ ಹಾಸ್ಯ ಪ್ರಸಂಗದ ಹಾಡನ್ನು ಭುಲಾಯಿ ಹಾಡು ಎಂದು ಹೆಣ್ಣುಮಕ್ಕಳು ಹಾಡಿರಬಹುದೆಂದು ಊಹಿಸಬಹುದು. ಏಕೆಂದರೆ ಶೀಗಿ-ಗೌರಿ, ಸೋಬಾನೆ ಹಾಡುಗಳನ್ನು ಬುಲಾಯಿಯ ಹಾಡುಗಳಂತೆ ಹಾಡುತ್ತಿರುವುದನ್ನು ಅಲ್ಲಗಳೆಯಲಾಗದು.

ಉದಾ : ಊರ ಮುಂದಿನ ಹುತ್ತಾ
ಕುಡುಗೋಲ ಹಚ್ಚಿ ಕೆತ್ತಾ
ನಮ್ಮ ಗೌರಮ್ಮ ಇಟ್ಟಾಳ ನತ್ತಾ ಕೋಲೆ ಮುತ್ತಿನ ಕೋಲ
ನೆಲು ಮ್ಯಾಲಿನ ಮಸರಾ
ಕೆಳಗ ಬಿದ್ದರ ಕೆಸರಾ
ನಮ್ಮ ಗೌರಮ್ಮ ಹಳಾ ಬಸರಾ ಕೋಲ ಮುತ್ತಿನ ಕೋಲ.[೪೮]

ಬುಲಾಯಿ ಹಾಡುಗಳ ಹುಟ್ಟು:

ಬುಲಾಯಿ ಹಾಡುಗಳು ಹುಟ್ಟಿಕೊಂಡಿದ್ದ್ಯಾವಾಗ ? ಇವುಗಳನ್ನು ರಚಿಸಿದವರು ಯಾರು? ಎಂದು ಕೇಳಿದರೆ ಸಾಮಾನ್ಯವಾಗಿ ಹೆಣ್ಣುಮಕ್ಕಳು (ವಯಸ್ಸಾದ ಹಣ್ಣು ಮುದುಕಿಯರು) ನಂಗೊತ್ತಿಲ್ಲ. ಹಿಂದಿನಿಂದ ನಮ್ಮ ಹಿರಿಯರು, ಆಯಿ, ಅವ್ವ ಅತ್ತಿ, ಮುಂತಾದವರು ಹಾಡುವುದನ್ನು ಕೇಳಿ, ಹಾಡಿ ಕಲಿತದ್ದು, ಎಂದು ಹೇಳುತ್ತಾರೆ. ಮತ್ತೆ ಕೆಲವರು ಈ ಭೂಮಿ ಹುಟ್ಟಿದ್ದಾಗಿನಿಂದ ಭುಲಾಯಿ ಹುಟ್ಟಿರಬಹುದು ಇದೇನು ಇವತ್ತಿಂದಾ? ಎಂದು ಮರು ಪ್ರಶ್ನಿಸಿತ್ತಾರೆ.

ಛಂದಸ್ಸನ್ನು ಕುರಿತು ಚರ್ಚಿಸುವಾಗ ಈ ಹಾಡುಗಳು ಏಳೆ ಛಂದಸ್ಸಿಗೆ ಸೇರಿದ್ದು, ನಾಗವರ್ಮನ ಛಂಧೋಂಬುಧ್ಧಿಯಲ್ಲಿ ಇದರ ಲಕ್ಷಣ ಹೇಳಿದ್ದು, ಮುಂದೆ ಬಂದವರು ಅನುಸರಿಸಿದ್ದರ ಉಲ್ಲೇಖ ಮಾಡಲಾಗಿದೆ. ಅದರಂತೆ ನಾಗವರ್ಮನ ಕಾಲ ಕ್ರಿ.ಶ. ೯೯೦ ಅಂದರೆ ಸುಮಾರು ಹತ್ತನೆಯ ಶತಮಾನವೆಂದಿಟ್ಟುಕೊಂಡರೆ, ಅವು ಸಮೃದ್ಧವಾಗಿ ಬೆಳೆದದ್ದು ೧೨-೧೩ನೆಯ ಶತಮಾನದಿಂಚೇಗೆಂದು ಊಹಿಸಬಹುದು. ಏಕೆಂದರೆ ಪೌರಾಣಿಕ, ಸಾಮಾಜಿಕ, ಐತಿಹಾಸಿಕ ವಿಷಯಗಳಂತೆ ಶರಣರ ಕುರಿತು ಹಾಡುವ ಬುಲಾಯಿ ಹಾಡುಗಳು ತುಂಬಾ ಪ್ರಸಿದ್ಧವಾಗಿವೆ. ಉದಾ : ಬಸವಣ್ಣ, ಅಕ್ಕನಾಗಮ್ಮ, ಚೆನ್ನಬಸವಣ್ಣ ಮಾದಾರ ಚೆನ್ನಯ್ಯಾ, ಸಿದ್ಧರಾಮ, ಚೆಂಗಳೆವ್ವಾ ಮುಂತಾದವು.

ಹೀಗೆ ಈ ಹಾಡುಗಳಲ್ಲಿ ಪೌರಾಣಿಕ, ಐತಿಹಾಸಿಕ ವಿಷಯಗಳ ಜೊತಗೆ ಮಹಾನುಭಾವರಾದ ಶರಣರನ್ನು ಸ್ಮರಿಸಿ ಈ ಹಾಡುಗಳನ್ನು ಹಾಡಿ ಹರುಷಪಟ್ಟಿರುವುದರಿಂದ ಈ ರೀತಿ ಊಹಿಸಬಹುದಷ್ಟೆ.

ಓದಿ ಬರದ್ದೆಣ್ಣಲ್ಲ ಕಾಗದ್ಹಿಡದಕಿನಲ್ಲ,
ಕವಿಕಟ್ಟಿ ನಾನೇ ಹಾಡಿದೇನು ರಾಮಣ್ಣ [೪೯]

ಎನ್ನುವಂತೆ ಬುಲಾಯಿ ಹಾಡುಗಳೂ ಹೆಚ್ಚಾಗಿ ಹೆಣ್ಣುಮಕ್ಕಳ ಬಾಯಲ್ಲಿಯೇ ಹುಟ್ಟಿರಬಹುದು. ಹೆಣ್ಣಿನ ಬದುಕಿನ ನೋವು-ನಲಿವು ಆಸೆ- ನಿರಾಶೆ, ತ್ಯಾಗ, ಬಲಿದಾನ ಮುಂತಾದವುಗಳನ್ನು ಹೆಣ್ಣೇ ಅಭಿವ್ಯಕ್ತಿಸಲು ಸಾಧ್ಯ.

ಉದಾ : ಗರತಿಯ ಹಾಡು, ಮಲ್ಲಿಗೆಯ ದಂಡೆ ಇತ್ಯಾದಿ,

ಇನ್ನು ಆಧ್ಯಾತ್ಮ, ಚರಿತ್ರೆ, ಶೌರ್ಯ ಇತ್ಯಾದಿಗಳನ್ನು ಪ್ರತಿಬಿಂಬಿಸುವ ಕೆಲವೊಂದು ಹಾಡಗಳಿದ್ದು, ಅವು ಪುರುಷ ರಚನೆಯಾಗಿರುವುದು ಕಂಡು ಬರುತ್ತದೆ.

ಉದಾ:- ರಜಾಕಾರರ ಹಾಡು, ನಿಜಾಮನ ದಬ್ಬಾಳಿಕೆ.[೫೦]

ಇಲ್ಲೆಲ್ಲಾ ಒಂದು ಸಂಸ್ಕೃತಿಯ ವಿವೇಚನೆಯಿರುವುದನ್ನು ಅರಿಯಬಹುದಾಗಿದೆ. ಹೀಗಾಗಿ **ಭುಲಾಯಿ** ಒಂದು ಸಂಸ್ಕೃತಿ ಎಂಬುದನ್ನು ಈಗ ಅರಿಯಬಹುದಾಗಿದೆ.

ಸಂಸ್ಕೃತಿ :

ಸಂಸ್ಕೃತಿ ಎಂಬ ಶಬ್ದ ಈಚೆಗೆ ಬಹುಮುಖವಾದ ಅರ್ಥವನ್ನು ಪಡೆಯುತ್ತಾ ಬೆಳೆದು ಬಂದಿದೆ. ಮಾನವ ಸಮುದಾಯದ ಸಂಪ್ರದಾಯಗಳಿಂದ ಹಿಡಿದು ವೈಯಕ್ತಿಕವಾದ ಆಚರಣೆಗಳವರೆಗೂ ಅದರ ವ್ಯಾಪ್ತಿ ಹಬ್ಬಿದ್ದು ಕಂಡು ಬರುತ್ತದೆ. ಸಂಸ್ಕೃತಿಯು ಮಾನವನ ಜೀವನ ವಿಧಾನದ ಪ್ರತೀಕವೆನ್ನಬಹುದು. ಅದು ಮಾನವನು ಈವರೆಗಿನ ತನ್ನ ಜೀವನದಲ್ಲಿ ರೂಢಿಸಿಕೊಂಡ ಸ್ವಯಂ ನಿರ್ಮಿತ ವ್ಯವಸ್ಥೆಗಳನ್ನು ಒಳಗೊಂಡಿರುತ್ತದೆ. ಅವನ ಸಮಸ್ತ ಸಾಧನೆಗಳನ್ನು ಸಂಪೂರ್ಣ ಸಾಮಾಜಿಕ ಬಳುವಳಿಗಳನ್ನು ಪ್ರತಿಬಿಂಬಿಸುತ್ತದೆ. ಅದು ನಿರ್ದಿಷ್ಟ ಸಮಾಜದ ಜನರ ಸಾಮಾನ್ಯ ವರ್ತನೆಯ ಚಿತ್ರಣವನ್ನು ಸೂಚಿಸುತ್ತದೆ. ಒಂದು ಸಮಾಜದ ಜನರ ವರ್ತನೆಗಳು ಮತ್ತೊಂದು ಸಮಾಜದಿಂದ ಬೇರೆಯಾಗಿರಬಹುದು. ಅಂತೆಯೇ ವಿಭಿನ್ನವಾದ ಸಂಸ್ಕೃತಿಗಳನ್ನು ಜಗತ್ತಿನಲ್ಲಿ ಕಾಣಬಹುದಾಗಿದೆ. ಬೇರೆ ಬೇರೆ ಸಂಸ್ಕೃತಿಯ ಜನರ ವರ್ತನಾ ಪ್ರಕಾರಗಳು ಬದಲಾದರೂ ಅವುಗಳೆಲ್ಲವೂ ಮಾನವ ಸಹಜವಾದ ಗುಣಗಳಿಂದ ತುಂಬಿರುತ್ತವೆ. ಮಾನವನಿಗೆ ಮಾತ್ರ ಇಂಥ ಸಂಸ್ಕೃತಿ ಇರುವುದು ಕಂಡು ಬರುತ್ತದೆ. ಮಾನವ ಜನಾಂಗವು ತನ್ನ ಸಾಮಾಜಿಕ ಅನುಭವದ ಆಧಾರದ ಮೇಲೆ ನಿರ್ಮಿಸಿಕೊಂಡಿರುವ ಕಲಿತ ಅಂಶಗಳ ವ್ಯವಸ್ಥೆಯೇ ಸಂಸ್ಕೃತಿ ಎನಿಸಿಕೊಳ್ಳುವುದು. ಈ ಸಂಸ್ಕೃತಿಯು ಆ ಜನತೆಯ ನಡವಳಿಕೆಯಲ್ಲಿ ಅಭಿವ್ಯಕ್ತಗೊಳ್ಳುತ್ತದೆ.[೫೧] ಅಂದರೆ ಸಂಸ್ಕೃತಿಯು

ಪ್ರಕೃತಿ ನಿರ್ಮಿತವಲ್ಲ, ಅದು ಮಾನವ ನಿರ್ಮಿತವಾದದು. ಈ ಸಂಸ್ಕೃತಿಯಲ್ಲಿ ಭಾವನಾತ್ಮಕವಾದ ಅನುಭವ, ಆನಂದರೂಪಿಯಾಗಿ ಅಭಿವ್ಯಕ್ತಿಗೊಳ್ಳುತ್ತದೆ. ಮಾನವನ ಬಹುಮುಖವಾದ ಸ್ವಭಾವ ಮತ್ತು ಭಾವಗಳ ಸೂಕ್ಷ್ಮವಾದ ಮತ್ತು ಸುಂದರವಾದ ಚಿತ್ರವನ್ನು ಸಂಸ್ಕೃತಿಯ ಅಂಗಗಳಲ್ಲಿ ಕಾಣಬಹುದು. ಮಾನವನ ಅಂತರಂಗ ಜೀವನದ ಜೀವಂತ ಚಿತ್ರಣವೇ ಸಂಸ್ಕೃತಿ ಎನ್ನಬಹುದು. ಅದು ಸಂಗೀತ ಶಿಲ್ಪ, ಚಿತ್ರ, ನೃತ್ಯ, ಸಾಹಿತ್ಯ ಮತ್ತು ಧರ್ಮ ಮುಂತಾದ ಕವಲುಗಳಾಗಿ ಹರಿಯುತ್ತದೆ.

'ಸಂಸ್ಕೃತಿ' ಎಂಬ ಶಬ್ದದ ಅರ್ಥವು ಅತ್ಯಂತ ವಿಶಾಲವಾಗಿದೆ. ಇದು ಬಹುಮುಖವಾದ ಅರ್ಥವನ್ನು ಪಡೆದು ಬೆಳೆಯುತ್ತಾ ಬಂದಿದೆ. ಮಾನವ ಸಮುದಾಯದ ಸಂಪ್ರದಾಯ. ನಂಬಿಕೆಗಳಿಂದ ಹಿಡಿದು ವೈಯಕ್ತಿಕವಾದ ಆಚರಣೆಗಳವರೆಗೂ ಅದರ ವ್ಯಾಪ್ತಿ ಹಬ್ಬಿದೆ. ಮಾನವ ಜನಾಂಗಗಳ ಇತಿಹಾಸವನ್ನು ಬೆಳೆಸುವಾಗ ಬಳಸುವ ಇನ್ನೊಂದು ಪದ ನಾಗರಿಕತೆ ಎಂಬುದು ಆಂಗ್ಲಭಾಷೆಯಲ್ಲಿ ಅವುಗಳನ್ನು Culture (ಸಂಸ್ಕೃತಿ) ಮತ್ತು Civilization (ನಾಗರಿಕತೆ) ಎಂದು ಕರೆಯಲಾಗಿದೆ. ಸಂಸ್ಕೃತಿ ಎಂಬ ಶಬ್ದವನ್ನು ಇಂಗ್ಲೀಷಿನ Culture ಎಂಬುದಕ್ಕೆ ಸಂವಾದಿಯಾಗಿ ಉಪಯೋಗಿಸಲಾಗುತ್ತಿದೆ. ಈ ಮಾತು ನಮಗೆ ಹೊಸತು, ಆದರೆ ಇದರ ಹಿಂದಿರುವ ಅರ್ಥ ಹೊಸದಲ್ಲ. Culture ಎಂಬುದರ ಮೂಲಪದ Cult ಅಥವಾ Cultus ಎಂಬುದು ಗೌರವಿಸು, ಆರಾಧಿಸು, ಸೇವೆ ಮಾಡು ಮೊದಲಾದ ಅರ್ಥಗಳನ್ನು ಇದು ಕೊಡುತ್ತದೆ. ದೈವಭಕ್ತಿ ಎಂಬ ಅರ್ಥವನ್ನು ಒಂದು ಕಡೆ ಇದು ಪಡೆದರೆ ಇನ್ನೊಂದು ಕಡೆ ಭೂದೇವಿಯ ಆರಾಧನೆ, ಅಂದರೆ ಕೃಷಿ ಎಂಬ ಅರ್ಥವನ್ನು ಪಡೆಯಿತು. ಈ ಎರಡನೆಯ ಅರ್ಥದಿಂದಲೇ ಬಂದುದು Agriculture ಎಂಬ ಶಬ್ದ, Culture ಎಂಬುದು ಒಂದು ಬಗೆಯ ವ್ಯವಸಾಯವೇ, ಭೂಮಿಯನ್ನು ಉತ್ತುಬಿತ್ತಿ ನೀರುಗೊಬ್ಬರ ಹಾಕಿ ಹಸನು ಮಾಡುವಂತೆ, ಮನುಷ್ಯನಲ್ಲಿರುವ ವಿಶೇಷವಾದ ಶಕ್ತಿಗಳು ಮೊಳಕೆಯೊಡೆದು ಬೆಳೆಯುವುದಕ್ಕಾಗಿ ಮಡಬೇಕಾದ ಅಂತರಂಗದ ವ್ಯವಸಾಯ ಸಂಸ್ಕೃತಿ[31] ಎನ್ನಲಾಗಿದೆ.

ಪ್ರಕೃತಿಯ ಪರಿಷ್ಕೃತ ರೂಪವೇ ಸಂಸ್ಕೃತಿ. ಪ್ರಕೃತಿ ಶಿವಮಯವಾದರೆ, ಸಂಸ್ಕೃತಿ ವ್ಯಕ್ತಿಮಯ, ವ್ಯಕ್ತಿಯೋರ್ವ ಹುಟ್ಟಿರ್ದೊಡನೆ ತನ್ನೊಂದಿಗೆ ಬಂದ ಪಶುತ್ವವನ್ನು ಹೋಗಲಾಡಿಸಿ, ವ್ಯಕ್ತಿತ್ವವನ್ನು ಸಾಧಿಸುವುದೇ 'ಸಂಸ್ಕೃತಿ' ಎನಿಸುತ್ತದೆ.

'ಸಂಸ್ಕೃತಿ'ಯ ಮೂಲಭೂತ ಸಾಮಗ್ರಿ ಪೂರ್ಣತೆಯ ಪ್ರೇಮ ಮತ್ತು ಪೂರ್ಣತೆಯ ಅಧ್ಯಯನ. ಅಧ್ಯಯನವೆಂದರೆ ಅದು ಕೇವಲ ಬೌದ್ಧಿಕವಾದುದ್ದಲ್ಲ ವಿಜ್ಞಾನದ ಬಲದಿಂದ ಬುದ್ಧಿಯನ್ನು ಶ್ರೀಮಂತಗೊಳಿಸುವುದಷ್ಟೇ ಸಂಸ್ಕೃತಿಯಾಗಲಾರದು. ಅದು ಹೃದಯದ ಪರಿಪಕ್ವತೆಗೆ ಸಹಕಾರಿಯಾಗಬೇಕು. ಸುತ್ತಮುತ್ತಲಿನ ಜನರ ದುಃಖದಲ್ಲಿ ಭಾಗಿಯಾಗುವಂತಹ ಅನುಕಂಪೆಯನ್ನು ಉಕ್ಕಿಸಬೇಕು: ಅವರ ದುಃಖವನ್ನು ಹೋಗಲಾಡಿಸಲು ಹಂಬಲಿಸಬೇಕು. ಈ ಉದಾತ್ತ ಬಯಕೆಯೇ ಸಂಸ್ಕೃತಿ[32] ಎಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ.

"ಸಂಸ್ಕೃತಿಯು ಆದೇಶದ ಜನರ ಭಾಷೆ, ರೂಡಿ, ನಂಬಿಕೆ ಚಿತ್ರಕಲೆ, ಸಂಗೀತ, ಸಾಹಿತ್ಯ ಇತ್ಯಾದಿ ಎಲ್ಲವುಗಳನ್ನು ವಿವರಿಸಿ, ಆದೇಶದ ಮಹತಿಯನ್ನು ಸಾರುವ ಕೀರ್ತಿ ಧ್ವಜವಾಗಿದೆ"[೫೪] ಎಂಬುದು ಬೇಂದ್ರೆಯವರ ಅಭಿಪ್ರಾಯವಾಗಿದೆ. ಇದು ಸಮಗ್ರ ಜೀವನ ವಿಧಾನ, ಆಲೋಚನೆಗಳಿಗೆ ಸಂಬಂಧಿಸುವುದರಿಂದ ಗಮನಾರ್ಹವಾಗಿದೆ.

ಡಾ॥ ಎಂ.ಎಂ. ಕಲಬುರ್ಗಿಯವರ ಪ್ರಕಾರ "ಸಂಸ್ಕೃತಿ ಎನ್ನುವುದು ಸಮಾಜ ಸಮ್ಮತವಾದ ಜೀವನ ಪದ್ಧತಿಯಾಗಿದ್ದು, ಅದು ಒಬ್ಬ ವ್ಯಕ್ತಿಯಲ್ಲಿ ಕಂಡುಬರುವುದಕ್ಕಿಂತ ಹೆಚ್ಚು ಸಮಾಜ ಅಥವಾ ಗುಂಪಿನ ಜೀವನ ವಿಧಾನದಲ್ಲಿ ಕಂಡು ಬರುತ್ತದೆ. ಅಂದರೆ ಒಂದು ಜನಾಂಗದ ಅಥವಾ ಸಮಾಜದ ಸಮಸ್ತ ಅಭಿರುಚಿ, ಆಸಕ್ತಿಗಳನ್ನು ಆಚರಣೆ-ಕ್ರಿಯೆಗಳನ್ನು ಈ ಸಂಸ್ಕೃತಿ ಒಳಗೊಳ್ಳುತ್ತದೆ."[೫೫] ಇದೆನ್ನೆ Culure is not merely a jum of several activity but a way of life[೫೬] ಎಂದು ಟಿ.ಎಸ್. ಇಲಿಯಟ್ ವ್ಯಾಖ್ಯಾನಿಸಿದ್ದು ಸೂಕ್ತವೆನಿಸುತ್ತದೆ.

ಈ ಹಿನ್ನೆಲೆಯಲ್ಲಿಯೇ ಬುಲಾಯಿ ಹಾಡುಗಳಲ್ಲಿ ವ್ಯಕ್ತವಾದ ಅಂದಿನ ಜೀವನ ವಿಧಾನವನ್ನು ಅರಿತು ಹಲವಾರು ಅಂಶಗಳ ಹಿನ್ನೆಲೆಯಲ್ಲಿ ಬುಲಾಯಿ ಒಂದು ಸಂಸ್ಕೃತಿ ಎಂದು ಗುರುತಿಸಿಬಹುದಾಗಿದೆ.

ಭುಲಾಯಿ ಹಾಕುವುದು :

ಬುಲಾಯಿ ಹಾಡುಗಳನ್ನು ಹಾಡುತ್ತಾ ಹೆಣ್ಣು ಮಕ್ಕಳು ಒಂದು ನಿರ್ದಿಷ್ಟ ಸ್ಥಳದಲ್ಲಿ ಸೇರಿ ವರ್ತುಲಾಕಾರದಲ್ಲಿ ಕೈ ಕೈಹಿಡಿದು ಸುತ್ತುತ್ತಿರುವುದೇ **ಭುಲಾಯಿ ಹಾಕುವುದು.** ಹೆಣ್ಣು ಮಕ್ಕಳು ನಾಗರ ಪಂಚಮಿ ಹಾಗೂ ಶಿರೋಳ ಶೆಟ್ಟಿಯ ದಿನ ಸಾಯಂಕಾಲದಿಂದ ರಾತ್ರಿಯವರೆಗೂ ಹಾಕುತ್ತಾರೆ. ಆಗ ಸಾಮಾನ್ಯವಾಗಿ ಎಲ್ಲರೂ ಹೊಸ ಸೀರೆ, ಹೊಸ ಬಳೆಗಳನ್ನು ಧರಿಸುತ್ತಾರೆ. ಮನೆಯಲ್ಲಿ ಗಂಡನ ಮನೆಯಿಂದ ಬಂದ ಹೆಣ್ಣುಮಕ್ಕಳು ಹಬ್ಬದ ಅಡುಗೆ, ಪೂಜೆ, ಊಟ ಎಲ್ಲವೂ ಸಾಂಗವಾಗಿ ಮುಗಿದ ಮೇಲೆಯೇ 'ಭುಲಾಯಿ ಹಾಕಲು' ಪ್ರಾರಂಭಿಸುವರು. ಹಳ್ಳಿಗಳಲ್ಲಿ ಊರ ಗೌಡರು, ಮಹಾಜನರು, ಶೆಟಗಾರರು ಮುಂತಾದ ಪ್ರತಿಷ್ಠಿತರ ಮನೆಗಳಲ್ಲಿ ಅಥವಾ ಮನೆಯ ಮುಂದೆ ಇಲ್ಲದಿದ್ದರೆ ಊರಿನ ದೇವರ ಗುಡಿಯಲ್ಲಿ ಅಥವಾ ಓಣಿಯ (ಚಾವಡಿಯ) ವಿಶಾಲವಾದ ಸ್ಥಳದಲ್ಲಿಯೇ ಹಾಕುತ್ತಾರೆ. 'ಭುಲಾಯಿ ಹಾಕಲು' ಇಂತಿಷ್ಟೇ ಹೆಣ್ಣು ಮಕ್ಕಳಿರಬೇಕೆಂಬ ನಿಯಮವಿದ್ದಂತೆ ಕಂಡುಬರದು. ಸುಮಾರು ೧೦ ರಿಂದ ೧೫-೨೦ ಹೆಣ್ಣುಮಕ್ಕಳಾದರೂ ಸಾಕು, ಬುಲಾಯಿ ಹಾಡುಗಳನ್ನು ಹಾಡುವವರಿದ್ದರೆ ಭುಲಾಯಿ ಹಾಕಲು ಪ್ರಾರಂಭಿಸುವರು. ಹೆಚ್ಚಾಗಿ ಮೊದಲು ದೇವರ ಹಾಡುಗಳನ್ನು ಹಾಡುವುದರಿಂದಲೇ ಪ್ರಾರಂಭಿಸುವುದು ಕಂಡು ಬರುತ್ತದೆ. ಹೀಗೆ 'ಭುಲಾಯಿ ಹಾಕಲು' ಶುರುಮಾಡಿದ ಮೇಲೆ ನಂತರ ಬಂದವರೂ ಸಹ ಭುಲಾಯಿಯ ಸುತ್ತಿನಲ್ಲಿ ಸೇರಿಕೊಳ್ಳುತ್ತಾರೆ. ಹೀಗಾಗಿ ಮೊದಲು ಚಿಕ್ಕದಾಗಿರುವ ವೃತ್ತಾಕಾರವು ಹೆಣ್ಣು ಮಕ್ಕಳು ಹೆಚ್ಚಾದಂತೆ ವಿಸ್ತರಿಸುತ್ತಾ ಹೋಗುವುದು ಕಂಡು ಬರುತ್ತದೆ. ಸಣ್ಣ ಮಕ್ಕಳಿಗೆ ಭುಲಾಯಿಯ ನಡುವೆ ನಿಲ್ಲಿಸುತ್ತಾರೆ. ಅಥವಾ ಮಕ್ಕಳ

ಸಂಖ್ಯೆ ಹೆಚ್ಚಾದರೆ ಅವರದೊಂದು ಸುತ್ತು ಹಾಕುವ ವೃತ್ತಾಕಾರವನ್ನು ಒಳಗೆ ಮಾಡಿಸುತ್ತಾರೆ. ಒಟ್ಟಾರೆ ಕೈ ಕೈ ಹಿಡಿದು ಸುತ್ತುತ್ತಾ ಮುಮ್ಮೇಳ ಹಿಮ್ಮೇಳದಲ್ಲಿ ಹಾಡುವುದನ್ನು 'ಭುಲಾಯಿ ಹಾಕುವುದು' ಎಂದು ಹೇಳುವುದು ಕಂಡು ಬರುತ್ತದೆ. ಹೀಗೆ ಕನಿಷ್ಠ ಅಂದು ಮುತ್ತೈದೆಯರು ಎರಡು ಸುತ್ತಾದರೂ ಸುತ್ತು ಹಾಕಬೇಕೆಂಬ ಪದ್ಧತಿ ಬೆಳೆಸಿಕೊಂಡು ಬಂದಿರುವುದು ಗಮನಾರ್ಹವಾಗಿದೆ ಹೀಗಾಗಿ 'ಭುಲಾಯಿ ಹಾಕಿ' ತಮಗೆ ಸಾಕಾದರೆ ಮನೆಗೆ ಹೋಗಬೇಕೆಂದವರು 'ಭುಲಾಯಿ' ಬಿಟ್ಟು ಹೋಗುವ ಪದ್ಧತಿಯೂ ಕಂಡು ಬರುತ್ತದೆ.

'ಭುಲಾಯಿ ಹಾಕಲು' ಪ್ರಾರಂಭವಾದರೆ ಅದರಲ್ಲಿ ಸೇಲಿಕೊಳ್ಳುವವರು ಸೇರುತ್ತಾ, ಹೋಗಬೇಕಾದವರ ಬಿಟ್ಟು ಹೋಗುತ್ತಾರೆ. ಆದರೆ 'ಭುಲಾಯಿ ಹಾಕು'ವುದು ನಡದೇ ಇರುತ್ತದೆ. ಭುಲಾಯಿ ಬಿಟ್ಟು ಹೋಗುವವರಿಗೆ (ಅಳ್ಳು) ಜೋಳದಳ್ಳು, ಚಹಾ ಕೊಟ್ಟು ಕಳುಹಿಸುತ್ತಾರೆ. ಹೀಗೆ ಸಾಯಂಕಾಲದಿಂದ ರಾತ್ರಿಯವರೆಗೂ 'ಭುಲಾಯಿ ಹಾಕು'ತ್ತಾರೆ. ಬಣ್ಣ ಬಣ್ಣದ ಗರಿಗರಿಯ ಸೀರೆಗಳನ್ನುಟ್ಟು, ಕೈತುಂಬ ಹೊಸ ಬಳೆಗಳನ್ನು ತೊಟ್ಟು, ಮೈ ಮೇಲೆ ಒಡವೆಗಳನ್ನು ಧರಿಸಿ (ಇದ್ದವರು), ಉತ್ಸಾಹದಿಂದ ಬಂದ ಹೆಣ್ಣಮಕ್ಕಳು ಒಬ್ಬರ ಕೈ ಒಬ್ಬರು ಹಿಡಿದುಕೊಂಡು ವರ್ತುಲಾಕಾರದಲ್ಲಿ ಸುತ್ತುತ್ತಾರೆ. ಹಾಡುವವರು ಭುಲಾಯಿ ಹಾಕುತ್ತಿದ್ದರೆ ಹಾಡುವಾಗ ಇಬ್ಬರೂ ತಲೆಗೆ ತಲೆ ಹಚ್ಚಿ ಕೈಯಿಂದ, ವಿಶಿಷ್ಟ ರೀತಿಯಲ್ಲಿ ಜೀಕುತ್ತಾ ಹಾಡುತ್ತಾರೆ. ನಂತರ ಅದೇ ನುಡಿ ಅಥವಾ ಎರಡನೆ ಸಾಲನ್ನು ಹಿಮ್ಮೇಳದಲ್ಲಿ ಭುಲಾಯಿ ಹಾಕುವ ಹೆಣ್ಣು ಮಕ್ಕಳೆಲ್ಲಾ ಸುತ್ತುತ್ತಲೇ ಹಾಡುತ್ತಾರೆ. ಕೈಲಾಗದವರಿದ್ದರೆ ಕುಳಿತಲ್ಲೆ ಹಾಡುತ್ತಾರೆ. 'ಭುಲಾಯಿ ಹಾಕು'ವವರು ಸುತ್ತುತ್ತಲೇ ಹಿಂದೆ ಹಾಡುತ್ತಾರೆ. ಇದರಲ್ಲಿ ಮದುವೆಯಾದವರು, ಆಗದವರು, ಗಂಡುಳ್ಳವರು, ಇಲ್ಲದವರೆಲ್ಲರೂ ಜಾತಿ-ಭೇದ ವರ್ಗಬೇಧಗಳಿಲ್ಲದೆ ಭಾಗವಹಿಸುವುದು ವಿಶಿಷ್ಟವೆನಿಸುತ್ತದೆ, ಎರಡು ಸುತ್ತಾದರೂ ಹಾಕಲೇಬೇಕೆಂದ ನೇಮ, ನಂಬಿಕೆಗಳಿದ್ದ ಕಾರಣ ಪ್ರತಿಯೊಬ್ಬರೂ ಇದರಲ್ಲಿ ಪಾಲ್ಗೊಳ್ಳುವಂತೆ ಕಂಡುಬರುತ್ತದೆ. ಹೀಗಾಗಿ ಸಾಮರಸ್ಯ, ಸಹಬಾಳ್ವೆಯ ಪ್ರತೀಕವಾಗಿರುವುದೇ 'ಭುಲಾಯಿಯ' ವೈಶಿಷ್ಟ್ಯವೆನ್ನಬಹುದು. ಆದರೆ ಬ್ರಾಹ್ಮಣ ಹೆಣ್ಣುಮಕ್ಕಳು ಇದರಲ್ಲಿ ಭಾಗವಹಿಸದೆ ಇರುವುದು, ಗಮನಾರ್ಹವಾಗಿದೆ.

ಹೆಣ್ಣುಮಕ್ಕಳೇ ಹಾಡುವುದು, 'ಭುಲಾಯಿ ಹಾಕು'ವುದು ನೋಡಬಹುದು, ಓದಿ ತಿಳಿಯಬಹುದು. ಆದರೆ ಡಾ॥ ಕಾಶಿನಾಥ ಅಂಬಲಗೆ ಅವರು "ಈ ಭಾಗದಲ್ಲಿ ಐದಾರು ಹೆಣ್ಣು ಮಕ್ಕಳಿಂದ ನೂರಾರು ಹೆಣ್ಣು ಮಕ್ಕಳವರೆಗೆ ದುಂಡುಗೆ ಸುತ್ತುತ್ತ ಹಿಮ್ಮೇಳ ಮುಮ್ಮೇಳ ಆಗಿ ಭುಲಾಯಿ ಹಾಡುತ್ತಾರೆ. ಇದಕ್ಕೆ ಭುಲಾಯಿ ಹಾಕೋದು ಅನ್ನುತ್ತಾರೆ. ವಿಶೇಷವಾಗಿ ಪಂಚಮಿ ಹಬ್ಬದಲ್ಲಿ ಗಂಡಸರೂ ಕೆಲವೊಂದು ಊರುಗಳಲ್ಲಿ ಭುಲಾಯಿ ಹಾಕುತ್ತಾರೆ"[೩೨] ಎಂದು ಹೇಳಿರುವುದನ್ನು ಗಮನಿಸಿ, ಕ್ಷೇತ್ರ ಕಾರ್ಯದಲ್ಲಿ ವಿಚಾರಿಸಿದಾಗ, ಈಗ 'ಭುಲಾಯಿ ಹಾಕಲಾಕ ಹೆಣ್ಣು ಮಕ್ಕಳೇ ಬರೋದಿಲ್ಲ, ಅಂತದ್ರಾಗ ಗಂಡಸರೆಲ್ಲಿ ? ಯಾವ ಕಾಲದಲ್ಲಿ ಹಾಕ್ತಿದ್ರೋ ನಾವಂತೂ ನೋಡೆಯಿಲ್ಲ' ಎಂಬ ಉತ್ತರ ಸಿಗುತ್ತಿದೆ. ಚಿಕ್ಕಂದಿನಿಂದಲೂ 'ಭುಲಾಯಿ

ಹಾಕು'ವುದನ್ನು ನೋಡುತ್ತಿರುವ ನನಗೂ ಗಂಡು ಮಕ್ಕಳು ಭುಲಾಯಿ ಹಾಕುವುದು ಕಂಡುಬಂದಂತಿಲ್ಲ. ಬಹುಶಃ ಡಾ. ಅಂಬಲಗೆಯವರು ಚಿಕ್ಕವರಿದ್ದಾಗ ಅವರು ನೋಡಿರಬಹುದು ಅಥವಾ ಕೇಳಿರಬಹುದು. ಇವರೊಬ್ಬರ ಹೊರತು ಈ ವಿಚಾರವನ್ನು ಮತ್ತೆಲ್ಲಿಯೂ ದಾಖಲಾಗದಿರುವುದು ಗಮನಾರ್ಹ ಸಂಗತಿ.

ಒಟ್ಟಾರೆ ಭುಲಾಯಿ ಬರಿಯ ಹಾಡಲ್ಲ. ಹೆಣ್ಣು ಮಕ್ಕಳೆಲ್ಲ ಹೊಸ ಹೊಸ ಸೀರೆಗಳನ್ನುಟ್ಟು, ಕೈ ಕೈ ಹಿಡಿದು ದುಂಡಗೆ ತಿರುಗುತ್ತ ತಮ್ಮದೇ ಆದ ಭಂಗಿಯಲ್ಲಿ ಹಾಡುವ ಕಲೆ ಎನ್ನಬಹುದು. **ಹಾಡಿನಿಂದ ಕಿವಿಗೆ ಇಂಪನ್ನು ವಸ್ತ್ರ ಹಾಗೂ ತಿರುಗವ ಭಂಗಿಯಿಂದ ಕಣ್ಣಿಗೆ ಸೊಂಪನ್ನು ಬೋಧನೆ (ನೀತಿ, ಸಂಸ್ಕಾರ) ಯಿಂದ ಮನಸ್ಸಿಗೆ ತಂಪನ್ನು ಕೊಡುವ ವಿಶಿಷ್ಟವಾದ 'ಜನಪದ ಸಂಯುಕ್ತ ಕಲೆ' ಎಂದು ಹೇಳಬಹುದು.** ಅಂದರೆ ಇದರಲ್ಲಿ ಹಾಡು, ಕ್ರಮಬದ್ಧದಲ್ಲಿ ಸುತ್ತುವುದು, ಸಂಗೀತ, ಸಾಹಿತ್ಯ ಹಾಗೂ ಸಾಂಸ್ಕೃತಿಕ ಕಲೆಗಳು ಅರ್ಥವತ್ತಾಗಿ ಬೆರೆತುಕೊಂಡಿವೆ.

ಭುಲಾಯಿ ಒಂದು ಕಲೆ:

ಜನಪದ ಕಲೆಗಳು ಹುಟ್ಟಿದ್ದು, ನಮ್ಮ ಹಳ್ಳಿಗಾಡಿನ ಜನರ ಹೃದಯಗಳಲ್ಲಿ ಅವು ಬೆಳೆದದ್ದು ಅವರ ಮನೆಯಂಗಳದಲ್ಲಿ ಉಳಿದಿದ್ದು ಅವರ ಪ್ರೀತಿಯ ತೆಕ್ಕೆಯಲ್ಲಿ. ಜಾನಪದ ಕಲೆಗಳು ಗ್ರಾಮ ಜೀವನದಿಂದ ಸಹಜವಾಗಿ ಹುಟ್ಟಿ ಬಂದಂಥವು. ನೋಡುಗರಲ್ಲಿ, ಕೇಳುಗರಲ್ಲಿ ಆನಂದ ಉಕ್ಕಿಸಿ ಅವರ ಹೃದಯಗಳನ್ನು ಗೆಲ್ಲುವ ಶಕ್ತಿ ಜನಪದ ಕಲೆಗಳಿರುವುದು ಕಂಡು ಬರುತ್ತದೆ. ಈ ಕಲೆಗಳಲ್ಲಿ ಹೆಚ್ಚಿನವು ದೈವೀ ಶಕ್ತಿಯ ಆರಾಧನೆಯ ಹಿನ್ನೆಲೆಯಲ್ಲಿ ಹುಟ್ಟಿ, ಬೆಳೆದು, ಉಳಿದು ಬಂದಂತೆ ಕಂಡುಬರುತ್ತವೆ. ಅಲ್ಲದೆ ಇವು ಕುಣಿತ, ವಾದ್ಯ, ಹಾಗೂ ಹಾಡುಗಳ ಸಮ್ಮಿಶ್ರ ಕಲೆಗಳಾಗಿರುವುದು ಗಮನಾರ್ಹವಾಗಿದೆ.

ಜನಪದ ಕಲೆ ಎಂದರೆ ಗ್ರಾಮ ಸಮುದಾಯ, ಶಿಕ್ಷಣ, ಮನರಂಜನೆ ಹಾಗೂ ನೀತಿ ಬೋಧನೆ, ಈ ಕಲೆಗಳ ಉದ್ದೇಶ. ಬರ ಹಾಗೂ ಬೇನೆಗಳು ಸಮುದಾಯವನ್ನು ಕಾಡದಂತೆ ಜನಪದರು ಮಾರಿ, ಕಾಳಿಯನ್ನು ಪೂಜಿಸಿದ್ದಾರೆ. ಹೆಚ್ಚು ಫಸಲು ಕೊಡುವಂತೆ ಫಲವತ್ತತೆಯ ದೇವತೆಗಳನ್ನು ಆರಾಧಿಸಿದ್ದಾರೆ. ದುಡಿದು ಬೇಸತ್ತು, ದುಡಿದುಡಿದು ಸತ್ತ ಶ್ರೀ ಸಾಮಾನ್ಯನಿಗೆ ಮನರಂಜನೆ ನೀಡಲು, ನೀತಿ ಭೋಧನೆ ಮಾಡಲು ತರತರದ ಹಾಡು ಹಾಡಿದ್ದಾರೆ. ಅಟ್ಟ ಹತ್ತಿ ಕುಣಿದಿದ್ದಾರೆ. ಹೀಗಾಗಿ ಈ ಕಲೆಗಳೆಲ್ಲ ಸಮಾಜದ ಪ್ರೇರಣೆಯಿಂದ ಹುಟ್ಟಿ, ಸಮಾಜದ ಪೋಷಣೆಯಲ್ಲಿಯೇ ಬೆಳೆದು ಬಂದವುಗಳೆಂಬ ವಿದ್ವಾಂಸರ ಅಭಿಪ್ರಾಯ ಸೂಕ್ತವೆನಿಸುತ್ತದೆ.

ಕಲೆಗಳಲ್ಲಿ **ಶಿಷ್ಟಕಲೆ** ಮತ್ತು **ಜನಪದ ಕಲೆಗಳು** ಪ್ರಚಲಿತವಾಗಿವೆ. ಶಿಷ್ಟ ಕಲೆಗಳು ಎಂದರೆ ಸುಶಿಕ್ಷಿತರಿಂದ ಹುಟ್ಟಿ ಬೆಳೆದು ಬಂದ ಕಲೆಗಳು ಇವುಗಳಲ್ಲಿ ಬಹುತೇಕ ಕಲೆಗಳು ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ಹುಟ್ಟಿಕೊಂಡಂಥವು. ಜಾನಪದರು ಬದುಕನ್ನೇ ಕಲೆಯನ್ನಾಗಿ ಅರಳಿಸಿದ್ದಾರೆ. ಆದರೆ ಶಿಷ್ಟ ಕಲೆಯ ಕೃತಿಗಳು ಉದ್ದೇಶಿತವಾಗಿ ರಚಿತವಾಗುತ್ತವೆ. ಇವನ್ನು

ಉಳಿಸಿಡುವ ಪ್ರಯತ್ನವನ್ನು ಕಲಾವಿದರು ಮಾಡುತ್ತಾರೆ. ಜನಪದ ಕಲೆಗಳಲ್ಲಿ ದಟ್ಟವಾದ ಮಣ್ಣಿನ ವಾಸನೆ ಕಂಡು ಬರುತ್ತದೆ. ಅಪಾರ ಅನುಭವ, ಅಭಿವ್ಯಕ್ತಿಯ ಸಹಜತೆ, ಬದುಕಿನ ಲಯ ಮತ್ತು ದಾಟಿಗಳ ಸಂಯೋಜನೆ ಜನಪದ ಕಲೆಗಳ ಮುಖ್ಯ ಲಕ್ಷಣಗಳೆನಿಸುತ್ತವೆ. ಇವುಗಳಲ್ಲಿ ಸಾಮ್ಯ ಇರುವುದು ಒಂದೇ ವಿಷಯದಲ್ಲೆನ್ನಬಹುದು ಅದು, ಈ ಎರಡು ಕಲೆಗಳ ಉದ್ದೇಶವು ಜೀವನ ಚಿತ್ರಣ, ಮನರಂಜನೆ, ನೀತಿ ಭೋಧನೆ ಇತ್ಯಾದಿಗಳನ್ನು ಒದಗಿಸುವುದೇ ಆಗಿದೆ. ಎಲ್ಲಾ ಶಿಷ್ಟ ಕಲೆಗಳೂ ಒಂದಲ್ಲ ಒಂದು ರೀತಿಯಲ್ಲಿ ಒಂದು ಕಾಲದಲ್ಲಿ ಜನಪದ ಕಲೆಗಳಿಂದ ಪ್ರೇರಣೆ ಪಡೆದುಕೊಂಡಿರುವುದನ್ನು ಅಲ್ಲಗಳೆಯುವಂತಿಲ್ಲ.

ಪುರಾಣಗಳಿಗೂ ಜನಪದ ಕಲೆಗಳಿಗೂ ಅವಿನಾಭಾವ ಸಂಬಂಧವು ಕಂಡು ಬರುತ್ತದೆ. ಪುರಾಣ ಎಂದರೆ ಸಾಂಪ್ರದಾಯಿಕ ಅಥವಾ ಕಾಲ್ಪನಿಕ ಕತೆ. ಈ ಕತೆ ದೇವ-ದೇವತೆಗಳ -ದಾಗಿರಬಹುದು. ವೀರ-ಧೀರರದೂ ಆಗಿರಬಹುದು. ನಮ್ಮ ಜಾನಪದ ಕಥಾಕೋಶ ಮತ್ತು ಕಲಾ ಕೋಶಗಳಲ್ಲಿ ಇಂಥ ಸಾವಿರಾರು ಹಾಡು, ಕಲೆ ಮತ್ತು ಆಟಗಳು ಕಂಡು ಬರುತ್ತವೆ. ಉದಾ: ನಂದಿ ಅವತಾರದ ಕತೆ, ರಾಮಕೃಷ್ಣರಕತೆ ಇತ್ಯಾದಿ. ಬಸವ, ಗಾಂಧಿ, ಚೆನ್ನಮ್ಮ ಮುಂತಾವದರೆಲ್ಲ ಐತಿಹಾಸಿಕ ವ್ಯಕ್ತಿಗಳೇ, ಇವರ ವಿಶಿಷ್ಟ ಸಾಹಸ ಪವಾಡ ಭಕ್ತಿಗಳ ಕತೆಗಳು, ಹಾಡುಗಳು, ಬಾಯಿಂದ ಬಾಯಿಗೆ ಹರಿದು ಬಂದು, ಇವರೆಲ್ಲ ಈಗ ದಂತಕಥೆಯಾಗಿದ್ದು, ಪೌರಾಣಿಕ ವ್ಯಕ್ತಿಗಳೆನಿಸಿ ಬಿಟ್ಟಿದ್ದಾರೆ. ರಾಮಾಯಣ, ಮಹಾಭಾರತದ ಹಾಡುವ ಕತೆಗಳಂತೂ ಮನೆಮಾತಾಗಿವೆ.

ಜನಪದ ಕಲೆಗಳಲ್ಲಿ ಹಲವು ಬಗೆಗಳಿವೆ. ಅಧ್ಯಯನದ ದೃಷ್ಟಿಯಿಂದ ವಿದ್ವಾಂಸರು ಅವುಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿದ್ದಾರೆ. ಅವುಗಳು

೧) ಜನಪದ ಹಾಡುಗಳು (ಜನಪದ ಸಂಗೀತ)
೨) ಜನಪದ ಕುಣಿತಗಳು (ಜನಪದ ನೃತ್ಯ)
೩) ಜನಪದ ಆಟಗಳು (ನಾಟಕ-ಕ್ರೀಡೆ ಇತ್ಯಾದಿ)
೪) ಜನಪದ ವಾದ್ಯಗಳು

ಒಂದು ಮಾತಿನಲ್ಲಿ ಹೇಳುವುದಾದರೆ **ಜನಪದ ಕಲೆ**ಗಳೆಂದರೆ ಸಂಗೀತ, ನೃತ್ಯ ಮತ್ತು ಅಭಿನಯಗಳ ತ್ರಿವೇಣಿ ಸಂಗಮ. ಯಾವ ರಾಜಾಶ್ರಯವೂ ಇಲ್ಲದೆ ಬೆಳೆದ ಕಲೆಗಳು ಇವು. ಇವೆಲ್ಲ ಊರ ಮಧ್ಯದ ಬಯಲಿನಲ್ಲಿ, ದೇವಾಲಯಗಳ ಪ್ರಾಂಗಣಗಳಲ್ಲಿ, ಹಬ್ಬ, ಜಾತ್ರೆ ಉತ್ಸವಗಳಂಥ ಸಂದರ್ಭಗಳಲ್ಲಿ ಹುಟ್ಟಿ, ಬೆಳೆದು ಅರಳಿದ ಕಲೆಗಳು. ಹಾಡುತ್ತ, ಆಡುತ್ತ ಬೆಳೆಸಿ, ಉಳಿಸಿಕೊಂಡು ಬಂದ ಸಂಪತ್ತುವೆನ್ನಬಹುದು.

ಈ ಎಲ್ಲಾ ಕಲೆಗಳು ನೋಡುವವರಿಗೆ ಮನರಂಜನೆ ನೀಡುತ್ತವೆ. ಆಡುವವರಿಗೆ ದೇಹಕ್ಕೆ ಅಗತ್ಯವಾದ ವ್ಯಾಯಾಮವನ್ನೊದಗಿಸುತ್ತವೆ. ಆದ್ದರಿಂದಲೇ ಈ ಜನಪದ ಕಲೆಗಳು ಅನಾದಿಕಾಲದಿಂದಲೂ ಉಳಿದು ಬೆಳೆದು ಬಂದಿರುವುದು ಗಮನಾರ್ಹವೆನಿಸುತ್ತದೆ.

ಮನುಷ್ಯನ ಚರಿತ್ರೆಗೂ ಜನಪದ ಕಲೆಗಳ ಉಗಮಕ್ಕೂ ಬಹಳ ಹತ್ತಿರದ ಸಂಬಂಧಬಿರುವಂತೆ ಕಂಡುಬರುತ್ತದೆ. ಮನುಷ್ಯ ತನ್ನ ಸುತ್ತಲ ಪರಿಸರದಲ್ಲಿ ಇದ್ದ ಸೂರ್ಯ, ಚಂದ್ರ, ಗುಡ್ಡ, ಬೆಟ್ಟ ಹಾಗೂ ಮರ ಗಿಡಗಳಿಂದ ಪ್ರಯೋಜನ ಪಡೆಯುತ್ತಾ ಜೀವಿಸುತ್ತಿದ್ದದ್ದು, ಐತಿಹಾಸಿಕ ಸತ್ಯ. ಜೀವನಕ್ಕೆ ಅಗತ್ಯವಾದ ಬೆಳಕನ್ನು ಕೊಡುವ ಸೂರ್ಯ-ಚಂದ್ರರು, ಮಳೆಯನ್ನು ಕೊಡುವ ಗುಡ್ಡ ಬೆಟ್ಟ ಮೋಡಗಳು, ನೆರಳು ಕೊಡುವ ಗಿಡ ಮರಗಳು ಹಾಗೂ ಆಹಾರ, ಹಣ್ಣು ಹಂಪಲು ನೀಡುವ ವಿವಿಧ ಸಸ್ಯಗಳ ಬಗ್ಗೆ ಅವನಿಗೆ ದೈನ್ಯ ಭಾವ ಮೂಡಿದ್ದು ಸಹಜ. ಹೀಗಾಗಿ ಅವುಗಳನ್ನು ಆರಾಧಿಸಲು ಆರಂಭಿಸಿರಬಹುದು. ಇದು ಒಂದು ರೀತಿಯ ಸೌಮ್ಯ ಆರಾಧನೆ, ಆದರೆ ಇವನಿಗೆ ಭಯ ಹುಟ್ಟಿಸುವಂತಹ ಸಂಗತಿಗಳೂ ಇವನ ಸುತ್ತಲೇ ಇದ್ದವು. ಗುಡುಗು, ಸಿಡಿಲು, ಭೂಕಂಪ, ಕಾಡಿನ ಬೆಂಕಿ, ಕ್ರೂರ ಪ್ರಾಣಿಗಳು ಹಾಗೂ ಭಯಾನಕ ರೋಗಗಳು ಮನುಷ್ಯನನ್ನು ಧೃತಿಗೆಡಿಸುತ್ತಿದ್ದವು. ಇಂಥ ಸಂಕಟಗಳು ಒದಗಿದ ಸಂದರ್ಭದಲ್ಲಿ ಅವನು ಮಾಟ ಮಂತ್ರಗಳ ಮೂಲಕ ಅವುಗಳನ್ನು ನಿಯಂತ್ರಿಸಲು ಪ್ರಯತ್ನಿಸಿದಂತಿದೆ. ಈ ಯಾಂತ್ರಿಕ ಆರಾಧನೆ ಇನ್ನೊಂದು ಬಗೆ. ಹೀಗೆ ಮನುಷ್ಯ ಒಂದು ಕಡೆ ಭಕ್ತಿಯಿಂದ ಮತ್ತೊಂದು ಕಡೆಗೆ ಭಯದಿಂದ ತನ್ನನ್ನು ಮೀರಿದ ಶಕ್ತಿಯನ್ನು ಆರಾಧಿಸತೊಡಗಿದಂತೆ ಕಂಡು ಬರುತ್ತದೆ.

ಈ ಆರಾಧನೆ ಯಾವ ರೀತಿಯಲ್ಲಿರುತ್ತಿತ್ತು ? ಎನ್ನುವುದು ಸಹಜ ಪ್ರಶ್ನೆ. ಆರಾಧನೆ ಎನ್ನುವುದು ಉಪಾಸನೆ ಮಾತ್ರ ಅಲ್ಲ. ಹಾಡುವುದು, ಕುಣಿಯುವುದು, ದೀನನಾಗಿ ಅಡ್ಡ ಬೀಳುವುದು, ಕೈ ಮುಗಿಯುವುದು, ಗಟ್ಟಿ ಧ್ವನಿಯಲ್ಲಿ ಕಿರುಚಿ ಹೇಳುವುದು ಇತ್ಯಾದಿಯಾಗಿ ಹಲವು ಅಭಿನಯಗಳು ಅದರಲ್ಲಿರುತ್ತಿದ್ದವೆಂದು ವಿದ್ವಾಂಸರ ಅಭಿಪ್ರಾಯವಾಗಿದೆ. ದೇವರ ಆರಾಧನೆಯ ಸಂದರ್ಭದಲ್ಲಿ ಮನುಷ್ಯ ಹೀಗೆ ಅನುಸರಿಸುತ್ತಿದ್ದ ಹಲವು ಆಂಗಿಕ ಚಲನೆಗಳೇ ಒಂದು ಶಿಸ್ತಿಗೆ ಒಳಪಟ್ಟು, ಒಂದು ಚೌಕಟ್ಟಿಗೆ ಒಳಪಟ್ಟು, ಹಾಡು, ಕುಣಿತ, ಮತ್ತು ಅಭಿಯನಗಳು ಸೇರಿ ಹಲವು ವಿವಿಧ ಕಲೆಗಳಾಗಿ ರೂಪುಗೊಂಡವು. ಇವೇ ಆರಾಧನಾ ರೂಪದ ಜನಪದ ಕಲೆಗಳು ಎಂಬುದು ವಿದ್ವಾಂಸರ ಮತ.

ಪ್ರಾಚೀನ ಮಾನವನ ಜೀನವದಲ್ಲೇ ಹೀಗೆ ರೂಪುಗೊಂಡ ಕಲೆಗಳು ಬರುಬರುತ್ತಾ ವಿಕಾಸಗೊಂಡವು. ಆಯಾ ದೇವರ ಮೇಲೆ ಸೃಷ್ಟಿಗೊಂಡ ಕಥೆ ಪುರಾಣಗಳ ಹಿನ್ನಲೆಯಲ್ಲಿ ವಿವಿಧ ವೇಷಭೂಷಣ, ವಿವಿಧ ಚಿತ್ರಗಳು ಹಾಗೂ ಸಂಪ್ರದಾಯ ಕಟ್ಟುಕಟ್ಟಲೆಗಳನ್ನು ರೂಪಿಸಿಕೊಂಡವು. ಹೀಗಾಗಿ ಹಾಡುವುದು. ಕುಣಿಯುವುದು, ಮನುಷ್ಯನ ಮೂಲಭೂತವಾದ ಸಹಜಗುಣ ಎಂಬುದನ್ನು ಒಪ್ಪಿಕೊಳ್ಳಬಹುದಾದರೂ ಆ ಕುಣಿತ, ಹಾಡು ಅಥವಾ ಕಲೆ ಒಂದು ಸಿದ್ಧರೂಪ ಪಡೆದುಕೊಂಡದ್ದು ಮಾತ್ರ ಆರಾಧನೆ ಕ್ರಮದಲ್ಲಿ ಎನ್ನಬಹುದು.

ಕರ್ನಾಟಕದಲ್ಲಿ ಇಂಥ ಹಲವಾರು ಆರಾಧನಾ ಕಲೆಗಳು ಕಂಡು ಬರುತ್ತವೆ. ಮಾರಿ ಕುಣಿತ, ನಂದಿಧ್ವಜ ಕುಣಿತ ಮುಂತಾದೆಲ್ಲವೂ ಗ್ರಾಮದೇವತೆಗಳ ಆರಾಧನೆಯ ಹಿನ್ನೆಲೆಯಲ್ಲಿ ರೂಪಗೊಂಡ ಕಲೆಗಳು. ಸುಗ್ಗಿ ಕುಣಿತಗಳು, ಕೃಷಿ ದೇವತೆಗಳನ್ನು ಆರಾಧಿಸುವ ಕಲೆಗಳಾದರೆ.

ಪಂಡರಿ ಭಜನೆ, ಭಾಗವಂತಿಕೆ ಮೇಳ ಭೂತೇರು ಮುಂತಾದವು ಶಕ್ತಿದೇವತೆ ಹಾಗೂ ಮಾತೃವನ್ನು ಪೂಜಿಸುವ ಕುಣಿತಗಳು. ಹೋಳಿ ಕುಣಿತ, ಹಾಗೂ ಕರಗ ಮುಂತಾದವು ಸಮೃದ್ಧಿ, ಸಂಕೇತದ ಕುಣಿತಗಳು. ನಾಗಮಂಡಲ ಹಾಗೂ ಬೀದರ ಜಿಲ್ಲೆಯ 'ಭುಲಾಯಿ' ಹಾವನ್ನು (ನಾಗ) ಕುರಿತ ಆರಾಧನೆಯಾಗಿದೆ.

ಆರಾಧನಾ ಕಲೆಗಳಿಗೂ ದೇವಸ್ಥಾನಗಳು ಮೂಲ ಸ್ಥಳವಾಗಿದ್ದು ದೇವರ ಮುಂದೆ ಆತನ ಸಂತೃಪ್ತಿಗಾಗಿ ಹಾಡಿದ, ಹೊಗಳಿದ ಮತ್ತು ಕಥೆ ಮಾಡಿದ ಪ್ರಸಂಗಗಳು ಕಲೆಗಳಾಗಿವೆ ಎಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಹೀಗೆ ಒಂದು ಆರಾಧನೆಯ ಕ್ರಿಯೆಗಳಾಗಿ ಹುಟ್ಟಿಕೊಂಡ ಕಲೆಗಳು ಮನುಷ್ಯನ ಪ್ರತಿಭಾ ಶಕ್ತಿಯ ಫಲವಾಗಿ ಇಂದ ನಾನಾ ರೂಪದಲ್ಲಿ ನಮ್ಮ ಮುಂದೆ ಇವೆ. ಅವುಗಳಲ್ಲಿ ಬೀದರ ಜಿಲ್ಲೆಯ 'ಭುಲಾಯಿ' ಕೂಡ ಒಂದು ಜನಪದ ಕಲೆಯಾಗಿದ್ದು, ಆರಾಧನೆಯ ಹಿನ್ನೆಲೆಯಲ್ಲಿ ಮೂಡಿಬಂದುದೆಂದು ಹೇಳಬಹುದು. ಹಲವು ಕಲೆಗಳ ಸಂಗಮದಂತಿರುವ ಭುಲಾಯಿಯನ್ನು ಕುರಿತು ನೋಡುವಾ.

ಭುಲಾಯಿ ಒಂದು ಆರಾಧನಾ ಕಲೆ:

'ಭುಲಾಯಿ' ಕೇವಲ ಒಂದು ಕಲೆಯಲ್ಲ; ಕಲೆಗಳ ಸಂಗಮವಾಗಿದೆ. ಯಾಕೆಂದರೆ ಇದರಲ್ಲಿ ಒಂದು ತರದ ಸರಳವಾದ ನಡಿಗೆಯ ಕ್ರಮ, ಜೀಕುವ ಅಭಿನಯ, ಕೈ ಕೈ ಹಿಡಿದು ಸುತ್ತುವ ಲಯ-ತಾಳ ಬದ್ಧತೆ, ಹಾಡಿನಲ್ಲಿ ಸಾಹಿತ್ಯ ಸಂಗೀತ, ಗೇಯತೆ, ಇರುವುದು. ಅದರೊಂದಿಗೆ ಓಣಿಯ ಹಲವಾರು ಜನ ಇದನ್ನು ಕುಳಿತು ನೋಡುತ್ತ ಆನಂದದ ಸವಿಯನ್ನು ಸವಿಯುವುದರಿಂದ ಇದೊಂದು ಸಂಯುಕ್ತ ಕಲೆಯಾಗಿ ಪ್ರದರ್ಶನಗೊಳ್ಳುತ್ತದೆ ಎನ್ನಬಹುದು. ಇಲ್ಲವೆ ಒಂದು ಸಮಾಜದ ಅಥವಾ ಒಂದು ಜನಾಂಗದ ಸಂಸ್ಕೃತಿಯನ್ನು ಪ್ರತಿ ಬಿಂಬಿಸುವುದ -ರಿಂದ ಇದೊಂದು ಸಂಸ್ಕೃತಿ ಎನಿಸುತ್ತದೆ. ಸಂಸ್ಕೃತಿ ಎಂದರೆ ಒಂದು ಜೀವನ ವಿಧಾನ ಎಂದು ನಾವು ಗುರುತಿಸುವುದರಿಂದ 'ಭುಲಾಯಿ'ಯು ಬೀದರ ಸಂಸ್ಕೃತಿ ಎಂದುನಾವು ಕರೆಯಬಹುದಾಗಿದೆ.

ಜನಪದ ಕಲೆಗಳು ಜನಪದ ಜೀವನದಲ್ಲಿ ಹಾಸುಹೊಕ್ಕಾಗಿ ಬೆರೆತಿವೆ. ಧಾರ್ಮಿಕ ಹಾಗೂ ಲೌಕಿಕ ಸ್ವರೂಪದ ಕಲೆಗಳು ತಮ್ಮದೇ ಆದ ಸಂಪ್ರದಾಯಗಳನ್ನು ಬೆಳೆಸಿಕೊಂಡು ಜನಜೀವನದ ಮೇಲೆ ಪ್ರಭಾವವನ್ನು ಬೀರುತ್ತ ಬಂದಿವೆ. ನಾಗರಿಕತೆಯ ಪ್ರಭಾವ ಕಡಿಮೆ ಇದ್ದ ದಿನಗಳಲ್ಲಿ ಈ ಕಲೆಗಳೇ ಮನರಂಜನೆಯ ಮುಖ್ಯ ಸಾಧನಗಳಾಗಿ ಮೆರೆದಿದ್ದವು ಎಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ. ದೈವಾರಾಧನೆಯ ಒಂದು ಅಂಗವಾಗಿಯೂ ಇವು ಬೆಳೆದು ಬಂದದ್ದನ್ನು ನೋಡಬಹುದು. ವೀರಗಾಸೆ, ಡೊಳ್ಳುಮೇಳ, ಸೋಮನ ಕುಣಿತ, ಭೂತಕೋಲ, ನಂದಿಕೋಲ, ಮುಂತಾದ ಅನೇಕ ಕಲೆಗಳಲ್ಲಿ ಈ ಹಿನ್ನೆಲೆಯನ್ನು ಸ್ಪಷ್ಟವಾಗಿ

ಗುರುತಿಸಿ -ಕೊಳ್ಳಬಹುದು. ಈ ದೃಷ್ಟಿಯಲ್ಲಿ 'ಭುಲಾಯಿ' ಯೂ ಕೂಡ ದೈವಾರಾಧನೆಯ ಹಿನ್ನೆಲೆಯಲ್ಲಿ ಬೆಳೆದ ಕಲೆಯೇ ಎನ್ನಬಹುದು. ಧಾರ್ಮಿಕ ಸಂದರ್ಭದಲ್ಲಿ ಇದು ಪ್ರದರ್ಶಿತಗೊಳ್ಳುವುದರಿಂದ ಇದೊಂದು ಧಾರ್ಮಿಕ ಕಲೆಯೂ ಹೌದು. ಜಾನಪದ ವಿದ್ವಾಂಸರಾದ ಜೀ.ಶಂ.ಪ ಅವರು ಧರ್ಮ ಮತ್ತು ಕಲೆಗಳ ಕುರಿತು ಹಬ್ಬ ಹರಿದಿನಗಳಲ್ಲಿ ದೇವರ ಉತ್ಸವಾದಿಗಳಲ್ಲಿ, ವಿಶೇಷ ದಿನಗಳಲ್ಲಿ ಈ ಕಲೆಗಳ ಪ್ರದರ್ಶನವೂ ಆಚರಣೆಯ ಒಂದು ಅಂಗವಾಗಿ ಸೇರಿ ಹೋಗಿರುತ್ತದೆ. ಹೀಗೆ ಎಲ್ಲ ಜನಪದ ಕಲೆಗಳ ಹಿನ್ನೆಲೆಯಲ್ಲಿಯೂ ಒಂದಲ್ಲ ಒಂದು ರೀತಿಯಲ್ಲಿ ಧಾರ್ಮಿಕ ಪ್ರಭಾವ ಕಂಡೆ ಕಾಣುತ್ತದೆ'' [೫೮] ಎಂದು ಹೇಳಿರುವುದನ್ನು ಗಮನಿಸಿದರೆ ನಮ್ಮ ಎಲ್ಲಾ ಜನಪದ ಕಲೆಗಳ ಮೇಲೆ ಧರ್ಮದ ಪ್ರಭಾವವಿರುವುದು ಸ್ಪಷ್ಟವಾಗುತ್ತದೆ. ನಾಗರಾಧನೆಯ ಸಂದರ್ಭದಲ್ಲಿ ಪಂಚಮಿ ಹಬ್ಬದ ವಿಶೇಷ ದಿನಗಳಲ್ಲಿ ಹಾಕುವ 'ಭುಲಾಯಿ' ಹಾಡು ಹಾಗೂ ಆಂಗಿಕ ಅಭಿನಯಗಳಲ್ಲಿ ಪ್ರದರ್ಶಿಸಲ್ಪಡುವುದರಿಂದ ಇದನ್ನು **ಆರಾಧನಾ ಕಲೆಯೂ** ಎನ್ನಬಹುದು. ಪ್ರೊ.ಹಿ.ಚಿ. ಬೋರಲಿಂಗಯ್ಯನವರ ಅಭಿಪ್ರಾಯವೂ ಇದನ್ನೇ ಪುಷ್ಟಿಕರಿಸುವಂತಿದೆ. "ಕರ್ನಾಟಕದ ಬಹುತೇಕ ಕಲೆಗಳು ಆರಾಧನಾ ಸಂರ್ದಭಗಳಿಂದ ಹೊರತಾದುವಲ್ಲ ಎಂಬುದೇ ಇಲ್ಲಿ ಬಹಳ ಮುಖ್ಯ. ಹಬ್ಬ, ಜಾತ್ರೆ, ಉತ್ಸವ ಮುಂತಾಗಿ ಯಾವುದೇ ಒಂದು ವಿಶಿಷ್ಟ ಸಂದರ್ಭದ ಕ್ರಿಯೆಗಳಾಗಿ ಅಥವಾ ಪ್ರತಿಕ್ರಿಯೆಗಳಾಗಿ ಕಾಣಿಸಿಕೊಳ್ಳುವ ಪ್ರದರ್ಶನಗಳನ್ನು ನಾವು ಬರುಬರುತ್ತ ಕರೆದಿದ್ದೇವೆಯೇ ಎಂಬ ಅನುಮಾನ ನನ್ನನ್ನು ಕಾಡಿದೆ. ಇಂಥ ಎಷ್ಟೋ ಸಂದರ್ಭಗಳಲ್ಲಿ ಅಭಿನಯಾತ್ಮಕ ಪ್ರದರ್ಶಗಳು ಆ ಸಂದರ್ಭದಿಂದ ಹೊರತೆಗೆಯಲಾಗದ ರೀತಿಯಲ್ಲಿ ಅರ್ಥಪೂರ್ಣವಾಗಿರುತ್ತವೆ" [೫೯]ಎಂಬುದು ಒಪ್ಪತಕ್ಕ ಮಾತಾಗಿದೆ.

ಹಿ. ಚಿ. ಬೋರಲಿಂಗಯ್ಯನವರು ಆರಾಧನಾ ಕಲೆಗಳ ಉಗಮ ಹಾಗೂ ಆಚರಣೆಯನ್ನು ಕುರಿತು "ಒಂದು ಆರಾಧನೆಯ ಹಲವು ಕ್ರಿಯೆಗಳೇ ಮುಂದೆ ನಾಟ್ಯಾಂಶ ಪಡೆದು ಕಲೆಗಳಾದವು. ಆರಾಧನೆ ಅನ್ನುವುದು ಕೇವಲ ಉಪಾಸನೆ ಅಲ್ಲ. ಹಾಡುವುದು ಕುಣಿಯುವುದು, ದೀನನಾಗಿ ಅಡ್ಡ ಬೀಳುವುದು ಕೈ ಮುಗಿದು ಧ್ಯಾನಿಸುವುದು. ಕಿರುಚುವ ಮೂಲಕ ಅಲಿಕೆ ಮಾಡಿಕೊಳ್ಳುವುದು ಇತ್ಯಾದಿಯಾಗಿ ಹಲವು ಅಭಿನಯಗಳು ಅದರಲ್ಲಿರುತ್ತವೆ.ಹೀಗೆ ಅನುಸರಿಸುತ್ತಿದ್ದ ಹಲವು ಆಂಗಿಕ ಚಲನೆಗಳೇ ಒಂದು ಶಿಸ್ತಿಗೆ ಚೌಕಟ್ಟಿಗೆ ಒಳಪಟ್ಟು ಪಾಡ್ದನಗಳ ರೂಪ ಪಡೆದವು:............ ಹೀಗೆ ಉಗಮಗೊಂಡ ಹಾಡು ಮತ್ತು ಕಲೆಗಳು ನಿರ್ದಿಷ್ಟ ಸಂದರ್ಭದಲ್ಲಿ ಮತ್ತೆ ಮತ್ತೆ ಪುನರುಕ್ತಿಗೊಳ್ಳುವ ಮೂಲಕ ಆಚರಣೆಯ ಭಾಗಗಳಾದವು'' [೬೦] ಎಂಬ ಮಾತುಗಳು ಗಮನೀಯವೆನಿಸುತ್ತವೆ. ಏಕೆಂದರೆ 'ಭುಲಾಯಿ' ಯು ನಿರ್ದಿಷ್ಟ ಸಂದರ್ಭವಾದ ಪಂಚಮಿಯಲ್ಲಿ ಹಲವು ಆಂಗಿಕ ಚಲನೆಗಳು ಮೂಲಕ ಪ್ರದರ್ಶಿಸುವಂತದ್ದು ಹಾಡುಗಳು ಹಾಗೂ ಆಂಗಿಕ ಅಭಿನಯ ಆರಾಧನೆಯಲ್ಲಿರುತ್ತದೆ. ಪ್ರತಿ ವರ್ಷವೂ ಪುನರುಕ್ತಿಗೊಳ್ಳುವ ಆಚರಣೆಯಾದ ಕಾರಣ ಇದನ್ನು '**ಆರಾಧನಾ ಕಲೆ**' ಎಂದು ಕರೆಯುವುದು ಸೂಕ್ತವೆನಿಸುತ್ತದೆ.

ಈ ಕಲೆಯು ದೈವ, ಧರ್ಮಗಳ ಸಂಬಂಧವನ್ನಿಟ್ಟುಕೊಂಡು ಬಂದ ನಮ್ಮ ಬೀದರ ಜಿಲ್ಲೆಯ ಸಂಸ್ಕೃತಿಯ ಅವಿಭಾಜ್ಯ ಅಂಶವಾಗಿ ಬೆರೆತು ಹೋಗಿದೆ. ಹಾಡುಗಳು ಜನರಿಗೆ ಪುರಾಣ ಪುಣ್ಯ ಕಥೆ, ಚಾರಿತ್ರಿಕ ಘಟನೆಗಳು, ಸಾಮಾಜಿಕ ನಿಯಮಗಳು, ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುತ್ತಾ ಬಂದಿವೆ. ಅದರಲ್ಲಿಯೂ ಹೆಣ್ಣಿನಲ್ಲಿಬೇಕಾದ ಸಹನೆ, ತ್ಯಾಗ ಮುಂತಾದವುಗಳನ್ನು ಪ್ರತಿಬಿಂಬಿಸುತ್ತಾ ಸಾಮಾಜಿಕ ಜೀವನದ ಒಳಪದರುಗಳಲ್ಲಿ ಹಬ್ಬಿಕೊಂಡು ಜೀವನೋತ್ಸಾಹವನ್ನು ತುಂಬುವ ಚಿಲುಮೆಗಳಾಗಿವೆ. ಜೀವನದಲ್ಲಿ ಬದುಕಿಗೆ ಮಾರ್ಗದರ್ಶನ ಮಾಡುವ ದೀವಿಗೆಯಾಗಿದ್ದು, ಪರಸ್ಪರ ಸಹಕಾರ ಮನೋಭಾವನೆಯನ್ನು ವರ್ಧಿಸುವಲ್ಲಿ ಸಹಾಯಕವಾಗುತ್ತವೆ. ಇದರಲ್ಲಿ ಹಿರಿಯರು, ಕಿರಿಯರು, ಬಡವರು, ಬಲ್ಲಿದರು, ವಿಧವೆ - ಮುತ್ತೈದೆ, ಮೇಲ್ವರ್ಗ - ಕೆಳವರ್ಗ ಎಂಬ ಬೇದವಿಲ್ಲದೆ ಎಲ್ಲರೂ ಸಮಾನ ಭಾವನೆಯಲ್ಲಿ ಬೆರೆಯುತ್ತಾರೆ.

ಕಲೆಗಳ ಅಧ್ಯಯನ ಹಾಗೂ ಮಹತ್ವವನ್ನು ಕುರಿತಾದ ಹಿ.ಚಿ. ಬೋರಲಿಂಗಯ್ಯನವರ ಅಭಿಪ್ರಾಯ ಗಮನಾರ್ಹವಾಗಿದೆ. "ಆರಾಧನಾ ಕಲೆಗಳ ಅಧ್ಯಯನ ಮಾತ್ರ ನಮ್ಮನ್ನು ಬಹುದೂರ ಕರೆದುಕೊಂಡು ಹೋಗಬಲ್ಲದು. ಒಂದು ನಾಡಿನ ಸಾಂಸ್ಕೃತಿಕ ಸಂಘರ್ಷವನ್ನು ಹಾಗೂ ಆ ಮೂಲಕ ಅಜಿತವಲ್ಲದ ಒಂದು ಮಹತ್ವದ ಇತಿಹಾಸವನ್ನು ಈ ಕಲೆಗಳ ಅಧ್ಯಯನ ತೆರೆದಿಡುತ್ತದೆ." [೬೧]

ಡಾ|| ಪಿ. ಕೆ. ಖಂಡೋಬಾ ಅವರು ಲಂಬಾಣಿ ನೃತ್ಯಕಲೆ ಕುರಿತು ಕುಣಿತಕ್ಕೆ ಸುತ್ತುಗಟ್ಟಿ ನಿಂತರೆ ಭದ್ರ ಕೋಟೆಯಂತಿರುತ್ತದೆ. ಈ ಸುತ್ತು ಕುಣಿತ ಈ ಜನರ ಒಗ್ಗಟ್ಟಿನಲ್ಲಿ ಸಂಕೇತ. ಸುತ್ತು ಸಾಲು ಇವರ ಸಂಸ್ಕೃತಿ. ಸಂಪ್ರದಾಯಗಳ ರಕ್ಷಣೆಗೆ ಹಾಕಿದ ಸುತ್ತು ಬೇಲಿ; ಆ ಬೇಲಿ ದಾಟುವುದು ಅಷ್ಟು ಸುಲಭದ ಮಾತಲ್ಲ. ಹೀಗೆ ಲಂಬಾಣಿಯಗಳಲ್ಲಿ ಜನಪದ ಕಲೆ ಗಟ್ಟಿಯಾದ ನೆಲೆಯ ಮೇಲೆ ಬೆಳೆದುಕೊಂಡು ಬಂದಿದೆ. ಈ ಸ್ತ್ರೀ ಪುರಷರ ನೃತ್ಯ ಕಲೆಗಳು ಧಾರ್ಮಿಕ ಹಾಗೂ ಸಾಂಸ್ಕೃತಿಕಾಂಶಗಳನ್ನು ಕಾಪಾಡಿಕೊಂಡು ಬರುವಲ್ಲಿ ಮಹತ್ವದ ಪಾತ್ರವಹಿಸಿವೆ" [೬೨] ಎಂದಿರುವ ಅಭಿಪ್ರಾಯವು ಬೀದರ ಜಿಲ್ಲೆಯ 'ಭುಲಾಯಿ' ಕಲೆಗೂ ಅನ್ವಯಿಸುವಂತಿದೆ. ಯಾಕೆಂದರೆ ಗಟ್ಟಿಯಾದ ನೆಲೆಯನ್ನು ಹೊಂದಿದಂತಿದೆ. ಇದು ಧಾರ್ಮಿಕ, ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ಅಂಶಗಳನ್ನು ಕಾಪಾಡಿಕೊಂಡು ಬಂದಿದ್ದು, ಬೀದರ ಜಿಲ್ಲೆಯ ವಿಶಿಷ್ಟ ಕಲೆ ಆಗಿದೆ. ಅಷ್ಟೇ ಅಲ್ಲ ಇದು ಇಲ್ಲಿಯ ಸಂಸ್ಕೃತಿಯಾಗಿದೆ. ಅದನ್ನೇ ನಾವು **'ಭುಲಾಯಿ ಸಂಸ್ಕೃತಿ'** ಎಂದು ಕರೆಯುತ್ತೇವೆ. ಹೀಗೆ 'ಭುಲಾಯಿ' ಸಾಹಿತ್ಯ, ಕಲೆ ಹಾಗೂ ಸಂಸ್ಕೃತಿಗಳ ಸಂಗಮವೆಂದು ಗುರುತಿಸಬಹುದು.

ಭುಲಾಯಿ ಸಂಸ್ಕೃತಿ :

ಭುಲಾಯಿ ಸಂಸ್ಕೃತಿ ಒಂದು ಸಮೂಹದ ಸಾಂಸ್ಕೃತಿಕ ಅನನ್ಯತೆ ಎನಿಸಿದರೂ ಸಹ ಇದು ಒಂದು ಅರ್ಥದಲ್ಲಿ ಸಂಕರ ಸಂಸ್ಕೃತಿಯೂ ಎನಿಸುತ್ತದೆ.

ಪ್ರತಿಯೊಂದು ಸಮುದಾಯಕ್ಕೂ ಅದರದೇ ಆದ ನಂಬಿಕೆ, ಆಚರಣೆ, ಜೀವನಕ್ರಮ ಇರುತ್ತದೆ. ಅದು ಜನಾಂಗೀಯ, ಧಾರ್ಮಿಕ, ಭಾಷಿಕ ಅಥವಾ ಬುಡಕಟ್ಟು ಸಮುದಾಯ ಆಗಿರಬಹುದು. ಈ ಸಮುದಾಯ ತಮ್ಮನ್ನು ತಾವು ಗುರುತಿಸಿಕೊಳ್ಳುವ ತಮ್ಮ ಸ್ವಂತಿಕೆಯನ್ನು ಪ್ರದರ್ಶಿಸುವ, ಆ ಮೂಲಕ ತಮ್ಮ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳುವ ಒಂದು ಪ್ರಕ್ರಿಯೆ ನಡೆದಿರುತ್ತದೆ. ಇದನ್ನು ಜಾನಪದ ವಿದ್ವಾಂಸರು 'ಸಾಂಸ್ಕೃತಿಕ ಅನನ್ಯತೆ' ಎಂದು ವ್ಯಾಖ್ಯಾನ ಮಾಡಿರುವುದು ಕಾಣಬಹುದು. "ಯಾವುದೇ ಒಂದು ಸಂಸ್ಕೃತಿ ಸಮೂಹ, ಮತ್ತೊಂದರಿಂದ ಬೇರೆಯಾಗುವ ವಿಶಿಷ್ಟವಾಗುವ ಲಕ್ಷಣಗಳನ್ನು ದೃಢವಾಗಿ ಹೊಂದಿದ್ದು, ತನ್ನ ಪ್ರತ್ಯೇಕ ಅಸ್ತಿತ್ವವನ್ನು ಪ್ರದರ್ಶಿಸಿದರೆ ಅದು ಆ ಸಮೂಹದ ಸಾಂಸ್ಕೃತಿಕ ಅನನ್ಯತೆ ಆಗುತ್ತದೆ"[೬೩] ಎನ್ನುವುದು ಬುಲಾಯಿ ಹಾಡು ಮತ್ತು ಭುಲಾಯಿ ಪ್ರದರ್ಶನಗಳಿಗೂ ಅನ್ವಯಿಸುತ್ತದೆ. ಕರ್ನಾಟಕದಲ್ಲಿ ಬೇರೆ ಯಾವ ಜಿಲ್ಲೆಯಲ್ಲಿಯೂ ಕಂಡು ಬರದ ಈ ಹಾಡು - ಕಲೆಗಳು ಬೀದರ ಜಿಲ್ಲೆಯಲ್ಲಿ ಮಾತ್ರ ಕಂಡುಬರುತ್ತವೆ. ಅದು ಪ್ರಾದೇಶಿಕ ಸಮುದಾಯದ ಕೆಲವೊಂದು ನಂಬಿಕೆ, ಆಚರಣೆಗಳನ್ನೂ ಒಳಗೊಂಡಿದೆ. ಇಲ್ಲಿ ಸಂಸ್ಕೃತಿ ಕುರಿತಾದ ಡಾ|| ತರೀಕೆರೆಯವರ ಅಭಿಪ್ರಾಯ ಗಮನಿಯವಾಗಿದೆ. "ಇಡೀ ನಾಡಿಗೆ ಏಕರೂಪಿಯಾದ ಒಂದು ಸಂಸ್ಕೃತಿ ಇರುವುದಿಲ್ಲ. ಅದರೊಳಗೆ ಪ್ರಾದೇಶಿಕ, ಜಾತಿಯ, ಧಾರ್ಮಿಕ, ಬುಡಕಟ್ಟಿನ ರೂಪಗಳಿರುತ್ತವೆ. ಭಾರತದಂತಹ ದೇಶದಲ್ಲಿ ಇದು ಸಹಜ. ಇದನ್ನು ಸಂಸ್ಕೃತಿಯ ಬಹುರೂಪಿಗುಣ ಎನ್ನಬಹುದು. ನಾಡಿನ ಈ ಬಹುರೂಪಿ ಸಂಸ್ಕೃತಿಗಳೊಳಗೆ ಬಹುಕಾಲದಿಂದಲೂ ಕೊಡುಕೊಳ್ಳುವಿಕೆ ನಡೆಯುತ್ತ ಬಂದಿದೆ. ನಾಡಿನ ಒಳಗಿನಿಂದ ಮಾತ್ರವಲ್ಲ, ಹೊರಗಿನಿಂದಲೂ ನಡೆದಿದೆ. ಈ ಕೊಡು - ಕೊಳುಗಳಿಗೆ ಅನೇಕ ಚಾರಿತ್ರಿಕ ಕಾರಣಗಳಿವೆ. ಸಾಮಾಜಿಕ, ರಾಜಕೀಯ, ಆರ್ಥಿಕವಾದ ಚಲನೆಗಳು ಕಾರಣವಾಗಿವೆ. ಆದ್ದರಿಂದ "ಶುದ್ಧ ಮೂಲ ಸಂಸ್ಕೃತಿ" ಎಂಬುದು ಇರಲು ಸಾಧ್ಯವಿಲ್ಲ. ಸಂಸ್ಕೃತಿಯೂ ಸದಾ ಸಂಕರರೂಪಿ. ಈ ಸಂಕರವು ಅದರ ಚಲನ ಶೀಲತೆಯ ಸಂಕೇತ ಇದನ್ನು 'ಸಾಂಸ್ಕೃತಿಕ ಬಹುತ್ವ' ಎಂದು ಕರೆಯಬಹುದು"[೬೪] ಎಂಬ ಹೇಳಿಕೆಯಂತೆ 'ಭುಲಾಯಿ ಸಂಕರ ಸಂಸ್ಕೃತಿ' ಎಂದು ಗುರುತಿಸಬಹುದು. ಯಾಕೆಂದರೆ "ಯಾವುದೇ ಜಾತಿ, ಮತ, ಧರ್ಮ, ಬಾಷಿಕ ಸಮುದಾಯವು ತನ್ನದೇ ಆದ ಮೂಲ ಬೆರಕೆಯಿಲ್ಲದ ಧರ್ಮ, ಭಾಷೆಯಿದೆಯೆಂದು ಸಾಧಿಸುವಂತಿಲ್ಲ. ಎಲ್ಲ ಸಂಸ್ಕೃತಿಗಳೂ ಸಂಕರ ಶೀಲವಾದವು"[೬೫] ಎಂಬ ಚಿಂತಕರ ಅಭಿಪ್ರಾಯವೂ ಗಮನಾರ್ಹವಾಗಿದೆ. ಹಿಂದೆ 'ಬುಲಾಯಿ ಮೂಲ ಗುರುತಿಸುವಲ್ಲಿ ಇದು ಕನ್ನಡ, ಮುಸ್ಲಿಂ ಹಾಗೂ ಮರಾಠಿ ಸಂಸ್ಕೃತಿಗಳ ಸಂಕರದಿಂದ ಮುಪ್ಪರಿಗೊಂಡಿರಬಹುದೆಂದು ಊಹಿಸಲಾಗಿದೆ. ಹೀಗಾಗಿ **'ಭುಲಾಯಿ ಸಂಕರ ಸಂಸ್ಕೃತಿ'** ಯೆಂದು ನಾವಿಲ್ಲಿ ಹೇಳಬಹುದಾಗಿದೆ.

ಒಂದೊಂದು ಪ್ರದೇಶಕ್ಕೆ, ಸಮುದಾಯಕ್ಕೆ ಮಾತ್ರ ವಿಶಿಷ್ಟವಾಗಿರುವ 'ಸಂಸ್ಕೃತಿ' ಇರುತ್ತದೆಂಬುದನ್ನು ಗಮನಿಸಿದ **ಫ್ರಾನ್ಜ್ ಬೋಯಸ್** ಎಂಬ ಮಾನವ ಶಾಸ್ತ್ರಜ್ಞನು "ಮಾನವ

ಸಮಾಜ ಇರುವ ಕಡೆಯೆಲ್ಲ ಸಂಸ್ಕೃತಿ ಇರುತ್ತದೆ. ಯಾಕೆಂದರೆ ಸಂಸ್ಕೃತಿ ಎಂಬುದು ಮನುಷ್ಯ ಸಮಾಜದ ಮುಖ್ಯ ಲಕ್ಷಣ. ಆದರೆ ಈ ಸಂಸ್ಕೃತಿಯು ಏಕರೂಪಿಯಾಗಿರುವುದಿಲ್ಲ. ಅದರ ವಿನ್ಯಾಸಗಳು ವಿಭಿನ್ನವಾಗಿರುತ್ತವೆ. ಒಂದೊಂದು ಪ್ರದೇಶಕ್ಕೂ, ಜನಾಂಗಕ್ಕೂ ಅದರದೇ ಆದ ವಿಶಿಷ್ಟತೆ ಇರುತ್ತದೆ. ಇದೊಂದು ವೈರುಧ್ಯವೂ ಹೌದು, ವಾಸ್ತವವೂ ಹೌದು. ಇದನ್ನು ವಿಶಿಷ್ಟವಾದ ಸಂಸ್ಕೃತಿ ಎನ್ನಬಹುದು.[೬೬] ಎಂಬ ಪರಿಕಲ್ಪನೆಯನ್ನು ಮಂಡಿಸಿದನು. ಇದರ ಪ್ರೇರಣೆಯಿಂದ ಬರಗೂರು ರಾಮಚಂದ್ರಪ್ಪನವರು 'ಉಪಸಂಸ್ಕೃತಿ' ಪರಿಕಲ್ಪನೆ ರೂಪಿಸಿರುವುದನ್ನು ಕಾಣಬಹುದು. ಅವರ ಪ್ರಕಾರ "ಮನುಷ್ಯ ಸಂಸ್ಕೃತಿಯು ರೂಪುಗೊಳ್ಳುವಾಗ ವಿವಿಧ ಕಾರಣಗಳಿಂದ ವಿಂಗಡಣೆಗೊಳಗಾದ ಮನುಷ್ಯ ಸಮಾಜ ತನ್ನ ವಿಭಜಿತ ನೆಲೆಗಳಿಗನುಗುಣವಾಗಿ ವಿಭಿನ್ನ ಸಂಸ್ಕೃತಿಗಳನ್ನು ರೂಪಿಸಿಕೊಳ್ಳುತ್ತ ಬಂದಿದೆ. ಇದುವೇ 'ಉಪಸಂಸ್ಕೃತಿ' ಆದರೆ ಅಧಿಕಾರಸ್ಥ ಸಂಸ್ಕೃತಿಯು ತಾನು ರೂಪಿಸಿದ್ದೆ ನಿಜವಾದ ಸಂಸ್ಕೃತಿ ಎಂದು ಹೇಳುತ್ತದೆ. ಪ್ರಧಾನ ಸಂಸ್ಕೃತಿಯು ಯಾವುದೇ ಒಂದು ದೇಶ-ಪ್ರದೇಶದ ಜೀವನ ವಿಧಾನವಾಗಿರುವಾಗ ಇದಕ್ಕೆ ಹೊರತಾಗಿ ಅಥವಾ ಪ್ರಧಾನ ನೆಲೆಯಿಂದ ನಿರ್ಲಕ್ಷಿತವಾಗಿ ಬದುಕುತ್ತಿರುವ ಸಂಸ್ಕೃತಿಗಳು 'ಉಪಸಂಸ್ಕೃತಿ' ಪರಿಕಲ್ಪನೆಗೆ ಬರುತ್ತವೆ[೬೭] ಎಂಬ ಹಿನ್ನೆಲೆಯಲ್ಲಿ ನೋಡಿದಾಗ 'ಬುಲಾಯಿ' ಬೀದರ ಜಿಲ್ಲೆಯಲ್ಲಿ ವಿಭಜಿತ ನೆಲೆಗಳಿಗನುಗುಣವಾಗಿ ವಿಭಿನ್ನ ಸಂಸ್ಕೃತಿಗಳ ಹಿನ್ನೆಲೆಯಲ್ಲಿ ರೂಪುಗೊಳ್ಳುತ್ತ ಬಂದಿರಬಹುದೆಂದೂ ಊಹಿಸಬಹುದು. ಕರ್ನಾಟಕ ಸಂಸ್ಕೃತಿಯ ಹೊರತಾಗಿ ಬದುಕಿರುವ ಸಂಸ್ಕೃತಿಯಾಗಿರುವುದರಿಂದ ಇದನ್ನು 'ಉಪಸಂಸ್ಕೃತಿ' ಎಂದೂ ಕರೆಯುವ ಸಾಧ್ಯತೆಗಳುಂಟು.

ಹೀಗಾಗಿ 'ಬುಲಾಯಿ ಸಂಸ್ಕೃತಿ' ಯೆಂದರೆ ಒಂದರ್ಥದಲ್ಲಿ ಬೀದರ ಜಿಲ್ಲೆಯ ನಾಗರ ಪಂಚಮಿ ಹಬ್ಬದ ಸಂಸ್ಕೃತಿಯೇ ಎನ್ನಬಹುದು. ಇಲ್ಲಿಯ ನಾಗರ ಪಂಚಮಿಯ ಆಚರಣೆ, ನಂಬಿಕೆಗಳೂ ತುಂಬಾ ವಿಶಿಷ್ಟವಾಗಿವೆ. ಕರ್ನಾಟಕದ ಇತರ ಬೇರಾವ ಜಿಲ್ಲೆಗಳಲ್ಲಿ ಕಂಡುಬರದ ವಿಶೇಷ ಆಚರಣೆಗಳನ್ನು ನಾವು ಬೀದರ ಜಿಲ್ಲೆಯ ನಾಗರ ಪಂಚಮಿಯಲ್ಲಿ ಕಾಣಬಹುದು.

ನಾಗರ ಪಂಚಮಿ:

ಆಷಾಢ ಕಳೆದ ಬಳಿಕ ಶ್ರಾವಣ ಮಾಸದಲ್ಲಿ ಕಾಲಿಡುವ ಮೊದಲ ಹಬ್ಬ ನಾಗರ ಪಂಚಮಿ. ಶ್ರಾವಣ ಮಾಸದ ತುಂತುರು ಹನಿಯಿಂದ ಭೂಮಿತಾಯಿ ತಂಪಾಗಿ, ಮೈತುಂಬಾ ಹಚ್ಚ ಹಸಿರನ್ನುಟ್ಟು ಮದುವಣಗಿತ್ತಿಯಂತೆ ಸುಂದರವಾಗಿ ಕಾಣುವ ದಿವ್ಯ ಸಂದರ್ಭದಲ್ಲಿ ಈ ಹಬ್ಬ ಬರುತ್ತದೆ. "ಮೂರನೆಯ ಮಣ್ಣು ಪೂಜೆಯ ಹೆಸರಿನಲ್ಲಿ ವ್ಯಕ್ತವಾಗುವ ದೇವತೆ ಹುತಪ್ಪ. ಶ್ರಾವಣ ನಾಗಪ್ಪನ ಪೂಜೆಯ ಕಾಲ ದ್ರಾವಿಡರಿಂದ ಪ್ರಾರಂಭವಾದ ಪದ್ಧತಿ ಇದಾಗಿದ್ದರೂ ಆರ್ಯ ದ್ರಾವಿಡ ಸಂಸ್ಕೃತಿ ಸಂಕರಗೊಂಡ ಮೇಲೆ ಈ ನಾಗಪೂಜೆ ಸಾರ್ವತ್ರಿಕವೆನಿಸಿತು"[೬೮] ಎಂಬ ಅಭಿಪ್ರಾಯ ನಾಗರ ಪಂಚಮಿ ಎಲ್ಲಾ ಕಡೆಯೂ ಆಚರಿಸುವ ಹಬ್ಬ ಎನ್ನಬಹುದು. ಮಳೆಯಿಂದ ಭೂಮಿಯೆಲ್ಲಾ ಹಸಿರಿನಿಂದ ಸಮೃದ್ಧಗೊಂಡಿರುತ್ತದೆ. ಈ ಕಾಲದಲ್ಲಿ ನಾಗಗಳು

ಹೆಚ್ಚಾಗಿ ಅಡ್ಡಾಡುವುದು ಕಂಡುಬರುತ್ತದೆ. ನಿಸರ್ಗ, ಪ್ರಾಣಿಗಳ, ಪೂಜಕರಾದ ಜನಪದರು ನಾಗಪೂಜೆಯನ್ನು ಈ ಸಂದರ್ಭದಲ್ಲಿ ಹಲವು ಕಾರಣಗಳಿಂದು ಕೈಗೊಂಡಿರಬಹುದು. ಈ ಹಬ್ಬದಾಚರಣೆಯ ಹಿನ್ನೆಲೆಯಲ್ಲಿ ಪವಿತ್ರವಾದ ಅರ್ಥ. ಶುಭದ ಸಂಕೇತವಿರುವುದು ಕಂಡುಬರುತ್ತದೆ. ಕುಟುಂಬದ ಅಭಿವೃದ್ಧಿಗಾಗಿ, ಸಂತಾನ ಫಲಾಪೇಕ್ಷೆಗಾಗಿಯೂ ನಾಗಾರಾಧನೆ ಕಂಡುಬರುತ್ತದೆ. ಪ್ರತಿಷ್ಠಾಪಿಸಿದ ಕಲ್ಲುನಾಗನಿಗೆ ಹಾಲು ಎರೆದು ಪೂಜಿಸುವವರು ಕೆಲವರಾದರೆ, ನಾಗರಹಾವು ಹುತ್ತದಲ್ಲಿರುತ್ತದೆಂದು ಭ್ರಮಿಸಿ ಅಲ್ಲಿ ಹಾಲು ಎರೆದು ಪೂಜಿಸುವವರು ಇನ್ನೂ ಕೆಲವರು. ಒಂಟಿನಾಗ, ಜೋಡಿನಾಗ, ದುಂಡನೆ ಕಲ್ಲು ರೂಪದ ಹಿರೋಡ್ಯಾ ಮುಂತಾದ ರೂಪಗಳಲ್ಲಿ ನಾಗಪೂಜೆಯು ಕಂಡುಬರುತ್ತದೆ.

ನಾಗರ ಪಂಚಮಿಯ ಹಬ್ಬದ ಆಚರಣೆಗಳಿಗಿಂತ ಮೊದಲು ನಾಗ-ನಾಗಪೂಜೆಗಳ ಹಿನ್ನೆಲೆ ಕುರಿತಾದ ವಿದ್ವಾಂಸರ ಅಭಿಪ್ರಾಯಗಳನ್ನು ಗಮನಿಸುವುದು ಅಧ್ಯಯನಕ್ಕೆ ಅನುಕೂಲವಾಗಬಹುದು.

ನಾಗ ಎಂದರೇನು ?

'ನಾಗ' ಎಂದರೆ ಮೊದಲಿಗ, ಮೂಲನಿವಾಸಿ ಎಂದರ್ಥ, ನಾಗ ಜನಾಂಗ ಭಾರತದ ಮೂಲ ಜನಾಂಗವಾಗಿದ್ದು, ದ್ರಾವಿಡ - ಆರ್ಯರಿಗಿಂತ ಪೂರ್ವದಲ್ಲಿ ಭಾರತ ತುಂಬಾ ವ್ಯಾಪಿಸಿತ್ತು ಎಂಬುದು ವಿದ್ವಾಂಸರ ಮತ ನಾಗರ ಶಬ್ದದ ಮೂಲ ಕುರಿತು ಡಾ॥ ಬೋಜರಾಜ ಪಾಟೀಲರು "ನಾಗರ ಖಂಡ-೭೦ ಒಂದು ಅಧ್ಯಯನ" ಕೃತಿಯನ್ನು ಹೊರತಂದಿದ್ದಾರೆ. ಅದರಲ್ಲಿ "ನಾಗರು ಭಾರತದ ಗುಡ್ಡಗಾಡು ಜನಾಂಗವಾಗಿದ್ದು ಈ ನೆಲದ ಮೂಲ ನಿವಾಸಿಗಳೆಂದು" [೨೯] ಸ್ಪಷ್ಟಪಡಿಸಿದ್ದು ಕಂಡುಬರುತ್ತದೆ.

"ನಾಗರ'ವು ಸಂಸ್ಕೃತ ಶಬ್ದವಾಗಿರದೆ ಅದು ಅನಾರ್ಯ ಭಾಷೆಯ ನಾಗರ್ ಎಂಬುದರ ರೂಪಭೇದವು ಇಲ್ಲವೇ ಆ ಬಹುವಚನ ಷಷ್ಠಿ ವಿಭಕ್ತಿಯ ರೂಪವೋ ಆಗಿರಬೇಕು. ವೇದಗಳಲ್ಲಿ ಸರ್ಪಾರ್ಥದಲ್ಲಿ ನಾಗ ಎಂಬ ಪದವಿಲ್ಲವಿರುವುದರಿಂದ ಅದನ್ನು ಸಂಸ್ಕೃತದಲ್ಲಿ ಜನಾಂಗವಾಚಿಯಾಗಿ ಸ್ವೀಕರಿಸಿರಬಹುದೆಂದು" [೨೯] ದಿವಂಗತ ಗೋವಿಂದ ಪೈಯವರು 'ನಾಗರ' ಶಬ್ದ ಕುರಿತು ಅದೊಂದು ಜನಾಂಗವೆಂದು ಅಭಿಪ್ರಾಯಪಟ್ಟಿರುವುದು ಸಮಂಜಸವೆನಿಸುತ್ತದೆ.

ಪ್ರಸಿದ್ಧ ವಿದ್ವಾಂಸರಾದ ವಿಲ್ ಡ್ಯೂರಾಂಟರು "ಸಿಂಧೂ ನದಿ ಸಂಸ್ಕೃತಿಯಲ್ಲಿ ಸಿಕ್ಕ ಜೋಡು ಹೆಡೆಗಳ ಸರ್ಪದ ಮುದ್ರೆಯನ್ನು ನಾಗ ಜನಾಂಗದ ಸಂಕೇತ" [೨೧] ವೆಂದು ಅಭಿಪ್ರಾಯ ಪಟ್ಟಿರುವುದು ಗಮನಾರ್ಹವಾಗಿದೆ.

ಬಾಗಲಕೋಟೆ ತಾಲೂಕಿನ ಭೈರನ ಹಟ್ಟಿಯ ಕ್ರಿ.ಶ. ೯೯೦ರ ಶಾಸನದಲ್ಲಿ "ಪುಲಿಕಾಲ ಸಿಂದನು ನಾಗವಂಶಕ್ಕೆ ಸೇರಿದವನೆಂದು ಅವನ ಧ್ವಜದಲ್ಲಿ ಹೆಡೆ ತೆಗೆದ ನಾಗರ ಚಿಹ್ನೆ ಇತ್ತೆಂದು ವಿವರಿಸಲಾಗಿದೆ." [೨೧]

ನಾಗರು ಸರ್ಪ - ಹಾವುಗಳು ಎನ್ನುವ ವಾದಕ್ಕೆ ಪುರಾಣ ಮೂಲ ಕಲ್ಪನೆಯೇ ಕಾರಣವಾಗಿರಬಹುದು. ಪುರಾಣ ಕಲ್ಪನೆಗೆ ಕಥೆಗಳೇ ಮೂಲಾಧಾರವಾಗಿವೆ. ಮಹಾಭಾರತದ ಆಸ್ತಿಕ ಪರ್ವದಲ್ಲಿ ಕಶ್ಯಪ ಋಷಿಗೆ ಸಂಬಂಧಿಸಿದ ಕಥೆಯಿದೆ. "ಕಶ್ಯಪನ ಹದಿಮೂರು ಜನ ಪತ್ನಿಯರಲ್ಲಿ ಕದ್ರು ಮತ್ತು ವಿನುತೆಯರೆಂಬುವರಿಬ್ಬರು. ಕದ್ರು ಸರ್ಪಗಳ ತಾಯಿ. ಈಕೆಯ ಹೊಟ್ಟೆಯಿಂದ ನಾಗರು ಜನಿಸಿದರೆ, ವಿನುತೆಯಳಿಂದ ಅರುಣ ಮತ್ತು ಗರುಡ ಎಂಬ ಇಬ್ಬರು ಮಕ್ಕಳು ಜನಿಸಿದರು. ಕದ್ರುವಿನ ಮಕ್ಕಳು ಸರ್ಪರೂಪವನ್ನು ಹೊಂದಿದ್ದರು. ಇವರೇ ನಾಗವಂಶದ ಮೂಲ ಪುರುಷರು. ಇವರಲ್ಲಿ ಶೇಷ, ವಾಸುಕಿ, ತಕ್ಷಕ, ಧನಂಜಯ, ಕಾರ್ಕೋಟಕ ಮೊದಲಾದವರಿಂದ ನಾಗಕುಲಗಳು ಉದಯಿಸಿದವೆಂದು ವಿವರಿಸಲಾಗಿದೆ."[೨೩] ಈ ಸರ್ಪರೂಪದ ನಾಗರು ತಮಗೆ ಬೇಕೆನಿಸಿದಾಗ ಮಾನವ ರೂಪವಾಗಿ ಸಂಚರಿಸುತ್ತಿದ್ದರೆಂದು ತುಳು ಜನಪದ ಸಾಹಿತ್ಯದ 'ನಾಗರಾಜ-ನಾಗಕನ್ಯಂ' ಎಂಬ ಹಾಡುಗಳಲ್ಲಿ ವರ್ಣಿಸಲಾಗಿದೆ.[೨೪]

ನಾಗರ ಕುಲಮೂಲದ ಕುರಿತು ಕಶ್ಯಪ ಋಷಿಯ ಇನ್ನೊಂದು ಕಥೆ ಪುರಾಣದಲ್ಲಿ ಪ್ರಚಲಿತವಿದೆ. "ದಕ್ಷನ ಹದಿಮೂರು ಜನ ಪುತ್ರಿಯರನ್ನು ಕಶ್ಯಪ ಋಷಿ ಮದುವೆಯಾಗಿದ್ದ, ಅವರಲ್ಲಿ 'ಸುರಸೆ' ಎಂಬುವಳ ಹೊಟ್ಟೆಯಲ್ಲಿ ಜನಿಸಿದ ಮಕ್ಕಳಿಂದ ನಾಗರ ಎರಡು ಕುಲಗಳು ಪ್ರಾರಂಭವಾದವು. ಮೊದಲಯದು ಯಕ್ಷರು, ಎರಡನೆಯದು ನಾಗರು[೨೫] ಎಂದು ವಿವರಿಸಲಾಗಿದೆ.

ಮೇಲಿನ ಪುರಾಣ ಕಥೆಯ ಕಲ್ಪನೆಯಂತೆ ಕದ್ರುವಿನ ಮಕ್ಕಳು ಭೂಲೋಕಕ್ಕೆ ಬಂದರೆ ಸುರಸೆಯ ಮಕ್ಕಳು ದೇವಲೋಕಕ್ಕೆ ಹೋದರೆಂದು ಪುರಾಣಗಳು ವಿವರಿಸುವುದು ಗಮನಾರ್ಹವಾಗಿದೆ.

ಈ ರೀತಿಯಾಗ 'ನಾಗ' ಕುರಿತು ನಾಗರು ಒಂದು ಜನಾಂಗ ಎನ್ನುವ ಚಾರಿತ್ರಿಕ ಮೂಲ ಅಭಿಪ್ರಾಯ ಹಾಗೂ ನಾಗ ಎಂದರೆ ಸರ್ಪ, ಹಾವು ಎನ್ನುವ ಪೌರಾಣಿಕ ಮೂಲ ವಿದ್ವಾಂಸರ ವಾದಗಳು ಕಂಡುಬರುತ್ತವೆ. ನಾಗ ಎಂದರೆ ಸರ್ಪ ಅಥವಾ ಹಾವು ಎಂಬ ವಾದವೇ ನಾಗಪೂಜೆಗೆ ಪ್ರೇರಣೆಯಾಗಿರಬಹುದು.

ನಾಗಪೂಜೆ ಮೂಲ:

ಭಾರತೀಯ ಸಂಸ್ಕೃತಿಯಲ್ಲಿ ಹಾಗೂ ವಿಶ್ವದ ಅನೇಕ ಪ್ರಾಚೀನ ಸಂಸ್ಕೃತಿಗಳಲ್ಲಿ ನಾಗ ಅಥವಾ ಸರ್ಪಗಳ ಕುರಿತ ಕಥೆ ವ್ಯಾಖ್ಯಾನಗಳನ್ನು ಕಾಣುತ್ತೇವೆ. ದೇವರನ್ನು ಸರ್ವಭೂತಾಂತರಾತ್ಮನೆಂದು ಹಿಂದಿನಿಂದಿಲೂ ನಂಬಿದ್ದು ಕಂಡು ಬರುತ್ತದೆ. ಹಾಗಾಗಿ ಕೆಲವು ಪ್ರಾಣಿ-ಪಕ್ಷಿ-ಮರ-ನದಿಗಳನ್ನು ಪ್ರಕೃತಿಯ ದಿವ್ಯ ಸಂಕೇತಗಳೆಂದು ಪರಿಭಾವಿಸಿ, ಪೂಜಿಸಿದ್ದು ಪುರಾಣ-ಇತಿಹಾಸಗಳಿಂದ ತಿಳಿಯುತ್ತೇವೆ. ಉದಾ: ಆನೆಯ ಸೊಂಡಲಿನ ಗಣಪ, ಕುದುರೆಯ ಮುಖದ ಹಯಗ್ರೀವ, ವರಾಹ ಮುಖದ ವರಾಹಾವತಾರ ಮುಂತಾದ ದೇವತಾ ಮೂರ್ತಿಗಳು, ಶೇಷ, ಆನೆ, ಮೀನು, ಆಮೆ, ಸಿಂಹ, ಇಲಿ, ನಂದಿ, ಗರುಡ, ನವಿಲು, ಹಂಸ ಮೊದಲಾದ

ಪ್ರಾಣಿ-ಪಕ್ಷಿಗಳು ದೇವತಾ ಸಾನಿಧ್ಯದಲ್ಲಿ ಅವಕಾಶ ಪಡೆದುಕೊಂಡಿದ್ದು, ಇವುಗಳಲ್ಲಿ ಕೆಲವು ಇಂದಿಗೂ ಪೂಜೆಗೊಳ್ಳುತ್ತಿರುವುದನ್ನು ನೋಡುತ್ತೇವೆ.

ಪ್ರಾಣಿ ಪಕ್ಷಿಗಳಲ್ಲಿ ಇತರ ದೇಶದವರು ಕೂಡಾ ಪೂಜನೀಯ ಭಾವನೆ ಹೊಂದಿರುವುದನ್ನು ಕಾಣಬಹುದು. ಆಮೆಗಳು ಈಜಿಪ್ಟ್‌ನಲ್ಲಿ ಪವಿತ್ರ ಸ್ಥಾನ ಪಡೆದಿವೆ. ರೆಕ್ಕೆಗಳುಳ್ಳ ಸರ್ಪಗಳು ಚೀನಾದಲ್ಲಿ ಸಮೃದ್ಧಿಯ ಸಂಕೇತಗಳು, ಮೀನು ಜಪಾನಿನಲ್ಲಿ ಪವಿತ್ರತೆ ಮತ್ತು ವೃದ್ಧಿಯ ಸಂಕೇತ. ಜಪಾನ ಮತ್ತು ಚೀನಾದಲ್ಲಿ ಸರ್ಪಪೂಜಾ ಪದ್ಧತಿ ಬಹು ಹಿಂದಿನಿಂದಲೂ ಇದ್ದದ್ದು ಅಧ್ಯಯನದಿಂದ ತಿಳಿದುಬರುತ್ತದೆ.

ನಮ್ಮ ದೇಶದಲ್ಲಿ ಆದಿಕಾಲದಿಂದಲೇ ನಾಗಪೂಜೆ ನಡೆದು ಬಂದಿದೆ ಎಂಬುದು ವಿದ್ವಾಂಸರ ಅಭಿಮತವಾಗಿದೆ. ಈ ಕುರಿತು "ಪುರಾಣ, ಕಾವ್ಯ, ಮಹಾಕಾವ್ಯ ಮತ್ತು ಜನಪದಗಳಲ್ಲಿ ನಾಗ-ಗರುಡರಿಗೆ ಸಂಬಂಧಿಸಿದ ಹಲವಾರು ಉಲ್ಲೇಖಗಳಿವೆ. ಋಗ್ವೇದದ ಪ್ರಧಾನ ದೈವತ ಸರ್ಪ ಎನ್ನಲಾಗಿದೆ. ಹರಪ್ಪ ಸಂಸ್ಕೃತಿಯಲ್ಲೂ ನಾಗಗಳ ಉಲ್ಲೇಖವಿದೆ. ಜೈನ, ಭೌದ್ಧ, ಶೈವ, ವೈಷ್ಣವ, ಸೌರಗಣಪತ್ಯ, ಶಾಕ್ತ ಇತ್ಯಾದಿ ಮತಗಳಲ್ಲಿಯೂ ನಾಗ-ಗರುಡರಿಗೆ ಪ್ರಾಧಾನ್ಯವಿದೆ" [೨೭] ಎಂಬ ಅಭಿಪ್ರಾಯ ಕಂಡುಬರುತ್ತದೆ. ನಾಗನು ವಿಷ್ಣುವಿಗೆ ತಲ್ಪ, ಶಿವನಿಗೆ ಕಂಠಾಭರಣ, ಗಣಪತಿಗೆ ಉದರಬಂಧ, ಸುಬ್ರಹ್ಮಣ್ಯನ ಅನನ್ಯ ಸ್ವರೂಪ, ಭೂಭಾರವನ್ನೇ ಹೊತ್ತ ಆದಿಶೇಷ, ಸಂತಾನಭಿವೃದ್ಧಿ, ಮುಟ್ಟು ನಾಗದೋಷ ನಿವಾರಕ ಹಿರೋಡ್ಯಾ, ಮುಂತಾದ ರೂಪದಲ್ಲಿದ್ದುದ್ದು ಕಂಡುಬರುತ್ತದೆ.

ಶಂ.ಭಾ. ಜೋಶಿಯವರು ತಮ್ಮ 'ನಾಗ ಪ್ರತಿಮೆಯ ವಿಚಾರ' ಎಂಬ ಕೃತಿಯಲ್ಲಿ ಈ ದೇಶಕ್ಕೆ ಭರತಖಂಡವೆಂದು ಕರೆಯುವುದಕ್ಕಿಂತ ಪೂರ್ವದಲ್ಲಿ **'ನಾಗರಖಂಡ'** ವೆಂದೇ ಹೆಸರಿತ್ತೆನ್ನುತ್ತಾರೆ. ಬಲಿಚಕ್ರವರ್ತಿಯ ಶಿರದ ಮೇಲೆ ಮೂರನೆಯ ಪಾದವಿಟ್ಟು ವಿಷ್ಣು ಪಾತಾಳ ಲೋಕಕ್ಕೆ ಒತ್ತಿದ ಪ್ರಸಂಗವನ್ನು "Planted his foot on Bali's head and forced him down to patala (The neither world and abode of the Nagas or serpeuts) which on account of certion virtues was left in his possession" [೨೭] ಎಂದು ಬರೆದದ್ದು ಗಮನಾರ್ಹವಾದುದು. "ಇದು ದಕ್ಷಿಣ ಭಾರತವೇ ಪಾತಾಳಲೋಕ, ಈ ಪಾತಾಳ ಲೋಕಕ್ಕೆ ನಾಗಲೋಕವೆಂದು ಕರೆದಿರುವುದು ಸ್ಪಷ್ಟವಾಗುತ್ತದೆ." [೨೮] ಎಂಬ ಪ್ರೊ. ಹಿರೇಮಠರ ಅಭಿಪ್ರಾಯ ಸಮಂಜಸವೆನಿಸುತ್ತದೆ.

ಅಧ್ಯಯನದ ಅನುಕೂಲಕ್ಕಾಗಿ ದಕ್ಷಿಣ ಭಾರತದ ಕರಾವಳಿ ಹಾಗೂ ಬೀದರ ಜಿಲ್ಲೆಯ 'ನಾಗಪೂಜೆ'ಯ ಮೂಲಗಳನ್ನು ಚರ್ಚಿಸೋಣ.

ದಕ್ಷಿಣ ಭಾರತದ ಹಲವು ನೆಲೆಗಳಲ್ಲಿ 'ನಾಗ'ನನ್ನು ದೈವವಾಗಿ ಪೂಜಿಸುವ ಪರಿಪಾಠ ತುಂಬಾ ಪ್ರಾಚೀನವಾದುದು. ಅದರಲ್ಲೂ ಪಶ್ಚಿಮ ಘಟ್ಟದಿಂದ ಕರಾವಳಿಯವರೆಗಿನ ದಟ್ಟಾರಣ್ಯ ಪ್ರದೇಶ ಈ ನಾಗಾರಾಧನೆಯ ಮೂಲ ಭೂಮಿ ಎಂಬುದು ವಿದ್ವಾಂಸರ ಮತ. ನಾನಾ

ವಿಧವಾದ ಸರ್ಪಸಮೂಹಗಳಿಂದ ತುಂಬಿಹೋಗಿದ್ದ ಈ ಕಾಡುಗಳು ಅಲ್ಲಿನ ಮೂಲ ನಿವಾಸಿಗಳ ತಾಣವೂ ಆಗಿದ್ದ ಕಾರಣ ಈ ಸರ್ಪಗಳ ಬಗೆಗಿದ್ದ ಮೂಲ ಭಯ ಹಾಗೂ ವಿಸ್ಮಯ ನಾಗಾರಾಧನೆಗೆ ಕಾರಣವಾಗಿರಬೇಕೆಂಬುದು ಹಲವು ವಿದ್ವಾಂಸರ ಅಭಿಪ್ರಾಯ ಅಲ್ಲದೆ ಇಲ್ಲಿನ ಹಲವು ಬುಡಕಟ್ಟುಗಳ ದೃಷ್ಟಿಯಲ್ಲಿ ಸರ್ಪ ಫಲೋತ್ಪತ್ತಿಯ ಸಂಕೇತವಾಗಿ ಕೂಡ ಆರಾಧನೆಗೆ ಒಳಪಟ್ಟಿದೆ. ದಕ್ಷಿಣ ಕನ್ನಡದ ಪ್ರಸಿದ್ಧ ವಿದ್ವಾಂಸರಾದ ದಿ.ಎಂ. ಗೋವಿಂದ ಪೈ ಅವರು "ಇಲ್ಲಿನ ದಕ್ಷಿಣ-ಉತ್ತರ ಕನ್ನಡ ಕರಾವಳಿ ಪ್ರದೇಶಕ್ಕೆ 'ನಾಗರ ಖಂಡ'ವೆಂದು ಹೆಸರಿತ್ತಲ್ಲದೆ ಇಲ್ಲಿ 'ನಾಗ' ರೆಂಬ ಆದಿವಾಸಿಗಳು ವಾಸಿಸುತ್ತಿದ್ದರು. **ಸರ್ಪ** ಕುಲ ಲಾಂಛನವಾಗಿದ್ದ. ಈ ಜನರಲ್ಲಿ ಸರ್ಪಾರಾಧನೆ ಒಂದು ಸ್ಥಳೀಯ ಮತಾಚರಣೆಯಾಗಿ ಬಳಕೆಯಾಗುತ್ತಿದ್ದಿರಬೇಕು"-[೭೯] ಎಂದು ಹೇಳುತ್ತಾರೆ.

ಕರಾವಳಿಯ ಖ್ಯಾತ ಅರಸು ಮನೆತನಗಳಲ್ಲಿ ಒಂದಾದ 'ಅಳುಪ' ಎನ್ನುವ ಮಾತು ಶೇಷನಿಗೆ ಪರ್ಯಾಯ ಪದವಾದ 'ಅಲುಕ' ಎನ್ನುವುದರ ತಧ್ಭವ ಆಗಿರುವ ಸಾಧ್ಯತೆಯಿದೆ ಎಂಬುದು ವಿದ್ವಾಂಸರ ಅಭಿಪ್ರಾಯ ಶ್ರೀ ಸೋಮ ವಂಶದ ಅಳುಪ ದೊರೆಗಳ ಶಿಲಾಶಾಸನ ಒಂದರಲ್ಲಿ ಮೇಲ್ಗಡೆ ಸುರುಳಿ ಹಾಕಿ ಕುಳಿತು ಹೆಡೆ ಬಿಚ್ಚಿದ ಹಾವಿನ ನಕ್ಷೆ ಇದೆ. ಪ್ರೊ. ಕ.ವೆಂ. ರಾಜಗೋಪಾಲ ಅವರು "ನಾಗನ ಪ್ರಾಚೀನತೆಯನ್ನು ಅರಸಲು ಬನವಾಸೆಯ ಪಾಕೃತ ಶಿಲಾಶಾಸನವೊಂದರ ಮೊರೆ ಹೋಗುತ್ತಾರೆ 'ಮಹಾಭೋಜ ನಾಗಸಿರಿ-ನಟಕ' ಇವರ ಸಂಬಂಧವನ್ನು ಕ್ರಿ.ಶ. ಮೂರನೆಯ ಶತಮಾನದ ಆ ಶಾಸನದಲ್ಲಿ ಕಾಣಬಹುದಾಗಿದೆ ಹಾಗೂ ಆ ಶಿಲ್ಪದ ಮಾದರಿಯೂ ಅದೇ" [೮೦] ಎಂದು ಅಭಿಪ್ರಾಯಪಡುತ್ತಾರೆ. ನಾಗಸಿರಿಯು ಒಂದು ತಟಾಕವನ್ನು ಕಟ್ಟಿಸಿದುದಲ್ಲದೆ ಬೌದ್ಧವಿಹಾರಗಳನ್ನು ಕಟ್ಟಿಸಿ ಈ ನಾಗ ಪ್ರತಿಮೆಯನ್ನು ಪ್ರತಿಷ್ಠೆ ಮಾಡಲು ಕಾರಣಳಾಗುತ್ತಾಳೆ. ಇಲ್ಲಿಯ ನಟಕನು ಈ ನಾಗನನ್ನು ಮಾಡಿದವನೂ ಹೌದು. ಈ ನಟಕ ನರ್ತಕ ಎಂದೂ ಗುರುತುಮಾಡಲಾಗಿದೆ. ಅಲ್ಲದೆ ಇಲ್ಲಿಯ ವಿಷಯದಲ್ಲಿ ಬನವಾಸಿಯ ನಾಗಸಿರಿಯ ಸಂಬಂಧವು ಅರ್ಥಪೂರ್ಣವಾದುದು. ಈ ಶಾಸನವು ಸೂಚಿಸುವಂತೆ ಇದೊಂದು ಬೌದ್ಧ ತಾಂತ್ರಿಕ ಸಂಬಂಧದ ಆಚರಣೆಯಾಗಿದ್ದ ಸನ್ನತಿ (ಗುಲಬರ್ಗಾ ಜಿಲ್ಲೆ) ಎಂಬಲ್ಲಿ ದೊರೆತಿರುವ ನಾಗಪ್ರತಿಮೆಯೂ ಬನವಾಸಿ ಪ್ರತಿಮೆಯ ಆಶಯದ್ದೇ ಆಗಿರುವುದಲ್ಲದೆ ಅದರ ಬೌದ್ಧ ಸಂಬಂಧವು ಸ್ಪಷ್ಟವಾಗಿದೆ ಎಂಬುದು ಅವರ ವಾದ.

ಕರಾವಳಿ ಪ್ರದೇಶದ ನಾಗಾರಾಧನೆಯನ್ನು ಕುರಿತು ವಿಶೇಷ ಅಧ್ಯಯನ ಮಾಡಿರುವ ಶ್ರೀ ಎ.ವಿ. ನಾವಡ ಅವರು ಅಲ್ಲಿಯ ಇತರೆ ದೈವಗಳೊಂದಿಗೆ ನಾಗನ ಸಂಬಂಧವನ್ನು ಹೀಗೆ ನಿರೂಪಿಸುತ್ತಾರೆ.

"ಕರಾವಳಿಯ ಉಪಾಸನಾಪಂಥದ ಇತಿಹಾಸವನ್ನು ಗಮನಿಸಿದಾಗ ಆ ಪ್ರದೇಶದ ಆದಿಮೂಲ ದೈವ ನಾಗನೇ ಇರಬೇಕು. ಎಲ್ಲ ಜನವರ್ಗದವರು. ನಾಗನನ್ನು ಬೇರೆ ಬೇರೆ ರೂಪಗಳಲ್ಲಿ ಭಿನ್ನ ಭಿನ್ನ ಆರಾಧನಾ ಪ್ರಕ್ರಿಯೆಗಳಿಂದ ಪೂಜಿಸುತ್ತ ಬಂದಿರುವುದು ಕಂಡುಬರುತ್ತದೆ.

ತುಳುವು ಪ್ರದೇಶದ ಆಲಡೆ (ಬೆರ್ಮರ ಗುಂಡ) ನಾಗನನ್ನು ಒಳಗೊಂಡಿರುವ ಒಂದು ದೈವದ ಸಂಕೀರ್ಣ. ಇಲ್ಲಿ ನಾಗ, ಬೆರ್ಮೆರ್, ನಂದಿಗೋಣ, ಲೆಕ್ಕಸಿರಿ ಮತ್ತು ಕ್ಷೇತ್ರ ಪಾಲರಿಗೆ ಆರಾಧನೆ ನಡೆಯುತ್ತದೆ. ಕನ್ನಡ ಪ್ರದೇಶಗಳಲ್ಲಿ ಇದಕ್ಕೆ ಸಂವಾದಿಯಾದ ಚಿತ್ತೇರಿ ಎಂಬ ದೈವ ಸಂಕೀರ್ಣವಿದ್ದು ಅಲ್ಲಿ ನಾಗ, ಬ್ರಹ್ಮನಂದಿ, ಚಿಕ್ಕು ಮತ್ತು ಕ್ಷೇತ್ರಪಾಲ ಮತ್ತಿತರರಿಗೆ ಆರಾಧನೆ ನಡೆಯುತ್ತದೆ.

ನಾಗನು ವಿಭಿನ್ನ ದೇವತೆಗಳೊಂದಿಗೆ ಸಮಾವೇಶಗೊಂಡು ಪೂಜಿತನಾಗುವುದು ಒಂದು ವಿಶಿಷ್ಟ ಸಂಗಿತಿ. ವಿಷ್ಣು (ಅನಂತ ಪದ್ಮನಾಭ), ಶಿವ (ಅನಂತೇಶ್ವರ) ಶಕ್ತಿ, ಗಣಪತಿ, ಯಕ್ಷಿ, ಬೊಬ್ಬರ್ಯನೊಂದಿಗೆ ಸಮಾವೇಶಗೊಂಡು ಆರಾಧ್ಯನಾಗಿರುವುದು ಕಂಡುಬರುತ್ತದೆ. ನಾಗ ಮತ್ತು ಸ್ಕಂದರು ಕರಾವಳಿ ಜಿಲ್ಲೆಗಳಲ್ಲಿ ಅಭಿನ್ನರಾಗಿ ಆರಾಧನೆಗೊಳ್ಳುವುದನ್ನು ಜಿಲ್ಲೆಯ ಕುಕ್ಕೆ ಸುಬ್ರಹ್ಮಣ್ಯ, (ಪುತ್ತೂರು ತಾಲೂಕ) ಕುಡುಪು (ಮಂಗಳೂರು ತಾಲೂಕು), ಕಾಳಾವರ (ಕುಂದಾಪೂರ ತಾಲೂಕ) ಮತ್ತಿತರೆಡೆಗಳಲ್ಲಿ ಗುರುತಿಸಬಹುದು. ಜಿಲ್ಲೆಯ ಕನ್ನಡ ಪ್ರದೇಶದ ನಾಡವರ ಮನೆಯ ಆವರಣದೊಳಗೆ ಆರಾಧ್ಯ ದೈವ ಸ್ವಾಮಿ (ನಾಗ) ಯನ್ನು ಹಾಗೂ ಮೇರರ ಕಾಡ್ಯನ ಮನೆಗಳಲ್ಲಿ ಕಾಡ್ಯಾನನ್ನು ಹುತ್ತದ ಕುಲಶದ ರೂಪದಲ್ಲಿ ಗುರುತಿಸಿ ಆರಾಧಿಸಲಾಗುತ್ತದೆ." [೮೧]

ಹೀಗೆ ಕರಾವಳಿ ಕನಾಟಕದ ತುಳುನಾಡು ಹಾಗೂ ಕನ್ನಡ ಪ್ರದೇಶಗಳೆರಡರಲ್ಲೂ 'ನಾಗ' ಬಹುಜನಪ್ರಿಯ ಆರಾಧ್ಯ ದೈವವಾಗಿರುವುದು ಕಂಡುಬರುತ್ತದೆ. ತುಳುವ ಪ್ರದೇಶದ ಆಲಡೆ, ಬೆರ್ಮಸ್ಥಾನ, ಬೆರ್ಮರೆ ಗುಂಡಗಳಲ್ಲಿ ಬೆರ್ಮರ್ ಆದಿಮೂಲ ದೈವವಾಗಿದ್ದು ಸಂತಾನಾಭಿಮಾನಿ ದೇವತೆ ಎಂದು ತಿಳಿಯಲಾಗಿದೆ. ಇಲ್ಲಿಯೇ ತುಳುವರು ತಮ್ಮ ಪಿತೃ ಪೂಜೆಯನ್ನು ನಡೆಸುತ್ತಾರೆ. "ಬ್ರಹ್ಮನನ್ನು ನಾಗಬ್ರಹ್ಮನೊಂದಿಗೆ ಸಮೀಕರಿಸುವುದೂ ನಾಗಬ್ರಹ್ಮನ ಚಿತ್ರಣಗಳಲ್ಲಿ ಆತನನ್ನು ದೇಹದ ಕೆಳಭಾಗದಲ್ಲಿ ಸರ್ಪರೂಪಿಯಾಗಿಯೂ, ಮೇಲ್ಭಾಗದಲ್ಲಿ ರಾಜದಂತ ಅಥವಾ ಖಡ್ಗವನ್ನು ಹಿಡಿದ ಮನುಷ್ಯನಾಗಿಯೂ ರೂಪಿಸಿದೆ. ಈ ನಾಗ ಹಾಗೂ ಬ್ರಹ್ಮನ ಚಿತ್ರಗಳು ಅರಸನಿಗಿರುವ ಎರಡು ಪರಸ್ಪರ ಪೂರಕ ಕರ್ತವ್ಯಗಳಾದ ರಕ್ಷಣೆ ಹಾಗೂ ಸಂಪದಭಿವೃದ್ಧಿಯನ್ನು ಸೂಚಿಸುತ್ತಿರಬೇಕು". [೮೨] ಎಂಬುದು ಗುಮನಾರ್ಹ.

ಇದನ್ನು ಗಮನಿಸುತ್ತಾ ಬೀದರದ ಉಪಾಸನಾ ಪಂಥದ ಬಗ್ಗೆ ಕ್ಷೇತ್ರಕಾರ್ಯ ಕೈಗೊಂಡಾಗ ಈ ಪ್ರದೇಶದ ಆದಿಮೂಲ ದೈವ ನಾಗನಿದ್ದುದು ಕಂಡುಬರುತ್ತದೆ. "ನಾಗವಂಶದ ಸಿಂದ ಮನೆತನದ ಬಿಡುದೋಳ ಸಿಂದನ ವಂಶಜರು ಬಹುಕಾಲ ರಂಜೇರುವಿನಿಂದ ಮಾಂಡಳಿಕರಾಗಿ ಆಳಿದರು. ನಾಲ್ಕನೆ ಶತಮಾನದಿಂದ ಆರಂಭಗೊಂಡ ಸಿಂದರ ಆಳ್ವಿಕೆ ಹದಿಮೂರನೇ ಶತಮಾನದವರೆಗೆ ಸಾಗಿ ಬಂದಿತು". [೮೩] ರಂಜೇರು ಇರುವುದು ಬೀದರ ಜಿಲ್ಲೆಯಲ್ಲಿ ಹೀಗಾಗಿ ನಾಗವಂಶದವರಿಂದಲೇ ನಾಗಾರಾಧನೆಯು ನಡೆದುಬಂದಿರಬಹುದೆಂದು ಊಹಿಸಬಹುದಾಗಿದೆ. ಆದ್ದರಿಂದಲೇ ಇಲ್ಲಿ ಎಲ್ಲಾ ವರ್ಗದ ಜನರೂ ನಾಗನನ್ನು ವಿವಿಧ ರೂಪಗಳಲ್ಲಿ ಆರಾಧಿಸುವುದು ಕಂಡುಬರುತ್ತದೆ. ಇಲ್ಲಿಯೂ ಕೂಡ ಕರಾವಳಿಯಲ್ಲಿಯಂತೆ

ನಾಗನನ್ನು ಬೇರೆ ಬೇರೆ ರೂಪಗಳಲ್ಲಿ ಪೂಜಿಸುವುದು ಕಂಡುಬರುತ್ತದೆ. ಹುಮನಾಬಾದ ತಾಲೂಕಿನ ಹಳ್ಳಿಖೇಡದಲ್ಲಿ 'ಸೀಮಿನಾಗಣ್ಣಾ'ನೆಂದು, ಬೀದರದ ಝುರಣಿಯಲ್ಲಿ ಹಿರೋಡ್ಯಾನೆಂದು, ಬಸವಕಲ್ಯಾಣ ತಾಲೂಕಿನ ಮಂಠಾಳದಲ್ಲಿ 'ಭರಮ ನಾಗಣ್ಣ'ನೆಂದೂ ಆರಾಧನೆ ಮಾಡುವುದು ಕಂಡುಬರುತ್ತದೆ. ಬಸವಕಲ್ಯಾಣದಲ್ಲಿ ಮನೆಯ ಆವರಣದೊಳಗೆ ನಾಗನನ್ನು ಹಿರೋಡ್ಯಾ ಹಾಗೂ ಬೀದರದ ಮನೆಯಲ್ಲಿ ಹುತ್ತದ ರೂಪದಲ್ಲಿ ಆರಾಧಿಸುವುದನ್ನು ಕಾಣಬಹುದು.

"ಸೀಮಿ ನಾಗಣ್ಣಾ" ಹುಮನಾಬಾದ ತಾಲೂಕಿನ ಹಳ್ಳಿಖೇಡ (ಬಿ) ಗ್ರಾಮದ ದೈವವಾಗಿ ಪೂಜೆಗೊಳ್ಳುತ್ತಿದ್ದಾನೆ. ಸಂತಾನಾಭಿವೃದ್ಧಿ ಹಾಗೂ ಸಮೃದ್ಧಿಯ ಹಿನ್ನೆಲೆಯಲ್ಲಿ ಇಲ್ಲಿ ನಾಗನನ್ನು ಪೂಜಿಸುವುದು ಕಂಡುಬರುತ್ತದೆ. ಹಳ್ಳಿಖೇಡ ಊರಿನಿಂದ ಸುಮಾರು ೨ ಕಿ.ಮೀ. ದೂರದಲ್ಲಿಯ ಸೀಮೆಯಲ್ಲಿರುವ ನಾಗನನ್ನು 'ಸೀಮಿ ನಾಗಣ್ಣಾ' ಎಂದೇ ಕರೆಯುವ ರೂಢಿ ಕಂಡುಬರುತ್ತದೆ. ಈ ಕ್ಷೇತ್ರದಲ್ಲಿ ನಡೆದ ಒಂದು ಸತ್ಯ ಘಟನೆಯನ್ನು ಇಲ್ಲಿ ಹೀಗೆ ಹೇಳಲಾಗುತ್ತದೆ.

ಮಕ್ಕಳಾಗದ ಕಾರಣ ಸೋಲ್ಲಾಪುರದ ಮಹಿಳೆಯೊಬ್ಬಳು ತನಗೆ ಸಂತಾನ ಪ್ರಾಪ್ತಿಯಾದರೆ ಹೆಡೆಹಿಡಿದು ಎದೆ ಹಾಲು ಕುಡಿಸುವೆನೆಂದು ಹರಕೆ ಹೊತ್ತಳಂತೆ ನಾಗಣ್ಣನ ಕೃಪೆಯಿಂದ ಮುದ್ದಾದ ಮಗನನ್ನು ಪಡೆದಳು. ಆದರೆ ತನ್ನ ಹರಕೆಯನ್ನು ತೀರಿಸಲು ಮರೆತುಬಿಟ್ಟಳು. ಆಗ ಆಟ ಆಡುವ ಬಾಲಕನ ಹಿಂದೆ ತಾಯಿಗೆ ನಾಗದರ್ಶನವಾಯಿತಂತೆ. ಅದರಿಂದ ತನ್ನ ಹರಕೆ ಸಲ್ಲಿಸಲು ಹಳ್ಳಿಖೇಡಕ್ಕೆ ಬಂದಳಂತೆ. ನೆಂಟರಿಷ್ಟರೊಡನೆ ಬಂದ ಅವಳು ಗುಡಿಯಲ್ಲಿನ ನಾಗ (ಕಲ್ಲು) ಪ್ರತಿಮೆಯೆದುರು ಬಂದಾಗ, ಅಲ್ಲಿ ನಾಗ ಪ್ರತ್ಯಕ್ಷನಾದನಂತೆ ಹೆದರಿದ ತಾಯಿ ಯಾರು ಎಷ್ಟೇ ಹೇಳಿದರೂ ತನ್ನ ಹರಕೆ ಪೂರೈಸಲು ಸಿದ್ಧಳಾಗದೇ ಹೋದಾಗ, ಎಷ್ಟೋ ವೇಳೆಯ ವರೆಗೆ ಹಾಗೇ ಕಾಯುತ್ತಾ ನಿಂತಿದ್ದ ನಾಗಣ್ಣಾ ಕೊನೆಯಲ್ಲಿ ಮಗುವನ್ನು ಹೊಡೆದು ಕೊಂದನಂತೆ ಆ ಮಗುವಿನ ಸಮಾಧಿಯನ್ನು ಇಂದಿಗೂ ದೇವಸ್ಥಾನದಲ್ಲಿ ಕಾಣಬಹುದಾಗಿದೆ.

ಈಗಲೂ ಸಹ ಸಂತನಾಭಿವೃದ್ಧಿಗಾಗಿ ನಾಗನನ್ನು ಪೂಜಿಸುವುದು ಕಂಡುಬರುತ್ತದೆ. ಅದಲ್ಲದೆ ಜನರು ತಮ್ಮ ಇಷ್ಟಕಾಮನೆಗಾಗಿಯೂ ಭಕ್ತಿಯಿಂದ ಇಲ್ಲಿಗೆ ಬರುವುದು ಕಂಡುಬರುತ್ತದೆ. ಇಲ್ಲಿ ಕೇವಲ ಕರ್ನಾಟಕದವರಲ್ಲದೆ ನೆರೆಯ ಮಹಾರಾಷ್ಟ್ರ ಹಾಗೂ ಆಂಧ್ರದ ಭಕ್ತರೂ ಹರಕೆ ಹೊತ್ತು, ಸಲ್ಲಿಸಲು ಬರುತ್ತಾರೆ. ಇಂದಿಗೂ ಯಾರಾದರೂ ತಪ್ಪು ಮಾಡಿದರೆ "ನಾಗಣ್ಣಾ" ಕಾಣಿಸಿಕೊಳ್ಳುತ್ತಾನೆಂಬ ಪ್ರತೀತಿ ಅಲ್ಲಿದೆ ಹೀಗಾಗಿ ಜನರು ಭಯ-ಭಕ್ತಿಗಳಿಂದೇ ನಾಗಣ್ಣನ ಆರಾಧನೆ ಮಾಡುವುದು ಕಂಡುಬರುತ್ತದೆ. ಇಲ್ಲಿಯವರೆಗೆ ಒಕ್ಕಲು ಮಕ್ಕಳ ಆಡಳಿತದಲ್ಲಿದ್ದ ಈ ಗುಡಿ ೨೦೦೨ ರಲ್ಲಿ ಸರ್ಕಾರದ ವಶವಾಗಿದೆ. ೨೦೦೫ ರಿಂದ ಇಲ್ಲಿ 'ನಾಗೇಶ್ವರರಾಗಿ' ಭಕ್ತರು ತಮ್ಮ ಭಕ್ತಿಯನ್ನು ಒಪ್ಪಿಸುವ ಪದ್ಧತಿ ಬೆಳೆದು ಬಂದಿದೆ. ಅಯ್ಯಪ್ಪ ಸ್ವಾಮಿಯ ಭಕ್ತರಂತೆ ಇವರು ನಾಗಣ್ಣನ ಭಕ್ತರಾಗಿ ೪೧ ದಿವಸಗಳ ಕಾಲ ನಾಗಪೂಜೆ, ಭಜನೆ ಮಾಡಿ ಖಾಂಡಿನೊಂದಿಗೆ (ಶ್ರಾವಣದ ಕೊನೆಗೆ) ವ್ರತ ಮುಗಿಸುತ್ತಿರುವುದು ವಿಶಿಷ್ಟವಾಗಿದೆ.

ಇದಲ್ಲದೆ ಅಲ್ಲಿ ವಿವಾಹ, ಜವಳ ಮುಂತಾದ ಶುಭಕಾರ್ಯಗಳೂ ಜರುಗುತ್ತವೆ.

[illegible]

ಕೂಸಿನ ಘಟನೆಯ ನಂತರವೇ ನಾಗಣ್ಣನ ಮಹಿಮೆಯ ಪ್ರಚಾರ ಹೆಚ್ಚಾಗಿ ಅದೇ ಮನೆತನದವರು ಈ ಗುಡಿಯನ್ನು ಕಟ್ಟಲು ಸಹಾಯ ಮಾಡಿದರೆಂದು. ಇಂದಿಗೂ ಅವರು ಇಲ್ಲಿ ಬಂದು ಹೋಗುತ್ತಾರೆಂದು ಜನರು ಹೇಳುತ್ತಾರೆ. ಅದಕ್ಕಿಂತ ಮೊದಲು ಅಲ್ಲಿ ನಾಗರ ಘಡಿ ಇದ್ದು, ನಾಗಣ್ಣ ಹೊರಗೆ ಬಂದು ತನ್ನ ಮಾಣಿಕ್ಯವನ್ನು ಇಟ್ಟು, ಅದರ ಬೆಳಕಿನಲ್ಲಿ ಆಡುತ್ತಿದ್ದನೆಂಬ ಪ್ರತೀತಿ ಇದೆ.[೮೪] ನಡೆದಂಥಹ ಅನೇಕ ಘಟನೆಗಳ ಚಿತ್ರ ಹಾಗೂ ಫಲಕದಲ್ಲಿ ಬರೆದದ್ದು ಅಲ್ಲಿ ಕಾಣಬಹುದು. ನಾಗ ಪೂಜೆಯು ಇಲ್ಲಿ ಅತ್ಯಂತ ಪುರಾತನ ಕಾಲದಿಂದ ನಡೆದು ಬಂದದ್ದು ಎಂದು ಜನರ ಹೇಳಿಕೆ ಇದು ನಿನ್ನೆ ಮೊನ್ನೆಯದಲ್ಲ ತಲೆ ತಲಾಂತರದಿಂದಲೂ ಇದ್ದದ್ದು, ಆದರೆ ಕೂಸಿನ ಘಟನೆ ನಂತರ ಇಲ್ಲಿ ಭಕ್ತರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದ್ದು, ಅಭಿವೃದ್ಧಿ ಆಗುತ್ತಿದೆಯೆಂತೆ. ಈ ಎಲ್ಲಾ ಹೇಳಿಕೆಗಳು 'ನಾಗಪೂಜೆ' ನಮ್ಮಲ್ಲಿಯೂ ಬಹುಪುರಾತನ ಕಾಲದಿಂದ ನಡೆದು ಬಂದಿರಬಹುದೆಂಬುದಕ್ಕೆ ಪುಷ್ಠಿನೀಡುತ್ತವೆ.

ಬೀದರದ **'ಝುರಣಿ ನರಸಿಂಹ'** 'ಹಿರೋಡ್ಯಾ' ಎಂಬ ಹೆಸರಿನಲ್ಲಿ ಪೂಜೆಗೊಳ್ಳುತ್ತಾನೆ. ಮರಾಠಿಯಲ್ಲಿ 'ನರ್ಸ್ಯಾ' ಹಾಗೂ ಕನ್ನಡದವರು 'ಹಿರೋಡ್ಯಾ' ಎಂಬ ಹೆಸರಿನಲ್ಲಿ ನಾಗಾರಾಧನೆ ಮಾಡುವುದು ಕಂಡುಬರುತ್ತದೆ. ಈ ಕ್ಷೇತ್ರ ಕುರಿತಾದ ಪುಸ್ತಕವೊಂದರಲ್ಲಿ "ಕರ್ನಾಟಕ ರಾಜ್ಯದಲ್ಲಿ 'ಹಿರೋಡ್ಯಾ' ಎಂಬ ಹೆಸರಿನಲ್ಲಿ ಶ್ರೀ ನರಸಿಂಹನನ್ನು ನಾಗದೇವತೆಯೆಂದು ಆರಾಧಿಸುವ ಪದ್ಧತಿಯಿದೆ. ಹಿರೋಡ್ಯಾನ ಸಂಬಂಧವು ನಾಗದೇವತೆಗಳ ಜೊತೆಗಿದೆ"[೮೫] ಎಂದು ಹೇಳಲಾಗಿದೆ. ಹಿರೋಡ್ಯಾ ಎಂದರೆ ಹಿರಿಯ + ಒಡೆಯ ಆಗಿರಬಹುದು ಎನಿಸುತ್ತದೆ. ಇಲ್ಲಿ ಸಮಾಜದ ಮೇಲು-ಕೀಳು, ಬಡವ-ಶ್ರೀಮಂತ, ವರ್ಗ ಭೇದವಿಲ್ಲದೆ ಎಲ್ಲಾ ಜನರು ಅನನ್ಯ ಭಕ್ತಿಯಿಂದ ಪೂಜಿಸುವುದು ಕಂಡುಬರುತ್ತದೆ. ಗುಹಾಂತರ ದೇವಾಲಯದಲ್ಲಿ ನೀರಿನಲ್ಲಿ ನಡೆದುಹೋಗಿ ಭಕ್ತರು ತಮ್ಮ ಪೂಜೆ, ಹರಕೆಗಳನ್ನು ಸಲ್ಲಿಸುತ್ತಾರೆ. ಇಲ್ಲಿಯೂ ಕರ್ನಾಟಕವಲ್ಲದೆ ಮಹಾರಾಷ್ಟ್ರ, ಆಂಧ್ರ ರಾಜ್ಯಗಳ ಭಕ್ತರು ಬರುತ್ತಾರೆ. ಮದುವೆ, ಭಾಸಿಂಗು ಬಿಡುವುದು, ಜವಳ, ನೈವೇದ್ಯಕೊಡುವುದು ಮುಂತಾದವುಗಳಿಗಾಗಿ ನೂರಾರು ಭಕ್ತರು ಬರುತ್ತಾರೆ. 'ಶನಿವಾರ' 'ಸೋಮವಾರ' ಜನಸಂಖ್ಯೆ ಹೆಚ್ಚಾಗಿರುತ್ತದೆ. 'ಶನಿವಾರ' ನಾಗನ ವಾರವೆಂದು, ಅನೇಕರು ಉಪವಾಸವನ್ನು ಮಾಡುತ್ತಾರೆ. ಹೆಣ್ಣುಮಕ್ಕಳ ಮುಟ್ಟಿನ ತೊಂದರೆ, ಕನಸಿನಲ್ಲಿ ಹಾವು ಬಂದರೆ, ಸಂತನಾಭಿವೃದ್ಧಿ ಇಷ್ಟಾರ್ಥ ಸಿದ್ಧಿಗಾಗಿಯೂ ಭಕ್ತರು ಇಲ್ಲಿಗೆ ಬರುವುದು ಕಂಡುಬರುತ್ತದೆ.

ಈ ಕ್ಷೇತ್ರ ಬೀದರ ಪಟ್ಟಣದಿಂದ ಸುಮಾರು ೨ ಕಿ.ಮೀ. ದೂರದಲ್ಲಿರುವ ನೈಸರ್ಗಿಕ ತಾಣವಾಗಿತ್ತು. ಇತ್ತೀಚೆಗೆ ಇದು ಸಹ ಸರ್ಕಾರದ ವಶಕ್ಕೆ ಸೇರಿದ ಮೇಲೆ ವಿವಿಧ ಬದಲಾವಣೆಗಳಾಗಿ ಕಟ್ಟಡಗಳು ಕಟ್ಟಲ್ಪಟ್ಟಿವೆ.

ಬಸವಕಲ್ಯಾಣ ತಾಲೂಕಿನ ಮಂಠಾಳದ ಹೊಲದಲ್ಲಿ ಪೂಜೆಗೊಳ್ಳುವ **'ಭರಮ ನಾಗಣ್ಣಾ'** ಮತ್ತೊಬ್ಬ ನಾಗರಾಧನೆಯ ದೈವ. ಕೆಲವು ಮನೆಗಳ 'ಕುಲದೇವರಾಗಿಯೂ' ಇರುವ ಈ ನಾಗಣ್ಣಾ ಸ್ಥಳೀಯರಿಂದಲೇ ಹೆಚ್ಚು ಪೂಜೆಗೊಳ್ಳುವುದು ಕಂಡುಬರುತ್ತದೆ. ಹೀಗಾಗಿ ಹೆಚ್ಚು

ಪ್ರಚಾರವಿಲ್ಲದೆಯೂ ತನ್ನ ಭಕ್ತರ ಇಷ್ಟಾರ್ಥಗಳನ್ನು ಪೂರೈಸುವ ದೇವನಾಗಿರುವುದು ಗಮನಾರ್ಹವಾಗಿದೆ. ಈ ಹಿಂದೆ ನೋಡಿದಂತೆ ಕರಾವಳಿ ಕರ್ನಾಟಕದಲ್ಲಿ ಪೂಜೆಗೊಳ್ಳುವ 'ನಾಗಬ್ರಹ್ಮ'ನಿಗೂ ನಮ್ಮೀ ಭರಮ ನಾಗಣ್ಣನಿಗೂ ನಂಟಿರಬಹುದೇ ? ಅಥವಾ ಬ್ರಹ್ಮ ಎನ್ನುವುದನ್ನು ನಮ್ಮ ಜನರ ಅಪಭ್ರಂಶಗೊಳಿಸಿ ಬರಮ - ಭರಮ ಎಂದು ಕರೆದಿರಬಹುದೆ ? ಎಂದೆನಿಸುತ್ತದೆ. ಬಸವಕಲ್ಯಾಣ ತಾಲೂಕುದವಳಾದ ನಾನು ಈ ನಾಗಣ್ಣನ ಹೆಸರು ಕ್ಷೇತ್ರ ಕಾರ್ಯದ ಸಂದರ್ಭದಲ್ಲಿಯೇ ಕೇಳಿದ್ದು. ಸೀಮೆಯಲ್ಲಿನ ನಾಗಣ್ಣ ಸೀಮಿನಾಗಣ್ಣ ಎಂಬಲ್ಲಿ ಯಾವ ವಿಶೇಷತೆ ಕಾಣಲಿಲ್ಲ. ಆದರೆ 'ಭರಮ ನಾಗಣ್ಣ' ಹೇಗಾದ ? ಎಂಬ ಪ್ರಶ್ನೆ ಕೊರೆಯ ತೊಡಗಿತು. ಮುಂದೆ ಅಧ್ಯಯನದ ಸಮಯದಲ್ಲಿ 'ನಾಗಬ್ರಹ್ಮ ಕುರಿತು ಓದಿದಾಗ, ನಮ್ಮ ಜನರ ಬಾಯಲ್ಲಿ ಅದು 'ಭರಮ ನಾಗಣ್ಣ' ಆಗಿರಬಹುದೆಂದು ಅದನ್ನು ಇಲ್ಲಿ ಉಲ್ಲೇಖಿಸಿದ್ದೇನೆ. ಶ್ರೀ ಶಂಬಾ ಜೋಷಿಯವರ ಪ್ರಕಾರ "ಭರಮಃ ಬ್ರಹ್ಮ"[೮೬] ಎಂಬುದು ಇದನ್ನೇ ಪುಷ್ಠಿಕರಿಸುತ್ತದೆ.

ಕರಾವಳಿಯ ಮನೆಗಳಲ್ಲಿ ಕಾಡ್ಯಾನನ್ನು ಹುತ್ತದ ಕಲಶದ ರೂಪದಲ್ಲಿ ಗುರುತಿಸಿ ಆರಾಧಿಸುವಂತೆ ಬೀದರದ ಬಸವಕಲ್ಯಾಣದಲ್ಲಿ ಹಲವಾರು ಮನೆಗಳಲ್ಲಿ 'ಹಿರೋಡ್ಯಾ' ದುಂಡನೆಯ ಕಲ್ಲಿನ ರೂಪದಲ್ಲಿ ಗುರುತಿಸಿ ಆರಾಧಿಸುವುದು ಕಂಡುಬರುತ್ತದೆ. ಕೆಲವೊಬ್ಬರ ಮನೆಗಳಲ್ಲಿ ಚಿಕ್ಕ ಗುಡಿ ನಿರ್ಮಿಸಿ ಒಳಗೆ ಇಂತಹ ಕಲ್ಲುಗಳನಿಟ್ಟು, ಪಕ್ಕದಲ್ಲಿ ಅಥವಾ ಆ ಗುಡಿಯ ಗೋಡೆಯ ಮುಂದಿನ ಭಾಗದಲ್ಲಿ 'ನಾಗ' ಚಿತ್ರಗಳನ್ನು ಸ್ಥಾಪಿಸಿರುವುದೂ ಕಂಡುಬರುತ್ತದೆ. ಅಂದರೆ ಈ ರೂಪದಲ್ಲಿ 'ನಾಗಾರಾಧನೆ' ನಡೆಯುತ್ತದೆ. ಈ ಪೂಜೆಯು ಸಹ ಕಡ್ಡಾಯವಾಗಿ ಎಲ್ಲರೂ ಮಾಡಬೇಕೆಂಬ ನಿಯಮವಿದ್ದಂತೆ ಕಂಡುಬರುವುದಿಲ್ಲ ಹೆಚ್ಚಾಗಿ ಹೆಣ್ಣುಮಕ್ಕಳು ಮಾತ್ರ ಅಂತಹ ಮನೆಗಳಿಗೆ ಹೋಗಿ ಪೂಜೆ ಮಾಡಿ ಕಾಯಿ-ಕರ್ಪೂರ, ಎಡೆಗಳನ್ನು ಅರ್ಪಿಸುವರು ಈ ರೀತಿ 'ಹಿರೋಡ್ಯಾ' ಇರುವವರ ಮನೆಯಲ್ಲಿ ನಾಗ ದರ್ಶನ ಆಗುತ್ತಿರುತ್ತದಂತೆ ಯಾವುದೇ ತಪ್ಪುಗಳಾದರೂ ತಕ್ಷಣ ಸಣ್ಣ ಮರಿಯ ರೂಪದಲ್ಲಾದರೂ ಮನೆಯವರ ಕಣ್ಣಿಗೆ ಕಾಣುತ್ತದೆಯಂತೆ ಒಮ್ಮೊಮ್ಮೆ ನಾಗ ಅಡ್ಡಾಡುವಾಗ ಸುಗಂಧಯುಕ್ತ ಪರಿಮಳ ಸೂಸುತ್ತದೆಂದು ಮನೆಯವರ ಅನುಭವದ ಹೇಳಿಕೆ. ಇದರಿಂದ ಮನೆಯವರಿಗೆ ಇಲ್ಲಿಯವರೆಗೂ ಯಾವುದೇ ಪ್ರಾಣಾಪಾಯಕಾರಿ ಘಟನೆ ಜರುಗಿಲ್ಲ ಎಂದೂ ಅವರ ಸಮಾಧಾನದ ವಿವರಣೆ ಕಂಡುಬರುತ್ತದೆ.[೮೭] ಹೀಗಾಗಿ ಕೆಲವೊಂದು ಮನೆಗಳಲ್ಲಿ 'ಹಾವು' ಕಂಡರೂ 'ಅದು ನಮ್ಮ ಹಿರೋಡ್ಯಾ' ಏನೂ ಮಾಡದೆಂಬ ಭರವಸೆ ಅವರಲ್ಲಿ ಮೂಡಿ ನಿರ್ಭಯದಿಂದಿರುತ್ತಾರೆಂಬ ಹೇಳಿಕೆ ನಿಜಕ್ಕೂ ರೋಚಕನಿಯವಾಗಿತ್ತು. ಇಲ್ಲಿಯೂ ಜಾತಿ-ಕುಲ ಭೇದಗಳಿಲ್ಲ. ಈ ರೀತಿಯ 'ಹಿರೋಡ್ಯಾ' ವಿವಿಧ ಜನಾಂಗದವರ ಮನೆಗಳಲ್ಲಿರುವುದೇ ಇದಕ್ಕೆ ಸಾಕ್ಷಿ.

ಉದಾ: ಕುಂಬಾರ, ಗೋಸಾಯಿ, (ಗೋಸ್ವಾಮಿ), ಮರಾಠ, ಹಿಂದೂ ಮುಂತಾದವರ ಮನೆಗಳಲ್ಲಿ ಇಂಥ 'ಹಿರೋಡ್ಯಾ' ಇರುವುದು ಗಮನಾರ್ಹ.

ಈ ರೀತಿಯಾಗಿ ಬೀದರ ಜಿಲ್ಲೆಯೂ ನಾಗಗಳ ವಾಸ ಹಾಗೂ ಆರಾಧಾನಾ

ಜಿಲ್ಲೆಯೆಂದು ತಿಳಿದುಬರುತ್ತದೆ. ಇಲ್ಲಿಯ ನಾಗಗಳು ನಿಸರ್ಗದ ನೆಲೆಯಲ್ಲಿಯೇ ಇದ್ದದ್ದು ಗಮನಾರ್ಹವಾದುದು. ಇತ್ತೀಚೆಗೆ ಭಕ್ತರ ಅನುಕೂಲಕ್ಕಾಗಿ ಗಿಡಮರ ಕಡೆದು, ಹಸನಗೊಳಿಸಿದ್ದು ತಿಳಿದುಬರುತ್ತದೆ. ಹಚ್ಚ ಹಸುರಿನ ದಟ್ಟ ಪ್ರದೇಶದಲ್ಲಿ 'ನಾಗ' ವಾಸಿಸುವ ಸ್ಥಾನ ಎಂಬುದು ಸತ್ಯವೆನಿಸುತ್ತದೆ. ಬೀದರ ಜಿಲ್ಲೆಯ ವಿವಿಧ ಕಡೆಯಲ್ಲಿ ವಿವಿಧ ರೀತಿಯಲ್ಲಿ ಆರಾಧನೆಗೊಳ್ಳುವ ನಾಗನಿಗೂ ಬೀದರದ ಜನತೆ, ಅದರಲ್ಲೂ ಹೆಣ್ಣು ಮಕ್ಕಳಿಗೂ ವಿಶಿಷ್ಟ ನಂಟಿರುವುದು ಕಂಡುಬರುತ್ತದೆ. ಅಂತೆಯೇ ಇಲ್ಲಿ ನಾಗಪಂಚಮಿಯ ಸಂದರ್ಭದಲ್ಲಿ ಈ 'ಭುಲಾಯಿ' ಸಂಸ್ಕೃತಿ ವಿಶಿಷ್ಟ ಸಂಪ್ರದಾಯವಾಗಿ ಬೆಳೆದು ಬಂದಂತೆ ಕಂಡುಬರುತ್ತದೆ. ನಾಗನಿಗೂ ಭುಲಾಯಿಗೂ ಸಂಬಂಧವಿದೆ ಎಂದು ಹೇಳಿದ ಹಿರಿಯರು, ನಾಗಣ್ಣ ಯಾವ ರೀತಿಯಾಗಿ ಅಡ್ಡ ಅಡ್ಡಾಗಿ ತಿರುಗುತ್ತಾನೋ (ಹೋಗುತ್ತಾನೋ) ಹಾಗೇ ಹೆಣ್ಣುಮಕ್ಕಳು ಸಹ ತಿರುಗುತ್ತಾರೆ" [೮೮] ಎನ್ನುವುದು ಗಮನಾರ್ಹವಾಗಿದೆ. ಹೀಗಾಗಿ ಈ ಬುಲಾಯಿ ಸಂಸ್ಕೃತಿಗೆ ಬೀದರ ಜಿಲ್ಲೆಯೇ ಮೂಲವೆಂಬುದಕ್ಕೆ ಇದು ಇನ್ನಷ್ಟು ಪುಷ್ಟಿಯನ್ನು ನೀಡುತ್ತದೆ. ಶೇಷಪ್ಪಾ, ಶೇಷಯ್ಯ, ಮುರಗೇಶ, ನರಸಿಂಗ, ನಾಗಾರಜ, ನಾಗೇಂದ್ರ, ನಾಗಪ್ಪಾ, ನಾಗೇಶ, ನಾಗಮ್ಮಾ ನಾಗವೇಣಿ, ನಾಗರತ್ನ, ನಾಗಿಣಿ ನಾಗೂ ಇತ್ಯಾದಿ ಹೆಸರುಗಳು, ನಾಗೂರೆ, ನಾಗರಾಳೆ, ನಾಗವಾರ ಮುಂತಾದ ಅಡ್ಡಹೆಸರು (ಮನೆ), ನಾಗೂರು (ಕೆ), ನಾಗೂರು (ಬಿ), ಕೋಸಂ ನಾಗೂರು, ನಂದಾ ನಾಗೂರು ಮುಂತಾದ ಊರುಗಳ ಹೆಸರು, ನಾಗುಂದಿಗೆ, ನಾಗುರೆ, ನಾಗಚಿಹ್ನೆಯ ತೋಳಬಂದಿ, ಉಂಗುರ ಮುಂತಾದ ಆಭರಣಗಳು ಬೀದರ ಜಿಲ್ಲೆಯಲ್ಲಿ ಹೇರಳವಾಗಿ ಕಾಣಸಿಗುವುದು ಸಹ ಇಲ್ಲಿ 'ನಾಗ' ಪ್ರಭಾವವನ್ನು ಸೂಚಿಸುತ್ತವೆ. ಹೀಗಾಗಿ 'ನಾಗಪೂಜೆ'ಯು ಬೀದರ ಜಿಲ್ಲೆಯದೆಂದು 'ಭುಲಾಯಿ ಸಂಸ್ಕೃತಿ'ಯು ಬೀದರ ಮೂಲದೆಂದು ಹೇಳಬಹುದು.

ನಾಗಪೂಜಾ ಪ್ರಕಾರಗಳು ಹಾಗೂ ನಂಬಿಕೆ ಮತ್ತು ಆಚರಣೆಗಳು :

ಬಯಲು ನಾಡಾದ ಬೀದರ ಜಿಲ್ಲೆಯಲ್ಲಿ ವ್ಯಾಪಕವಾಗಿ ಹರಡಿರುವ ನಾಗಬನಗಳು ಕಂಡುಬರದಿದ್ದರೂ, ಅರಳಿ ಮರದ ಕಟ್ಟೆಯಲ್ಲಿ, ಊರಿನ ಗುಡಿಗಳಲ್ಲಿ **ನಾಗರ ಕಲ್ಲು**ಗಳಿಗೇನು ಕೊರತೆಯಿಲ್ಲ. ಪ್ರತಿಯೊಂದು ಗುಡಿಯಲ್ಲೂ ಒಂದು ನಾಗರ ಕಲ್ಲು ಇರುವುದು ನಾಗಾರಾಧನೆಗೆ ಸಾಕ್ಷಿಯಾಗಿದೆ. ಕೆಲವೊಂದು ಗುಡಿಯ ಒಳಗಿದ್ದರೆ ಇನ್ನು ಕೆಲವು ಕಡೆ ಗುಡಿಯ ಹೊರಗೆ ಅರಳಿ ಮರದ ಕಟ್ಟೆಯಲ್ಲಿ ಕಂಡುಬರುತ್ತವೆ. 'ಅರಳಿಮರ' ಹಾಗೂ 'ನಾಗ' ಇವೆರಡೂ ಫಲೋತ್ಪತ್ತಿಯ ಪ್ರತೀಕಗಳಾಗಿದ್ದು, ವಿಶೇಷವಾಗಿ ಹೆಣ್ಣುಮಕ್ಕಳು ಇವುಗಳ ಪೂಜೆ ಮಾಡುವುದರಿಂದ ಹೆಚ್ಚಾಗಿ ಅರಳಿ ಮರದಲ್ಲಿ ನಾಗಪ್ರತಿಷ್ಠೆ ಮಾಡಬಹುದು. 'ವಟಸಾವಿತ್ರಿ ವ್ರತ' (ಅರಳಿಮರದ ಪೂಜೆ) ಆದ ಮೇಲೆಯೇ, 'ನಾಗರ ಪಂಚಮಿ' ಹಬ್ಬ ಬರುವುದು ಗಮನಾರ್ಹವಾಗಿದೆ. ಇದು ಅರಳಿಮರಕ್ಕೂ ನಾಗನಿಗೂ ಇರುವ ಅವಿನಾಭಾವ ಸಂಬಂಧವನ್ನು ವ್ಯಕ್ತ ಪಡಿಸುವಂತಿದೆ. ಹೀಗೆ ಒಂದು ಗುಡಿ ಅಥವಾ ದೇವಾಲಯವಿದ್ದರೆ ಅಲ್ಲೊಂದು ಅರಳಿಮರ ಮತ್ತು ನಾಗಮೂರ್ತಿಗಳು ಇರುವುದು ಇಲ್ಲಿಯ ಜನರ ಆರಾಧನೆಯನ್ನು ಎತ್ತಿ ತೋರಿಸುತ್ತೇವೆ.

ಕಲ್ಲಿನಲ್ಲಿ ಕೆತ್ತಿದ ಹೆಡೆ ಬಿಚ್ಚಿರುವನಾಗ, ಐದು ಹೆಡೆಯ ನಾಗ, ಏಳು ಹೆಡೆನಾಗ, ಜೋಡಿ ನಾಗಗಳನ್ನು ಶಿಲೆಯಲ್ಲಿ ಪ್ರತಿಷ್ಠಾಪಿಸಿ ಪೂಜಿಸುವುದು ಕಂಡುಬರುತ್ತದೆ. ನಾಗನ ಆವಾಸ ಸ್ಥಾನವಾದ ಹುತ್ತನ್ನೂ ಪೂಜಿಸುವುದು ಕಂಡುಬರುತ್ತದೆ. ಮನೆಯಲ್ಲಿ ಬೆಳೆದ ಹುತ್ತನ್ನು ಒಡೆಯದೆ ಅಲ್ಲಿ ನಾಗದೇವನಿರುವನೆಂದು ಆ ಸ್ಥಳ ಪೂಜಾ ಕೋಣೆಯಾದದ್ದೂ ಕಾಣಸಿಗುತ್ತವೆ. ದುಂಡನೆಯ ಕಲ್ಲುಗಳಾಕಾರದಲ್ಲಿ ಒಂದಲಿಂದ ಐದರವರೆಗೆ ಇಟ್ಟು ಪೂಜೆಗೊಳ್ಳುವ 'ಹಿರೋಡ್ಯಾ'ಗಳೂ ನಾಗಪೂಜೆಯ ಮತ್ತೊಂದು ಪದ್ಧತಿಯೇ ಎನ್ನಬಹುದು ಹೀಗೆ ಬೀದರ ಜಿಲ್ಲೆಯಾದ್ಯಾಂತ ಬಿಬಿಧ ಪ್ರಕಾರಗಳಲ್ಲಿ ನಾಗ ಪೂಜೆಗಳು ಕಂಡುಬರುತ್ತವೆ. ನಾಗಾರಾಧನೆಯ ಬಿಶಿಷ್ಟತೆ ಹಾಗೂ ನಾಗ ಶಕ್ತಿಗಳ ಬಗ್ಗೆ ಜನರಲ್ಲಿರುವ ನಂಬಿಕೆಗಳನ್ನು ಕುರಿತಾದ ಬಿದ್ವಾಂಸರಿಂದ ಅಭಿಪ್ರಾಯಗಳು ಗಮನೀಯವೆನಿಸುತ್ತವೆ.

ಶ್ರೀ ಪ್ರಕಾಶ್ ಅಮ್ಮಣ್ಣಾಯ, ಜೋತಿಷ್ಯ ಬಿದ್ವಾನ್ ಅವರು 'ನಾಗ ಎಂದರೆ ಮಾಮೂಲಿ ಸರಿಸೃಪವಲ್ಲ. ಇದೊಂದು ಬಿಶೇಷ ಜ್ಞಾನ ಹೊಂದಿದ ಜೀಬಿ. ಇದಕ್ಕೆ ಅತೀಂದ್ರಿಯ ಶಕ್ತಿ ಇದೆ. ಅಂತೆಯೇ ನಾಗನು ತ್ರಿಕಾಲ ಜ್ಞಾನಿ. ನಾಗನ ಚಲನೆ ನಿಧಾನ. ನಾಗನಿಗೆ ಭಯ ಎಂಬುದಿಲ್ಲ ಇತರ ಹಾವುಗಳು 'ಸರಕ್ಕನೆ' ಓಡಿಹೋದರೆ ನಾಗ ಮನುಷ್ಯನನ್ನು ಕಂಡರೆ ಅಲ್ಲೇ ನಿಂತುಬಿಡುತ್ತದೆ. ಇದು ನಾಗನಲ್ಲಿರುವ ಅತೀಂದ್ರಿಯ ಶಕ್ತಿಯ ಪರಿಣಾಮ. ಈಗಿನ ಕೆಲವರು ನಾಗಾರಾಧನೆ ಜನಪದ ಕಲೆ ಎಂಬ ರೀತಿಯಲ್ಲಿ ನೋಡುತ್ತಾರೆ. ಇದು ಜನಪದ ಪ್ರತಿನಿಧಿಯೂ ಹೌದು, ಪಾರಮಾರ್ಥಿಕವೂ ಹೌದು, ವೈಜ್ಞಾನಿಕವೂ ಹೌದು" [೫೯] ಎನ್ನುತ್ತಾರೆ. ಇದು ನಾಗನ ಶಕ್ತಿ ಸಾಮಾರ್ಥ್ಯಗಳನ್ನು ತಿಳಿಸುವುದರ ಜೊತೆಗೆ ನಾಗಾರಾಧನೆಯ ಬಿಶಿಷ್ಟತೆಯನ್ನು ಸ್ಪಷ್ಟಪಡಿಸುತ್ತದೆ. ನಾಗನ ಬಗ್ಗೆ ಮುಂದೊರೆಸುತ್ತ ಅವರು "ಕಲಿಯುಗದಲ್ಲಿ ಪ್ರತ್ಯಕ್ಷ ಕಾಣುವ ದೇವರೆಂದರೆ ನಾಗರಾಜ, ಇದು ಹಿಂದುಗಳು ಮಾತ್ರ ಆರಾಧಿಸುವ ದೇವರು ಎಂದು ತಿಳಿದುಕೊಂಡರೆ ತಪ್ಪು ಇದು ಇಡೀ ಜಗತ್ತಿಗೇ ಆರಾಧ್ಯ ದೈವ, ಆರಾಧನೆಯ ರೂಪಗಳು ಬೇರೆ ಬೇರೆ ಇರಬಹುದು. ಜಾತಿ ಧರ್ಮಗಳಿಗೆ ಅನುಸಾರವಾಗಿಯೂ ಇರಬಹುದು. ಆದರೆ ನಾಗಸಾನಿಧ್ಯ ಮಾತ್ರ ಮನುಕುಲಕ್ಕೆ ಸಂಬಂಧಿಸಿದುದಾಗಿದೆ. ಇತ್ತೀಚೆಗಿನ ದಿನಗಲಲ್ಲಿ ಕ್ರಿಶ್ಚಿಯನ್, ಮುಸ್ಲಿಂ, ಬೌದ್ಧ ಇನ್ನಿತರ ಧರ್ಮದವರೂ ನಾಗಾರಾಧನೆಯಲ್ಲಿ ಪಾಲ್ಗೊಳ್ಳುವುದನ್ನು ನಾವು ಕಾಣಬಹುದು. ಆದುದರಿಂದ ನಾಗರಾಜನು ಹಿಂದುಗಳ ಆರಾಧ್ಯ ಸೊತ್ತು ಮಾತ್ರವಲ್ಲ ಎಲ್ಲಾ ಜನರಿಗೂ ಬೇಕಾದವನೆ ಆಗಿದ್ದಾನೆ" [೬೦] ಎನ್ನುವುದು ನಾಗಪೂಜೆಯು ಸಾರ್ವತ್ರಿಕವಾದುದು. ಜಾತಿ-ಮತ ಪಂಥಗಳನ್ನು ಮೀರಿದ್ದು ಎನ್ನುವುದನ್ನು ಪುಷ್ಟಿಕರಿಸುತ್ತದೆ.

ಜನಪದರಲ್ಲಿ ಮೂರನೆಯ ಮಣ್ಣು ಪೂಜೆಯ ಹೆಸರಿನಲ್ಲಿ ವ್ಯಕ್ತವಾಗುವ ದೇವತೆ ಹುತ್ತಪ್ಪ, ಶ್ರಾವಣ ನಾಗಪ್ಪನ ಪೂಜೆಯ ಕಾಲ. ದ್ರಾಬಿಡರಿಂದ ಪ್ರಾರಂಭವಾದ ಪದ್ಧತಿ ಇದಾಗಿದ್ದರೂ ಆರ್ಯ ದ್ರಾಬಿಡ ಸಂಸ್ಕೃತಿ ಸಂಕರಗೊಂಡ ಮೇಲೆ ಈ ನಾಗಪೂಜೆ ಸಾರ್ವತ್ರಿಕವೆನಿಸಿದ್ದನ್ನು ಬಿದ್ವಾಂಸರ ಹೇಳಿಕೆಗಳಿಂದ ಕಂಡುಕೊಳ್ಳಬಹುದು ನಮ್ಮಲ್ಲಿ ಪ್ರಾಚೀನ

ಕಾಲದಿಂದಲೂ ನಾಗಪೂಜೆಗೆ ವಿಶೇಷ ಮಹತ್ವಕೊಡುತ್ತ ಬಂದಿದ್ದಾರೆ. ಕಾರಣ ಶ್ರೀವಿಷ್ಣು ಶೇಷಶಾಯಿ, ಶಿವ ಸರ್ಪಭೂಷಣ, ಭೂಮಿಯನ್ನು ನೆತ್ತಿಯ ಮೇಲೆ ಹೊತ್ತುವ ಆದಿಶೇಷ, ಗಣಪತಿಯ ಹೊಟ್ಟೆಯ ನಡುಕಟ್ಟು **ನಾಗದೇವ** ಎನ್ನಲಾಗುತ್ತದೆ.

ನಂಬಿಕೆಗಳು :

ಉತ್ತರ ಕರ್ನಾಟಕದ ಬೀದರ ಜಿಲ್ಲೆಯಲ್ಲಿ ಇಂದಿಗೂ ಅಸ್ತಿತ್ವದಲ್ಲಿರುವ ನಾಗರ ಪಂಚಮಿ ಮುಖ್ಯವಾಗಿ ಹೆಣ್ಣು ಮಕ್ಕಳ ಹಬ್ಬ, ಅಂದಿನ ನಾಗರ ಪೂಜೆ ವಿಶೇಷವಾದದ್ದು. ಶ್ರಾವಣ ಮಾಸದಲ್ಲಿ ಬರುವ ಈ ಹಬ್ಬದಂದು ಜಾತಿ ಭೇದವಿಲ್ಲದೆ ಎಲ್ಲ ವರ್ಗಗಳ ಹೆಣ್ಣುಮಕ್ಕಳು ಹುತ್ತದ ಪೂಜೆಯನ್ನು ಮಾಡುತ್ತಾರೆ. ಹುತ್ತಕ್ಕೆ ಹಾಲೆರೆಯುವುದು, ಆರತಿ ಮಾಡುವುದು, ಹಂಗನೂಲು ಹಾಕಿಕೊಳ್ಳುವುದು, ಹೊಸ ಬಟ್ಟೆ ಧರಿಸಿ ನಾಗಣ್ಣನಿಗೆ ಹಾಲೆರೆದು ಪೂಜೆ ಮಾಡುವುದು, ಬರುವಾಗ ಅಳ್ಳನ್ನು ಚೆಲ್ಲುತ್ತಾ ಬರುವುದು ಮುಂತಾಗಿ ಹಲವು ಆಚರಣೆಗಳು ನಡೆಯುತ್ತವೆ ಇವುಗಳ ಜೊತೆಯಲ್ಲಿ ಬೀದರ ಜಿಲ್ಲೆಯಲ್ಲಿ ಮಾತ್ರ ಬುಲಾಯಿ ಹಾಡುಗಳನ್ನು ಹಾಡುತ್ತಾ ಭುಲಾಯಿ ಹಾಕುವುದೂ ಸಹ ವಿಶಿಷ್ಟವಾಗಿದೆ. ನಾಗರ ಪಂಚಮಿ ಹಬ್ಬದ ಆಚರಣೆಯ ಹಿನ್ನೆಲೆಗೆ ಇಲ್ಲಿಯ ಜನಪದರ ನಂಬುಗೆಯ ಕಥೆಗಳು ಹೀಗಿವೆ.

೧) ಹೊಲದಲ್ಲಿ ಒಕ್ಕಲಿಗನೊಬ್ಬ ರಂಟೆ ಹೊಡೆಯುತ್ತಿದ್ದಾಗ ಅದರ ಕುಡಕ್ಕೆ ಸಿಕ್ಕು ಹಾವಿನ ಮರಿಗಳೆಲ್ಲ ಸತ್ತು ಹೋದದ್ದರಿಂದ ತಾಯಿ ಹಾವು ರೊಚ್ಚಿಗೆದ್ದು ಅಂದಿನ ರಾತ್ರಿ ಒಕ್ಕಲಿಗನ ಮನೆಯ ಮಂದಿಯನ್ನೆಲ್ಲ ಕಚ್ಚಿಕೊಂದು ಹಾಕಿದರೂ, ಅದರ ಸಿಟ್ಟು ಕಡಿಮೆಯಾಗಲಿಲ್ಲ. ದೂರದ ಅತ್ತೆ ಮನೆಯಲ್ಲಿದ್ದ ಆ ಒಕ್ಕಲಿಗನ ಮಗಳನ್ನು ಕೊಲ್ಲಲು ಅತ್ತ ಹೊರಟಿತು. ಅದೇ ಹೊತ್ತಿಗೆ ಅತ್ತೆಯ ಮನೆಯಲ್ಲಿದ್ದ ಆ ಒಕ್ಕಲಿಗನ ಮಗಳು ಮಣ್ಣಿನ ಹಾವನ್ನು ಮಾಡಿ ಹಾಲೆರೆಯುತ್ತಿದ್ದದ್ದನ್ನು ಕಂಡ ನಾಗಿಣಿಯ ರೊಚ್ಚು ಸ್ವಲ್ಪ ಶಾಂತವಾಯಿತು. ಅದು ತಾನು ಒಕ್ಕಲಿಗನ ಮನೆಯಲ್ಲಿ ಮಾಡಿದ ಕೇಡನ್ನು ಹೇಳಲು ಆಕೆ ಬೋರಾಡಿ ಅತ್ತು ತನ್ನ ತವರವರನ್ನೆಲ್ಲ ಬದುಕಿಸೆಂದು ಬೇಡಿಕೊಂಡಳು. ಆ ನಾಗಿಣಿಗೆ ಕರುಣೆ ಹುಟ್ಟಿ ಒಕ್ಕಲಿಗನ ಮನೆಗೆ ಬಂದು ಎಲ್ಲರ ವಿಷವನ್ನು ಮರಳಿ ಹೀರಿ ಬದುಕಿಸಿದ್ದರಿಂದ ಅವರೆಲ್ಲ ನಾಗಿಣಿಯನ್ನು ಪೂಜಿಸುತ್ತ ಬಂದರೆಂಬ ಕಥೆಯಿದೆ. ಅಂದು ಶ್ರಾವಣ ಶುದ್ಧ ಚೌತಿಯಾದ್ದರಿಂದ ಅಂದಿನ ದಿನವನ್ನು ನಾಗಚೌತಿ ಎಂಬ ಹೆಸರಿನಿಂದ ಕರೆಯುತ್ತ ಬಂದುದೇ ನಾಗಪೂಜೆಗೆ ಕಾರಣವೆನಿಸಿತು. ಮಗಳ ಈ ಉಪಕಾರದ ದ್ಯೋತಕವಾಗಿಯೇ ಇಂದಿಗೂ ನಾಗರಪಂಚಮಿ ಹಬ್ಬಕ್ಕೆ ಮಗಳನ್ನು ತವರಿನವರು ಕರೆತರುವರೆಂದು ಜನಪರ ನಂಬಿಕೆಯಾಗಿದೆ".[೯] ಈ ಮಾತನ್ನು ಪುಷ್ಟೀಕರಿಸುವ ಹಾಡು ಹೀಗಿದೆ.

ನಾಗರ ಪಂಚಮಿ ಹೆಣ್ಣ ಮಕ್ಕಳ ಹಬ್ಬ
ಹೋಗಿ ಸಂಗಮ್ಮಳಿಗೆ ಕರತಲಿ ಬೇಗ ಕೋಲ ಕೋಲ
ಎತ್ತಾರ ತಂದಾನ ಪಟ್ಟರ ಬಿಗದಾನ,
ಮನಿಕಡಿಜ್ಯಾಕಂತ ಹೇಳ್ಯಾನ ಕೋಲ ಕೋಲ[೬]

೨)	ಬಡವನಾದ ಅಣ್ಣ ತಂಗಿಯನ್ನು ತವರಿಗೆ ಕರೆತರಲು ಹೋದ. ತಂಗಿ ಶ್ರೀಮಂತ ಮನೆತನದ ಸೊಸೆಯಾಗಿದ್ದಳು. ಅಣ್ಣ ಕರೆಯಲು ಬಂದಾಗ ತನ್ನೆಲ್ಲಾ ಚಿನ್ನದಾ ಭರಣಗಳನ್ನು ತೊಟ್ಟು ಸಂತೋಷದಿಂದ ಬರುತ್ತಾಳೆ. ಬಡತನದಿಂದ ಬಳಲುತ್ತಿದ್ದ ಅಣ್ಣನಿಗೆ ತಂಗಿಯನ್ನು ಕರೆದು ತರುವಾಗ ಅವಳ ಚಿನ್ನದಾಭರಣಗಳ ಮೇಲೆ ಕಣ್ಣು ಬಿದ್ದು ದುರಾಸೆ ಮೂಡುತ್ತದೆ. ಆಭರಣಗಳನ್ನು ಕೊಡು ಎಂದು ಕೇಳಿದಾಗ ತಂಗಿ ಒಪ್ಪಿ ಕೊಡಲು ಸಿದ್ದಳಾಗುತ್ತಾಳೆ. ಅವಳು ಬದುಕುಳಿದರೆ ತನ್ನ ದುರಾಸೆ ಬಯಲಿಗೆ ಬರುವುದೆಂದು ಆಕೆಯನ್ನು ಕೊಲ್ಲಲು ದಾರಿಯಲ್ಲಿದ್ದ ಕಲ್ಲು ಬಂಡೆಯನ್ನೊಂದು ಎತ್ತುತ್ತಾನೆ. ದುರಾದೃಷ್ಟಕ್ಕೆ ಕಲ್ಲಿನ ಕೆಳಗಿದ್ದ ಹಾವು ಅವನನ್ನು ಕಚ್ಚುತ್ತದೆ. ನಾಗರ ಹಾವಿನ ವಿಷದಿಂದ ಸತ್ತ ಅಣ್ಣನ್ನು ಬದುಕಿಸಲು ತಂಗಿ ನಾಗದೇವನಲ್ಲಿ ಮೊರೆಹೋಗುತ್ತಾಳೆ. ಅವಳ ಪ್ರಾರ್ಥನೆಗೆ ಮೆಚ್ಚಿ ನಾಗಣ್ಣ ಅವಳ ಅಣ್ಣನನ್ನು ಬದುಕಿಸುತ್ತಾನೆ. ಅಂದು ಶ್ರಾವಣ ಶುದ್ಧ ಚೌತಿ, ಅಂದಿನಿಂದ 'ನಾಗರ ಪಂಚಮಿ' ನಾಗಾರಾಧನೆಯ ಹಬ್ಬವೆಂದು ಹೆಣ್ಣುಮಕ್ಕಳಿಂದ ಆಚರಿಸಲು ಪ್ರಾರಂಭಿಸಿರಬಹುದು. ತಂಗಿಯನ್ನು ಅಣ್ಣ ತಪ್ಪದೇ ಹಬ್ಬಕ್ಕೆ ಕರೆದುಕೊಂಡು ಬರುವ ಸಂಪ್ರದಾಯ ಪ್ರಾರಂಭವಾಗಿರಬಹುದು. ಇದು ತವರಿಗೂ ನಾಗಪಂಚಮಿಗೂ ಹೆಣ್ಣುಮಕ್ಕಳಿಗೂ ವಿಶೇಷವಾದ ನಂಟನ್ನು ಬೆಳೆಸಿದಂತೆ ಕಂಡುಬರುತ್ತದೆ. ಹೆಣ್ಣು ಮಗಳು ನಾಗರ ಪಂಚಮಿಯ ಹಬ್ಬ ಅದರ ಸಡಗರವನ್ನು ನೆನಪಿಸಿಕೊಳ್ಳುತ್ತ ಅಣ್ಣ ಕರೆಯಲು ಬರುವನು ಎಂದು ಕಾದು ನೋಡುವುದನ್ನು ಈ ಹಾಡನಲ್ಲಿ ಕಾಣಬಹುದು.

ಹಬ್ಬ ಬಂದಿತೆಂದು ಹಿಗ್ಗಿಲಿ ಇರತಾರ
ಅಣ್ಣ ಯಾವಾಗ ಬರುವನು ಕರಿಯಾಕ ಕೋಲು ಕೋಲು
	ಪಂಚಮಿ ಹಬ್ಬ ಹೆಣ್ಣು ಮಕ್ಕಳ ಕರಿಯುವ ಹಬ್ಬ
	ಕೊಬ್ಬರಿ ಬೆಲ್ಲ ಸವಿಯುವ ಹಬ್ಬ ಕೋಲು ಕೋಲು
ವಾರಿಗಿ ಗೆಳತ್ಯಾರು ಎಲ್ಲರೂ ಕೂಡಿ
ಹಿಗ್ಗಿಲಿ ಜೋಕಾಲಿ ಆಡುವ ಹಬ್ಬ ಕೋಲು ಕೋಲು
	ಚಿಂತಿಯ ನೀಗಿ ಬಾಳುವ ಹಬ್ಬ
	ಹುತ್ತೀಗಿ ಹೋಗಿ ನಾಗಪ್ಪಗ ಹಾಲೆರೆವ ಹಬ್ಬ ಕೋಲು ಕೋಲು
ತವರಿಗಿ ಹರಕೆಯ ಮಾಡುವ ಹಬ್ಬ
ಈಶೆಂಬ ಸಂಪತ್ತು ಗಳಿಸುವ ಹಬ್ಬ ಕೋಲು ಕೋಲು
	ಶ್ರಾವಣ ಮಾಸದ ಪಂಚಮಿ ಹಬ್ಬದ
	ಪಂಚಾಮೃತ ಅಡಿಗಿ ಮಾಡುವಾ ಕೋಲು ಕೋಲು
ಪಂಚಾಮೃತದ ಯಡಿಯ ಮಾಡೋಣ ಬಾ ಗೆಳತಿ
ಒನಪಿನಲ್ಲಿ ಒಲುಮೆಯ ಬೆಳೆಸೋಣ
	ಹಬ್ಬ ಬಂದಿತೆಂದು ಹಿಗ್ಗಿಲಿ ಇರತಾರ
	ಅಣ್ಣ ಯಾವಾಗ ಬರುವನು ಕರಿಯಾಕ ಕೋಲು ಕೋಲು [೬೩]

ಹೀಗೆ ತವರಿನಲ್ಲಿ ತಾನೇನು ಮಾಡಬೇಕೆಂದು ಮೊದಲೇ ನಿರ್ಧರಿಸಿ ಅಣ್ಣನ ದಾರಿಯನ್ನು ಕಾಯುವ ಹೆಣ್ಣುಮಗಳ ಭಾವ-ಬಯಕೆಗಳು ಈ ಪದ್ಯದಲ್ಲಿ ಮೂಡಿನಿಂತಿವೆ. ಮತ್ತೊಂದು ಹಾಡಿನಲ್ಲಿ ತನ್ನ ಅಣ್ಣ-ತಮ್ಮರಿಗಾಗಿ ಹೆಣ್ಣುಮಗಳು ಬೇಡಿಕೊಳ್ಳುವ ರೀತಿ ತುಂಬಾ ಮನೋಜ್ಞವಾಗಿ ಮೂಡಿಬಂದಿದೆ.

ಒಡಿಯ ನನ್ನ ನಾಗಾನಾಥ
ಅಡಿಗಡಿಗಿ ಭಜಿಸುವೆನು ಚರಗೀಲಿ ಹಾಲ ಎರೆದೇವು ಕೋಲ
ಚರಗೀಲಿ ಎಲೆ ಹಾಲ ಎರದು ನಾವು ಬೇಡಿಕೊಂಡೆವು
ನಾಲವರು ಅಣ್ಣ-ತಂಬರು ಸುಖಲಿರಲಿ ಕೋಲ
ಪಂಚಮಿ ದಿನ ನಾಡ ಮೇಲಿನ
ನಾರೆರೆಲ್ಲ ಬರುಬಿಸ್ತಾರವೇನು ಹೇಳಲಿ ಕೋಲ [೯೪]

ನಾಗಪೂಜೆ, ಹಾಲೆರೆಯುವ ಆಚರಣೆ ಕುರಿತಾದ ಜನಪದ ನಂಬಿಕೆಯ ಇನ್ನೊಂದು ಕತೆಯು ಈ ರೀತಿಯಲ್ಲಿದೆ.

೩) ಪಂಚಮಿ ಹಬ್ಬದ ದಿನದಂದು ಹುಟ್ಟಿದ ಅವಳ ಗಂಡು ಮಕ್ಕಳಿಗೆ ದೀಪ ಹಚ್ಚಿ ನೋಡುವಾಗ ಆ ಮಕ್ಕಳು ಹಾವುಗಳಾಗಿ ಹರಿದು ಹೋಗುತ್ತವೆ. ಆಗ ಅವರ ಅಕ್ಕ ತಮ್ಮಂದಿರ ಸಲುವಾಗಿ ಪ್ರತಿ ಪಂಚಮಿಯಂದು 'ಚುಂಗು-ಮಂಗು' ಎಂದು ಹೆಸರಿಟ್ಟು ಹಾವುಗಳಿಗೆ ಹಾಲೆರೆಯುತ್ತಿದ್ದಳು. ಪ್ರತಿ ವರ್ಷವೂ ಹೀಗೆ ಮುಂದೊರೆಸಿಕೊಂಡು ಬರುತ್ತಾಳೆ. ಮುಂದೆ ಮದುವೆಯಾದ ಮೇಲೆ ಅತ್ತೆ ಮನೆಯಲ್ಲೂ ಹಾಗೇ ಅಳುತ್ತಾ ಹಾಲೆರೆಯುತ್ತಿರುವಾಗ ಅತ್ತೆ ಏಕೆ ಅಳುವಿ ಎಂದು ಕೇಳುತ್ತಾಳೆ. ಅದಕ್ಕೆ ಅವಳು ಅಂದು ತನ್ನ ತಮ್ಮಂದಿರು ಹಾವಾಗಿ ಹೋದ ಘಟನೆಯನ್ನು ಹೇಳಿ ಅಳುತ್ತಿರುವಾಗ ನಾಗರಾಜನೇ ಮನುಷ್ಯ ರೂಪದಲ್ಲಿ ಬಂದು ನಾನು ನಿನ್ನ ತಮ್ಮ 'ಚುಂಗು' ಎಂದು ಹೇಳಿ ಅವಳನ್ನು ಕರೆದುಕೊಂಡು ಹೋಗುತ್ತಾನೆ. ನಾಗಲೋಕದ ವೈಭವ ಕಂಡು ಸಂತೋಷ ಪಡುತ್ತಾಳೆ. ಅಂದಿನಿಂದ ಅವಳು ಪ್ರತಿ ಪಂಚಮಿ ಹಬ್ಬದಂದು ಹಾಲೆರೆಯುವುದನ್ನು ತಪ್ಪದೇ ಮಾಡುತ್ತಾಳೆ. ಹೀಗೆ ಅಣ್ಣ-ತಮ್ಮರಿಗಾಗಿ ಹಾಲೆರೆಯುವ, ತವರು ಮನೆಗೆ ಹೋಗುವ ನಾಗಪ್ಪನ ಕೃಪೆಗೆ ಪಾತ್ರರಾಗುವ ಮುಂತಾದ ಕಾರಣಗಳಿಂದ ನಾಗಪೂಜೆ ಹಾಲೆರೆಯುವ ಆಚರಣೆಗಳು ಬಂದವು ಇನ್ನೂ ನಡೆಯುತ್ತಲೇ ಇವೆ".[೯೪]

ಇಂತಹ ನಂಬಿಕೆಗಳೊಂದಿಗೆ ಪೌರಾಣಿಕ ಹಿನ್ನೆಲೆಯ ನಂಬುಗೆಯ ಕಥೆಗಳು ಪ್ರಚಲಿತವಾಗಿವೆ. ಅವುಗಳಲ್ಲೊಂದು ಹೀಗಿದೆ. "ಮಹಾಭಾರತದ ಚಿತ್ರಾಂಗದೆ ಉಲೂಪಿಯರದು ನಾಗಕುಲ ಒಮ್ಮೆ ನಾಗರಾಜನಾದ ತಕ್ಷಕನು ಪರೀಕ್ಷಿತ ರಾಜನನ್ನು ಕಚ್ಚಿಕೊಲ್ಲಲು, ಆತನ ಮಗನಾದ ಜನಮೇಜಯ ನಾಗವಂಶವನ್ನೇ ನಿರ್ಮೂಲಗೊಳಿಸಲು ಸರ್ಪಯಾಗವನ್ನು ಕೈಕೊಂಡನು. ತಕ್ಷಕನು ದೇವೇಂದ್ರನ ಮೊರೆ ಹೋದದ್ದರಿಂದ ಋತ್ವಿಜರ ಮಂತ್ರಾಹ್ವಾನದ

ಪರಿಣಾಮವಾಗಲಿಲ್ಲ. ಬಳಿಕ ಇಂದ್ರ ಸಹಿತ ತಕ್ಷಕನನ್ನು ಆಹ್ವಾನಿಸಿದ್ದರಿಂದ ಗಾಬರಿಗೊಂಡ ಇಂದ್ರ ತಕ್ಷಕರಿಬ್ಬರೂ ಆಸ್ತಿಕ ಮುನಿಯ ಮೊರೆಹೊಕ್ಕರು. ತಂದೆ ಆರ್ಯ ಪುರುಷ ತಾಯಿ ನಾಗಕನ್ಯೆಯಲ್ಲಿ ಜನ್ಮತಳೆದ ಆಸ್ತಿಕನ ಮಧ್ಯಸ್ತಿಕೆಯಿಂದ ತಕ್ಷಕನು ತನ್ನ ವಿಷಹೀರಿಕೊಂಡು ಪರೀಕ್ಷಿತರಾಜನನ್ನು ಬದುಕಿಸಿದನೆಂದು, ಅದರಿಂದ ಜನಮೇಜಯನ ಸಿಟ್ಟು ಇಳಿಯಿತೆಂಬ ಕಥೆಯಿದೆ. ಅಂದಿನಿಂದ ಆರ್ಯರು ನಾಗನನ್ನು ಮನ್ನಿಸಿ 'ನಾಗಪೂಜೆ'ಗೆ ಮನ್ನಣೆ ಕೊಟ್ಟರು".[೯೭] ಅಂದರೆ ದ್ರಾವಿಡರ ದೇವತೆಯಾಗಿದ್ದ ನಾಗನನ್ನು ಆರ್ಯರೂ ಪೂಜಿಸಲು ಪ್ರಾರಂಭಿಸಿದ್ದು, ನಾಗಾರಾಧನೆ ಸಾರ್ವತ್ರಿಕ ಪೂಜೆಯಾದ ಘಟನೆಯೇ ಇದಾಗಿರಬಹುದು. ಅಂತೆಯೇ ಇಂದು ಸಾರ್ವತ್ರಿಕವಾಗಿ ನಡೆಯುವ **'ನಾಗಪೂಜೆ'** ಗಮನಾರ್ಹವಾಗಿದೆ.

ಹೀಗೆ ಹಲವು ನಂಬಿಕೆಗಳ ಹಿನ್ನೆಲೆಯಲ್ಲಿ 'ನಾಗಪೂಜೆ' ಬೆಳೆದುಬಂದದ್ದು ಕತೆಗಳಲ್ಲಿ ಕಂಡುಬರುತ್ತದೆ. "ನಂಬಿಕೆ ಎಂದರೆ ಒಂದು ಹೇಳಿಕೆ ಅಥವಾ ವಸ್ತು ಸ್ಥಿತಿಯ ಬಗ್ಗೆ ಮಾನಸಿಕ ಒಪ್ಪಿಗೆಯನ್ನು ತೋರುವ ಪ್ರವೃತ್ತಿ ಜನಪದರ ಜೀವನದಲ್ಲಿ ಹಾಸುಹೊಕ್ಕಾಗಿರುವ ಈ ನಂಬಿಕೆಗಳು ಜನತೆಯ ಮನೋಭಾವ ಹಾಗೂ ಆದಿಮ ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಪರಿಚಯಿಸುವ ಪ್ರಮುಖ ಸಾಧನಗಳಾಗಿವೆ"[೯೭] ಎಂಬ ರಾಜಪ್ಪ ದಳವಾಯಿ ಅವರ ಅಭಿಪ್ರಾಯ ಸಮಂಜಸವೆನಿಸುತ್ತದೆ. ಜನಪದದಲ್ಲಿ ನಂಬಿಕೆ ಒಂದು ಬದುಕಿನ ಕ್ರಮವಾಗಿರುತ್ತದೆ. ಇಂಥ ನಂಬಿಕೆಗಳಿಗೆ ಆಚರಣೆಯ ಭಾಗವೂ ಸಹಜವಾಗಿ ಸ್ಥಾಪಿತವಾಗುತ್ತದೆ. ಅಂತಹ ನಂಬಿಕೆ ಜನಪದ ಜೀವನ ಧೋರಣೆಯೇ ಆಗಿದೆ ಎಂಬುದು ವಿದ್ವಾಂಸರ ಅಭಿಪ್ರಾಯ, ಈ ಹಿನ್ನೆಲೆಯಲ್ಲಿ ನಾಗರ ಪಂಚಮಿ ಹಬ್ಬದ ಆಚರಣೆಗಳನ್ನು ಗಮನಿಸೋಣ.

ಆಚರಣೆಗಳು :

ನಾಗರ ಪಂಚಮಿ ಹಬ್ಬದಾಚರಣೆ ಪ್ರಾದೇಶಿಕವಾಗಿ ಭಿನ್ನ ಭಿನ್ನವಾಗಿ ಕಂಡುಬಂದರೂ ಆಚರಿಸುವುದು ಮಾತ್ರ ಮೂರು ದಿನಗಳವರೆಗೆ, ಮನೆ ಮನೆಗಳಲ್ಲಿ ಹಬ್ಬಕ್ಕೆ ಮೊದಲೇ ನಾಗದೇವನ ನೈವೇದ್ಯಕ್ಕೆ ಅರಳು, ಅರಳಿಟ್ಟು, ತಂಬಿಟ್ಟು, ವಿಧವಿಧ ಉಂಡಿ, ಎಳ್ಳು ಚಿಗಳಿಗಳನ್ನು ತಯಾರಿಸುತ್ತಾರೆ. ಜೊತೆಗೆ ಹುರಿದ ಕಡಲೆ, ಶೇಂಗಾ, ಕರಿ ಬಟಾಣಿ ಮುಂತಾದವುಗಳಿರುತ್ತವೆ. ನಾಗಚೌತಿ, ನಾಗರ ಪಂಚಮಿ ಮತ್ತು ಸಿರಿಯಾಳ ಷಷ್ಠಿ ಎಂದು ಮೂರು ದಿವಸ ಆಚರಣೆಗಳಿರುತ್ತವೆ. ಶ್ರಾವಣಶುದ್ಧ ಚೌತಿಯಿಂದಲೇ ಹಬ್ಬದ ಸಡಗವು ಪ್ರಾರಂಭವಾಗಿ, ಗೃಹಣೀಯರಿಗೆ ಅಂದಿನಿಂದಲೇ ಕೈತುಂಬಾ ಕೆಲಸ ಶುರುವಾಗುತ್ತದೆ.

ಮಲೆನಾಡಿನಲ್ಲಿ ಚೌತಿಯ ದಿನವೇ ಶುಚಿರ್ಭೂತರಾಗಿ ಒದ್ದೆಯುಟ್ಟು, ಉಪವಾಸವಿದ್ದು, ಭಕ್ತಿಪೂರ್ವಕವಾಗಿ 'ತನಿ' ಎರೆಯುವ ವಾಡಿಕೆ ಇರುವುದು ಕಂಡುಬರುತ್ತದೆ ಪಂಚಮಿ ದಿನವಂತೂ ನಾಗರ ಆರಾಧನೆಗೆ ವಿಶೇಷ ತಯಾರಿ ಆಗಲೇಬೇಕು. ಹುತ್ತದ ಮಣ್ಣು, ಹುಲಿಕಡ್ಡಿ, ಕಾರೇ ಕಾಯಿ, ಹುಣಸೇ ಕಾಯಿ, ನೆಲಗೆಡಲೆ ಅರಳು, ಅಕ್ಕಿಹಿಟ್ಟು, ತಾಳೆ ಹೂವುಗಳನ್ನು ಸಿದ್ಧಮಾಡಿಕೊಳ್ಳಬೇಕು. ಹುಲೀ ಕಡ್ಡಿಯಿಂದ ಚಿಕ್ಕದಾಗಿ ಚಪ್ಪರ ನಿರ್ಮಿಸಿ, ಅದರಡಿಯಲ್ಲಿ

ಹುತ್ತದ ಮಣ್ಣನ್ನು ಇಟ್ಟು ಅದರ ಮೇಲೆ ಹಿಟ್ಟಿನಿಂದ ಮಾಡಿದ ತೊಟ್ಟಿಲು ಬಟ್ಟಲನ್ನು ಇಟ್ಟು, ಅರಿಸಿಣದಲ್ಲಿ ನೆನೆಸಿದ ಹಳದಿ ಗೆಜ್ಜೆ ವಸ್ತ್ರಗಳು ಹಾಗೂ ಹೂಗಳಿಂದ ಅಲಂಕರಿಸಿ, ಹಾಲು-ತುಪ್ಪದಿಂದ 'ತನಿ' ಎರೆದು ಪೂಜಿಸಿ ಪ್ರಾರ್ಥಿಸುತ್ತಾರೆ. ನಾಗಪ್ಪನಿಗೆ ಬಹಳ ಪ್ರಿಯವಾದ ಹಸಿಬಿಗಳ, ತಂಬಿಟ್ಟು, ಕಡುಬನ್ನು ನೈವೇದ್ಯ ಮಾಡುತ್ತಾರೆ. "ಪಂಚಮಿ ವೇಳೆಗೆ ಹೂವಿನಿಂದ ಹೊರಬೀಳುವ ನಾಗರಕಟು (ಚಿಕ್ಕ ಹುಣಸೆಕಾಯಿಯ ಎಸಳು) ಬಾಯಲ್ಲಿ ನೀರೂರಿಸುತ್ತಿದ್ದರೂ, ನಾಗಪ್ಪನಿಗೆ ಹಾಲೆರೆಯುವುದಕ್ಕೆ ಮುನ್ನ ತಿಂದರೆ ಮುಖದ ತುಂಬೆಲ್ಲ ತದ್ದು ಏಳುತ್ತವೆ ಎಂಬ ನಂಬಿಕೆಯಿದೆ".[೯೮]

ನೈವೇದ್ಯ ನಂತರ ದೇವರ ಎದುರಲ್ಲೆ ಒಡಹುಟ್ಟಿದವರ ಬೆನ್ನು ತೊಳೆಯುವ ಸಂಪ್ರದಾಯವನ್ನು ರೂಢಿಸಿಕೊಂಡು ಬಂದಿದ್ದಾರೆ. "ತಲೆತಲಾಂತರಗಳಿಂದ ಬಂದ ನಮ್ಮ ಹಿರಿಯರ ಧಾರ್ಮಿಕ ಪರವಾದ ಆಚಾರ ವಿಚಾರ ನಡೆನುಡಿಗಳನ್ನು ಚಾಚುತಪ್ಪದೇ ಒಂದು ಕೇರಿ ಅಥವಾ ಒಂದು ಊರು ಅಥವಾ ಒಂದು ನಾಡಿನಲ್ಲಿ ವಾಸಿಸುವ ಜನಸಮೂಹವು ಒಟ್ಟುಗೂಡಿ, ಆಚರಿಸುವಾಗ ಉಂಟಾಗುವ ಸಂಸ್ಕೃತಿಯ ಮೊತ್ತವನ್ನು **'ಸಂಪ್ರದಾಯ'** ಎಂದು ಕರೆಯಬಹುದು. ತಲೆಮಾರಿನಿಂದ ತಲೆಮಾರಿಗೆ ಸಮಾಜದಲ್ಲಿ ಮುಂದುವರಿಯುವ ವಿಶಿಷ್ಟ ವಿಧಿ, ಉಪಾಸನೆ ಮತ್ತು ಪದ್ಧತಿಗಳು ಇಲ್ಲಿ ಸೇರಿಕೊಂಡತ್ತಿರುತ್ತವೆ. ಮಾನವರ ನಂಬಿಕೆಗಳೇ ಸಂಪ್ರದಾಯಗಳ ಸೃಷ್ಟಿಗೆ ಕಾರಣವಾಗುತ್ತವೆ".[೯೯] ಎಂಬ ಅಭಿಪ್ರಾಯವು ಸಂಪ್ರದಾಯಗಳ ಪ್ರಾಚೀನತೆ ಹಾಗೂ ಸೃಷ್ಟಿಯ ಬಗ್ಗೆ ಬೆಳಕು ಚೆಲ್ಲುತ್ತದೆ. ಮಲೆನಾಡಿನಲ್ಲಿ ನಾಗಪ್ಪನಿಗೆ ನೈವೇದ್ಯ ಮಾಡಿದ ಹಾಲು-ತುಪ್ಪದಿಂದ ತಯಾರಿಸಿದ 'ತನಿ'ಯನ್ನು ಒಡಹುಟ್ಟಿದವರ ನಾಭಿಗೂ ಬೆನ್ನಿಗೂ ತಳೆದು ಆಶೀರ್ವದಿಸುವ ಪದ್ಧತಿ ಇಂದಿಗೂ ಕಂಡುಬರುತ್ತದೆ. ಸಹೋದರರು ಪ್ರೀತಿಯ ಸಂಕೇತವಾಗಿ ಕೊಡುವ ಉಡುಗೊರೆಗಳ ಹಿನ್ನೆಲೆಯಲ್ಲಿಯೂ ಅಪಾರ ಅರ್ಥವಿದ್ದು, ಪೌರಾಣಿಕ ದೃಷ್ಟಾಂತಗಳು ಕಂಡುಬರುತ್ತವೆ.

ಬಯಲು ಸೀಮೆಯ ಸಂಪ್ರದಾಯ ಮಲೆನಾಡಿನ ಸಂಪ್ರದಾಯಕ್ಕಿಂತ ಭಿನ್ನವಾಗಿ ಕಂಡುಬರುತ್ತದೆ. ಹುಬ್ಬಳ್ಳಿ, ಧಾರವಾಡ, ಗದಗ, ಬೆಳಗಾಂವ, ಬಿಜಾಪೂರ ಮುಂತಾದ ಕಡೆಗಳಲ್ಲಿ ಇದು 'ಪಂಚಮಿ ಹಬ್ಬ'ವೆಂದೇ ಪ್ರಖ್ಯಾತಿ ಅಂದು ಅಣ್ಣ ತಂಗಿಯರು, ಗೆಳತಿಯರು ಒಟ್ಟಾಗಿ ಸಂತೋಷ ಸಂಭ್ರಮಗಳಿಂದ ಹಬ್ಬವನ್ನು ಆಚರಿಸುತ್ತಾರೆ. ಮನೆ ಮನೆಗಳಲ್ಲಿ ಹಬ್ಬಕ್ಕೆ ಮೊದಲೇ ನಾಗದೇವನ ನೈವೇದ್ಯಕ್ಕೆ ಅರಳು, ಅರಳಿಟ್ಟು, ತಂಬಿಟ್ಟು, ವಿಧವಿಧ ಉಂಡಿ, ಎಳ್ಳುಬಿಗಳಿಗಳನ್ನು ತಯಾರಿಸುತ್ತಾರೆ. "ಈ ನಾಗಪಂಚಮಿ ಮೂರು ದಿವಸದ ಹಬ್ಬ, ಮೊದಲನೆಯ ದಿನ ನಾಗರ ಅಮವಾಸ್ಯೆ ಅಂದರೆ ರೊಟ್ಟಿ ಪಂಚಮಿ ಎರಡನೆಯ ದಿನ ನಾಗಚೌತಿ, ಮೂರನೆಯ ದಿನ ನಾಗರ ಪಂಚಮಿ".[೧೦೦] ಗುಳ್ಳವ್ವನ ಹಬ್ಬಕ್ಕೆ ತವರಿಗೆ ಬರಲಾಗದ ಹೆಣ್ಣುಮಗಳು ನಾಗರ ಪಂಚಮಿಗಾದರೂ ಬರಲೇಬೇಕೆಂಬ ನಿಯಮ ಕಂಡುಬರುತ್ತದೆ. ನಾಗರ ಅನುವಾಸ್ಯೆ ದಿವಸ ಹೆಣ್ಣುಮಕ್ಕಲು ತಮ್ಮ ಸಮಸ್ತ ಬಳಗದೊಂದಿಗೆ ಹಣತೆಪೂಜೆ ಮಾಡುವುದುಂಟು. ದೀಪವಿರುವ

ಮನೆಗೆ ಅಷ್ಟ ವಿವಿಧ ಲಕ್ಷ್ಮೀಯರು ಬಂದು ನೆಲೆಸುವರೆಂಬ ಭಾವನೆಯೇ ಅಂದು ದೀಪದ ಪೂಜೆಗೆ ಕಾರಣ. ಮಾರನೆಯ ದಿನ ನಾಗಚೌತಿ ನಾಗನನ್ನು ಭಯಭಕ್ತಿಯಿಂದ ಪೂಜಿಸುವ ದಿನ. ಹೆಣ್ಣುಮಕ್ಕಳಿಗೆ ಇದೊಂದು ಮಹತ್ವದ ವ್ರತ. ಮನೆ ಮಂದಿಯೆಲ್ಲ ತಲೆಗೆ ನೀರುಹಾಕಿಕೊಂಡು ಹೊಸ ಬಟ್ಟೆ ಉಟ್ಟು ಈ ಹಬ್ಬವನ್ನು ಆಚರಿಸುತ್ತಾರೆ. ಪ್ರತಿಯೊಂದು ಮನೆಯವರೂ ಸಮೀಪದ ಹುತ್ತವಿದ್ದಲ್ಲಿಗೆ ಹೋಗಿ ಹುತ್ತ ಪೂಜಿಸಿ ಅದೇ ಮಣ್ಣಿನಿಂದ ನಾಗಪ್ಪನ ವಿಗ್ರಹ ಮಾಡಿ, ಕುಂಬಳ ಎಲೆಯಿಟ್ಟು ಹೊಸ ಮಡಿಕೆಯೊಂದರಲ್ಲಿ ನಾಗಪ್ಪನನ್ನು ಪ್ರತಿಷ್ಠಿಸುವರು. ಹೂ, ಕೇದಿಗೆ, ಅರಿಷಣ ಹಚ್ಚಿದ ಹಂಗನೂಲು, ಕೊಕ್ಕ ಬತ್ತಿ, ಕೋಡ ಬತ್ತಿ ಹಾಕಿ ಶೃಂಗರಿಸುವರು. ಉಂಡಿ, ಉಸುಳಿ ಮೊದಲನೆಯ ದಿನ ನಾಗದೇವನಿಗೆಡೆ ಮನೆಮಂದಿಯೆಲ್ಲ ಕರಕಿ ಪತ್ರಿಯಿಂದ ನಾಗದೇವನಿಗೆ ಹಾಲನೆರೆಯುತ್ತ ದೇವರ ಪಾಲು, ದಿಂಡರ ಪಾಲು, ಗುರು ಹಿರಿಯರ ಪಾಲು ತಂದೆ ತಾಯಿಗಳ ಪಾಲು, ತಮ್ಮ ಪಾಲು, ಸಮಸ್ತ ಬಳಗದವರ ಪಾಲನ್ನು ಸಮರ್ಪಣೆ ಮಾಡುವರು. ಕೊನೆಗೆ ಆರತಿ ಬೆಳಗಿ ಕಾಯಿ ಒಡೆದು ಎಡೆ ಹಿಡಿಯುತ್ತಾರೆ. ಆದರೆ ನಾಗದೇವನಿಗೆ ಹಿಡಿದ ಎಡೆಯನ್ನು ಹೆಣ್ಣುಮಕ್ಕಳು ಉಣ್ಣಬಾರದೆಂಬ ಪ್ರತೀತಿ ಜನಪದರಲ್ಲಿದೆ.

ಹಂಗನೂಲಾ ನಾಗಪ್ಪಗೆರಿಯ, ರಂಗs ಅರಿಷಣ ಎರಿಯs
ಅಕ್ಕ ಎಲ್ಲಾರ ಕರಿಯ ಅಳ್ಳು ತಂಬಿಟ್ಟು ಸುರಿಯ
ದುರುಳ ನಾಗಪ್ಪಗ ಎಡಿಮಾಡ
　　ಅರಳಿಟ್ಟು ತಂಬಿಟ್ಟು ಮಾಡಿದ ಎಳ್ಳುಂಡಿ
　　ದಳ್ಳೂರಿ ಕಣ್ಣ ಹಣೆಯವನ ಕೊರಳಾನ
　　ನಾಗ ನಿನಗೆಡಿಯೋ ಕೈಮುಗಿದು
ಅಕ್ಕ-ತಂಗೇರ ಪಾಲಾ ಅಣ್ಣ ತಮ್ಮರ ಪಾಲಾ
ವರಸಕ್ಕ ನನಗೊಂದ ಕರಿ ಸೀರಿ ಉಡಿಸೆಂದ
ನಾಗಪ್ಪಗ್ಹಾಲ ಎರದೇನ".[೧೦೧]

ಎಂದು ಭಕ್ತಿಯಿಂದ ಹಾಲೆರೆದು ನಾಗಪ್ಪನಿಗೆ ನಮಿಸಿ ಆ ವ್ರತದ ಅಂಗವಾಗಿ ಹೆಣ್ಣುಮಗಳು ಹಂಗನೂಲನ್ನು ಧರಿಸಿಕೊಳ್ಳುವದುಂಟು.

'ಹಂಗನೂಲು' ಕುರಿತಾದ ಡಾ|| ಎಂ. ಚಿದಾನಂದ ಮೂರ್ತಿಯವರ ಅಭಿಪ್ರಾಯ ಈ ರೀತಿಯಾಗಿದೆ" ಅಂಗ್‌ನೂಲು ಎಂಬುದು ಕನ್ನಡ ನಿಘಂಟಿಗೆ ಒಂದು ಕಾಣಿಕೆ. ನಮ್ಮ ಹಿಂದಿನ ಕಾವ್ಯಗಳಲ್ಲಿ ಮದುವೆ ವರ್ಣನೆಗಳಲ್ಲಿ ಬರುವ 'ಪೊಂಗುನೂಲು' ಎಂಬುದು ಇದೇ. ಪೊಂಗುನೂಲು, ಹೊಂಗುನೂಲು ಎಂದಾಗಿ, ಇದೆ 'ಹಂಗನೂಲು' ಅಂಗ್‌ನೂಲು ಆಗಿದೆ. ಅಂಗ್‌ನೂಲು ಎಂದರೆ ಅರಿಸಿಣದಲ್ಲಿ ಅದ್ದಿದದಾರ'[೧೦೨] ಹೆಣ್ಣುಮಕ್ಕಳು ಕಟ್ಟಿಕೊಳ್ಳುವ **'ಹಂಗನೂಲ' ಅರಿಸಿಣದಲ್ಲಿ ಅದ್ದಿದ ದಾರವೇ** ಆಗಿರುತ್ತದೆ.

ಇಲ್ಲಿಯೂ 'ತಂಬಿಟ್ಟು' ವಿಶೇಷವಾದುದು ಹುರಿದ ಗೋಧಿ ಹಿಟ್ಟಿನೊಂದಿಗೆ ಶೇಂಗಾ,

ಪುಟಾಣಿ, ಕೊಬ್ಬರಿ, ಎಳ್ಳುಬೆರೆಸಿ ಪಾಕದಿಂದ ಸವಿಯಾಗಿ ತಯಾರಿಸಿದ್ದು ತಂಬಿಟ್ಟು. ಬಂಧು-ಬಾಂಧವರಿಗೂ ಇಷ್ಟ ಮಿತ್ರರಿಗೂ ಅದನ್ನು ಹಂಚುತ್ತಾರೆ.

ಮೂರನೆಯ ದಿನ ನಾಗರ ಪಂಚಮಿ ಹುತ್ತ ಮುರಿಯುವುದು ಎಂದು ಇದನ್ನು ಕರೆಯುವದುಂಟು. ಅಂದು ನಾಗಪ್ಪನ ಪೂಜೆಗೆ ಮಿಸಲಡಿಗೆ ಹೂರಣ. ಕುಚ್ಚಿದ ಕಡಬಿನ ನೈವೇದ್ಯ. ಈ ಕಡಬನ್ನು ಕುದಿಸಬೇಕೆ ಹೊರತು ಕರಿಯಬಾರದು. ಕರಿದರೆ ನಾಗಪ್ಪನ ಹೆಡೆಯನ್ನೇ ಕರಿದಂತೆ ಎಂಬ ನಂಬಿಕೆ ಜನಪದರಲ್ಲಿದೆ. ನೈವೇದ್ಯಕ್ಕೆ ಮುನ್ನ ಹೂರಣ ತಿಂದ ಹುಡುಗರ ಮೈಗೆ ತದ್ದು ಆಗುವುದೆಂಬ ನಂಬಿಕೆಯೂ ಇದೆ. ಅಂದು ಮನೆಯಲ್ಲಿ ನಾಗಪ್ಪನಿಗೆ ಹಾಲೆರೆಯುವುದಲ್ಲದೆ ಹುತ್ತ ಇದ್ದಲ್ಲಿಗೆ ಹೋಗಿ ಕೊಕ್ಕಾ ಬತ್ತಿ ಕೋಡಾಬತ್ತಿ ಹಾಕಿ ಹುತ್ತ ಪೂಜೆ ಮಾಡಿ ಹಾಲೆರೆಯುವರು. ಇದು ಸಾಮೂಹಿಕ ನಾಗಪೂಜೆಯಾಗಿದ್ದಂತೆ ಕಂಡು ಬರುತ್ತದೆ. ಹೀಗೆ ಈ ಹಬ್ಬದ ನಿಮಿತ್ಯವಾಗಿ ಬೀದರ ಜಿಲ್ಲೆಯಲ್ಲಿ ಹಾಡುವ ಹಾಡುಗಳನ್ನು ಬುಲಾಯಿ ಹಾಡುಗಳೆಂದು ಕರೆಯುತ್ತಾರೆ.

ನಾಗರ ಪಂಚಮಿ ಹಬ್ಬದಂದು ಚಿಕ್ಕಮಕ್ಕಳಿಗೆ ಸಿಹಿ, ಹೊಸಬಟ್ಟೆ ಜೋಕಾಲಿಯಾಟದ ಹರ್ಷವಾದರೆ, ವಾರಿಗೆಯ ಗೆಳತಿಯರಿಗೆ ಸಂಪೂರ್ಣ ಸ್ವಾತಂತ್ರ್ಯ ಒಟ್ಟುಗೂಡಿ ನಾಗಪ್ಪನಿಗೆ ಹಾಲ ನೆರೆಯುವುದು, ತಮ್ಮ ಸುಖ-ದುಃಖಗಳನ್ನು ಗೆಳತಿಯರಲ್ಲಿ ವಿನಿಯೋಗಿಸಿಕೊಳ್ಳುವಲ್ಲಿ ಇದೊಂದು ಉತ್ತಮ ಅವಕಾಶ. ಅದಕ್ಕಾಗಿಯೇ ಹೆಣ್ಣುಮಕ್ಕಳ ಹಬ್ಬವೆಂದಿರಬಹುದು.

ಪಂಚಮಿ ಬರಲೆವ್ವ ಮಂಚಕಟ್ಟಲಿ ಮನೆಗೆ
ಕೆಂಚ ಗೆಳತೇರು ಕೂಡಲಿ, ನಮಜೀಕ
ಮಿಂಚೆ ಮುಗಿಲನೇರಲಿ [೧೦೩]

ಎನ್ನುತ್ತ ಸಂತೋಷದಿಂದ ಗೆಳತಿಯರೊಂದಿಗೆ ಜೋಕಾಲಿ ಜೀಕಿ ಮುಗಿಲ ಮುಟ್ಟುವಲ್ಲಿ ಬದುಕಿನ ಆಸರೆ-ಬೇಸರವನ್ನು ಕಳೆದುಕೊಳ್ಳುವ ಸಮಯ ಗಂಡನ ಮನೆಯಲ್ಲಿ ಬಹುಶಃ ಆಗ ಈ ರೀತಿಯ ಸ್ವಾತಂತ್ರ್ಯ ಅವರಿಗೆ ಸಿಗುತ್ತಿರಲಿಲ್ಲವೆಂದೆನಿಸುತ್ತದೆ.

ಜೋಕಾಲಿ ಕುರಿತಾದ ಸಿದ್ದಯ್ಯ ಹಿರೇಮಠರ ಅಭಿಪ್ರಾಯವು ಗಮನಾರ್ಹವಾಗಿದೆ "ಮರಗಳಿಗೆ ಕಟ್ಟಿದ ಉದ್ದನೆಯ ಹಗ್ಗದಲ್ಲಿ ಜೋಕಾಲಿ ಜೀಕುವುದು ಬಹಳ ವಿಶಿಷ್ಟ ನಿಂತುಕೊಂಡು ಜೋಕಾಲಿ ಜೀಕಿ ದೂರದ ರೆಂಬೆಯ ತುದಿಯಲ್ಲಿ ಕಟ್ಟಿದ ಕೊಬ್ಬರಿಯನ್ನು ಬಾಯಿಂದ ಎರಗಿಸುವುದು ತುಂಬಾ ರೋಮಾಂಚನಕಾರಿ. ಅಲ್ಲಿ ಮಕ್ಕಳಿಗೆ ಪ್ರತ್ಯೇಕ ಜೋಕಾಲಿ ದೊಡ್ಡವರಿಗೆ ಪ್ರತ್ಯೇಕ ಮಕ್ಕಳು ಹೆಂಗಳೆಯರು ಎಂಬ ಭೇದ ಭಾವರಹಿತ ವಾತಾವರಣ ಜೋಕಾಲಿ ಮನೆಯ ಜಂತಿಗೆ ಜೋತು ಬಿದ್ದು, ತಿಂಗಳು ಗಟ್ಟಲೇ ಮನಸಿಗೆ ಮುದ ನೀಡಿದರೂ ಮರಕ್ಕೆ ಕಟ್ಟಿದ ಜೋಕಾಲಿಯಲ್ಲಿ ತಂಗಾಳಿಗೆ ಮೈಯೊಡ್ಡಿ ಆಡುವ ಆ ಖುಷಿ ಬಲ್ಲವರೇ ಬಲ್ಲರು......ಈಚೆಗೆ ಆ ಮರದಲ್ಲಿ ಜೋಕಾಲಿಗಾಗಿ ಹಗ್ಗ ಬಿಗಿಯುವುದೇ ಇಲ್ಲ ಆಡುವವರ ಆಸಕ್ತಿಯೂ ದೂರವಾಗಿ ಜೋಕಾಲಿ ಜೀಕುವುದಕ್ಕೆ ಬೇಕಾದ ಜೀವನೋತ್ಸಾಹವೂ ಇಲ್ಲ

.......ಜೋಕಾಲಿ ನೀಡುತ್ತಿದ್ದ ಖುಷಿ ಈಗಿಲ್ಲ. ಹಿಂದಿನ ಜನರಿಗೆ ಆ ಮರ ಈಗ ಸವಿಸವಿ ನೆನಪು, ಸಾವಿರ ನೆನಪಷ್ಟೆ ...![೧೦೪] ಎಂಬಲ್ಲಿ ಇಂದು ಆ ಹಬ್ಬದಾಚರಣೆಯು ಕಣ್ಮರೆಯಾಗುತ್ತಿರುವುದರ ಬಗ್ಗೆ ವಿಷಾದದ ಹೇಳಿಕೆಯಾಗಿದ್ದಂತೆ ಕಂಡು ಬರುತ್ತದೆ.

ತವರಿಗೆ ಬಂದ ಹೆಣ್ಣು ಮಕ್ಕಳಿಗೆ ಕೊಡುಗೆಯಾಗಿ ಸೀರೆ ಮುಂತಾದವುಗಳನ್ನು ಉಡುಗೊರೆಯಾಗಿ ಕೊಟ್ಟು ಅಣ್ಣ ಅವಳನ್ನು ಕಳುಹಿಸಿ ಬರುವ ಸಂಪ್ರದಾಯವಿದೆ.

ದಕ್ಷಿಣ ಕನ್ನಡದಲ್ಲಿ ನಾಗರ ಪಂಚಮಿಯನ್ನು ಶ್ರದ್ಧೆ-ಭಕ್ತಿಗಳಿಂದ ಮಡಿಯಲ್ಲಿ ಆಚರಿಸುತ್ತಾರೆ. ಕುಟುಂಬದ ಹಿರಿಯರು ಬನಕ್ಕೆ ಹೋಗಿ ನಾಗರಾಜನನ್ನು ಪೂಜಿಸಿ, ಆರಾಧಿಸುವ ಸಂಪ್ರದಾಯವಿದೆ. ಇಲ್ಲಿಯ ಎಲೆ ಕಡುಬು ಹಾಗೂ ಸಿಹಿಉಂಡೆ ವಿಶೇಷವಾದುದು. ನಾಗಪ್ಪನಿಗೆ ಪಡವಲಕಾಯಿ, ಕರಿದ ತಿಂಡಿ ಪದಾರ್ಥಗಳು ಖಾರದ ಪದಾರ್ಥಗಳು ಒಗ್ಗರಣೆ ನಿಷಿದ್ಧ. ಕೇವಲ ಹಬೆಯಲ್ಲಿ ಬೇಯಿಸಿದ ತಿನಿಸುಗಳು ಪ್ರಿಯ ಎಂಬ ನಂಬಿಕೆಗಳೂ ಇವೆ.

ನಾಗರ ಪಂಚಮಿಯಂದು ರಂಗೋಲಿಗೆ ಅಧಿಕ ಮಹತ್ವ ಅಂಗಳದಲ್ಲಿ ದೇವರ ಮುಂದೆ ಹಾಕಿದ ವೈವಿಧ್ಯಮಯ ರಂಗೋಲಿಗಳು ವಿಶೇಷ ಸೊಬಗನ್ನು ನೀಡುತ್ತವೆ. ಮೂಡೇ ಹಾವು, ಬಿಚ್ಚಿದ ಹಾವು, ವಂಕಿ ಹಾವು, ತಕ್ಕೆ ಹಾವು, ಜೋಡಿ ಹಾವು ಮುಂತಾದವುಗಳನ್ನು ಚಿತ್ರಿಸಿ, ಪೂಜಿಸುವ ಪದ್ಧತಿ ಹಲವೆಡೆ ಕಂಡುಬರುತ್ತದೆ. ಕರಾವಳಿ ಕರ್ನಾಟಕ 'ನಾಗಮಮಡಲ' ಸುಂದರ ಪ್ರಬುದ್ಧ ಕಲಾತ್ಮಕ ನೃತ್ಯಾಚಾರಗಳಲ್ಲಿ ಒಂದು. ನಾಗಾರಾಧನೆ ಕುರಿತಾದ ಹಿ.ಚಿ.ಬೋರ ಲಿಂಗಯ್ಯನವರ ವಿಂಗಡನೆಯು ವಿವಿಧ ಬಗೆಯಲ್ಲಿ ಕಂಡುಬರುತ್ತದೆ. "ನಾಗಮಂಡಲ, ಪಾರಣ ಸ್ವಾಮಿ ಕೋಲ, ನಾಗನ ಕೋಲ, ಬೈಲಬಾಕುಡರ ಸರ್ಪಕೋಲ ಸಂಪರ್ಂಕಳ, ಕಾಡ್ಯಾನಾಟ, ಪಾಣಾರಾಟ, ಗೊಂಡರ ಮಂಡಲ ಕುಣಿತ"[೧೦೫] ಮುಂತಾದವು.

ಬೀದರ ಜಿಲ್ಲೆಯಲ್ಲಿಯೂ ನಾಗಾರಾಧನೆಯು ವಿಶಿಷ್ಟವಾಗಿ ನಡೆಯುತ್ತದೆ. ಉತ್ತರ ಕರ್ನಾಟಕದಲ್ಲಿಯಂತೆ ಅದನ್ನು 'ನಾಗರ ಪಂಚಮಿ' 'ಪಂಚಮಿಹಬ್ಬ' ಎಂದೇ ಕರೆಯಲಾಗುತ್ತದೆ. ಇಲ್ಲಿಯೂ ನಾಗರ ಪಂಚಮಿಯನ್ನು ಮೂರು ದಿವಸಗಳವರೆಗೆ ಆಚರಿಸಲಾಗುತ್ತದೆ. ಮದುವೆಯಾದ ಮೊದಲನೆಯ ವರ್ಷದ ಪಂಚಮಿ ಹಬ್ಬಕ್ಕೆ ಮಗಳನ್ನು ಕಡ್ಡಾಯವಾಗಿ ಕರೆದುಕೊಂಡು ಬರಲೇಬೇಕು. ನಂತರ ಅವರವರ ಅನುಕೂಲಕ್ಕೆ ತಕ್ಕಂತೆ ಅವಳಿಗೆ ಉಪಚಾರ ಮಾಡುತ್ತಾರೆ. ಈ ಹಬ್ಬಕ್ಕೆ 'ಅಳಿಯ' ಅತ್ತೆಯ ಮನೆಗೆ ಬರುವಂತಿಲ್ಲ "ನಾಚಿಗೇಡಿ ಅಳಿಯ ನಾಗರಪಂಚಮಿಗೆ ಬಂದ" ಎಂಬ ಗಾದೆಗಳು ಇಲ್ಲಿರುವುದು ಗಮನಿಸಬಹುದು. ಅಳಿಯನಿಗೆ ಪ್ರಾಶಸ್ತ್ಯವಿರುವುದು ದೀಪಾವಳಿ ಹಬ್ಬದಲ್ಲಿ ಎಂಬುದೂ ಸಹ ಗಮನಾರ್ಹವಾಗಿದೆ.

ನಾಗ ಚತುರ್ಥಿಯೆಂದು ತವರಿಗೆ ಬಂದ ಮಗಳಿಗೆ ಎಣ್ಣೆ ಹಚ್ಚಿ ತಲೆಗೆ ನೀರು ಹಾಕಿ ಎರೆಯುವುದು ಕಡ್ಡಾಯ. ಉಳಿದಂತೆ ಎಲ್ಲಾ ಹೆಣ್ಣು ಮಕ್ಕಳೂ ಇದೇ ರೀತಿ ಸ್ನಾನಮಾಡುವರು. ಅಂದು ಮನೆಗಳನ್ನೆಲ್ಲಾ ಸ್ವಚ್ಛಮಾಡಿ ಸಹೋದರರಿರುವ ಹೆಣ್ಣುಮಕ್ಕಳೆಲ್ಲಾ ಅವರ ಶ್ರೇಯಸ್ಸಿಗಾಗಿ ಉಪವಾಸ ವ್ರತ (ಒಂದತ್ತು) ವನ್ನು ಆಚರಿಸುತ್ತಾರೆ. ಕೇವಲ ಸಬ್ಬಕ್ಕಿಯ ತಿಂಡಿ (ಉಸಾಳ)

ಮಾತ್ರ ಸೇವಿಸುತ್ತಾರೆ. ಅಂದು ಸಾಯಂಕಾಲ ಬಾಗಿಲುಗಳಿಗೆಲ್ಲಾ ಗಂಧ ಅಥವಾ ವಿಭೂತಿ ಕುಂಕುಮಾದಿಗಳಿಂದ ಪೂಜೆ ಮಾಡುತ್ತಾರೆ. ನಾವು ಚಿಕ್ಕವರಿದ್ದಾಗ ಔಡಲದ ಎಲೆಗಳನ್ನು ತಂದು, ಅದರ ಎಲೆಯನ್ನು ತೆಗೆದು, ಕಡ್ಡಿಗಳನ್ನು ಒಂದೇ ಸಮ ಚಕ್ರರೂಪದಂತೆ ಮಾಡಿ ಅದನ್ನು ಗಂಧದಲ್ಲಿ ಅದ್ದಿ ಬಾಗಿಲಿಗೆ ಒಂದೊಂದೆ ಹಚ್ಚಿ ಒತ್ತಿ, ನಡುವೆ ಕುಂಕುಮವನ್ನಿಟ್ಟು ಅಲಂಕಾರ ಮಾಡುತ್ತಿದ್ದರು. ದೂರದಿಂದಲೇ ಪೂಜೆ ಮಾಡಿದ್ದು ಎದ್ದು ಕಾಣುತಿತ್ತು. ಆದರೆ ಈಗ ಅದು ಮರೆಯಾಗಿ ಕೇವಲ ಗಂಧವನ್ನು ಕೈಬೆರಳುಗಳಿಂದು ಐದು ಚುಕ್ಕೆ ಇಲ್ಲವೆ ವಿಭೂತಿಯಂತೆ ಮೂರು ಬೆರಳುಗಳಲ್ಲಿ ಹಚ್ಚುತ್ತಾರೆ. ಅದರ ಮೇಲೆ ಕುಂಕುಮ ಹಚ್ಚುತ್ತಾರೆ. ಇಷ್ಟೆಲ್ಲಾ ಮಾಡುವುದರಲ್ಲಿ ದೀಪ ಹಚ್ಚುವ ವೇಳೆ ನಂತರ ದೇವರ ಮನೆಯಲ್ಲಿ ಜಗುಲಿಯ ಮೇಲೆ ನಾಗಪ್ರತಿಮೆಗೆ ಹಾಲುತುಪ್ಪ ಅಳ್ಳು ನೀರಿನಿಂದ ಕೊಬ್ಬರಿ ಬಟ್ಟಲಲ್ಲಿ ಹಾಕಿ ಐದು ಸಲ ಹಾಲೆರೆದು ಗಂಧ ಕುಂಕುಮ ಅರಸಿಣ ಹಚ್ಚಿ ಹತ್ತಿಯ 'ಹಂಗನೂಲ್'ನ್ನು ಹಾಕುವರು. ಈ ಸಮಯದಲ್ಲಿ ಜೋಳದಳ್ಳು, ತಂಬಿಟ್ಟು, ಚಿಗಳಿ, ಶೇಂಗಾ, ಕಡಲೆ, ಬಟಾಣಿಗಳನ್ನು ನೈವೇದ್ಯ ಮಾಡುತ್ತಾರೆ. ಹಾಲೆರೆದ ಕೊಬ್ಬರಿ ಬಟ್ಟಲನ್ನು ಹಾಗೇ ಕಾಯ್ದಿಟ್ಟು ಮುಂದೆ ಗಣೇಶ ಚತುರ್ಥಿಗೆ ಗಣೇಶನ ಕೈಯಲ್ಲಿಟ್ಟು ಪೂಜೆಮಾಡುವ ಪದ್ಧತಿಯುಂಟು. ನಾಗಪ್ಪನ ನೈವೇದ್ಯೆಯನ್ನು ಹೆಣ್ಣು ಮಕ್ಕಳು ಸೇವಿಸಬಾರದೆಂಬ ನಂಬುಗೆಯೂ ಇದೆ. ಕೆಲವರು ಚೌತಿಯಂದು ಮದುರಂಗಿ (ಮೆಹಂದ) ಹಚ್ಚಿಕೊಂಡರೆ ಮತ್ತೆ ಕೆಲವರು ಮೊದಲಿನ ದಿನವೇ ಹಚ್ಚಿಕೊಂಡು ಹಾಲೆರೆಯುತ್ತಾರೆ ಪ್ರತಿಯೊಬ್ಬರೂ ಕೈಯಲ್ಲಿ ಹೊಸ ಬಳೆಗಳನ್ನು ಹಾಕಿಕೊಂಡಿರುವುದು ವಿಶೇಷವಾಗಿರುತ್ತದೆ.

ಮರುದಿವಸ ನಾಗರ ಪಂಚಮಿ ಆಷಾಡ ಬಹುಳ್ಯಾದ ನಾಗರ ಅಮವಾಸ್ಯೆ. ನಂತರ ಐದನೆಯ ದಿನವಾದ ಕಾರಣ ಅದನ್ನು **'ಪಂಚಮಿ'** ಎಂದೇ ಕರೆಯುತ್ತಾರೆ. ಅಂದು ಹೆಣ್ಣುಮಕ್ಕಳು ಹಾಗೂ ಹುಡುಗಿಯರು ಸಂಭ್ರಮದಿಂದ ಹೊಸ ಬಟ್ಟೆ ತೊಟ್ಟು 'ನಾಗರ ಕಲ್ಲು' ಅಥವಾ ಹುತ್ತಿಗೆ ಹಾಲೆರೆಯಲು ಹೋಗುತ್ತಾರೆ. ಈ ನಾಗರ ಕಲ್ಲು ದೇವಾಲಯಗಳಲ್ಲಿ, ಊರಬಯಲು ಪ್ರದೇಶ ಅಥವಾ ಕೆಲವರ ಮನೆಯಲ್ಲೂ ಸ್ಥಾಪಿಸಿರುತ್ತಾರೆ. ಹೆಣ್ಣು ಹುಡುಗಿಯರಿಗೆ ಕಡ್ಡಾಯವಾಗಿ ಹೊಸ ಬಟ್ಟೆ ತರುತ್ತಾರೆ. ಹೀಗಾಗಿ ಆ ಬಟ್ಟೆಗಳನ್ನು ಹಾಲೆರೆಯುವಲ್ಲಿ ಒಯ್ದು ನಾಗಪ್ಪನಿಗೆ ಹಾಲೆರೆದು ಪೂಜೆ ಮಾಡಿ ನಂತರ ಬಟ್ಟೆಗಳಿಗೂ ಪೂಜೆ ಮಾಡುತ್ತಾರೆ. ನೈವೇದ್ಯೆಗೆ ಕುದುಸಿದ ಹೂರಣ ಕಡುಬು, ನವಣಿಯ ಅನ್ನ ಮಾಡಿರುತ್ತಾರೆ. ಪದಾರ್ಥಗಳನ್ನು ಅಂದು ಕರಿಯುವುದಿಲ್ಲ. ಕಳವೆ (ಭತ್ತ) ಅನ್ನ ಮಾಡುವುದಿಲ್ಲ. ಕಳವೆ ಅಕ್ಕಿ ನಾಗರ ಹಲ್ಲಿನಂತೆ, ಹೀಗಾಗು ಅಕ್ಕಿ ಕುದಿಸಿದರೆ ನಾಗಣ್ಣನ ಹಲ್ಲು ಕುದಿಸಿದಂತೆ ಎಂಬ ನಂಬಿಕೆಯಿರುವುದರಿಂದ ಕುದುಸಿದ ಕಡುಬು ಹಾಗೂ ನವಣಿಯ ಅನ್ನವನ್ನೇ ಎಡೆಗಿಡುತ್ತಾರೆ. ಇತ್ತೀಚೆಗೆ ಹೂರಣ ಹೋಳಿಗೆಗಳೂ ನೈವೇದ್ಯೆಗೆ ಕಂಡು ಬರುತ್ತಿವೆ. ಅಂದು ಸಪ್ಪೆದಾರ (ಹೊಸೆಯದ) 'ಹಂಗನೂಲ್' ಐದು ಎಳೆಗಳಲ್ಲಿ ಮಾಡಿರುತ್ತಾರೆ. ದಾರಕ್ಕೆ ಅರಸಿಣ ಹಚ್ಚಿ ನಾಗರಕಲ್ಲಿಗೆ ಅಥವಾ ಹುತ್ತಿಗೆ ಹಾಕಿ ಉಳಿದಂತೆ ಮನೆಯವರಿಗೆಲ್ಲಾ ಹಾಗೂ ಹೊಸ್ತಿಲು, ದೇವರ ಮನೆಯ ಬಾಗಿಲಿಗೂ ಒಂದೊಂದು

ಕಟ್ಟುತ್ತಾರೆ. ಹೆಣ್ಣುಮಕ್ಕಳು ಕೊರಳಲ್ಲಿ ಹುಡುಗರಿಗೆ ಬಲಕೈಯಲ್ಲಿ ಕಟ್ಟುತ್ತಾರೆ. ಇದು ಸಾಮೂಹಿಕವಾಗಿ ನಡೆಯುವ ಪೂಜೆ ಆದರೆ ತಮಗನುಕೂಲವಾದಾಗ ಮಹಿಳೆಯರು ಹಾಲೆರೆದು ಬರುತ್ತಾರೆ. ಹೀಗೆ ಬರುವಾಗ ಚಿಕ್ಕ ಹೆಣ್ಣು ಮಕ್ಕಳಿಗೆ ಅಲ್ಲಿಯೇ ಹೊಸ ಬಟ್ಟೆ ಹಾಕಿ, ಉಡಿಯಲ್ಲಿ ಅಳ್ಳನ್ನು ಕೊಡುತ್ತಾರೆ. ಅದನ್ನು ಅವರು ಒಂದೊಂದಾಗಿ ಚೆಲ್ಲುತ್ತಾ ಬರುತ್ತಾರೆ. ಇದು ಬಹುಶಃ ನಾಗಪ್ಪನಿಗೆ ತಮ್ಮ ಮನೆಯ ಮಾರ್ಗಸೂಚಿಯಾಗಿ ಬಳಸುತ್ತಾರೋ ಏನೋ ? ಹೊಸ್ತಿಲವರೆಗೆ ಬಂದು ಅಲ್ಲಿಯೇ ಇದ್ದ ಐದು ಚಿಕ್ಕ ದುಂಡನೆಯ ಹಳ್ಳಗಳನ್ನು ಆರಿಸಿಕೊಂಡು, ತೊಳೆದು ಮೂರು, ಎರಡರಂತೆ ಎರಡೂ ಕಡೆ ಇಟ್ಟು ಪೂಜಿಸಿ ಒಳಗೆ ಹೋಗುತ್ತಾರೆ. ಈ ಚಿಕ್ಕ ಚಿಕ್ಕ ಕಲ್ಲುಗಳು 'ಹಿರೋಡ್ಯಾ'ನನ್ನು ಪ್ರತಿನಿಧಿಸುವ 'ನಾಗ ಪ್ರತೀಕಗಳೇ' ಆಗಿರುವುದು ಗಮನಾರ್ಹ ಕೈಯಲ್ಲಿಯ ಪೂಜೆಯ ತಟ್ಟೆ, ಸಾಮಾನು ನೇರವಾಗಿ ದೇವರ ಮನೆಗೆ ಒಯ್ದು ದೇವರ ಜಗುಲಿಯ ಮೇಲಿಟ್ಟು ಮುಂದಿನ ಕಾರ್ಯ ಮಾಡುತ್ತಾರೆ. ಹೀಗೆ ನಾಗರ ಪಂಚಮಿಯಲ್ಲಿ ನಡೆಯುವ ಆಚರಣೆಗಳ ಕುರಿತಾದ ಬುಲಾಯಿ ಹಾಡುಗಳನ್ನು ಇಲ್ಲಿ ಉದಾಹರಿಸಬಹುದು.

೧. "ನಾಗರ ಪಂಚಮಿ ನಾಳೀಗಿ ಬರುವುದು
ನಾಗಯ್ಯಗ ಹಾಲ ಎರೆವುದು ಕೋಲೆಣ್ಣ ಕೋಲೆ
ನಾಳೀಗೀ ಒಂದ್ವತ್ತು ನಾರಿಯರು ಮಾಡುತ್ತ
ನಾಗಯ್ಯಗ ಹಾಲ ಎರೆವರು ಕೋಲೆಣ್ಣ ಕೋಲೆ
ನಾಗರ ಪಂಚಮಿ ನಾಡಿಗೆ ದೊಡ್ಡದು
ನಾರಿಯರೆಲ್ಲ ನೆರೆದಾರೆ ಕೋಲೆಣ್ಣ ಕೋಲೆ
ನಾರಿಯರೆಲ್ಲಾ ನೆರೆದು ಹಾಡುತ್ತ ತಿರುಗುತ್ತ
ಭುಲಾಯಿ ಹಾಕಿ ನಲಿಯುತ್ತಾರೆ ಕೋಲೆಣ್ಣ ಕೋಲೆ
ಬುಲಾಯಿ ಹಾಕುತ್ತಾ ಕತಿಗಳ ಹಾಡುತ್ತ
ಮಲ್ಲಮ್ಮನ ಭಕ್ತಿಯ ಮೆರೆದಾರೆ ಕೋಲೆಣ್ಣ ಕೋಲೆ" [೧೦೭]

೨. ನಾಗರ ಪಂಚಮಿ ನಾಡಿಗೆ ದೊಡ್ಡದು
ನಾಗಣ್ಣಗ ಹಾಲ ಎರೆದೆವೆ ಕೋಲೆಣ್ಣ ಕೋಲೆ
ಹೊಸದೊಂದು ಉಟ್ಟಾರ ಹೊಸದೊಂದು ತೊಟ್ಟಾರ
ಗೆಳದೇರು ಕೂಡಿ ನಡೆದಾರ ಕೋಲೆಣ್ಣ ಕೋಲೆ
ಕೈಯ್ಯಾಗ ಚೊಬ್ಬರಿಗುಂಡ ಬಟ್ಲಾಗ ಹಾಲತುಪ್ಪ
ನಾಗಣ್ಣಗ ಹಾಲ ಎರೆದಾರೆ ಕೋಲೆಣ್ಣ ಕೋಲೆ
ಹಾಲಾರಾ ಎರೆದಾರೆ ಮುರ್ಯಾಳಿ ತೊಳೆದಾರೆ
ಕುಕಮದ ದಿಂಡು ಮಾಡ್ಯಾರೆ ಕೋಲೆಣ್ಣ ಕೋಲೆ

ಅರಸಿಣ ಹಚ್ಚ್ಯಾರ ಹಂಗನೂಲ ಹಾಕ್ಯಾರ
ಉಡಿದಾಗಿನ ಅಳ್ಳ ಹರಡುತ್ತ ಕೋಲೆಣ್ಣ ಕೋಲೆ
ಅಳ್ಳಿಗಳ್ಳವ ಕೊಟ್ಟ ಕೊಳ್ಳಿಗ್ಹಂಗನೂಲ ಕೊಟ್ಟ
ಮತ್ರ್ಯಾಕ ನಾಗಣ್ಣಾ ಭುಸ್‌ನೆಂದ ಕೋಲೆಣ್ಣ ಕೋಲ....೧೦೭

3. ನಾಗರ ಪಂಚಮಿ ನಾಡಿಗಿ ದೊಡ್ಡದು
ನಾಗಣ್ಣಗ ಹಾಲ ಎರಿಯವರೆ ಕೋಲೆ
ಅಕ್ಕಾನೆ-ತಂಗೇರು ಹತ್ತಿಗೆ ಹೋಗ್ಯಾರೆ
ನಾಗಣ್ಣಗ ಹಾಲ ಎರದಾರೆ ಕೋಲೆ
ಅರಸಿಣ ಕುಕಮ ಗಂಧ ಕಸ್ತೂರಿಯಿಂದ
ಪೂಜಾ ಮಾಡ್ಯಾರೆ ಮನಲಿಂದೆ ಕೋಲೆ
ಮುಟ್ಯಾಗ ಅಳ್ಳ ಹಿಡಿದು ನಾಗಣ್ಣಗ ಹಾಲ ಎರೆದ
ಮತ್ಯಾಕ ನಾಗಣ್ಣ ಭುಸ್‌ನೆಂದ ಕೋಲೆ
ಅಳ್ಳಿಗಿ ಅಳ್ಳವ ಕೊಟ್ಟ ಕೊಳ್ಳೀಗಿ ಹಂಗನೂಲ ಕೊಟ್ಟ
ಮತ್ಯೇಕ ನಾಗಣ್ಣ ಭುಸ್‌ನೆಂದ ಕೋಲೆ
ಎದರ ಬಾಜರಗೊಂಟ ಸದರ ಬೀದಿಯೆ ಗೊಂಟ
ಮುಟ್ಯಾಗೀನ ಅಳ್ಳ ಉದರುಸ್ತ ಕೋಲೆ
ಮುಟ್ಯಾಗೀನ ಅಳ್ಳ ಉದುರುಸ್ತ ಹೊಂಟಾರ
ಉಡಿದಾಗಿನ ಅಳ್ಳವ ಹರಡುತ್ತ ಕೋಲೆ
ಅಳ್ಳನೆ ಹರಡುತ್ತ ಮನಿಬಾಗಿಲಿಗಿ ಬಂದಾರೆ
ಹಳ್ಳದ ಪೂಜೆಯ ಮಾಡುವರೆ ಕೋಲೆ.....೧೦೮

ಸಾಯಂಕಾಲದ ವರೆಗೆ ಎಲ್ಲರೂ ಊಟ-ತಿಂಡಿ ಮುಗಿಸಿ ಸ್ವಲ್ಪ ವಿಶ್ರಮಿಸಿ, ಹೊಸಬಟ್ಟೆ, ಸೀರೆಗಳನ್ನು ಧರಿಸಿ, ಸಿಂಗರಿಸಿಕೊಂಡು ಮಹಿಳೆಯರು ಮಕ್ಕಳು ಮನೆಯಿಂದ ಗುಡಿಗೆ ಅಥವಾ 'ಭುಲಾಯಿ' ಹಾಕುವ ಕಡೆಗೆ ಹೋಗುತ್ತಾರೆ. ಚಿಕ್ಕ ಊರಾದರೆ ಊರ ಗುಡಿಯ ಮುಂದೆ 'ಭುಲಾಯಿ' ಹಾಕುತ್ತಾರೆ. ಇಲ್ಲವಾದರೆ ಓಣಿಯಲ್ಲಿ, ಗೌಡರ, ಮಹಾಜನರ, ಶಟಗಾರರ ಮನೆಗಳಲ್ಲಿ ವಿಶಾಲವಾದ ಅಂಗಳದಲ್ಲಿ 'ಭುಲಾಯಿ' ಹಾಕುತ್ತಾರೆ. ಹೆಣ್ಣುಮಕ್ಕಳು ಒಬ್ಬರ ಕೈ ಒಬ್ಬರು ಹಿಡಿದು ಗೋಲಾಕಾರದಲ್ಲಿ ಸುತ್ತುತ್ತಾರೆ. ಹಾಡುವವರಲ್ಲಿ ಮೊದಲಿಬ್ಬರು ಹಾಡುತ್ತಾರೆ. ನಂತರ ಉಳಿದವರೆಲ್ಲರೂ ಅದನ್ನೇ ಹಾಡುತ್ತಾರೆ. ಮುಮ್ಮೇಳದಲ್ಲಿ ಹಾಡುವವರು ಸ್ವಲ್ಪ ನಿಂತು ತಲೆಗೆ ತಲೆ ಹಚ್ಚಿ, ಕೈ ಜೀಕುತ್ತಾ ಹಾಡುವರು. ನಂತರ ಸಾವಕಾಶವಾಗಿ ಸುತ್ತುತ್ತಾ ಹಿಮ್ಮೇಳದಲ್ಲಿ ಎಲ್ಲರೂ ಹಾಡುತ್ತಾರೆ. ಚಿಕ್ಕ ಮಕ್ಕಳಿದ್ದರೆ ಅವರನ್ನು ವರ್ತುಲದ ಮಧ್ಯೆದಲ್ಲಿ ನಿಲ್ಲಿಸುತ್ತಾರೆ. ಮತ್ತೆ ಕೆಲವುಕಡೆ ಚಿಕ್ಕಮಕ್ಕಳೂ ನಡುವೆ ವರ್ತುಲಕಟ್ಟಿ ಸುತ್ತುತ್ತಾರೆ. ಹೀಗೆ

ಸುಮಾರು ದೀಪ ಹಚ್ಚುವವರೆಗೂ 'ಭುಲಾಯಿ' ಹಾಕುತ್ತಾರೆ. ಮೊದಲು ಬಂದವರು ಸಾಕಾಗಿ ಬಿಟ್ಟು ಹೋದರೆ, ನಂತರ ಬಂದವರು ನಿಂತು 'ಭುಲಾಯಿ' ಹಾಕುತ್ತಾರೆ. ಈ ಪ್ರಕ್ರಿಯೇ ನಡದೇ ಇರುತ್ತದೆ. ಹೀಗಾಗಿ ಇದು ನಿರಂತರವಾಗಿ ನಡೆಯುತ್ತದೆ. 'ಭುಲಾಯಿ' ಹಾಕಿ ಹೋಗುವಾಗ ಅವರಿಗೆ ಅಳ್ಳನ್ನು ಕೈಯಲ್ಲಿ ಕೊಡುವ ಸಂಪ್ರದಾಯವಿದೆ. ನಡುವೆ ಚಹಾವನ್ನು ಕುಡಿಸುತ್ತಿರುವುದು ಇತ್ತೀಚೆಗೆ ಪ್ರಾರಂಭವಾದಂತೆ ಕಂಡುಬರುತ್ತದೆ. ಒಮ್ಮೊಮ್ಮೆ ಬಹಳ ಕಡಿಮೆ ಹೆಣ್ಣುಮಕ್ಕಳಿದ್ದಾಗ ಹಾಕುವುದನ್ನು ನಿಲ್ಲಿಸಿ ಸ್ವಲ್ಪ ಹೊತ್ತು ಕಾಯ್ದು ಮತ್ತೆ ಬರುವ ಮಹಿಳೆಯರೊಂದಿಗೆ ಪುನಃ 'ಭುಲಾಯಿ' ಪ್ರಾರಂಭಿಸುವುದುಂಟು. ಇದು ತೀರಾ ಕಡಿಮೆಯೇ, ಕತ್ತಲಾದಂತೆ 'ಆರತಿ ಪದ' ಹಾಡಿಯೇ 'ಬುಲಾಯಿ' ಬಿಡುತ್ತಾರೆ. ಕೊನೆಯಲ್ಲಿ ಹೋಗುವವರಿಗೆಲ್ಲಾ ಅಳ್ಳು-ಚಹಾದ ವ್ಯವಸ್ಥೆ ಇದ್ದೇ ಇರುವುದು ಕಂಡುಬರುತ್ತದೆ.

'ಭುಲಾಯಿ' ಹಾಕುವುದಕ್ಕೆ ವರ್ಗ, ವಯಸ್ಸು, ಜಾತಿಗಳ ಭೇದವಿಲ್ಲದೆ ಎಲ್ಲರೂ 'ಭುಲಾಯಿ' ಹಾಕುವುದು ಕಂಡುಬರುತ್ತದೆ. ಚೆನ್ನಾಗಿ ಸ್ಪಷ್ಟವಾಗಿ ಹಾಡುವವರು ಮುಮ್ಮೇಳದಲ್ಲಿ ಹಾಡಿದವರು, ಹಿಮ್ಮೇಳದಲ್ಲಿ ಎಲ್ಲರೂ ಧನಿ ಸೇರಿಸುವುದು ಕಡ್ಡಾಯ ಬಹುಶಃ ಹೀಗೆ ಹಾಡಿ ಹಾಡಿಯೇ ಮುಂದೆ ಅವರು ಹಾಡುವಂತೆ ಪ್ರೇರೆಪಿಸಲು ಈ ರೀತಿ ಮಾಡುತ್ತಾರೋ ? ಏನೋ ? ಒಟ್ಟಾರೆ ಗುಯ್ ಗುಡುತ್ತಲಾದರೂ ಹಾಡಲೇಬೇಕು. ಅದೇ ರೀತಿ ಒಂದೆರಡು ಸುತ್ತಾದರೂ 'ಭುಲಾಯಿ' ಹಾಕಿ, ಸುತ್ತಬೇಕೆಂಬ ನಂಬುಗೆ ಇದೆ. ಅದಕ್ಕಾಗಿಯೇ ಎಲ್ಲಾ ಹೆಣ್ಣುಮಕ್ಕಳು ಎಷ್ಟೆ ತಡವಾದರೂ ಬಂದು ಎರಡು ಸುತ್ತಾದರೂ ತಿರುಗಿ 'ಭುಲಾಯಿ' ಹಾಕುವುದು ಕಂಡುಬರತ್ತುದೆ. 'ಭುಲಾಯಿ' ಹಾಕುವಲ್ಲಿ ವಿಧವೆಯರು - ಮುತ್ತೈದೆಯರು, ಹಿರಿಯರು-ಕಿರಿಯರೆನ್ನದೆ ಎಲ್ಲರೂ ಇರುತ್ತಾರೆ. ಇದು ನಮ್ಮ ಸೌಹಾರ್ದತೆಯ-ಸಹಬಾಳ್ವೆಗೆ ಒಂದು ಉತ್ತಮ ಅವಕಾಶವನ್ನು ಕಲ್ಪಿಸುತ್ತದೆ. ಈ ಸಂದರ್ಭದಲ್ಲಿ ಪೌರಾಣಿಕ, ಧಾರ್ಮಿಕ, ಸಾಮಾಜಿಕ, ಐತಿಹಾಸಿಕ ಮುಂತಾದ ವಿಷಯಗಳ ಹಾಡುಗಳನ್ನು ಹಾಡುವುದು ಕಂಡುಬರುತ್ತದೆ. ಕೋಲ, ಕೋಲು-ಕೋಲೆ, ಕೋಲೆಣ್ಣ ಕೋಲೆ, ರನ್ನದ ಕೋಲು ಕೋಲೆ, ಏಹೂವಿನ ಕೋಲು ಕೋಲೆ ಎಂಬ ವಿವಿಧ ಸೊಲ್ಲುಗಳಿಂದ ಕೂಡಿದ ಹಾಡುಗಳನ್ನು ಹಾಡುವಾಗ ಕಿವಿಗೆ ಇಂಪಾಗಿರುತ್ತವೆ. ಬಣ್ಣ ಬಣ್ಣದ ಸೀರೆ, ಬಟ್ಟೆ, ಒಡವೆಗಳಿಂದ ಸಿಂಗಾರಗೊಂಡು ಸುತ್ತುವುದು, ನಿಲ್ಲುವುದು, ಕೈಜೀಕುವುದು ತನ್ಮಯತೆಯಿಂದ ಹಾಡುವುದು ಕಣ್ಣಿಗೆ ಸೊಂಪಾಗಿರುತ್ತದೆ. ಹಾಡುಗಳು ಜೀವನ ಮೌಲ್ಯ, ವೀರತ್ವಗಳನ್ನು ಬಿಂಬಿಸಿ, ಮೈ ನವಿರೇಳಿಸುತ್ತವೆ. ಒಟ್ಟಾರೆ ಕಲಾತ್ಮಕತೆಯ ಪ್ರದರ್ಶನದಂತಿರುವ 'ಭುಲಾಯಿ'ಯನ್ನು ನೋಡಿ, ಕೇಳಿಯೇ ಅನುಭವಿಸಬೇಕು.

ಒಂದೆಡೆ 'ಬುಲಾಯಿ' ಹಾಕುತ್ತಿದ್ದರೆ ಇನ್ನೊಂದೆಡೆಗೆ ಬೇವಿನ ಮರಗಳಿಗೆ ಕಟ್ಟಿದ 'ಜೋಕಾಲಿ' ಜೀಕುವ ಸಂಭ್ರಮ ಒಬ್ಬರು, ಇಬ್ಬರು, ಕುಂತು, ನಿಂತು ಜೋಕಾಲಿ ಜೀಕುವುದು ಕೂಡ ನಯನಮನೋಹರವಾಗಿರುತ್ತದೆ. ಹೆಣ್ಣು ಮಕ್ಕಳು ತಮ್ಮ ಬಿಗುಮಾನ, ಗಾಂಭಿರ್ಯ

ಮರೆತು ಮಕ್ಕಳಂತೆ ಆಡಿ ಮನಸ್ಸನ್ನು ಹಗುರಗೊಳಿಸಿಕೊಳ್ಳುವ ಅಪೂರ್ವ ಸನ್ನಿವೇಶವನ್ನು ಈ ಹಬ್ಬದಲ್ಲಿ ಮಾತ್ರ ಕಾಣಬಹುದು. ಅವತ್ತಿನ ಅಥವಾ ಆಗಿನ ಮಟ್ಟಿಗಾದರೂ ಹೆಣ್ಣುಮಕ್ಕಳು ತಮ್ಮ ಸಂಸಾರ ತಾಪತ್ರಯವನ್ನು ಮರೆತು, ಮನಸ್ಸನ್ನು ಉಲ್ಲಾಸಗೊಳಿಸಿಕೊಳ್ಳುವುದಕ್ಕೆ ಅವಕಾಶ ದೊರೆಯುತ್ತದೆನ್ನಬಹುದು. ಈ ವೇಳೆಯಲ್ಲಿ ಹೆಚ್ಚಾಗಿ ಹರೆಯದ ಹುಡುಗ-ಹುಡುಗಿಯರು 'ಜೋಕಾಲಿ' ಆಡುವುದು ಕಂಡುಬರುತ್ತದೆ. ಇಂತಹ ಸಂಭ್ರಮದ ಹಬ್ಬದ ಬಗೆಗೆ ಇಲ್ಲಿ ಹಲವಾರು ನಂಬಿಕೆಗಳಿರುವುದನ್ನು ನಾವು ಗುರುತಿಸಬಹುದು.

೧) ಹೆಣ್ಣು ಮಗಳೊಬ್ಬಳಿಗೆ ಗರ್ಭ ಧರಿಸಿದ ಎರಡು ಮೂರು ತಿಂಗಳಲ್ಲಿ ಗರ್ಭ ಕರಗಿ ಹೋಯಿತ್ತಂತೆ. ಇದೇ ತರಹ ಮತ್ತೆ ಮತ್ತೆ ಆದಾಗ ಅವಳು ಅನೇಕ ದೇವರುಗಳನ್ನು ಪೂಜಿಸಿ, ವೃತ ನಿಯಮಗಳನ್ನು ಆಚರಿಸಿದರೂ, ಅವುಗಳಿಂದ ಯಾವ ಪರಿಹಾರ ದೊರಕದೇ ಚಿಂತಿಸುತ್ತಿರುವಾಗ, ಸನ್ಯಾಸಿಯೊಬ್ಬ ಭಿಕ್ಷೆಗೆ ಬಂದನು. ಚಿಂತಾಮಗ್ನಳಾಗಿರುವ ಅವಳನ್ನು ಕಂಡು ನಿನಗೆ ನಾಗದೋಷವಿದೆ, ನಿನ್ನಲ್ಲಿ ಸಂತಾನದ ಫಲಗಳಿವೆ, ಆ ದೋಷ ಪರಿಹಾರವಾದರೆ ಮಕ್ಕಳಾಗುತ್ತವೆ ಎಂದು ಹೇಳಿದನಂತೆ. ಅದರಂತೆ ಅವಳು ನಾಗಪ್ಪನ ಪೂಜೆ ಮಾಡಿ ಹೆಣ್ಣು ಮಗುವನ್ನು ಹಡೆದಳಂತೆ. ಅಂದಿನಿಂದ ಅವಳು ನಾಗಪ್ಪನ ಆರಾಧಕಳಾದಳು.

೨) ಹೆಣ್ಣು ಮಕ್ಕಳಿಗೆ ಮುಟ್ಟಿನ ಏರುಪೇರು, ಗರ್ಭ ತೊಂದರೆಗಳಾದರೆ ಅದಕ್ಕೆ 'ಹಿರೋಡ್ಯಾ'ನೇ ಕಾರಣವೆಂಬ ಬಲವಾದ ನಂಬಿಕೆಯಿದೆ. ಯಾರ ಕನಸಿನಲ್ಲಾದರೂ ಹಾವು ಬಂದರೂ ಅದು 'ಹಿರೋಡ್ಯಾ' ಹೀಗಾಗಿ 'ಹಿರೋಡ್ಯಾ' ಪೂಜೆ ದೀಪಾವಳಿ ಇತರೆ ಹಬ್ಬ ಶನಿವಾರದಂದು ಮಾಡುವುದು ಕಂಡುಬರುತ್ತೆ. ಈ ಪೂಜೆ ಹೆಣ್ಣುಮಗಳು ತನ್ನ ಗಂಡನ ಮನೆಯ ಖರ್ಚಿನಲ್ಲೇ ಮಾಡಬೇಕು. ತವರಿನದ್ದು ಒಪ್ಪಾಗದಂತೆ, 'ಹಿರೋಡ್ಯಾ' ಎಂದರೆ 'ನಾಗಣ್ಣ' ಎಂದೇ ನಂಬಿಕೆಯುಂಟು.

೩) ಗರ್ಭಿಣಿ ಹೆಣ್ಣು ಮಗಳನ್ನು ನೋಡಿದ ಹಾವಿನ ಕಣ್ಣು ಕುರುಡಾಗುತ್ತವೆಯಂತೆ. ಮಗು ಮುಂದೆ ಯಾವಾಗಲೂ ಹಾವಿನಂತೆ ನಾಲಗೆಯನ್ನು ಹೊರಗೆ ತೋರಿಸುತ್ತಿರುತ್ತದೆಂಬ ನಂಬಿಕೆಯೂ ಉಂಟು.

೪) ಹೆಣ್ಣು ಮಗಳು ಮೈನೆರೆದ ಮೈಲಿಗೆ ಬಟ್ಟೆಗಳನ್ನು ತೊಳೆಯದೇ ಹಾಗೇ ಎಸೆದಾಗ ಅಥವಾ ಎಲ್ಲಿಯಾದರೂ ಒಂದೆಡೆ ಕೆಳಗೆ ಇಟ್ಟಾಗ ಅದರ ಮೇಲಿಂದ ಹಾವು ಹರಿದು ಹೋದಾಗ ಅಥವಾ ಬಾಯಿ ಹಚ್ಚಿದಾಗ 'ನಾಗದೋಷ' ಉಂಟಾಗಿ ಅವಳಿಗೆ ಮುಂದೆ ಮಕ್ಕಳಾಗದೆ, ಗರ್ಭವತಿಯಾದರೂ ಆ ಗರ್ಭ ನಿಲ್ಲುವುದಿಲ್ಲ ಎಂಬ ನಂಬಿಕೆಯಿದೆ. ಹೀಗಾಗಿ ಹೆಣ್ಣುಮಗಳು ನಾಗಪೂಜೆ ಮಾಡುತ್ತಾ ಬಂದಿದ್ದಾಳೆ. ಇದು ಆಧುನಿಕ ಸ್ತ್ರೀಯರಲ್ಲೂ ಕಂಡುಬರುತ್ತದೆ. ಹಾಗೆಂದೇ ಇಂದು ಅನೇಕರು ಇದಕ್ಕಾಗಿಯೇ ನಾಗಪೂಜೆ ಮಾಡಿ ದೋಷ ಪರಿಹಾರ ಮಾಡಿಕೊಳ್ಳುವುದೂ ಕಂಡುಬರುತ್ತದೆ. 'ಬುಲಾಯಿ'ಯ ಈ ಹಾಡೊಂದು ಇದಕ್ಕೆ ಪುಷ್ಠಿ ನಿಂಡುವಂತಿದೆ.

ಹೊನ್ನ ನೀಲ ಅಕ್ಕ ತಂಗೇರ ಕೋಲೆ
ಹೊನ್ನ ಮೈನೆರದ ಹನ್ನೆರಡೊರಷ ಕೋಲೆ
ನೀಲ ಮೈನೆರೆದ ಐದೇ ವರ್ಷ ಕೋಲೆ
ಉಟ್ಟ ದಟ್ಟಿ ಕಳುದಾಳೆ ಕೋಲೆ
ಹುತ್ತಿನ ಬಾಯೊಳಗಿಟ್ಟಾಳ ಕೋಲೆ
ಆಡುತ ಬಂದಾನೆ ನಾಗಯ್ಯ ಸ್ವಾಮಿ ಕೋಲೆ
ಬೆಲ್ಲದ ಪಾವಡಮಾಡಿ ನುಂಗ್ಯಾನೆ ಕೋಲೆ
ಯಾವ ದಿಟ್ಟಿದೆ ಪಾಪಿ, ಯಾವದಿಟ್ಟಿತೆ ಕರ್ಮಿ ಕೋಲೆ
ತೊಟ್ಟಿಲ ಹಿಡಿದು ತೂಗಲಿ ಬ್ಯಾಡೆ ಕೋಲೆ
ಬಟ್ಟಲ ಹಿಡಿದು ಜೀರಲಿ ಬ್ಯಾಡೆ ಕೋಲೆ
ನಾಗಯ್ಯ ಸ್ವಾಮಿ ಸರಪ ಕೊಟ್ಟಾರೆ ಕೋಲೆ....

ಮುಂದೆ ತಂಗಿ ನೀಲಮ್ಮನ ಮದುವೆಯಾಗಿ, ಅವಳು ಬಸುರಿಯೆಂದು ಅವರಣ್ಣ ಆಕೆಗೆ ಸೀರೆ, ಕುಪ್ಪಸ, ಮಗುವಿಗೆ ಅಂಗಿ ಕುಲಾವಿ, ಹಾಲಗಡಗ, ತೊಟ್ಟಿಲು ಎಲ್ಲವನ್ನು ಮಾಡಿಸುತ್ತಾನೆ. ಆದರೆ ನೀಲಮ್ಮನ ಹೆರಿಗೆಯಾಗದೆ, ಹುಸಿಬಸುರಾದಂತಾಗಿ ಮತ್ತೆ ಕರಗಿ ಹೋಗುತ್ತದೆ. ಕೊನೆಗೆ ಆಕೆಗೆ ಬಂಜೆಯೆಂಬ ಅಪವಾದ ಹೊರಲಾಗದೆ ತನಗೆ ಉಂಟಾದ ನಾಗದೋಷದ ಅರಿವಾಗಿ ನಾಗನಲ್ಲಿ ಮೊರೆಹೋಗುತ್ತಾಳೆ.

ಬಾಲಕ ಬಂಗಾರ ಜಡಿಸೇನೋ ನಾಗ ಕೋಲೆ
ಹೆಡಿಗೆ ಮುತು ಜೀಗಸೇನ ನಾಗ ಕೋಲೆ ಎಂದು ಅವಳು ಮತ್ತೆ
ಪೂಜಿಸಿ, ಹರಕೆಯನ್ನು ಹೊತ್ತುತ್ತಾಳೆ. ಕೊನೆಗೆ ನಾಗಪ್ಪ
ತೊಟ್ಟಿಲ ಹಿಡಿದು ತೂಗಲಿ ಹೋಗ ಕೋಲೆ
ಬಟ್ಟಲ ಹಿಡಿದು ಜೀರಲಿ ಹೋಗ ಕೋಲೆ[೧೦೯]

ಎಂದು ಅವಳಿಗೆ ವರವನ್ನು ಕೊಟ್ಟು ಕೃಪೆ ತೋರುತ್ತಾನೆಂದು ಹಾಡು ಮುಗಿಯುತ್ತದೆ.

ಅಂದರೆ 'ನಾಗದೋಷಕ್ಕೆ' ನಾಗಪೂಜೆ, ನಾಗನ ಅನುಗ್ರಹವೇ ಪರಿಹಾರವಾಗುತ್ತದೆ. ಅವನ ಕೃಪಾದೃಷ್ಟಿ ನಮ್ಮ ಮೇಲಿರಬೇಕೆಂಬ ಬಲವಾದ ನಂಬಿಕೆ ಕಂಡುಬರುತ್ತದೆ. ಇಂತಹ ನಂಬುಗೆಗಳೇ 'ನಾಗಪೂಜೆ'ಯನ್ನು ವಿವಿಧ ಬಗೆಯಲ್ಲಿ ಇಂದಿಗೂ ಮುನ್ನಡೆಸಿಕೊಂಡು ಬರಲು ಕಾರಣವಾದಂತೆ ಕಂಡುಬರುತ್ತದೆ.

ಶಿರೋಳಶೆಟ್ಟಿ ಆಚರಣೆ :

ಪಂಚಮಿಯ ಮರುದಿನ ಷಷ್ಠಿ. ಅಂದು ಶಿರೋಳ ಅಥವಾ ಸಿರೋಳ ಶೆಟ್ಟಿಯ ಆಚರಣೆಯನ್ನು ಮಾಡುತ್ತಾರೆ. ಶಿರೋಳನಿಗೆ ಹೋಳಿಗೆಯೇ ನೈವೇದ್ಯ ಈ ಶಿರೋಳ ಸೆಟ್ಟಿಯನ್ನು

ಮಧ್ಯಾಹ್ನ ಮಾಡಿ, ಪೂಜಿಸಿ, ರಾತ್ರಿವರೆಗೆ ಇಟ್ಟು ನಂತರ ಬಾವಿಯಲ್ಲಿ ವಿಸರ್ಜಿಸುವರು "ಮಕ್ಕಳಿಲ್ಲದ ಹೆಣ್ಣುಮಕ್ಕಳು ಈತನಿಗೆ ಪೂಜೆ ಮಾಡುವುದರಿಂದ ಸಂತಾನ ಪ್ರಾಪ್ತಿಯಾಗುತ್ತದೆಂಬ ನಂಬುಗೆಯೂ ಜನರಲ್ಲಿದೆ"[೧೧೦] ಶಿರೋಳ ಶೆಟ್ಟಿಯನ್ನು ಹುತ್ತಿನ ಮಣ್ಣಿನಿಂದ ಅಥವಾ ಹದಮಾಡಿಟ್ಟ ಕುಂಬಾರನ ಮನೆಯ ಮಣ್ಣಿನಿಂದ ಮನುಷ್ಯಾಕೃತಿಯನ್ನು ಮಾಡಿ, ಜೋಳದ ಅಳ್ಳು ಕುಸುಬಿ ಬೀಜಗಳಿಂದ ಅಲಂಕರಿಸುತ್ತಾರೆ. ವಿವಿಧ ಬಗೆಯ ಹೂ, ಅರಸಿಣ, ಕುಂಕುಮಗಳಿಂದ ಪೂಜೆ ಸಲ್ಲಿಸಿ, ದೀಪ ಧೂಪ ಹಾಕಿ ನೈವೇದ್ಯ ಅರ್ಪಿಸುವರು. ಈ ಮೂರ್ತಿಯನ್ನು ಮನೆಯ ಹೊರಗಿನ ಪಡಸಾಲೆಯಲ್ಲಿಟ್ಟು ಹಾಗೇ ಹೊರಗೆ ಒಯ್ಯುವದು ವಿಶಿಷ್ಟ ಸಾಮಾನ್ಯವಾಗಿ 'ಭುಲಾಯಿ' ಹಾಕುವ ಕಡೆಯಲ್ಲೆಲ್ಲಾ ಈ ಮೂರ್ತಿಯನ್ನು ಮಾಡಿಟ್ಟಿರುತ್ತಾರೆ. ಇದು ಬಸವಕಲ್ಯಾಣ, ಮಂಠಾಳ ಮುಂತಾದ ಕಡೆಗಳಲ್ಲಿ ಹೆಚ್ಚಾಗಿದೆ. ಜಿಲ್ಲೆಯ ಉಳಿದ ಕಡೆ ಅಷ್ಟಾಗಿ ಕಂಡುಬರುವುದಿಲ್ಲ. ಆದರೆ ಶಿರೋಳ ಶೆಟ್ಟಿಯೆಂದು, 'ಭುಲಾಯಿ' ಹಾಕುವುದು ಜಿಲ್ಲೆಯ ಎಲ್ಲಾ ಕಡೆಗಳಲ್ಲಿರುವುದು ಕಂಡುಬರುತ್ತದೆ. 'ಶಿರೋಳ ಶೆಟ್ಟಿ' ಮೂರ್ತಿಗೆ 'ಭುಲಾಯಿ' ಹಾಕಲು ಬಂದ ಹೆಣ್ಣುಮಕ್ಕಳು ಪೂಜೆ, ಆರತಿ ಮಾಡಿ ತಾವು ಪಂಚಮಿ ದಿನ ಕಟ್ಟಿಕೊಂಡ ಹಂಗನೂಲನ್ನು ಮೂರ್ತಿಯ ಮೇಲೆ ಹಾಕುವ ಸಂಪ್ರದಾಯವಿದೆ. ನಂತರ 'ಭುಲಾಯಿ' ಹಾಕುತ್ತಾರೆ. ಸಾಯಂಕಾಲ ಅಂದರೆ ಕತ್ತಲಾಗುವತನಕ 'ಭುಲಾಯಿ' ಹಾಕಿ ಬಿಟ್ಟ ನಂತರವೇ ಶಿರೋಳ ಶೆಟ್ಟಿಯನ್ನು ಬಾಜಾದೊಂದಿಗೆ ಮೆರೆಸುತ್ತ ತೆಗೆದುಕೊಂಡು ಹೋಗಿ ಊರ ಹೊರಗಿನ ಅಥವಾ ದೇವರ ಗುಡಿಯ ಬಾವಿಯಲ್ಲಿ ಹಾಕುವರು. ಈ ಕಾರ್ಯವನ್ನು ಗಂಡಸರು ಸೇರಿ ಮಾಡುವುದು ರೂಢಿಯಲ್ಲಿದೆ.

ಶಿರೋಳ ಶೆಟ್ಟಿ ಮೂರ್ತಿ ಮಾಡುವಾಗ ಕೆಲವೊಂದು ಸಂಪ್ರದಾಯಗಳಂತೆ ನಡೆದುಕೊಳ್ಳುವುದು ಕಂಡುಬರತ್ತುದೆ. ಶಿರೋಳ ಶೆಟ್ಟಿ ಮಾಡಿ ಕೂಡಿಸುವ ಗೌಡ, ಶಟಗಾರ, ಮಹಾಜನ ಅಥವಾ ಗುಡಿಯವರು ಬಾಜಾದೊಂದಿಗೆ ಕುಂಬಾರನ ಮನೆಗೆ ಹೋಗಬೇಕು. ಹೋಗುವಾಗ ಬುಟ್ಟಿಯಲ್ಲಿ ಅಕ್ಕಿ ಹಿಟ್ಟು, ಪೂಜಾ ಸಾಮಗ್ರಿ, ಟಾವೆಲ್-ಟೋಪಿಗಳನ್ನು ಒಯ್ದು ಕುಂಬಾರನಿಗೆ ಕೊಟ್ಟಾಗ, ಕುಂಬಾರ ಬುಟ್ಟಿಯಲ್ಲಿಯ ಸಾಮಗ್ರಿಗಳನ್ನು ತೆಗೆದುಕೊಂಡು ತಾನು ಮೊದಲೇ ಹದಮಾಡಿಟ್ಟ ಐದು ಮಣ್ಣಿನ ಮುದ್ದೆಗಳನ್ನು ಕೊಡುತ್ತಾನೆ. ಕೆಲವರು ಹುತ್ತದಿಂದ ತಾವೇ ಮಣ್ಣನ್ನು ತಂದು ಕಲಸಿ ಹದಮಾಡುತ್ತಾರೆ. ಹದಮಾಡಿದ ಮಣ್ಣಿನಿಂದ ಸ್ವಾಮಿ (ಅಯ್ಯನವರು), ಬಡಿಗೇರರು ಅಥವಾ ಕಲಾಕಾರದಿಂದ ಮೂರ್ತಿಯನ್ನು ಮಾಡಿಸುತ್ತಾರೆ. ಕೆಲವೊಬ್ಬರು ಬರೀ ಮೂರ್ತಿ ಮಾಡಿಟ್ಟರೇ, ಇನ್ನೂ ಕೆಲವರು ಮೂರ್ತಿಸುತ್ತಲೂ ಕಮಾನುಗಳನ್ನು ಮಾಡುತ್ತಾರೆ. ಮತ್ತೆ ಕೆಲವರು ಸರಬೀಲದಂತೆ (೫,೪,೩,೨,೧ ಖಾನೆಗಳಂತೆ) ದೀಪವಿಡುವ ಮಾಡ (ಖಾನೆ) ಗಳನ್ನು ಮಾಡಿ, ಮೇಲೆ ಮೂರ್ತಿಯನ್ನು ಮಾಡಿಸುತ್ತಾರೆ.

ಒಟ್ಟಾರೆ, ಕಲಾಕಾರನ ಕೈಚಳಕದಲ್ಲಿ ಸುಂದರ ಮೂರ್ತಿಯನ್ನು ತಯ್ಯಾರಿಸಿ, ಅದಕ್ಕೆ ಕವಡಿಗಳಿಂದ ಕಣ್ಣುಗಳು ಮಾಡಿ, ಉಳಿದಂತೆ ಜೋಳದಳ್ಳು ಹಾಗೂ ಕುಸುಬೆಯಿಂದ ಸಿಂಗಾರ

ಮಾಡುತ್ತಾರೆ. ಕುಂಕುಮ, ಅರಸಿಣ, ಹೂ ಮತ್ತು ಎಲೆಗಳನ್ನೂ ಬಳಸುತ್ತಾರೆ. ಇದೆಲ್ಲವನ್ನು ಮಾಡಿ ಪೂಜಿಸುವಾಗ ಸುಮಾರು ಮಧ್ಯಾಹ್ನ ೧ ರಿಂದ ೨ ಗಂಟೆಯಾಗುತ್ತದೆ. ಹೋಳಿಗೆಯ ನೈವೇದ್ಯೆಯನ್ನು ಮಾಡುತ್ತಾರೆ. ಆರತಿ ಮಾಡಿದ ಮೇಲೆ ಮನೆಯವರ, ಆಪ್ತರಿಷ್ಟರ ಊಟ, ಇಷ್ಟೆಲ್ಲಾ ಮುಗಿಯಲು ಹೆಣ್ಣುಮಕ್ಕಳು 'ಭುಲಾಯಿ' ಹಾಕಲು ಬರಲು ಪ್ರಾರಂಭಿಸುತ್ತಾರೆ. ಬಂದ ಹೆಣ್ಣುಮಕ್ಕಳು ಮೊದಲು ಶಿರೋಳ ಶೆಟ್ಟಿಯ ಹತ್ತಿರ ಹೋಗಿ, ಪೂಜಿಸಿ, ಆರತಿ ಮಾಡಿ ಪಂಚಮಿ ದಿನ ಕಟ್ಟಿಕೊಂಡ ಹಂಗನೂಲನ್ನು ತೆಗೆದು ಮೂರ್ತಿಗೆ ಹಾಕುತ್ತಾರೆ. ಜೋಳದಳ್ಳನ್ನು ಪ್ರಸಾದವಾಗಿ ಸ್ವೀಕರಿಸಿ, 'ಭುಲಾಯಿ' ಹಾಕಲು ನಿಲ್ಲುತ್ತಾರೆ. ಭತ್ತದ ಅಕ್ಕಿ ನಾಗಣ್ಣನ ಹಲ್ಲೆಂದು ನಂಬುವ ಜನರು ಭತ್ತದ ಅಳ್ಳನ್ನು ಸಹ ಬಳಸದಿರುವುದು ಗಮನಾರ್ಹ. ಈ ಹಬ್ಬಕ್ಕೆ ಜೋಳದಳ್ಳೇ ವಿಶಿಷ್ಟ. ನಾಗರ ಅಮವಾಸ್ಯೆಯಿಂದ ಚೌತಿಯವರೆಗೆ ಜೋಳದಳ್ಳು ಮಾಡುವ ಭಟ್ಟಿಗಳನ್ನು ವಿವಿಧ ಕಡೆಹಾಕುತ್ತಾರೆ. ಜೋಳದ ಅಳ್ಳು, ಕಡಲೇ, ಬಟಾಣಿ (ಕಳಿ) ಶೇಂಗಾ ಮುಂತಾದವುಗಳನ್ನು ಹುರಿದು ಕೊಡುತ್ತಾರೆ. ಪ್ರತಿವರ್ಷ ನಾಲ್ಕೈದು ದಿವಸ ಮಾತ್ರ ಈ ತಾತ್ಕಾಲಿಕ ಜೋಳದಳ್ಳಿನ ಭಟ್ಟಿಗಳು ಕಂಡುಬರುತ್ತವೆ. ಇದೂ ಸಹ ಹಬ್ಬದ ವೈಶಿಷ್ಟ್ಯವೇ. ಹೀಗಾಗಿ 'ಭುಲಾಯಿ' ಹಾಕಲು ಬಂದವರಿಗೆ, ಶಿರೋಳ ಶೆಟ್ಟಿಗೆ ನಮಸ್ಕರಿಸಿದವರಿಗೆಲ್ಲಾ ಈ ಅಳ್ಳೇ ಪ್ರಸಾದ, ಫರಾಳ ಆಗುವುದು ಕಂಡುಬರುತ್ತದೆ. ಮನೆಯ ಬಾಗಿಲಿಗೆ ಹಾಕಿದ ಹಾಗೂ ಗಂಡು ಮಕ್ಕಳಿಗೆ ಹಾಕಿದ ಹಂಗನೂಲುಗಳನ್ನು ಹೆಣ್ಣುಮಕ್ಕಳು ಬರುವಾಗ ತಪ್ಪದೇ ತಂದು ಶಿರೋಳ ಶೆಟ್ಟಿಗೆ ಹಾಕುತ್ತಾರೆ. ಇನ್ನೂ ಕೆಲವರು ಅಷ್ಟಮಿಗೆ ಲಕ್ಷ್ಮೀ ಕೂಡಿಸುವವರೆಗೆ ಹಾಗೇ ಇಟ್ಟಿಕೊಳ್ಳುವ ಸಂಪ್ರದಾಯವೂ ಕಂಡುಬರುತ್ತದೆ. ಹೆಚ್ಚಾಗಿ ಎಲ್ಲರೂ 'ಹಂಗನೂಲ'ನ್ನು ತಂದು ಹಾಕುವುದರಿಂದ ಮೂರ್ತಿ ಅದರಲ್ಲೆ ಮುಳುಗಿದಂತೆ ಭಾಸವಾಗುತ್ತದೆ. ಇಂತಹ ಸಂಪ್ರದಾಯಗಳನ್ನು ಹಳ್ಳಿಗಳಲ್ಲಿ ಇವತ್ತಿಗೂ ಚಾಚೂ ತಪ್ಪದೆ ಆಚರಿಸುವುದು, ಅನುಸರಿಸುವುದು ಕಂಡುಬರುತ್ತದೆ. ಹೆಣ್ಣುಮಕ್ಕಳು 'ಭುಲಾಯಿ' ಹಾಕಿ ಬಿಟ್ಟಾದ ಮೇಲೆ ಗಂಡಸರೆಲ್ಲಾ ಸೇರಿ ಶಿರೋಳ ಶೆಟ್ಟಿಯ ಮೂರ್ತಿಯನ್ನು ಮನೆಯಿಂದ ಅದ್ಧೂರಿ ಮೆರವಣಿಗೆಯಲ್ಲಿ ಒಯ್ದು ಬಾವಿಯಲ್ಲಿ ಹಾಕಿ ಬರುತ್ತಾರೆ. ಹೀಗೆ ಶಿರೋಳ ಮಧ್ಯಾಹ್ನ ಹುಟ್ಟಿ ರಾತ್ರಿ ಸಾಯುತ್ತಾನೆಂಬ" ೧೧೧ ಪ್ರತೀತಿ ಜನರಲ್ಲಿದ್ದಂತೆ ಕಂಡುಬರುತ್ತದೆ. ಇದು ಮೂರನೆಯ ದಿನದ ಆಚರಣೆ. ಈ ಆಚರಣೆಯ ಬಗೆಗೆ ಪೌರಾಣಿಕ ಹಿನ್ನೆಲೆಯು ಈ ರೀತಿಯಾಗಿದೆ. 'ಶಿರೋಳ' ಎಂಬ ಊರಿನಲ್ಲಿ ಒಬ್ಬ ರಾಜನಿದ್ದು, ಬಹಳ ವರ್ಷಗಳವರೆಗೆ ಅವನಿಗೆ ಸಂತಾನ ಪ್ರಾಪ್ತಿಯಾಗಲಿಲ್ಲ. ಹೀಗಾಗಿ ಅವನು ಈಶ್ವರನ ಆರಾಧನೆಗೆ ತೊಡಗುತ್ತಾರೆ. ಈಶ್ವರನು ಇವರ ಭಕ್ತಿಗೆ ಮೆಚ್ಚಿ ವರ ಕೇಳಿದಾಗ, ಹೆಚ್ಚು ಆಯುಷ್ಯವುಳ್ಳ ಮಗನಾಗದಿದ್ದರೂ, ಕನಿಷ್ಟ ಏಳು ದಿನಗಳ ಆಯುಷ್ಯ ಉಳ್ಳ ಮಗನನ್ನಾದರೂ ದಯಪಾಲಿಸಬೇಕೆಂದಾಗ ಭಗವಂತನು ಅವನ ಆಸೆಯನ್ನು ಈಡೇರಿಸುತ್ತಾನೆ. ಆ ಶೆಟ್ಟಿಗೆ ಹುಟ್ಟಿದ ಮಗನೇ 'ಶಿರೋಳ ಶೆಟ್ಟಿ' ಎಂದು ಹೆಸರು ಪಡೆದನು. ನಂತರ ಶಿರೋಳ ಶೆಟ್ಟಿಯು ಅಗಸರ ಹೆಣ್ಣಿನ ಮೇಲೆ ಮನಸ್ಸು ಮಾಡಿದ್ದರಿಂದ ಆ ಹೆಣ್ಣು ಇವನನ್ನು ಕೊಲೆ ಮಾಡಿಸಿ ಬಂಡಿಯ ಕೆಳಗೆ ಹೂಳಿಟ್ಟಳು

ಹುಟ್ಟಿದ ಏಳು ದಿವಸಕ್ಕೆ ಮರಣ ಹೊಂದಿದ ಶಿರೋಳ ಶೆಟ್ಟಿಯು ಪಂಚಮಿಯ ಮಾರನೆಯ ದಿವಸ 'ಹುತ್ತು' ಆದನೆಂಬ ನಂಬಿಕೆಯಿಂದ ಶೆಟ್ಟಿಯ ಮಣ್ಣಿನ ಮೂರ್ತಿಯನ್ನು ಮಾಡಿ ಪೂಜಿಸಲಾಗುತ್ತದೆ. ಶಿರೋಳ ಶೆಟ್ಟಿಯ ಸ್ಮರಣೆಯೇ ಇದರ ಮುಖ್ಯ ಉದ್ದೇಶ" [೧೧೨] ಅಂದರೆ ಶಿರೋಳ ಶೆಟ್ಟಿಯ ಸ್ಮರಣೆಯ ನಿಮಿತ್ಯವಾಗಿಯೇ ಪಂಚಮಿ ಹಬ್ಬದ ಕೊನೆಯ ದಿನವನ್ನು (ಷಷ್ಠಿ) 'ಶಿರೋಳ ಶೆಟ್ಟಿ' ಎಂದು ಆಚರಿಸುವುದು ಕಂಡುಬರುತ್ತದೆ. ಈ ಶಿರೋಳ ಪೂಜೆಯು ಜೋಕುಮಾರನ ಆರಾಧನೆಯನ್ನು ಹೋಲುವಂತೆ ಕಂಡುಬರುತ್ತದೆ.

ಷಷ್ಠಿಯ ಆಚರಣೆ ಕರ್ನಾಟಕದ ಬೇರೆ ಕಡೆಯಲ್ಲಿಯೂ ಭಿನ್ನ ರೀತಿಯಲ್ಲಿ ಆಚರಿಸುವುದು ಕಂಡುಬರುತ್ತದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಇದನ್ನು 'ಸಿರಿಯಾಳ ಷಷ್ಠಿ' ಎಂದು ಆಚರಿಸುತ್ತಾರೆ. ಅಂದು ಮುತ್ತೈದೆಯರು ಭಕ್ತಿ ಪೂರ್ವಕ ಪರಸ್ಪರ ಬಾಗಿನ ನೀಡುವ ಮೂಲಕ ಹಬ್ಬವನ್ನು ಆಚರಿಸುವಂತೆ ಕಂಡುಬರುತ್ತದೆ. ಈ ಹಬ್ಬ ಕುರಿತಾದ ಸಂಕ್ಷಿಪ್ತ ವರದಿ ಈ ರೀತಿಯಲ್ಲಿದೆ. "ಶಿವನ ನೆನಪಿನಲ್ಲಿ ಈ ಹಬ್ಬ ಆಚರಣೆಯಲ್ಲಿದೆ ಆತ ಭಿಕ್ಷೆ ಎತ್ತಲು ಮನೆ ಮನೆಗಳಿಗೆ ವೇಷಧಾರಿಯಾಗಿ ಬಂದು ಭಕ್ತ ಸಿರಿಯಾಳನ ಭಕ್ತಿ ಪರೀಕ್ಷಿಸಿದ ಪೌರಾಣಿಕ ಪ್ರಸಂಗದ ಸ್ಮರಣೆಗಾಗಿ ಸಿರಿಯಾಳ ಷಷ್ಠಿ ಆಚರಿಸಲಾಗುತ್ತದೆ. ಶಿವ ವೇಷದಾರಿಯಾಗಿ ಬಂದಾಗ ಅದನ್ನರಿಯದ ಭಕ್ತ ಸಿರಿಯಾಳ ಕಾಡಿಗೆ ಹೋಗಿ ಸೊಪ್ಪು ತಂದು ಊಟ ಬಡಿಸುತ್ತಾನೆ.

ಶಿವ ಅದನ್ನು ನಿರಾಕರಿಸಿ ಮಾಂಸದ ಖಾದ್ಯ ತರುವಂತೆ ಆಗ್ರಹಿಸುತ್ತಾನೆ. ಆಗ ಸಿರಿಯಾಳ ತನ್ನ ಮಗನ ಕುತ್ತಿಗೆಯನ್ನೇ ಕಡಿದು ಶಿವನಿಗೆ ನೈವೇದ್ಯ ಅರ್ಪಿಸುತ್ತಾನೆ. ಇದರ ನೆನಪಿನಲ್ಲಿ ಮಹಿಳೆಯರು ಅನ್ನದಲ್ಲಿ ತಯ್ಯಾರಿಸುವ ಹುಳಿಯನ್ನ, ಮೊಸರನ್ನ, ತುಪ್ಪದನ್ನ, ಕೇಸರಿಭಾತು ಇತ್ಯಾದಿ ಐದು ಬಗೆಯ ಖಾದ್ಯಗಳನ್ನು ಸಿದ್ಧಪಡಿಸಿ ಸೊಪ್ಪಿನ ಪಲ್ಯ, ಅಕ್ಕಿ ತರಿಯ ಅಂಬಲಿ ಮಾಡುತ್ತಾರೆ.

ನಂತರ ಗಂಡು ಮಕ್ಕಳಿರುವ ತಾಯಂದಿರು ಇದನ್ನು ಬಾಗಿನದ ರೂಪದಲ್ಲಿ ನೀಡುತ್ತಾರೆ. ಇದರ ಜೊತೆ ಕುಂಕುಮ ತಾಂಬೂಲನೀಡಿ ಮುತ್ತೈದೆಯರನ್ನು ಸತ್ಕರಿಸುವುದು ಈ ಹಬ್ಬದ ವಿಶೇಷ" [೧೧೩]

ಈ ರೀತಿಯಾಗಿ ಷಷ್ಠಿ ಹಬ್ಬದ ಆಚರಣೆಯಲ್ಲಿ ಭಿನ್ನತೆಯಿದ್ದರೂ ಮಹಿಳೆಯರ ಹಬ್ಬವೆನ್ನುವುದು ಸಾಮ್ಯತೆಯ ಅಂಶವಾಗಿದೆ. ಬೀದರದಂತೆ ಇತರೆಡೆ ಮಹಿಳೆಯರ ಹಬ್ಬವೆನ್ನುವುದು ವಿಶೇಷ. ಶಿವಭಕ್ತೆಯಾದ 'ಚಂಗಳೆಯ ಬುಲಾಯಿ ಹಾಡು' ಸಹ ಈ ಮೇಲಿನ ವಿವರಣೆಯನ್ನು ಹೊಂದಿರುವುದು ಗಮನಾರ್ಹವಾಗಿದೆ.

ಹೀಗೆ ಮೂರು ದಿವಸಗಳ ಕಾಲ ಆಚರಿಸುವ ಪಂಚಮಿ ಹಬ್ಬದಲ್ಲಿಯ ವಿವಿಧ ಸಂಪ್ರದಾಯ. ಆಚರಣೆ ಹಾಗೂ ನಂಬಿಕೆಗಳು ಬೀದರ ಜಿಲ್ಲೆಯಲ್ಲಿ ವಿಶಿಷ್ಟವಾಗಿರುವಂತೆ ಕಂಡುಬರುತ್ತದೆ. ಈ ಭಿನ್ನತೆಗೆ ಬಹುಶಃ 'ಭುಲಾಯಿ ಸಂಸ್ಕೃತಿಯೇ' ಕಾರಣವಾಗಿರಬಹುದು.

ಅದಕ್ಕಾಗಿಯೇ **'ಭುಲಾಯಿ ಸಂಸ್ಕೃತಿ' ವಿಶಿಷ್ಟವಾದ ಸಂಸ್ಕೃತಿಯೆಂದು ಕರೆಯಬಹುದು.** ಆದರೆ ಇಂದು ಮೊದಲಿನಂತಹ ಸಂಭ್ರಮ, ಸಡಗರಗಳು ಕಂಡುಬರದಿದ್ದರೂ, ಅಲ್ಲಲ್ಲಿಯಾದರೂ ಈ ಪರಂಪರೆಯನ್ನು ಮುಂದೊರೆಸಿಕೊಂಡು ಹೋಗುವುದು ಕಂಡುಬರುತ್ತದೆ. ಇದೂ ಸಹ ಹಳ್ಳಿಗಳಲ್ಲಿ ಮಾತ್ರ ಎಂಬುದು ತುಂಬಾ ಗಮನಾರ್ಹವಾಗಿದೆ.

ಡಾ॥ ದೇವೇಂದ್ರ ಕುಮಾರ ಹಕಾರಿಯವರ "ಯಾವುದೇ ಸಾಂಸ್ಕೃತಿಕ ಬೆಳವಣಿಗೆಯನ್ನು ಗುರುತಿಸಲು ಮಹತ್ವದ ಆಕರಗಳೆಂದರೆ ಆಯಾ ಜನರ ನಂಬುಗೆ, ಶ್ರದ್ಧೆ, ಕ್ರಿಯಾ ಚರಣೆಗಳು"[೧೧೪] ಎಂಬ ಅಭಿಪ್ರಾಯದೊಂದಿಗೆ **'ಭುಲಾಯಿ ಸಂಸ್ಕೃತಿಯ'** ಸಂಪ್ರದಾಯ, **ಆಚರಣೆ** ಹಾಗೂ ನಂಬಿಕೆಗಳನ್ನು, ವೈಶಿಷ್ಟ್ಯತೆಯನ್ನು ಇಲ್ಲಿ ಗುರುತಿಸಬಹುದಾಗಿದೆ.

ಅಡಿ ಟಿಪ್ಪಣಿ

೧. ಡಾ॥ ಡಿ.ಬಿ.ನಾಯಕ : ಬುಲಾಯಿ ಹಾಡುಗಳು, ೨೦೦೧ ಪುಟ ೧೦೦
೨. ವಕ್ತಾರರ ಹೇಳಿಕೆ
೩. ಡಾ॥ ಡಿ.ಬಿ.ನಾಯಕ : ಬುಲಾಯಿ ಹಾಡುಗಳು, ೨೦೦೧, ಪುಟ ೨
೪. ಡಾ। ಜಗನ್ನಾಥ ಹೆಬ್ಬಾಳೆ : ಬುಲಾಯಿ ಹಾಡುಗಳು, ೧೯೯೭, ಪ್ರಸ್ತಾವನೆ ೫
೫. ಡಾ॥ ಮಲ್ಲಿಕಾರ್ಜುನ ಲಠ್ಠೆ : ಜಾನಪದ ಸಂಪದ, ೧೯೮೨, ಪುಟ ೮೫
೬. ಡಾ। ಜಗನ್ನಾಥ ಹೆಬ್ಬಾಳೆ : ಬುಲಾಯಿ ಹಾಡುಗಳು, ೧೯೯೭, ಪ್ರಸ್ತಾವನೆ ೫
೭. ಡಾ॥ ಡಿ.ಬಿ.ನಾಯಕ : ದೇಸಿ ಸಂಸ್ಕೃತಿ ೨೦೦೨ ಪುಟ ೩-೪
೮. ಡಾ॥ ಎಮ್.ಎಸ್. ಸುಂಕಾಪುರ : ಜೀವನ ಜೋಕಾಲಿ ಭಾಗ-೮ ಕೋಲು ಪದ ೧೯೭೬, ಪ್ರಸ್ತಾವನೆ IV
೯. ಡಾ॥ ಬಿ.ಎಸ್. ಸ್ವಾಮಿ : ಜಾನಪದ ಟಿಪ್ಪಣಿಗಳು - ಪ್ರಬಂಧಗಳು ೧೯೮೯ ಪುಟ ೧೯
೧೦. ಡಾ॥ ಎಮ್.ಎಸ್. ಸುಂಕಾಪುರ : ಜೀವನ ಜೋಕಾಲಿ ಭಾಗ-೮ ಕೋಲು ಪದ ೧೯೭೬, ಪ್ರಸ್ತಾವನೆ IV
೧೧. ಹೆಬ್ಬಾಳೆ ಜಗನ್ನಾಥ ಎಸ್ : ಬೀದರ ಜಿಲ್ಲೆಯ ಬುಲಾಯಿ ಹಾಡುಗಳು ೧೯೯೬, ಪ್ರಸ್ತಾವನೆ
೧೨. ರೆ. ಕಿಟ್ಟಲ್ : ಕನ್ನಡ - ಇಂಗ್ಲೀಷ್ ಡಿಕ್ಷನರಿ, ೧೯೯೪, ಪುಟ ೧೧೩
೧೩. ಹೆಬ್ಬಾಳೆ ಜಗನ್ನಾಥ ಎಸ್ : ಬೀದರ ಜಿಲ್ಲೆಯ ಬುಲಾಯಿ ಹಾಡುಗಳು, ೧೯೯೬, ಪ್ರಸ್ತಾವನೆ XI
೧೪. ರಾಜಪ್ಪ ದಳವಾಯಿ : ಕನ್ನಡ ಸಾಹಿತ್ಯ ಕೋಶ, ೨೦೦೩, ಪುಟ ೪೭೯
೧೫. ಡಾ॥ ಡಿ.ಬಿ. ನಾಯಕ : ಬುಲಾಯಿ ಹಾಡುಗಳು, ೨೦೦೧, ಮುನ್ನುಡಿ
೧೬. ಶಿವಮ್ಮ ಬಿ. ಗುಲಬರ್ಗಾ
೧೭. ಡಾ। ಚಿದಾನಂದ ಮೂರ್ತಿ : ಹೊಸತು ಹೊಸತು, ೧೯೯೩, ಪುಟ ೪೧೩-೧೪
೧೮. ರೆ. ಕಿಟ್ಟಲ್ : ಕನ್ನಡ - ಇಂಗ್ಲೀಷ್ ಡಿಕ್ಷನರಿ, ೧೯೯೪, ಪುಟ ೧೧೩೨
೧೯. ಡಾ॥ ಎಚ್.ಟಿ. ಪೋತೆ ಡಾ॥ ಮೀನಾಕ್ಷಿ ಬಾಳಿ : ನಡುಗನ್ನಡ ಕಾವ್ಯಸಂಗ್ರಹ, ೨೦೦೭, ಪುಟ ೩೬
೨೦. ಯಶವಂತ ದಾತೆ ಚಿಂತಾಮಣಿಕರ್ತಿ : ಮಹಾರಾಷ್ಟ್ರ ಶಬ್ದ ಕೋಶ. ೧೯೮೮, ಪುಟ ೨೩೭೯
೨೧. -ಅದೇ-
೨೨. ನಂದಾದೇವಿ ಮಲ್ಕಾಪುರ
೨೩. ಬಸಮ್ಮಾ ಚೆನ್ನಪ್ಪಾ ಚಿಟ್ಟಾ
೨೪. ರತ್ನಮ್ಮಾ ಎಸ್. ಹೆಬ್ಬಾಳೆ
೨೫. ಡಾ. ಬಿ.ಎನ್. ಉಪಾಧ್ಯೆ : ಮಹಾರಾಷ್ಟ್ರ ಕರ್ನಾಟಕ ಸಾಂಸ್ಕೃತಿಕ ಸಂಬಂಧ ೨೦೦೯, ಪುಟ ೧೨

೨೬. ಕ್ಷೇತ್ರಕಾರ್ಯ (ಕಮಲನಗರ) ದಲ್ಲಿ ದೊರೆತ ಮಾಹಿತಿ

೨೭. ಡಾ. ಜಿ.ಎಸ. ಉಪಾದ್ಯೆ : ಮಹಾರಾಷ್ಟ್ರ ಕರ್ನಾಟಕ ಸಾಂಸ್ಕೃತಿಕ ಸಂಬಂಧ ೨೦೦೯, ಪುಟ ೩೩

೨೮. ಶಕುಂತಲಾ ದಂಡೋತೆ

೨೯. ಗೌರಮ್ಮ ಉಪ್ಪಾರ

೩೦. ಗಂಗಮ್ಮ ಬಸಪ್ಪಾ ಜನವಾಡ

೩೧. ಬಸಮ್ಮ ಭೀಮರಾವ ಸಂತಪುರೆ

೩೨. ಗುರಮ್ಮಾ ಸಿದ್ರಾಮಪ್ಪಾ ಹುಲಸೂರ

೩೩. ಭಾಗೀರಥಿ ಸಿದ್ರಾಮ ಹುಲಸೂರ

೩೪. ಸುಶೀಲಬಾಯಿ ಗುರುಬಸಪ್ಪಾ

೩೫. ಗೌರಮ್ಮ ಉಪ್ಪಾರ

೩೬. ಡಾ. ಬಿ.ಎಸ್. ಗದ್ದಗಿಮಠ : ಕನ್ನಡ ಜಾನಪದ ಗೀತೆಗಳು ೧೯೬೯, ಪುಟ ೨೧೭

೩೭. ಛಂದಸ್ಸಿನ ಪೌಢ ಅಧ್ಯಯನ : ವಿಕ್ರಮ ಪ್ರಕಾಶನ ಗದಗ, ೧೯೭೯, ಪುಟ ೧೪೫

೩೮. ಡಾ॥ ಬಿ.ಎಸ್. ಗದ್ದಗಿ ಮಠ : ಕನ್ನಡ ಜಾನಪದ ಗೀತೆಗಳು, ೧೯೬೯, ಪುಟ ೨೧೮

೩೯. ಡಾ॥ ಹೆಬ್ಬಾಳೆ ಜಗನ್ನಾಥ ಎಸ್. : ಬೀದರ ಜಿಲ್ಲೆಯ ಬುಲಾಯಿ ಹಾಡುಗಳು, ೧೯೯೬ ಪ್ರಸ್ತಾವನೆ **XII**

೪೦. ರಾಜಪ್ಪ ದಳವಾಯಿ : ಕನ್ನಡ ಸಾಹಿತ್ಯ ಕೋಶ ೨೦೦೩, ಪುಟ ೫೯೧

೪೧. -ಅದೇ-

೪೨. ಚೆನ್ನಮ್ಮಾ ಬಸಪ್ಪಾ ಮುಸ್ತಾಪುರ

೪೩. ಗುರಮ್ಮಾ ಸಿದ್ರಾಮಪ್ಪಾ ಹುಲಸೂರ

೪೪. ರಾಜಪ್ಪ ದಳವಾಯಿ : ಕನ್ನಡ ಸಾಹಿತ್ಯ ಕೋಶ, ೨೦೦೩, ಪುಟ ೫೯೩

೪೫. ಚಂದ್ರಮ್ಮ ಸಂಗಪ್ಪ ಹುಲಸೂರ

೪೬. ಕ್ಯಾತನಹಳ್ಳಿ ರಾಮಣ್ಣ : ಬೀದರ ಜಿಲ್ಲೆಯ ಜನಪದ ಗೀತೆಗಳು, ೧೯೩೬, ಪುಟ ೨೦೩ ರಿಂದ ೨೦೫

೪೭. ತೇಜಮ್ಮ ಶಿವಯೋಗಿ ಬಸವಕಲ್ಯಾಣ

೪೮. ಸವಿತಾ ತಾಜಲಾಪೂರ

೪೯. ಕ್ಯಾತನ ಹಳ್ಳಿ ರಾಮಣ್ಣ : ಬೀದರ ಜಿಲ್ಲೆಯ ಜನಪದ ಗೀತೆಗಳು ೧೯೭೬, ಪುಟ ೨೨೩

೫೦. ಡಾ॥ ಜಗನ್ನಾಥ ಹೆಬ್ಬಾಳೆ : ಬುಲಾಯಿ ಹಾಡುಗಳು, ೧೯೯೭, ಪುಟ ೧೧

೫೧. ಕೆ. ಭೈರಪ್ಪ : ಸಾಮಾಜಿಕ ಸಂಸ್ಥೆಗಳು ಮತ್ತು ಸಾಮಾಜಿಕ ಚಿಂತನೆ, ೨೦೦೭, ಪುಟ ೬೧

೫೨. ಡಾ॥ ಎಚ್. ತಿಪ್ಪೇರುದ್ರ ಸ್ವಾಮಿ : ಕರ್ನಾಟಕ ಸಂಸ್ಕೃತಿ ಸಮೀಕ್ಷೆ ೧೯೮೫, ಪುಟ ೬

೫೩. -ಅದೇ- ಪುಟ ೧೧-೧೨

೫೪. ವಾಮನ ಬೇಂದ್ರೆ : ಸಾಹಿತ್ಯ ವಿರಾಟ್ ಸ್ವರೂಪ, ೧೯೭೪ ಪುಟ ೯೧೮

೫೫.	ಎಂ.ಎಂ. ಕಲಬುರ್ಗಿ	:	ಹರಿಹರನ ರಗಳೆಗಳು. ಪುಟ ೫
೫೬.	T. S. Eliot	:	Notes Towards the definition of Culture page - 41
೫೭.	ಡಾ॥ ಕಾಶಿನಾಥ ಅಂಬಲಗೆ	:	ಚುಳುಕಾದಿರಯ್ಯ ೨೦೦೯, ಪುಟ ೧೫೪
೫೮.	ಪ್ರೊ. ಕಾಳೇಗೌಡ ನಾಗವಾರ	:	ಜೀಶಂಪ ಅದರ ಜಾನಪದ ಬರಹಗಳು ೨೦೦೦
	ಡಾ॥ ಅಂಬಳಿಕೆ ಹಿರಯಣ್ಣ		ಪುಟ - ೪೭೧.
೫೯.	ಪ್ರೊ. ಹಿ.ಚಿ. ಬೋರಲಿಂಗಯ್ಯಾ	:	ಕರ್ನಾಟಕ ಜನಪದ ಕಲೆಗಳ ಕೋಶ ೧೯೯೬, ಪ್ರಸ್ತಾವನೆ **XXII**
೬೦.	-ಅದೇ-	:	ಪ್ರಸ್ತಾವನೆ **XV**
೬೧.	-ಅದೆ-	:	ಪ್ರಸ್ತಾವನೆ **XV**
೬೨.	ಡಾ. ಪಿ.ಕೆ. ಖಂಡೋಬಾ	:	ಜಾನಪದ ಮುನ್ನೋಟ, ೧೯೯೩, ಪುಟ ೧೧೦
೬೩.	ಡಾ॥ ರಹಮತ್ ತರೀಕೆರೆ	:	ಸಾಂಸ್ಕೃತಿಕ ಅಧ್ಯಯನ, ೨೦೦೪, ಪುಟ ೮೫
೬೪.	-ಅದೇ-	:	ಪುಟ ೯
೬೫.	-ಅದೇ-	:	ಪುಟ ೯೯
೬೬.	-ಅದೇ-	:	ಪುಟ ೧೧೦
೬೭.	-ಅದೇ-		
೬೮.	ಡಾ॥ ಎಸ್.ಎಂ. ವೃಷಬೇಂದ್ರ ಸ್ವಾಮಿ	:	ಜಾನಪದ ಸಾಹಿತ್ಯ ದರ್ಶನ ಭಾಗ - ೧೦, (ಜಾನಪದ ಹಬ್ಬಗಳು) ೧೯೮೭, ಪುಟ ೯೧,
೬೯.	ಸೂಗಯ್ಯ ಹಿರೇಮಠ	:	ರಂಜೇರಿನ ಸಿಂದರು, ೨೦೦೨, ಪುಟ ೩,
೭೦.	-ಅದೇ-	:	ಪುಟ ೧
೭೧.	-ಅದೇ-	:	ಪುಟ ೯
೭೨.	-ಅದೇ-	:	ಪುಟ ೧೦
೭೩.	ಯಜ್ಞನಾರಾಯಣ ಉಡುಪ	:	ಪುರಾಣ ಭಾರತ ಕೋಶ ೧೯೭೪, ಪುಟ ೯೨
೭೪.	ಸೂಗಯ್ಯ ಹಿರೇಮಠ	:	ರಂಜೇರಿನ ಸಿಂಧರು ೨೦೦೨, ಪುಟ ೫
೭೫.	-ಅದೇ-		
೭೬.	ಕರ್ಮವೀರ ವಾರಪತ್ರಿಕೆ	:	೩೦.೭.೨೦೦೬, ಪುಟ ೫೨
೭೭.	ಸೂಗಯ್ಯ ಹಿರೇಮಠ	:	ರಂಜೇರಿನ ಸಿಂದರು, ೨೦೦೨, ಪುಟ ೧೦
೭೮.	-ಅದೇ-		
೭೯.	ಹಿ.ಚಿ. ಬೋರಲಿಂಗಯ್ಯ	:	ಕರ್ನಾಟಕ ಜನಪದ ಕಲೆಗಳ ಕೋಶ, ೧೯೯೬, ಪುಟ ೪೭
೮೦.	-ಅದೇ-		
೮೧.	-ಅದೇ-	:	ಪುಟ ೪೭
೮೨.	-ಅದೇ-	:	ಪುಟ ೪೮
೮೩.	ಸ್ಮರಣ ಸಂಚಿಕೆ	:	ಬೀದರ ಉತ್ಸವ ೨೦೦೯, ಪುಟ ೨,
೮೪.	ಕರಿಬಸಪ್ಪಾ ಹಮಾಲಿ ಹಳ್ಳಿಖೇಡ		
೮೫.	ಬಿ.ವಿಶ್ವನಾಥ ಬೆಳಗುಂಪಾ	:	ಶ್ರೀ ಕ್ಷೇತ್ರ ಝರಣಿ ನರಸಿಂಹ, ಪುಟ ೧೦
೮೬.	ಹಿ.ಚಿ. ಬೋರಲಿಂಗಯ್ಯ	:	ಕರ್ನಾಟಕ ಜನಪದ ಕಲೆಗಳ ಕೋಶ, ೧೯೯೬, ಪುಟ ೪೭

೮೭. ಕ್ಷೇತ್ರ ಕಾರ್ಯದಲ್ಲಿ ಸಿಕ್ಕ ಮಾಹಿತಿ
೮೮. ಇಂದುಬಾಯಿ ಮೈತ್ರಸಕರ್
ಶಂತಾಬಾಯಿ ಗುಜ್ಜರ
೮೯. ಕನ್ನಡ ಪ್ರಭ ದಿನಪತ್ರಿಕೆ : ೫ **ಮಾರ್ಚ್** ೨೦೦೮
೯೦. -ಅದೇ-
೯೧. ಡಾ॥ ಎಸ್.ಎಂ. ವೃಷಬೇಂದ್ರ ಸ್ವಾಮಿ : ಜಾನಪದ ಸಾಹಿತ್ಯ ದರ್ಶನ ಭಾಗ-೧೦, ೧೯೮೭, ಪುಟ ೯೨
೯೨. ಜಗನ್ನಾಥ ಹೆಬ್ಬಾಳೆ ಎಸ್ : ಬೀದರ ಜಿಲ್ಲೆಯ ಬುಲಾಯಿ ಹಾಡುಗಳು ೧೯೯೬, ಪುಟ ೧೧೭
೯೩. ಡಾ॥ ಡಿ.ಬಿ.ನಾಯಕ : ಬುಲಾಯಿ ಹಾಡುಗಳು, ೨೦೦೧, ಪುಟ ೧೦೦
೯೪. ಸವಿತಾ ಮತ್ತು ಶಕುಂತಲಾ ಕಣಜಿ
೯೫. ಶಾಂತಾಬಾಯಿ ಗುಜ್ಜರ
೯೬. ಡಾ॥ ಎಸ್.ಎಂ. ವೃಷಬೇಂದ್ರ ಸ್ವಾಮಿ : ಜಾನಪದ ಸಾಹಿತ್ಯ ದರ್ಶನ ಭಾಗ-೧೦, ೧೯೮೭ ಪುಟ ೯೧
೯೭. ರಾಜಪ್ಪ ದಳವಾಯಿ : ಕನ್ನಡ ಸಾಹಿತ್ಯ ಕೋಶ ೨೦೦೩,ಪುಟ ೪೬೦
೯೮. ಸಿದ್ದಯ್ಯ ಹಿರೇಮಠ : ಪ್ರಜಾವಾಣಿ ದಿನಪತ್ರಿಕೆ, ಭೂಮಿಕಾ ೧೯.೭.೨೦೦೯, ಪುಟ೧.
೯೯. ರಾಜಪ್ಪ ದಳವಾಯಿ : ಕನ್ನಡ ಸಾಹಿತ್ಯ ಕೋಶ, ೨೦೦೩, ಪುಟ ೬೪೦ - ೬೪೧.
೧೦೦. ಡಾ॥ ವೃಷಬೇಂದ್ರ ಸ್ವಾಮಿ ಎಂ.ಎಸ್. : ಜಾನಪದ ಸಾಹಿತ್ಯ ದರ್ಶನ ಭಾಗ -೧೦, ೧೯೮೭, ಪುಟ೯೩
೧೦೧. -ಅದೇ- : ಪುಟ ೯೪
೧೦೨. ಡಾ॥ ಎಂ. ಚಿದಾನಂದಮೂರ್ತಿ: ಹೊಸತು ಹೊಸತು, ೧೯೯೩, ಪುಟ ೪೦೯
೧೦೩. ಡಾ॥ ವೃಷಬೇಂದ್ರ ಸ್ವಾಮಿ : ಜಾನಪದ ಸಾಹಿತ್ಯ ದರ್ಶನ ಭಾಗ-೧೦, ೧೯೮೭, ಪುಟ ೯೫
೧೦೪. ಸಿದ್ದಯ್ಯ ಹಿರೇಮಠ : ಪ್ರಜಾವಾಣಿ, ಭೂಮಿಕಾ ೨೯.೭.೨೦೦೬, ಪುಟ -೧
೧೦೫. ಪ್ರೊ.ಹಿ.ಚಿ. ಬೋರಲಿಂಗಯ್ಯ : ಕರ್ನಾಟಕ ಜನಪದ ಕಲೆಗಳ ಕೋಶ, ೧೯೯೬, ಪರಿವಿಡಿ
೧೦೬. ಚಂದ್ರಮ್ಮ ಸಂಗಪ್ಪ ಹುಲಸೂರ
೧೦೭. ಶಿವಮ್ಮಾ ಭೀಮಣ್ಣಾ ಬೀದರ
೧೦೮. ಬಸಮ್ಮ ಬಿ. ಮಂದಕನಳ್ಳಿ
೧೦೯. ಚಂದ್ರಮ್ಮ ಸಂಗಪ್ಪ ಹುಲಸೂರ
೧೧೦. ಡಾ॥ ಹೇಮಲತಾ ವಡ್ಡೆ : ಬೀದರ ಜಿಲ್ಲೆಯ ಹಬ್ಬ ಹರಿದಿನಗಳು, ೨೦೦೬, ಪುಟ ೧೬.
೧೧೧. ಕ್ಷೇತ್ರ ಕಾರ್ಯದಲ್ಲಿ ಸಿಕ್ಕ ಮಾಹಿತಿ
೧೧೨. ಡಾ॥ ಡಿ.ಬಿ. ನಾಯಕ : ಬುಲಾಯಿ ಹಾಡುಗಳು, ೨೦೦೧, ಪ್ರಸ್ತಾವನೆ ಪುಟ ೨.
೧೧೩. ಪ್ರಜಾವಾಣಿ ದಿನ ಪತ್ರಿಕೆ : ೧ನೇ ಆಗಸ್ಟ್ ೨೦೦೬ ಪುಟ ೨
೧೧೪. ಡಾ॥ ದೇವೇಂದ್ರಕುಮಾರ ಹಕಾರಿ : ಜಾನಪದ ಸಾಮಾಜಿಕ ಕಥನಗೀತೆಗಳಲ್ಲಿ ದುಃಖಾಂತ ನಿರೂಪಣೆ, ೧೯೮೫, ಪುಟ ೧೯೨

ಅಧ್ಯಾಯ - ೩

ಬುಲಾಯಿ ಹಾಡುಗಳ ಪ್ರೇರಣೆ - ಧೋರಣೆ

ಅಧ್ಯಾಯ - ೩

ಬುಲಾಯಿ ಹಾಡುಗಳ ಪ್ರೇರಣೆ - ಧೋರಣೆ

ತನಗೆ ತಿಳಿಯದಿದ್ದ ಕಾಲದ ಊಹೆ, ಐತಿಹ್ಯಗಳು ಆಯಾ ಕಾಲದ ಮನೋಭಾವ, ಧಾರ್ಮಿಕ ಧೋರಣೆಗಳಿಗೆ ತಕ್ಕಂತೆ ವಸ್ತು, ಪದ ಪಡೆದು ಜನಪದ ಕವಿಯ ಸೃಷ್ಟಿಗೆ ಪ್ರೇರಕವಾಗುವುದೇ ಪ್ರೇರಣೆ ಎನ್ನಬಹುದು. ಜನಪದರು ಇಂತಹ ಪ್ರೇರಣೆಯನ್ನು ಹೆಚ್ಚಾಗಿ ಪಡೆದದ್ದು ಬದುಕಿನಿಂದಲೇ ಇರಬಹುದು. ಆದರೂ ಇತರೇ ಅನೇಕ ಅಂಶಗಳಿಂದಲೂ ಪ್ರೇಣೆಯಾಗುವ ಸಾಧ್ಯತೆಗಳುಂಟು ಅವುಗಳನ್ನು ಪೌರಾಣಿಕ, ಐತಿಹಾಸಿಕ, ಧಾರ್ಮಿಕ ಹಾಗೂ ಸಾಮಾಜಿಕ ಎಂದು ವಿಂಗಡಿಸಿಕೊಳ್ಳಬಹುದು.

'....... ವೈಜ್ಞಾನಿಕ ಸಂಶೋಧನೆಗಿಂತ ಪೂರ್ವದಲ್ಲಿದ್ದ ಒಂದು ವಿಧದ ಊಹಾತ್ಮಕ ಕಲ್ಪನೆಗಳೇ ಪುರಾಣಗಳು"[೧] ಎಂದು ಹೇಳಲಾಗಿದೆ. ಮಾನವನು ಆದಿಕಾಲದಿಂದ ತನ್ನ ಸುತ್ತ ಮುತ್ತಣ ಅಗಾಧವಾದ ವಿಸ್ಮಯಕಾರಿ ರುದ್ರರಮ್ಯ ನಿಸರ್ಗ ಶಕ್ತಿಗಳಿಗೆ ಒಂದು ಅರ್ಥಕೊಡುವ, ಅವುಗಳಿಗೆ ಒಂದು ಮೂರ್ತರೂಪ ಕೊಡುವ ಪ್ರಯತ್ನವನ್ನು ಮಾಡುತ್ತಲೇ ಬಂದಿದ್ದಾನೆಂಬುದು ವಿದ್ವಾಂಸರ ಮತ. ಅವನ ಕಲ್ಪನಾಶಕ್ತಿಯನ್ನು ಮೀರಿ ನಿಂತ ಸೃಷ್ಟಿಯ ರಹಸ್ಯಗಳಿಗೆ ಒಂದಲ್ಲ ಒಂದು ಬಗೆಯ ರೂಪ ಕೊಟ್ಟ ಕಾಲದಿಂದಲೇ ಪುರಾಣಗಳ ಸೃಷ್ಟಿ. ಪುರಾಣವೆಂದರೆ ಅದು ಮನಸ್ಸಿನ ಸೃಷ್ಟಿ. ಈ ಸೃಷ್ಟಿಯ ಮುಖಾಂತರ ಯಾವುದಾದರೂ ಘಟನೆ ಜೀವನದ ಒಂದು ವಿಧಾನವಾಗಿ ಮಾರ್ಪಡುತ್ತದೆ. 'ಪುರಾಣ ಎನ್ನುವುದು ಚರಿತ್ರೆಯಲ್ಲ. ಚರಿತ್ರೆಯ ಮಾತೃಕೆ'[೨] ಎಂಬುದು ಗಮನಾರ್ಹ "ಆದಿಮಾನವನ ಕಲ್ಪನೆ, ಸ್ಪಂದನೆಗಳು - ಕಥಾನಕಗಳು ವಿಭಿನ್ನ ವೃಂದಗಳ ಸಾಮೂಹಿಕ ಮನ್ನಣೆಯನ್ನು ಪಡೆದು, ಹಾಗೇ ಸಾಗಿ ಬರುತ್ತವೆ. ಇವುಗಳಲ್ಲಿ ಅಲಲ್ಲಿ ಆಗಾಗ ಕೆಲವು ಹೊಸಕಲ್ಪನೆಗಳು ಅಂದಂದಿನ ಬದುಕಿನ ರೂಪ ಹೋರಾಟಗಳಿಗೆ ಅನುಗುಣವಾಗಿ ಬಂದು ಸೇರಿ ಮತ್ತೆ ವಿವಿಧ ಸಮೂದಾಯಗಳ ಮಾನಸಿಕ, ಧಾರ್ಮಿಕ ಹಿನ್ನೆಲೆಯ ಕ್ರಿಯೆಗಳಲ್ಲಿ ಚಲಾವಣೆಗೊಳ್ಳುತ್ತವೆ. ಆಗ ಅದು ಧಾರ್ಮಿಕ ಸ್ವರೂಪದ ಪುರಾಣವಾಗಿ ರೂಪುಗೊಳ್ಳುತ್ತದೆ. ಹೀಗಾಗಿ ಸಾಂಸ್ಕೃತಿಕ ಮಾನವ ಶಾಸ್ತ್ರಜ್ಞರು ಪುರಾಣವನ್ನು 'ವಿಶ್ವಾಸ ಪತ್ರ' ಎಂದು ಕರೆಯುತ್ತಾರೆ. ಅಂದರೆ ಆದಿಕಾಲದಿಂದಲೂ ಮಾನವರು ಕೆಲವು ಶಕ್ತಿಗಳಲ್ಲಿ, ಕೆಲವು ಅದ್ಭುತಗಳಲ್ಲಿ ನಂಬಿಕೆಗಳನ್ನಿಟ್ಟು ಬದುಕು ಸಾಗಿಸುತ್ತಾ ಬಂದಿದ್ದಾರೆ. ಆಗ ಇದು ಚರಿತ್ರೆಯ ಮಾತೃಕೆಯಾಗುವುದಾದರೆ ಧಾರ್ಮಿಕ ಸ್ವರೂಪದ ಒಂದು ನಂಬುಗೆಯ 'ಪತ್ರ'ವೂ ಆಗುತ್ತದೆ. ಹೀಗಾಗಿ ಆ ಕಾಲದ ಅಜ್ಞಾತ ಬಿಂದುವಿನ ಅದ್ಭುತ ಅತಿಮಾನುಷ ಅಲೌಕಿಕ ಘಟನೆಗಳನ್ನು ಒಳಗೊಂಡ ಕಥನ ಗೀತೆಗಳೇ ಪೌರಾಣಿಕ ಕಥನ ಗೀತೆಗಳು"[೩] ಎಂಬ ಮಾತುಗಳು ಬುಲಾಯಿ ಹಾಡುಗಳಿಗೂ ಅನ್ವಯಿಸುತ್ತವೆ. ಜನಪದ ರಾಮಾಯಣ, ಮಹಾಭಾರತ ಬೆಳೆದು ಉಳಿದು ಬಂದದ್ದೆ ಹೀಗೇ ಎಂಬುದನ್ನು ಅಲ್ಲಗಳೆಯುವಂತಿಲ್ಲ.

'ದಕ್ಷಬ್ರಹ್ಮನ ಹಾಡು' 'ಅಂಬಾಬಾಯಿ ಹಾಡು' 'ಗಣಪತಿಯ ಹಾಡು' 'ರಾಮಸೀತಾರ ಹಾಡು' 'ಗಿರಿರಾಜ-ಸಿರಿಗೌರಿ-ಗಣಪನ ಹಾಡು' ಮುಂತಾದವು ಪುರಾಣ ಕಲ್ಪನೆಗಳ ಬುಲಾಯಿ ಹಾಡುಗಳಾಗಿವೆ.

ಜ್ಞಾತಕಾಲದ ಪ್ರುತ್ಯಕ್ಷದರ್ಶನ ಸ್ಮರಣೆಯ ಪುನರಾವರ್ತನೆ, ಸಂದರ್ಭ ಸನ್ನಿವೇಶಗಳ ಪ್ರಚೋದನೆಗಳಿಂದಾಗಿ ರೂಪುಗೊಂಡದ್ದು ಐತಿಹಾಸಿಕ. ಜೀವನದ ಸಾರ್ಥಕತೆ ಪಡೆಯಲು ಮೂಲಭೂತ ಸ್ವಾಭಿಮಾನವನ್ನು ಬಲಿಗೊಡದೆ ತಲೆಯೆತ್ತಿ ಬಾಳಲು ನಾಡಿಗಾಗಿ, ಧರ್ಮಕ್ಕಾಗಿ, ಹೋರಾಡಿ ವೈರಿಗಳನ್ನು ಎದುರಿಸಿ, ಪ್ರಾಣಾರ್ಪಣೆ ಮಾಡಿದವರ ಶೌರ್ಯ ಸಾಹಸಗಳೇ, ಐತಿಹಾಸಿಕ ಬುಲಾಯಿ ಹಾಡುಗಳು ಇತಿಹಾಸವೆಂದರೆ ಅದೊಂದು ಗತಕಾಲದ ಬೂದಿಬುಟ್ಟಿಯಲ್ಲ. ಅದು ಆಯಾ ಜನಾಂಗದ ಅಜ್ಞಾನ ಮೌಢ್ಯಗಳ ಕ್ರೌರ್ಯ, ರಕ್ತಪಾತಗಳ ಸೋಲು ಸಾವುಗಳ, ಶೌರ್ಯ-ಸಾಹಸಗಳ-ಸಾಧ್ಯವಾದಷ್ಟು ಅಧಿಕೃತವಾಗಬಹುದಾದ ದಾಖಲೆ ಎನ್ನಬಹುದು. ಇಂಥ ಘಟನೆಗಳನ್ನು ತಮಗೆ ತಿಳಿದಂತೆ, ಹೊಳೆದಂತೆ ಹಾಡುವ ಹಾಡುಗಳೇ ಐತಿಹಾಸಿಕ ಬುಲಾಯಿ ಹಾಡುಗಳು. ಪುರಾಣಕಾಲ ಮುಗಿದು ಐತಿಹಾಸಿಕ ವಸ್ತುಸಂಗತಿಗಳು ಕಾವ್ಯ ವಸ್ತುವಾಗುವುದಕ್ಕೆ ಕಾವ್ಯದ ಸ್ವರೂಪ ಪರಿವರ್ತನ ಶೀಲತೆ ಮತ್ತು ಆಯಾ ಕಾಲದ ಜನತೆಯ ಆಸಕ್ತಿ ಅಭಿರುಚಿಗಳು ಕಾರಣವಾಗಬಹುದು. 'ಒಂದು ಕಾಲದ ಕಾವ್ಯ ಮುಂದೆ ಬರುವ ಕಾಲವನ್ನು ಸಂತೋಷಗೊಳಿಸುವುದಿಲ್ಲ. ಹಳೆಯ ಕಾಲದ ಕಾವ್ಯವನ್ನು ಮೆಚ್ಚಿಕೊಂಡರೂ ಪ್ರತಿ ಹೊಸ ಪೀಳಿಗೆಯು ತನ್ನ ಕಾಲದ ಸಮಸ್ಯೆ ಆಶೆ-ಆಕಾಂಕ್ಷೆಗಳ ವಿಲಕ್ಷಣತೆ ವೈಶಿಷ್ಟ್ಯತೆಗಳನ್ನು ಅಭಿವ್ಯಕ್ತಗೊಳಿಸುವ ಕಾವ್ಯದ ಮಾಗಣಿ ಮಾಡುತ್ತದೆ'[೪] ಎಂಬುವುದು ಗಮನಾರ್ಹ ಹೀಗಾಗಿ ಪುರಾಣದಿಂದ ಸರಿದ ಐತಿಹಾಸಿಕ ವಸ್ತುಗಳನ್ನು ಆಧರಿಸಿದ ಅನೇಕ ಬುಲಾಯಿ ಹಾಡುಗಳನ್ನು ನಾವು ನೋಡಬಹುದು.

'ರಜಾಕಾರರ ಹಾಡು', 'ಧರ್ಮಪ್ರಕಾಶರ ಹಾಡು', 'ಬಸವಲಿಂಗಪ್ಪನ ಹಾಡು' ಮುಂತಾದವುಗಳು ಜನಪದರು ಅಕ್ಷರ ಮಾಧ್ಯಮದಿಂದ ದೂರ ಇರುವುದರಿಂದ ಐತಿಹಾಸಿಕ ಸಂಗತಿಗಳು ಯಥವತ್ತಾದ ಸ್ವ-ರೂಪದಲ್ಲಿ ಅವರ ಮಧ್ಯ ಉಳಿಯದೇ ಅವು ರೂಪಾಂತಕ್ಕೆ ಒಳಗಾಗಿ 'ಐತಿಹ್ಯಗಳಾಗಿ' ಬಿಡುತ್ತವೆ. ಹೀಗಾಗಿ ಐತಿಹಾಸಿಕ ಸಂಗತಿಗಳ ಹಿನ್ನೆಲೆಯ ಹಾಡುಗಳ ಸೃಷ್ಟಿ ಬಹು ವಿರಳ"[೫] ಎಂಬ ಅಭಿಪ್ರಾಯ ಸೂಕ್ತವೆನಿಸುತ್ತದೆ. ಏಕೆಂದರೆ ನೂರಾರು ಬುಲಾಯಿ ಹಾಡುಗಳಿದ್ದರೂ ಅದರಲ್ಲಿ ಬೆರಳೆಣಿಕೆಯಷ್ಟು ಮಾತ್ರ ಐತಿಹಾಸಿಕ ಹಾಡುಗಳು ಕಂಡುಬರುತ್ತವೆ.

ಗರತಿಯರು ತಮ್ಮ ತಮ್ಮ ಕಲ್ಪನೆಗಳಿಂದ ಅನೇಕ ಸಂಕೀರ್ಣ ಮತ್ತು ರಹಸ್ಯಮಯ ಸನ್ನಿವೇಶಗಳಲ್ಲಿ ಸಿಲುಕಿ ತಾವೇ ಸೃಷ್ಟಿಸಿಕೊಂಡ ಕೋಟ್ಯಾನು ಕೋಟಿ ದೇವತೆಗಳು, ಅಗಣಿತ ಜನಪದವೃಂದ, ಸಮುದಾಯಗಳ ಪಾಲಿಗೆ ಧಾರ್ಮಿಕ ಉಪಾಸನೆ, ಅರ್ಚನೆಗಳ ರೂಪದಲ್ಲಿ ಉಳಿದು ಬರುತ್ತಲೇ ಇರುತ್ತವೆ. ಐತಿಹಾಸಿಕ ವ್ಯಕ್ತಿಗಳ, ಘಟನೆಗಳ ಕಥನ ಕಾವ್ಯ ಚಿತ್ರಣದಲ್ಲಿ ಕೆಲವೆಡೆ ಅತಿರಂಜಿತವೇನಿಸುವ ಅತ್ಯಾಶ್ಚರ್ಯಕರ ಅಂಶಗಳು ಕಂಡುಬರುವುದು ಇಂಥ

ಕಾರಣಗಳಿಂದಾಗಿರಬಹುದು. ಅಂದರೆ ಪೌರಾಣಿಕತೆಯ ಪ್ರಭಾವಲಯದಿಂದ ಮುಕ್ತರಾಗುವುದು ಹೆಣ್ಣು ಮಕ್ಕಳಿಗಂತೂ ಸುಲಭದ ಮಾತಾಗಿರಲಿಲ್ಲ, ಬಹುಶಃ ಸಾಧ್ಯವೂ ಆಗಿರಲಿಲ್ಲ. ಹೀಗಾಗಿ ಜನಾಂಗದ ಧಾರ್ಮಿಕ ಜೀವನದಲ್ಲಿ ಹೊಸ ಆಸೆಗಳನ್ನು ಬಿತ್ತಿದ, ಉಜ್ವಲ ಮೌಲ್ಯಗಳನ್ನು ಎತ್ತಿಹಿಡಿದ ಪುಣ್ಯ ಪುರುಷರ ಅನೇಕ ಬುಲಾಯಿ ಹಾಡುಗಳಲ್ಲಿ ಅಲೌಕಿಕ ಎನಿಸುವಂಥ ಕೆಲವು ಅಂಶಗಳು ನುಸುಳಿ ಬಂದಿರುವಂತೆ ಕಂಡುಬರುತ್ತದೆ.

'ಬಸವಣ್ಣನ ಹಾಡು' 'ಶರಣಬಸಪ್ಪನ ಹಾಡು', 'ಅಕ್ಕನಾಗಮ್ಮನ ಹಾಡು' 'ಅಕ್ಕ ಮಹಾದೇವಿಯ ಹಾಡು', 'ಚೆಂಗಳೆವ್ವನ ಹಾಡು', 'ಹೇಮರಡ್ಡಿ ಮಲ್ಲಮ್ಮನ ಹಾಡು', 'ಚೆನ್ನ ಬಸವಣ್ಣನ ಹಾಡು' ಮುಂತಾದವು ಧಾರ್ಮಿಕ ಹಿನ್ನೆಲೆಯಲ್ಲಿ ಮೂಡಿಬಂದಿರುವ ಶರಣರನ್ನು ಕುರಿತು ಬುಲಾಯಿ ಹಾಡುಗಳು ವಿಶಿಷ್ಟವಾಗಿವೆ.

ಹೆಣ್ಣು ಮಕ್ಕಳು ಬದುಕಿಗೆ ನೇರವಾಗಿ ಪ್ರತಿಸ್ಪಂದಿಸುತ್ತಾರೆ. ಕನಸು ಕಟ್ಟುವ ವಿರಳ ಕ್ಷಣಗಳಲ್ಲಿ ಸುಳಿದಾಡಿದರೂ ವಾಸ್ತವತೆಯ ಗಾಢ ಪರಿಸರದಲ್ಲಿಯೇ ಹೆಜ್ಜೆಯಿಡುವರು, ಉಸಿರಾಡುವರು. ಕೆಲವೊಮ್ಮೆ ಚೆಲುವಿಗಾಗಿ ಹಸಿದರೂ ಒಲವಿನದೇ ಹಪಾಹಪಿ ಕಂಡುಬರುತ್ತದೆ. ಹಸಿಹಸಿಯಾಗಿ ಸಂತಾಪ ದುಃಖಗಳನ್ನು ಮೊಗೆದರೂ ಕಾಣದ ದೈವದ ಹಂಬಲು, ಹಿಡಿತ, ಶರಣಾಗತಿಗಳು ಜೊತೆಯಲ್ಲಿ ಕಂಡುಬರುತ್ತವೆ. ಹೀಗಾಗಿ ಸುತ್ತಣ ಬದುಕಿನ ಜೀವಂತ ಅನುಭವವೇ ಅವರ ಸಂವೇದನೆಗೆ ಸಾಮಗ್ರಿಯಾಗಿ ಅಭಿವ್ಯಕ್ತಿಗೆ ಪ್ರೇರಕ, ಪ್ರೇರಣೆಯಾಗಿರಬಹುದು ಅವರಿಗೆ ಅಷ್ಟಾದಶ ವರ್ಣನೆಗಳ ಕಟ್ಟಿಲ್ಲ, ಪ್ರಾಸವಿನ್ಯಾಸ ಛಂದೋವಿಲಾಸ, ರೂಪಲಂಕಾರಗಳ ಹಂಗಿಲ್ಲ. ಸ್ವಭಾವೋಕ್ತಿಗಳ ಹೆಡಸು, ಸಹಜತೆಯ ಬೆಡಗಿನಿಂದ ಕೂಡಿದ ಅವರ ಬುಲಾಯಿ ಹಾಡುಗಳಿಗೆ ಯಾವುದೇ ರಾಜಮಹಾರಾಜರ ಮನ್ನಣೆ ಪಡೆಯಬೇಕಾದ ಜರೂರೂ ಇರಲಿಲ್ಲ. ಹೀಗಾಗಿ ಅವರು ತಮಗೆ ಒಲಿದಂತೆ ತಮ್ಮದೇ ರೀತಿಯಲ್ಲಿ ಹಾಡಿದ್ದು ಗಮನಾರ್ಹವಾಗಿದೆ.

ಧಾರ್ಮಿಕ ಹಿನ್ನೆಲೆಯಲ್ಲಿ ಪರಂಪರಾನುಗತವಾಗಿ ಬಂದ ಕೆಲ ಗಾಢವಾದ ನಂಬುಗೆಗಳು, ಸ್ವರ್ಗ, ನರಕ, ದೈವ, ದೆವ್ವ, ಮಾಟ-ಮಂತ್ರ, ಬಲಿ, ಆತ್ಮಬಲಿ, ಹೀಗೆ ಸಮಾಜದ ವಿಭಿನ್ನ ಸ್ತರಗಳಲ್ಲಿ, ಎಲ್ಲ ಬಗೆಯ ವೃಂದಗಳಲ್ಲಿ ಆಳವಾಗಿ ಬೇರೂರಿ ಬರುತ್ತವೆ. ಪ್ರತಿಯೊಂದು ಪೀಳಿಗೆಯ ಬದುಕನ್ನು ನಿಯಂತ್ರಿಸುವ, ತಿದ್ದುವ, ಶಿಕ್ಷಿಸುವ ಪ್ರಬಲ ಶಕ್ತಿಗಳಾಗಿ ಮೈದೋರುತ್ತದೆ. ಜನಪದರಲ್ಲಿ ಹೆಣ್ಣಿಗೆ ವಿಶಿಷ್ಟವಾದ ಸ್ಥಾನವಿದೆ. ಅವಳ ಶೀಲಕ್ಕೆ ಹೆಚ್ಚಿನ ಬೆಲೆಯಿದೆ. ಅದನ್ನು ಉಳಿಸಿಕೊಳ್ಳಲು ಹೆಣ್ಣು ಎಂತಹ ತ್ಯಾಗಕ್ಕೂ ಸಿದ್ಧಳಾಗಿರುತ್ತಾಳೆ. 'ಕಾಶೀಬಾಯಿಯ ಹಾಡು', 'ನೀಲಕಂಠರಾಜನ ಹಾಡು', 'ಮಲ್ಲಿಕಾರ್ಜುನನ ಹಾಡು', 'ತಂಗೀ ಈರಮ್ಮನ ಹಾಡು', 'ಸೋಮರಾಯ-ಭೀಮರಾಯರ ಹಾಡು' ಮುಂತಾದ ಬುಲಾಯಿ ಹಾಡುಗಳಲ್ಲಿ ಇದು ಕಂಡುಬರುತ್ತದೆ. ಅದಕ್ಕಾಗಿ ಪ್ರಾಣವನ್ನು, ಮಗುವನ್ನು ಬಲಿ ಕೊಡುವುದು, 'ಬೀದರ ಕೋಟೆಗೆ' ಸಂಗಮ್ಮನ 'ಕೆರೆಕಟ್ಟಾ ಕೆರೆಗೆ' ಪತಿವರತಿಯ ಬಲಿ ಹೀಗೆ ಈ ವ್ಯಕ್ತಿಗಳ ಪಟ್ಟಿ ಬೆಳೆಯುತ್ತದೆ. ಇದರಲ್ಲಿ ಕೆಲವರು

ಮನಸ್ಸಿನಲ್ಲಿ ತಳಮಳಿಸಿದರೂ ಸಮಾಜ ವ್ಯವಸ್ಥೆಯನ್ನು ಧಿಕ್ಕರಿಸುವ ಶಕ್ತಿಯಿಲ್ಲದೆ ಮೂಕ ಪಶುಗಳಂತೆ ಸಾವಿನ ಬಾಯಿಗೆ ಆಹುತಿಯಾದದ್ದು ಕಂಡುಬರುತ್ತದೆ.

ಧಾರ್ಮಿಕ ಪರಂಪರೆ ಹಾಗೂ ವಿಧಿ ನಿಷೇಧಗಳು ಆಯಾ ಕಾಲದ ಸಮಾಜ ಒಪ್ಪಿಕೊಂಡ ಮೌಲ್ಯಗಳಾಗಿ ಆಯಾ ಪೀಳಿಗೆಯ ದುರಂತಕ್ಕೆ ಕಾರಣವಾಗುವುದು ಸಹ ವಿಷಾದನೀಯವೆನಿಸುತ್ತದೆ.

ಧರ್ಮ, ಸಮಾಜ, ವಿಧಿಸಿದ್ದ ನಿಷೇಧ, ನಂಬುಗೆಗಳ ಕಾರ್ಯಾಚರಣೆಯಿಂದಾಗಿ ನೀರುಪಾಲಾದ, ಕೋಟೆಗೆ ಹಾರವಾದ, ಅನೇಕ ವ್ಯಥೆಗಳಿಗೆ ಸಂತಾಪ ನಿಟ್ಟುಸಿರುಗಳಿಗೆ ಈ ಮಾದರಿಯ ವಸ್ತು-ವಿಷಯಗಳಿಂದ ಕೆಲವು ಬುಲಾಯಿ ಹಾಡುಗಳು ಧ್ವನಿಯಾಗಿವೆ. ಅನಿವಾರ್ಯವಾದ ಪ್ರಾಣ ತ್ಯಾಗಗಳಿಂದ ಕಣ್ಣೀರು ಉಕ್ಕಿಸುವ ದುಃಖಾಂತ ಘಟನೆಗಳಿಂದ ಹೃದಯವನ್ನು ಕಲಕುವ, ಕರಗಿಸುವ ಸಾಮಾಜಿಕ ಬುಲಾಯಿ ಹಾಡುಗಳಾಗಿರುವುದು ವಿಶೇಷವೆನಿಸುತ್ತವೆ.

ಕಾಲಬದಲಾದಂತೆ ಅನ್ಯ ಸಮಾಜ, ಸಂಸ್ಕೃತಿ, ಭಾಷೆ, ಧರ್ಮ ಸಂದರ್ಭ ಮುಂತಾದವುಗಳು ಸಹ ಪ್ರೇರಣೆಯಾಗಿರುವುದು ಕಂಡುಬರುತ್ತದೆ.

ಧೋರಣೆ:

ಜನಪದ ಜೀವನ ಅನೇಕ ಸಂಘರ್ಷಗಳ ಮಧ್ಯದಲ್ಲಿಯೇ ರೂಪುಗೊಳ್ಳುತ್ತ ಬಂದಂತೆ ಕಂಡುಬರುತ್ತದೆ. ಹೋರಾಟವೇ ಅವರ ಬದುಕಾದದ್ದು ಐತಿಹಾಸಿಕ ಸತ್ಯ. ಕೊಚ್ಚುವ ಪ್ರವಾಹದೊಡನೆ ಹೋರಾಟ, ಕಿಚ್ಚೆಡುವ ಅರಣ್ಯಗಳೊಡನೆ ಹೋರಾಟ; ಕಚ್ಚುವ ಕ್ರೂರ ಪಶು ಪ್ರಾಣಿಗಳೊಡನೆ ಹೋರಾಟ ಮಾಡುತ್ತಲೇ ಬದುಕುಳಿದುದು ಸಾಮಾನ್ಯವಾಗಿ ಎಲ್ಲರಿಗೂ ತಿಳಿದ ವಿಷಯವಾಗಿದೆ. ರುದ್ರ ರೂಪದ ಸುತ್ತಮುತ್ತಣ ಪ್ರಕೃತಿಯನ್ನು ತನ್ನ ಬದುಕಿಗೆ ಒಗ್ಗಿಸಿಕೊಳ್ಳುತ್ತ ಜೀವಂತವಾಗಿರುವುದೇ ಒಂದು ಸಮಸ್ಯೆಯಾಗಿದ್ದ ಅಂದಿನ ಕಾಲದಲ್ಲಿ ಅವರು ಹೆಜ್ಜೆ ಹೆಜ್ಜೆಗೂ ಸಂಕಷ್ಟಗಳನ್ನು ಎದುರಿಸುತ್ತಲೇ ಬೆಳೆದು ಬಂದಿರಬಹುದು. ಜನಪದರ ಕುರಿತಾದ ಶ್ರೀ ಹಕಾರಿಯವರ ಅಭಿಪ್ರಾಯ ಗಮನಾರ್ಹವಾಗಿದೆ. ಅದೇನೆಂದರೆ, “ಜನಪದರು ಅನಿರೀಕ್ಷಿತವಾಗಿ ಎರಗಿದ ಹುಲಿಗೆ ಆಹಾರವಾಗಿಯೋ ಅಥವಾ ಗುಂಪುಗಟ್ಟಿ ಎದುರಿಸಿ ಕೊಂಡು, ಮೈಗೆ ಮೆತ್ತಿದ ನೆತ್ತರು ಬರೆಸಿಕೊಳ್ಳುತ್ತ ಮುನ್ನಡೆದವರು; ಸಿಡಿದ ಜ್ವಾಲಾಮುಖಿಗೆ ಆಹಾರವಾದವರು; ಬಾಯ್ದೆರದ ಭೂಕಂಪಕ್ಕೆ ತುತ್ತಾದವರು; ಉಳಿದ ಭೂಮಿಗೆ ಒಡೆಯರಾದವರು. ತಮ್ಮನ್ನು ಮೀರಿದ ಶಕ್ತಿಯೊಂದರ ಕಲ್ಪನೆಗೆ ಅಡಿಯಾಳಾಗುತ್ತ, ಆ ಅಮೂರ್ತ ಶಕ್ತಿಯನ್ನು ಮೂರ್ತಿಕರಿಸಿ, ಅದರ ಸಂತೃಪ್ತಿಗಾಗಿ ತಮ್ಮಲ್ಲಿಯೇ ಯಾರನ್ನೋ - ಶಿಶುವನ್ನೋ-ಪಶುವನ್ನೋ ಬಲಿಗೊಟ್ಟು ಅಸಹಾಯಕತೆಯ ವಿಷಾದವನ್ನೂ ಅರಿಯಲಾಗದ ದುಃಖವನ್ನೂ ಮಂಗಲಕರವೆಂದೇ ಭಾವಿಸಿ ಅದನ್ನೇ ಆರಾಧಿಸುತ್ತ, ಕುಣಿದವರು, ಹಾಡಿದವರು; ಅತ್ತು ಹಾಡಿದವರು”[೬] ಹೀಗೆ ತಲೆಯ ಮೇಲೆ ಸೂರೂ ಇಲ್ಲದಂಥ ಆದಿಮಾನವ ಜನಾಂಗದ

ಸಾಮುದಾಯಿಕ ಬದುಕಿನ ಪ್ರಾಥಮಿಕ ಹಂತದಲ್ಲಿ ಜನ ವಿವೇಚೆಗೆ ಎಟುಕದ ಅನೇಕ ರಹಸ್ಯಾತ್ಮಕ ವಸ್ತುಗಳು ಅವರನ್ನು ಕಾಡಿರಬೇಕು. ಹೀಗಾಗಿ ಅಂದಿನ ಜನಪದರ ಬದುಕಿನಲ್ಲಿ ಸುಖಕ್ಕಿಂತ ದುಃಖವೇ ಹೆಚ್ಚಾಗಿರುವುದು ಗಮನಿಯವಾಗಿದೆ.

ಒಂದು ಕಡೆಯಲ್ಲಿ ನೆಲೆನಿಂತ ಮೇಲೆ ಅವರ ಅಂಗಳದಲ್ಲಿ ರಂಗವಲ್ಲಿ ಅರಳಿ, ಕೊಟ್ಟಿಗೆಯಲ್ಲಿ ದನ-ಆಕಳು ಹಾಲು ಕರೆದಿರಬಹುದು. ಆಗ ಬಲಿಗೊಡುವ ಶಿಶುವೋ, ಪಶುವೋ ಆಕ್ರಂದನ ಗೈದಾಗ ಕರುಳು ಚುರ್ ಎಂದಿರಬಹುದು. ಮಗು ಕೇಕೆ ಹಾಕಿ ಕುಣಿದಾಗಿ ಹೃದಯ ಹಿಗ್ಗಿರಬಹುದು. ಹೀಗೆ ದುಃಖ ಸುಖಗಳ ಹೊಳಹು ಅವರಲ್ಲಿ ಮೂಡಿ ಜೀವನವನ್ನು ಅಭಿವ್ಯಕ್ತಿಗೆ ಅಣಿ ಮಾಡಿದ ಕಾಲವೆನ್ನಬಹುದು. ಈ ದೃಷ್ಟಿಯಿಂದ ನಮ್ಮ ಜನಪದರ ಜೀವನ ಧೋರಣೆಯಲ್ಲಿ ಅತಿಮಾನುಷ ಶಕ್ತಿಯ ಸಂತೃಪ್ತಿಗಾಗಿ ಕಾಲಾನಂತರ ಧರ್ಮ ದೇವತೆಗಳ ಆರಾಧನೆಗಾಗಿ, ಬಳಿಕ ತಮ್ಮ ವೃಂದದ ಯಜಮಾನನಿಗಾಗಿ, ತಮ್ಮ ಹಟ್ಟಿಯ ದನಕರುಗಳಿಗಾಗಿ, ಎಂಥ ಕಷ್ಟವನ್ನಾದರೂ ಪ್ರಶ್ನಿಸದೇ ಸಹಿಸುವ ಮನೋಭಾವ ಅಪ್ರಜ್ಞಾ ಪೂರ್ವಕವಾಗಿ ಬೆಳೆದ ಬಂದಿರಬಹುದು. ಏನೇ ದುಃಖ ಬಂದರೂ ಅದು ಕಡೆಗೆ ಸುಖಕ್ಕೆ ! ಏನೇ ದುರಂತಗಳು ಬಂದರೂ ಅದು ಸುಖಾಂತಕ್ಕೆ! ಹೀಗಾಗಿ ದುಃಖ ಏನೇ ಇರಲಿ. ಅದು ಒಪ್ಪಿಕೊಳ್ಳಬೇಕಾದದ್ದು, ಸಾವಿನಂತೆ ಅನಿವಾರ್ಯ ಎನ್ನುವ ರೀತಿಯಲ್ಲಿ ಅವರು ಬೆಳೆದದ್ದು, ಸಾವನ್ನಪ್ಪಿದ್ದು ಗಮನಾರ್ಹವಾಗಿದೆ. ಜೀವನವನ್ನು ಕುರಿತಾದ ಈ ಬಗೆಯ ಮೂಲಭೂತವಾದ ದೃಷ್ಟಿಯೇ ಜನಪದರ ಸುಖಾಂತ ಪರಿಕಲ್ಪನೆಯ ಸೃಷ್ಟಿಗೆ ಕಾರಣವಾಗಿರಬಹುದು.

ಉದಾ: ಸೀತೆಯನ್ನು ಕಾಡಿಗಟ್ಟಿದರೂ ಅದು ರಾಮರಾಜ್ಯಕ್ಕಾಗಿ, ಕಾಡಿನಲ್ಲಿ ಮಕ್ಕಳನ್ನು ಹೆತ್ತು ಬೆಳಸಿದರೂ ವಂಶದ ಅಭಿವೃದ್ಧಿಗಾಗಿ; ಆಕೆ ಭೂಮಿ ಸೇರಿದರೂ ಮತ್ತೆ ಮಂಗಳಕ್ಕಾಗಿ - ಎಲ್ಲವೂ ಸುಖಾಂತಕ್ಕೆ ಎನ್ನುವ ಧೋರಣೆಯಿಂದಲೇ ನಂಬುವುದು ಇಲ್ಲಿಯ ಹಾಡುಗಳ ಆಶಯವಾಗಿದೆ.

ಲೋಕದಲ್ಲಿ ಎಲ್ಲ ಕಡೆಗೂ ಸುಖವಿದೆ. ಅದು ಅವರವರು ಮಾಡಿದ ಪುಣ್ಯದ ಫಲ. ಶಿವನ ದಯೆದಿಂದ ಸುಖ-ದುಃಖಗಳ ಜೊತೆಗೆ ಈ ಬಗೆಯ ಒಪ್ಪಂದ ಮಾಡಿಕೊಂಡ ಜನಪದ ದೃಷ್ಟಿ ಅವರ ಕಾವ್ಯ ದೃಷ್ಟಿಯೂ ಆಗಿರುವಂತಿದೆ. ನಮ್ಮ ಕಾವ್ಯದಲ್ಲಿ ವಿಧಿಯ ಜೊತೆ ಹೋರಾಟ ಮಾಡುವುದಿಲ್ಲ. ಅಕಸ್ಮಾತ್ ಎಲ್ಲಾದರೂ ಅಂಥ ದುರಂತ ಸಂದರ್ಭ ಹುಟ್ಟಿಕೊಂಡರೂ ಆರಂಭದಲ್ಲಿಯೇ ಅದು ಹಣೆಯಬರಹಕ್ಕೆ ಅಂಟಿಕೊಳ್ಳುವುದರಿಂದ ಸಂಘರ್ಷದ ತೀವ್ರತೆಯನ್ನು ಕಳೆದುಕೊಂಡು ಬಿಡುವಂತೆ ಕಂಡುಬರುತ್ತದೆ. ಆದರೆ ಅಂತ್ಯದಲ್ಲಿ ಕೆಲಮಟ್ಟದ ಮರುಕವನ್ನು ಗಳಿಸಬಹುದು. ಕಣ್ಣೀರು ಸುರಿಸುವಂತೆ ಪರಿಣಾಮ ಬೀರಬಹುದು. ಆದರೆ ಆ ಪರಿಣಾಮ ಸ್ವೀಕೃತ ಶ್ರದ್ಧೆ ಮತ್ತು ಪರಂಪರೆಗಳ ಹಿನ್ನೆಲೆಯಲ್ಲಿಯೇ ಮಾಡುವುದು ಕಂಡುಬರುತ್ತದೆ.

ಬುಲಾಯಿ ಹಾಡುಗಳಲ್ಲಿಯೂ ಈ ಎಲ್ಲಾ ಅಂಶಗಳು ಕಂಡು ಬರುತ್ತವೆ. ಹೀಗಾಗಿ ಅವುಗಳಲ್ಲಿ ಸಹ ಅತಿಮಾನುಷ ಶಕ್ತಿಯ ಸಂತೃಪ್ತಿಗಾಗಿ, ಧರ್ಮದೇವತೆಗಳ ಆರಾಧನೆಗಾಗಿ,

ತಮ್ಮ ಸಮಾಜದ ಯಜಮಾನನಿಗಾಗಿ ಅಷ್ಟೇ ಅಲ್ಲ ಜೀವನ ಮೌಲ್ಯಗಳಿಗಾಗಿ ಎಂತಹ ಕಷ್ಟಬಂದರೂ ಸಹಿಸುವ, ಕೊನೆಗೆ ಪ್ರಾಣ ತ್ಯಾಗಕ್ಕೂ ಸಿದ್ಧರಾಗುವ ಧೋರಣೆಗಳು ಕಂಡುಬರುತ್ತವೆ. ತಮ್ಮ ಪುಣ್ಯಫಲ, ವಿಧಿ, ಹಣೆ ಬರಹ ಮುಂತಾದವುಗಳಿಗೆ ಅಂಟಿಸಿಬಿಡುವುದೂ ಕಂಡುಬರುತ್ತದೆ.

ಉದಾ: ಕಾಳಿಂಗರಾಯನ ಹಾಡಿನಲ್ಲಿ ಸತ್ತ ಹೆಣದ ಜೊತೆ ಮದುವೆ ಮಾಡಿಕೊಂಡ ಚೆನ್ನಮ್ಮ ತನ್ನನ್ನು ಆ ವೇಳೆಯಲ್ಲಿ ನಡೆಸಿಕೊಂಡ ರೀತಿಯ ಬಗ್ಗೆ ದುಃಖಿಸುತ್ತಾಳೆ. ಮಣ್ಣಿನ ಬಸವಣ್ಣನ ಮೂರ್ತಿಗೆ ತನಗಾದ ನೋವನ್ನು ವ್ಯಕ್ತಪಡಿಸುತ್ತಾಳೆ. ಆದರೆ ಕೊನೆಯಲ್ಲಿ ಅದಕ್ಕಾಗಿ ಯಾರಿಗೂ ದೋಷಿಸುವುದಿಲ್ಲ ಅಥವಾ ಪ್ರತಿಭಟಿಸುವುದಿಲ್ಲ.

ಇಟೆಲ್ಲಾ ಹೇಳುತ್ತಾ ದುಃಖದ ಮಾಡುತ್ತಾ
ನನದೆಂಥ ಹಣೆಬಾರ ಕೋಲೆ"[೭]

ಎಂದು ಎಲ್ಲವನ್ನು ಹಣೆಬರಹಕ್ಕೆ ಒಪ್ಪಿಸಿ, ಸ್ವೀಕರಿಸುವುದು ಗಮನಾರ್ಹ. ಎಂತಹ ಕಷ್ಟವನ್ನು ಅನ್ಯಾಯವನ್ನು ಸಹಿಸುವ ಈ ನುಡಿಯಲ್ಲಿ ಕಾವ್ಯ ಧೋರಣೆಯು ಸ್ಪಷ್ಟವಾಗಿ ಗೋಚರಿಸುವುದು.

ಬುಲಾಯಿ ಹಾಡುಗಳ ರಚನೆ ಹಾಗೂ ಅವುಗಳ ಅಶಯ ಮತ್ತು ಅಭಿವ್ಯಕ್ತಿ:

ಹೆಂಗಸರ ಹಾಡುಗಳ ಗುಂಪಿಗೆ ಸೇರುವ 'ಬುಲಾಯಿ ಹಾಡುಗಳಲ್ಲಿ' ಸಾಕಷ್ಟು ವಿಷಯ ವೈವಿಧ್ಯವಿದ್ದರೂ ಬಹುಪಾಲು 'ಬುಲಾಯಿ ಹಾಡುಗಳು' ಹೆಣ್ಣುಮಕ್ಕಳ ರಚನೆಗಳಾಗಿರುವಂತೆ ಕಂಡುಬರುತ್ತದೆ. ಹೆಣ್ಣು ಕುಟುಂಬದ ಜೀವನಾಡಿ, ಕೇಂದ್ರಬಿಂದು, ಕುಟುಂಬದ ಆಗು-ಹೋಗುಗಳು, ಉನ್ನತ-ಅವನತಿಗಳು, ಹೆಣ್ಣಿನ ಮೇಲೆಯೇ ಅವಲಂಬಿತವಾಗಿರುವುದು ಸಹಜ. **'ಗೃಹಣಿ ಗೃಹಂ ಉಚ್ಚತೇ'** ಎನ್ನುವ ಮಾತು ಕುಟುಂಬದಲ್ಲಿ ಹೆಣ್ಣಿನ ಸ್ಥಾನಮಾನವನ್ನು ಎತ್ತಿತೋರಿಸುತ್ತದೆ. ಇಂತಹ ಹೆಣ್ಣಿನ ಅನಂತ ದುಃಖಗಳನ್ನು, ಸಂಕಷ್ಟಗಳನ್ನು ತ್ಯಾಗ - ಬಲಿದಾನಗಳನ್ನು ಬುಲಾಯಿ ಹಾಡುಗಳು ಸಮರ್ಥವಾಗಿ ಚಿತ್ರಿಸುತ್ತಿರುವುದು ಗಮನೀಯ. ತಾವು ಕೇಳುತ್ತ ಬಂದ ಪುರಾಣ, ಪವಾಡ, ತಮಗೆ ತಿಳಿದ ಚರಿತ್ರೆ, ಪರಾಕ್ರಮ, ಶೌರ್ಯ, ತಾವು ನೋಡಿದ ಧಾರ್ಮಿಕ, ಸಾಮಾಜಿಕ ತ್ಯಾಗ-ಬಲಿದಾನಗಳು, ಕೌಟುಂಬಿಕ ಸುಖ - ದುಃಖದ ಸಂದರ್ಭಗಳಿಗೆ ಸಹಜವಾಗಿ ಸ್ಪಂದಿಸಿ, ಹಾಡುತ್ತಾ, ಭುಲಾಯಿ ಹಾಕುವುದು ನಿಜಕ್ಕೂ ವಿಶಿಷ್ಟವಾದುದೇ. ಅರ್ಧ ಗಂಟೆಯಿಂದ ರಾತ್ರಿಯೆಲ್ಲಾ ಹಾಡುವಂತಹ ಹಾಡುಗಳು ಕಂಡುಬರುತ್ತವೆ. ಹೀಗಾಗಿ ಜೀವನಾನುಭವ, ಜೀವನದ ನಂಬಿಕೆಗಳೇ ಬುಲಾಯಿ ಹಾಡುಗಳಿಗೆ ಪ್ರೇರಣೆಯಾದಂತೆ ಕಂಡುಬರುತ್ತದೆ. ಒಂದರ್ಥದಲ್ಲಿ ಬದುಕೇ ಬುಲಾಯಿ ಹಾಡುಗಳಿಗೆ ಮೂಲ ಪ್ರೇರಣೆಯಾಗಿರಬ -ಹುದು. ಬುಲಾಯಿ ಹಾಡುಗಳನ್ನು ಕಟ್ಟಿದ ಬಗೆಯನ್ನು ಬುಲಾಯಿ ಹಾಡಿನಿಂದಲೇ ತಿಳಿಯಬಹುದು.

ತನಗೆ ಪ್ರೇರಣೆಯಾದಾಕ್ಷಣದಲ್ಲಿಯೇ ತನ್ನ ಎಲ್ಲಾ ಕೆಲಸವನ್ನು ಬಿಟ್ಟು ಯಾವ ರೀತಿಯಲ್ಲಿ 'ಹಾಡನ್ನು' ಕಟ್ಟಿದಳು ಎಂಬುದನ್ನು 'ಎತ್ತಿನ ಹಾಡು' ಎಂಬ 'ಬುಲಾಯಿ ಪದ'ದಲ್ಲಿ ಕಾಣಬಹುದಾಗಿದೆ.

ಮಜ್ಜಿಗಿ ಮಾಡದು ಬಿಟ್ಟು ಮನಿಯ ಸಾರಸದು ಬಿಟ್ಟು
ಹಾಡ ಕಟ್ಟ್ಯಾಳೆ ಹೆಣ್ಣುಮಗಳು ಕೋಲೆಣ್ಣ ಕೋಲೆ
ಹಾಲ ತೆಗಿಯದು ಬಿಟ್ಟು ಬಾಲಾಗೆ ಉಣಸದು ಬಿಟ್ಟು
ಹಾಡ ಕಟ್ಟ್ಯಾಳೆ ಹೆಣ್ಣುಮಗಳು ಕೋಲೆಣ್ಣ ಕೋಲೆ
ತೂಗದು ತೊಟ್ಟಿಲು ಬಿಟ್ಟು ಅಳುವ ಕಂದನ ಬಿಟ್ಟು
ಹಾಡ ಕಟ್ಟ್ಯಾಳೆ ಹೆಣ್ಣುಮಗಳು ಕೋಲೆಣ್ಣ ಕೋಲೆ
ಒಗಿವ ಅರಿವಿಯ ಬಿಟ್ಟು ತೊಳೆಯೋ ಗಡಗಿಯ ಬಿಟ್ಟು
ಹಾಡ ಕಟ್ಟ್ಯಾಳೆ ಹೆಣ್ಣುಮಗಳು ಕೋಲೆಣ್ಣ ಕೋಲೆ
ಉಡಗಾ ರಜಗೀಲ ಬಿಟ್ಟು ತೆಗೆವ ರಜವನು ಬಿಟ್ಟು
ಹಾಡ ಕಟ್ಟ್ಯಾಳೆ ಹೆಣ್ಣುಮಗಳು ಕೋಲೆಣ್ಣ ಕೋಲೆ"[೮]

ಹೀಗೆ ತನ್ನ ಕೆಲಸ ಕಾರ್ಯಗಳನ್ನು ಬಿಟ್ಟು ಮೊದಲು ತನಗೆ ಹೊಳೆದ ವಿಷಯ ಕುರುತಾಗಿ ಹಾಡು ಕಟ್ಟಿದ್ದು **'ಹೆಣ್ಣು'** ಎಂಬ ಮಾತಿಗೆ ಈ ಹಾಡು ನಿದರ್ಶನವೆನಿಸುತ್ತದೆ. ಅಂದರೆ ಬುಲಾಯಿ ಹಾಡುಗಳು ಹೆಚ್ಚಾಗಿ ಹೆಣ್ಣು ಮಕ್ಕಳಿಂದಲೇ ರಚಿತವಾದವುಗಳು, ಅವು ಅವರ ಜೀವನ ಅಥವಾ ಬದುಕಿನ ಪ್ರೇರಣೆಯಿಂದಲೇ ಕಟ್ಟಿರಬಹುದೆಂದು ಅರಿಯಬಹುದಾಗಿದೆ.

ಸಮಾಜ ಚಲನ ಶೀಲವಾದದ್ದು, ಅದರಲ್ಲಿ ನಿರಂತರವಾಗಿ ಘಟನೆಗಳು ಸಂಭವಿಸುತ್ತಲೇ ಇರುತ್ತವೆ. ಈ ಘಟನೆಗಳು ಸಾಮಾಜಿಕ ಏರುಪೇರುಗಳಿಗೆ, ಮೌಲ್ಯಗಳ ಘರ್ಷಣೆಗಳಿಗೆ ಕಾರಣವಾಗುತ್ತವೆ. ಹೆಣ್ಣು ಮಕ್ಕಳು ತಮ್ಮ ಸುತ್ತಲೂ ಸಂಭವಿಸುವ ಘಟನೆಗಳಿಗೆ ಮೈಮನ ತೆರೆದುಕೊಂಡಿದ್ದು, ತಮ್ಮ ಮನಸ್ಸಿನ ಮೇಲೆ, ಬದುಕಿನ ಘಟನೆಗಳ ಮೇಲೆ ಪ್ರಭಾವ ಬೀರುವ ವಿಷಯಗಳಿಗೆ ಹಾಡುಗಳ ಮೂಲಕ ಸ್ಪಂದಿಸುತ್ತಾರೆ. ಇಂತಹ ಸಮಾಜದ ಹತ್ತು ಹಲವು ಘಟನೆಗಳು, ದುರಂತಗಳು ಬುಲಾಯಿ ಹಾಡುಗಳಿಗೆ ಪ್ರೇರಣೆಯಾದಂತೆ ಕಂಡುಬರುತ್ತದೆ. ಅಂತೆಯೇ ಬಲಿದಾನ, ಚಾರಿತ್ರ್ಯ, ಸಂಬಂಧ, ತ್ಯಾಗ, ಪುರಾಣ, ಪವಾಡ, ಚರಿತ್ರೆ, ಶೌರ್ಯ, ಪರಾಕ್ರಮ, ಕೌಟುಂಬಿಕ, ಸುಖ-ದುಃಖ, ಪ್ರತಿಷ್ಠೆ 'ಅಧ್ಯಾತ್ಮ' ಮುಂತಾದ ವಿಷಯಗಳ ಪ್ರೇರಣೆಯಿಂದ ರಚಿತವಾದ ಬುಲಾಯಿ ಹಾಡುಗಳನ್ನು ನೋಡಬಹುದಾಗಿದೆ. ಒಂದೊಂದು ಹಾಡುಗಳಲ್ಲಿ ಒಂದು ವಿಷಯ, ಸಂದರ್ಭಗಳಿದ್ದು, ಅವುಗಳನ್ನು ಹಾಡುಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡಬಹುದಾಗಿದೆ.

ಬಲಿದಾನ:

ಸಂಪ್ರದಾಯ, ಪರಂಪರೆ, ಆಚರಣೆಗಳ ಹೆಸರಿನಲ್ಲಿ ಹೆಣ್ಣನ್ನು ಬಲಿಕೊಡುವುದು

ನಮ್ಮ ಸಮಾಜದಲ್ಲಿ ಬೆಳೆದು ಬಂದ ಅನಿಷ್ಠ ಪದ್ದತಿಗಳಲ್ಲೊಂದು, ಮಾವ ಕಟ್ಟಿಸುವ ಕೆರೆ ಅಥವಾ ಕೋಟೆಗೆ 'ಸೊಸೆ' ಯನ್ನು ಬಲಿ ಕೇಳುವುದು ಚಾರಿತ್ರಿಕ ಸತ್ಯ. ಇಂತಹ 'ಬಲಿ' ಗೆ ಸ್ವಯಂ ಪ್ರೇರಣೆಯಿಂದ ಬಲಿಯಾಗುವುದು ಮತ್ತು ಮನಸ್ಸಿಲ್ಲದೆ ಒತ್ತಾಯ ಪೂರ್ವಕವಾಗಿ ಬಲಿಯಾಗುವುದು ಕುರಿತಾದ ಬುಲಾಯಿ ಹಾಡುಗಳು ಕಂಡುಬರುತ್ತವೆ. ತನ್ನ ಸುತ್ತ ನಡೆದ, ಕೇಳಿದ 'ಬಲಿ' ಪದ್ಧತಿಯ ಪ್ರೇರಣೆಯಿಂದ ಕಟ್ಟಿದ ಹಾಡುಗಳು ಈ ರೀತಿಯಾಗಿವೆ.

ಬೀದರ ಕ್ವಾಟಿಗೆ ಮಲಶೆಟ್ಟಿ ಗೌಡರು ತಮ್ಮ ಗರ್ಭಿಣಿ ಸೊಸೆ ಸಂಗಮ್ಮಳಿಗೆ ಬಲಿ ಕೊಟ್ಟ ವಿಷಯವಾಗಿ ವಿವಿಧ ರೀತಿಯ ಬುಲಾಯಿ ಹಾಡುಗಳು ಕಟ್ಟಿದಂತಿವೆ. ವಿಷಯ ಮತ್ತು ಆಶಯ ಒಂದೇ ಆಗಿದ್ದರೂ ತಮಗೆ ಅನುಕೂಲವಾದ ರೀತಿಯಲ್ಲಿ ಹಾಡುಗಳನ್ನು ಕಟ್ಟಿ ಹಾಡಿರುವುದು ವಿಶಿಷ್ಟವೇನಿಸುತ್ತದೆ.

1) ಹಗಲ ಹನ್ನೆರಡು ತಾಸ ಕಟ್ಟುತ್ತಾರೆ
ಬೀದರ ಕ್ವಾಟಿ ಕೋಲು ಕೋಲೆ
ಇರುಳ ಹನ್ನೆರಡು ತಾಸ ಬೀಳುತ್ತಾದೆ
ಬೀದರ ಕ್ವಾಟಿ ಕೋಲು ಕೋಲೆ
ಕ್ವಾಟ್ಯಾರೆ ಬೀಳುತ್ತಾದೆ ಕೇಳಿಸಿ ನೋಡಿದಾರೆ
ದೇವರಿಲ್ಲ ದಿಂಡರಿಲ್ಲ ಕೋಲು ಕೋಲೆ
ದೇವರಿಲ್ಲ ದಿಂಡರಿಲ್ಲ ಗೌಡರ
ಸೊಸಿಗೆ ಬೇಡುತ್ತಿದೆ ಕೋಲು ಕೋಲೆ ....[೯]

2) ಬೀದರ ಕ್ವಾಟಿ ಊರಾಗ ಕಿಲ್ಲ್ಯಾನಾದರ ಕಟ್ಟುತಾರಂತ
ಒಂದೊಂದು ಕಲ್ಲೀಗಿ ಮುಗಿಯಾಣಿರ್‍ರಿ ಕೋಲ
ಒಂದೊಂದು ಕಲ್ಲೀಗಿ ಮುಗಿಯಾಣಿರ್‍ರಿ ಬೀದರ ಕ್ವಾಟಿ
ಎರಡೆಂಬ ಕಲ್ಲೀಗಿ ಮುಗಿಯಾಣಿರ್‍ರಿ ಕೋಲ ......
ಹಾರೂನ ಕರಸ್ಯಾರ ಹೊತ್ತೀಗಿಯ ತೆಗಸ್ಯಾರ
ಉನ್ನೋಟದ್ದಾರು ಹೊತ್ತಿಗ್ಯಾರ ಕೋಲ
ಬೀದರ ಕ್ವಾಟಿ ಊರಾಗ ಮಲಸೆಟ್ಟಿ ಗೌಡಗ ಅವರಿಗೈದ
ಮಂದಿ ಗಣಸ್ಮಕ್ಕಳು ಕೋಲ
ಅವರೀಗೈದು ಮಂದಿ ಸೊಸಿದೇರಾ ಕೋಲ
ಅವರೀಗೆ ಐದ ಮಂದಿ ಸೊಸಿದೇರು ಇದ್ದಾರ
ಸಣ್ಣಕ್ಕಿ ಸಂಗಮ್ಮಗ ಬೇಡ್ಯಾದಂತ ಕೋಲ .... [೧೦]

3) ಕೊಟ್ಟಯ ಕೀಲದ ಮೇಲೆ ಮಲರಡ್ಡಿ ಸಾವಕಾರೆ ಕೋಲೆಣ್ಣ ಕೋಲೆ
ಮಲರಡ್ಡಿ ಸಾವಕಾರಿಗೆ ಸರಕಾರ ಕರುಸಾರೆ ಕೋಲೆಣ್ಣ ಕೋಲೆ

ಯಾಯಕ್ಕೆ ಸರಕಾರ ನಮ್ಮ ಯಾಕೆ ಕರುಸಿರಿ ಕೋಲೆಣ್ಣ ಕೋಲೆ
ಕೊಟ್ಟಯ ಕೀಲ ಬಂದು ಮಲ್ಲರಡ್ಡಿ ಮೇಲೆ ಬಿದ್ದವ ಕೋಲೆಣ್ಣ ಕೋಲೆ
ಹೊಲಮನಿ ಮಾರಿ ಕುಡುತ್ತಿನಿ ಮುಗಸೇರಿ ಸಕಕಾರ ಕೋಲೆಣ್ಣ ಕೋಲೆ ...
ಐದು ಮಂದಿ ಸೊಸಿದಾಗ ಸಂಗಮ್ಮ ಬೇಡಿದ ಆ ಕೀಲ್ಲ ಕೋಲೆಣ್ಣ ಕೋಲೆ
ಸಣ್ಣಕ್ಕಿ ಸಂಗಮ್ಮ ಬೇಡದಾ ಆ ಕೀಲ್ಲೆ ಕೋಲೆಣ್ಣ ಕೋಲೆ ......[೧೧]

ಹೀಗೆ ಬೀದರ ಕೋಟೆಗೆ 'ಬಲಿ' ಕೊಟ್ಟ ವಿಷಯವನ್ನೇ ಹೆಣ್ಣು ಮಕ್ಕಳು ತಮತಮಗೆ ತಿಳಿದಂತೆ ಹಾಡಿದ್ದರೂ, ಅವರೆಲ್ಲರ ವಿಷಯ ಮತ್ತು ಆಶಯಗಳು ಮಾತ್ರ ಒಂದೇ ಇರುವುದು ಗಮನಾರ್ಹ. 'ಬಲಿ' ಪ್ರೇರಣೆಯಿಂದ ಹುಟ್ಟಿದ ಅಥವಾ ಕಟ್ಟಿದ ಈ ಹಾಡುಗಳ ನುಡಿ, ಧಾಟಿಗಳು ಬೇರೆಯಾಗಿದ್ದು, ಅವರವರ ಗ್ರಹಿಕೆ ಹಾಗೂ ಪದಜೋಡಣೆಗಳಿಗೆ ನಿದರ್ಶನವಾಗಿವೆ. ಅಂತೆಯೇ ಬುಲಾಯಿ ಹಾಡುಗಳು ಒಂದೇ ವಿಷಯ ಕುರಿತಾಗಿದ್ದರೂ ಹಲವು ಬಗೆಯಲ್ಲಿ ಹಾಡುವುದು ಗಮನಾರ್ಹ. ಹೀಗಾಗಿ ಒಂದು ಊರಲ್ಲಿ ಅಷ್ಟೇಕೆ ಒಂದು ಕಡೆಯಲ್ಲಿ ಹಾಡಿದ ಹಾಡಿಗೂ ಮತ್ತೊಂದು ಕಡೆ ಹಾಡುವ ಹಾಡಿಗೂ ವ್ಯತ್ಯಾಸವಿರುವುದು ಕಂಡುಬರುತ್ತದೆ. ಕಾರಣ ಒಂದೇ ವಿಷಯ, ಘಟನೆಗಳ ಕುರಿತಾದ ವಿಭಿನ್ನ ಹಾಡುಗಳು ಬುಲಾಯಿ ಹಾಡುಗಳಲ್ಲಿ ದೊರೆತಿದ್ದು ವಿಶಿಷ್ಟವಾಗಿವೆ. ಇದಕ್ಕೆ ಬೀದರ ಕೋಟೆ ಕುರಿತಾದ 'ಸಂಗಮ್ಮಳ ಹಾಡೇ' ಉತ್ತಮ ನಿದರ್ಶನವಾಗಿದೆ. ಅದೇ ರೀತಿ ಹರಿಶ್ಚಂದ್ರ, ಮಲ್ಲಮ್ಮ, ಚೆಂಗಳೆವ್ವ, ಪಾಂಡವರು, ರಾಮಾಯಣ ಮುಂತಾದ ಹಾಡುಗಳೂ ಪಾಠಾಂತರದಿಂದೋ ಅಥವಾ ಅವರವರ ಅನುಕೂಲದ ಧಾಟಿಗಳಲ್ಲೋ ಭಿನ್ನವಾಗಿರುವುದು ಕಂಡುಬರುತ್ತದೆ.

ಕೋಟೆಗಾಗಿ ಬಲಿಯಾದ 'ಸಂಗಮ್ಮನ ಹಾಡಿನಂತೆ ಊರ ಕೆರೆಯ ನೀರಿಗಾಗಿ 'ಬಲಿ'ಯಾಗುವ 'ಪತಿವರತಿಯ ಹಾಡು' ಸಹ ವಿಶಿಷ್ಟವೆನಿಸುತ್ತದೆ.

"ಕೆರೆಕಟ್ಟಾ ಕೆರಿಕಟ್ಟಾ ಕೆದರಿ ಅಣ್ಣಗಳಿರಾ
ಕೆರಿದಾಗ ಚಾರಿ ಫಕ್ಕಿ ನೀರನಿಲ್ಲ ಕೋಲೆಣ್ಣ ಕೋಲೆ
ಕೆರಿದಾಗ ಚಾರಿ ಫಕ್ಕಿ ನೀರನಿಲ್ಲದಿದ್ದರ
ಕೇಳಸಿ ನೋಡಲ್ಲಿ ನಡದಾರ ಕೋಲೆಣ್ಣ ಕೋಲೆ
ಕೇಳಸಿ ನೋಡಿದಾರೆ ದೇವರಿಲ್ಲ ದಿಡ್ಡರಿಲ್ಲ
ಪತಿವರತೆಂಬಾಕೀನ ಬೇಡುತದ ಕೋಲೆಣ್ಣ ಕೋಲೆ ....[೧೨]

ಹೀಗೆ 'ಬಲಿ' ಸಂದರ್ಭವೇ ಪ್ರೇರಣೆಯಾಗಿ ಬುಲಾಯಿ ಹಾಡು ಕಟ್ಟಿ ಹಾಡಲು ಪ್ರಾರಂಭಿಸಿದಂತಿದೆ. ಬೀದರ ಕೋಟೆಗೆ ಬಲಿಯಾಗುವ ಸಂಗಮ್ಮ ಸ್ವ-ಇಚ್ಛೆಯಿಂದ ತಯ್ಯಾರಾದಂತೆ ಹಾಡಲ್ಪಟ್ಟಿದೆ.

"ಐದು ತಿಂಗಳ ಗರ್ಭಿಣಿ ನೋಡಿ ಬೇಡದೆ ಆ ಕೀಲ
ಸಂಗಮ್ಮ ಕೋಲೆಣ್ಣ ಕೋಲೆ
ಯಾಕ ಆಗಲಿಂದ್ರಿ ಮಾಮಜಿ ಕೋಲೆಣ್ಣ ಕೋಲೆ ....[೧೩]

ಎಂಬಲ್ಲಿ ಸಂಗಮ್ಮ ಸ್ವ-ಇಚ್ಛೆಯಿಂದ ತನ್ನ ಮಾವನ ಕಳವಳವನ್ನು ದೂರಮಾಡಿ, ತನ್ನ ಒಪ್ಪಿಗೆಯನ್ನು ಸೂಚಿಸುವುದು ಕಂಡುಬರುತ್ತದೆ. ಇದು 'ಕೆರೆಗೆ ಹಾರ' ಜನಪದ ಗೀತೆಯನ್ನು ನೆನಪಿಗೆ ತರುವಂತಹ ಹಾಡು ಎನಿಸುತ್ತದೆ. 'ಕೆರೆಗೆ ಹಾರ' ದಲ್ಲಿ ಭಾಗೀರತಿಯದ್ದೂ ಆತ್ಮಬಲಿದಾನದಂತೆ ಕಂಡುಬರುತ್ತದೆ. ಅಂದರೆ ಮನೆಯ ಮರ್ಯಾದೆಗಾಗಿ ಹಾಗೂ ಊರಿನ ಜನರ ಕಲ್ಯಾಣಕ್ಕೆ ಆತ್ಮ ಅರ್ಪಣೆಮಾಡಿ ಕೊಂಡಂತಹ ಘಟನೆಗಳನ್ನು ಚರಿತ್ರೆಯಲ್ಲಿ ಕಾಣಬಹುದು.

ಆದರೆ 'ಪತಿವರತಿ ಹಾಡಿ'ನಲ್ಲಿ ಆತ್ಮಾರ್ಪಣೆಗಿಂತ ಒತ್ತಾಯದ ಬಲಿವೆಂಬಂತೆ ಕಂಡುಬರುತ್ತದೆ. ಈ ಹಾಡಿನಲ್ಲಿ ಕೆರೆಗೆ 'ಪತಿವರತಿ' ಬೇಕು ಎಂದು ಆನಿ ಮ್ಯಾಲೆ ಹೊನ್ನು ಹೇರಿಕೊಂಡು ಸಾರುತ್ತಾ ಬರುವಾಗ ಕಟ್ಟೆಯ ಮೇಲೆ ಆಡುವ ಚೆನ್ನಮ್ಮ ಹೀಗೆ ಹೇಳುತ್ತಾಳೆ.

ಕಟ್ಟೆಯ ಮ್ಯಾಲ ಕುಂಟಾಡಾ ಚೆನ್ನಮ್ಮ
ಮನಿದಾಗ ನಮ್ಮವ್ವ ಪತಿವರತಿ ಕೋಲೆಣ್ಣ ಕೋಲೆ

ಎಂದು ಹೇಳಿ ಅವರನ್ನು ಕರೆದಾಗ ಅವಳ ತಾಯಿಗೆ ತುಂಬಾ ಸಿಟ್ಟು ಬಂದಂತೆ ಕಂಡುಬರುತ್ತದೆ. ಅವಳಿಗೆ ತಾನು ಹೋಗಿ 'ಬಲಿ'ಯಾಗುವ ಇಷ್ಟವೂ ಕಾಣದು. ಅಂತೆಯೇ ಅವಳು ಹೇಳುವುದು ಅವಳ ನಕರಾತ್ಮಕ ಧೋರಣೆ ಹಾಗೂ ರೋಷದ ಭಾವಗಳನ್ನು ಇಲ್ಲಿ ಕಾಣಬಹುದು.

ಹೊಟ್ಟೀಲ್ಹುಟ್ಟಿದೇ ವೈರಿ ಬೆನ್ನೀಲಿ ಬಿದ್ದಿದೆ ವೈರಿ
ನನಗ ವೈರಿಯಾದ ಮಗಳು ಚೆನ್ನಮ್ಮ ಕೋಲೆಣ್ಣ ಕೋಲೆ ....
ದೇವರ ಮನಿದಾಗ ಮಾವಗ ಉಳ್ಳಕ ನೀಡಿ
ತೆಲಿಯ ಮ್ಯಾಲಿನ ಸೆರಗು ಮರತಿದೆ ನಾನೇ ಕೋಲೆಣ್ಣ ಕೋಲೆ
ತೆಲಿಯ ಮ್ಯಾಲಿನ ಸೆರಗ ಮರತೀದ ಗಂಗಮ್ಮತಾಯಿ
ಇದು ಒಂದೇ ಮಾತು ತಪ್ಪು ಕ್ಷಮಾ ಮಾಡೆ ಕೋಲೆಣ್ಣ ಕೋಲೆ
ಅಡಗೀಯ ಮನಿದಾಗ ಭಾವಗುಳ್ಳಕ ನೀಡಿ
ಸಾಕಾ ಬೇಕೆಂಬುದು ಮರತೀದ ಕೋಲೆಣ್ಣ ಕೋಲೆ
ಸಾಕಾನೇ ಬೇಕೆಂಬುದು ಮರತೀದ ಗಂಗಮ್ಮ ತಾಯಿ
ಇದು ಒಂದೇ ಮಾತ ತಪ್ಪುಕ್ಷಮಾ ಮಾಡೆ ಕೋಲೆಣ್ಣ ಕೋಲೆ ......[೧೪]

ಎಂಬಲ್ಲಿ ಅವಳು ಮನಸ್ಸಿಲ್ಲದೆ ಮಗಳ ಮಾತಿನಿಂದ ಬಲವಂತಕ್ಕೆ ಕೆರೆಗೆ ಹೋಗುವ, ಹೋಗುವಾಗ ಮಗಳನ್ನು ಬೈಯುವ, ಕೆರೆಗೆ ಹೋದಾದ ಮೇಲೆ ತಾನು ಒಂದೊಂದೆ ತಪ್ಪು ಮಾಡಿದ ಪ್ರಸಂಗಗಳನ್ನು ಗಂಗೆಯ ಮುಂದೆ ಹೇಳಿಕೊಳ್ಳುವ ರೀತಿಯು ಅವಳು ಬಲವಂತದಿಂದ 'ಬಲಿ' ಯಾದ ಬಗೆಯನ್ನು ತಿಳಿಸುತ್ತದೆ.

ಒಟ್ಟಾರೆ ಸಮಾಜದಲ್ಲಿಯ 'ಬಲಿ' ಸಂದರ್ಭವು ಹಲವಾರು ಬುಲಾಯಿ ಹಾಡುಗಳಿಗೆ ಪ್ರೇರಣೆಯಾದಂತೆ ಕಂಡುಬರುತ್ತದೆ. ಜೊತೆಗೆ ಸಮಾಜದ ಹಿತಕ್ಕಾಗಿ, ಮನೆತನದ ಗೌರವಕ್ಕಾಗಿ 'ಬಲಿದಾನ' ಅನಿವಾರ್ಯ ಎಂಬ ಧೋರಣೆಯು ಹಾಡುಗಳಲ್ಲಿ ಮೂಡಿಬಂದಂತಿದೆ.

ಚಾರಿತ್ರ್ಯ:

If Character is lost everything is lost ಎಂಬ ಇಂಗ್ಲೀಷ ಲೋಕೋಕ್ತಿಯಂತೆ ಜನಪದರಲ್ಲಿ ಚಾರಿತ್ರ್ಯಕ್ಕೆ ತುಂಬಾ ಮಹತ್ವವಿರುವುದು ಕಂಡುಬರುತ್ತದೆ. ಪ್ರಾಚೀನ ಕನ್ನಡ ಜನಪದರು ತಮ್ಮ ಸ್ತ್ರೀಯರ ಮಾನ, ಮರ್ಯಾದೆಗಳಿಗೆ ತುಂಬ ಮಹತ್ವ ಕೊಟ್ಟ ಸಂಗತಿಯೂ ಗಮನಾರ್ಹ. ಭಾರತೀಯರೆಲ್ಲರೂ ನಾರಿಯನ್ನು ಗೌರವದಿಂದ ಕಂಡು, ಆಕೆಯ ಶೀಲಸಂವರ್ಧನೆ ಮಾಡಬೇಕೆಂದು ಹಾರೈಸುವುದು ಇತಿಹಾಸದಲ್ಲಿ ಓದಿ ತಿಳಿದುಕೊಂಡ ಸಂಗತಿ. ಆದರೆ ಜನಪದರಲ್ಲಿ ಈ ವಿಷಯದಲ್ಲಿ ಕಂಡುಬರುವ ದೃಢ ನಿಷ್ಠೆ, ನಂಬಿಕೆ, ಒಂದು ಬಗೆಯ ಛಲವಾದಿತನ ಅನ್ಯರಲ್ಲಿ ಅಷ್ಟಾಗಿ ಕಾಣಸಿಗದು. ಇದಕ್ಕೆ ಮುಖ್ಯ ಕಾರಣ ಜನಪದರ ಜಾತಿ ವೀರತ್ವ ಎನ್ನಬಹುದು. ಹಿಂದೆಲ್ಲ ದೊಂಬಿ ದಂಗೆಗಳಾಗುತ್ತಿದ್ದಾಗ ಗೆದ್ದ ರಾಜರು, ಪುಂಡರು ಊರೂರುಗಳನ್ನು ಲೂಟಿ ಮಾಡುತ್ತಿದ್ದಂತೆಯೇ ಸ್ತ್ರೀಯರ ಮಾನಭಂಗವನ್ನು ಮಾಡುತ್ತಿದ್ದುದು, ಸ್ತ್ರೀಯರನ್ನು ಅಪಹರಿಸಿಕೊಂಡು ಹೋಗುತ್ತಿದ್ದುದ್ದು, ಇತಿಹಾಸದಲ್ಲಿ ಕಾಣಬಹುದು. ಅಂಥ ಸಂದರ್ಭಗಳಲ್ಲಿ ತಮ್ಮ ಹೆಂಗಸರ ಮಾನ ಮರ್ಯಾದೆಗಳನ್ನು ಕಾಪಾಡಲು ಗಂಡಸರು ಮುನ್ನುಗ್ಗಿ ಹೋಗಿ ಹೋರಾಡುತ್ತಿದ್ದರು, ಸಾವನ್ನಪ್ಪುತ್ತಿದ್ದರು. ಅಂತಹವರ ನೆನಪಿಗಾಗಿರುವ ವೀರಗಲ್ಲು, ತಮ್ಮ ರಕ್ಷಣೆಗಾಗಿ ಹೋರಾಡಿ ಮಡಿದ ಮಹಾಸತಿಯರ ನೆನಪಿಗಾಗಿರುವ 'ಮಾಸ್ತಿಕಲ್ಲು'ಗಳೇ ಇದಕ್ಕೆ ನಿದರ್ಶನಗಳಾಗಿವೆ. ಏಕೆಂದರೆ ಮಾನನಿಷ್ಠರಾದ ಜನತೆಗೆ ಆಗದವರಿಂದ ಶತ್ರುಗಳಿಂದ ಉಂಟಾಗುವ ಅಪಮಾನ, ಸೋಲು, ಅನಾಚಾರಗಳು, ಸಾವಿಗಿಂತಲೂ ತೀವ್ರ ಪರಿಣಾಮವನ್ನುಂಟು ಮಾಡುತ್ತಿದ್ದಂತೆ ಕಂಡುಬರುತ್ತದೆ. ಅದರಲ್ಲೂ ಹೆಣ್ಣು ತನ್ನ ಶೀಲ ಸಂರಕ್ಷಣೆಗಾಗಿ ಎಂತಹ ತ್ಯಾಗಕ್ಕೂ ಸಿದ್ಧಳಾಗಬೇಕು, ಆಗುತ್ತಾಳೆ. ಇಂತಹ ಶೀಲ ರಕ್ಷಣೆಯ ಸಂಬಂಧ ತನ್ನ ಕರುಳ ಕುಡಿಯನ್ನೇ ಕಡೆಗೆಸುವ 'ಕಾಶಿಬಾಯಿ', ಸಂಶಯಕ್ಕೆ ಬಲಿಯಾಗಿ ಪ್ರಾಣವನ್ನೇ ಕಳೆದುಕೊಳ್ಳುವ 'ಸಂಗಮ್ಮ', 'ಈರಮ್ಮ' ಮುಂತಾದವರ ಹಾಡುಗಳು ಚಾರಿತ್ರ್ಯದ ಪ್ರೇರಣೆಯಿಂದಲೇ ಕಟ್ಟಿದಂತೆ ಕಾಣುತ್ತವೆ.

'ಕಾಶಿಬಾಯಿಯ ಹಾಡಿ'ನಲ್ಲಿ ಅವಳು ಹೇಳುವ ರೀತಿಯು ಗಮನಾರ್ಹವಾಗಿದೆ. ಕೂಸಿಗಿಂತ ಅವಳಿಗೆ ಅವಳ ಶೀಲವೇ ಮುಖ್ಯವಾಗಿ ಕಂಡುಬರುತ್ತದೆ. ಅಂತೆಯೇ ಅವಳು

"ಗಂಡ ಹೆಂಡತಿ ನಾವು ಥಣ್ಣಗ ಇದ್ದರ
ಹಿಂಥ ಪುತ್ರನ ಮತ್ತೆ ಹಡೆದೆವು ರನ್ನದ ಕೋಲು ಕೋಲೆ"

ಎಂದು ಹೇಳುವುದು 'ಶೀಲದ' ಬಗ್ಗೆ ಇರುವ ನಿಷ್ಠ, ಛಲಗಳನ್ನು ಪ್ರತಿ ಬಿಂಬಿಸುವಂತೆ ಕಂಡುಬರುತ್ತವೆ.

ಕೊಂದಾರೆ ಕೊಲ್ಲು ಕಡದಾರ ಒಗಿ
ಪತಿವ್ರತ ಧರ್ಮ ಇದ್ದರ ಕೂಸಿನ ಮತ್ತಾದರ ಕಂಡಿನಿ ರನ್ನದ
ಕೋಲು ಕೋಲೆ .....[೧೫]

ಎನ್ನುವುದು ಸಹ ಅವಳ ಅಚಲ ನಿರ್ಧಾರವನ್ನೇ ಸೂಚಿಸುತ್ತದೆ.

ಬುಲಾಯಿ ಹಾಡಿಗೆ ಹೆಣ್ಣಿನ ಚಾರಿತ್ರ್ಯದಂತೆ ಗಂಡಿನ ಚಾರಿತ್ರ್ಯವೂ ಪ್ರೇರಣೆಯಾದುದು ಕಂಡುಬರುತ್ತದೆ. ಗಂಡಿಗೂ ಚಾರಿತ್ರ್ಯ ಮುಖ್ಯ. ಅದಿಲ್ಲದ ಬದುಕು ಅವಮಾನದ ಬದುಕು. ಚಾರಿತ್ರ್ಯವೇ ಹೆಚ್ಚೆಂಬ ಧೋರಣೆ ಹೊಂದಿರುವ 'ಸೋಮರಾಯ ಭೀಮರಾಯನ" ಹಾಡಿನ ಸಾಲುಗಳು ಈ ರೀತಿಯಾಗಿವೆ.

ಭೀ ಃ ಇದು ನನ್ನ ಜನ್ಮ ಮಾಡಿದ ದುರ್ವೆಸನ
ಜಗದೊಳು ಆದ ಅವಮಾನ ರನ್ನದ ಕೋಲು ಕೋಲೆ
ಏ ಹೂವಿನ ಕೋಲು ಕೋಲೆ ....
ಅತ್ತಿತ್ತ ನೋಡುತಾನ ಘೂಟದಲ್ಲಿ ಖಡ್ಗ ಆದ
ಖಡ್ಗ ತಕ್ಕೊಂಡು ಕೈಯೊಳು ರನ್ನದ ಕೋಲು ಕೋಲೆ
ಏ ಹೂವಿನ ಕೋಲು ಕೋಲ
ಗುರುತಿದ್ದು ನೋಡ ನೀನು ಗುರುಧ್ಯಾನ ಮಾಡ ನೀನು
ಶಿವನಲ್ಲಿ ಮುಕ್ತಿ ಬೇಡಮ್ಮ ರನ್ನದ ಕೋಲು ಕೋಲೆ
ಏ ಹೂವಿನ ಕೋಲು ಕೋಲ
ಗುರುತಿಟ್ಟು ನೋಡಲಾರೆ ಗುರುಧ್ಯಾನ ಮಾಡಲಾರೆ
ಜಗದೊಳು ಆದೆ ಅವಮಾನ ರನ್ನದ ಕೋಲು ಕೋಲೆ
ಏ ಹೂವಿನ ಕೋಲು ಕೋಲೆ
ಅದೇ ಖಡ್ಗ ತೊಗೊಂಡಾರೆ ಕಷ್ಟಾಗಿ ಹೊಡ ಕೊಂಡಾರೆ
ರಕ್ತದ ಕಾಲುವೆ ಹರದಿತ್ತ ರನ್ನದ ಕೋಲು ಕೋಲೆ
ಏ ಹೂವಿನ ಕೋಲು ಕೋಲ ....[೧೬]

ತನ್ನ ಗೆಳೆಯನ ಹೆಂಡತಿಯ ಮೇಲೆ ತಿಳಿಯದೆ ಮನಸ್ಸಿಟ್ಟಾಗ, ಗೆಳೆಯ ಅವಳನ್ನು ತಂದು ಒಪ್ಪಿಸುತ್ತಾನೆ. ಆದರೆ ಅವಳಿಂದ ಅವಳು ತನ್ನ ಗೆಳೆಯನ ಹೆಂಡತಿ ಎಂಬುದು ತಿಳಿದಾಗ, ಮನಸ್ಸಿಟ್ಟ ಗೆಳೆಯ ತಾನೆಂಥಹ ನೀಚ, ಇಂತಹ ವಿಷಯ ಎಲ್ಲರಿಗೂ ತಿಳಿಯುವುದಕ್ಕಿಂತ ಮೊದಲೇ ತಾನು ಮಾಡಿದ ಪಾಪಕ್ಕೆ ಅವಮಾನವೆಂದು ಬಗೆದು ಪ್ರಾಣ ಕಳೆದುಕೊಳ್ಳುತ್ತಾನೆ. ಇಲ್ಲಿ ಪ್ರಾಣಕ್ಕಿಂತ ಮಾನವೇ ಮಹತ್ವದ್ದಾಗಿ ಕಂಡುಬರುತ್ತದೆ.

ಹೀಗೆ ಚಾರಿತ್ರ್ಯದ ಪ್ರೇರಣೆಯಿಂದ ಕಟ್ಟಿದ ಅನೇಕ ಬುಲಾಯಿ ಹಾಡುಗಳನ್ನು ಕಾಣಬಹುದು. ಉದಾಃ ನೀಲಕಂಠ ರಾಜನ ಹಾಡು, ಚಂದ್ರುಣಿ ಹಾಡು, ಸಂಗಮ್ಮನ ಹಾಡು, ಅವ್ವಮ್ಮನ ಹಾಡು, ಚಂದ್ರ ಪ್ರಭಾನ ಹಾಡು, ತಂಗಿ ಈರಮ್ಮನ ಹಾಡು, ಚಂದ್ರುಶ ಪೈಲ್ವಾನನ ಹಾಡು, ಮಲ್ಲಿಕಾರ್ಜುನ ಹಾಡು, ರತ್ನಮ್ಮನ ಹಾಡು, ನೀಲಗಂಗಾನ ಹಾಡು ಮುಂತಾದವುಗಳನ್ನು ಗುರುತಿಸಬಹುದಾಗಿದೆ.

ಸಂಬಂಧ:

ಬುಲಾಯಿ ಹಾಡುಗಳಿಗೆ ಅನೇಕ ಮಾನವ ಸಂಬಂಧ, ಅವುಗಳಲ್ಲಿ ನಡೆದ ಘಟನೆ ಹಾಗೂ ಸ್ವಾರ್ಥ, ನಿಸ್ವಾರ್ಥ ಭಾವನೆಗಳು ಸಹ ಪ್ರೇರಣೆಯಾದಂತೆ ಕಂಡುಬರುತ್ತವೆ. ಇಲ್ಲಿ ಅಣ್ಣ-ತಂಗಿ, ತಂದೆ-ಮಕ್ಕಳು, ಅಕ್ಕ-ತಂಗಿ, ಭಾವ-ನಾದುನಿಯರ, ಸ್ನೇಹ-ದ್ವೇಷಗಳ ಭಾವವು ಸಂಬಂಧಗಳಲ್ಲಿ ಗುರುತಿಸುವ ಬುಲಾಯಿ ಹಾಡುಗಳನ್ನು ಕಾಣಬಹುದು.

ಅಣ್ಣ-ತಂಗಿ :

ಅಣ್ಣ-ತಮ್ಮರ ಸೌಖ್ಯಕ್ಕಾಗಿ ತಂಗಿ-ಅಕ್ಕ ಅನೇಕ ರೀತಿಯಲ್ಲಿ ಪೂಜಿಸುವ, ಹಾರೈಸುವ ಪದ್ಧತಿಗಳನ್ನು ಕಾಣಬಹುದು. ಆದರೆ ಅಂತಹ ಸಂಬಂಧಗಳಲ್ಲಿಯೂ ಸ್ವಾರ್ಥಕ್ಕಾಗಿ, ಹಣ-ಒಡವೆಗಾಗಿ, ಹೆಂಡತಿಯ ಮಾತಿಗಾಗಿ ಇವರಲ್ಲಿ ಪರಸ್ಪರ ಕೊಲೆ ಮಾಡಲೂ ಹೇಸದಂತಹ ಪ್ರಸಂಗಗಳ ಕುರಿತಾದ ಹಾಡುಗಳು ಕಂಡುಬರುತ್ತವೆ. ಅಂದರೆ ಇಂತಹ ಸಂಬಂಧಗಳ ಪ್ರೇರಣೆ ಹಾಗೂ ಘಟನೆಗಳ ವಸ್ತುಗಳೊಂದಿಗೆ ಕಟ್ಟಿದಂತಹ ಬುಲಾಯಿ ಹಾಡುಗಳನ್ನು ಗುರುತಿಸಬಹುದಾಗಿದೆ.

ತನ್ನ ಹೆಂಡತಿಯ ಮಾತಿನಿಂದ ನಿರಪರಾಧಿಯಾದ ಹಬ್ಬಕ್ಕೆಂದು ತವರು ಮನೆಗೆ ಬಂದಿದ್ದ ತಂಗಿಯನ್ನು ಅಣ್ಣನು ಕೊಂದು ಬಂದ ಪ್ರಸಂಗವನ್ನು ಬಿಂಬಿಸುವ ಹಾಡು ಈ ರೀತಿಯಾಗಿದೆ.

ಅಷ್ಟೆಲ್ಲಾ ಕೇಳಿದಾನ ಅಷ್ಟೇಲ್ಲಾ ಹೇಳಿದಾನ
ಹೊಟ್ಟ್ಯಾಗ ಜೆಂಬ್ಯಾವ ತಿವದಾನ ಕೋಲು ಕೋಲೆ
ತಂಗೀಗಿ ಹೊಡದಾನ ರಕ್ತಾರ ತೆಗೆದಾನ
ತನ್ನ ಮನೀಗಿ ತಾ ಬಂದಿದಾನ ಕೋಲು ಕೋಲೆ....[೧೭]

ಹೆಂಡತಿಯ ಮಾತಿನಿಂದ ಸ್ವಂತ ತಂಗಿಯನ್ನು ಕೈಯಾರೆ ಕೊಂದ ಅಣ್ಣನ ಕ್ರೌರ್ಯ ಪ್ರಸಂಗ ಇದಾದರೆ, ಮತ್ತೊಂದು ಹಾಡಿನಲ್ಲಿ ತಂಗಿ ಅಣ್ಣನನ್ನು ವಿಷನೀಡಿ ಕೊಲ್ಲುವ ಪ್ರಸಂಗವು ಸ್ವಾರ್ಥದಿಂದ ಕೂಡಿದೆ. ಇನ್ನೊಂದು ಹಾಡಿನಲ್ಲಿ ತಂಗಿ ಅಣ್ಣನನ್ನು ವಿಷನೀಡಿ ಕೊಲ್ಲುವ ಪ್ರಸಂಗವು ಮೂಡಿಬಂದಿದೆ.

ಹಬ್ಬಕ್ಕೆಂದು ಅಣ್ಣ ತನ್ನ ತಾಯಿಯ ಮಾತು ಕೇಳಿ ತಂಗಿಯನ್ನು ಕರೆಯಲು ಹೋಗುತ್ತಾನೆ. ಆಗ ತಂಗಿ ಅಣ್ಣನ ಮೈಮೇಲೆ ಬಂಗಾರ, ಅವನ ಶ್ರೀಮಂತಿಕೆಯನ್ನು ಕಂಡು ಕರಬುತ್ತಾಳೆ. ಹೀಗಾಗಿ ತನ್ನಣ್ಣ ಕರೆಯಲು ಬಂದುದಕ್ಕೆ ಒಂದು ಉಪಾಯವನ್ನು ಮಾಡುತ್ತಾಳೆ. ಒಳ್ಳೊಳ್ಳೆ ಮಾತನಾಡಿ ಅಣ್ಣನನ್ನು ಉಪಚರಿಸುತ್ತಾಳೆ. ಅವನಿಗೆ ಮಲಗಲು ದೇವರ ಕೋಣೆಯಲ್ಲಿ ಹೂವಿನ ಹಾಸಿಗೆಯನ್ನೇ ಹಾಸುತ್ತಾಳೆ. ಆದರೆ ಮಲಗಿಕೊಂಡ ಸ್ವಲ್ಪ ಹೊತ್ತಿನಲ್ಲೆ ಅವನ ಹೊಟ್ಟೆಯಲ್ಲಿ ಉರಿ ಉಂಟಾಗಿ ನೀರು, ನೀರು ಎಂದು ಗೋಗರೆಯುತ್ತಾನೆ. ಆಗ ತಂಗಿ

ನೀರನ್ನು ಕೊಡುವುದಿಲ್ಲ. ನೀರಿಲ್ಲದೆ ಸಂಕಟ ತಾಳದೆ ಅಣ್ಣ ಸತ್ತುಹೋಗುತ್ತಾನೆ. ಮೈದುನ ಸತ್ತದ್ದನ್ನು ಕಂಡು ಭಾವ, ಆಕೆಯ ಪತಿ ಹೆಂಡತಿಯನ್ನು ವಿಚಾರಿಸುತ್ತಾನೆ. ಅದಕ್ಕೆ ತಾನೇ ಕೊಂದಿದ್ದು ಎಂದು ಹೇಳುತ್ತಾಳೆ. ಅವನ ಮೈಮೇಲಿನ ಬಂಗಾರ, ದುಡ್ಡು ಎಲ್ಲವನ್ನು ತೆಗೆದುಕೊಂಡು ಅವನ ದೇಹವನ್ನು ಬಾವಿಯಲ್ಲಿ ಹಾಕುತ್ತಾಳೆ. ರಾತ್ರಿ ಮಲಗಿದ ತಾಯಿಗೆ ಕೆಟ್ಟ ಕನಸ್ಸೊಂದು ಬೀಳುತ್ತದೆ. ಅದರಿಂದ ಕಳವಳಗೊಂಡ ತಾಯಿ ಹೊತ್ತು ಮೂಡುವುದರಲ್ಲೇ ಸ್ವತಃ ತಾನೇ ಮಗಳ ಮನೆಗೆ ಬಂದು ಮಗನ ಬಗ್ಗೆ ಕೇಳುತ್ತಾಳೆ. ಅದಕ್ಕೆ ಮಗಳು ತಾಯಿಗೆ ಅಣ್ಣ ಕರೆಯಲು ಬಂದೇ ಇಲ್ಲ ಎಂದು ಹೇಳುತ್ತಾಳೆ. ಗಂಡ ಸಹ ಇವಳ ಗುಣಕ್ಕೆ ಹೇಸಿ ಹೋಗುತ್ತಾನೆ. ಅವಳು ಕೈಕೊಂಡ ಉಪಾಯ ಹಾಗೂ ಗಂಡನಿಗೆ ವಿಷಯ ತಿಳಿಸಿದ್ದು ಹಾಡಿನಲ್ಲಿ ಹೀಗೆ ಕಂಡು ಬರುತ್ತದೆ.

ಅಲ್ಲಿಂದ ನೀಲಮ್ಮ ದುಕನಕ ಹೋಗ್ಯಾಳೆ
ದುಡ್ಡಿಂದ ಇಷ ತಂದಾಳೆ ರನ್ನದ ಕೋಲು ಕೋಲೆ
ಅಲ್ಲಿಂದ ನೀಲಮ್ಮ ತನ್ನ ಗಂಡಗ ತಾನಂತಾಳ
ನಮ್ಮಣ್ಣಾನ ಜೀವ ನಾನೇ ಹೊಡೆದ ರನ್ನದ ಕೋಲು ಕೋಲೆ.....[೧೮]

ತಂದೆ - ಮಕ್ಕಳು :

ತಂದೆ ತನಗೆ ಹೆಂಡತಿ ಮಕ್ಕಳಿದ್ದರೂ ಮತ್ತೊಬ್ಬ ಹೆಂಗಸಿನ ಹಸವಾಸವನ್ನು ಮಾಡುತ್ತಾನೆ. ಆಗ ಅದನ್ನು ಸಹಿಸದ ಮಕ್ಕಳು ತಂದೆಯಿರುವಲ್ಲಿಯೇ ಹೋಗಿ ಅವನನ್ನು ಕೊಂದು ಹಾಕಿದ ನೈಜ ಘಟನೆಯ ಹಾಡು ತುಂಬಾ ವಿಸ್ಮಯಕಾರಕವಾಗಿದೆ. ಈ ಹಾಡು ಅವರಾದಿ (ಔರಾದ) ದೇಶಮುಖರ ಮನೆಯಲ್ಲಿ ನಡೆದ ನೈಜ ಘಟನೆಯೆಂದು ಕ್ಷೇತ್ರ ಕಾರ್ಯದಲ್ಲಿ ತಿಳಿದು ಬಂದ ವಿಷಯ ಇಂದಿಗೂ ಆ ವಿಷಯವನ್ನು ಜನರು ಕಣ್ಣಿಗೆ ಕಟ್ಟುವಂತೆ ಹೇಳುತ್ತಾರೆ. ಈ ಕುರಿತ ಹಾಡು ಹೀಗಿದೆ.

ಹಣ್ಣ ಬದನೇ ಕಾಯಿ ಎಣ್ಣ್ಯಾಗ ಕರದ್ಹಾಂಗ
ದೊಡ್ಡದೊಂದು ಊರು ಅವರಾದಿ ರನ್ನಾದೆ ಕೋಲು ಕೋಲೆ
ದೊಡ್ಡದೊಂದು ಎಲೆ ಊರ ಅವರಾದಿ ಬಸವಂತರಾಯ
ಎತ್ತಿನ ಅಂಗಡಿ ಮಂಗಳವಾರೆ ರನ್ನದೆ ಕೋಲು ಕೋಲೆ
ಎತ್ತಿನ ಎಲೆ ಅಂಗಡಿ ಮಂಗಳವಾರೆ ಛತ್ತರಿಸುತ
ಸರಿಮುತ್ತ ಎಲೆ ಹೂವಿನ ರನ್ನದೆ ಕೋಲು ಕೋಲೆ
ಛತ್ತರಿ ಎಲೆ ಸುತ್ತ ಸರಿಮುತ್ತ ಬಸವಂತರಾಯ
ಮುತ್ತಿಗಿ ನಾರಿ ಮರುಳಾಗಿ ಎಲೆ ಹೂವಿನ ರನ್ನದೆ ಕೋಲು ಕೋಲೆ
ಮುತ್ತಿಗಿ ಎಲೆ ನಾರಿ ಮರುಳಾಗಿ ಬಸವಂತರಾಯ

ಒಯ್ದು ಇಟ್ಟಾರೆ ತನ್ನ ಗಡಿದಾಗೆ ರನ್ನದೆ ಕೋಲು ಕೋಲೆ ......
ಪಂಚಕಲ್ಯಾಣಿ ಕುದರಿ ಖ್ಯಾಕರಿಸ್ತ ಬರುವಾಗ
ಯಾಕ ಅವರಾದಿ ಗಲಿಬಿಲಿಯಾದೆ ರನ್ನದೆ ಕೋಲು ಕೋಲೆ
ಯಾಕ ಅವರಾದಿ ಗಲಿಬಿಲಿಯಾದೆ ಗಡಿದಾಗ
ಮಾತಿನ ಪಂಡಿತ ಮಡದಾರೆ ರನ್ನದೆ ಕೋಲು ಕೋಲೆ ....[೧೯]

ಅಕ್ಕ-ತಂಗಿ :

ಅಕ್ಕ ತಂಗಿಯ ಸಂಬಂಧವು ಮುರಿದು, ಮುಂದೆ ತಂಗಿ ಅಕ್ಕನಿಗೆ ಸರಿ ಸವತಿಯಾಗಿ ಸಾಲಮಾಳಿಗಿ ಸರಿಪಾಲ ಕೇಳುವಾಗ ರಕ್ತ ಸಂಬಂಧವೆಲ್ಲ ಗೌಣವಾಗಿ ಬಿಡುತ್ತದೆ. ಆಗ ನೆತ್ತರದ ಕಾಲುವೆ ಹರಿದರೂ ಆಶ್ಚರ್ಯವಿಲ್ಲ. ಅಂದರೆ ಸಂಬಂಧವಿಲ್ಲಿ ಉಳಿಯದೇ ಹೋಗುವುದು. ಅಕ್ಕ ತನ್ನ ತಂಗಿಯನ್ನು ಕುರಿತು ಕೇಳುವ ರೀತಿ ಹೇಳುವ ಉತ್ತರ ಹೀಗಿದೆ.

ಎತ್ತಿನ ಮ್ಯಾಲ ಕುಂತು ಹಚ್ಚಡ ಮುಸಕನಿಕ್ಕಿ
ಎಂದ ಬರುತೆ ತಂಗಿ ನನಗ್ಹೇಳೆ ಕೋಲೆ
ನಿಂಬಿಯ ಚಿಗದಾಗ ಬಾಳಿಯ ಒಡೆದಾಗ
ನಾ ಬಂದೆ ನನ್ನ ಮಗ ಬಂದೆ ಕೋಲೆ
ನಾನೆನೆ ಬಂದೆ ನನ್ನ ಮಗ ಬಂದ ಕಾಲಕ್ಕ
ಸಾಲ ಮಾಳಿಗಿ ಸರಿಪಾಲ ಕೋಲೆ
ಸಾಲನೆ ಮ್ಯಾಳಿಗಿ ಸರಿಪಾಲ ಆದಾಗ
ನೆತ್ತರ ಕಾಲ್ಲಿ ಹರದವೆ ಕೋಲೆ ....[೨೦]

'ಹೊನ್ನಮ್ಮನ ಹಾಡಿ' ನಲ್ಲಿಯೂ ತನಗೆ ಮಕ್ಕಳಾಗದ ಕಾರಣ ಹೊನ್ನಮ್ಮ ತನ್ನ ಸ್ವಂತ ತಂಗಿಯನ್ನೇ ತನ್ನ ಗಂಡನಿಗೆ ಮದುವೆ ಮಾಡಿ ಕರೆದುಕೊಂಡು ಬರುತ್ತಾಳೆ. ಆದರೆ ಮುಂದೆ ಅದೇ ತಂಗಿ ತನ್ನ ಅಕ್ಕನನ್ನು ಕಡೆಗೆಣಿಸಿ ಬಿಡುತ್ತಾಳೆ. ಇದರಿಂದ ನೊಂದ ಅಕ್ಕ ತಂಗಿಯ ವರ್ತನೆ ಹಾಗೂ ಮಾತುಗಳಿಂದ ಬೇಸತ್ತು ಉರುಳು ಹಾಕಿಕೊಂಡು ಸಾಯುತ್ತಾಳೆ. ಮೊದಲೇ ಗಂಡ ಎಷ್ಟು ಬೇಡವೆಂದರೂ ತಂಗಿ ಎಂಬ ಮೋಹದಿಂದ ಮಾಡಿರುತ್ತಾಳೆ. ಕೊನೆಯಲ್ಲಿ ಅವಳ ಗಂಡ ಹೇಳುವ ಮಾತುಗಳು ಹೀಗಿವೆ.

ಕೊರಳಿಗೆ ಉರುಳ ಹಾಕ್ಯಾಳ ಹೊನ್ನಮ್ಮ
ಹೊನ್ನನ ಗಂಡ ಹೊರಗಿಂದೆ ಬಂದ ಕೋಲೆಣ್ಣ ಕೋಲೆ
ಹೊನ್ನನ ಗಂಡ ಹೊರಗಿಂದೆ ಬಂದು ನೋಡಿ
ನೀನೇ ಮಾಡಿ ನೀನೇ ಉಂಡಿ ಕೋಲೆಣ್ಣ ಕೋಲೆ ......[೨೧]

ಯಾವುದೇ ವಿಷಯದಲ್ಲಿ ಆತುರ ಸಲ್ಲದು. ನಿಧಾನಿಸಿ ನೋಡಿದಾಗ ನಿಜ ತಿಳಿಯುವಷ್ಟರಲ್ಲಿಯೇ ಸಂಬಂಧಗಳು ಸಡಿಲಗೊಳ್ಳುವವು ಅಥವಾ ಗಟ್ಟಿಗೊಳ್ಳುವವು.

[illegible]

ಸಂಬಂಧವಿದ್ದಲ್ಲಿ ಅನುಬಂಧವಿದ್ದೇವಿರುತ್ತದೆ. ಸಂಬಂಧ ಸಡಿಲಾದಾಗ ದುರಂತವೇ ನಡೆಯುತ್ತದೆ. ಸಂಬಂಧ ಸಡಿಲಗೊಳ್ಳದಿರಲೆಂಬ ಧೋರಣೆ ಹಾಡುಗಳಲ್ಲಿ ಕಂಡುಬರುತ್ತದೆ. ಏಕೆಂದರೆ ಕಳ್ಳು - ಬಳ್ಳಿಯಲ್ಲಿ ಈ ರೀತಿಯ ಸಂಬಂಧವು ನಡೆಯದಿರಲಿ, ಎಲ್ಲರೂ ಯೋಚಿಸಿ ಇಂತಹ ನಿರ್ಧಾರಗಳನ್ನು ತೆಗೆದುಕೊಳ್ಳಲಿ, ಹಿಂದೆ ಆಗಿ ಹೋದ ಘಟನೆಗಳ ಮೂಲಕ ತಿಳಿಸಿ ಪ್ರಸ್ತುತ ಜನರಿಗೆ ಎಚ್ಚರಿಕೆಯನ್ನು, ಸೂಚನೆಯನ್ನು ನೀಡುವುದು ಇಂತಹ ಹಾಡುಗಳಲ್ಲಿ ಕಾಣಬಹುದಾಗಿದೆ.

ತ್ಯಾಗ:

ನಮ್ಮ ಜನಪದರು ಆದಿಯಿಂದಲೂ ಭೋಗಿಗಳಾಗಿ ಬಾಳುವುದಕ್ಕಿಂತ ತ್ಯಾಗಿಗಳಾಗಿ, ದಾನಿಗಳಾಗಿ, ನಿಸ್ವಾರ್ಥದಿಂದ ಕಷ್ಟ, ಕೊರತೆಗಳನ್ನು ಕಂಡುಂಡವರಾಗಿ ಬಾಳಿಬಂದಂತೆ ಕಂಡುಬರುತ್ತದೆ. ತ್ಯಾಗ ಹಾಗೂ ಕ್ಷಮೆಗಳು ಅವರ ಬದುಕಿನ ಮೌಲ್ಯಗಳು. ಮೌಲ್ಯಗಳಿಗೆ ಅಂಟಿಕೊಂಡು ಬದುಕಬೇಕೆಂಬುದು ಅವರು ರಕ್ತಗತವಾಗಿ ಪಡೆದ ಬಂದ ಪಾರಂಪರಿಕ ಗುಣವೆನ್ನಬಹುದು. ಅದರಲ್ಲೂ ಕುಟುಂಬ, ಸಮಾಜಕ್ಕಾಗಿ ಹೆಣ್ಣುಮಕ್ಕಳು ಇಂತಹ ತ್ಯಾಗ ಹಾಗೂ ಕ್ಷಮೆ ಮಾಡಲೇಬೇಕೆಂಬುದನ್ನು ಗಮನಿಸಬಹುದು. ಅಂತೆಯೇ ಅನೇಕ ಬಗೆಯ ಜನಪದಗೀತೆಗಳಲ್ಲಿ ಇಂತಹ ಚಿತ್ರಣಗಳನ್ನು ಕಾಣಬಹುದು. 'ಕ್ಷಮೆಯೆ ಧರತ್ರಿ' ಎಂಬುದು ಹೆಣ್ಣನ್ನು ಕುರಿತೇ ಹೇಳಿದಂತಹ ವಾಕ್ಯ. ಹೀಗೆ ಕುಟುಂಬದ ಪ್ರತಿಷ್ಠೆಗಾಗಿ, ಸಮಾಜದ ಹಿತಕ್ಕಾಗಿ ತನ್ನ ಪ್ರಾಣವನ್ನು ಪಣಕ್ಕಿಡುವ, ಎಂತಹ ಅಪರಾಧಗಳನ್ನು ಕ್ಷಮಿಸಿ ಬಿಡುವ ಈ ಮೌಲ್ಯಗಳು ಸಹ ಬುಲಾಯಿ ಹಾಡುಗಳಿಗೆ ಪ್ರೇರಣೆಯಾದಂತೆ ಕಂಡುಬರುತ್ತದೆ.

ಸಮಾಜದ ಹಿತಕ್ಕಾಗಿ ಗಂಡನ ಮನೆಯ ಪ್ರತಿಷ್ಠೆಗಾಗಿ ಕೆರೆಗೆ, ಕೋಟೆಗೆ ತನ್ನ ಪ್ರಾಣದಾನ ಮಾಡುವ ಹೆಣ್ಣು ತ್ಯಾಗ - ಬಲಿದಾನದ ಪ್ರತೀಕಳಾಗಿದ್ದಾಳೆ. ತವರುಮನೆಯಲ್ಲಿ ಯುದ್ಧಕ್ಕೆ ಹೋಗಿ ಮಡಿದ ತನ್ನ ಸಹೋದರರಿಗಾಗಿ ತನ್ನ ಪ್ರಾಣವನ್ನೇ ಕೊಡುವ 'ಮಲ್ಲಮ್ಮ' ತ್ಯಾಗಿಯಾಗಿ ಕಂಡುಬರುತ್ತಾಳೆ. ಹೀಗೆ ಕೆರೆಗೆ ಪತಿವರತಿ ಹೆಣ್ಣು, ಕೋಟೆಗೆ ಬಸುರಿ ಸಂಗಮ್ಮ ತಮ್ಮ ಪ್ರಾಣದಾನ ಮಾಡಿ ತ್ಯಾಗಿಗಳಾದಂತೆ, 'ಅಣ್ಣತಂಗಿಯ' ಹಾಡಿನಲ್ಲಿ 'ಅಣ್ಣ-ಅತ್ತಿಗೆ'ಯರು ಮಾಡಿದ ಅನ್ಯಾಯವನ್ನು ಕೊಟ್ಟ ನೋವನ್ನು ಕ್ಷಮಿಸಿ, ಅವರನ್ನು ಹರಸುವ ತಂಗಿಯ ಕ್ಷಮಾಗುಣವು ಸಹ ಬುಲಾಯಿ ಹಾಡಿಗೆ ಪ್ರೇರಣೆಯಾದಂತೆ ಕಂಡುಬರುತ್ತದೆ.

ಶ್ಯಾವಕ್ಕಿ ಕುಟ್ಟಂದರ ಸೆರಗ್ಹಾಕಿ ಮಲಗ್ಯಾಳೋ
ಎಬ್ಬಿಸು ಎಣ್ಣ ಮಡದಿಗಿ ಕೋಲೆಣ್ಣ ಕೋಲೆ
ಮಡದಿಗಿ ಎಬ್ಬಿಸಿದರ ಅರನಿದ್ದಿ ಆಯ್ತಾದ
ಎರಡೊಬ್ಬಿ ಹಾಕಿ ತೆಗಿ ತಂಗಿ ಕೋಲೆಣ್ಣ ಕೋಲೆ
ಎರಡೊಬ್ಬಿ ಹಾಕಿದರ ಭರಡಕ್ಕಿ ಆಯ್ತಾವ

ಎಬ್ಬಿಸು ಎಣ್ಣ ಮಡದಿಗಿ ಕೋಲೆಣ್ಣ ಕೋಲೆ
ಎತ್ತರ ತರಸಣ್ಣಾ ಮುಟ್ಟದ ಬಿಗಿಯಣ್ಣಾ
ಹೊತ್ತುಟ್ಲೆ ನಮಗ ಖಳಸಣ್ಣ ಕೋಲೆಣ್ಣ ಕೋಲೆ
ಎತ್ತ ನಮ್ಮಲಿಲ್ಲ ಮುಟ್ಟ ನಮ್ಮಲಿಲ್ಲ
ಬಂದ್ದಾದಿ ಹಿಡಿದು ಹೋಗೆ ತಂಗಿ ಕೋಲೆಣ್ಣ ಕೋಲೆ
ತಂಗಿ ಹೋದ ಮರುದಿನ ಮಡದಿಗಿ ಉರಿಛಳಿ
ಕೇಳಸಿ ನೋಡಲ್ಲಿ ನಡೆದಾರೆ ಕೋಲೆಣ್ಣ ಕೋಲೆ
ಕೇಳಸಿ ನೋಡಿದರೆ ದೆವ್ವಿಲ್ಲ ಭೂತಿಲ್ಲ
ಮನಿ ಹೆಣ್‌ಮಗಳ ಉಸುರೆಂದರ ಕೋಲೆಣ್ಣ ಕೋಲೆ
ಎತ್ತಾರ ತಂದಾನ ಮುಟ್ಟಾರ ಜಿಗಿದಾನ
ತಂಗಿ ಇದ್ದ ಊರಿಗೆ ನಡದಾನ ಕೋಲೆಣ್ಣ ಕೋಲೆ ......

ಅಣ್ಣನನ್ನು ಕಂಡ ತಂಗಿ ಎಂದಿಲ್ಲದವ ಇಂದ್ಯಾಕ ಬಂದೆ ಎಂದು ಕೇಳಿದಾಗ ಮದುವೆಗೆ ನಿನ್ನನ್ನು ಕರೆಯಲು ಬಂದಿರುವೆ ಎನ್ನುತ್ತಾನೆ. ನನ್ನಲ್ಲಿ ಏನೂ ಇಲ್ಲ ನಾ ಹೇಗೆ ಬರಲಿ ಎಂದು ಕೇಳಿದಕ್ಕೆ ನಿನಗೆಲ್ಲವನ್ನು ಕೊಡುವೆ ಎನ್ನುತ್ತಾನೆ. ಅದಕ್ಕೆ ತಂಗಿ ಅದೆಲ್ಲವನ್ನು ನಿನ್ನ ಹೆಂಡತಿಗೇ ಕೊಡು ಎಂದು ಮೂದಲಿಸುತ್ತಾಳೆ. ಆದರೆ ಅಣ್ಣ ತಂಗಿಗೆ ಕುದುರೆ, ಛತ್ತರಿ ಕಳುಹಿಸುವೆ ಎಂದು ಪರಿಪರಿಯಾಗಿ ಬೇಡಿಕೊಂಡಾಗ ಮೊದಲು ಒಪ್ಪದಿದ್ದರೂ ಕೊನೆಗೆ ಒಪ್ಪಿ ಅವನನ್ನು ಹರಸಿ, ಹಾಡಿ ತನ್ನ ಕ್ಷಮಾಗುಣವನ್ನು ಮೆರೆಯುತ್ತಾಳೆ.

ಹಳ್ಳದ ದಂಡಿಗೊಂಟ ಮಲ್ಲಿಗಿ ಗಿಡಹುಟ್ಟಿ
ಅದಕ ಮಗ್ಗಿಯ ಜಡದಂಗೆ ಕೋಲೆಣ್ಣ ಕೋಲೆ
ಅದಕ ಮಗ್ಗಿಯ ಜಡದಂಗೆ ನನ್ನ ಅಣ್ಣ
ಹಾಡ್ಯಾಲೋ ನಿನಗ ಹರಸ್ಯಾಲೋ ಕೋಲೆಣ್ಣಾ ಕೋಲೆ ....''

ಹೀಗೆ ಹೆಣ್ಣಿಗೆ ತ್ಯಾಗ ಹಾಗೂ ಕ್ಷಮಾ ಗುಣಗಳಿರಬೇಕೆಂಬ ಧೋರಣೆಯೊಂದಿಗೆ ಹಾಡು ರಚಿಸಿದಂತೆ ಕಂಡುಬರುತ್ತದೆ. ತ್ಯಾಗ ಹಾಗೂ ಕ್ಷಮಾ ಗುಣಗಳು ನಮ್ಮ ಗರತಿಯರ ಆದರ್ಶ ಪೂರ್ಣ ಮೌಲ್ಯಗಳು, ಜೋಡು ನಂದಾ ದೀಪಗಳು ಅವರ ಸಂಸ್ಕೃತಿಯ ಅಮರ ಸಂಕೇತಗಳೆನ್ನಬಹುದು. ಇವುಗಳ ಜೊತೆಗೆ ವೈರಾಗ್ಯ, ಆಧ್ಯಾತ್ಮವನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡದ್ದನ್ನು ಕಾಣಬಹುದು. ನಮ್ಮಲ್ಲಿ ಭೌತಿಕವಾದಕ್ಕಿಂತ ಅಧ್ಯಾತ್ಮಕ್ಕೆ ಹೆಚ್ಚಿನ ಮಹತ್ವ ಕೊಟ್ಟಿರುವುದು ಕಂಡುಬರುತ್ತದೆ. ಅಂತೆಯೇ ಅನೇಕ ಶರಣ - ಶರಣೆಯರನ್ನು ಕುರಿತಾದ ಬುಲಾಯಿ ಹಾಡುಗಳನ್ನು ಕಾಣಬಹುದಾಗಿದೆ. ಅಧ್ಯಾತ್ಮಕ್ಕೆ ಸಂಬಂಧಿಸಿದಂತೆಯೂ ಕೆಲವೊಂದು ಹಾಡುಗಳು ಕಂಡುಬರುತ್ತವೆ. ಅಂದರೆ ಅಧ್ಯಾತ್ಮಕತೆಯೂ ಇಲ್ಲಿ ಬುಲಾಯಿ ಹಾಡುಗಳಿಗೆ ಪ್ರೇರಣೆಯಾದಂತೆ ಕಂಡುಬರುತ್ತದೆ. ಅಂತಹ ಹಾಡು ಈ ರೀತಿಯಾಗಿದೆ.

ಸಂತಿಜಿ ಬಂದಿಳದಿದು ಧರ್ಮಸಾಲಿಯ ಇದು
ನಿಜ ಮನಿ ಹ್ಯಾಗಾಗುವದು ಕೋಲು ಕೋಲೆ
ಸುಳ್ಳ ದೇಹದ ಚಿಂತಿ ರಾತ್ರಿ ಹಗಲಾ ಮಾಡುತಿ
ನಿಜ ಮನಿಗೆ ಮರತು ಕುಂತಿ ಕೋಲು ಕೋಲೆ
ಈ ದೇಹ ತಂದಲ್ಲಾ ದೇಹದವರು ನನ್ನವರಲ್ಲಾ
ಸಂತೆವರು ಇವರೆಲ್ಲಾ ಕೋಲು ಕೋಲೆ
ಬಂದಿದಿ ಎಲ್ಲಿಂದ ಎಲ್ಲಿಗಿ ಹೋಗುವದು
ತಿಳಿ ನಾನ್ಯಾರಂಬದು ಕೋಲು ಕೋಲೆ
ಸಾವು ಹುಟ್ಟುವದೆಲ್ಲಾ ಆತ್ಮ ಧರ್ಮಕೆ ಎಲ್ಲಾ
ದೇಹ ಧರ್ಮಕ್ಕೆ ಎಲ್ಲಾ ಕೋಲು ಕೋಲೆ
ತಾಂ ಕಳಿದು ಹೋಗಿದು ತನಗಿಲ್ಲಾ ಅರು ಇದು
ಇದರಂಥಾ ಮರು ಯಾವುದು ಕೋಲು ಕೋಲೆ
ನಾ ಮಾಡುತೆಂಬದು ಅಳಿಯೋ ನಿಜಗುರ್ತಲಿಂದ ಉಳಿಯೋ
ಇದೆ ಶಿವಭಕ್ತರ ಬಳಿಯೋ ಕೋಲು ಕೋಲೆ
ಪ್ರಭಾಕರ ನಾಗನಾಥ ನೀ ಇದ್ದಿ ನಿಮಿತ್ಯ ಕರತಾ
ಶಿವಹಾನೋ ಸರ್ವಕರತಾ ಕೋಲು ಕೋಲೆ .....[೨೩]

ಇಲ್ಲಿ ಈ ಹಾಡಿನ ರಚನೆಕಾರರು ನಾಗನಾಥ ಪ್ರಭಾ ಎಂದು ಕಂಡುಬರತ್ತುದೆ. ಅಂದರೆ ಅಧ್ಯಾತ್ಮದ ಬಿಷಯವನ್ನು ಹೆಣ್ಣುಮಕ್ಕಳಿಗೆ ತಿಳಿಸಲು ಹೆಣ್ಣುಮಕ್ಕಳು ಸರಳವಾಗಿ ಕಟ್ಟಿ - ಹಾಡುವ ಬುಲಾಯಿ ಹಾಡುಗಳಲ್ಲಿಯೇ ಕಬಿ ಬರೆದದ್ದು, ಬಿಶೇಷವೆನಿಸುತ್ತದೆ. ಇದೇ ರೀತಿಯಾಗಿ ಶರಣ ಬಸಪ್ಪನ ಹಾಡು ರಜಾಕಾರರ ಹಾಡು ಸಹ ಹೆಣ್ಣು ಮಕ್ಕಳಿಗಾಗಿ ಬರೆದ ಬುಲಾಯಿ ಹಾಡುಗಳು ಎಂಬುದು ಇಲ್ಲಿ ಸ್ಮರಿಸಬಹುದು. ಅಂದರೆ ಸಮಾಜದಲ್ಲಿಯ ಪ್ರತಿಯೊಂದು ಅಂಶ, ಬಿಷಯಗಳು ಬುಲಾಯಿ ಹಾಡುಗಳಿಗೆ ಪ್ರೇರಣೆಯಾದಂತೆ ಕಂಡುಬರುತ್ತದೆ. ಹೀಗಾಗಿ ಒಂದು ವೇಳೆ ಗಂಡು ಮಕ್ಕಳು ಉದ್ದೇಶ ಪೂರ್ವಕವಾಗಿ ಕಟ್ಟಿದ ಅಥವಾ ಬರೆದ ಹಾಡುಗಳಿದ್ದರೆ ಹಾಡಿನ ಕೊನೆಯ ಸಾಲುಗಳಲ್ಲಿ ಅವರ ಹೆಸರುಗಳಿರುವುದು ಗಮನಿಯ ಅಂಶವೆನ್ನಬಹುದು. ಶರಣ ಬಸಪ್ಪನ ಹಾಡಿನ ಕೊನೆಯ ಸಾಲುಗಳು ಈ ರೀತಿಯಾಗಿವೆ.

ಹೋಳಿ ಹುಣ್ಣಿ ಆಗಿದ ಐದನೇ ದಿವಸಕ್ಕೆ ಥೇರನೆ
ಅವರು ಎಳದಾರಲ್ಲ ಕೋಲೆಣ್ಣ ಕೋಲೆ
ಈ ಪದ ಕಟ್ಟಿಸಿದವರು ಶರಣಪ್ಪನ ಶಿಷ್ಯರು ಅವರಿಗಿ
ಅನ್ನತಾರ ಬೆಂಬಳಗಿ ಬಸವಣ್ಣಪ್ಪ ಕೋಲೆಣ್ಣ ಕೋಲೆ ....[೨೪]

ರಜಾಕಾರರ ಹಾಡಿನ ಕೊನೆಯ ಸಾಲುಗಳಲ್ಲಿ
ಹೈದರಾಬಾದ ವಿಜಯವಾಯಿತ್ತು
ವಿಜಯ ದಶಮಿಯು ಬಂತು ಧ್ವಜ ಏರಿತ್ತು ಕೋಲೆಣ್ಣ ಕೋಲೆ
ಸರ್ವಧಾರಿ ಸಂವತ್ಸರ ಪದ ಮುಗಿಯಿತು
ಗುರುವಾರ **ಕವಿಕೃತ ವಿರೂಪಾಕ್ಷ ವೀರ** ಕೋಲೆಣ್ಣ ಕೋಲೆ....[೨೫]

ಈ ರೀತಿಯಾಗಿ ಬದುಕಿನ ವಿವಿಧ ಘಟನೆಗಳು, ಮೌಲ್ಯಗಳು, ಅಧ್ಯಾತ್ಮ ಬುಲಾಯಿ ಹಾಡುಗಳಿಗೆ ಪ್ರೇರಣೆಯಾದಂತೆ ಕಂಡುಬರುತ್ತವೆ. ಅವುಗಳ ಜೊತೆಯಲ್ಲಿ ಅನ್ಯ ಸಮಾಜ, ಭಾಷೆ ಧರ್ಮಗಳು ಮತ್ತು ಕಾಲ, ಇತಿಹಾಸ ಮುಂತಾದವುಗಳ ಪ್ರೇರಣೆ ಪ್ರಭಾವಗಳನ್ನು ಕಾಣಬಹುದು. ಪೌರಾಣಿಕ, ಧಾರ್ಮಿಕ ಅಂಶಗಳು ಸಹ ಬುಲಾಯಿ ಹಾಡುಗಳಿಗೆ ಪ್ರೇರಣೆಯಾಗಿರುವುದು ಕಂಡು ಬರುತ್ತದೆ.

ಉದಾ: ದಕ್ಷ ಬ್ರಹ್ಮನ ಹಾಡು
ಶಿವ-ಪಾರ್ವತಿಯರ ಹಾಡು
ಅಂಬಾಬಾಯಿ ಹಾಡು
ಶಿವಶರಣರ ಹಾಡುಗಳು
ಮಲ್ಲಮ್ಮನ ಹಾಡು
ಶರಣ ಬಸಪ್ಪನ ಹಾಡು
ಧರ್ಮವೀರನ ಹಾಡು
ಭಾಲ್ಕಿ ಚೆನ್ನಬಸವ ಪಟ್ಟದ್ದೇವರ ಹಾಡು
ಹಳೆಂಬುರ ವೀರಭದ್ರ ಗುರುಗಳ ಹಾಡು
ನಿಜಾಮನ ದಬ್ಬಾಳಿಕೆಯ ಹಾಡು,
ಕಾಳಿಂಗರಾಯನ ಹಾಡು,
ಹೊನ್ನಮ್ಮನ ಹಾಡು,
ಸಂಗಮ್ಮನ ಹಾಡು,
ವಿಕ್ರಮರಾಜನ ಹಾಡು ಮುಂತಾದವು

ಹೀಗೆ 'ಬುಲಾಯಿ ಹಾಡುಗಳಿಗೆ' ಪುರಾಣ, ಇತಿಹಾಸ, ದುರಂತ, ಘಟನೆ, ವ್ಯಕ್ತಿ ಮುಂತಾದವುಗಳು ಪ್ರೇರಣೆಯಾದಂತೆ ಕಂಡುಬರುತ್ತದೆ. ಜೊತೆಗೆ ಜನಪದ ಕಥನಗೀತೆಗಳು, ಕೋಲು ಪದಗಳು ಸಹ ಪ್ರೇರಣೆ ನೀಡಿದಂತೆ ಕಂಡುಬರುತ್ತವೆ. ಈ ರೀತಿ ತನ್ನದೇ ಆದ ಜೀವಂತ ಅನುಭವಗಳಿಗೆ ನೇರವಾಗಿ ಮೈದೆರದು ವಾಕ್ ಪರಂಪರೆಯಲ್ಲಿಯೇ ಸಾಗಿಬಂದಿರುವ ಬುಲಾಯಿ ಹಾಡುಗಳಿಗೆ ಇತ್ತೀಚಿನ ಹತ್ತು ಹಲವು ಅಂಶಗಳೂ ಪ್ರೇರಕವಾಗಿರುವಂತೆ ಕಂಡುಬರುತ್ತದೆ. ಇಂದು ವಾಕ್ ಸಂಪ್ರದಾಯದ ಜೊತೆಗೆ ಅಕ್ಷರ ರೂಪದಲ್ಲಿ ಬರೆದಿಡುವ,

ಅಥವಾ ಧ್ವನಿ ಸುರುಳಿಗಳಲ್ಲಿ ದಾಖಲಿಸಿಡುವುದು ಹೆಚ್ಚಾಗಿರುವುದು ಗಮನಾರ್ಹ. ಜಾಗತೀಕರಣ, ಉದಾರೀಕರಣ ಹಾಗೂ ಖಾಸಗೀಕರಣದ ಈ ಸಂದರ್ಭದಲ್ಲಿ ಬುಲಾಯಿ ಹಾಡುಗಳು ಹಾಡುವುದಕ್ಕಿಂತ ಸಂಗ್ರಹಿಸುವ, ಬರೆದಿಡುವುದೇ ಅಧಿಕವಾದಂತೆ ಕಂಡುಬರುತ್ತಿದೆ. ಜೊತೆಗೆ ಒಂದು ಕಾಲದಲ್ಲಿ ಸೀಮಿತ ಪ್ರದೇಶದ ವಿಷಯಗಳಿಗೆ ಮಾತ್ರ ಸಂಬಂಧಿಸಿ ಅಂತಹವುಗಳ ಪ್ರೇರಣೆಯಿಂದ ಹೆಣ್ಣುಮಕ್ಕಳೇ ಕಟ್ಟಿ ಹಾಡುತ್ತಿದ್ದ ಹಾಡುಗಳನ್ನು ಇಂದೂ ಕಲಿತ ಪುರುಷರು ಸಹ ಇಂತಹ ಹಾಡುಗಳನ್ನು ಬರೆಯುತ್ತಿರುವುದು ಕಂಡುಬರುತ್ತದೆ. ಒಂದರ್ಥದಲ್ಲಿ ಪ್ರಚಾರ ಮಾಧ್ಯಮದಂತೆ ಈ ಹಾಡುಗಳನ್ನು ಬಳಸಿಕೊಳ್ಳುವುದನ್ನು ಕಾಣಬಹುದು. ಉದಾ: ಸಾಕ್ಷರತೆಯ ಪ್ರಚಾರಕ್ಕಾಗಿ ರಚಿಸಿರುವ ಬುಲಾಯಿ ಹಾಡು ಹೀಗಿದೆ.

ಸಂಗವ್ವ ನಿಂಗವ್ವ ಬಾರವ್ವ ಕಲ್ಲಪ್ಪ ಮಲ್ಲಪ್ಪ ಬಾರಪ್ಪ
ಅಮೀನಾಬೀ ನೀಬೀ ಬಾರೆ ಕೋಲೆಣ್ಣ ಕೋಲೆ
ಅಆಇಈ ಕಲಿಯಲು ಬಾರೆ ಓದುಬರಹ ಪಡೆಯಲು ಬಾರೆ
ದೇಶದ ದೀಪ ಬೆಳಗಲು ಬಾರೋ ಕೋಲೆಣ್ಣ ಕೋಲೆ
ಅಕ್ಷರ ಎಂಬುದು ಅರಿವಿನ ಬೆಳಕ ಮೇಲೇರಿ ಹೋಗುತಿ ಹೊಸಲೋಕಕ್ಕೆ
ಅಕ್ಷರ ಗೆಳೆಯರು ಕೊನೇ ತನಕ ಕೋಲೆಣ್ಣ ಕೋಲೆ
ಅಕ್ಷರವೇ ಅರಿವಿನ ಬುತ್ತಿಯು ಓದೇ ನಮಗೆ ಕೋಗಿಲೆಯು
ಬರಹವೇ ಬಿಡುಗಡೆ ತಂತ್ರವು ಕೋಲೆಣ್ಣ ಕೋಲೆ ....[೨೭]

ಹೀಗೆ ಜೀವಂತ ಅನುಭವಗಳಿಗೆ ನೇರವಾಗಿ ಮೈದೆರೆದು ಮೊನ್ನೆ ಮೊನ್ನೆವರೆಗೆ ವಾಕ್ ಸಂಪ್ರದಾಯದ ಪರಂಪರೆಯಲ್ಲೇ ಸಾಗಿ ಬಂದ ಬುಲಾಯ ಹಾಡುಗಳ ಸ್ವರೂಪ, ಹುಟ್ಟಿನ ಪ್ರೇರಕ ಪ್ರಚೋದಕ ಅಂಶಗಳೇ ಬೇರೆ ಬೇರೆಯಾಗಿ ಕಂಡುಬರುವುದು ಗಮನೀಯ ಅಂಶವಾಗಿದೆ. ಇದೇ ಕಾರಣದಿಂದ ಬುಲಾಯಿ ಹಾಡುಗಳು ಮಾನವಶಾಸ್ತ್ರ, ಮನೋವಿಜ್ಞಾನ, ಭಾಷಾ ವಿಜ್ಞಾನ, ಇತಿಹಾಸ, ಸಮಾಜಶಾಸ್ತ್ರ ಮುಂತಾದ ಮಾನವಿಕ ಅಧ್ಯಯನಕ್ಕೆ ಆಕರಗಳು, ಪಳೆಯುಳಿಕೆಗಳು ಆಗಬಹುದಾಗಿದೆ.

ನವವಸಾಹತುಶಾಹಿಯ ಈ ಸಂದರ್ಭದಲ್ಲಿ **ಎರಿಕ್ ಫ್ರಾಂ** ಹೇಳುವಂತೆ "ಮನುಷ್ಯನಿಗೆ ಸಿಕ್ಕಿರುವ ಹೆಚ್ಚಿನ ಸ್ವಾತಂತ್ರ್ಯದಿಂದಾಗಿ ಹೆಚ್ಚು ಒಂಟಿಯಾಗುತ್ತಿದ್ದಾನೆ.[೨೮], ಅದನ್ನು ಸರಿಪಡಿಸಲು ದೇಸಿಗೆ ಮರುಳಬೇಕೆಂಬ ಇಂದಿನ ಸಂದರ್ಭದಲ್ಲಿ 'ಬುಲಾಯಿ ಹಾಡುಗಳು' ತೋರುದೀಪಗಳಾಗಬಹುದು.

ಅಡಿ ಟಿಪ್ಪಣಿ

೧. ಡಾ॥ ದೇವೇಂದ್ರಕುಮಾರ ಹಕಾರಿ : ಜಾನಪದ ಸಾಮಾಜಿಕ ಕಥನಗೀತೆಗಳಲ್ಲಿ ದುಃಖಾತ ನಿರೂಪಣೆ, ೧೯೮೫, ಪುಟ ೧೬೯

೨. ಅದೇ

೩. ಅದೇ

೪. ಅದೇ

೫. ಡಾ॥ ಡಿ.ಬಿ.ನಾಯಕ : ಬುಲಾಯಿ ಹಾಡುಗಳು, ೨೦೦೧, ಪುಟ ೧೯

೬. ಡಾ॥ ದೇವೇಂದ್ರಕುಮಾರ ಹಕಾರಿ : ಜಾನಪದ ಸಾಮಾಜಿಕ ಕಥನಗೀತೆಗಳಲ್ಲಿ ದುಃಖಾತ ನಿರೂಪಣೆ, ೧೯೮೫, ಪುಟ ೧೭೩

೭. ಕಸ್ತೂರಿಬಾಯಿ ಮಾರುತಿ, ಮೈಲೂರ

೮. ಬಸಮ್ಮ ಭೀಮರಾವ ಮಂದಕನಳ್ಳಿ

೯. ಕಮಲಾಬಾಯಿ ಸಿಂದಬಂದಿಗಿ

೧೦. ಶಾಂತಮ್ಮಾ ಬಸಪ್ಪಾ ಹಳ್ಳಿಖೇಡ

೧೧. ಹೆಬ್ಬಾಳೆ ಜಗನ್ನಾಥ : ಸಂ. ಬೀದರ ಜಿಲ್ಲೆಯ ಬುಲಾಯಿ ಹಾಡುಗಳು, ೧೯೯೬, ಪುಟ ೧೦೯.

೧೨. ಮಲ್ಲಮ್ಮಾ ಶಾಂತವೀರ ಹಳ್ಳಿಖೇಡ

೧೩. ಹೆಬ್ಬಾಳೆ ಜಗನ್ನಾಥ : ಸಂ. ಬೀದರ ಜಿಲ್ಲೆಯ ಬುಲಾಯಿ ಹಾಡುಗಳು, ೧೯೯೬, ಪುಟ ೧೦೯-೧೦.

೧೪. ಶಾಂತಮ್ಮಾ ಬಸಪ್ಪಾ ಹಳ್ಳಿಖೇಡ

೧೫. ಪುತಳಾಬಾಯಿ ಬಸಯ್ಯಾ ಬಸವಕಲ್ಯಾಣ

೧೬. ಜಯಮ್ಮಾ ರಾಜಪ್ಪಾ ಕಾಸರತೂಗಾಂವ

೧೭. ಗೌರಮ್ಮಾ ಬಾಲಕುಂದಾ (ಬ.ಕ)

೧೮. ಚಿನ್ನಮ್ಮಾ ಯಲ್ಲಪ್ಪಾ ಪರತಾಪೂರ (ಬ.ಕ)

೧೯. ಭಾಗೀರಥಿ ವಿಶ್ವನಾಥ ಉಪ್ಪೆ, ಔರಾದ

೨೦. ಬಸಮ್ಮಾ ಭೀಮರಾವ ಸಂತಪೂರೆ

೨೧. ನಾಗಮ್ಮಾ ಶೆಟಗಾರ ಕೊಟಗ್ಯಾಳ

೨೨. ರತ್ನಮ್ಮಾ ಅಣ್ಣೆಪ್ಪಾ ಶಿವಪೂರ

೨೩. ಶ್ರೀ ನಾಗನಾಥ ಪ್ರಭಾಕರ್ : ಆತ್ಮಜ್ಞಾನ, ೨೦೦೨, ಪುಟ ೧೫೬-೫೭.

೨೪. ಬಸಮ್ಮ ನೀಲಕಂಠ ಸಸ್ತಾಪೂರ :

೨೬. ಚಂದ್ರಮ್ಮಾ ರೇವಣಪ್ಪಾ ಹಲಬರ್ಗೆ

೨೭. ಡಾ॥ ಕಾಶಿನಾಥ ಅಂಬಲಗೆ : ಕೌದಿ, ೧೯೯೩, ಪುಟ ೪೭

೨೮. ಡಾ॥ ಜಗನ್ನಾಥ ಹೆಬ್ಬಾಳೆ : ಸಂ. ಅಕ್ಷರ ಪ್ರೀತಿ, ೨೦೦೩, ಪುಟ ೪೫.

ಅಧ್ಯಾಯ - ೪

ಬುಲಾಯಿ ಹಾಡುಗಳ ಸಾಂಸ್ಕೃತಿಕ ನೆಲೆಗಳು

ಅಧ್ಯಾಯ - ೪

ಬುಲಾಯಿ ಹಾಡುಗಳ ಸಾಂಸ್ಕೃತಿಕ ನೆಲೆಗಳು

ಸಂಸ್ಕೃತಿ ಎಂಬ ಪದ ಸಾಹಿತ್ಯ, ಕಲೆ, ಧರ್ಮ, ನಾಗರಿಕತೆ, ಸಂಸ್ಕಾರ, ಶಾಂತಿ, ಸಮಾಜ ಜೀವನ, ರಾಷ್ಟ್ರ ಜೀವನ ಹೀಗೆ ಹಲವಾರು ಸಂಬಂಧಗಳಲ್ಲಿ ಪರಿಣಾಮಕಾರಿಯಾಗಿ ಬಳಕೆಯಾಗುವದನ್ನು ಕಾಣುತ್ತಲಿದ್ದೇವೆ.

ಸಂಸ್ಕೃತಿ-ಸಾಹಿತ್ಯ ಮಾನವನ ಬೆಳವಣಿಗೆಯ ಅಂತಃಸ್ಸಬಂಧದ ಪ್ರತಿಚ್ಛಾಯೆಗಳೆನ್ನ-ಬಹುದು. ಇದರಿಂದ ಸಾಹಿತ್ಯ ಮತ್ತು ಸಂಸ್ಕೃತಿಗೆ ಅನಿವಾರ್ಯವಾದ ಬದ್ಧತೆಯ ಸಂಬಂಧವು ಕಂಡು ಬರುತ್ತದೆ. ಸಾವಿರಾರು ವರ್ಷಗಳ ನಡವಳಿಕೆ ತಿಳಿವಳಿಕೆಗಳ ಫಲವಾಗಿ ಸಮಾಜಕ್ಕೆ ಕೂಡಿ ಬರುವ ಸಂಸ್ಕಾರ ವಿಷಯ ವಿಶೇಷವನ್ನು **ಸಂಸ್ಕೃತಿ** ಎಂದು ಕರೆಯಬಹುದು. ವ್ಯಕ್ತಿ ಮತ್ತು ಸಮಾಜ ಪರಸ್ಪರ ಹಿತದೃಷ್ಟಿಯಿಂದ ನಡೆಯುವುದು ಅಗತ್ಯ ಮತ್ತು ಅನಿವಾರ್ಯ. ವ್ಯಕ್ತಿ ಮತ್ತು ಸಮಾಜ ಅಪಾಯಕ್ಕೀಡಾಗದ ಹಾಗೆ ಸಮಾಜ ಜೀವನವೂ ಸುಗಮವಾಗಿ ನಡೆಯುವಂತೆ ಹಿನ್ನಲೆಯಾಗಿ ನಿಂತು ರಕ್ಷಿಸುವ ಮಂತ್ರಶಕ್ತಿ ಜನತಾ ಸಂಸ್ಕೃತಿ. ಒಂದು ದೇಶದಲ್ಲಿರುವ ವ್ಯಕ್ತಿಗಳ, ಕುಲಗಳ, ಗುಂಪುಗಳ, ಪದ್ಧತಿಗಳ, ಆಚಾರಗಳು, ನಂಬಿಕೆಗಳು ಇವೆಲ್ಲ ಜನತೆಯ ಸಂಸ್ಕೃತಿ ಹಲವು ವರ್ಷಗಳ ಅನುಭವದಿಂದ ಅನೇಕ ಋಷಿಗಳು, ಪ್ರವಾದಿಗಳು, ಶರಣರು,ಸಂತರು,ಕವಿಗಳು ತಮ್ಮ ಜೀವನದ ಅನುಭವಗಳನ್ನು ಮುಂದಿನವರಿಗೆ ಮಾರ್ಗದರ್ಶನವಾಗಲೆಂದು ಬೋಧನ ರೂಪವಾಗಿ ಗ್ರಂಥಗಳ ಮೂಲಕ ನಮಗೆ ಒದಗಿಸಿರುವುದು ಐತಿಹಾಸಿಕ ಸತ್ಯ. 'ಯಾವುದೇ ರಾಷ್ಟ್ರ ಅಥವಾ ಪ್ರದೇಶದ ಸಾಹಿತ್ಯವೇ ಬಲವಾದ ಸಾಮಗ್ರಿ. ಒಂದು ಸಂಸ್ಕೃತಿ ಮಿಡಿತ ಸಾಹಿತ್ಯದಲ್ಲಿರುತ್ತದೆ. ಸಂಸ್ಕೃತಿಯ ಹಲವು ರೂಪಗಳನ್ನು ಪ್ರಕಟಿಸುವ ಸಾಧನ ಸಾಹಿತ್ಯ'[೧] ಎಂಬ ಯು. ಎನ್. ಸಂಗನಾಳ ಮತರ ಅಭಿಪ್ರಾಯವು ಗಮನಾರ್ಹವಾಗಿದೆ. ಜನಪದ ಸಾಹಿತ್ಯ ವಾಕ್ ರೂಪದಲ್ಲಿ ಹರಿದು ಬಂದರೂ ಮೇಲಿನ ಅಭಿಪ್ರಾಯಕ್ಕೆ ಅದು ಹೊರತಾದುದಲ್ಲ. ಹೀಗಾಗಿ ಬೀದರ ಜಿಲ್ಲೆಯ ಬುಲಾಯಿ ಹಾಡುಗಳು ಸಹ ತಮ್ಮದೇ ಆದ ಸಂಸ್ಕೃತಿಯನ್ನು ಹಾಗೂ ಅದರ ಹಲವು ರೂಪಗಳನ್ನು ಪ್ರಕಟಿಸುವ ಸಾಧನ ಸಾಹಿತ್ಯವೆಂದು ಹೇಳಬಹುದು.

ಕನ್ನಡ ಜನಪದ ಗೀತೆಗಳಂತೆ ಬುಲಾಯಿ ಹಾಡುಗಳು ರಾಮಾಯಣ, ಮಹಾಭಾರತಗಳ, ಐತಿಹಾಸಿಕ ಘಟನೆಗಳ, ಸಾಮಾಜಿಕ ಹಿನ್ನಲೆಗಳಲ್ಲಿ ರಚಿತವಾದಂತೆ ಕಂಡು ಬರುತ್ತವೆ. ಈ ಹಾಡುಗಳಲ್ಲಿ ಸುಖಾಂತಗಳು ಉಂಟು, ದುಃಖಾಂತಗಳೂ ಉಂಟು. ಸೂಕ್ಷ್ಮವಾಗಿ ಪರಿಶೀಲಿಸಿದರೆ ದುಃಖಾಂತವೇ ಆಗಿರುವ ಅನೇಕ ಬುಲಾಯಿ ಹಾಡುಗಳು ಆಯಾ ಸಂದರ್ಭಗಳ ಕೊನೆಯಲ್ಲಿ ದೇವತೆಗಳ ಪ್ರವೇಶವೋ ಅಥವಾ ದುರಂತಕ್ಕೆ ಈಡಾದ ವ್ಯಕ್ತಿಯ ವೈಭವೀಕರಣದಿಂದಾಗಿ ಪರಿವರ್ತಿತಗೊಳ್ಳುವ ದೈವಿ ಸ್ವರೂಪದಿಂದಲೋ ಸುಖಾಂತವಾಗುವಂತೆ ಕಂಡು ಬರುತ್ತವೆ.

ಉದಾ: ಚಿಕ್ಕ ಚೆನ್ನಮ್ಮನ ಹಾಡಿನಲ್ಲಿ ಸತ್ತ ಹೆಣದೊಂದಿಗೆ ಮದುವೆಯಾದ ಮೇಲೆ ಇನ್ನೇನು ಕಿಚ್ಚು ಕೊಡಬೇಕೆನ್ನುವಷ್ಟರಲ್ಲಿಯೇ ಧಾರಾಕಾರ ಮಳೆ ಬಂದು ಎಲ್ಲರೂ ಚೆಲ್ಲಾಪಿಲ್ಲಿಯಾಗಿ ಓಡಿ ಹೋದಾಗ ಸತ್ತ ಗಂಡನ ಜೊತೆಯಲ್ಲಿ ಕಾಡಿನಲ್ಲಿ ಚಿಕ್ಕ ಚೆನ್ನಮ್ಮ ಒಬ್ಬಳೇ ಉಳಿಯುತ್ತಾಳೆ. ಆಗ ಅವಳು ಬಸವಣ್ಣನ ಮೂರ್ತಿಯನ್ನು ಮಣ್ಣಿನಿಂದ ಮಾಡಿ ತನ್ನೆಲ್ಲ ದುಃಖವನ್ನು ತೋಡಿಕೊಳ್ಳುತ್ತಾ ಪರಿಪರಿಯಾಗಿ ದುಃಖಿಸುತ್ತಾಳೆ. ನಂತರ ಹಸಿಗಡಲಿ ಸಕ್ಕರಿಯನ್ನು ಮಣ್ಣಿನ ಬಸವನ ಮೂರ್ತಿಯ ಬಾಯಲ್ಲಿಡುತ್ತಾಳೆ. ಆಗ ಬಸವನ ಬಾಯಲ್ಲಿ ಬುರುಗು ಬರುತ್ತದೆ. ಆ ಬುರುಗನ್ನು ಸತ್ತ ಗಂಡನ ಬಾಯಿಗೆ ಹಚ್ಚಲು ಅವನು ಜೀವಂತನಾಗುತ್ತಾನೆ. ತದನಂತರ ಚೆನ್ನಮ್ಮ ತನ್ನನ್ನು ಮದುವೆಯಾದ ಮಡದಿ ಎಂದು ತಿಳಿದ ಮೇಲೆ ಅವನಿಗೆ ಅವಳಲ್ಲಿ ಪ್ರೀತಿ ಹುಟ್ಟುತ್ತದೆ. ಅದೇ ಸಂದರ್ಭದಲ್ಲಿ ಶರಣರು ಹೂವಿನ ಥೇರನ್ನು ಸ್ವರ್ಗದಿಂದ ತೆಗೆದುಕೊಂಡು ಬರುತ್ತಾರೆ. ಇದನ್ನೆಲ್ಲಾ ಬುಲಾಯಿ ಹಾಡಿನಲ್ಲಿ ಈ ರೀತಿಯಾಗಿ ಹಾಡುವದನ್ನು ಕಾಣಬಹುದು.

ಹಸಿಗಡಲಿ ಸಕ್ಕರಿ ಬಸವನ ಬಾಯಲಿಟ್ಟು
ಹಸಿದಿದ್ದಿಯೇನೋ ಬಸವ ಮೆಲಿಯ ಬಾರದಿತ್ತೆ ಕೊಲೆಣ್ಣ ಕೋಲೆ
ಬಸವನ ಬಾಯಲ್ಲಿ ಬುರುಗು ಬರಲು
ತನ್ನ ಪುರುಷನ ಬಾಯಿಗೆ ಹಚ್ಚುತ್ತಾಳೆ ಕೋಲೆಣ್ಣ ಕೋಲೆ
ಪುರುಷನ ಬಾಯಿಗೆ ಹಚ್ಚಲು ಆ ಬುರುಗ
ಶಿವ ಶಿವನಂತೆ ಎದ್ದಾರೆ ಪತಿ ಪುರುಷ ಕೋಲೆಣ್ಣ ಕೋಲೆ
ಸಾಸಿಗಣ್ಣಿನ ಸೀರಿ ರೇಷಮಿ ಕುಬ್ಬಸ
ಅಡಿದಾಗ ಯ್ಯಾರೋ ಬಡವರ ಮಗಳು ಕೋಲೆಣ್ಣ ಕೋಲೆ
ಬಡವರ ಮಗಳು ನಾನು ಬಡವರ ಮಡದಲ್ಲ
ನಡದಂತ ಕತಿಯ ಹೇಳ್ಯಾಳೆ ಕೋಲೆಣ್ಣ ಕೋಲೆ
ಸಾವಿತ್ರಿ ಏನ ಮಡದಿ ಶ್ಯಾಲರ ಹಚ್ಚಗೊಳ್ಳ
ಬಸವನ ಸೇವೆ ಮಾಡಿ ದಣಿದಿದ್ದಿ ಕೋಲೆಣ್ಣ ಕೋಲೆ
ಶರಣರು ಬಂದಾರ ಸಾಲ್ಹತ್ತಿ ನಿಂತಾರ
ಅತ್ತ ಹೂವಿನ ಥೇರ ನಿಲುವ್ಯಾರೆ ಕೋಲೆಣ್ಣ ಕೋಲೆ [೨]

೨) ಲೋಹಿತಾಶ್ವನ ಹಾಡಿನಲ್ಲಿ ಸಾಕ್ಷಾತ್ ಶಿವ ಪಾರ್ವತಿಯರೇ ಬಂದು ಹರಿಚಂದ್ರನಿಗೆ ಏನು ಬೇಕು? ಬೇಕಾದದ್ದು ಬೇಡು ಎಂದು ಕೇಳಿದಾಗ, ಸತ್ತ ಮಗನನ್ನು ಬೇಡಿ, ಬದುಕಿಸಿಕೊಳ್ಳುವುದು ಕಂಡು ಬರುತ್ತದೆ. ಅದು ಬುಲಾಯಿ ಹಾಡಿನಲ್ಲಿ ಈ ರೀತಿಯಲ್ಲಿ ಇದೆ.

ನಿನ್ನ ಭಾವಕ್ಕೆ ಮೆಚ್ಚಿದೆನು ಹರಿಚಂದರ
ಏನು ಬೇಡುತಿ ಬೇಡು, ಕೊಡತೀನಿ ನಿನಗೆ ಕೋಲು ಕೊಲೆಣ್ಣ ಕೋಲ

ಸಿರಿ ಸಂಪತ್ತಿನ ಹೇಸಿ ಆಸಿ ಏನಗಿಲ್ಲ

ಇದ್ದಂತ ಲೋಹಿತನ್ನ ಇದ್ದಾಂಗ ಮಾಡಯ್ಯ ಕೋಲು ಕೊಲೆಣ್ಣ ಕೋಲ

ಇದ್ದಂತ ಲೋಹಿತನ ಇದ್ದಾಂಗ ಮಾಡ್ಯಾರ

ಇದ್ದಂತೆ ಮನೆತನವ ಇದ್ದಾಂಗ ಮಾಡ್ಯಾರ ಕೋಲು ಕೋಲೆಣ್ಣ ಕೋಲ[೩]

ಬುಲಾಯಿ ಹಾಡುಗಳು ಸಾಮೂಹಿಕ ಸೃಷ್ಟಿಯಾಗಿರುವದರಿಂದ ಅವುಗಳನ್ನು ಯಾರೋ ಬರೆದಿಟ್ಟಂತೆ ಕಂಡು ಬರುವುದಿಲ್ಲ. ಅವು ಕೇವಲ ಹೆಣ್ಣು ಮಕ್ಕಳ ವಾಗ್ರೂಪದಲ್ಲಿಯೇ ಚಲಾವಣೆಗೊಂಡು ಮುಂದೆ ಬಂದಂತೆ ಕಂಡು ಬರುತ್ತವೆ. ಇತ್ತೀಚಿಗೆ ಹವ್ಯಾಸಿ ಪುರುಷರು ಬುಲಾಯಿ ಹಾಡುಗಳನ್ನು ತಮ್ಮ ಉದ್ದೇಶಗಳ ಪ್ರಚಾರಕ್ಕಾಗಿ ಬರೆದಿರುವುದು ಕಂಡು ಬಂದರೂ, ಬೆರಳೆಣಿಕೆಯಷ್ಟು ಮಾತ್ರ. ಅಂತಹ ಹಾಡುಗಳಿರುವುದು ಗಮನೀಯ.

ಉದಾ: ನಗುನಗುತ್ತ ಕುಂತಿರಿ ಜನ

ನವಿಲಿಂಗ ಕುಣಿತದ ಮನ

ಹಾಡ್ತಿವಿ ಒಂದು ಕವನ ಕೋಲೆಣ್ಣ ಕೋಲ...

ಅಕ್ಷರದ ಪುರೋಹಿತರು ಅವರು

ಸಮತೆ-ಯೋಗ ನಮಗೆ ಉಸಿರು.

ಓದು ಬಹರವಾಗಿ ನಮಗೆ ಗುರು ಕೋಲೆಣ್ಣ ಕೋಲ[೪]

ಬುಲಾಯಿ ಹಾಡುಗಳನ್ನು ನಾಗಪೂಜೆಯ ಸಂದರ್ಭದಲ್ಲಿ ಹಾಡುವುದರಿಂದ ಇವುಗಳಲ್ಲಿ ಸಮಾಜ ಧರ್ಮ, ಶ್ರದ್ಧೆ, ನಂಬಿಕೆ, ಸಂಪ್ರದಾಯ, ಆಚರಣೆ ಪ್ರತಿಯೊಂದರಲ್ಲೂ ಒಂದಲ್ಲ ಒಂದು ಬಗೆಯ ದೈವೀ ಛಾಯೆ ಕಂಡು ಬರುತ್ತದೆ. ಜನಪದರಲ್ಲಿ ದೈವೀ ಛಾಯೆ ಪ್ರಭಾವ ಶಾಲಿಯಾಗಿದ್ದು, ಅವರನ್ನು ಸಾಮಾಜಿಕವಾಗಿ, ಧಾರ್ಮಿಕವಾಗಿ ನಿಯಂತ್ರಿಸಿ ಸೂತ್ರಿಸಿ ಒಂದು ದಿಕ್ಕಿನಲ್ಲಿ ನಡೆಸಿಕೊಂಡು ಬಂದಿದ್ದು, ಒಂದು ಜನಾಂಗವನ್ನು ನಿಯಂತ್ರಿಸುವ ಈ ಶಕ್ತಿಗಳು ಮೊದ ಮೊದಲು ಕುಲದೇವತಾರಾಧನ ಕ್ರಮದಲ್ಲಿ ಹೊಕ್ಕು ಮಾಟದ ರೂಪಧಾರಣೆ ಮಾಡಿರಬೇಕೆಂಬ ಸಮಾಜ ತಜ್ಞರ ಊಹೆ ತುಂಬಾ ಸೂಕ್ತವೆನಿಸುತ್ತದೆ.

ಮಾಟಗಳ ಕುರಿತಾದ ಡಾ. ದೇವೇಂದ್ರಕುಮಾರ ಹಕಾರಿಯವರ ಅಭಿಪ್ರಾಯವು ಅತ್ಯಂತ ಮಹತ್ವದ್ದೆನಿಸುತ್ತದೆ. 'ಧರ್ಮ ಎನ್ನುವುದು ಸಮಾಜ ವ್ಯವಸ್ಥೆಯ ಪ್ರಧಾನ ಸಂರಚನಾತ್ಮಕ ಶಕ್ತಿಯಾಗುವ ಮೊದಲು ಆದಿಮಾನವರಲ್ಲಿ ರೂಢಿಯಲ್ಲಿತ್ತು. ಈ ಮಾಟಗಳ ವಿಷಯ ತುಂಬ ಕುತೂಹಲಕಾರಿ. ವಿದ್ಯಾರ್ಥಕ ಮಾಟ, ನಿಷೇಧಾತ್ಮಕ ಮಾಟಗಳು ಅಪ್ಷೇಕ್ಷಿತ ಅಥವಾ ಉದ್ದೇಶಿತವಾದ ಗುರಿಯನ್ನು ಹೊಂದಲು ಇಂಥದನ್ನೇ ಮಾಡು ಎಂದು ಆಜ್ಞೆ ನೀಡುವುದು ವಿದ್ಯರ್ಥಕ ಮಾಟ. ಸಾಮೂಹಿಕ ಜೀವನದ ಮೇಲೆ ಆಗಬಹುದಾದ ದುಷ್ಪರಿಣಾಮವನ್ನು ತಡೆಗಟ್ಟುವುದಕ್ಕಾಗಿ ಇಂಥದನ್ನು ಮಾಡಬೇಡ ಎಂದು ಹೇಳುವುದು ನಿಷೇಧಾತ್ಮಕ ಮಾಟ. ಬಹುಶಃ ಇದು ಆದಿಮಾನವ ಸಮಾಜವನ್ನು ಕಟ್ಟಿಗೆ ಒಳಪಡಿಸುವ ಪ್ರಥಮ ಹಂತವಾಗಿರಬೇಕು.

ವೃಂದದ ಪ್ರಬಲ ವ್ಯಕ್ತಿಗಳು ಆರ್ಥಿಕ ಮುಂತಾದ ಕಾರಣಗಳಿಂದ ತಮಗೆ ಅಧೀನರಾದ ತಮ್ಮದೇ ಸಮುದಾಯದ ಇತರ ವ್ಯಕ್ತಿಗಳ ಮೇಲೆ ಈ ಆಜ್ಞೆಗಳನ್ನು, ವಿಧಿಗಳನ್ನು, ನಿಷೇಧಗಳನ್ನು ಹೇರುತ್ತಾ ಬಂದಾಗ ಅವುಗಳನ್ನು ಜನ ನಂಬುತ್ತಾ ಬಂದರು. ಆಚರಿಸುತ್ತ ಬಂದರು. ಹೀಗೆ ಕಾಲಾನುಕ್ರಮದಲ್ಲಿ ಈ ವಿಧಿ ನಿಷೇಧಗಳು ಒಳಗೆ ಹರಡಿ ಕಟ್ಟು ಕಟ್ಟಳೆಗಳಾಗಿ, ನಂಬಿಕೆಗಳಾಗಿ, ರೂಪುಗೊಂಡವು. ಅಲ್ಲದೇ ಈ ಜನಪದ ನಂಬುಗೆಗಳ ಬೇರುಗಳದ್ದು ತಳ ಹತ್ತದ ಆಳ' ಎಂದು ಜನಪದ ನಂಬಿಕೆ, ವಿಧಿ, ನಿಷೇಧ ಮುಂತಾದವುಗಳ ಹುಟ್ಟು, ಆಚರಣೆಗಳು ಹೇಗೆ ಬೆಳೆದು ಬಂದವು ಎನ್ನುವುದನ್ನು ಕೂಲಂಕುಷವಾಗಿ ವಿವರಿಸಿದ್ದಾರೆ.

ಪ್ರಪಂಚದ ಎಲ್ಲಾ ಜನಾಂಗಗಳಲ್ಲಿಯೂ ಅವರವರ ಆದಿಮಾನವ ಗುಂಪುಗಳು ಕಾಲದಿಂದ ಧರ್ಮಾಧಾರಿತ ಆಚರಣೆ, ನಂಬುಗೆಗಳು ಪ್ರಭಾವಕಾರಿಯಾಗಿರುವದನ್ನು ಕಾಣುತ್ತೇವೆ. ಪ್ರಾಚೀನ ಮಾನವನ ವಿಚಿತ್ರ ಸಹಜ ಮತ್ತು ಅಸಹಜವೆನಿಸುವ ಆರಾಧನೆಗಳ ಸಂಪ್ರದಾಯಗಳಲ್ಲಿ ನಂಬಿಕೆಗಳ ಹೊಳಹುಗಳನ್ನು ಕಾಣಬಹುದು.

ಉದಾ: ಗ್ರೀಕರ ತಿಮಿಂಗಿಲ ದೇವತಾ ಪೂಜೆ, ಭಾರತದಲ್ಲಿಯ ಕ್ಷುದ್ರ ದೇವತೆ, ಭೂತ(ಪಂಜರ್ಲಿ)ಗಳ ಆರಾಧನೆಗಳಿಂದ ಮೊದಲುಗೊಂಡು ಗೋಪೂಜೆಯವರೆಗಿನ ಸಂಪ್ರದಾಯಗಳು ಇತ್ಯಾದಿ. ಇವುಗಳಲ್ಲಿ ನಾಗಾರಾಧನೆಯೂ ಒಂದಾಗಿದೆ.

ನಾಗಪೂಜೆ, ಹಿನ್ನಲೆಯ ಬುಲಾಯಿ ಹಾಡುಗಳ ಸಾಂಸ್ಕೃತಿಕ ನೆಲೆಗಳಾದ ಇತಿಹಾಸ, ಸಮಾಜ, ಧರ್ಮ,ಶಿಕ್ಷಣ, ಸಾಹಿತ್ಯ, ಆರ್ಥಿಕತೆ, ಸಂಪ್ರಾದಾಯಗಳಲ್ಲಿ ಬುಲಾಯಿ ಸಂಸ್ಕೃತಿಯ ವಿವೇಚನೆಯನ್ನು ಕಾಣಬಹುದಾಗಿದೆ. ಏಕೆಂದರೆ ನಮ್ಮ ಬದುಕಿನ ಸಾಧಿತ ಸಂಸ್ಕೃತಿಗೆ ಪ್ರಾಚೀನ ನಡವಳಿಕೆಯ ನಂಬುಗೆಗಳ ಎರಕಗಳೇ ಕಾರಣವೆನ್ನಬಹುದು. ಅವು ಹತ್ತು ಹಲವು ವಿಧದಲ್ಲಿ ಬದುಕನ್ನು ಕಾಡುತ್ತ, ರೂಪಕೊಡುತ್ತ, ಅರ್ಥ ಕಲ್ಪಿಸುವಂತಹವು. ಬದುಕನ್ನು ಸಹನೀಯವಾಗಿಸಿದ **ಬುಲಾಯಿ ಸಂಸ್ಕೃತಿಯ ನೆಲೆಗಳನ್ನು** ಈ ರೀತಿಯಾಗಿ ವಿಂಗಡಿಸಬಹುದು.

೧) ಐತಿಹಾಸಿಕ ಘಟನೆಗಳು ಹಾಗೂ ರಾಜಕೀಯ ವಾತಾವರಣ

೨) ಸಾಮಾಜಿಕ ಸಂದರ್ಭಗಳು   ೩) ಧಾರ್ಮಿಕ ವ್ಯವಸ್ಥೆ

೪) ಆರ್ಥಿಕ ಸ್ಥಿತಿಗತಿ   ೫) ಸುಸಂಸ್ಕೃತಿ ಬದುಕು

೬) ಜನರ ಮನೋಭಾವಗಳು   ೭) ಸಾಹಿತ್ಯಕ ಹಿನ್ನಲೆ

೧) ಐತಿಹಾಸಿಕ ಘಟನೆಗಳು ಹಾಗೂ ರಾಜಕೀಯ ವಾತಾವರಣ :

ಹಿಂದೆ ಆಗಿ ಹೋದ ಮಹತ್ವದ ಘಟನೆಗಳು ಇತಿಹಾಸದ ಪ್ರಪಂಚಕ್ಕೆ ಸೇರುತ್ತವೆ. ಕೆಲವು ಮಹತ್ವದ ಘಟನೆಗಳು ಬದುಕಿನ ಯಾವುದೇ ಕ್ಷೇತ್ರದ ಮೇಲೆ ಪ್ರಭಾವ ಬೀರಿದ್ದರೆ ಅದನ್ನು ಜನರ ಮನಸ್ಸಿನಿಂದ ದೂರ ಮಾಡುವುದು ಕಷ್ಟ ಸಾಧ್ಯ. ಹೀಗಾಗಿ ಆ ಘಟನೆಗಳು

ಜನಪದ ಮನಸ್ಸಿನಲ್ಲಿ ಬೇರೂರಿ ಕಥೆ, ಕವನಗಳ ಮೂಲಕ ಅಭಿವ್ಯಕ್ತಿಯನ್ನು ತಾಳಿ, ಅವರ ಮಧ್ಯದಲ್ಲಿ ಜೀವಂತವಾಗಿರುತ್ತವೆ. ಇದಕ್ಕೆ ಬುಲಾಯಿ ಹಾಡುಗಳೂ ಹೊರತಾಗಿಲ್ಲ. ಇಂತಹ ಹಾಡುಗಳು ವಿರಳವಾಗಿ ಕಂಡು ಬಂದರೂ ಅವು ಇತಿಹಾಸದ ಆಯಾ ಕಾಲದ ಮೌಲ್ಯಗಳನ್ನು, ರಾಜಕೀಯ ಚಿತ್ರಣಗಳನ್ನು ಸ್ಪಷ್ಟವಾಗಿ ನೀಡುತ್ತವೆ.

ಕನ್ನಡ ಜಪದರು ಆದಿಯಿಂದಲೂ ಹುಟ್ಟು ಕಲಿಗಳು,ಕೊಡುಗೈ ವೀರರು ಎಂಬುವದನ್ನು ಸಾಹಿತ್ಯ ಹಾಗೂ ಶಾಸನಗಳಲ್ಲಿ ಕಾಣಬಹುದು. ‘ವೀರ ಹಾಗೂ ತ್ಯಾಗ ಗುಣಗಳು ಸನಾತನ ಭಾರತೀಯರ ಜೀವನದ ಎರಡು ಮುಖ್ಯ ಮೌಲ್ಯಗಳು. ಸಮಸ್ತ ಭಾರತದ ಹಾಗೂ ಬಹುಪಾಲು ಆಗ್ನೇಯ ಏಷ್ಯಾದ ಮಹಾ ಕಾವ್ಯಗಳೂ, ಪುರಾಣ, ಪುಣ್ಯಕತೆ, ಪಾರಾಯಣ ಗ್ರಂಥ ಎಲ್ಲವೂ ಆಗಿರುವ ರಾಮಾಯಣ, ಮಹಾಭಾರತಗಳ ಕಥೆಗಳು ಮೂಲತಃ ಜಾನಪದೀಯವಾದವು ಎಂಬುದನ್ನು ತಜ್ಞರು ಒಪ್ಪಿದ್ದಾರೆ. ಇದೇ ರೀತಿಯಲ್ಲಿ ವಿಶ್ವದ ಇತರ ಪ್ರಸಿದ್ಧ ಮಹಾಕಾವ್ಯಗಳೂ ಮೂಲಭೂತವಾಗಿ ವಿಶಾಲಾರ್ಥದಲ್ಲಿ ಜನಪದ ಮಹಾಕಾವ್ಯಗಳೇ ಹೌದು ಎನ್ನುವವರಿದ್ದಾರೆ. ಇವು ಯುಗಾಂತರಗಳಲ್ಲಿ ಬೆಳೆಯುತ್ತ ಬಂದ ವಿವಿಧ ಪ್ರಾಂತೀಯ ಭಾಷಾ ಭೇದಗಳಿಂದಲೂ ಹೊಸ ಅಂಶಗಳಿಂದಲೂ, ವೈವಿಧ್ಯದಿಂದಲೂ ಕೂಡಿ ಬಹುಜನಪ್ರೀಯವಾಗಿವೆ. ಅವುಗಳಲ್ಲಿ ಮುಖ್ಯವಾಗಿ ವೀರ ಮತ್ತು ತ್ಯಾಗದ ಹಲವು ನಿದರ್ಶನಗಳಿವೆ’[೭] ಎಂಬ ಅಭಿಪ್ರಾಯವು ಸೂಕ್ತವೆನಿಸುತ್ತದೆ.

ವೀರ ಹಾಗೂ ತ್ಯಾಗ ಗುಣಗಳು ನಮ್ಮ ಜನತೆಯ ಮನ ಮನದ ಆದರ್ಶಪೂರ್ಣ ಮೌಲ್ಯಗಳು, ಜೋಡು ನಂದಾದೀವಿಗೆಗಳು ಅವರ ಸಂಸ್ಕೃತಿಯ ಅಮರ ಸಂಕೇತಗಳು ಎಂಬುದು ವಿದ್ವಾಂಸರ ಅಭಿಪ್ರಾಯ. ವೀರ- ವೈರಾಗ್ಯ, ಭೋಗ- ತ್ಯಾಗಗಳ ನಡುವೆ ಸಾಮರಸ್ಯವನ್ನು, ಸಮನ್ವಯವನ್ನು ಸಾಧಿಸಿ, ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು, ಸನಾತನವಾದರೂ ನೂತನ ಸಂಸ್ಕೃತಿಯನ್ನು ರೂಪಿಸಿಕೊಂಡಿದ್ದು, ಹಿಂದು ಧರ್ಮದ ಭಾರತೀಯತೆಯ ಅಪೂರ್ವ ಸಿದ್ಧಿ. ಪಾಶ್ಚಾತ್ಯ ಸಂಸ್ಕೃತಿಯಲ್ಲಿ, ಮಹಾಕಾವ್ಯಗಳಲ್ಲಿ ಈ ಸಮನ್ವಯಕ್ಕಿಂತ ಮೇಲಾಗಿ ವೀರ, ಭೋಗ, ಸಾಹಸಗಳಿಗೆ ಪ್ರಾಧಾನ್ಯತೆ ಕಂಡು ಬರುತ್ತದೆ. ಅಲ್ಲಿ ಅಧ್ಯಾತ್ಮಕ್ಕಿಂತ ಭೌತಿಕವಾದಕ್ಕೆ ಬೆಂಬಲ ಹೆಚ್ಚಾಗಿರುವುದು ಕಂಡು ಬರುತ್ತದೆ.

‘ರಾಮ, ಲಕ್ಷ್ಮಣ, ಸೀತೆ, ಸಾವಿತ್ರಿಯರಂತೆ, ಕರ್ಣ,ಧರ್ಮರಾಯ, ದ್ರೌಪದಿ, ಅರ್ಜುನ, ಅಭಿಮನ್ಯು, ಹರಿಶ್ಚಂದ್ರ, ಕೃಷ್ಣಾ, ವಿದುರ ಮುಂತಾದ ವ್ಯಕ್ತಿಗಳಂತೆ ವೀರ, ತ್ಯಾಗ, ಶೀಲ, ಸೌಭಾಗ್ಯದಿ ಗುಣಾದರ್ಶಗಳನ್ನು ತಮ್ಮ ಬಾಳಿನಲ್ಲಿ ಹಾಸುಹೊಕ್ಕಾಗಿಸಿಕೊಂಡು ಬಾಳ ಬೆಳಗುವವರು ಜನಮನದಲ್ಲಿ ಶಾಶ್ವತವಾಗಿ ನೆಲೆಸುತ್ತಾರೆ. ಮಹಾಕಾವ್ಯಗಳೆಂದು ಮನ್ನಣೆ ಗಳಿಸುತ್ತಾರೆ’[೮] ಎಂಬ ಅಭಿಪ್ರಾಯವರು ಗಮನಾರ್ಹವಾಗಿದೆ. ತಮ್ಮ ರಾಮ, ಭೀಮ, ಸೀತೆ, ಕೃಷ್ಣ, ಧರ್ಮ ಮುಂತಾದ ಹೆಸರುಗಳನ್ನಿಟ್ಟು, ತಮ್ಮ ಬಗೆಗಿನ ಪ್ರೀತಿ-ವಿಶ್ವಾಸಗಳನ್ನು ಮೊಳೆಸುವಂತೆ ಪ್ರಚೋದಿಸುತ್ತ ಸತ್ತರೂ ಬದುಕುತ್ತಾರೆ. ಬದಲಾಗಿ ಬದುಕಿನಲ್ಲಿ ಹೇಡಿಗಳಾಗಿ,

ಲೋಭಿ-ಸ್ವಾರ್ಥಿಗಳಾಗಿ ಇರುವವರು ಎಷ್ಟೇ ಮೇಲಿನ ಪದವಿ ಭೋಗ-ಭಾಗ್ಯಗಳನ್ನು ಪಡೆದಿದ್ದರೂ ಲೆಕ್ಕಕ್ಕೆ ಬಾರದೆ ಹೋಗುತ್ತಾರೆ,ಅಥವಾ ಕೆಟ್ಟ ಆದರ್ಶಗಳಾಗಿ ನಿಲ್ಲುತ್ತಾರೆ.

ಉದಾ: ರಾವಣ,ದುರ್ಯೋಧನ, ಶಕುನಿ ಇತ್ಯಾದಿಯಾದ ಹೆಸರಿಡುವವರು ಅಪರೂಪ. ಕನ್ನಡ ನಾಡಿನಲ್ಲಿ ಮಾತ್ರವೇ ಅಲ್ಲದೇ ಭಾರತದಾದ್ಯಂತ ಊರೂರಿನಲ್ಲೂ ವಿಶಿಷ್ಟವಾದ ಬೆಟ್ಟ, ಗುಡ್ಡ, ಕಾಡು, ಕಣಿವೆಗಳಲ್ಲೂ ಸೀತೆ-ರಾಮರು, ಪಾಂಡವರು ಬಂದು ವಾಸ ಮಾಡಿದರು ಎಂಬ ನಂಬಿಕೆ ಜನತೆಯಲ್ಲಿ ಪ್ರಬಲವಾಗಿ ಕಂಡು ಬರುತ್ತದೆ. ಇವು ಐತಿಹಾಸಿಕವಾಗಿ ಅಲ್ಲದಿದ್ದರೂ ಐತಿಹ್ಯಗಳಾಗಿರುವುದು ಕಂಡು ಬರುತ್ತದೆ. ಇಂಥ ಮಹಾವ್ಯಕ್ತಿಗಳಿಗೆ ಎಂದೂ ಸಾವು ಇರದೆನ್ನಬಹುದು.

ಅಂತೆಯೇ ಬುಲಾಯಿ ಹಾಡುಗಳಲ್ಲಿ ಕಂಡು ಬರುವ **ಧರ್ಮ ಪ್ರಕಾಶ, ರಾಚೋಟಿ ಸ್ವಾಮಿ, ಗೋರಟ ಮಠಪತಿ, ನಾಗಪ್ಪ ಹಳೆಂಬರ, ರಾಚಯ್ಯ ಶಂಕರೆಪ್ಪ ಪತಂಗೆ, ಬಸಪ್ಪ ಪೋಲಿಸ್ ಗೌಡ, ಗುರುಪಾದಪ್ಪ**ಮುಂತಾದವರು ರಜಾಕಾರರ ಹಾವಳಿಯಲ್ಲಿ ವೀರಾವೇಶದಿಂದ ಹೋರಾಡಿದವರು. ಕೆಲವರು ವೀರ ಮರಣವನ್ನಪ್ಪಿದವರು. ಇಂದಿಗೂ ಬೀದರ ಜಿಲ್ಲೆಯ ಅದರಲ್ಲೂ ಗೋರಟಾದ ಜನಮನದಲ್ಲಿ ನೆಲೆಸಿರುವುದು ಅವರ ವೀರ ಮತ್ತು ತ್ಯಾಗ, ಬಲಿದಾನಗಳೆಂಬುದು ಮಹತ್ವದ್ದಾಗಿದೆ. ಜಲಿಯನ್‌ವಾಲಾಬಾಗ ದುರಂತದಂತಿರುವ ಗೋರಟಾದಲ್ಲಿಯ ರಜಾಕಾರರ ಗೋಲಿಬಾರಿನ ಘಟನೆಯನ್ನು ಇಂದಿಗೂ ಬುಲಾಯಿ ಹಾಡಿನಲ್ಲಿ ಕೇಳುವ ಪ್ರತಿಯೊಬ್ಬರು ಕಣ್ಣೀರು ಸುರಿಸುವುದು ಕಂಡು ಬರುತ್ತದೆ. ಜೊತೆಗೆ ರಜಾಕಾರರ ವಿರುದ್ಧ ಹೋರಾಡಿದವರ ಹೆಸರುಗಳನ್ನು ಹೆಮ್ಮೆಯಿಂದ ಹೇಳಿ ಗೌರವಿಸುವುದೂ ಕಂಡು ಬರುತ್ತದೆ. ರಜಾಕಾರರೊಂದಿಗೆ ಹೋರಾಡಿದವರ ಮನೆತನದವರಿಗೆ ಅದೊಂದು ಅತ್ಯಂತ ಹೆಮ್ಮೆಯ ಸಂಗತಿಯಾಗಿದ್ದು, ಅವರಲ್ಲಿ ಆ ಗುಣಗಳ ಬಗ್ಗೆ ಅಭಿಮಾನವು ಎದ್ದು ಕಾಣುತ್ತದೆ. ಅದರಂತೆ ಬಸವಕಲ್ಯಾಣದ ಧರ್ಮ ಪ್ರಕಾಶಕರು ಆರ್ಯ ಸಮಾಜ ಬಿಟ್ಟು ಮತಾಂತರ ಹೊಂದಲು ನಿರಾಕರಿಸಿದ ಕಾರಣ ತುರುಕರ ಒಳ ಸಂಚಿಗೆ ಬಲಿಯಾದ ವೀರ ಆರ್ಯ ಧರ್ಮವನ್ನು ಬಿಟ್ಟು ಮುಸಲ್ಮಾನನಾದರೆ ಜೀವದಾನ ಮಾಡುವದಾಗಿ ಆಸೆ ಒಡ್ಡಿ, ಆಮಿಷ ತೋರಿಸಿದರೂ 'ಪ್ರಾಣ ಬಿಟ್ಟೇನು ಧರ್ಮ ಬಿಡೆನು' ಎಂದು ವೀರಾವೇಶದಿಂದ ಲಾಠಿಯನ್ನು ತಿರುವುತ್ತಲೇ ಹೋರಾಡಿದರೂ ಕೊನೆಗೆ ಭರ್ಚಿಯ ಏಟಿಗೆ ಬಲಿಯಾದ ಧರ್ಮ ಪ್ರಕಾಶಕರೂ ಜನತೆಯ ಮನ್ನಣೆಯ ಮಹನೀಯರಾಗಿ ಜನಮನದಲ್ಲಿರುವ ಆದರ್ಶ ವ್ಯಕ್ತಿ ಎನ್ನಬಹುದು.

ಪಂಬುಲಗಿಯ ವಿಠಲದಾಸರು ತ್ಯಾಗ ಹಾಗೂ ಕರುಣೆಗೆ ಹೆಸರಾದ ವ್ಯಕ್ತಿ, ಪರರ ಅದರಲ್ಲೂ ಅತ್ಯಾಚಾರ, ಅನ್ಯಾಯಕ್ಕೆ ತುತ್ತಾದ ಹಿಂದುಗಳಿಗಾಗಿ ಕೈಗೊಂಡ ಅನ್ನ ದಾಸೋಹ, ಅದಕ್ಕಾಗಿ ರಜಾಕಾರರಿಂದ ಅನುಭವಿಸಿದ ನೋವು, ಅತ್ಯಾಚಾರ, ಕ್ರೌರ್ಯ, ಹಿಂಸೆ, ಮುಂತಾದವು ಐತಿಹಾಸಿಕ ಸತ್ಯ ಸಂಗತಿಗಳು. ಇಂತಹ ಐತಿಹಾಸಿಕ ಘಟನೆಗಳು ಬುಲಾಯಿ ಹಾಡುಗಳ ಹುಟ್ಟಿಗೆ ಕಾರಣವಾಗಿರುವುದು ಕಂಡು ಬರುತ್ತದೆ. ಈ ಹಾಡುಗಳಲ್ಲಿ ಹಿಂದೆ ಆಗಿ

ಹೋದ ಮಹತ್ವದ ರಾಜಕೀಯ ಘಟನೆಗಳ ಜೊತೆಗೆ ಪ್ರಾದೇಶಿಕ, ವೈಯಕ್ತಿಕ, ವಿಷಯಗಳ ವಿವರಗಳನ್ನು ಕಾಣಬಹುದು. ಆ ಕಾಲದ ಜನರ ಮನೋಭಾವ, ಹೋರಾಟ ಬದುಕಿನ ಚಿತ್ರಣ ಮೌಲ್ಯಗಳ ಮಹತ್ವ ಮುಂತಾದವುಗಳನ್ನು ಅರಿತುಕೊಳ್ಳಬಹುದು.

ವೀರ, ತ್ಯಾಗ, ಬಲಿದಾನಗಳಿಂದ ಜನಮನಗಳಲ್ಲಿ ಮೂರ್ತಗೊಂಡಿರುವ ಧರ್ಮ ಪ್ರಕಾಶ ಹಾಡು, ರಜಾಕಾರರ ಹಾಡು ಹಾಗೂ ಪಂಬುಲಗಿಯ ವಿಠಲದಾಸರ ಹಾಡುಗಳನ್ನು ಕುರಿತು ನೋಡುವಾ.

ರಜಾಕಾರರ ಹಾವಳಿ, ದಬ್ಬಾಳಿಕೆ, ಅತ್ಯಾಚಾರ, ಹಿಂಸೆ, ಗೋರಟಾ ಗ್ರಾಮದಲ್ಲಿ ನಡೆದ ಹತ್ಯಾಕಾಂಡದ ಐತಿಹಾಸಿಕ ಘಟನೆಯ ಚಿತ್ರಣವನ್ನು ಸುದೀರ್ಘವಾಗಿ ಮೂಡಿ ಬಂದಿರುವ ಬುಲಾಯಿ ಹಾಡು ಹೀಗಿದೆ.

ಹೈದರಾಬಾದಿನ ಬೀದರೆ ಜಿಲ್ಲಾ ರಝಾಕಾರ ಪುಂಡರೆಲ್ಲ
ದಂಡೆತ್ತಿ ಬಂದಾರೋ ಗೋರಟಿ ಮ್ಯಾಲಾ ಕೋಲೆಣ್ಣ ಕೋಲೆ
ಹುಮನಾಬಾದಿ, ರಾಜೇಶ್ವರ ಕಲ್ಯಾಣ ಜಹಗೀರ
ನೆರೆದಾರೋ ರಝಾಕಾರ ಕೋಲೆಣ್ಣ ಕೋಲೆ
ಕಂಬಾರ ಚಿಂಚೋಳ್ಳಿ ನಾವದಗಿ ಬೆಲ್ಲಳ್ಳಿ
ಹೊಂಟಾರೋ ಎಲ್ಲಾರು ಗೋಳಿ ಕೋಲೆಣ್ಣ ಕೋಲೆ
ತೊಗಲೂರ ಮುಚಳಂಬಿ ಬೋರೋಳ ಮೋರಂಬಿ
ಏನಿಲ್ಲದೆ ಉರದರೋ ಮೈ ತುಂಬಿ ಕೋಲೆಣ್ಣ ಕೋಲೆ
ಮುಂಜಾನೆಂಟು ತಾಸಿಗೆ ದನಕರು ಬಿಡುವದರೊಳಗೆ
ಸುರು ಮಾಡ್ಯಾರ ಗೋಲಿಬಾರುವಾಗೆ ಕೋಲೆಣ್ಣ ಕೋಲೆ
ಊರೊಳಗಿನ ಜನರೆಲ್ಲ ಏರ್ಯಾರೋ ಮಾಳಿಗಿ ಮ್ಯಾಲಾ
ಮುಂದಿನ ಆಸೆ ಒಬ್ಬರಿಗಿಲ್ಲ ಕೋಲೆಣ್ಣ ಕೋಲೆ
ಜೀವ ಹೋದರ ಪರವನಿಲ್ಲ ಓಡಿ ಹೋಗುವರಲ್ಲಾ
ಹೀಗೆಂದು ನುಡಿದಾರೋ ಹಿಂದುರೆಲ್ಲ ಕೋಲೆಣ್ಣ ಕೋಲೆ'

ಹೀಗೆ ಎಲ್ಲರೂ ಒಂದಾಗಿ ಮಾಳಿಗೆಯ ಮೇಲೆ ಕುಳಿತು ಕಲ್ಲು ಕವಣಿಯ ಜೋರದಿಂದ ಮುಸ್ಲಿಂ ರಜಾಕಾರರನ್ನು ಎದುರಿಸಿದ್ದು, ಹೆಣ್ಣು ಮಕ್ಕಳು ಕಲ್ಲನ್ನು ಆರಿಸಿಕೊಟ್ಟು ಈ ಕ್ರಾಂತಿಗೆ ಟೊಂಕ ಕಟ್ಟಿ ನಿಂತದ್ದು ಗೋರ್ಟಾ ಜನರ ಒಗ್ಗಟ್ಟಿಗೆ ಸಾಕ್ಷಿಯಾಗುತ್ತದೆ. ಸಹಬಾಳ್ವೆಯನ್ನು ತೋರುತ್ತದೆ. ರಾಚಯ್ಯ ಸ್ವಾಮಿ ತನ್ನ ಪ್ರಾಣವನ್ನು ಬಿಡುವಾಗಲೂ ರಜಾಕಾರರನ್ನು ಎದುರಿಸುವುದು ವೀರತ್ವಕ್ಕೆ ಸಾಕ್ಷಿಯಾಗಿ ಶೌರ್ಯದ ಸಂಕೇತವೆನಿಸುತ್ತದೆ. ಪ್ರಾಣಕ್ಕಿಂತ ಮಾನ, ಅಭಿಮಾನಗಳು ಮುಖ್ಯ ಎಂಬ ಮೌಲ್ಯಗಳನ್ನು ಬಿಂಬಿಸುತ್ತವೆ. ಈ ರೀತಿ ಅನೇಕ ಮಹನೀಯರು ತಮ್ಮ ಪ್ರಾಣವನ್ನು ಲೆಕ್ಕಿಸದೇ ರಜಾಕಾರರ ವಿರುದ್ಧ ಒಟ್ಟಾಗಿ ಹೋರಾಡಿ ಹುತಾತ್ಮರಾದದ್ದು

ಈ ಹಾಡಿನಲ್ಲಿ ತಿಳಿದು ಬರುತ್ತದೆ. ಅದಕ್ಕೆಂದೆ ಇತ್ತೀಚಿಗೆ ಗೋರಟಾದಲ್ಲಿಯ ರಜಾಕಾರರ ಹತ್ಯಾಕಾಂಡವನ್ನು ಜಲಿಯನ್‌ವಾಲಾಬಾಗ ಹತ್ಯಾಕಾಂಡವೆಂದೇ [೨] ಕರೆಯುತ್ತಿರುವುದು ಗಮನಾರ್ಹವಾಗಿದೆ. ಈ ಸಂಗತಿ ಬುಲಾಯಿ ಹಾಡುಗಳಲ್ಲಿ ಮಾತ್ರ ದಾಖಲಾಗಿದ್ದು ಬಿಟ್ಟರೆ ಮತ್ತೆಲ್ಲಿಯೂ ಕಾಣಸಿಗದಿರುವುದು ಗಮನೀಯ ಅಂಶವೆನ್ನಬಹುದು. ಇಂತಹ ಬರ್ಬರ ಹತ್ಯೆಗಳೊಂದಿಗೆ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ ಎಸಗಿದ್ದನ್ನು ಹಾಡಿನಲ್ಲಿ ಹೀಗೆ ಚಿತ್ರಿಸಿದ್ದಾರೆ.

ಭಾರತಾಂಬೆ ನೋಡಿದಳಾಗ ವನಿತೆಯರ ಮಾನಭಂಗ
ಸುರುಮಾಡ್ಯಾಲೋ ಸೇಡು ಮುಸಲರ ಮ್ಯಾಲ ಕೋಲೆಣ್ಣ ಕೋಲೆ
ರಾಜಸ ರಾಕ್ಷಸ ರಾವಣನಂತೆ ಈ ಅರಸ
ಅವನಂತೆ ಆಗುವುದು ಸತ್ಯಾನಾಶ ಕೋಲೆಣ್ಣ ಕೋಲೆ [೧೧]

ಎಂಬಲ್ಲಿ ದುಷ್ಟರ ಅಟ್ಟಹಾಸ ಬಹಳ ಕಾಲ ಉಳಿಯದು. ಅದಕ್ಕೆ ಅಂತ್ಯ ಅವರ ಸರ್ವನಾಶವೇ ಎಂಬ ಜನಪದರ ನಂಬಿಕೆಯನ್ನು ಇದು ಪ್ರತಿಬಿಂಬಿಸುವಂತಿದೆ. ಅಂತೆಯೇ ಮುಂದೆ ಗೃಹ ಮಂತ್ರಿಗಳಾಗಿದ್ದ ಸನ್ಮಾನ್ಯ ಸರ್ದಾರ್ ವಲ್ಲಭಬಾಯಿ ಪಟೇಲರ ಆದೇಶದಂತೆ ಮಿಲಿಟರಿ ಕಾರ್ಯಾಚರಣೆಯಿಂದ ಮೂರೇ ದಿವಸಗಳಲ್ಲಿ ನಿಜಾಮ ರಾಜ್ಯದಲ್ಲಿ ತ್ರಿವರ್ಣ ಧ್ವಜವನ್ನು ಹಾರಿಸಿದ್ದು ಅವರ ನಂಬಿಕೆಗೆ ದೊರೆತ ಪುಷ್ಟಿಯೆನ್ನಬಹುದು.

ಮೂರು ದಿವಸದೊಳಗೆ ನಿಜಾಮರ ರಾಜ್ಯದೊಳಗೆ
ತ್ರಿರಂಗಿ ಧ್ವಜ ಮೆರೆದಿತಾಗೆ ಕೋಲೆಣ್ಣ ಕೋಲೆ
ರಾಮಚಂದ್ರನಂತೆ ಇವರು ರಝಾಕಾರರಿಗೆ ನೆಹರು
ನಿರ್ಮೂಲನ ಮಾಡಿದರು ಕೋಲೆಣ್ಣ ಕೋಲೆ...[೧೨]

ಎಂಬಲ್ಲಿ ಇಂದಿಗೂ ರಾಮ ಶಿಷ್ಟಕ್ಕೆ, ರಾವಣ ದುಷ್ಟಕ್ಕೆ ಸಂಕೇತವಾಗಿ ಬಳಸಿ ಅವರ ಗುಣ ಸ್ವಭಾವಗಳ ಚಿತ್ರಣವನ್ನು ನೀಡುತ್ತವೆ. ಹೀಗೆ ಬೀದರದ ಗೋರಟಾ ಗ್ರಾಮದಲ್ಲಿ ನಡೆದ ಹತ್ಯಾಕಾಂಡ, ಅತ್ಯಾಚಾರವು ಬುಲಾಯಿ ಹಾಡಿನಲ್ಲಿ ಕೇಳುವಾಗ ಆ ಚಿತ್ರ ಮನದಲ್ಲಿ ಮೂಡಿ ಕಣ್ಣೀರಲ್ಲಿ ತೇಲಿ, ಧಾರೆಯಲ್ಲಿ ಹರಿಯುವಂತೆ ಭಾಸವಾಗುತ್ತದೆ. ರಾಷ್ಟ್ರಕವಿ ಕುವೆಂಪುರವರು 'ಕುಮಾರವ್ಯಾಸನ ಭಾರತ ಕುರಿತು ಹೇಳಿದ ಮಾತುಗಳು ಕುಮಾರ ವ್ಯಾಸನು ಹಾಡಿದನೆಂದರೆ ಕಲಿಯುಗ ದ್ವಾಪರವಾಗುವುದು... ಭಾರತ ಕಣ್ಣಲ್ಲಿ ಕುಣಿಯುವುದು' ಎಂದಂತೆ ಈ ರಜಾಕಾರರ ಬುಲಾಯಿ ಹಾಡು ಸಹ ಸುಮಾರು ೬೦ ವರ್ಷಗಳ ಹಿಂದೆ ನಮ್ಮನ್ನು ಒಯ್ದು ಗೊರಟಾ ಹತ್ಯಾಕಾಂಡ, ಅತ್ಯಾಚಾರಗಳ ಚಿತ್ರವನ್ನು ಕಣ್ಮುಂದೆ ನಿಲ್ಲಿಸುತ್ತದೆ. ಇದರೊಂದಿಗೆ ಆ ಕಾಲದಲ್ಲಿ ಗ್ರಾಮದ ಜನರಲ್ಲಿನ ಒಗ್ಗಟ್ಟು, ಒಮ್ಮನಸ್ಸಿನಿಂದ ಸಾಮೂಹಿಕವಾಗಿ ಹೋರಾಡಿ ವೀರ ಮರಣವನ್ನಪ್ಪಿದ್ದು, ಅವರ ನಂಬಿಕೆಯಂತೆ ದುಷ್ಟ ಸಂಹಾರಕ್ಕೆ ಕೇಂದ್ರದ ಪಡೆ ಬಂದು ಈ ಭಾಗದ ಜನರಿಗೆ ರಜಾಕಾರರ ದಬ್ಬಾಳಿಕೆಯಿಂದ ವಿಮೋಚನೆಗೈದ ಅಂಶಗಳು ಈ ಹಾಡಿನಲ್ಲಿ ಸ್ಪಷ್ಟವಾಗಿ ಗೋಚರಿಸುತ್ತವೆ. ಹೀಗೆ ಐತಿಹಾಸಿಕ ರಾಜಕೀಯ ವಿಷಯವನ್ನು ಈ ಹಾಡು ತಿಳಿಸುವಂತಿದೆ.

೨) 'ಧರ್ಮ ಪ್ರಕಾಶರ ಹಾಡು' ಅಥವಾ 'ಆರ್ಯ ಧರ್ಮದ ಹಾಡಿನ'ಲ್ಲಿಯೂ ಮುಸ್ಲಿಂರ ದಬ್ಬಾಳಿಕೆಗೆ ವೈಯಕ್ತಿಕವಾಗಿ ಹೋರಾಡಿದ ಧರ್ಮ ಪ್ರಕಾಶರ ಶೌರ್ಯ ಹಾಗೂ ಆತ್ಮಾರ್ಪಣೆಯ ಚಿತ್ರ, ಮತಾಂತರದ ಖಂಡನೆ ಮುಂತಾದ ಅಂಶಗಳು ಕಂಡು ಬರುತ್ತವೆ. ಆರ್ಯ ಧರ್ಮದ ಕಟ್ಟಾಭಿಮಾನಿಯಾದ ಧರ್ಮ ಪ್ರಕಾಶಕರನ್ನು ಮತಾಂತರಗೊಳ್ಳಲು ಮುಸ್ಲಿಂರು ಒತ್ತಾಯ ಮಾಡುತ್ತಾರೆ. ಅದಕ್ಕೆ ಧರ್ಮ ಪ್ರಕಾಶಕರು ಒಪ್ಪದಿದ್ದಾಗ ಅವರನ್ನು ಮುಗಿಸಿ ಬಿಡುವ ತಂತ್ರವನ್ನು ರಚಿಸುತ್ತಾರೆ. ಏಕಾಂಗಿಯಾಗಿದ್ದ ಧರ್ಮಪ್ರಕಾಶಕರನ್ನು ಕೆಲವು ಮುಸ್ಲಿಂರು ಮುತ್ತಿ ಬಿಡುತ್ತಾರೆ. ಆಕಸ್ಮತ್ತಾಗಿ ಆಕ್ರಮಣಕ್ಕೊಳಗಾದರೂ ಹೆದರದೆ ತನ್ನ ಕೈಯಲ್ಲಿರುವ ಲಾಠಿಯಿಂದಲೇ ಬೀರಾವೇಶದಿಂದ ಹೋರಾಡಿ ತನ್ನ ಸಂಗಡಿಗರನ್ನು ಕರೆಯಲು ಪ್ರಯತ್ನಿಸುತ್ತಾರೆ. ಆದರೆ ಯಾರಿಗೂ ಅವರ ಕೂಗು ಕೇಳದು. ಹೀಗೆ ಏಕಾಂಗಿಯಾಗಿ ಹಲವರ ಜೊತೆಗೆ ಹೋರಾಡಿದರೂ ಕೊನೆಗೆ ಅವರು ನೆಲಕ್ಕೆ ಬಿದ್ದು ಬಿಡುತ್ತಾರೆ. ಈ ಎಲ್ಲಾ ವಿಷಯವನ್ನು ಬುಲಾಯಿ ಹಾಡಿನಲ್ಲಿ ಯಥಾವತ್ತಾಗಿ ಮೂಡಿ ಬಂದಿರುವುದು ತುಂಬಾ ಮಹತ್ವದ್ದೆನಿಸುತ್ತದೆ.

ಕಡಕೊಂಡು ಬಿದ್ದ ನೆಲಕ ಆಗತ್ತಿಲ್ಲೋ ನೀನು ತುರಕ
ಇಲ್ಲದ ಹೋದರ ಜೀವಕ ಘಾತ ಕೋಲೆಣ್ಣ ಕೋಲೆ
ಜೀವ ಹೋದರ ಪರವಾಗಿಲ್ಲ ಆಗೋನಿಲ್ಲ ನಾನು ಮುಲ್ಲಾ
ಆರ್ಯಧರ್ಮ ಬಿಡೋಲ್ಲ ಕೋಲೆಣ್ಣ ಕೋಲೆ
ಅಲ್ಲಿಂದ ಬರ್ಚಿ ಏಟಾ ಹಾಕಿದಾರು ಬೇಕಾದಷ್ಟು
ಹೊಂಟ ಹೋಯಿತು ಮುಲಾಸ ಇನ್ನು ಕೋಲೆಣ್ಣ ಕೋಲೆ

ಹೀಗೆ ಏಕಾಂಗಿಯಾಗಿ ಲಾಠಿಯಿಂದ ಹೋರಾಡುತ್ತಲೇ ನೆಲಕ್ಕೆ ಬಿದ್ದ ಅವರನ್ನು ಮತಾಂತರಕ್ಕೆ ಒತ್ತಾಯಿಸಿದಾಗ ಖಡಾಖಂಡಿತವಾಗಿ ವಿರೋಧ ವ್ಯಕ್ತಪಡಿಸುತ್ತಾರೆ. ಆಗ ಮುಸ್ಲಿಂರು ಭರ್ಚಿಯಿಂದ ಚುಚ್ಚಿ ಚುಚ್ಚಿ ಅವರನ್ನು ಕೊಂದು ಬಿಡುತ್ತಾರೆ. ಆಗ ಅವರ ಗೆಳೆಯರಾದ ಮೋಹನಸಿಂಗ್ ಗೋಪಾಳರಾವ, ಗಂಪುಶಾಸ್ತ್ರಿ (ನೆಹರೂರವರ ಸಹಪಾಠಿ), ಛೋಟೆರಾಮ ಶಾಮಲಾಲ ಮುಂತಾದವರು ಸುದ್ದಿ ತಿಳಿದು ಧಾವಿಸುತ್ತಾರೆ. ಜೊತೆಗೆ ಆಮಿನ (ಇನ್ಸಪೆಕ್ಟರ್) ತಾಲುಕಾದಾರ, ಮೋತಮಿನಸಾಬ, ಫೋಲಿಸರು ಬರುತ್ತಾರೆ. ಆಗ ಧರ್ಮ ಪ್ರಕಾಶರ ಶವ ಸಂಸ್ಕಾರ ಯಾವ ರೀತಿಯಾಗಿ ಮಾಡಿದರೆಂಬುದನ್ನು ಹಾಡಿನಲ್ಲಿ ಕಾಣಬಹುದು.

ಹೊಸ ಪ್ಯಾಟಿಗಿ ಹೋಯ್ತು ಹೆಣ ನೋಡುತಾರ ಅಲ್ಲಿ ಜನಾ
ಸಾಟಿ ರೂಪಾಯಿ ಹೂವಿಗಿ ಇನ್ನು ಕೋಲೆಣ್ಣ ಕೋಲೆ
ತಂದು ಹಾಕ್ಯಾರ ಎಣ್ಣಿ ಏಳಬಾರದೆಂದು ಘಾಣಿ
ರೂಪಾಯಿ ಹನ್ಯಾದ ಎಣ್ಣೆ ಕೋಲೆಣ್ಣ ಕೋಲೆ
ಕರಪೂರದೇ ಮಾಡಿ ಫೋಟೋ ಅಗ್ನಿ ಕುಡತಾರ ಕಷ್ಟ

ತುಪ್ಪ ಹಾಕಿ ಟೀಣ ಎಂಟು ಕೋಲೆಣ್ಣ ಕೋಲೆ
ಹೋಮದಾಗ ಹಾಕಿ ಹೆಣ ಮಂತ್ರ ಓದುತಾರ ಜನಾ
ಒಬ್ಬಾರ ಕಿನ್ನ ಒಬ್ಬರ ಶ್ಯಾಣಾ ಕೋಲೆಣ್ಣ ಕೋಲೆ

ಈ ರೀತಿಯಾಗಿ ಆರ್ಯ ಧರ್ಮದ ಸಂಪ್ರಾದಾಯಂತೆ ಶವ ಸಂಸ್ಕಾರ ಮಾಡಿದ ವಿಧಿಗಳನ್ನು ಸ್ಪಷ್ಟವಾಗಿ ಚಿತ್ರಿಸಲಾಗಿದೆ. ಪ್ರಾಣಕ್ಕಿಂತ ಧರ್ಮವೇ ಮುಖ್ಯ ಎಂಬ ಅಂಶವು ಎದ್ದು ಕಾಣುತ್ತದೆ. ಆರ್ಯ ಸಮಾಜದ ಬಗ್ಗೆ ಜನರಲ್ಲಿದ್ದ ಅಭಿಮಾನ, ಅದರಲ್ಲಿ ಸಮರ್ಪಣೆಗೊಂಡ ಮಹನೀಯರ ಹೆಸರುಗಳು ಆ ಕಾಲಕ್ಕೆ ಕನ್ನಡ ನಾಡು ಹಬ್ಬಿದ ಪ್ರಾದೇಶಿಕತೆಯನ್ನು ಸಹ ಈ ಹಾಡಿನಲ್ಲಿ ದಾಖಲಾದದ್ದು ಮಹತ್ವದ ಅಂಶಗಳೆನ್ನಬಹುದು.

ಲಾತೂರ ಉದಗೀರ ನೀಲಂಗಿ ಸಸ್ತಾಪೂರ
ನಿಗ್ಗಡಗಿ ಸಮಾಜ ಜೋರ ಕೋಲೆಣ್ಣ ಕೋಲೆ

ಇಂದು ಮಹಾರಾಷ್ಟ್ರದಲ್ಲಿ ಸೇರಿಕೊಂಡಿರುವ ಲಾತೂರ, ಉದಗೀರ ಹಾಗೂ ನಿಲಂಗಗಳು ಮೊದಲು ಕನ್ನಡ ಪ್ರಾಂತ್ಯಕ್ಕೆ ಸೇರಿದ್ದವು ಎನ್ನುವದಕ್ಕೆ ಇದು ಐತಿಹಾಸಿಕ ದಾಖಲೆವೆನಿಸುತ್ತದೆ. ಅಂತೆಯೇ ಇಂದಿಗೂ ಈ ಊರುಗಳಲ್ಲಿ ಕನ್ನಡ ಭಾಷೆ, ಸಂಸ್ಕೃತಿಗಳನ್ನು ಹಾಗೂ ಸಂಬಂಧಗಳು ಕೋಡು- ಕೊಳ್ಳುವಿಕೆ ಹೆಚ್ಚಾಗಿರುವುದು ಕಂಡು ಬರುತ್ತದೆ. ಹೀಗೆ ಬುಲಾಯಿ ಹಾಡುಗಳಲ್ಲಿ ಅನೇಕ ಚಾರಿತ್ರಿಕ ಅಂಶಗಳು ದಾಖಲಾದದ್ದು ಕಂಡು ಬರುತ್ತವೆ.

೨) ರಜಾಕಾರರ ಅಟ್ಟಹಾಸದಲ್ಲಿ ತತ್ತರಿಸಿ ಹೋದ ಬಡಪಾಯಿ ಜನರು ಅನ್ನಕ್ಕಾಗಿ ನೀರಿಗಾಗಿ ಒದ್ದಾಡುತ್ತಿದ್ದಾಗ, ಕರುಣಾಮಯಿಯಾದ ಪಂಬುಲಗಿಯ ವಿಠಲದಾಸರು ತನ್ನಲ್ಲಿಯ ದವಸಧಾನ್ಯಗಳಿಂದ ಹಿಂದುಗಳಿಗೆ ಅನ್ನಕೊಟ್ಟು ಸಲಹುತ್ತಿದ್ದನಂತೆ. ಅವನು ಸಹಾಯ ಮಾಡುತ್ತಿದ್ದುದ್ದನ್ನು ನೋಡಿ ಸಹಿಸದ ರಜಾಕಾರರು ಆತನಿಗೆ ಹಿಂಸೆ ಕೊಟ್ಟು ಗಲ್ಲಿಗೇರಿಸಲು ನಿರ್ಧರಿಸುತ್ತಾರೆ. ಸತ್ಯ ಶುದ್ಧ ಮನಸ್ಸಿನಿಂದ ಅಸಹಾಯಕರಿಗೆ ಸಹಾಯ ಮಾಡುತ್ತಿದ್ದ ವಿಠಲದಾಸನನ್ನು ಕಂಡರೆ ಎಲ್ಲರಿಗೂ ಪ್ರೀತಿ-ಗೌರವ ಭಕ್ತಿ. ಹೀಗಾಗಿ ಯಾವ ಅಪರಾಧವಾಗಲಿ ಪಾಪವಾಗಲಿ ಎಸಗದ ವಿಠಲದಾಸನಿಗೆ ರಜಾಕಾರರು ಬೇಡಿ ಹಾಕಿ ಇಟ್ಟಿರುತ್ತಾರೆ. ಆದರೆ ಸತ್ಯವಂತನಾದ, ನಿಸ್ವಾರ್ಥ ಸೇವೆಯಿಂದ ಸಾಯುವವರಿಗೆ ಅನ್ನ ಕೊಟ್ಟು ಸಹಾಯ ಮಾಡುತ್ತಿದ್ದರಿಂದ ಹಾಕಿದ್ದ ಬೇಡಿಗಳು ಬಿಚ್ಚುಕೊಳ್ಳುತ್ತಾವೆಂಬುದು ಬುಲಾಯಿ ಹಾಡಿನಲ್ಲಿ ಕಂಡು ಬರುತ್ತದೆ. ಒಳ್ಳೆಯದನ್ನು ಮಾಡಿದವರಿಗೆ ಒಳ್ಳೆಯದೇ ಆಗುತ್ತದೆಂಬ ಅಂಶವು ವಿಠಲದಾಸನ ಬಿಡುಗಡೆಯ ಸಂಕೇತವಾಗಿ ಕಂಡು ಬರುವಂತಿದೆ.

ನಾಲ್ಕಿಪ್ಪತ್ತೊಂದು ಒಲಿ ಹೂಡಿ ವಿಠಲದಾಸ
ಲೆಕ್ಕಿಲ್ಲದ ರೊಟ್ಟಿ ಬಡಸ್ಯಾರ ಕೋಲ
ದೊಡ್ಡವರಿಗೊಂದ ರೊಟ್ಟಿ ಸಣ್ಣವರಿಗಿದ್ದ ರೊಟ್ಟಿ
ಅನ್ನಾಕಿ ಪುಣ್ಯ ಪಡದಾರ ಕೋಲ

ಊರೆಲ್ಲ ಉಂಡೀತು ಕೇರೆಲ್ಲ ಉಂಡಿತು
ತುರುಕರಣಿ ಮಂದಿ ಉಳದೀತು ಕೋಲ
ಪಾಪ ಮಾಡಿಲ ನಾನು ಪುಣ್ಯ ಮಾಡಿದ ನಾನು
ಕೈಜೋಡಿಸಿ ನಿಂತ ಬಿಠಲದಾಸ ಕೋಲ
ಕಾಲಾಗಿನ ಬೇಡಿ ಉದರ್‍ಯಾವೇ ಕೋಲ
ಕೈಯಾಗಿನ ಬೇಡಿ ಉದರ್‍ಯಾವೆ ಕೋಲ [೧೪]

ಇಲ್ಲಿ ಪಾಪ-ಪುಣ್ಯಗಳ ಪರಿಣಾಮ ಹಾಗೂ ನಿಷ್ಕಲ್ಮಷ ದಾಸೋಹದ ಫಲ ವ್ಯಕ್ತವಾದಂತೆ ಕಂಡು ಬರುತ್ತದೆ. ಸತ್ಯಕ್ಕೆ ಸಾವಿಲ್ಲ ಎಂಬುದನ್ನು ಸಹ ಇದು ಸೂಚಿಸುತ್ತದೆ. ಹೀಗಾಗಿ ಬಿಠಲದಾಸನಿಗೆ ಬೇಡಿಯಲ್ಲಿ ಬಂಧಿಸಿಡಲು ಸಹ ರಜಾಕಾರರಿಗೆ ಆಗಲಿಲ್ಲ ಎಂಬ ವಿಷಯವನ್ನು ತಿಳಿಸುವದರ ಜೊತೆಗೆ ಐತಿಹಾಸಿಕ ವ್ಯಕ್ತಿಯೊಬ್ಬರ ಪರಿಚಯವನ್ನು ದಾಖಲಿಸಿರುವುದು ಈ ಹಾಡಿನ ವೈಶಿಷ್ಟ್ಯವೆನಿಸುತ್ತದೆ.

ಹೀಗೆ ವಿಕ್ರಮ ರಾಜನ ಹಾಡು, ಶಾಲಿವಾನನ ಹಾಡುಗಳಿಂದ ಇತ್ತೀಚಿಗಿನ ಭಾಲ್ಕಿ ಚನ್ನಬಸವ ಪಟ್ಟದ್ದೇವರ ಹಾಡುಗಳವರೆಗೆ ಅನೇಕ ಮಹನೀಯರ ಕುರಿತಾದ ಐತಿಹಾಸಿಕ ವಿಷಯಗಳನ್ನು ಒಳಗೊಂಡ ಬುಲಾಯಿ ಹಾಡುಗಳನ್ನು ಕಾಣಬಹುದಾಗಿದೆ. ಈ ಹಾಡುಗಳಲ್ಲಿ ಆಯಾ ಕಾಲದ ಮೌಲ್ಯಗಳನ್ನು ಗುರುತಿಸಬಹುದು. ನಂಬಿಕೆಗಳ ಮೂರ್ತ ರೂಪಗಳೇ ಆಚರಣೆಗಳು, ಆಚರಣೆಗಳೇ ಮೌಲ್ಯಗಳು ಎಂದು ವಿದ್ವಾಂಸರ ಅಭಿಪ್ರಾಯದಂತೆ ಬುಲಾಯಿ ಹಾಡುಗಳು ಮೌಲ್ಯಗಳ ಪ್ರತಿನಿಧಿಗಳಂತೆ ಕಂಡು ಬರುತ್ತವೆ. ಜೊತೆಗೆ ಒಂದೊಂದು ಐತಿಹಾಸಿಕ ಬುಲಾಯಿ ಹಾಡುಗಳು ಆಯಾ ಸಂದರ್ಭದ ಇತಿಹಾಸವನ್ನೇ ಬಿಚ್ಚಿಡುವಂತಿವೆ. ಇವು ಇತಿಹಾಸದ ಪುನರ್ ಸೃಷ್ಟಿಗೆ ದಾಖಲೆಯಾಗಿ ನಿಲ್ಲುವಂತಿವೆ.

ಹೀಗಾಗಿ ಇಲ್ಲಿಯ ಇತಿಹಾಸದ ಘಟನೆಗಳು ಹಾಗೂ ಈ ಪ್ರದೇಶದಲ್ಲಿ ಆಗಿ ಹೋಗಿರುವ ರಾಜಕೀಯ ಆಳ್ವಿಕೆಗಳು, ರಜಾಕಾರರ ಹಾವಳಿ, ಸ್ವಾತಂತ್ರ್ಯದ ಹೋರಾಟ, ನಾಡು-ನುಡಿ ಪ್ರೇಮಗಳು ಈ ಪ್ರದೇಶದ ಬುಲಾಯಿ ಸಂಸ್ಕೃತಿಗೆ ನೆಲೆಗಳಾಗಿರುವದನ್ನು ಗಮನಿಸಬಹುದಾಗಿದೆ.

೨) **ಸಾಮಾಜಿಕ ಸಂದರ್ಭಗಳು :**

ಮಾನವನು ಸಮಾಜಜೀವಿ, ಮಾನವನ ಜೀವನ ಮತ್ತು ಸಮಾಜ ಇವು ಹಾಸುಹೊಕ್ಕಾಗಿ ಸೇರಿಕೊಂಡಿವೆ. ಸಮಾಜದ ಹೊರತಾಗಿ ಮಾನವ ಬದುಕಲಾರ. ಮಾನವನ ಜೀವನವು ರೂಪು ತಳೆಯಲು ಬೆಳೆದು ನಿಲ್ಲಲು ಹಾಗೂ ಪರಿಪಕ್ವತೆಯನ್ನು ಪಡೆಯಲು ಎಂದೆಂದಿಗೂ ಮುಂದುವರೆಯಲು ಸಮಾಜವು ಅತ್ಯಾವಶ್ಯಕವಾದುದೆಂಬ ಸಮಾಜ ಶಾಸ್ತ್ರಜ್ಞರ ಅಭಿಪ್ರಾಯ ಗಮನೀಯವಾಗಿದೆ. 'ಸಮಾಜವು ನಮ್ಮನ್ನು ಆವರಿಸಿಕೊಂಡಿರುವ ಪರ್ಯಾವರಣ ಮಾತ್ರವಾಗಿಲ್ಲ. ಅದು ನಮ್ಮ ಅಂತರಂಗ ಬಹಿರಂಗಗಳನ್ನು ಆವರಿಸಿಕೊಂಡಿವೆ' [೧೫] ಎಂಬ

ಸಮಾಜ ಶಾಸ್ತ್ರಜ್ಞರ ಮಾತು ಸಹ ಸಮಾಜದ ಹರವು ಹಾಗೂ ಮಹತ್ವವನ್ನೇ ಪುಷ್ಟೀಕರಿಸುತ್ತದೆ. ಹಲವು ಜನರು ಒಟ್ಟುಗೂಡಿ ಸಮೂಹವಾಗುವುದು. ಅಂತಹ ಹಲವು ಸಮೂಹಗಳು ಒಟ್ಟುಗೂಡಿ ಸಮಾಜ ಆಗುವುದು. ಜನರ ಹೊರತಾಗಿ ಸಮಾಜವಿರಲಾರದು. ಸಮಾಜವು ಕೇವಲ ಜನರ ಮಂದೆಯಲ್ಲ, ಅದೊಂದು ವ್ಯವಸ್ಥೆ. ಅದು ಹಲವು ಚಿಕ್ಕಪುಟ್ಟ ಜನ ಸಮೂಹಗಳನ್ನು ಒಳಗೊಂಡಿರುತ್ತದೆ. ಅದರಲ್ಲಿ ಕುಟುಂಬ ಒಂದು.

ಕುಟುಂಬ :

ಕುಟುಂಬವು ಅತ್ಯಂತ ಸರಳವಾದ ಹಾಗೂ ಸೂಕ್ಷ್ಮವಾದ ಸಮಾಜವಿದ್ದಂತೆ. ಕುಟುಂಬವಿಲ್ಲದೇ ಸಮಾಜವಿಲ್ಲ. ಅದು ಸಾರ್ವತ್ರಿಕವಾದುದು. ಕುಟುಂಬವು ಮಾನವನ ಸಾಮಾಜಿಕ ಜೀವನದ ತಳಹದಿಯೆನ್ನಬಹುದು.

ಮೂಲತಃ ಪ್ರಾಚೀನ ಭಾರತದಲ್ಲಿ ಎಲ್ಲರದ್ದೂ ಅವಿಭಕ್ತ ಕುಟುಂಬ ಜೀವನ ಕ್ರಮವೇ ಕಂಡು ಬರುತ್ತದೆ. ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತದ ಕಥೆಗಳು ಇದಕ್ಕೆ ನಿದರ್ಶನಗಳಾಗಿವೆ. ಅವಿಭಕ್ತ ಕುಟುಂಬ ಕುರಿತು 'ಒಂದೊಂದು ಕುಟುಂಬವೂ ಸಾಕಷ್ಟು ದೊಡ್ಡದಾಗಿರುತ್ತಿದ್ದು, ಅದರಲ್ಲಿ ಮುತ್ತಜ್ಜ, ಅಜ್ಜಿಯರಿಂದ ಹಿಡಿದು ಮೊಮ್ಮಕ್ಕಳು, ಮರಿ ಮೊಮ್ಮಕ್ಕಳವರೆಗೆ ನಲವತ್ತು, ಐವತ್ತು ಮಂದಿ ಒಂದೇ ಕಡೆ ಒಬ್ಬನೇ ಯಜಮಾನನ ನೇತೃತ್ವದಲ್ಲಿ ಅನೋನ್ಯವಾಗಿ ಬಾಳುವ ವಿಧಾನ'[೨] ಎಂದು ವಿವರಿಸುತ್ತಾರೆ. ಇಂಥ ಅವಿಭಕ್ತ ಕುಟುಂಬದಲ್ಲಿ ಸಾಮಾನ್ಯವಾಗಿ ಕುಟುಂಬದ ಹಿರಿಯನೂ, ವಿವೇಕಿಯೂ, ಬಲವಂತನು ಆದಾತ ಯಜಮಾನಿಕೆಯನ್ನು ವಹಿಸಿಕೊಳ್ಳುತ್ತಾನೆ. ಆತನ ಪತ್ನಿಯೇ ಸಾಮಾನ್ಯವಾಗಿ ಯಜಮಾನಿ. ಇವರದು ತುಂಬು ಜವಾಬ್ದಾರಿಯ ಪಾತ್ರ. ತುಂಬು ಕುಟುಂಬದ ಘನತೆ, ಗೌರವ, ಪ್ರತಿಷ್ಠೆ, ಅಭಿವೃದ್ಧಿಗಾಗಿ ಸದಾ ಶ್ರಮಿಸಬೇಕಾಗುತ್ತದೆ. ಆದರೆ ಇಂದು ಸಮಾಜದಲ್ಲಿ ಇಂತಹ ಕುಟುಂಬಗಳು ತುಂಬಾ ವಿರಳವಾಗಿದ್ದು, ವಿಭಕ್ತ ಕುಟುಂಬಗಳೇ ಎಲ್ಲೆಡೆಗೂ ಕಂಡು ಬರುತ್ತಲಿವೆ.

ಪ್ರಾಚೀನ ಕಾಲದಲ್ಲಿ ದೊಂಬಿ, ದಾಳಿ, ದರೋಡೆ, ಗೋಗ್ರಹಣ ಸ್ತ್ರೀ ಮಾನಭಂಗ ಇತ್ಯಾದಿಯಾದ ಘಟನೆಗಳು ಮೇಲಿಂದ ಮೇಲೆ ನಡೆಯುತ್ತಿದ್ದವು. ಅಂಥ ಸಂದರ್ಭಗಳಲ್ಲಿ ಇಡೀ ಊರಿಗೆ ಊರೇ ಒಂದಾಗಿ ಒಂದು ಮಹಾಕುಟುಂಬವೆಂಬಂತೆ ಎಲ್ಲರ ನೆರವು, ಮುಂದಾಳಿಕೆಯಲ್ಲಿ ಶತ್ರುಗಳನ್ನು ಬಗ್ಗು ಬಡಿದು ತಮ್ಮೂರಿನ ಪೀಡೆಯನ್ನು ತೊಲಗಿಸಿ ಶಾಂತ ಜೀವನ ನಡೆಸುತ್ತಿದ್ದುದ್ದುಂಟು. ಈ ಏಕತೆಯನ್ನು ಸಾಧಿಸುವ ಸಲುವಾಗಿ ಅನೇಕ ಊರುಗಳಲ್ಲಿ ಪರಸ್ಪರ ಕುಟುಂಬಗಳೊಳಗೆ ಹೆಣ್ಣುಗಳನ್ನು ಕೊಟ್ಟು ತಂದು ಇಡೀ ಊರೇ ಒಂದು ದೊಡ್ಡ ಕುಟುಂಬವಾಗಿ ಬಾಳುತ್ತಿದ್ದುದು ನಾವು ಇತಿಹಾಸದಲ್ಲಿ ಕಾಣಬಹುದು. ಹೀಗೆ ಸಾಮಾಜಿಕ ನೆಮ್ಮದಿ ಕಾಪಾಡಿಕೊಂಡು ಬರಲು, ಮಗು ಬೆಳೆದು ದೊಡ್ಡದಾಗಲು ಕುಟುಂಬ ಜೀವನ ಆಗತ್ಯ. ಹಿಂದೆ ಹಳ್ಳಿಗಳಲ್ಲಿ ಅವಿಭಕ್ತ ಕುಟುಂಬಗಳಲ್ಲಿ ತಂದೆ, ತಾಯಿ, ಅತ್ತೆ-ಸೊಸೆ, ಅಣ್ಣ-

ತಂಗಿ, ಅತ್ತಿಗೆ-ನಾದಿನಿ, ಗಂಡ- ಹೆಂಡತಿ, ಮಕ್ಕಳು, ಅಜ್ಜ, ಅಜ್ಜಿ, ಇತರೆ ಬಂಧುಗಳು ಒಟ್ಟಿಗೆ ಬಾಳುತ್ತಿದ್ದರು. ಇಂತಹ ಕುಟುಂಬದ ವ್ಯಕ್ತಿಗಳದ್ದೇ ಒಂದು ಪುಟ್ಟ ಪ್ರಪಂಚವಾಗುತ್ತದೆ. ಈ ಎಲ್ಲ ವ್ಯಕ್ತಿಗಳ ಸಂಬಂಧಗಳು ಪ್ರೀತಿ-ಪ್ರೇಮ, ದ್ವೇಷ-ಪ್ರತಿಕಾರ ಮುಂತಾದವುಗಳು ಬುಲಾಯಿ ಹಾಡುಗಳಲ್ಲಿ ವ್ಯಕ್ತವಾಗಿರುವದನ್ನು ಕಾಣುವೆವು.

ತಾಯಿ - ತವರು :

ಜನಪದ ಸಾಹಿತ್ಯದಲ್ಲಿ ತಾಯಿಗೆ ಮಿಗಿಲಾದ ಸ್ಥಾನವಿದೆ. ತಾಯಿಗಿಂತ ಬಂಧುವಿಲ್ಲ, ಅವಳಿಗಿಂತ ಯಾವುದೂ ಹೆಚ್ಚಲ್ಲ ಎಂಬ ಭಾವವು ಪ್ರತಿಯೊಬ್ಬರಲ್ಲಿ ಕಂಡು ಬರುತ್ತದೆ. ಅದರಲ್ಲೂ ಹೆಣ್ಣಿಗೆ ಅದೂ ಮದುವೆಯಾಗಿ ಹೋದ ಹೆಣ್ಣು ಮಗಳಿಗೆ ತಾಯಿಯೇ ಸರ್ವಸ್ವ. ಒಂದೊಮ್ಮೆ ಅವಳೇ ಸಂಗಾತಿಯೂ ಆಗುವುದುಂಟು. ಹೀಗೆ ಲಾಲನೆ-ಪಾಲನೆಯಿಂದ ಸ್ನೇಹ-ಸಂಬಂಧಗಳಲ್ಲಿ ತಾಯಿಯ ಸ್ಥಾನವನ್ನು ಮತ್ತಾರೂ ತುಂಬಲು ಅಸಾಧ್ಯ. ಅಂತಹ ತಾಯಿಯನ್ನು ಕಳೆದುಕೊಂಡ ಮಗಳ ಸ್ಥಿತಿಯನ್ನು ಬಿಂಬಿಸುವ ಬುಲಾಯಿ ಹಾಡು ಹೃದಯಸ್ಪರ್ಶಿಯಾಗಿದೆ.

ತನ್ನ ತಾಯಿ ಸತ್ತ ಸುದ್ದಿಯನ್ನು ತಿಳಿದು ಅಳುವ ಮಗಳಿಗೆ ಸ್ವತಃ ಅವಳ ತಂದೆ, ಅಜ್ಜ,ಅಜ್ಜಿಯರೇ ಸಂತೈಸುತ್ತಾರೆ. ಅವಳಿಗೆ ಇರುವ ಒಡವೆ, ವಸ್ತ್ರ, ಬೆಳ್ಳಿ-ಬಂಗಾರ, ದನಕರು, ಹೊಲ-ಮನಿ ಎಲ್ಲವನ್ನು ಕೊಡುತ್ತೇವೆ. ನೀನು ಅಳಬೇಡ ಸುಮ್ಮನಿರು ಎಂದು ಸಮಾಧಾನ ಪಡಿಸಲು ಪ್ರಯತ್ನಿಸುತ್ತಾರೆ. ಆದರೆ ಅವುಗಳಿಗಿಂತ ಅಮೂಲ್ಯವಾದ ಭಾವ ಬಂಧನದಿಂದ ಬಂಧಿಸಿದ್ದ ತಾಯಿಯ ಒಲವು ಮಗಳಿಗೆ ಮತ್ತೆಲ್ಲಿಯೂ ಸಿಗದೆಂಬ ಖಾತರಿ. ಹೀಗಾಗಿ ಅವಳಾಡುವ ಒಂದೊಂದು ಮಾತು ಸಹ ತಾಯಿಯಸ್ಥಾನ ಯಾರೂ ತುಂಬಲಾರರೆಂಬ ಕಟು ಸತ್ಯವನ್ನು ಹೇಳುವಂತಿದೆ.

ಅಳಬೇಡ ಮಾದೇಬಿ ಕಳಿಬೇಡ ಮಾದೇಬಿ
ಈ ಬಂಗಾರ ಬೆಳ್ಳಿ ನಿನ್ನಗೆ ಕೋಲೆಣ್ಣ ಕೋಲೆ
ನಮ್ಮವ್ವ ಏರಸ್ಯಾಳೆ ಕಂಚಿನ ಅಡಕೀಲು
ಏನ್ನವ್ವ ಬಂದು ಇಳಸಲಿಲ್ಲ ಕೋಲೆಣ್ಣ ಕೋಲೆ
ಅಳಬ್ಯಾಡ ಮಾದೇಬಿ ಕಳಿಬೇಡ ಮಾದೇವ
ಈ ಹೊಲ ಮನಿ ನಿನ್ನಗೆ ಕೋಲೆಣ್ಣ ಕೋಲೆ
ಆ ಹೊಲ ಮನಿಗೋಳು ನಾಳೆ ಬಂದಾಕಿಗಿ
ನಮ್ಮವ್ವ ಎಲ್ಲಿ ಸಿಕ್ಕಾಳಪ್ಪ ಕೋಲೆಣ್ಣ ಕೋಲೆ
ನಮ್ಮವ್ವ ಮಾಡುತ್ತಿದ್ದ ಪಂಚಾಮೃತದ ಅಡಗಿ
ನಮ್ಮವ್ವ ಬಂದು ಉಣಸಲಿಲ್ಲ ಕೋಲೆಣ್ಣ ಕೋಲೆ
ಅಳಬೇಡ ಮಾದೇಬಿ ಕಳಿಬೇಡ ಮಾದೇಬಿ

ಇಲ್ಲಿ ಇದ್ದಷ್ಟು ಜಾಯಜತ ನಿನ್ನದು ಕೋಲೆಣ್ಣ ಕೋಲೆ
ಆಜಾಯಜತ ಎಲ್ಲಾ ನಾಳೆ ಬಂದಾಕಿಗಿ
ನಮ್ಮವ್ವ ನಮ್ಮಗೆಲ್ಲಿ ಸಿಗುತಾಳಪ್ಪ ಕೋಲೆಣ್ಣ ಕೋಲೆ [೧೭]

ಈ ರೀತಿಯಾಗಿ ಎಷ್ಟೇ ಆಸ್ತಿಯಿದ್ದರೂ ತಾಯಿಯ ಕೊರತೆಯನ್ನು ತುಂಬದು ಆ ಆಸ್ತಿ ಎಂದಿದ್ದರೂ ಮುಂದೆ ಮನೆಗೆ ಬರುವ ಸೊಸೆಗೆ ಮಾತ್ರ ಎಂಬ ಆ ಕಾಲದ ಆಸ್ತಿ-ಪಾಲಿನ ಹಕ್ಕಿನ ವಿಷಯವನ್ನು ಈಹಾಡಿನಲ್ಲಿ ಗುರುತಿಸಬಹುದಾಗಿದೆ. ಇಂದು ಹೆಣ್ಣು ಮಕ್ಕಳಿಗೂ ಆಸ್ತಿಯಲ್ಲಿ ಪಾಲಿರುವುದು ಕೇವಲ ಕಾನೂನಿನಲ್ಲಿ ಮಾತ್ರ. ಆಗಿನಂತೆಯೇ ಇಂದು ನಮ್ಮಲ್ಲಿ ಪಿತ್ರಾರ್ಜಿತ ಆಸ್ತಿಗೆ ಮಗ- ಸೊಸೆಯಂದಿರೇ ಹಕ್ಕುದಾರರು. ಒಂದು ವೇಳೆ ಕಾನೂನಿನಂತೆ ಆಸ್ತಿಯನ್ನು ಪಡೆದರೆ ಸಂಬಂಧವನ್ನು ಕಳಚಿಕೊಳ್ಳುವ ಸ್ಥಿತಿಯಂಟಾಗುವುದು ಕಂಡು ಬರುತ್ತದೆ. ಒಂದೆಡೆ ಆ ಹಕ್ಕನ್ನು ಎತ್ತಿ ಹೇಳಿದರೆ ಇನ್ನೊಂದೆಡೆಗೆ ತಾಯಿಯ ಸ್ಥಾನವನ್ನು ಭರಿಸಲು ಮತ್ಯಾರದಿಂದ ಅಥವಾ ಮತ್ತಾವುದರಿಂದಲೂ ಸಾಧ್ಯವಿಲ್ಲ ಎನ್ನುವದನ್ನು ಇಲ್ಲಿ ಗುರುತಿಸಬಹುದಾಗಿದೆ. ಅದಕ್ಕೆಂದೇ ತಾಯಿಯನ್ನು ದೇವರಿಗೆ ಹೋಲಿಸಿದ್ದು ಕಂಡು ಬರುತ್ತದೆ.

ಉದಾರೀಕರಣ, ಜಾಗತೀಕರಣ, ಖಾಸಗೀಕರಣದ ಪ್ರಸ್ತುತ ಸಂದರ್ಭದಲ್ಲಿ ಗಂಡು-ಹೆಣ್ಣುಗಳು ಪರಸ್ಪರ ಮೆಚ್ಚಿ, ಪ್ರೀತಿಸಿ ಮದುವೆ ಆಗುವುದು ಪಾಶ್ಚಾತ್ಯರ ಪ್ರಭಾವದಿಂದ ಕಂಡು ಬರುತ್ತಲಿದೆ. ಹೀಗಾಗಿ ಇಂಥ ಹೆಣ್ಣು ಮಕ್ಕಳು ತಮ್ಮ ತಾಯಿ- ತವರನ್ನು ಹಚ್ಚಿಕೊಳ್ಳದಿದ್ದರೆ ಆಶ್ಚರ್ಯವಿಲ್ಲ. ಜೊತೆಗೆ ಇಂದು ವಿಭಕ್ತ ಕುಟುಂಬ ಹಾಗೂ ಉದ್ಯೋಗ ವಿದ್ಯಾಭ್ಯಾಸಗಳು ಸಹ ತಾಯಿ- ತವರು ಹಬ್ಬ ಹರಿದಿನಗಳನ್ನು ಹೆಣ್ಣು ಮಕ್ಕಳು ಆತುರ, ಕಾತುರ ಪಡದಂತೆ ಮಾಡುತ್ತಿರುವುದು ಕಂಡು ಬರುತ್ತಲಿದೆ.

ಆದರೆ, ಹಿಂದಿನ ವಾತಾವರಣ ಹಾಗಿರಲಿಲ್ಲ. ಆಗೆಲ್ಲಾ ಕುಟುಂಬಗಳ ಹಿರಿಯ ಮನೆತನ, ಗುಣ ಹಾಗೂ ಆಸ್ತಿಯನ್ನು ಪರಿಗಣಿಸಿ ಅನ್ನುಳ್ಳ ಮನೆಗೆ ಹೆಣ್ಣನ್ನು ಕೊಡುತ್ತಿದ್ದು, ಅಂತಹ ಮನೆಯ ಹೆಣ್ಣು ತರುತ್ತಿದ್ದದ್ದು ಕಂಡು ಬರುತ್ತದೆ. ಅಂತೆಯೇ ಗಂಡಿಗೆ ಹೆಣ್ಣು ಕೊಡುವ, ಲಗ್ನ ನಿಶ್ಚಯ ಮಾಡುವ ಓಡಾಡಿಕೊಂಡು ಮದುವೆ ಮಾಡುವ ಜವಾಬ್ದಾರಿಯಲ್ಲ ಮನೆಯ ಯಜಮಾನ-ಯಜಮಾನಿಯರದಾಗಿರುತ್ತಿದ್ದುದು ಗಮನೀಯ. ತನ್ನ ಗಂಡನಾಗುವಾತನನ್ನಾಗಲಿ, ಅತ್ತೆಯ ಮನೆಯನ್ನಾಗಲಿ ಮೊದಲು ಕಂಡರಿಯದಿದ್ದ ಬಾಲೆ ಸಹಜವಾಗಿಯೇ ತುಂಬ ಭಯ, ಸಂಕೋಚಗಳಿಂದ ಗಂಡನ ಮನೆ ಹೊಕ್ಕು ಅಳುಕತ್ತಲೇ ಬಾಳುತ್ತಿದ್ದಳೆಂಬುದು ಬುಲಾಯಿ ಹಾಡುಗಳಲ್ಲಿ ಗುರುತಿಸಬಹುದು. ಅತ್ತೆ ಮಾವಂದಿರ ಬಗೆಗಿರಲಿ, ತನ್ನ ಗಂಡನ ಬಗೆಗಾದರೂ ತುಂಬಾ ಸಲಿಗೆಯಿಂದ ಸ್ವತಂತ್ರವಾಗಿ ವರ್ತಿಸುವಂತಿರಲಿಲ್ಲ. ಇಂಥ ವಾತಾವರಣ ಇವತ್ತೂ ಪೂರ್ತಿಯಾಗಿ ಬದಲಾಗಿಲ್ಲ. ಇಂತಹ ಉಸಿರುಗಟ್ಟುವ ಪರಿಸರದಿಂದ ಬಿಡುಗಡೆ ಪಡೆಯಲಿದ್ದ ಒಂದೇ ತಾಣವೆಂದರೆ ತವರು. ಎಂತಲೇ ತವರಿಗೆ ಹೋಗಲು ತವಕ ಪಡುವ ಹೆಣ್ಣಿನ ವ್ಯಾಮೋಹ ವಿಪರೀತ ಹಬ್ಬ ಹುಣ್ಣಿಮೆಗಳಲ್ಲಿ ತಮ್ಮ ತೌರುಮನೆಯವರು ಕರೆಯಲು ಬಾರದಿದ್ದರೆ

ಅವಳಿಗೆ ತುಂಬಾ ಕಳವಳ. ಅಂತಹ ಭಾವವನ್ನು ಈ ಹಾಡಿನಲ್ಲಿ ಕಾಣಬಹುದು.

ನನ್ನ ಖಳಬಿ ಆರು ತಿಂಗಳಾಯ್ತು ತಿರುಗಿ ಒಬ್ಬರೂ
ಬರುವದಿಲ್ಲ ಅವ ನಮ್ಮಪ್ಪನ ಮನಸ ಬೇರೆ ಕೋಲೆಣ್ಣ ಕೋಲೆ
ನನ್ನ ಖಳಬಿ ಆರು ತಿಂಗಳಾಯ್ತು ತಿರುಗಿ ಒಬ್ಬರೂ
ಬರುವನಿಲ್ಲ ಆಕಿ ನಮ್ಮವ್ವನ ಮನಸ ಬೇರೆ ಕೋಲೆಣ್ಣ ಕೋಲೆ [೧೮]

ತಂದೆ ತಾಯಿಯರನ್ನು ನೆನೆಯುವಂತೆ ಅಣ್ಣನಿಗಾಗಿಯೂ ಹಂಬಲಿಸುತ್ತಾಳೆ.

ಆಷಾಡ ಮಾಸ ಬಂದಿತವ್ವ ಖಾಸ ಅಣ್ಣ ಬರಲಿಲ್ಲ
ಏಸದಿನ ನೋಡಲಿ ಅವನ ಹಾದಿ ಕೋಲೆಣ್ಣ ಕೋಲೆ
ಊರಧೂರ ಮುಂಗೌಡ ಅದಾರ ಕೈಯಲ್ಲಿ ಹೇಳಿ ಖಳಲಿ
ಹತ್ತಲಿಲ್ಲ ಹಳ್ಳಿ ಹಂಪಲ ಕೋಲೆಣ್ಣ ಕೋಲೆ [೧೯]

ಹೀಗೆ ಅಣ್ಣ ತನ್ನನ್ನು ಹಬ್ಬಕ್ಕೆ ಕರೆದುಕೊಂಡು ಒಯ್ಯಲು ಯಾವಾಗ ಬರುತ್ತಾನೆಂದು ಹಂಬಲಿಸುತ್ತಾಳೆ. ತನ್ನಣ್ಣ-ತಮ್ಮಂದಿರು ಸುಖವಾಗಿರಲೆಂದು ನಾಗರ ಕಲ್ಲಿಗೆ ಹರಕೆ ಹೊತ್ತು ಅವರ ಬರಬಿಗಾಗಿ ಹಂಬಲಿಸುತ್ತಾಳೆ, ಕಾಯುತ್ತಾಳೆ.

ಈ ಕಡೆ ತವರು ಮನೆಯಲ್ಲಿ ತಾಯಿಗೆ ಮಗಳನ್ನು ಕರೆದು ತರುವ ಸಂಭ್ರಮ. ತನ್ನ ಮಗನನ್ನು ಕರೆದು, ಮಗಳನ್ನು ಹಬ್ಬಕ್ಕೆ ಕರೆದುಕೊಂಡು ಬರಲು ಕಳುಹಿಸುತ್ತಾಳೆ.

ನಾಗರ ಪಂಚಮಿ ನಾಡಿಗಿ ದೊಡ್ಡದು
ನಾಳೆ ಮಗಳ ಸಂಗಮ್ಮಗ ಕರಿಹೋಗ ಕೋಲೆಣ್ಣ ಕೋಲೆ
ಎತ್ತಾರ ತಂದಾನ ಪಟ್ಟರ ಬಿಗದಾನ
ಮನಿಕಡಿ ಜ್ಯಾಕೆಂತ ಹೇಳ್ಯಾನೆ ಕೋಲೆಣ್ಣ ಕೋಲೆ [೨೦]

ಎತ್ತನ್ನು ತೆಗೆದುಕೊಂಡು ತಂಗಿಯನ್ನು ಕರೆಯಲು ಹೋಗುತ್ತಾನೆ ಎನ್ನುವಲ್ಲಿ ಆಗಿನ ಸಾರಿಗೆ ವ್ಯವಸ್ಥೆಯನ್ನು ತಿಳಿಯಬಹುದು. ಬಹುಶಃ ಆಗ ಎತ್ತು, ಕುದುರೆ, ಗಾಡಿ, ಒಂಟೆ, ಇತ್ಯಾದಿಗಳೇ ಸಾರಿಗೆ ಸಾಧನಗಳಾಗಿದ್ದಿರಬಹುದು. ಇಂದಿನಂತೆ ಆಗ ವಾಹನಗಳ ಸೌಕರ್ಯಗಳಿರಲಿಲ್ಲ ಎಂಬುದನ್ನು ಸೂಚಿಸುವಂತಿದೆ.

ಮೂರ ಸಂಜೆ(ಮುಸ್ಸಂಜೆ)ಯಲ್ಲಿ ಕರೆಯಲು ಬರುವ ಅಣ್ಣನನ್ನು ಕಂಡು ತನಗೆ ಅತ್ತೆ ಮನೆಯವರು ಹಬ್ಬದ ದಿನವೇ ತವರಿಗೆ ಕಳುಹಿಸುವರೋ ಇಲ್ಲೋ ಎಂಬ ಅಳುಕು ಅವಳಿಗೆ. ಏಕೆಂದರೆ ಆಗ ತವರಿಗೆ ಮುಂಜಾನೆ ಹೋಗಿ ಸಂಜೆಗೆ ಬರುವ ಪದ್ಧತಿ ಇದ್ದಂತೆ ಕಂಡು ಬರುವದಿಲ್ಲ. ಹಬ್ಬಕ್ಕಾದರೆ ಮೊದಲೇ ಹೋಗಿ ನಾಲ್ಕೆಂಟು ದಿವಸ ಇದ್ದು ಬರುವ ರೂಢಿ ಕಂಡು ಬರುತ್ತದೆ. ಜೊತೆಗೆ ಸೊಸೆಗೆ ಯಾವ ನಿರ್ಧಾರಗಳನ್ನು ತೆಗೆದುಕೊಳ್ಳುವ ಸ್ವಾತಂತ್ರ್ಯ ಇರುವಂತೆ ಕಾಣದು. ಅತ್ತೆ, ಮಾವ, ಮನೆಯಲ್ಲಿ ಎಲ್ಲರೂ ಒಪ್ಪಿದರೆ ಮಾತ್ರ ಅವಳು ತವರಿಗೆ

ಹೋಗಬೇಕು. ಹೀಗಾಗಿ ಸಂಜೆಗೆ ಅಣ್ಣ ಬಂದಾಗ ಒಂದು ರೀತಿಯಲ್ಲಿ ಭಯ, ಕಣ್ಣಲ್ಲಿ ನೀರು, ಆದರೆ ಕರೆಯಲು ಬಂದಣ್ಣನದ್ದು ಧೃಢ ನಿರ್ಧಾರ.

ಅಣ್ಣ ಬರುವುದು ಕಂಡು ಕಣ್ಣ ತುಂಬ ನೀರು ತಂದು
ಮಾಡಿ ಕುಂತಾಳ ತಂಗಿ ಸಣ್ಣ ಮಾರಿ ಕೋಲೆಣ್ಣ ಕೋಲೆ
ಯಾಕ ತಂಗಿ ದುಃಖಿಸ್ತಿ ಸಾಕ ಸುಮ್ಮನಿರು ಹೋಗ
ಮೀರಿ ಹೋಗಣಿಲ್ಲ ಪಂಚಮಿ ಕೋಲೆಣ್ಣ ಕೋಲೆ [೨೧]

ಅಣ್ಣ ಮನೆಯವರನ್ನೆಲ್ಲಾ ಒಪ್ಪಿಸಿ, ಅವರ ಒಪ್ಪಿಗೆ ಪಡೆದು ತಂಗಿಯನ್ನು ಕರೆದುಕೊಂಡು ಬರುವಾಗ ನೆರೆದ ಗೆಳದಿಯರಿಗೆ ತನ್ನ ತಾಯಿಯ ಕುರಿತು ಹಂಬಲವನ್ನು ವ್ಯಕ್ತಪಡಿಸುವ ಬಗೆ ಹೀಗಿದೆ.

ಖಳವುತ್ತ ಬಂದ ಗೆಳದೇರಿಗೆ ಹೇಳಿ ಅತ್ತಳಾ ಅವರ ಮುಂದ
ಯಾವಾಗ ನೋಡೆ ನಮ್ಮವ್ವನ ಮಾರಿ ಕೋಲೆಣ್ಣ ಕೋಲೆ [೨೨]

ತವರೂರಿನಲ್ಲಿ ತಾಯಿ ಮಗಳ ದಾರಿ ಕಾಯುತ್ತಾ ಕಳವಳ ಪಡುತ್ತಾಳೆ. ಮಗಳು ಮನೆಗೆ ಬರುವದನ್ನು ಕಂಡು ತುಂಬಾ ಸಂತಸ, ಸಡಗರದಿಂದ ಕಾಲಿಗೆ ನೀರು ಕೊಟ್ಟು ಮಗಳನ್ನು ಒಳಗೆ ಕರೆಯುತ್ತಾಳೆ. ಈ ರೀತಿ ಕಾಲಿಗೆ ನೀರನ್ನು ಅಂಗಳದಲ್ಲಿಯೇ ಕೊಟ್ಟು ಒಳಗೆ ಕರೆದುಕೊಂಡು ಹೋಗುವ ಪದ್ಧತಿಯಿಂದು ಮರೆಯಾಗುತ್ತಿದೆ. ನೇರವಾಗಿ ಒಳಗೆ ಬಚ್ಚಲು ಮನೆಗೇ ಹೋಗುವುದು ಸಾಮಾನ್ಯವಾಗಿ ಕಂಡು ಬರುತ್ತಿದೆ. ಮಗಳನ್ನು ಕಂಡ ತಾಯಿಯ ಸಂಭ್ರಮವು ಈ ರೀತಿ ವ್ಯಕ್ತವಾಗಿದೆ.

ಮಗಳು ಬರುವುದು ಕಂಡು ತಂದು ಕೊಟ್ಟಾಳ ನೀರು
ಬಾ ಸಂಗಮ್ಮಂತ ಕರದಾಳ ಕೋಲೆಣ್ಣ ಕೋಲೆ [೨೩]

ಹೀಗೆ ನಕ್ಕು ನಲಿಯುತ್ತ, ನಿರ್ಭಯದಿಂದ ತವರು ಮನೆಯಲ್ಲಿ ತನ್ನ ಓರಗೆಯ ಗೆಳತಿಯರೊಡನೆ, ತನ್ನ ತಾಯಿಯ ಕಡೆಯಿಂದ ಬೇಕಾದುದ್ದನ್ನು ಪಡೆದು, ಬೇಡವಾದದನ್ನು ಬಿಟ್ಟು, ನಾಲ್ಕು ದಿನ ಸ್ವತಂತ್ರವಾದ ಹಕ್ಕಿಯಂತೆ ಕಾಲ ಕಳೆಯುವ ಅವಕಾಶ ದೊರೆಯುತ್ತಿದ್ದುದು ಕಂಡು ಬರುತ್ತದೆ.

ಯಾಂತ್ರಿಕ ಬದುಕನ್ನು ಸಾಗಿಸುತ್ತಿರುವ ಇಂದಿನ ಹೆಣ್ಣು ಮಕ್ಕಳಿಗೆ ಇಂತಹ ಅವಕಾಶಗಳು ಸಿಗುವುದೇ ಅಪರೂಪ. ಸಿಕ್ಕರೂ ಹಕ್ಕಿಯಂತೆ ಕಾಲ ಕಳೆಯುವುದು ಕಂಡು ಬರುವದಿಲ್ಲ. ಸದಾ ಒಂದಿಲ್ಲೊಂದು ಒತ್ತಡಗಳಲ್ಲಿಯೇ ಇಡೀ ಜೀವನವನ್ನು ಸಾಗಿಸುವುದು ಇಂದಿನ ಜೀವನ ಕ್ರಮವೆನ್ನಬಹುದು. ಅಂದಿನಂತೆ ಇಂದು ಬಿಡುಬಿನ ಸಂಭ್ರಮದಿಂದ ಹಬ್ಬಗಳ ಆಚರಣೆಗಳು ಕಂಡು ಬರುತ್ತಿಲ್ಲ.

ಹಬ್ಬ ಮುಗಿದ ಮೇಲೆ ಮರಳಿ ಗಂಡನ ಮನೆಗೆ ಹೋಗುವದಕ್ಕೆ ಅವಳ ಮನಸ್ಸು ಖಿನ್ನಗೊಳ್ಳುವುದು ಕಂಡು ಬರುತ್ತದೆ. ಅದಕ್ಕೆ

ಆಯಿತವ್ವ ಪಂಚಮಿ ಹೋಯಿತವ್ವ ಇಂದಿಗಿ
ಆಯ್ತು ಬರುವುದು ರಾತ್ರಿಗಳೆದು ಕೋಲೆಣ್ಣ ಕೋಲೆ
ಎನ್ನುತ್ತಾಳೆ. ಹೀಗೆಂದಾಗ ಅಣ್ಣ ಹೇಳುವ ಧೈರ್ಯದ ಮಾರುಗಳಿವು.
ಅಣ್ಣ ಹೇಳಿದ ಮಾತು ಶರಣಪ್ಪ ಮರೆತಾನ
ದೀವಳಗಿ ತನ ಧೈರ್ಯ ಮಾಡು ಕೋಲೆಣ್ಣ ಕೋಲೆ [೨೪]

ಪಂಚಮಿ ಹಬ್ಬ ಹೆಣ್ಣಿನ ಹಬ್ಬದಂತೆ, ದೀವಳಿಗೆಗೂ ಹೆಣ್ಣು ಮಗಳು ತವರಿಗೆ ಬರಲೇಬೇಕೆಂಬುದು ಕಂಡು ಬರುತ್ತದೆ. ಅಂದರೆ ಪಂಚಮಿಯಾದ ಒಂದೆರಡು ತಿಂಗಳಿಗೆ ಬರುವ ದೀವಳಿಗೆಗೆ ಅಣ್ಣಾ ಮತ್ತೆ ತಂಗಿಯನ್ನು ತವರಿಗೆ ಕರೆದುಕೊಂಡು ಬರುವ ಅಭಯ ನೀಡುತ್ತಾನೆ. ಆದರೂ ತಂಗಿಗೆ ಬದುಕಿನ ವಾಸ್ತವತೆಯನ್ನೂ ತಿಳಿಸುವ ಅಣ್ಣನ ಮಾತು ತುಂಬಾ ಮಹತ್ವದೆನಿಸುತ್ತದೆ.ಏಕೆಂದರೆ ಹುಟ್ಟಿ ಬೆಳೆದ ತವರು ಹೆಣ್ಣಿಗೆ ಬ್ಯಾಸರಲ್ಲ, ಆದರೂ ಅವಳು ಅಲ್ಲೇ ಇರುವುದು ಸಲ್ಲ, ಅದಕ್ಕೆಂದೇ ಅಣ್ಣ ತಂಗಿಗೆ ಹೇಳುವ ಈ ಮಾತು ತುಂಬಾ ಮಾರ್ಮಿಕವಾಗಿದೆ.

ಏಸದಿನ ಇದ್ದರ ತಾಸ ಹೊತ್ತು ಇದ್ದಾಂಗ
ಬ್ಯಾಸರ ಏನ ತಂಗಿ ತವರು ಮನಿ ಕೋಲೆಣ್ಣ ಕೋಲೆ
ಬ್ಯಾಸರ ಏನ ತಂಗಿ ತವರು ಮನಿಯಾಗ ಇರುವದಕ್ಕಿಂತ
ಲೇಸ ಹೋಗ ನಿನ್ನ ಒಗತಾನ ಕೋಲೆಣ್ಣ ಕೋಲೆ
ಲೇಸ ಹೋಗ ನಿನ್ನ ಒಗತಾನ ಇದ್ದರ
ಏಸುಬಾರಿ ಕರಿ ಬಂದ ಕೋಲೆಣ್ಣ ಕೋಲೆ
ಏಸುಬಾರಿ ನಿನ್ನ ಕರಿ ತಂದು ಉಡಿಸಿದ
ರೇಶಮಿ ಭಾರಿ ಜರಾದಿತ್ತು ಸೀರೆ ಕೋಲೆಣ್ಣ ಕೋಲೆ [೨೫]

ಹೀಗೆ ತಂಗಿ ತನ್ನ ಗಂಡನ ಮನೆಯಲ್ಲಿ ಚೆನ್ನಾಗಿ ಬದುಕಿ ಬಾಳಿದರೆ ಅಂಥ ಎಷ್ಟೋ ಬಾರಿ ತವರಿಗೆ ಕರೆದುಕೊಂಡು ಬರುತ್ತೇನೆಂದು ಅಣ್ಣ ಹೇಳುವ ಮಾತಿನಲ್ಲಿ ತುಂಬಾ ಅರ್ಥವಿದೆ. **ಕೊಟ್ಟ ಹೆಣ್ಣು ಕುಲದ ಹೊರಗೆ** ಎನ್ನುವಂತೆ ಮದುವೆಯಾದ ಮೇಲೆ ಹೆಣ್ಣು ಬದುಕು ಮಾಡುವುದು ಗಂಡನ ಮನೆಯಲ್ಲಿ ಅಂದಾಗ ಮಾತ್ರ ಅವಳಿಗೆ ಸಮಾಜದಲ್ಲಿ ಒಂದು ರೀತಿಯ ಸ್ಥಾನ-ಮಾನ ಸಿಗುತ್ತದೆ. ಗಂಡನ ಮನೆಯಲ್ಲಿ ಹೇಗಿದ್ದರೂ ಸರಿ ಅವಳಿಗೆ ಗೌರವ ಮರ್ಯಾದೆ ಸಿಗುತ್ತದೆ. ಅದು ಬಿಟ್ಟು ತವರು ಮನೆಯಲ್ಲಿಯೇ ಉಳಿದರೆ ಅವಳಿಗೆ ಕವಡಿಯ ಕಿಮ್ಮತ್ತು ಸಿಗಲಾರದೆಂಬ ವಾಸ್ತವತೆಯನ್ನು ಇಲ್ಲಿ ಕಾಣಬಹುದು. ತಂಗಿಯನ್ನು ಅಣ್ಣ, ಮಗಳನ್ನುತಾಯಿ ಎಷ್ಟೇ ಪ್ರೀತಿಸಿದರೂ ಅವರು ಅವಳ ನೆಲೆಯಿರುವುದು ಗಂಡನ ಮನೆಯಲ್ಲಿ ಎಂಬ ಶಾಶ್ವತ ನೆಲೆಯ ಅರಿವನ್ನು ಮೂಡಿಸುವುದು ಕಂಡು ಬರುತ್ತದೆ. ಅದಕ್ಕೆಂದೇ ಗರತಿ ಹಾಡಿನಲ್ಲಿ **ಗಂಜಿಯ ಕುಡಿದರೂ ಗಂಡನ ಮನೆ ಲೇಸು** ಎಂದು ಹೇಳಿರಬಹುದು. ಹೀಗೆ ಈ ಹಾಡಿನಲ್ಲಿ ಹೆಣ್ಣಿನ

ಹಾಗೂ ತವರು ಮನೆಯ ಸಂಬಂಧವನ್ನು ಎಳೆ ಎಳೆಯಾಗಿ ಚಿತ್ರಿಸಿರುವುದು ತುಂಬಾ ಮಹತ್ವದ್ದಾಗಿ ಕಂಡು ಬರುತ್ತದೆ.

ಅಣ್ಣ ತಮ್ಮ - ಅಕ್ಕ ತಂಗಿ :

ಮದುವೆಯಾಗುವದಕ್ಕಿಂತ ಪೂರ್ವದಲ್ಲಿ ಅಣ್ಣ ತಮ್ಮ-ಅಕ್ಕ ತಂಗಿಯರಲ್ಲಿ ಅನ್ಯೋನ್ಯತೆಯು ಕಂಡು ಬರುತ್ತದೆ. ಅಕ್ಕ ತಂಗಿಯರು ಮದುವೆಯಾಗಿ ಬೇರೆ ಬೇರೆ ಊರುಗಳಲ್ಲಿ ನೆಲೆಸಿದಾಗ ತವರಿನಲ್ಲಿ ಇರುವವರು ಅಣ್ಣ- ತಮ್ಮ ಹಾಗೂ ಅತ್ತಿಗೆಯರು. ತಂದೆ- ತಾಯಿಯ ಶಕ್ತಿ ನಿಂತು ಕೈಕಾಲು ಸೋತು ಅಣ್ಣನ ಕೈಗೆ ಮನೆಯ ಕಾರುಭಾರೆಲ್ಲ ಬಂದಾಗ ಅಕ್ಕ- ತಂಗಿಯರಿಗೆ ಅಣ್ಣ- ತಮ್ಮಂದಿರು ಆತ್ಮೀಯವಾಗಿರಬಹುದು ಅಥವಾ ಅನಾದರ ತೋರಿ ಅವರನ್ನು ದೂರ ಮಾಡಲೂ ಬಹುದು. ಈ ಕುರಿತ ಅನುಭವದ ಬುಲಾಯಿ ಹಾಡುಗಳನ್ನು ಕಾಣಬಹುದು. ಹೆಣ್ಣು ಮಕ್ಕಳು ತಾವು ನೋಡಿದ ಅಥವಾ ಅನುಭವಿಸಿದ ಹಲವು ಘಟನೆಗಳೋ, ಕೇಳಿದ ಕೆಲವು ಸಂಗತಿಗಳನ್ನೇ ಈ ಹಾಡುಗಳಲ್ಲಿ ಹೆಣೆದಿಟ್ಟಂತೆ ಕಾಣುತ್ತವೆ.

'ಗೌಡರ ಮಲ್ಲಮ್ಮನ ಹಾಡಿ'ನಲ್ಲಿ ಗಂಡನ ಮನೆಯಲ್ಲಿದ್ದ ಮಲ್ಲಮ್ಮನಿಗೆ ಅವಳ ಅಣ್ಣ-ತಮ್ಮರು ಹೋರಾಟಕ್ಕೆ ಹೋಗಿ ಮಡಿದ ಸುದ್ದಿ ಬರುತ್ತದೆ. ಆಗ ಎಷ್ಟು ಬೇಡವೆಂದರೂ ಮನೆಯವರ ಮಾತು ಕೇಳದೆ ಮಲ್ಲಮ್ಮ ತವರಿಗೆ ಹೋಗಲು ತಯ್ಯಾರಾಗುತ್ತಾಳೆ. ಆದರೆ ಹೊಳೆಯನ್ನು ದಾಟಿ ತವರಿಗೆ ಹೋಗಬೇಕು ತುಂಬಿದ ಹೊಳೆಯಾದ ಕಾರಣ ಹೊಳೆದಾಟಿಸುವ ಅಂಬಿಗನೂ ಹೋಗಲು ನಿರಾಕರಿಸುತ್ತಾನೆ. ಆಗ ಮಲ್ಲಮ್ಮ ಅವನಿಗೆ ತನ್ನೆಲ್ಲಾ ಒಡವೆಗಳನ್ನು ಕೊಡುವದಾಗಿ ಹೇಳುತ್ತಾಳೆ. ಆದರೆ ಹೊಳೆ ತುಂಬಿದ್ದರಿಂದ ಅಂಬಿಗ ಸಧ್ಯದಲ್ಲಿ ಹೋಗುವುದು ಬೇಡ ಎನ್ನುತ್ತಾನೆ. ಆಗ ತಡೆಯದೇ ಮಲ್ಲಮ್ಮ ತಾನೇ ನೀರಿಗೆ ಧುಮ್ಮುಕ್ಕುತ್ತಾಳೆ.ಕೂಡಲೇ ಕನಿಕರದಿಂದ ಅಂಬಿಗನೂ ನೀರಿಗೆ ಧುಮ್ಮುಕ್ಕುತ್ತಾನೆ. ನೀರಿನ ಸೆಳೆತ ಹೆಚ್ಚಾಗಿರುವದರಿಂದ ಅವನಿಗೆ ಮಲ್ಲಮ್ಮನಾಗಲಿ, ಅವಳ ಸೀರೆಯ ಸೆರಗೂ ಸಹ ಸಿಗುವದಿಲ್ಲ. ಅವಳು ತುಂಬಿದ ಹೊಳೆಯಲ್ಲಿ ಮುಳುಗಿ ಸಾಯುತ್ತಾಳೆ. ಹೀಗೆ ತನ್ನ ಅಣ್ಣ-ತಮ್ಮರ ಸಾವಿನ ಸುದ್ದಿಯಿಂದ ಕಂಗೆಟ್ಟ ಸಹೋದರಿ ತನ್ನ ಪ್ರಾಣವನ್ನು ಲೆಕ್ಕಿಸದೇ ತವರಿಗೆ ಹೋಗುವ ಹಂಬಲದಿಂದ ಹೊಳೆಯ ಪಾಲಾದ ಸಹೋದರಿಯ ಪ್ರೀತಿಯ ಕತೆಯಿದು.

ಗೌಡರ ಮಲ್ಲಮ್ಮನ ಅಣ್ಣಂದಿರು ತಮ್ಮಂದಿರು
ಹೋರಾಟಕ್ಕೆ ಹೋಗಿ ಮಡದಾರೆ ರನ್ನದೇ ಕೋಲು ಕೋಲ
ಅಡಗಿಯ ಮನೆಯಲ್ಲಿ ಮಜ್ಜಿಗಿ ಮಾಡುವ ಅತ್ತೆಮ್ಮ
ಹೋಗಿ ಬರುತ್ತಿನಿ ನನ್ನ ತವರಿಗೆ ರನ್ನದೇ ಕೋಲು ಕೋಲ
ಅತ್ತೆಮ್ಮ ಹೋದರೇನು ತರಲಿಲ್ಲ ಇದ್ದರೇನು ಬರುವದಿಲ್ಲ
ಬ್ಯಾಡೆ ಸೊಸಿಮುದ್ದ ಮರಣವೇ ರನ್ನದೇ ಕೋಲು ಕೋಲ [೨೬]

ಹೀಗೆ ಅತ್ತೆ-ಮಾವ,ನೆಗೆಣ್ಣಿ, ಗಂಡ, ಭಾವ ಬೇಡವೆಂದರೂ ಕೇಳದೇ ಹಠ ಹಿಡಿದು ಹೋಗುತ್ತಾಳೆ. ಹೊಳೆಯ ದಂಡೆಯಲ್ಲಿ ಅಂಬಿಗನೂ ಸಹ ಬೇಡವೆಂದು ನಿರಾಕರಿಸುತ್ತಾನೆ. ಆಗ ಅವಳು ಹೊಳೆಗೆ ತಾನೇ ಇಳಿದದ್ದು ಹೀಗೆ

ಅಷ್ಟು ಬಂಗಾರ ತಗೋಂಡು ಸೀರಿ ಪದರಾಗ ಕಟ್ಟಿದ್ದಾಳೆ
ನಡು ನೀರಾಗ ಮುಣಗ್ಯಾಳೆ ಮಲ್ಲಮ್ಮ ರನ್ನದೆ ಕೋಲು ಕೋಲ [೨೭]

ಸಹೋದರರಿಗಾಗಿ ತನ್ನ ಪ್ರಾಣವನ್ನು ಲೆಕ್ಕಿಸದೇ ಸಹೋದರಿಯ ಚಿತ್ರಣ ಒಂದಾದರೆ, ಸ್ವಾರ್ಥದಿಂದ ಹಣ- ಬಂಗಾರದ ಆಸೆಗಾಗಿ ತನ್ನ ಸ್ವಂತ ಅಣ್ಣನನ್ನೇ ವಿಷ ಇಕ್ಕಿ ಕೊಂದ ತಂಗಿಯ ಚಿತ್ರಣವೂ ಮನ ಕಲಕುವಂತೆ ಮೂಡಿ ಬಂದಿರುವುದು ವಿಪರ್ಯಾಸ.

ವರುಷಿಗಿ ಬರೋದು ದೊಡ್ಡದು ದೀಪಾವಳಿ ಹಬ್ಬ
ತಂಗಿ ನೀಲಮ್ಮಗ ಕರತಾರೋ ರನ್ನದ ಕೋಲು ಕೋಲೆ

ಸಂಪ್ರಾದಾಯದಂತೆ ದೊಡ್ಡ ಹಬ್ಬವಾದ ದೀಪಾವಳಿಗೆ ಹೆಣ್ಣು ಮಗಳಾದ ನೀಲಮ್ಮನನ್ನು ಕರೆದು ತರಲು ತಾಯಿ ತನ್ನ ಮಗನಿಗೆ ಹೇಳುತ್ತಾಳೆ. ಆಗ ಮಗ ತನ್ನ ತಾಯಿಯ ಮಾತಿನಂತೆ ತಂಗಿ ನೀಲಮ್ಮನನ್ನು ಕರೆಯಲು ತನ್ನೆಲ್ಲಾ ವಸ್ತ್ರ- ಒಡವೆಗಳನ್ನು ಧರಿಸಿಕೊಂಡು ಹೋಗುತ್ತಾನೆ. ಅಣ್ಣನು ಕರೆಯಲು ಬಂದದ್ದು ತಂಗಿ ತುಂಬಾ ಸಂತೋಷವನ್ನುಂಟು ಮಾಡುತ್ತದೆ. ಹೀಗಾಗಿ ಸಂಭ್ರಮದಿಂದ ಕಾಲಿಗೆ ನೀರು ಕೊಟ್ಟು ಒಳಗೆ ಕರೆದುಕೊಂಡು ಹೋಗಿ ಉಪಚಾರ ಮಾಡುತ್ತಾಳೆ. ಆದರೆ ಅವಳ ದುರಾಸೆ, ಒಡವೆ- ಹಣಗಳ ಮೇಲಿನ ಅತಿಯಾಸೆ ಕರುಳ ಬಳ್ಳಿಯ ಸಂಬಂಧವನ್ನು ಕಡೆಗಣಿಸುವಂತೆ ಮಾಡುತ್ತದೆ. ಹೀಗಾಗಿ ಅವಳು ತನ್ನಣ್ಣನ್ನು ಮುಗಿಸಿ ಬಿಡಲು ವಿಷವನ್ನು ತರುತ್ತಾಳೆ.

ಅಣ್ಣ ಬಂದಾನೆಂದು ಖುಷಿಯ್ಯಾಗಳ ಮನದಾಗ
ಲಗು ಮಾಡಿ ನೀರು ಕೊಡುತ್ತಾಳ ರನ್ನದ ಕೋಲು ಕೋಲೆ
ಅಲ್ಲಿಂದ ನೀಲಮ್ಮ ದುಕನಕ ಹೋಗ್ಯಾಳ
ದುಡ್ಡಿಂದ ಇಷವ ತಂದಾಳ ರನ್ನದ ಕೋಲು ಕೋಲೆ [೨೮]

ಮೃಷ್ಟಾನ್ನದ ಅಡುಗೆ ಮಾಡಿ ವಿಷವನ್ನು ಕಲಸಿ ಉಣ ಬಡಿಸುತ್ತಾಳೆ. ವಿಷ ಉಂಡ ಅಣ್ಣನಿಗೆ ದೇವರು ಮನೆಯಲ್ಲಿ ಹೂವಿನ ಹಾಸಿಗೆ ಹಾಸಿ ಮಲಗಿಸುತ್ತಾಳೆ. ಆದರೆ ಸ್ವಲ್ಪ ಹೊತ್ತಿನಲ್ಲೇ ನೀರಿಗಾಗಿ ಬಾಯಿ ಬಿಟ್ಟರೂ ಒಂದು ಗುಟುಕು ನೀರು ಸಹ ಕೊಡುವುದಿಲ್ಲ. ಕಾಲ ಒಿಕ್ಕಿ ಕೊನೆಗೆ ಜೀವ ಬಿಟ್ಟ ಅಣ್ಣನನ್ನು ತನ್ನ ಗಂಡನಿಗೆ ಕರೆದು ತೋರಿಸುತ್ತಾಳೆ. ಗಂಡ ಬಯ್ದರೂ ಕೇಳದೆ ಅವನ ಮೈ ಮೇಲಿನ ಬಂಗಾರದ ಒಡವೆಗಳನ್ನು ಬಿಚ್ಚಿಕೊಂಡು, ಹಣ ತೆಗೆದುಕೊಂಡು ಘೋಂಗಡಿಯಲ್ಲಿ ಸುತ್ತಿ ಬಾವಿಗೆ ಹಾಕುತ್ತಾಳೆ.

ಅಲ್ಲಿಂದ ನೀಲಮ್ಮ ಘೋಂಗಡಿ ತಂದಾಳ
ಘೋಂಗಡಿ ಒಳಗೆ ಅಣ್ಣನ ಹಾಕೆಳ ರನ್ನದ ಕೋಲು ಕೋಲೆ

ಘೋಂಗಡಿ ಮೆಟ್ಟಿ ಕಟ್ಯಾಳೆ ನೀಲಮ್ಮ

ಹಾಳ ಬಾವಿ ಒಳಗ ಹಾಕೇಳ ರನ್ನದ ಕೋಲು ಕೋಲ [೨೯]

ಮರುದಿವಸ ತಾಯಿಗೆ ಕೆಟ್ಟ ಕನಸು ಬಿದ್ದು, ಕಳವಳಗೊಂಡು ಅವಳೇ ಮಗಳ ಮನೆಗೆ ಬರುತ್ತಾಳೆ. ತಾಯಿ ಬಂದು ಮಗಳಿಗೆ ಅಣ್ಣನೆಲ್ಲಿ ಎಂದು ಕೇಳಿದ್ದಕ್ಕೆ ಅವನು ಬಂದೇ ಇಲ್ಲ ಎಂದು ಆಣೆ ಮಾಡಿ ಹೇಳುತ್ತಾಳೆ. ಹೀಗೆ ಅಣ್ಣನ ಬಂಗಾರ- ಹಣದ ಆಸೆಯಿಂದ ತನ್ನಣ್ಣನನ್ನೇ ಕೊಂದ ನೀಲಮ್ಮನಂತಹ ತಂಗಿಯರೂ ಸಮಾಜದಲ್ಲಿದ್ದಿರಬಹುದು ಆದರೂ ಅಂತಹವರು ತುಂಬಾ ವಿರಳವೆಂದೇ ಹೇಳಬಹುದು.

ಮೇಲಿನದಕ್ಕೆ ತದ್ವಿರುದ್ಧವಾದ ಘಟನೆಯೊಂದರ ಪ್ರಸ್ತಾಪವು ಬುಲಾಯಿಯ ಈರಮ್ಮನ ಹಾಡಿನಲ್ಲಿ ಕಂಡು ಬರುತ್ತದೆ. ಹಬ್ಬಕ್ಕೆಂದು ತವರು ಮನೆಗೆ ಕರೆದುಕೊಂಡು ಬಂದ ತಂಗಿಗೆ ಹೆಂಡತಿಯ ಮಾತು ಕೇಳಿ ಅಣ್ಣ ಅನುಮಾನ ಪಡುತ್ತಾನೆ. ತಂಗಿಯನ್ನು ಗಂಡನ ಮನೆಗೆ ಒಯ್ದು ಬಿಡುವೆನೆಂದು ತಾಯಿಗೆ ಹೇಳುತ್ತಾನೆ. ಆಗ ತಾಯಿ ಮಗನಿಗೆ

ಅಮವಾಸಿ ಹಿಂದ ಇಟ್ಟಿ ಹುಣ್ಣಿ ಮುಂದ ಇಟ್ಟಿ

ಈಗ ಯಾಕೋ ಹೋಯಿತೋ ಮಗಳಿಗಿ ಕೋಲೆಣ್ಣ ಕೋಲೆ [೩೦]

ಎನ್ನುತ್ತಾಳೆ. ಅದಕ್ಕೆ ಅವನು ನೀಲಮ್ಮನ ಅತ್ತೆಗೆ ಮೈಯಲ್ಲಿ ಹುಷಾರಿಲ್ಲ, ಅವಳನ್ನು ಅವರ ಮನೆಗೆ ಬಿಟ್ಟು ಬರುತ್ತೇನೆಂದು ಹೇಳುತ್ತಾನೆ. ಮಗಳನ್ನು ಕಳುಹಿಸುತ್ತಾ ತಾಯಿ,

ಹೋದರ ಹೋಗವ್ವ ಜಪ್ಪನ ಬಾರವ್ವ

ಬರುತ್ತಾರೆ ಮಗನ ಎತ್ತಿ ಬಾರವ್ವ ಕೋಲೆಣ್ಣ ಕೋಲೆ

ಎನ್ನುತ್ತಾಳೆ. ಅದಕ್ಕೆ ಮಗಳು ಕೊಡುವ ಉತ್ತರವು ಈ ರೀತಿಯಾಗಿದೆ.

ಮಗನಿಗೇನು ಎತ್ತೆನಿಲ್ಲ, ನಾನೇನು ಬರೋಣಿಲ್ಲ

ಬೆನ್ನ ಹಿಂದೆ ಹನ ದುಸಮಾನ ಕೋಲೆಣ್ಣ ಕೋಲೆ...[೩೧]

ಎಂದು ಹೇಳುತ್ತ ಅಣ್ಣನ ಜೊತೆಯಲ್ಲಿ ಹೋಗುತ್ತಾಳೆ. ಊರ ಹೊರಗಿನ ಹೊಲಕ್ಕೆ ಒಯ್ದು ತನ್ನಲ್ಲಿರುವ ಜಂಬೆದಿಂದ ಚುಚ್ಚಿ ಸಾಯಿಸುತ್ತಾನೆ. ತಂಗಿಯ ಹೊಟ್ಟೆಯಲ್ಲಿನ ಕರುಳನ್ನು ತಂದು ತನ್ನ ಹೆಂಡತಿಗೆ ತೋರಿಸಿದಾಗ ಅವಳು ಪಡುವ ಅಭಿಪ್ರಾಯ ಈ ರೀತಿಯದು.

ಇದ್ದಾರೆ ಇರುತ್ತಿತ್ತು ಹೋದಾರೆ ಹೋಗುತ್ತಿತ್ತು

ಹೊಂಟ ಹೋಯಿತು ಎನ್ನ ಮೂಲ ಕೋಲೆಣ್ಣ ಕೋಲ [೩೨]

ಎಂಬಲ್ಲಿ ಅತ್ತಿಗೆ-ನಾದಿನಿಯರ ದ್ವೇಷವನ್ನು ಕಾಣಬಹುದಾಗಿದೆ. ಅತ್ತಿಗೆಗಿದ್ದ ನಾದಿನಿಯ ಮೇಲಿನ ದ್ವೇಷವೇ ಅಣ್ಣ-ತಂಗಿಯನ್ನು ಕೊಲ್ಲುವಂತೆ ಮಾಡುತ್ತದೆ. ಹೀಗೆ ಹಬ್ಬಕ್ಕೆಂದು ತವರು ಮನೆಗೆ ಬಂದ ನೀಲಮ್ಮ ಅತ್ತಿಗೆಯ ಮಾತಿಗಾಗಿ ಅಣ್ಣನಿಂದ ವಿನಾಕಾರಣ ಪ್ರಾಣವನ್ನು ಕಳೆದುಕೊಂಡಿದ್ದು ಕಂಡು ಬರುತ್ತದೆ.

'ಹರಸ್ಯಾಳ ಬಾಲಿ' ಎಂಬ ಹಾಡಿನಲ್ಲಿ ಅಣ್ಣನ ಹೆಂಡತಿ ಮಲಗಿದ್ದಾಗ ತಂಗಿಗೆ ಅಣ್ಣ ಶ್ಯಾವಕ್ಕಿ ಕುಟ್ಟಲು ಹೇಳುತ್ತಾನೆ.ಅಂದರೆ ಆಗ ಈಗಿರುವಂತೆ ಯಂತ್ರಗಳಿಂದ ಅಕ್ಕಿಯನ್ನು ಒಡೆಸುತ್ತಿರಲಿಲ್ಲ. ಮನೆಯಲ್ಲಿಯೇ ಭತ್ತ ಕುಟ್ಟಿ ಅಕ್ಕಿ ಮಾಡುವುದು ರೂಢಿಯಲ್ಲಿತ್ತೆಂಬ ಅಂಶವು ಇದರಿಂದ ತಿಳಿದು ಬರುತ್ತದೆ. ಆ ಕಾರ್ಯವನ್ನು ಮನೆಯಲ್ಲಿ ಹೆಣ್ಣು ಮಕ್ಕಳೇ ಮಾಡುವಂತೆ ಕಂಡು ಬರುತ್ತದೆ. ಅದಕ್ಕಾಗಿ ಅಣ್ಣನ ಮನೆಗೆ ಬಂದ ತಂಗಿಗೆ ಅಣ್ಣ ಶ್ಯಾವಕ್ಕಿ ಕುಟ್ಟಲು ಹೇಳಿದಂತೆ ಕಂಡುಬರುತ್ತದೆ. ಒಬ್ಬಳೆ ಕುಟ್ಟುವದಕ್ಕಿಂತ ಇಬ್ಬರಾಗಿ ಕುಟ್ಟಿದರೆ ಸರಿ ಹೋಗುತ್ತೇ, ನಿನ್ನ ಹೆಂಡತಿಯನ್ನು ಎಬ್ಬಿಸು ಎಂದು ಹೇಳುತ್ತಾಳೆ.ಅದಕ್ಕವನು ತಂಗಿಗೆ ನೀನೊಬ್ಬಳೇ ಎರಡೊಬ್ಬಿ ಮಾಡಿ ಕುಟ್ಟು, ಅವಳ ನಿದ್ದೆಗೆ ಭಂಗ ಮಾಡಬೇಡ ಎನ್ನುತ್ತಾನೆ. ಅದಕ್ಕೆ ತಂಗಿ ಅವಳನ್ನು ಎಬ್ಬಿಸಿದರೆ ಮಾತ್ರ ಕುಟ್ಟುತ್ತೇನೆ ಎನ್ನುತ್ತಾಳೆ. ಆಗ ಅವನು ಸಿಟ್ಟಿನಿಂದ ಬಂದ ಹಾದಿ ಹಿಡಿದು ಹೋಗು ಎಂದು ಹೇಳುತ್ತಾನೆ. ಕುಪಿತಳಾದ ತಂಗಿಯೂ ಕುದುರೆ ಅಥವಾ ಎತ್ತಿನ ಗಾಡಿಯನ್ನು ಕೊಟ್ಟು ಕಳುಹಿಸು ಎನ್ನುತ್ತಾಳೆ, ಆದರೆ ಅವನು ಕೊಡುವುದಿಲ್ಲ. ಆಗ ತಂಗಿ ತುಂಬಾ ನೊಂದುಕೊಂಡು ಗಂಡನ ಮನೆಗೆ ಹೋಗುತ್ತಾಳೆ. ಅವಳು ನೊಂದು ಹೋದ ಕಾರಣ ಇತ್ತ ತವರು ಮನೆಯಲ್ಲಿ ಎಲ್ಲರ ಪರಿಸ್ಥಿತಿ ಬಿಗಡಾಯಿಸುತ್ತದೆ.

ತಂಗಿ ಹೋದ ಮೂರ ದಿನಕ ಮನಿ ಮಂದಿಗೆ ಉಳಿಛಳಿ
ಕೇಳಸಿ ನೋಡಲ್ಲಿ ನಡೆದಾರ ಕೋಲೆಣ್ಣ ಕೋಲೆ
ಕೇಳಸಿ ನೋಡಿದರ ದೇವರಿಲ್ಲ ದಿಂಡರಿಲ್ಲ
ಮನಿ ಹೆಣ್ಣ ಮಗಳ ಉಸಿರೆಂದ ಕೋಲೆಣ್ಣ ಕೋಲೆ [೩೩]

ತವರು ಮನೆಯಿಂದ ನೊಂದು ಹೋದ ಹೆಣ್ಣು ಮಗಳ ಉಸಿರಿನಿಂದ ಮನೆಯಲ್ಲಿ ಯಾರಿಗೂ ಸೌಖ್ಯವಿಲ್ಲದ ವಿಷಯ ತಿಳಿದ ಅಣ್ಣನಿಗೆ ತನ್ನ ತಪ್ಪಿನ ಅರಿವಾಗುತ್ತದೆ. ಕೂಡಲೇ ಕುದುರೆಯನ್ನು ತೆಗೆದುಕೊಂಡು ತಂಗಿಯ ಮನೆಗೆ ಅವಳಿಗೆ ಕರೆಯಲು ಹೋಗುತ್ತಾನೆ. ಆದರೆ ತುಂಬಾ ಸ್ವಾಭಿಮಾನಿಯಾದ ತಂಗಿಗೆ ತವರಿನಲ್ಲಾದ ನೋವು ಮಾಸಿರದು. ಹೀಗಾಗಿ ಅವಳು ತನಗೆ ಅಣ್ಣ ಅಂದ ಮಾತುಗಳೆಲ್ಲಾ ತಿರುಗಿ ಹೇಳುತ್ತಾಳೆ. ಬಡವಳಾದ ತನಗೇಕಣ್ಣಾ ಕುದುರೆ ಎಂದು ಮರು ಪ್ರಶ್ನಿಸುತ್ತಾಳೆ. ಆಗ ಅಣ್ಣ ತಂಗಿಗೆ ತವರಿಗೆ ಬರಲು ಪರಿಪರಿಯಾಗಿ ಬೇಡಿಕೊಳ್ಳುತ್ತಾನೆ. ಅವಳಿಗೆ ಸೀರೆ ಕುಪ್ಪಸಗಳ ಆಮಿಷ ಒಡ್ಡುತ್ತಾನೆ. ಆದರೆ ಅವಳದ್ದು ಬರಲಾರೆನೆಂಬ ಛಲ. ಆಗ ಅಣ್ಣ

ತಪ್ಪಾಯ್ತು ನನ್ನಿಂದ ಮನ್ನಿಸ ಮನಿಗಿ ಬಂದು
ಹಿಂಗಾಗದವ್ವ ಮುಂದೆಂದು ಕೋಲೆಣ್ಣ ಕೋಲೆ

ಎನ್ನುತ್ತಾನೆ. ಆಗ ತಂಗಿಯು ತನ್ನ ಹಟವನ್ನು ಬಿಡಬೇಕಾಗುತ್ತದೆ.

ಅಣ್ಣನ ಮಾತು ಕೇಳಿ ಕರಗಿ ಮೌನವ ತಾಳಿ
ಮನದಾಗೆ ಹರಸ್ಯಾಳ ಬಾಲಿ ಕೋಲೆಣ್ಣ ಕೋಲೆ [೩೪]

ಹೀಗೆ ಹೆಣ್ಣು ಮಗಳ ಮನಸ್ಸು ನೋಯಿಸಿದರೆ ತವರು ಮನೆಗೆ ಕೇಡು ಉಂಟಾಗುತ್ತದೆಂಬ ಮಾತು ಇಂದು ಸಹ ಪ್ರಚಲಿತವಿದೆ. ಹೆಣ್ಣು ಮಕ್ಕಳು ಉಸಿರು ಹಾಕಬಾರದು, ಒಳ್ಳೆಯದಲ್ಲ ಎಂಬ ನಂಬಿಕೆಯೂ ಈ ಹಿನ್ನಲೆಯಲ್ಲಿಯೇ ಕಂಡು ಬರುತ್ತದೆ. ಅದಕ್ಕೆಂದೇ ಸೀರೆ, ಕುಪ್ಪಸ,ಬಳೆ ಮುಂತಾದವುಗಳನ್ನು ಉಡುಗೊರೆಯಾಗಿ ಕೊಡುವ ಸಂಪ್ರಾದಾಯ ಬೆಳೆದು ಬಂದಿರುವ ಸಾಧ್ಯತೆಯು ಕಂಡು ಬರುತ್ತದೆ. ಇಂದಿಗೂ ತವರು ಮನೆಗೆ ಹೋದ ಹೆಣ್ಣು ಮಕ್ಕಳಿಗೆ ಬರಿಗೈಯಲ್ಲಿ ಕಳುಹಿಸಿಕೊಡದೇ, ಉಡಿ ತುಂಬಿ ಕಳುಹಿಸಿ ಕೊಡುವದನ್ನು ಕಾಣಬಹುದು.

ಅಕ್ಕ-ತಂಗಿಯರ ಹಾಡಿನಲ್ಲಿ ಅಕ್ಕನ ಮನೆಗೆ ಹೋದ ತಂಗಿಗೆ ಭಾವ ಬಲವಂತದಿಂದ ಬಲತ್ಕಾರ ಮಾಡುತ್ತಾನೆ. ಆಗ ಅವಳು ಗರ್ಭಿಣಿಯಾಗುತ್ತಾಳೆ. ಅಕ್ಕನಿಗೆ ಈ ವಿಷಯವೇನೂ ಗೊತ್ತಿರುವದಿಲ್ಲ. ಮುಂದೆ ಸ್ವಲ್ಪ ದಿನಗಳಲ್ಲಿ ತಂಗಿ ತನ್ನ ತಂದೆಯ ಮನೆಗೆ ಹಿಂತಿರುಗಿ ಹೋಗಲು ತಯ್ಯಾರಾಗುತ್ತಾಳೆ. ತಂಗಿಗೆ ಅಕ್ಕ ಸಹಜವಾಗಿ ಮತ್ತೆಂದು ಬರುವಿ ಎಂದು ಕೇಳುತ್ತಾಳೆ. ಅದಕ್ಕೆ ತಂಗಿ ಕೊಡುವ ಉತ್ತರವು ಈ ರೀತಿಯಾಗಿರುತ್ತದೆ.

ನಿಂಬಿಯ ಚಿಗಿದಾಗ ಬಾಳಿ ಒಡೆದಾಗ
ನಾ ಬಂದೆ ನನ್ನ ಮಗ ಬಂದೆ ಕೋಲೆ
ನಾನುನೇ ಬಂದೆ ನನ್ನ ಮಗ ಬಂದ ಕಾಲಕ್ಕೆ
ಸಾಲ ಮಾಳಿಗಿ ಸರಿಪಾಲ ಕೋಲೆ
ಸಾಲನೆ ಮಾಳಿಗಿ ಸರಿಪಾಲ ಆಗುವಾಗ
ನೆತ್ತರ ಕಾಲ್ಲಿ ಹರದಾವೆ ಕೋಲೆ [೩೫]

ಅಂದರೆ ತಾನು ಮುಂದೆ ಸರಿಪಾಲ ತೆಗೆದುಕೊಳ್ಳುವ ಸವತಿಯಾಗಿ ಮಗನನ್ನು ಜೊತೆಯಲ್ಲಿ ಕರೆದುಕೊಂಡು ಬರುತ್ತೇನೆಂದು ಹೇಳುತ್ತಾಳೆ. ಆ ವೇಳೆಯಲ್ಲಿ ನೆತ್ತರದ ಕಾಲುವೆಯೂ ಹರಿಯಬಹುದೆಂಬ ಮುನ್ಸೂಚನೆಯನ್ನು ಕೊಟ್ಟು ಹೋಗುವುದು ಇಲ್ಲಿ ತುಂಭಾ ಗಮನಾರ್ಹವಾಗಿದೆ.

ಅಂದರೆ ಇಂದು ಒಡಹುಟ್ಟಿದ ತಂಗಿಯಾಗಿರುವ ನಾನು ನಾಳೆ ನಿನ್ನ ಸರಿ-ಸವತಿಯಾಗುವೆನು ಎಂಬಲ್ಲಿ ರಕ್ತ ಸಂಬಂಧಕ್ಕಿಂತ ಮುಂದಿನ ಸಂಬಂಧದ ಭೀಕರತೆಯು ಸ್ಪಷ್ಟವಾಗಿ ಕಂಡು ಬರುತ್ತದೆ. ಅದಕ್ಕೆಂದೇ ಹುಟ್ಟುತ್ತಾ ಕಳ್ಳು ಬಳ್ಳಿ ಬೆಳೆಯುತ್ತಾ ಭಾಗಾದಿ ಎಂದು ಹಿರಿಯರು ಹೇಳಿರಬಹುದು. ಸಂಬಂಧಗಳು ಯಾವ ರೀತಿಯಾಗಿ ಕಾಲ ಕಾಲಕ್ಕೆ ಬದಲಾವಣೆಯಾಗುತ್ತವೆ ಎಂಬುದು ಕಂಡು ಬರುತ್ತದೆ.

ಹೀಗೆ ಬುಲಾಯಿ ಹಾಡುಗಳಲ್ಲಿ ತಾಯಿ- ತವರು ಮಗಳು, ಅಣ್ಣ-ತಮ್ಮ ಅಕ್ಕ- ತಂಗಿಯರ ಕುರಿತಾದ ಅವರುಗಳ ಸ್ವಭಾವ, ಸಂಬಂಧ, ಪ್ರೀತಿ-ಸ್ವಾರ್ಥ ಮುಂತಾದ ವಿಷಯಗಳನ್ನು ತಿಳಿದುಕೊಳ್ಳಬಹುದಾಗಿದೆ.

ದಾಂಪತ್ಯ ಜೀವನ:

ಮದುವೆ ಮಾನವ ಸಮಾಜದ ಬಹುಮುಖ್ಯ ಘಟನೆ. ಮದುವೆ ಒಂದು ಸಾಮಾಜಿಕ ವ್ಯವಸ್ಥೆಯಾಗಿರುವುದು ಮಾನವ ಸಮಾಜದಲ್ಲಿಯೇ. ಹೀಗಾಗಿ ಮದುವೆ ಒಂದು ಕ್ರಮಬದ್ಧ ಸಂಸ್ಥೆಯಾಗಿ ಬೆಳೆದು ಬಂದಿದೆ ಎನ್ನುವುದು ಸಮಾಜ ಶಾಸ್ತ್ರಜ್ಞರ ಅಭಿಪ್ರಾಯ. 'ಮದುವೆ ಎಂದರೆ ಕೇವಲ ಲೈಂಗಿಕ ಸುಖ, ಸಂತಾನಾಪೇಕ್ಷೆಯ ಫಲ ಮಾತ್ರವಲ್ಲ. ದಂಪತಿಗಳ ಹಾಗೂ ಆಯಾ ಕುಟುಂಬಸ್ಥರ ಸಾಮಾಜಿಕ ಆಗು ಹೋಗುಗಳಲ್ಲಿ ಸಕ್ರೀಯ ಪಾತ್ರ ವಹಿಸುವಂಥ ಜವಾಬ್ದಾರಿಯುಳ್ಳ ಜೋಡಿಗಳ ಸುವ್ಯವಸ್ಥಿತ ಸಮ್ಮಿಲನ. ಅದು ಆಯಾ ಕುಟುಂಬದ ಬುನಾದಿ'[೩೭] ಎಂಬ ವಿದ್ವಾಂಸರ ಅಭಿಪ್ರಾಯ ಗಮನಾರ್ಹವಾಗಿದೆ.

ಮದುವೆ ಮಾನವ ಕುಟುಂಬ ಜೀವನದ ಆಸ್ತಿಭಾರ. ಜಗತ್ತಿನ ಎಲ್ಲ ಜನಾಂಗಗಳಲ್ಲೂ ಮದುವೆ ಆಯಾ ಜನಾಂಗದ ಪ್ರಧಾನ ಘಟನೆಯಾಗಿರುವದನ್ನು ಕಾಣುತ್ತೇವೆ. ಮದುವೆಯ ವ್ಯವಸ್ಥೆ ಇಲ್ಲದಿದ್ದರೆ ಮಾನವ ಕುಟುಂಬ ಜೀವನ ಈಗಿನಂತೆ ವ್ಯವಸ್ಥಿತವಾಗಿರುತ್ತಿರಲಿಲ್ಲವೇನೋ? ಇಂದು ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದ ನಮ್ಮಲ್ಲಿಯೂ ಕುಟುಂಬಗಳ ಸ್ಥಿತಿ ಮೊದಲಿನಂತೆ ಭದ್ರ ಹಾಗೂ ಆದರ್ಶಮಯವಾಗಿರದೇ ವಿಭಜನೆಯ ಸ್ಥಿತಿಯನ್ನು ತಲುಪಿರುವುದು ಶೋಚನೀಯ. ಆದರೆ ಹಿಂದೆ ಹಾಗಿರಲಿಲ್ಲ. ಕುಟುಂಬದ ಗೌರವ, ಪ್ರತಿಷ್ಠೆಗಾಗಿ ಗಂಡ-ಹೆಂಡತಿ ಅದರಲ್ಲೂ ಹೆಣ್ಣು ಅತ್ಯಂತ ಮುತುವರ್ಜಿಯಿಂದ ನಡೆಯುತ್ತಿದ್ದುದು ಕಂಡು ಬರುತ್ತದೆ.

ಮದುವೆಯನ್ನು ಆಯಾ ಜನಾಂಗಗಳು ತಮ್ಮಯ ವಿಧಿ-ವಿಧಾನಗಳಂತೆ ಮಾಡುವುದು ಲೋಕ ರೂಢಿ. ನಮ್ಮ ಬುಲಾಯಿ ಸಂಸ್ಕೃತಿಯಲ್ಲಿಯು ಮದುವೆಯ ರೀತಿ-ರಿವಾಜುಗಳನ್ನು ಅಳವಡಿಸಿದ್ದು, ಅವುಗಳನ್ನು ಹಾಡುಗಳಲ್ಲಿ ಗುರುತಿಸಬಹುದಾಗಿದೆ.

ಖಂಡಾಗ ಕುಟ್ಟ್ಯಾರ ಖಂಡಾಗ ಬೀಸ್ಯಾರ
ಲಗ್ನವ ಮಾಡುಬೇಕ್ರಿ ಅಲಂಕಾರ ಕೋಲ
ಹಾದೀಗಿ ಹಂದ್ರವ ಹಾಕಿ ಬೀದಿಗಿ ಛಳಿಯವ ಕೊಟ್ಟು
ಲಗ್ನವ ಅಗ್ಯಾವರಿ ಶಂಕರ ಕೋಲ
ಲಗ್ನವಾದ ಮೂರು ತಿಂಗಳಿಗಿ ದೊಡ್ಡವಳಾಗ್ಯಾಳ
ಸೋಬಾನ ಮಾಡಬೇಕ್ರಿ ಧರಾಂಧುರಿ ಕೋಲ [೩೭]

ಬುಲಾಯಿ ಸಂಸ್ಕೃತಿಯಲ್ಲಿ ಮದುವೆ ಮಾಡುವ ಸಂಭ್ರಮ ರೀತಿಯಿದು. ಖಂಡಾಗ ಆಗಿನ ಕಾಲದ ಅಳತೆಯ ದೊಡ್ಡ ಮೊತ್ತ ಮದುವೆಗೆ ಸೇರು, ಅಡ್ಡಿ ಸಾಲವು. ಹೀಗಾಗಿ ಖಂಡಾಗ ಕುಟ್ಟಿ, ಖಂಡಾಗ ಬೀಸಬೇಕು. ಕಾರಣ ಈಗಿನಂತೆ ಯಂತ್ರಗಳಿರಲಿಲ್ಲ. ನಮ್ಮವರು ಅಲಂಕಾರ ಪ್ರೀಯರು, ರಸಿಕರು. ಹೀಗಾಗಿ ಮದುವೆಯ ಸಂದರ್ಭದಲ್ಲಿ ಅಲಂಕಾರ ಮಾಡಿ

ಲಗ್ನ ಮಾಡಬೇಕು. ಅಲಂಕಾರ ಊರು, ಬೀದಿ, ಮನೆ, ಮನುಷ್ಯರೆಲ್ಲರನ್ನು ಕಾಣಬಹುದು. ಇದು ನಮ್ಮ ಜನರ ಶೃಂಗಾರ ಪ್ರೀಯತೆಯನ್ನು ಎತ್ತಿ ತೋಲಿಸುವಂತಹದು. ನಡೆದಾಡುವ ಹಾದಿಗೆಲ್ಲಾ ಹಂದರ,ಬೀದಿಗೆಲ್ಲಾ ಛಳಿ-ಸಾರಣಿ (ಸ್ವಚ್ಛ) ಹಾಕುವುದು. ಅದಕ್ಕೆಂದೆ ಮದುವೆ ಮಾಡಿ ನೋಡು ಎಂಬ ಗಾದೆ ಹುಟ್ಟಿರಬಹುದು. ಅಂದರೆ ಆ ವೇಳೆಯಲ್ಲಿ ತುಂಬಾ ಕೆಲಸಗಳಿರುತ್ತವೆ. ಜೊತೆಗೆ ಪದ್ದತಿಯಂತೆ ಕ್ರಮವಾಗಿ ಒಂದಾದ ಮೇಲೊಂದು ಲೀತಿಯಲ್ಲಿ ಮದುವೆಯ ಎಲ್ಲಾ ಹಂತಗಳನ್ನು ಮುಗಿಸುವ ಜವಾಬ್ದಾಲಿ. ಹೀಗಾಗಿಯೇ ಅಂದು ಮದುವೆಯೆಂದರೆ ಸುಮಾರು ದಿನಗಳಲ್ಲಿ ನಡೆಯುತ್ತಿದ್ದುದು ಕಂಡು ಬರುತ್ತದೆ. ಇಂದು ಮುಂಜಾನೆ ಮನೆಯಿಂದ ಕಾರ್ಯಾಲಯಗಳಿಗೆ ಹೋಗಿ ಆರಾಮವಾಗಿ ಕುಳಿತುಕೊಂಡು ಮದುವೆ ಮಾಡುವ ಅನುಕೂಲಗಳು ಆಗ ಇದ್ದಂತೆ ಕಂಡು ಬರುವದಿಲ್ಲ. ಎಲ್ಲವನ್ನು ಎಲ್ಲರೂ ಸೇಲಿಯೇ ಮಾಡಬೇಕು. ಆದ್ದಲಿಂದಲೇ ಒಂದು ಮನೆಯ ಮದುವೆಯ ಸಿದ್ದತೆಗೆಂದು ಓಣಿ, ಊಲಿನವರು ಸಹಾಯಕ್ಕೆ ಹೋಗುವುದು ಕಂಡು ಬರುತ್ತದೆ. ನೆಂಟರಿಷ್ಟರಂತೂ ಸುಮಾರು ದಿನ ಮದುವೆ ಮನೆಗಳಲ್ಲಿ ಬೀಡು ಬಿಡುತ್ತಿದ್ದರೆಂಬುದನ್ನು ಓದಿ ತಿಳಿಯಬಹುದು. ಹೀಗಾಗಿ ಮದುವೆ ತುಂಬಾ ಮಹತ್ವವನ್ನು ಹೊಂದಿತ್ತು.

ಈ ಹಾಡಿನಲ್ಲಿ ವ್ಯಕ್ತವಾಗುವ ಇನ್ನೊಂದು ಅಂಶ ಲಗ್ನವಾದ ಮೂರು ತಿಂಗಳಿಗೆ ದೊಡ್ಡವಳಾಗ್ಯಳ ಎಂಬಲ್ಲಿ **ಬಾಲ್ಯ ವಿವಾಹ**ಕ್ಕೆ ಆಗ ಅವಕಾಶವಿತ್ತೆಂಬುದು ಕಂಡು ಬರುತ್ತದೆ. ಅದಲ್ಲದೇ ಸೋಬಾನ ಮಾಡುವುದು ಧರಾಂಧುಲಿ ಅಂದರೆ ಅದ್ದೂಲಿ. ಇವೆಲ್ಲವೂ ದಂಪತಿಗಳು ದಾಂಪತ್ಯ ಬದುಕಿನಲ್ಲಿ ಸುಖವಾಗಿ ಬಾಳಲೆಂಬ ಅಶಯದೊಂದಿಗೆ ಸಂಭ್ರಮ- ಸಡಗರದಿಂದ ಪ್ರಾರಂಭಿಸುವ ಲೀತಿಯಿರಬಹುದು. ಜೊತೆಗೆ ಬಂಧುಗಳು- ಆಪ್ತರು ಒಂದೆಡೆ ಸೇರಲು ಇದೊಂದು ಅವಕಾಶವೆಂದೂ ಭಾವಿಸಿರಬಹುದು.

ಸಾಮಾನ್ಯವಾಗಿ ಮದುವೆಯೆನ್ನುವುದು ಸ್ವಧರ್ಮಗಳಲ್ಲಿಯೇ ನಡೆಯುವುದು ಕಂಡು ಬರುತ್ತದೆ. ವರ್ಣಾಶ್ರಮ ಧರ್ಮವನ್ನು ಅನುಸಲಿಸುವ ನಮ್ಮ ಸಮಾಜದಲ್ಲಿ ಈ ಧರ್ಮ, ಜಾತಿಗಳು ಪ್ರಮುಖ ಪಾತ್ರ ವಹಿಸಿದ್ದು ಪರಂಪರೆಯಲ್ಲಿ ಕಾಣಬಹುದಾದ ಅಂಶ. ಇಂದು ಜಾತಿಯತೆಗೆ ಅಷ್ಟೊಂದು ಮಹತ್ವ ಕೊಡದೇ ಅಂತರಜಾತಿಯ ವಿವಾಹಗಳೂ ಸಾಮಾನ್ಯವಾಗುತ್ತಿರುಯವುದು ವೈಚಾರಿಕ, ಸಾಮಾಜಿಕ ಬದಲಾವಣೆಯೆಂದು ಕರೆಯಬಹುದು. ಆದರೆ ಬುಲಾಯಿ ಸಂಸ್ಕೃತಿಯಲ್ಲಿ ಅನ್ಯ ಜಾತಿಯ ವಿವಾಹವನ್ನು ಧಿಕ್ಕಲಿಸುವ, ಬಲವಂತದಿಂದ ಮದುವೆ ಮಾಡಿದರೆ ಪ್ರಾಣತ್ಯಾಗ ಮಾಡುವ ಚಿತ್ರಣಗಳು ಕಂಡುಬರುತ್ತವೆ. ಇದು ಅವರ ಜಾತಿಯತೆಯನ್ನು ಎತ್ತಿ ತೋಲಿಸುವಂತಹದೆನ್ನಬಹುದು.

ಬೇವಿನ ಕಾಯಿಯಷ್ಟು ಅಂಗ ಇದ್ದರ ಸಾಕ
ತಂದಿಯ ಬಳಗಾಕ ಕುಡೆ ತಾಯಿ ಕೋಲ...

ಕೊಟ್ಟರ ಕುಡು ತಾಯಿ ಇಟ್ಟರ ಇಡು ತಾಯಿ
ಕುಲ ಇಲ್ಲದ ಜೈನರಿಗಿ ಕುಡುಬ್ಯಾಡ ಕೋಲ [೩೮]

ಲಿಂಗವಂತಳಾದ ತನ್ನನ್ನು ಜೈನರಿಗೆ ಕೊಡಲು ನಿರ್ಧರಿಸಿದಾಗ ಮಗಳು ತಾಯಿಗೆ ಹೇಳುವ ಮಾತಿದು. ಆದರೆ ತಾಯಿ ಮಗಳ ಮಾತು ಕೇಳದೆ ಜೈನರಿಗೆ ಕೊಡಲು ನಿರ್ಧರಿಸಿ, ಮದುವೆಗೆ ಸಕಲ ಸಿದ್ದತೆಯನ್ನು ಮಾಡುತ್ತಾಳೆ. ಆಗ ಮಗಳು ಕೇವಲ ಹಿಡಿ ಶಾಪವನ್ನು ಹಾಕುತ್ತಾ ವಿರೋಧಿಸುತ್ತಾಳೆ. ಕೊನೆಗೆ ಮದುವೆಯಾಗಿ ಹಂದರದಲ್ಲಿ ಬುರುಜಗಲಿಯ ಮ್ಯಾಲೆ ಸರಿ ಬೆಸಿ ಆಟ ಆಡಲು ಹೇಳಿದಾಗ ಅವಳು ಕೊಡುವ ಉತ್ತರವು ಈ ರೀತಿಯದ್ದು.

ನೀವಿದ್ದಿರಿ ಜೈನರು ನಾವಿದ್ದೇವು ಚಿಲ್ವಂತರು
ನಿಮಸರ್ಯಾತರ ಸರಿ ಬೆಸಿ ಕೋಲ

ಹೀಗೆ ಈ ಸಾಲಿನಲ್ಲಿ ಮದುವೆಯ ಜಗುಲಿಯಲ್ಲಿ ಆಡಿಸುವ ಸರಿ-ಬೆಸಿ ಸಂಖ್ಯೆಯ ಆಟವನ್ನು ಗುರುತಿಸಬಹುದು. ಇಂದಿಗೂ ಇಲ್ಲಿ ಈ ಆಟವನ್ನು ಕೆಲವರ ಮದುವೆಗಳಲ್ಲಿ ಕಾಣಬಹುದು. ಅಕ್ಷತಾ ಮಾಂಗಲ್ಯ ಧಾರಣೆ, ಧಾರೆಯಾದ ನಂತರ ಗಂಡು-ಹೆಣ್ಣಿನ ಕಡೆಯವರೆಲ್ಲಾ ಸೇರಿಸಿ ಆಡುವ ಆಟವಿದು. ಇಲ್ಲಿ ಸರಿ-ಬೆಸಿ ತಿಳಿಸಲು ಕೈಯಲ್ಲಿ ಹಿಡಿಯುವ ಖಾರಿಕು (ಖರ್ಜೂರ) ಬೇಕಾಗುತ್ತವೆ. ಇಂತಹ ಆಟವನ್ನು ಎಲ್ಲರೂ ಅತ್ಯಂತ ಉಲ್ಲಾಸ-ವಿನೋದದಲ್ಲಿ ಆಡುವುದು ಕಾಣಬಹುದು. ಆದರೆ ಅಲ್ಲಿ ಅವರಲ್ಲಿ ಸಮಾನ ಮನಸ್ಸಿದ್ದು ಆಟದಲ್ಲಿ ಉತ್ಸಾಹ ಕಂಡು ಬರುತ್ತದೆ. ಈ ಹಾಡಿನಲ್ಲಿ ಮನಸ್ಸಿಲ್ಲದೇ ಮದುವೆ ಆಗುತ್ತಿರುವ ಮದು ಮಗಳು ಮೇಲಿನ ಸಾಲುಗಳಂತೆ ನಿರಾಕರಿಸುತ್ತಲೆ ಮದುವೆಯಾಗುತ್ತಾಳೆ. ಹೀಗೆ ನಿರಾಕರಣೆಯೊಂದಿಗೆ ಮದುವೆ ಮುಗಿದ ಮೇಲೆ ಗಂಡನ ಮನೆಗೆ ಹೋಗಬೇಕಾದರೆ ಮಗಳು ತನ್ನ ತಾಯಿಯನ್ನು ವೈರಿಯೆಂದು ಭಾವಿಸುವುದು ಕಂಡು ಬರುತ್ತದೆ. ಅಂತೆಯೇ ಗಂಡನ ಮನೆಗೆ ಹೋಗುವಾಗ ಎಲ್ಲರನ್ನು ಹೇಳಿದರೂ ತನ್ನ ತಾಯಿಗೆ ಹೇಳಲು ಧಿಕ್ಕರಿಸುವುದನ್ನು ಕಾಣಬಹುದು.

ಒಂಬತ್ತು ತಿಂಗಳು ಹೊತ್ತಿಲ್ಲ, ಹೊತ್ತಿಳಿದು ಹಡದಿಲ್ಲ
ಹಡದವ್ವ ಅಲ್ಲ ವೈರಿಹಾಳ ಕೋಲ [೩೯]

ಎಂದು ಒಲ್ಲದ ಮನಸ್ಸಿನಿಂದ ಒತ್ತಾಯಕ್ಕೆ ಮದುವೆಯಾಗಿ ಹೋಗುವಾಗ ರಾತ್ರಿಯಾಗುತ್ತದೆ. ದಾರಿಯಲ್ಲಿ ಸಿಕ್ಕ ಮಾದೇವನ ಗುಡಿಯಲ್ಲಿ ತಂಗುತ್ತಾರೆ. ಎಲ್ಲರೂ ಊಟ ಮಾಡುತ್ತಾರೆ. ಆದರೆ ಇವಳು ಅವರ ಅಡಿಗೆ ಉಣ್ಣುವುದಿಲ್ಲ ಎನ್ನುತ್ತಾಳೆ. ಆಗ ಅವರು ನೀನೇ ಮಾಡಿಕೊಂಡು ಉಣ್ಣು ಎನ್ನುತ್ತಾರೆ. ಅಕ್ಕಿ ಹಿಟ್ಟನ್ನೆಲ್ಲಾ ಕೊಡುತ್ತಾರೆ. ಆಗ ಅದೇ ಒಳ್ಳೆಯ ಅವಕಾಶವೆಂದು ನೀರು ತರುವ ನೆಪದಲ್ಲಿ

ಥಮ್ಮಿಗಿ ನೀರ ತೋಗೊಂಡಾಳ ಮಾದೇವನ ಗುಡಿದಾಗ ಹೋಗ್ಯಾಳ
ಮಾದೇವನ ಗುಡಿದಾಗ ಮರಿಯಾದಳು ಕೋಲ [೪೦]

ಹೀಗೆ ಬೇರೆ ಜಾತಿಯವರೊಡನೆ ಮದುವೆ ಬೇಡವೆಂದು ಕೊನೆಗೆ ಪ್ರಾಣವನ್ನೇ ಕಳೆದುಕೊಂಡದ್ದು ಈ ಹಾಡಿನಲ್ಲಿ ಪ್ರತಿಬಿಂಬಿತವಾಗಿದೆ.

ಇನ್ನೊಂದು ಹಾಡಿನಲ್ಲಿ ಬೇರೆ ಜಾತಿಯ ಹೆಣ್ಣಿನ ಮೇಲೆ ಮನಸ್ಸಿಟ್ಟು ಅವಳನ್ನು ಮದುವೆಯಾಗುತ್ತೇನೆಂದು ಭೀಮಶ್ಯಾ ಎಂಬುವನು ತನ್ನ ತಾಯಿಗೆ ತಿಳಿಸುತ್ತಾನೆ. ಅದಕ್ಕೆ ತಾಯಿ

ನಾವಿದ್ದೇವು ಖೆತ್ತರೆರು ಅವರಹರ ರೆಡ್ಡಿಯರು
ಅವರ ಹೆಣ್ಣ ನಮ್ಮಗ ಬರೋಣಿಲ್ಲ ಕೋಲ [೪೧]

ಎಂದು ಮಗನಿಗೆ ಹೇಳುತ್ತಾಳೆ. ಆಗ ಮಗ ತನ್ನ ಪಟ್ಟು ಬಿಡದಿದ್ದಾಗ ತಾಯಿ ತಾನೇ ಸ್ವತಃ ಹೆಣ್ಣಿನ ಮನೆಗೆ ಹೆಣ್ಣು ಕೇಳಲು ಹೋಗುತ್ತಾಳೆ. ಹೆಣ್ಣಿನವರು ಅವಳನ್ನು ಕಂಡು, ಕರೆದು ಕುಳಿತುಕೊಳ್ಳಲು ತಿಳಿಸಿದಾಗ

ಕುಂದರಲಕ ಬಂದಿಲ್ಲ ನಿಂದರಲಕ ಬಂದಿಲ್ಲ
ಅವ್ವಮ್ಮಗ ನನ್ನ ಮಗನಿಗಿ ಕೊಡಬೇಕು ಕೋಲ

ಎನ್ನುತ್ತಾಳೆ. ಅದಕ್ಕೆ ಹೆಣ್ಣಿನ ಮನೆಯವರು ಸಹ ಕುಲ ಮುಂದಿಟ್ಟುಕೊಂಡು

ನೀವಿದ್ದೀರಿ ಖೆತ್ತರೆರು ನಾವಿದ್ದಿವಿ ರೆಡ್ಡಿಯರು
ನಮ್ಮ ಹೆಣ್ಣ ನಿಮಗೆ ಬರೋಣಿಲ್ಲ ಕೋಲ [೪೨]

ಎಂದು ನಯವಾಗಿ ನಿರಾಕರಿಸುತ್ತಾರೆ. ಆಗ ಭೀಮಶ್ಯಾ ಊರ ಹೊರಗಿನ ಅರಣ್ಯದಲ್ಲಿಯ ಹುತ್ತಿನೊಳಗೆ ಕೈಯಿಟ್ಟು ಸಾಯಲು ಹೋಗುತ್ತಾನೆ. ಕೈಯನ್ನು ಹುತ್ತಿನೊಳಗಿಟ್ಟಾಗ ನಾಗ ಹನ್ನೆರಡು ವರ್ಷಗಳಿಂದ ಈ ಹುತ್ತಿನ ಕಡೆ ಯಾರೂ ಸುಳಿದಿಲ್ಲ. ನಿನ್ನ ಕೈ ತೆಗೆದುಕೋ ಎಂದು ಹೇಳುತ್ತಾನೆ. ಅದಕ್ಕೆ ಭೀಮಶ್ಯಾ ತನ್ನ ಮಾತು ನಡೆಸಿಕೊಟ್ಟರೆ ತೆಗೆಯುತ್ತೆನೆಂದು ಹೇಳಿದಾಗ ನಾಗ ಅದಕ್ಕೆ ಒಪ್ಪುತ್ತಾನೆ. ಆಗ ಭೀಮಶ್ಯಾ ಅವ್ವಮ್ಮನಿಗೂ ತನಗೂ ಮದುವೆಯಾಗಬೇಕೆನ್ನುತ್ತಾನೆ.

ಅಷ್ಟರಲ್ಲೇ ಈ ಕಡೆಯಲ್ಲಿ ಅವ್ವಮ್ಮನ ಲಗ್ನ ನಿಶ್ಚಯವಾಗುತ್ತದೆ. ಭೀಮಶ್ಯಾ ಸಹ ಲಗ್ನಕ್ಕೆ ಹೋಗುತ್ತಾನೆ. ಎಲ್ಲರೂ ಅಕ್ಕಿ ಕಾಳು ಹಾಕುವಾಗ ಭೀಮಶ್ಯಾ 'ನನಗಾಗ ಬೇಕಾದ ಹೆಣ್ಣು ನಿನಗಾಯ್ತೆಂದು' ಅಕ್ಕಿ ಕಾಳು ಹಾಕುತ್ತಾನೆ. ಅದೇ ಸಮಯದಲ್ಲಿ ಭಾಸಿಂಗದ ಮೇಲೆ ನಾಗ ಕಾಣುತ್ತದೆ.

ಭಾಸಿಂಗದ ಮ್ಯಾಲ ಎಳಿಯ ನಾಗೆಂದ್ರ
ಹಿಮ್ಮಡಿ ಹರಿದು ಪಾರನಾಯಿತು ಕೋಲ
ಹಸಿಕಟ್ಟಿ ಮ್ಯಾಲ ಮದುಮಗನ ಮರಣ
ಹಸಿಕಟ್ಟಿ ಮ್ಯಾಲ ಮುತ್ತೈತ್ತನ ಹೋಯ್ತು ಕೋಲ [೪೩]

ಎಂಬಲ್ಲಿ ಆಗ ಮದುವೆಯಲ್ಲಿ ಭಾಸಿಂಗ ಕಟ್ಟುವ ಪದ್ಧತಿ.ಹಸಿಯ ಕಟ್ಟೆಯ ಮದುಮಕ್ಕಳು ಮೊದಲು ಜೊತೆಯಾಗುವ ಸ್ಥಳ. ಮುತ್ತೈತ್ತನವೆಂಬುದು ಮಾಂಗಲ್ಯ ಧಾರಣೆಯೊಡನೆ ಸೇರಿಕೊಂಡು ಗಂಡಸಿನ ಅಂದರೆ ಗಂಡನ ಜೀವಂತಿಕೆಯ ಸಂಕೇತ ಎಂಬ ಹಲವು ಅಂಶಗಳನ್ನು ಗುರುತಿಸಬಹುದು. ಮದುಮಗನ ಮರಣದೊಂದಿಗೆ ಅವಳ ಮುತ್ತೈತ್ತನ ಹೋಯಿತೆನ್ನುವ ಮಾತು ಗಮನಾರ್ಹವಾದುದು. ಹೀಗೆ ಅವ್ವಮ್ಮ ವಿಧವೆಯಾದಾಗ ಅವಳ ಐವರು ಅಣ್ಣ ತಮ್ಮಂದಿರು ತಂಗಿಗೆ ತಮ್ಮ ಎಲ್ಲಾ ಆಸ್ತಿ, ಬೆಳ್ಳಿ, ಬಂಗಾರ, ದನ, ಕರು, ರೊಕ್ಕ ಪಕ್ಕಾ ಕೊಡಲು ಮುಂದಾಗುತ್ತಾರೆ. ಆದರೆ ಅತ್ತಿಗೆಯಂದಿರು ಅದನ್ನು ಸಹಿಸದೇ ನಿಂದಿಸುತ್ತಾರೆ. ಅಂದರೆ ಅತ್ತಿಗೆಯರ ನಿಂದನೆಯೂ ಈ ಹಾಡಿನಲ್ಲಿ ಗುರುತಿಸಬಹುದು. ಇದರಿಂದ ಬೇಸತ್ತು ಅವ್ವಮ್ಮ ಸಿಟ್ಟಿನಿಂದ ಮಾವಿನ ತೋಪಿಗೆ ಹೋಗಿ ಗಿಡದ ಕೆಳಗೆ ಮಲಗುತ್ತಾಳೆ. ಅದೇ ವೇಳೆಯಲ್ಲಿ ಭೀಮಶ್ಯಾ ಅವಳ ಹಿಂದೆ ಹೋಗಿ ಗಿಡವನ್ನು ಏರಿ ಹಣ್ಣುಗಳನ್ನು ಉದುರಿಸುತ್ತಾನೆ. ಎಚ್ಚರವಾದ ಅವ್ವಮ್ಮ ಅಣ್ಣಂದಿರ ಮಕ್ಕಳಿಗೆಂದು ಹಣ್ಣುಗಳನ್ನು ಆರಿಸಿ ಉಡಿಯಲ್ಲಿ ತುಂಬಿ ಕೊಳ್ಳುತ್ತಿರುತ್ತಾಳೆ. ಅಷ್ಟರಲ್ಲಿ ಕೆಳಗಿಳಿದು ಬಂದ ಭೀಮಶ್ಯಾ ಹಣ್ಣಿನ ಸುಂಕ ಕೊಡೆಂದು ಅವಳನ್ನು ಬಲತ್ಕರಿಸುತ್ತಾನೆ. ಮುಂದೆ ಅವಳಿಗೆ ಗರ್ಭ ನಿಲ್ಲುತ್ತದೆ. ವಿಧವೆಯಾದ ಅವಳು ಗರ್ಭ ಧರಿಸಿದ್ದಕ್ಕೆ ಎಲ್ಲರೂ ಅವಳನ್ನು ತಿರಸ್ಕರಿಸುತ್ತಾರೆ. ಅಂದರೆ ಅನೈತಿಕತೆಗೆ ಆಗ ಯಾರೂ ಬೆಂಬಲಿಸುತ್ತಿರಲಿಲ್ಲವೆಂಬ ಅಂಶವು ಇಲ್ಲಿ ಗುರುತಿಸಬಹುದು. ಆದರೆ ಆಗ ಭೀಮಶ್ಯಾ

ತಾಯಿಯನ್ನು ನೆನಸಬೇಡ ಮನವ ನೊಂದಿಸಬೇಡ
ನಾನಿದ್ದಿನಲ್ಲ ಭೀಮಶ್ಯಾ ಏನು ಸುದ್ದಿ ಕೋಲ [೬೪]

ಎಂದು ಅವಳಿಗೆ ಅಭಯದೊಂದಿಗೆ ಸಾಂತ್ವನವನ್ನು ನೀಡುತ್ತಾನೆ. ಅವಳನ್ನು ತನ್ನ ಮನೆಗೆ ಕರೆದುಕೊಂಡು ಹೋಗುತ್ತಾನೆ. ಆಗ ಅವನ ತಾಯಿ ಸೊಸೆ- ಮಗರನ್ನು ಸಂತೋಷದಿಂದ ಮನೆಯಲ್ಲಿ ಕರೆದುಕೊಳ್ಳುತ್ತಾಳೆ. ಮುಂದೆ ಅವ್ವಮ್ಮ ಗಂಡು ಮಗುವಿಗೆ ಜನ್ಮ ನೀಡುತ್ತಾಳೆ. ಕೊನೆಯಲ್ಲಿ ಅವ್ವಮ್ಮ ತಾಯಿ ಮನೆ-ಅತ್ತೆ ಮನೆಯವರೊಂದಿಗೆ ಸಂತೋಷದಿಂದ ಬಾಳುತ್ತಾಳೆ ಎಂಬಲ್ಲಿ ಹಾಡು ಮುಗಿಯುತ್ತದೆ.

ಈ ಹಾಡಿನಲ್ಲಿ ಜಾತಿ ಮದುವೆಗೆ ಅಡ್ಡ ಬಂದರೂ ನಿಜವಾದ ಪ್ರೀತಿಯಿರುವ ಅಥವಾ ಪ್ರೀತಿಸುವ ಭೀಮಶ್ಯಾ ವಿಧವೆಯಾದ ಅವ್ವಮ್ಮಳನ್ನು ಬಲತ್ಕರಿಸುವ ನೆಪದಲ್ಲಿ ಬಾಳು ಕೊಡುವ ಸಂಗತಿ ಗಮನಾರ್ಹವಾಗಿದೆ. ವಿಧವಾ ವಿವಾಹವನ್ನು ಪುರಸ್ಕರಿಸಿ ಮಗನ ಪ್ರೀತಿಗೆ ಪ್ರೋತ್ಸಾಹಿಸುವ ಭೀಮಶ್ಯಾನ ತಾಯಿಯ ವಿಶಾಲ ಮನೋಭಾವವು ತುಂಬಾ ಮಹತ್ವದ್ದೆನಿಸುತ್ತದೆ. ಜನಪದರು ಜೀವಪರರು ಎಂಬ ಮಾತಿಗೆ ಇದೊಂದು ನಿದರ್ಶನ. ಅವರು ಜೀವ ಪರ ನಿಲುವನ್ನು ಪ್ರೋತ್ಸಾಹಿಸುವದರಿಂದ ಸಾಮಾಜಿಕ ಕಟ್ಟಳೆಗಳನ್ನು ಒಮ್ಮೊಮ್ಮೆ ಬಿಡುವ, ಧಿಕ್ಕರಿಸುವ ಪ್ರಸಂಗಗಳು ಕಂಡು ಬರುತ್ತವೆ. ಇಲ್ಲಿ ಸಾಮಾಜಿಕ ಕಟ್ಟಳೆಗಳಿಗಿಂತ ಮದುವೆಗೆ ಭೀಮಶ್ಯಾನ ಪ್ರೀತಿಯೇ ಮುಖ್ಯವೆನಿಸುತ್ತದೆ. ನಿಜವಾದ ಪ್ರೀತಿಯ ಮುಂದೆ ಜಾತಿಯತೆ,

ಸಾಮಾಜಿಕ ಪರಂಪರೆಗಳೂ ಸಹ ಸಡಿಲಗೊಂಡು ಬದುಕು ಹಸನಾಗುವದನ್ನು ಇಲ್ಲಿ ಕಾಣಬಹುದು.

ಬುಲಾಯಿ ಹಾಡುಗಳಲ್ಲಿಯ ಮದುವೆ-ದಾಂಪತ್ಯ ಕುರಿತಾದ ಅಂಶಗಳು ಇಂದಿನ ನಮ್ಮ ಸಮಾಜವನ್ನು ಸಹಾಯಕಾರಿಯೆನಿಸುತ್ತವೆ. ಜೊತೆಗೆ ಅನೇಕ ವಿಷಯಗಳ ಮೇಲೆ ಬೆಳಕನ್ನು ಚೆಲ್ಲುತ್ತವೆ. ಒತ್ತಾಯದ ಮದುವೆ ಸಲ್ಲದು, ದಾಂಪತ್ಯಕ್ಕೆ ಪ್ರೀತಿಯೇ ಮುಖ್ಯ, ವಿಧವೆಯರಿಗೂ ಮರು ವಿವಾಹದಿಂದ ಬದುಕನ್ನು ಕೊಡುವುದು, ಸಮಾಜದ ಕಟ್ಟಳೆಗಳನ್ನು ಕಳಚಿ ಮಗನ ಬದುಕನ್ನು ಪ್ರೋತ್ಸಾಹಿಸುವ ತಾಯಿಯ ವಾತ್ಸಲ್ಯ ಮುಂತಾದ ವಿಷಯಗಳಿಗೆ ಸ್ಪಂದಿಸುವುದು ಕಂಡು ಬರುತ್ತದೆ. ಆದರೆ ಸರಸ-ವಿರಸ ದಾಂಪತ್ಯಗಳ ಕುರಿತಾದ ಬುಲಾಯಿ ಹಾಡುಗಳು ಕಂಡು ಬರುವುದಿಲ್ಲ.

ಬಂಜೆ-ತಾಯ್ತನ :

ತಾಯ್ತನವು ಒಂದು ಜೈವಿಕ ಕ್ರಿಯೆ. ಪ್ರಕೃತಿಯ ನಿರಂತರತೆಗೆ ಇದು ಅನಿವಾರ್ಯವೂ ಹೌದು. ಸಾಮಾನ್ಯವಾಗಿ ಎಲ್ಲಾ ಜೀವಿಗಳಲ್ಲಿಯೂ ತನ್ನ ಸಂತಾನವು ಸ್ವತಂತ್ರವಾಗುವವರೆಗೆ ಬೆಳೆಸುವ, ಪೋಷಿಸುವ ಕಾರ್ಯ ತಾಯಿಯಿಂದ ನಡೆಯುವುದು ಕಂಡು ಬರುತ್ತದೆ. ಕೆಲವು ಜೀವಿಗಳಲ್ಲಿ ತಂದೆಯ ಪಾಲು ಇದಕ್ಕೆ ಸಲ್ಲುತ್ತದೆ. ಮಾನವರಲ್ಲಿ ಮಗುವಿನ ಲಾಲನೆ-ಪಾಲನೆಯ ಜವಾಬ್ದಾರಿಯು ತಾಯಿಗೆ ಸೇರಿದುದು ಎಂದು ಭಾವಿಸುತ್ತ ಬಂದಂತೆ ಕಾಣುತ್ತದೆ. ಆದರೆ ಇತ್ತೀಚಿಗೆ ಮಗುವಿನ ಪಾಲನೆಯಲ್ಲಿ ತಂದೆಯೂ ಜವಾಬ್ದಾರಿ ವಹಿಸುತ್ತಿರುವುದು ಕಂಡು ಬರುತ್ತಲಿದೆ. ಕಾರಣ ಉದ್ಯೋಗಸ್ಥ ಮಹಿಳೆ ಸಂಪೂರ್ಣವಾಗಿ ಮಗುವನ್ನು ನೋಡಿಕೊಳ್ಳುವಷ್ಟು ಸಮಯ ಸಿಗದೇ ಇರುವುದು, ಕೆಲಸದ ಒತ್ತಡ, ಸ್ಪರ್ಧೆಯ ಜೀವನ ಮುಂತಾದವು. ಆದರೂ ಸುದೀರ್ಘ ಕಾಲ ಆಕೆ ಮಗುವನ್ನು ತನ್ನ ಬಸಿರಲ್ಲಿ ಇರಿಸಿಕೊಳ್ಳಬೇಕಾಗಿರುವದರಿಂದ ಮಗುವಿನೊಂದಿಗೆ ಭಾವನಾತ್ಮಕ ಸಂಬಂಧವು ತಾಯಿಗೆ ಸಹಜವಾಗಿ ಬೆಳೆಯುತ್ತದೆ. ಜನಿಸಿದ ಮೇಲೂ ಹಾಲುಣಿಸುವ ಕ್ರಿಯೆಯಿಂದಾಗಿ ಅವಳಿಗೆ ಆ ಮಗುವಿನ ಸಾಮೀಪ್ಯ ಅಧಿಕವಾಗುತ್ತದೆ. ಈ ಎಲ್ಲಾ ಕಾರಣಗಳೊಂದಿಗೆ ಭಾವನಾತ್ಮಕ ಅಂಶಗಳನ್ನು ತಳಕು ಹಾಕಿ ತಾಯ್ತನವನ್ನು ವೈಭವೀಕರಿಸುವ ಪರಿಪಾಠವು ನಮ್ಮ ಸಮಾಜದಲ್ಲಿ ಬೆಳೆದು ಬಂದಂತೆ ಭಾಸವಾಗುತ್ತದೆ. ಅದು ಯಾವ ಹಂತ ತಲುಪಿತೆಂದರೆ ತಾಯಿಯಾಗದೇ ಹೆಣ್ಣಿನ ವ್ಯಕ್ತಿತ್ವ ಪರಿಪೂರ್ಣವಾಗದೆಂಬ ಭಾವನೆಯನ್ನು ಪಟ್ಟಕಟ್ಟಿ, ಅವಳನ್ನು ಕೀಳಾಗಿ ಕಾಣುವ ಪ್ರವೃತ್ತಿ ಬಲಿಯುತ್ತ ಬಂದ ಹಾಗೆ ತೋರುತ್ತದೆ. ವಂಶದ ಮುಂದುವರಿಕೆಗೆ ಸಂತಾನೋತ್ಪತ್ತಿ ಅಗತ್ಯ ಎನ್ನುವುದು ಸತ್ಯವಾದರೂ ಪತಿ-ಪತ್ನಿಯರಲ್ಲಿ ಯಾರಲ್ಲಿ ದೋಷವಿದ್ದರೂ ಮಗುವಾಗದಿರುವದಕ್ಕೆ ಮಹಿಳೆಯನ್ನೇ ತಪ್ಪಿತಸ್ಥಳನ್ನಾಗಿ ಕಾಣುತ್ತಾ ಬಂದಂತಿದೆ. ಹಾಗಾಗಿ **ಬಂಜೆ** ಎನ್ನಿಸಿಕೊಳ್ಳಲು ಹೆಣ್ಣು ತುಂಬಾ ಹೆದರುವಂತಿದೆ. ಮಗುವಿಲ್ಲದಿದ್ದರೆ ತನ್ನ ಬಾಳು ವ್ಯರ್ಥ ಎಂದೇ ಭಾವಿಸಿರುವಂತೆ ಕಂಡು

ಬರುತ್ತದೆ. ಹೀಗಾಗಿ ಪ್ರತಿ ಹೆಣ್ಣು ಮಗಳು ಹೇಗಾದರೂ ಸರಿ ಒಂದು ಮಗುವನ್ನಾದರೂ ಪಡೆಯಲು ಹಂಬಲಿಸುವದನ್ನು ಕಾಣಬಹುದು. ಅದಕ್ಕಾಗಿ ಅವಳು ದೇವರಲ್ಲಿ ಪ್ರಾರ್ಥಿಸುವ ರೀತಿ ಹೃದಯಸ್ಪರ್ಶಿಯಾಗಿದೆ. ಇಂತಹ ಬುಲಾಯಿ ಹಾಡು ಹೃದಯವನ್ನು ಕಲಕುತ್ತದೆ. ಮಕ್ಕಳಿಗಾಗಿ ಹಂಬಲಿಸುವ ದಂಪತಿಗಳು ದೇವರೆದುರಲ್ಲಿ ಕೇಳುವ ಬಗೆಯು ಹಾಡಿನಲ್ಲಿ ಈ ತೆರನಾಗಿದೆ.

ಹೋಗಿ ಶ್ರೀಪಾದರ ಎರಗಿ ತಾವು ಬೇಡ್ಯಾರ
ಒಂದರ ಸುತರ ದಯಮಾಡು ಕೋಲೆಣ್ಣ ಕೋಲೆ
ಕುಡ್ಡರ ಕುಡಲೇನು ಕುಂಟನ ಕುಡಲೇನ
ಹನ್ನೆರಡು ವರುಷದ ಮತಿಬ್ರಷ್ಟ ಕೋಲೆಣ್ಣ ಕೋಲೆ
ಹನ್ನೆರಡು ವರುಷದ ಮತಬ್ರಷ್ಟ ಕುಡಲೆಂದು.
ರೂಢಿಗಿಶ್ವರ ನುಡದಾರ ಕೋಲೆಣ್ಣ ಕೋಲೆ [೬೫]

ಹನ್ನೆರಡು ವರ್ಷದ ಮತಿಭ್ರಷ್ಟರನ್ನು ಪಡೆಯಲು ನಿರಾಕರಿಸಿದ ತಾಯಿ ತನ್ನ ಮನದ ಭಾವವನ್ನು ಹೀಗೆ ಹೇಳುತ್ತಾಳೆ.

ಮುಂಜೇಲಿ ಹುಟ್ಟಲಿ ಸಂಜೀಲಿ ಸಾಯಲಿ
ಚಂದ್ರಕುಮಾರನ ಕೊಡು ನನಗ ಕೋಲೆಣ್ಣ ಕೋಲೆ
ಮುಂಜೇಲಿ ಹುಟ್ಟಲಿ ಸಂಜೇಲಿ ಸಾಯಲಿ
ಬಂಜೆಂಬ ಶಬುದ ಬಿಡಸಯ್ಯ ಕೋಲೆಣ್ಣ ಕೋಲೆ [೬೬]

ಎಂದು ಕೇಳುವಲ್ಲಿ ಅವಳಿಗೆ ತನಗೊಂದು ಮಗು ಬೇಕೆಂಬ ಅಭಿಷ್ಟೆಗಿಂತ ಬಂಜೆ ತನದ ಅಭಿಶಾಪದಿಂದ ಪಾರಾಗಬೇಕೆಂಬ ಬಯಕೆಯೇ ಅಧಿಕವಾಗಿರುವಂತೆ ಕಂಡು ಬರುತ್ತದೆ.

ಮಗುವಿಗಾಗಿ ಹಂಬಲ ವ್ಯಕ್ತವಾದರೂ ಆಗ ಹೆಣ್ಣು ಮಗುವಿಗಿಂತ ಗಂಡು ಸಂತಾನಕ್ಕೆ ಹೆಚ್ಚಿನ ಮಹತ್ವವಿದ್ದಂತೆ ತೋರುತ್ತದೆ. 'ನಪುತ್ರಸ್ಯ ಗತಿರ್ನಾಸ್ತಿ' ಎಂಬುದು ಇದನ್ನೇ ಎತ್ತಿ ಹೇಳಿದಂತಿದೆ. ಇಂದು ಸಹ ಆ ಭಾವವಿದ್ದರೂ ಮೊದಲಿಗಿಂತ ಸ್ವಲ್ಪ ಕಡಿಮೆಯಾದಂತಿದೆ. ಕಾರಣ ವೈಚಾರಿಕ, ವೈಜ್ಞಾನಿಕ ತಿಳುವವಳಿಕೆಯ ಪ್ರಭಾವಿರಬಹುದು. ಹಿಂದೆ ಪುತ್ರನನ್ನು ಪಡೆಯಲು **ಪುತ್ರ ಕಾಮೇಷ್ಟಿಯಾಗ** ಗಳನ್ನು ಮಾಡುತ್ತಿದ್ದರೆಂಬುದು ಇತಿಹಾಸದಲ್ಲಿ ಓದುತ್ತೇವೆ. ಆದರೆ ಎಲ್ಲಿಯೂ **ಪುತ್ರಿ ಕಾಮೇಷ್ಟಿಯಾಗ**ದ ಬಗ್ಗೆ ಉಲ್ಲೇಖ ಕಾಣಸಿಗದು. ಹಿರಿಯರೂ ಸಹ ಹರಸುತ್ತಿದ್ದುದು **ಅಷ್ಟಪುತ್ರ ಸೌಭಾಗ್ಯವತಿ** ಎಂದೇ ಎಂಬುದು ಓದಿ ತಿಳಿಯುತ್ತೇವೆ.

ಗಂಡು ಮಗುವಿಗಾಗಿ ಹಂಬಲಿಸುವ ತನಗೆ ಗಂಡು ಮಗುವಾಗದಿದ್ದರೆ ಬೇರೆ ಗಂಡು ಮಗುವನ್ನು ತಂದು ಬದಲಿಸಿಕೊಡು ಎನ್ನುವ ಮಟ್ಟಿಗೆ ಹಾತೊರೆಯುವ ಕಳವಳಗೊಳ್ಳುವ ಹೆಣ್ಣಿನ ಸ್ಥಿತಿಯನ್ನು ಬುಲಾಯಿ ಹಾಡಿನಲ್ಲಿ ಮನಂಬಗುವಂತೆ ಹಾಡುವುದು ಕಂಡು ಬರುತ್ತದೆ.

ಆ ಊರ ರಾಜರ ಮಡದಿ ಹತ್ತು ಹೆಣ್ಣು ಹಡದಿದಳು
ಆಕಿಗಿಲ್ಲ ಗಂಡಸುಮಗ ಕೋಲೆಣ್ಣ ಕೋಲೆ
ಆ ಗರ್ಭಿಣಿ ಇದ್ದಿದರೂ ಹಗಲು ರಾತ್ರಿ
ಕಾಡುತ್ತಿತ್ತು ಮಗನ ಚಿಂತಿ ಕೋಲೆಣ್ಣ ಕೋಲೆ
ನಾ ಹಡೆದಾಗ ಉರಾಗ್ಯಾರರಾ ಹಡದರ ಗಂಡಸುಮಗ
ಬದಲರ ಮಾಡೇ ನೀನು ಕೋಲೆಣ್ಣ ಕೋಲೆ
ನನಗೆ ಹೆಣ್ಣು ಹುಟ್ಟಿದರೆ **ಗಂಡಸು ಕೂಸು** ತಂದು ಕೊಡೆ
ನಿನ್ನ ತೂಕ ಹೊನ್ನಾರ ಕೊಡುವೆನೆ ಕೋಲೆಣ್ಣ ಕೋಲೆ [೪೭]

ಒಕ್ಕುಲಗೆರ್ಯಾಗ ಕೂಡಿ ಆಡಿದ ಗೆಳತಿಯರು
ನಾ ಹೋಗುತ್ತಿನಿ ಅತ್ತಿಯ ಮನೆಗೆ ಕೋಲ
ಹೋದರ ಹೋಗವ್ವ ಜಪ್ಪನ ಬಾರವ್ವ
ಬರುತ್ತಾರೆ **ಮಗನ** ಎತ್ತಿ ಬಾರವ್ವ...[೪೮]

ಎಂಬಲ್ಲಿ ಗಂಡು ಮಗುವಿನ ಹಂಬಲ ಹರಕೆ ಮುಂತಾದ ಭಾವಗಳು ವ್ಯಕ್ತಗೊಂಡ ಬುಲಾಯಿ ಹಾಡುಗಳು ಸಮಾಜದಲ್ಲಿಯ ಗಂಡು ಸಂತಾನದ ಒಲವನ್ನು, ನಂಬಿಕೆಗಳನ್ನು, ಅನಿವಾರ್ಯತೆಯನ್ನು ತಿಳಿಯಪಡಿಸುವಂತೆ ಕಾಣುತ್ತವೆ. ಜಾಗತೀಕರಣದ ಈ ವೈಜ್ಞಾನಿಕ, ವೈಚಾರಿಕ ಸಮಾಜದಲ್ಲಿಯೂ ಈ ಬಗೆಯ ಹಂಬಲವು ಇಲ್ಲವೆಂದಲ್ಲ, ವೈಚಾರಿಕ, ತಂತ್ರಜ್ಞಾನದ ಅವಿಸ್ಕಾರಗಳಿಂದ ಗರ್ಭದಲ್ಲಿಯ ಭ್ರೂಣದ ಲಿಂಗವನ್ನು ಪತ್ತೆ ಹಚ್ಚಿ ಹೆಣ್ಣಾಗಿದ್ದರೆ ಅಲ್ಲಿಯೇ ಹೊಚಕಿ ಹಾಕುವ ಪ್ರಸಂಗಗಳಿಗೇನು ಕೊರತೆಯಿಲ್ಲ. ಅಂತೆಯೇ ಈಗ ಲಿಂಗಾನುಪಾತದಲ್ಲಿ ಗಣನೀಯವಾದ ವ್ಯತ್ಯಾಸ ಕಂಡು ಬರುತ್ತಿರುವುದು ಶೋಚನೀಯ ವಿಷಯ ಎನ್ನಬಹುದು. ಹೆಣ್ಣು ಭ್ರೂಣ ಹತ್ಯೆಯ ವಿರುದ್ಧ ಚಳುವಳಿಗಳು, ಮಹಿಳಾ ಸಂಘಟನೆಗಳ ಹೋರಾಟಗಳೂ ನಡೆಯುವದನ್ನು ಕಾಣುತ್ತೇವೆ. ಗಂಡು ಸಂತಾನವು ಜನಪದರಲ್ಲಿ ಅಜ್ಞಾನ, ಮುಗ್ಧ, ಮೂಢನಂಬಿಕೆಗಳಾಗಿ ಕಂಡು ಬಂದರೆ, ಪ್ರಸ್ತುತ ವಿದ್ಯಾವಂತ, ವೈಚಾರಿಕತೆಯ ನಾಗರಿಕ ಜೀವನ ನಿರ್ವಹಿಸುತ್ತಿರುವ ಇಂದಿನ ಪ್ರಜ್ಞಾವಂತ ಸಮಾಜದಲ್ಲಿಯೂ ಈ ಭಾವವಿರುವುದು ತುಂಬಾ ವಿಷಾದಕರ ಸಂಗತಿಯೇ ಎನ್ನಬಹುದು. ಗಂಡು ಸಂತಾನಕ್ಕಾಗಿ ಅಂದು ಕೇವಲ ಹಂಬಲ, ಹರಕೆಗಳು ಮಾತ್ರ ಕಂಡು ಬಂದರೆ ಇಂದು ಭ್ರೂಣದಲ್ಲಿಯೇ ಹೆಣ್ಣನ್ನು ಹಿಸುಕುತ್ತಿರುವುದು ಅಮಾನವೀಯತೆಯ, ಅನ್ಯಾಯದ ಪರಾಕಷ್ಠೆಯೇ ಎನ್ನಬಹುದು. ಇದರಿಂದಾಗುವ ದುಷ್ಪರಿಣಾಮ ತಡೆಗಟ್ಟಲು ಹಾಗೂ ಸಮಾಜದಲ್ಲಿ ಲಿಂಗ ಸಮತೋಲನವನ್ನು ಕಾಯ್ದುಕೊಳ್ಳಲು ಸರ್ಕಾರ ಭಾಗ್ಯಲಕ್ಷ್ಮಿ, ಹೆಣ್ಣು ಮಕ್ಕಳಿಗೆ ಪದವಿಯವರೆಗೆ ಉಚಿತ ಶಿಕ್ಷಣ ಮುಂತಾದ ಯೋಜನೆಗಳಿಂದ ಪ್ರೋತ್ಸಾಹಿಸುತ್ತಿರುವುದು ಆಶಾದಾಯಕ ಸಂಗತಿಯೆನ್ನಬಹುದು.

ಪಾತಿವ್ರತ್ಯ:

ಜನಪದ ಮಹಿಳೆ ಎರಡು ಆದರ್ಶಗಳನ್ನು ಬಲು ಕಟ್ಟು ನಿಟ್ಟಾಗಿ ಆಚರಿಸಿಕೊಂಡು ಬಂದಿರುವದನ್ನು ಕಾಣಬಹುದು. ಒಂದು ಪಾತಿವ್ರತ್ಯ, ಇನ್ನೊಂದು ಮುತ್ತೈದಿತನ. ಈ ಕುರಿತು ಬುಲಾಯಿ ಹಾಡುಗಳು ಆಧಾರ ನೀಡುತ್ತವೆ. ಹೆಣ್ಣಿನ ಶೀಲ, ಜೀವನದ ಪ್ರತೀಕವಾಗಿ ಪಾತಿವ್ರತ್ಯದ ಹಾಡುಗಳು ಬಳಕೆಯಲ್ಲಿ ಕಂಡು ಬರುತ್ತವೆ. ಪವಿತ್ರ, ನಿರ್ಮಲ,ಪರಿಶುದ್ಧ ಬದುಕನ್ನು ಸಾಗಿಸುವುದೇ ಪಾತಿವ್ರತ್ಯ.ಈ ರೀತಿಯ ಜೀವನ ಹೊಂದಿದವರಿಗೆ **ಪತಿವ್ರತೆಯರು** ಎಂದು ಕರೆಯುತ್ತಾರೆ. ಚಂಚಲವಾದ ಮನಸ್ಸನ್ನು ತಮ್ಮ ಅಂಕಿತದಲ್ಲಿರಿಸಿಕೊಳ್ಳಲು ಹಾಕಿಕೊಂಡ ಕಟ್ಟಳೆಯ ಗಂಟು ಈ ಪಾತಿವ್ರತ್ಯ ಇರಬಹುದು. ಇದರಿಂದಲೇ ಜನಪದ ಮಹಿಳೆ ತನ್ನ ಶೀಲವನ್ನು ಪವಿತ್ರವಾಗಿ ಉಳಿಸಿಕೊಂಡು ಬಂದದ್ದು ಕಂಡು ಬರುತ್ತದೆ. ಪಂಚಶೀಲೆಯರೆಂದು ಹೆಸರಾದ ದ್ರೌಪದಿ, ಮಂಡೋದರಿ, ಸೀತಾ, ಸಾವಿತ್ರಿ ಮುಂತಾದವರನ್ನು ಪಾತಿವ್ರತ್ಯದಲ್ಲಿ ಮೀರಿಸುವ ಗುಣವನ್ನು ಪಡೆದ ಅನೇಕ ಗರತಿಯರು ಜನಪದ ಸಮಾಜದಲ್ಲಿ ಆಗಿ ಹೋಗಿದ್ದನ್ನು ಗುರುತಿಸಬಹುದು. ಅವರ ಹೆಜ್ಜೆಯ ಮೇಲೆ ಹೆಜ್ಜೆ ಇಟ್ಟ ಗ್ರಾಮೀಣ ಗರತಿಯರ ಜೀವನ ಸಾಗಿ ಬಂದದ್ದನ್ನು ಹಾಡುಗಳು ಪ್ರತಿಬಿಂಬಿಸುತ್ತವೆ. ಪಾತಿವ್ರತ್ಯಕ್ಕೆ ಹೆಸರಾದ ಕಾಶಿಬಾಯಿ, ಚಂದ್ರುಣಿ, ನೀಲಗಂಗಾ, ಈ ಮೂವರು ಸಾಧ್ವಿಮಣಿಗಳು ಎಲ್ಲಾ ಪ್ರಕಾರದ ಜನಪದ ಹಾಡುಗಳಲ್ಲಿ ಹೆಚ್ಚಾಗಿ ಕಂಡು ಬರುತ್ತಾರೆ.

ಪುರುಷ ಪ್ರಧಾನ ಸಮಾಜದಲ್ಲಿ ಮನೆಯ ಹೆಣ್ಣಿನ ಗೌರವವೇ ಮನೆತನದ ಗೌರವವೆಂದು ಪರಿಗಣಿಸಿದ್ದು ಕಂಡು ಬರುತ್ತದೆ. ಹೀಗಾಗಿ ಮನೆಯ ಮಹಿಳೆ ಗೌರವ, ಘನತೆಯಿಂದಿದ್ದಾಗ ಮಾತ್ರ ಆ ಮನೆಗೆ, ಮನೆತನಕ್ಕೆ ಗೌರವ, ಘನತೆಗಳು ಹೆಚ್ಚಾಗಿ ಲಭಿಸುತ್ತವೆ. ಇಲ್ಲಿ ಹೆಣ್ಣಿನ ಶೀಲ ವ್ಯಾಪಕವಾಗಿ ಗ್ರಹಿಸಲ್ಪಟ್ಟು ಒಂದು ಮೌಲ್ಯವಾಗಿ ಪರಿಗಣಿಸಿದಂತೆ ಕಂಡು ಬರುತ್ತದೆ. ಹುಟ್ಟಿದ ಮನೆಗೂ ಕೊಟ್ಟ ಮನೆಗೂ ಕೀರ್ತಿ ತರುವಂತೆ ಹೆಣ್ಣು ಬದುಕನ್ನು ನಡೆಸಬೇಕು.ಹೆಣ್ಣು **ಗೃಹಿಣಿ ಅಷ್ಟೇ ಅಲ್ಲ, ಗರತಿ** ಎನ್ನಿಸಿಕೊಳ್ಳಬೇಕು. ಸೀತೆಯ ಚಾರಿತ್ರ್ಯದ ಬಗ್ಗೆ ಅಗಸನೊಬ್ಬ ಕೀಳು ಮಾತಾಡಿದಾಗ ರಾಮ ಗರ್ಭಿಣಿಯಾದ ಸೀತೆಯನ್ನೇ ಕಾಡಿಗಟ್ಟಿದ ಕಥೆ ಎಲ್ಲರಿಗೂ ಗೊತ್ತಿರುವ ವಿಷಯ. ಇಂಥ ಕತೆಗಳಿಂದ ಶೀಲದ ಪಾವಿತ್ರ್ಯತೆಯ ಬಗ್ಗೆ ವಿಪರೀತವಾದ ಗೌರವ ಬೆಳೆಯಿಸಿಕೊಂಡು ಒಂದು ಸಮಾಜದಲ್ಲಿ ಶೀಲಗೆಟ್ಟ ಹೆಣ್ಣು ಗೌರವ ಸಂಪಾದಿಸುವದಿರಲಿ, ನಾಯಿ ಮುಟ್ಟಿದ ಗಡಿಗೆ, ಶೀಲ ಕಳೆದುಕೊಂಡವಳು ಎಂದು ಅವಳು ಎಲ್ಲರಿಂದಲೂ ತಿರಸ್ಕರಿಸಲ್ಪಡುತ್ತಾಳೆ. ಬದುಕಿದ್ದು ಸತ್ತಂತಾಗುತ್ತಾಳೆ. ಹಾಗಾಗದಂತೆ ಹೆಣ್ಣು ಬಹು ಎಚ್ಚರಿಕೆಯಿಂದ ಇರಬೇಕೆಂಬ ನೈತಿಕ ಶಿಕ್ಷಣವನ್ನು ನಡೆ ನುಡಿಗಳಿಂದ ಕಥೆ- ಹಾಡುಗಳಿಂದ ಕೊಟ್ಟಂತೆ ಕಂಡುಬರುತ್ತದೆ. ಆಕಸ್ಮಾತ್ತಾಗಿ ಶೀಲಕ್ಕೆ ಭಂಗ ಬರುವ ಪ್ರಸಂಗ ಬಂದರೆ ತನ್ನ ಪ್ರಾಣವನ್ನಾದರೂ ಕೊಟ್ಟು ಆವಳು ಶೀಲವನ್ನು ರಕ್ಷಿಸಿಕೊಳ್ಳಬೇಕು. ಅಥವಾ ಸಂಶಯ, ಸುಳ್ಳು ಅಪರಾಧಗಳಿಗೆ ಸಿಕ್ಕು ಪ್ರಾಣ ಕಳೆದುಕೊಳ್ಳಬೇಕು. ಅಂಥ ಹೆಣ್ಣು ಮಕ್ಕಳ ಕಥೆಗಳನ್ನು ಇನ್ನಷ್ಟು ವೈಭವೀಕರಿಸಿ

ಹೇಳುತ್ತಾರೆ. ಬುಲಾಯಿ ಹಾಡುಗಳಲ್ಲಿ ಶೀಲ ಕಾಪಾಡಿಕೊಂಡ ಇಲ್ಲವೇ ಶೀಲ ರಕ್ಷಣೆಗಾಗಿ ಪ್ರಾಣ ತೆತ್ತವರ ಕಥೆಗಳು, ಘಟನೆಗಳು ಕಂಡು ಬರುತ್ತವೆ.

'ಎಳ್ಳಮಾಸಿಯ ಹಾಡು' ಎಂಬ ಬುಲಾಯಿ ಹಾಡಿನಲ್ಲಿ ತನ್ನ ಶೀಲವನ್ನು ಕಾಯ್ದುಕೊಂಡ ಕಥೆ ಸ್ವಾರಸ್ಯಕರವಾಗಿದೆ. ಇದನ್ನು 'ಮಲ್ಲಿಗೆ ದಂಡೆ' ಸಂಗ್ರಹದಲ್ಲಿಯೂ ಕಾಣಬಹುದು. ಆದರೂ ಅದಕ್ಕೂ ಇದಕ್ಕೂ ಕೆಲವೊಂದು ವ್ಯತ್ಯಸಗಳು ಕಂಡು ಬರುತ್ತವೆ.

ಅತ್ತೆ ತನ್ನ ಸೊಸೆಯಂದಿರಿಗೆ ವರಸಿಗಿ ಬರುವ ಎಳ್ಳಮಾಸಿ ಇದೆ ಮನೆ ಮಾರು ಸಾರಿಸಿ ಹಬ್ಬಕ್ಕೆ ಕಾಯಿ ಪಲ್ಯ ಸೋಸೆಂದು ಹಾಡು ಆರಂಭವಾಗುತ್ತದೆ.

ವರಸಿಗಿ ಬರುವುದು ಸರಸವ್ವ
ಎಳ್ಳಮಾಸಿ ಕೋಲೆಣ್ಣ ಕೋಲೆ
ಮನೆಮಾರ ಸಾರಿಸಿರೆವ್ವಾ
ತಲಿಯಾರೆ ಎರಕೋರೆವ್ವಾ ಕೋಲೆಣ್ಣ ಕೋಲೆ
ಕಾಯಿಪಲ್ಯ ಸೋಸರೆವ್ವ
ಅಡಗಂಬಲಿ ಮಾಡಿರೆವ್ವ ಕೋಲೆಣ್ಣ ಕೋಲೆ [೯೯]

ಎಂದು ಹೇಳುತ್ತಾಳೆ. ಅಪ್ಪಣ್ಣ ಗೌಡರ ಮನೆಯಲ್ಲಿ ನಾಲ್ಕು ಜನ ಸೊಸೆಯರು. ಸಣ್ಣವಳು ನಾಗಬಾಯಿ. ನಾಲ್ಕು ಜನ ಸೊಸೆಯಂದಿರು ಅನೋನ್ಯವಾಗಿದ್ದರು. ಅವರು ನೀರಿಗೆ ಹೋದಾಗ ಕಟ್ಟೆಯ ಮೇಲೆ ಕುಳಿತಿರುವ ಅರಸು ಮಗ ಸಣ್ಣವಳನ್ನು ನೋಡುತ್ತಾನೆ. ಅವಳನ್ನು ನೋಡಿ ಮನೆಗೆ ಬಂದವನೇ ಮುಸುಕು ಹಾಕಿ ಮಲಗಿ ಬಿಡುತ್ತಾನೆ. ತಾಯಿ-ತಂದೆ ಬಂದು ಏನಾಗಿದೆ ಎಂದು ಮಗನನ್ನು ವಿಚಾರಿಸುತ್ತಾರೆ

ಏನ ಬ್ಯಾನಿ ಎನ್ನ ಮಗನೆ
ಎಂಥ ಬ್ಯಾನಿ ಎನ್ನ ಮಗನೆ ಕೋಲೆಣ್ಣ ಕೋಲೆ
ಏನ ಬ್ಯಾನಿ ಇಲ್ಲ ತಾಯಿ
ಎಂಥ ಬ್ಯಾನಿ ಇಲ್ಲ ತಂದಿ ಕೋಲೆಣ್ಣ ಕೋಲೆ [೫೦]

ಎಂದು ಉತ್ತರಿಸುತ್ತಾನೆ. ನಂತರ ಅಕ್ಕ ಬಂದು ವಿಚಾರಿಸಿದಾಗ ತನ್ನ ಮನದ ವಿಷಯವನ್ನು ತಿಳಿಸುತ್ತಾನೆ. ಕೇಳಿದ ಅಕ್ಕನಿಗೂ ಆಶ್ಚರ್ಯವಾಗುತ್ತದೆ. ತಮ್ಮನ ಅನುಚಿತ ಬೇಡಿಕೆ ಅವಳಿಗೂ ಹಿಡಿಸದು. ಏಕೆಂದರೆ ಅವಳೂ ಸಹ ಒಂದು ಮನೆಯ ಸೊಸೆ. ಮನೆತನದ ಗೌರವ ಕಾಪಾಡುವುದು ಸೊಸೆಯಿಂದಲೇ ತಾನೇ! ಆದರೂ ತಮ್ಮನ ದೈನ್ಯತೆಗೆ ಅವಳು ಕರಗಿ ಹೋಗುತ್ತಾಳೆ. ಒಂದು ಉಪಾಯವನ್ನು ಮಾಡಿ ಊರ ಜನರಿಗೆಲ್ಲಾ ಊಟಕ್ಕೆ ಕರೆಸುವಂತೆ ಸೂಚಿಸುತ್ತಾಳೆ. ಹಾಗೆ ಮಾಡಲು ಊರವರಿಗೆಲ್ಲಾ ಊಟಕ್ಕೆ ಕರೆಯುತ್ತಾರೆ.

ಅವರು ನಾಲರು ನೆಗೆಣ್ಣಿದೆರು
ಊಟಕ್ಕೆ ಬಂದರು ಕೋಲೆಣ್ಣ ಕೋಲೆ

ನಾಲರ ನೆಗೆಣ್ಣಿದೆಲಿಗಿ
ನಾಕಗಲ ಮಾಡ್ಯಾರೆ ಕೋಲೆಣ್ಣ ಕೋಲೆ
ಸಣ್ಣಾಕಿ ನಾಗಬಾಯಿಗಿ
ನೊಣ ಹೊಡೆದು ಹಾಕ್ಯಾರೆ ಕೋಲೆಣ್ಣ ಕೋಲೆ [೫೧]

ನಾಲ್ಕು ಜನರಿಗೂ ಬೇರೆ ಬೇರೆ ತಟ್ಟೆಯಲ್ಲಿ ಉಣಬಡಿಸಿ ನಾಗಾಬಾಯಿಯ ತಟ್ಟೆಯಲ್ಲಿ ನೊಣ ಸಾಯಿಸಿ ಹಾಕುತ್ತಾರೆ. ತಟ್ಟೆಯಲ್ಲಿಯ ನೊಣ ನೋಡಿ ಹೇಸಿಕೊಂಡು ವಾಂತಿ ಭೇದಿ ಮಾಡಿಕೊಂಡು ಮಲಗುತ್ತಾಳೆ. ಆಗ ಉಪಾಯದಿಂದ ಅವಳನ್ನು ಅಲ್ಲೇ ಇರಿಸಿಕೊಳ್ಳುತ್ತಾರೆ. ಉಳಿದ ಮೂವರು ನೆಗೆಣ್ಣಿಯರು ಮನೆಗೆ ಹೋಗುತ್ತಾರೆ. ಮಂಚದ ಮೇಲೆ ಗಾದಿ ಹಾಕಿ ಮಲ್ಲಿಗೆ ಹರವಿ ನಾಗಾಬಾಯಿಯನ್ನು ಒಯ್ದು ಮಲಗಿಸುತ್ತಾರೆ. ಅರ್ಧ ರಾತ್ರಿಯಲ್ಲಿ

ಸಟ್ಟ ಸರ ಹೊತ್ತನ್ಯಾಗ
ಅರಸು ಮಗ ಬಂದ ಕೋಲೆಣ್ಣ ಕೋಲೆ
ದಿಗ್ಗನೆ ಕುಂತ ಬಿಟ್ಟ
ಮೈಯ ಮುಟ್ಟ ಕೈ ಮುಟ್ಟ ಕೋಲೆಣ್ಣ ಕೋಲೆ [೫೨]

ಮಂಪರಿನಲ್ಲಿದ್ದ ನಾಗಾಬಾಯಿ ಕಣ್ತೆರೆದು ನೋಡಿ, ಅವನು ಬಂದು ಕುಳಿತಾಗ ಅವನ ಮನದಿಂಗಿತ ತಿಳಿದ ಅವಳು ಕೂಡಲೇ

ಕೊಳ್ಯಾನ ಹವಳದ ಸರ
ಪಟ್ಟನೆ ಹರದಾಳೆ ಕೈಯಲ್ಲಿ ಕೊಟ್ಟಾಳೆ ಕೋಲೆಣ್ಣ ಕೋಲೆ [೫೩]

ಹವಳದ ಸರ ಹರಿದೊಡನೆ ಚೆಲ್ಲಾಪಿಲ್ಲಿಯಾಗಿ ಬಿದ್ದು ಬಿಡುತ್ತವೆ. ಆಗ ಅವಳು ಸರವಿಲ್ಲದೇ ಮನೆಗೆ ಹೋದರೆ ಅತ್ತೆ ಬೈಯ್ಯುತ್ತಾಳೆಂದು ಹವಳಗಳು ಪೋಣಿಸಿ ಸರ ಮಾಡಿದ ಮೇಲೆಯೇ ನಾನು ನಿನ್ನವಳಾಗುತ್ತೇನೆಂದು ಕರಾರು ಒಡ್ಡುತ್ತಾಳೆ. ಅವಳು ಆ ವೇಳೆಯಲ್ಲಿ ತಪ್ಪಿಸಿಕೊಂಡು ಹೋಗಲಾರಳೆಂಬ ಭರವಸೆಯಿಂದ ಅವನೂ ಕರಾರಿಗೆ ಒಪ್ಪಿದಂತೆ ಕಾಣುತ್ತದೆ. ಆದರೆ ಅವನು ಒಂದೊಂದು ಹವಳ ಪೋಣಿಸಿದಂತೆ ಇವಳು ಹಿಂದೆ ಒಂದೊಂದು ತೆಗೆಯುತ್ತಾಳೆ. ಅದರಲ್ಲೇ ನಸು ಬೆಳಕು ಆಗುತ್ತದೆ. ಅವನಿಗೆ ಅದರ ಪರಿವೆಯೇ ಇರುವದಿಲ್ಲ.

ಮುಂದ ಮುಂದ ಪೋಣಿಸುತ್ತಾನೆ
ಹಿಂದ ಹಿಂದ ಉಚ್ಚುತ್ತಾಳೆ ಬೆಳ್ಳ ಬೆಳಗಾಗಿ ಕೋಲೆಣ್ಣ ಕೋಲೆ [೫೪]

ಬೆಳಕು ಹರಿಯುವ ಹೊತ್ತಿನಲ್ಲಿ ಅವಳು ಕಾಲ್ಮಡಿಗೆ ಹೋಗಿ ಬರುತ್ತೇನೆಂದು ಹೇಳುತ್ತಾಳೆ. ಆಗ ಅವನು ಅವಳನ್ನು ಬಿಡಲು ಒಪ್ಪುವದಿಲ್ಲ. ಅದಕ್ಕ ಅವಳು ನಾನೆಲ್ಲೂ ಓಡಿ ಹೋಗಲಾರೆ ಬೇಕಾದರೆ ನನ್ನ ಸೆರಗು ನಿನ್ನ ಕೈಯಲ್ಲಿ ಹಿಡಿದುಕೊಂಡಿರು ಎಂದು ಸೆರಗನ್ನು ಅವನ ಕೈಗೆ ಕೊಡುತ್ತಾಳೆ.

ಎದಿಮ್ಯಾಲಿನ ಸೆರಗ

ಅವನ ಕೈಗೆ ಕೊಟ್ಟಾಳೆ ಕೋಲೆಣ್ಣ ಕೋಲೆ

ಒಂದು ಪಾವಟಗಿ ಇಳಿದಾಳೆ

ಒಂದು ನಿಲಗಿ ಉಚ್ಚ್ಯಾಳೆ ಕೋಲೆಣ್ಣ ಕೋಲೆ

ಎಡ್ಡ ಪಾವಟಗಿ ಇಳದಾಳೆ

ಎಡ್ಡ ನಿಲಗಿ ಉಚ್ಚ್ಯಾಳೆ ಕೋಲೆಣ್ಣ ಕೋಲೆ [೫೫]

ಹೀಗೆ ಒಂದೊಂದಾಗಿ ನಿಲಿಗೆ ಬಿಚ್ಚುತ್ತಾ ಇಳಿಯುತ್ತ ಕೆಳಗೆ ಹೋಗುತ್ತಾಳೆ. ಕೊನೆಯ ಮೆಟ್ಟಿಲಿಗೆ ಬರುವ ಹೊತ್ತಿಗೆ ಅವಳ ಸೀರೆಯು ಮುಗಿಯುತ್ತ ಬರುತ್ತದೆ. ಕೊನೆಗೆ ಅವಳು ಜಾಣತನದಿಂದ ಮಾಡಿದು ಹೀಗೆ

ಕುಂಡಿ ಪದರ ಬಿಚ್ಚಿದ್ದಾಳೆ

ಕ್ವಾಣಿನ ಕೊಂಬಿಗೆ ಕಟ್ಟ್ಯಾಳೆ ಕೋಲೆಣ್ಣ ಕೋಲೆ

ಓಡುತ್ತಾ ಓಡುತ್ತ

ಮನಿಗಾದರ ಹೋಗುತಾಳೆ ಕೋಲೆಣ್ಣ ಕೋಲೆ [೫೬]

ಅವನು ಸೆರಗು ಹಿಡಿದು ಅಲ್ಲೆ ಕುಳಿತುಕೊಳ್ಳುತ್ತಾನೆ. ಅವಳು ಸೀರೆಯ ಕೊನೆಯನ್ನು ಅಂಗಳದಲ್ಲಿರುವ ಕೋಣದ ಕೊಂಬಿಗೆ ಕಟ್ಟಿ ತನ್ನ ಮನೆಗೆ ನಗ್ನಳಾಗಿಯೇ ಓಡಿ ಹೋಗಿರಬಹುದು. ನಡೆದ ವಿಷಯ ಮನೆಯಲ್ಲಿ ತಿಳಿಸಿರಬೇಕು. ಇನ್ನು ಮಲಗಿ ನಿದ್ರಿಸುತ್ತಿದ್ದ ನೆಗೆಣ್ಣಿಯರಿಗೆ ಬೀಸಲು ಏಳಿರೆಂದು ಎಬ್ಬಿಸಿ ಬೀಸಲು ಕುಳಿತು

ಕಲ್ಲ ದೊಡ್ಡಿ ಕಣಕಿಯ ಬಣಮಿ

ನಿಲಹುಸೆ ಕ್ವಾಣ ಮೈಯಲಿಲ್ಲ ಕೋಲೆಣ್ಣ ಕೋಲೆ [೫೭]

ಎಂದು ದನಿ ತೆಗೆದು ಹಾಡುತ್ತ ಬೀಸತೊಡಗಿದಂತೆ ಕಂಡು ಬರುತ್ತದೆ. ಅವರ ಮನೆಯಲ್ಲಿ ಅವರ ಕಾವಲಿನಲ್ಲಿದ್ದರೂ ಅವನಿಂದ ತಾನು ಶೀಲ ಉಳಿಸಿಕೊಂಡು ಸುರಕ್ಷಿತವಾಗಿ ಬಂದ ಕಾರಣ ನಾನು ಜಾಣಳಾದೆ ಅವನು ಕೋಣನಾದನೆಂಬುದು ಅವಳ ಹಾಡಿನ ಇಂಗಿತಾರ್ಥವಿರಬಹುದು. ಅವಳ ಜಾಣ್ಮೆಯೂ ಮೆಚ್ಚುವಂಥದ್ದೆ. ಅರಸು ಮಗನಾದರೂ ಕೂಡ ಬಲತ್ಕರಿಸದೇ ಇರುವದನ್ನು ಕಂಡಾಗ ರಾಮಾಯಣದ ರಾವಣ ಸೀತೆಯರ ನೆನಪಾಗುವುದು. ಸಮುದ್ರದ ಮಧ್ಯದಲ್ಲಿ ರಾಕ್ಷಸರ ಕಾವಲಿನಲ್ಲಿದ್ದರೂ ರಾವಣನಿಂದ ಸೀತೆ ಶೀಲ ರಕ್ಷಿಸಿಕೊಂಡ ಕಥೆಯನ್ನು ಕೇಳುತ್ತೇವೆ, ಓದುತ್ತೇವೆ. ಸೀತಯನ್ನು ಬಿಡಿಸಿಕೊಂಡು ಬರಲು ರಾಮನೇ ಬರಬೇಕಾಯಿತು. ಆದರೆ ಈ ಗರತಿಗೆ ಅಂಥ ಆಪತ್ತಿನಲ್ಲಿ ಅವಳ ಗಂಡ ಬರಲಿಲ್ಲ. ತನಗೆ ತೋಚಿದ ಒಂದು ಉಪಾಯವನ್ನು ಮಾಡಿದಳಷ್ಟೆ. ಅವನು ಮನಸ್ಸು ಮಾಡಿದರೆ ಇವಳನ್ನು ಬಲತ್ಕರಿಸಬಹುದಿತ್ತು, ಆದರೆ ಅವನು ಇವಳೇ ಒಲಿದು ಬರಲಿ ಎಂದು ತಾಳ್ಮೆ ವಹಿಸಿದಂತೆ

ಅಥವಾ ಅವಳೆಲ್ಲಿ ಹೋಗುತ್ತಾಳೆ ಎಂಬ ಧೈರ್ಯದಿಂದ ಅವನಿದ್ದಿರಬಹುದು. ಹೀಗಾಗಿ ಅವಳ ತಂತ್ರ ಫಲಿಸಿದ್ದು ಕಂಡು ಬರುತ್ತದೆ. ಅಲ್ಲಿಂದ ತನ್ನ ಮೈಮೇಲಿನ ವಸ್ತ್ರದ ಪರಿವೆ ಇಲ್ಲದೇ ಓಡಿ ಬರುತ್ತಾಳೆ. ಅವಳ ಜಾಣ್ಮೆ ಧೈರ್ಯಗಳು ಎಲ್ಲಾ ಹೆಣ್ಣು ಮಕ್ಕಳಿಗೆ ಸ್ಪೂರ್ತಿಯನ್ನಿತ್ತಿರುವ ಸಾಧ್ಯತೆಗಳು ಕಂಡು ಬರುತ್ತವೆ.

'ಮಲ್ಲಿಗೆ ದಂಡೆ'ಯ ಎಳ್ಳಮಾಸಿ ಕಥೆಯ ಹಾಡಿಗೂ ಈ ಬುಲಾಯಿ ಹಾಡಿಗೂ ಹೆಚ್ಚಿನ ಹೋಲಿಕೆಗಳು ಕಂಡು ಬರುತ್ತವೆ. ಮನೆಯ ಯಜಮಾನನ ಹೆಸರು ಅಲ್ಲಿ ಕಳಶೆಟ್ಟಿ ಇಲ್ಲಿ ಅಪ್ಪಣ್ಣ ಗೌಡರು, ಅಲ್ಲಿ ಏಳು ಜನ ಸೊಸೆಯರು, ಇಲ್ಲಿ ನಾಲ್ಕು ಜನ ಸೊಸೆಯರು. ಅಲ್ಲಿ ಅತ್ತೆಗೂ ಆರು ಜನರಿಗೂ ಒಳ್ಳೆಯ ಸಂಬಂಧವಿದ್ದು, ಚಿಕ್ಕವಳನ್ನು ಯಾರೂ ಪ್ರೀತಿಸುತ್ತಿರಲಿಲ್ಲ. ಆದರೆ ಇಲ್ಲಿ ಅತ್ತೆಯ ಪ್ರಸ್ತಾಪ ಬರುವದಿಲ್ಲ. ಅಲ್ಲಿ ಕರು ಬಿಚ್ಚಿಕೊಂಡು ರಸ್ತೆಗೆ ಬಂದಾಗ, ಅವಳು ಕರುವನ್ನು ತೆಗೆದುಕೊಂಡು ಹೋಗುವಾಗ ಅರಸು ಮಗ ಇವಳನ್ನು ನೋಡಿದನು. ಇಲ್ಲಿ ನೀರು ತರಲು ನಾಲ್ಕು ಜನರ ನೆಗೆಣ್ಣಿಯರು ಹೋದಾಗ ನೋಡುತ್ತಾನೆ. ಅಲ್ಲಿ ತಂದೆ- ತಾಯಿಗೆ ಮನದ ಇಂಗಿತ ತಿಳಿಸಿದರೆ ಇಲ್ಲಿ ಅಕ್ಕನಿಗೆ ತಿಳಿಸುತ್ತಾನೆ. ಎರಡೂ ಕಥೆಗಳಲ್ಲಿ ಊರಿಗೆಲ್ಲ ಊಟ ಹಾಕುವುದು, ನೊಣ ಹೊಡೆದು ಹಾಕುವುದು, ಒಂದೇ ರೀತಿಯಾಗಿರುವಂತೆ ಕಾಣುತ್ತವೆ. ಕೊರಳಲ್ಲಿಯ ಹಾರ ಅಲ್ಲಿ ಪುತಳಿ ಸರವಾದರೆ, ಇಲ್ಲಿ ಹವಳದ ಸರವಿರುತ್ತದೆ. ಕೊನೆಗೆ ಸೀರೆಯ ಕೊನೆ ಕೋಣದ ಕೊಂಬಿಗೆ ಕಟ್ಟಿ ಬರುವುದು ಇಲ್ಲಿ ಇದ್ದರೆ, ಎಮ್ಮೆ ಯೋಡಿಗೆ ಎಂದು ಅಲ್ಲಿದೆ.

ಕಳಸೆಟ್ಟಿವರ ಮನಿಮುಂದೆ
ಜಂಬ ನೀಲದ ಹಣ್ಣ ಕೋಲೆಣ್ಣ ಕೋಲೆ
ಕೈಗ್ಯಾದರು ಬಂದವ
ಬಾಯಿಗ್ಯಾದರ ಬರಲಿಲ್ಲ ಕೋಲೆಣ್ಣ ಕೋಲೆ [೫೮]

ಎಂದು ಅಲ್ಲಿದ್ದರೆ ಇಲ್ಲಿ ಧ್ವನಿಪೂರ್ಣವಾಗಿ ಒಗಟಿನಂತೆ ಕಣಕಿಯ ಬಣಮಿ ಕೋಣ ಮೇಯಲಿಲ್ಲವೆಂದು ಹೇಳುವುದು ಕಂಡು ಬರುತ್ತದೆ.

ಹೀಗೆ ಹಲವು ವ್ಯತ್ಯಸಗಳೊಂದಿಗೆ ಈ ಹಾಡು ಪಾಠಾಂತರಗಳಾಗಿ ವಿವಿಧ ಪ್ರಕಾರಗಳಲ್ಲಿ ಮುಂದೊರೆದಂತೆ, ಹಾಡುವಂತೆ ಕಂಡು ಬರುತ್ತದೆ.

ಕಾಶಿಬಾಯಿ ತನ್ನ ಶೀಲವನ್ನು ಕಾಯ್ದುಕೊಳ್ಳುವದಕ್ಕಾಗಿ ಕರುಳ ಕುಡಿಯನ್ನೇ ಬಲಿಕೊಟ್ಟ ಬುಲಾಯಿ ಹಾಡು ತುಂಬಾ ಜನಪ್ರೀಯವಾದುದು. ಕಾಶಿಬಾಯಿಯ ಹಾಡಿನಲ್ಲಿ ಅವಳು ಬಾಣಂತನಕ್ಕೆಂದು ತವರು ಮನೆಗೆ ಬಂದು ಗಂಡು ಮಗುವನ್ನು ಹೆತ್ತಿರುತ್ತಾಳೆ. ಈ ವಿಷಯವನ್ನು ಅವಳ ತಂದೆ ಪತ್ರ ಬರೆದು ಬೀಗರಿಗೆ ತಿಳಿಸುತ್ತಾನೆ. ಆಗ ಬೀಗರು ತಮ್ಮ ಮಗನಿಗೆ ಕರೆದು ನಮಗೆ ವಯಸ್ಸಾಯಿತು, ಮೊಮ್ಮಗನನ್ನು ನೋಡೋ ಆಸೆ ಕರೆದುಕೊಂಡು ಬಾ ಎಂದು

ಕಳುಹಿಸುತ್ತಾರೆ.ಅಳಿಯ ಮನೆಗೆ ಬಂದಾಗ ಸಡಗರ, ಅಳಿಯನ ಊಟಕ್ಕೆ ತಯ್ಯಾರಾದ ಅಡುಗೆ ಈ ರೀತಿಯದ್ದು.

ಅಳಿಯ ಬಂದಾನೆಂದು ಮನದಾಗೆ ಖುಷಿಯಾಗಿ
ಪಂಚಾಮೃತದ ಅಡಿಗಿಯೆ ರನ್ನದೇ ಕೋಲು ಕೋಲೆ [೫೯]

ಪಂಚಾಮೃತದ ಅಡಗಿಯನ್ನುಂಡ ನಂತರ ಅಳಿಯ ಮಗುವನ್ನು ತೊಟ್ಟಿಲಲ್ಲಿಂದ ಎತ್ತಿಕೊಂಡು ಹಣೆಗೆ ಹರಳೆಲಿ, ಹತ್ತು ಬೆರಳಿಗೆ ಉಂಗುರ, ಜರತಾರಿನ ಅಂಗಿ- ಕುಲಾಯಿ, ಕಾಲಲ್ಲಿ ಖಡೆ-ರುಳಿಗಳನ್ನಿಟ್ಟು ಅತ್ತೆಯವರಿಗೆ ಕರೆದು ತನ್ನ ಹೆಂಡತಿ-ಮಗುವನ್ನು ಕಳುಹಿಸಿಕೊಡಲು ಕೇಳುತ್ತಾನೆ. ಕಾರಣ ಆಯಿ-ಮುತ್ಯಾ ಮುಪ್ಪಿನವರು, ಪುತ್ರಗೆ ನೋಡೊ ಆಸೆ ಎನ್ನುತ್ತಾನೆ. ಅದಕ್ಕೆ ಅತ್ತೆ ಮಾವ

ಬ್ಯಾಸಗಿ ಬಿಸಲಾದ ಕೂಸಿನ ತಾಯಿ ಹಳ
ಸೀರಿ ಕುಬ್ಬಸ ಇಲ್ಲ ಮಗಳಿಗೆ ರನ್ನದೆ ಕೋಲು ಕೋಲೆ [೬೦]

ಇಷ್ಟು ಹೇಳುವದನ್ನು ಕೇಳಿದ ಅಳಿಯ ಅಲ್ಲಿ ನಿಲ್ಲದೆಯೇ ಬಿಜಲಾಟಿ ಗಾಡಿಯನ್ನು ಹತ್ತಿ ಹೋಗುತ್ತಾಳೆ. ಅದನ್ನು ಕಂಡ ಕಾಶಮ್ಮ ತನ್ನ ಗಂಡನ ಮನೆಗೆ ಹೋಗಲು ಹೊರಡುತ್ತಾಳೆ. ಅವಳು ಬಾಗಿಲು ದಾಟುವಲ್ಲಿ ಬೆಕ್ಕು ಖಟಕ, ಅಡ್ಡ ಬರುತ್ತಾರೆ. ಮಾಯಾ ರೂಪದ ಮಳೆಯೂ ಸುರಿಯುತ್ತದೆ. ಅಂತಹದರಲ್ಲೇ ಮಗುವನೆತ್ತಿಕೊಂಡು ಭಿರಭಿರನೆ ಕಾಶಮ್ಮ ಠೇಶಣಕ್ಕೆ ಹೋಗುತ್ತಾಳೆ. ಆ ವೇಳೆಯಲ್ಲಿ

ಮಾಸ್ತರ ಬಂದು ಕೇಳುತ್ತಾನೆ ಕಾಶಿಬಾಯಿಗೆ
ಗಂಡಸಿರಿಲ್ಲೆನೆ ಸಂಗಡ ರನ್ನದೆ ಕೋಲು ಕೋಲೆ
ಮಾಸ್ತರನ ಬಳಿ ಕಾಶಿಬಾಯಿ ಹೇಳುತ್ತಾಳೆ
ಗಂಡ ಹೆಂಡತಿಗೆ ಗಾಡಿ ಬದಲಾಗೆ ರನ್ನದೇ ಕೋಲು ಕೋಲೆ [೬೧]

ಅದನ್ನು ಕೇಳಿದ ಮಾಸ್ತರ ತನ್ನ ಬಂಗಲೆಗೆ ಹೋಗಿ ಮಲಗಲು ಹೇಳುತ್ತಾನೆ. ಅದರಂತೆ ಅವಳು ಬಂಗಲೆಗೆ ಹೋಗಿ ಮಂಚದ ಮ್ಯಾಲೆ ಮಲಗಿದಾಗ ಗಾಡಿಗಳೆಲ್ಲಾ ಹೋದ ಮೇಲೆ ಮಾಸ್ತರ ಬಂಗಲೆಗೆ ಹೋಗುತ್ತಾನೆ. ಅವನ ಉದ್ದೇಶವೇ ಬೇರೆ ರೀತಿಯದಾಗಿರುತ್ತದೆ. ಹೀಗಾಗಿ

ಕೆಟ್ಟ ಮಾರಿ ಮಾಸ್ತರ ಧಿಟ್ಟಿಸಿ ನೋಡುತ್ತಾನೆ
ಮೈಯ ಮುಟ್ಟ ಕೈಯ ಮುಟ್ಟ ಬಂದಾನೆ ರನ್ನದೇ ಕೋಲು ಕೋಲೆ
ಪತಿವ್ರತ ಕಾಶಿಬಾಯಿ ಹಿಕಮತಿ ಮಾಡೇಳ
ಹಿಕಮತಿ ಮಾಡಿ ಬರುತ್ತಿನಿ ರನ್ನದ ಕೋಲು ಕೋಲೆ
ಹಿಕಮತಿ ಮಾಡಿ ಬರುತ್ತಿನಿ ಮಾಸ್ತರಗ
ಕೊಂಡ್ಯಾಗ ಕೀಲಿ ಹಾಕಿ ಜಡದಾಳೆ ರನ್ನದ ಕೋಲು ಕೋಲೆ [೬೨]

ಹೀಗೆ ದುರುದ್ದೇಶದಿಂದ ಬಂಗಲೆಗೆ ಕಳುಹಿಸಿದ ಮಾಸ್ತರನ ಮನದಾಸೆಯನ್ನು ಹಾವ ಭಾವದಿಂದ ತಿಳಿದುಕೊಂಡ ಕಾಶಿಬಾಯಿ ತಾನೇ ಉಪಾಯ ಮಾಡಿ ಮಗುವನ್ನು ಅವನ ಕೈಗೆ ಕೊಟ್ಟು ಹೊರಗೆ ಬಂದು ಕೊಂಡಿ ಕಿಲೀ ಹಾಕಿ ಬಿಡುತ್ತಾಳೆ. ಆಗ ಅವನು ತನ್ನ ಆಸೆ ಈಡೇರಲಿಲ್ಲವೆಂದು ಕಾಶಿಬಾಯಿಯನ್ನು ಕುರಿತು ಹೀಗೆ ಹೇಳುತ್ತಾನೆ.

ಹೆಣ್ಣ ಕಾಶಿಯೆಂತ ಹೆಮ್ಮೆಯಿಂದ ತಂದೆ
ಹೆಣ್ಣಲ್ಲ ನನ್ನಗೆ ವೈರಿಯಾದೆ ರನ್ನದ ಕೋಲು ಕೋಲೆ [೭೩]

ಎಂದು ಮಗುವನ್ನು ಮುಂದೆ ಮಾಡಿ ಕೊಲ್ಲುವ ಭಯ ಹಾಕುತ್ತಾನೆ. ಅದಕ್ಕೆ

ಗಂಡ-ಹೆಂಡತಿ ನಾವು ಥಣ್ಣಗ ಇದ್ದರ
ಹಿಂಥ ಪುತ್ರನ ಹೆತ್ತೆವ ರನ್ನದ ಕೋಲು ಕೋಲೆ [೭೪]

ಆಗ ಮಾಸ್ತರ ಮಗುವನ್ನು ಕೊಂದು, ಭಾಗ ಮಾಡಿ ಕಿಂಡಿಯಲ್ಲಿಂದ ಹೊರಕ್ಕೆ ಬೀಸಾಡುತ್ತಾನೆ. ಆ ಮಗುವನ್ನು ಆಯ್ದುಕೊಂಡು ಉಡಿಯಲ್ಲಿಟ್ಟುಕೊಂಡ ಕಾಶಿಬಾಯಿ ದುಃಖಿಸುತ್ತಾಳೆ. ಅಷ್ಟರಲ್ಲಿ ಮತ್ತೊಂದು ಗಾಡಿ ಬರುತ್ತದೆ. ಆದರೆ ಮಾಸ್ತರನೇ ಇರುವದಿಲ್ಲ. ಹೀಗಾಗಿ ಕಾಶಿಬ್ಬ ನಡೆದದ್ದನ್ನೆಲ್ಲಾ ಸರ್ಕಾರ, ಪೋಲಿಸರ ಮುಂದೆ ಹೇಳುತ್ತಾಳೆ. ನಂತರ ಸರ್ಕಾರ ಅವಳ ಗಂಡನನ್ನು ಕರೆಯಿಸಿ ಐಯ್ಯಾರಿ ಮಾಡಿ ಕಳುಹಿಸುತ್ತಾರೆ. ಮಾಸ್ತರನಿಗೆ ಶಿಕ್ಷೆಯನ್ನು ನೀಡುತ್ತಾರೆ.

ಈ ರೀತಿ ತನ್ನ ಶೀಲಕ್ಕಾಗಿ ಮಗನ ಮೇಲಿನ ವಾತ್ಸಲ್ಯ, ಮೋಹವನ್ನು ತೊರೆದ ಕಾಶಿಬಾಯಿ ಶೀಲದ ಮಹತ್ವವನ್ನು ತಿಳಿಸುವದರ ಜೊತೆಗೆ ಜನಸಾಮಾನ್ಯ ಮಹಿಳೆಯರಿಗೆ ಹತ್ತಿರವಾಗುತ್ತಾಳೆ. ಇದು ನಡೆದು ಹೋದ ಸತ್ಯ ಘಟನೆಯ ಬುಲಾಯಿ ಹಾಡಾಗಿರುವುದು ಗಮನಾರ್ಹವಾಗಿದೆ.

ಸಂಗಮ್ಮನ ಹಾಡಿನಲ್ಲಿ ಸಂಗಮ್ಮನ ಅಣ್ಣ ತನ್ನ ಮಡದಿಯ ಮಾತು ಕೇಳಿ ನಿರಪರಾಧಿಯಾದ ತನ್ನ ತಂಗಿ ಸಂಗಮ್ಮಳ ಶೀಲದ ಬಗ್ಗೆ ಸಂಶಯ ಪಡುತ್ತಾನೆ. ಆವನ ಹೆಂಡತಿ ಅವನಿಗೆ ಹೇಳಿದ್ದು

ಆರ ಮಂದಿ ಅರಬ್ಬರು ಮೂರ ಮಂದಿ ತುರಕರು
ಗಂಜಿ ಹಚ್ಚಡದೇ ಗೌಡರು ಕೋಲೆಣ್ಣ ಕೋಲ
ಗಂಜಿ ಹಚ್ಚಡದು ಗೌಡರ ಇದ್ದಿದಾರ ಸಂಗ
ಮಾಡ್ಯಾಳ ನಿಮ ತಂಗಿ ಕೋಲೆಣ್ಣ ಕೋಲ [೭೫]

ಹೆಂಡತಿ ಹೇಳಿದ್ದನ್ನು ಕೇಳಿದ್ದೆ ತಡ ಅಣ್ಣ ತನ್ನ ತಾಯಿಯನ್ನು ಕರೆದು ತಂಗಿಯ ತಲೆಗೆ ಎಣ್ಣೆ ಹಚ್ಚಿ ನೀರೆರೆದು, ಹೊಸ ಸೀರೆ, ಕುಬ್ಬಸ ಉಡುಸಿ ಬುತ್ತಿ ಕಟ್ಟಿ ಕೊಡಲು ತಿಳಿಸುತ್ತಾನೆ. ಅದಕ್ಕೆ ತಾಯಿ ಈಗೇನು ಅವಸರವೆಂದು ಕೇಳಿದರೂ ತನ್ನ ತಾಯಿಗೆ ಒಪ್ಪಿಸಿ

ಅವಳನ್ನು ಗಂಡನ ಮನೆಗೆ ಬಿಟ್ಟು ಬರುತ್ತೇನೆಂದು ಹೋಗುತ್ತಾನೆ. ಆದರೆ ಊರ ಹೊರಗೆ ಹೋದ ಮೇಲೆ ಬುತ್ತಿ ಉಣ್ಣಲು ಕೊಟ್ಟು ಮೂರು ತುತ್ತು ಉಣ್ಣುವಾಗ ಜಂಬವನ್ನು ತೆಗೆದು ನಾಲ್ಕನೆ ತುತ್ತು ಉಣ್ಣುವಾಗ ಹೊಟ್ಟೆಯಲ್ಲಿ ಹೊಡೆದು ತಿವಿದು ಕೊಲ್ಲುತ್ತಾನೆ. ಇಲ್ಲಿ ಅಣ್ಣನಿಗೆ ತನ್ನ ತಂಗಿ ಎಂಬ ಪ್ರೀತಿಗಿಂತ ತಂಗಿಯ ಶೀಲ ಹಾಗೂ ತನ್ನ ಮನೆತನದ ಮಾನವೇ ಹೆಚ್ಚಾಗಿದ್ದುದು ಕಂಡು ಬರುತ್ತದೆ. ಅಂದರೆ ಶೀಲ ಪ್ರಾಣಕ್ಕಿಂತಲೂ ಮಿಗಿಲು ಎಂಬುದು ಬುಲಾಯಿ ಸಂಸ್ಕೃತಿಯಲ್ಲಿ ಕಾಣಬಹುದು.

ಅದರಂತೆ ಒಂದು ವೇಳೆ ಶೀಲಗೆಟ್ಟು ಅಥವಾ ನೀತಿಗೆಟ್ಟು ಬದುಕಲು ಮುಂದಾದ ಹೆಣ್ಣಿಗೂ ಶಿಕ್ಷೆ ಕೊಟ್ಟು ಅವಮಾನ ಮಾಡುವಂತಹ ಬುಲಾಯಿ ಹಾಡುಗಳನ್ನು ಕಾಣಬಹುದು.

ಚಂದ್ರುಶ ಬಲ್ವಾನ ನ ಹಾಡಿನಲ್ಲಿ ಸಿಪಾಯಿಯಾಗಿದ್ದ ಚಂದ್ರುಶ ಮೂಲತಃ ಬಾಗಲಕೋಟೆಯವನು. ಅವನು ಲಡಾಯಿಗೆಂದು ಹೈದ್ರಾಬಾದಿಗೆ ಹೋಗಬೇಕಾದ ಪ್ರಸಂಗ ಬರುತ್ತದೆ. ಆಗ ತನ್ನ ಹೆಂಡತಿಗೆ ತಿಳಿಸಿ ಮಗ ಶಿವಕುಮಾರನನ್ನು ಚೆನ್ನಾಗಿ ನೋಡಿಕೋ ಎಂದು ತನ್ನ ಆಪ್ತ ಗೆಳೆಯನಾದ ಸಾಹುಕಾರ ರಾಮಚಂದ್ರನಿಗೆ ತನ್ನ ಮನೆಯ ಜವಾಬ್ದಾರಿ ವಹಿಸಿಕೊಟ್ಟು ಹೋಗುತ್ತಾನೆ. ಗಂಡ ಹೋದ ಮೇಲೆ ಹೆಂಡತಿ ಧರಣಿ ಜೀಳುತ್ತಾಳೆ.

ಪುರುಷ ಹೊಂಟೋಗ್ಯಾನ ಧರಣಿ ಬಿದ್ದಾಳೆ ತರುಣಿ
ತಿರಗೆಂದು ಬರುತಾನ ಕೋಲೆಣ್ಣ ಕೋಲೆ ”

ಹೀಗಿರುವಾಗ ಒಬ್ಬ ಮುದುಕಿ ಬಂದು ಯುದ್ಧಕ್ಕೆ ಹೋದ ನಿನ್ನ ಗಂಡ ಮತ್ತೇ ತಿರುಗಿ ಬರುವುದಿಲ್ಲ. ಸಾಹುಕಾರ ರಾಮಚಂದ್ರನನ್ನೇ ಒಲಿಸಿಕೋ ಎಂದು ಹೇಳುತ್ತಾಳೆ. ಆಗ ಅವಳು ಅವನನ್ನು ಕರೆಯಿಸುತ್ತಾಳೆ. ರಾಮಚಂದ್ರನು ಬಂದು ಕೇಳಿದಾಗ ತನ್ನ ಮನದಾಸೆಯನ್ನು ಹೇಳುತ್ತಾಳೆ. ಅದಕ್ಕವನು

ಸಾಕು ಮಾಡೆ ನಿನ್ನ ವರಣ ಆಶೆ ಆಗಲಾರೆ ವರನ
ಶಿವಕುಮಾರ ಸಣ್ಣವ ಹನ ಕೋಲೆಣ್ಣ ಕೋಲೆ

ಎಂದು ಹೇಳಿ ಹೋಗುತ್ತಾನೆ. ಆಗ ಮಗನಿದ್ದುದ್ದಕ್ಕೇ ರಾಮಚಂದ್ರ ತನ್ನನ್ನು ಬೇಡವೆಂದಿರಬೇಕೆಂದು ತಿಳಿದು ಶಾಲೆಗೆ ಹೋಗಿದ್ದ ಮಗನನ್ನು ಕರೆ ತರಲು ಹೋಗುತ್ತಾಳೆ. ಮಗು ಬರುವದಿಲ್ಲ.ಬೇಡವೆಂದು ಹಟ ಹಿಡಿದಾಗ ಮಾಸ್ತರನನ್ನು ಹೇಳಿ ಹೊಡೆಯಿಸಿ ಮನೆಗೆ ಕರೆದುಕೊಂಡು ಬಂದು ಕೊಲ್ಲಲು ಪ್ರಯತ್ನಿಸುತ್ತಾಳೆ.ಮಗು ಜೀವದಾನ ಬೇಡಿದರೂ ಬಿಡದೇ ನಿನ್ನಪ್ಪನನ್ನು ನೆನೆಸಿಕೋ ಎಂದು ಮಗುವನ್ನು ಕೊಂದೇ ಬಿಡುತ್ತಾಳೆ.

ಮಗನೆ ಎಲೆ ದುಸಮಾನ ಪರಿ ಪರಿ ಕಾಡಿದೆ ನನ್ನ
ನೆನಸೋ ನಿನ್ನ ಜನಕನ ಕೋಲೆಣ್ಣ ಕೋಲೆ ”

ಮಗನನ್ನು ಕೊಂದು ಮುಗಿಸುವಷ್ಟರಲ್ಲೇ ಗಂಡ ಚಂದ್ರುಶ ಲಡಾಯಿ ಮಾಡಿ ಬರುತ್ತಾನೆ. ಬಂದದ್ದೇ ಮಗನನ್ನು ಕೇಳುತ್ತಾನೆ. ಆಗವಳು ಮಗ ಚಂಡಫಳ್ಳಿ ಆಡಲು ಹೋಗಿರುವನು, ಬೇಗ ಬರುವದಿಲ್ಲ, ಅಲ್ಲಿಯವರೆಗೆ ಜಳಕ ಮಾಡಿ ಊಟ ಮಾಡಿರೆಂದು ಹೇಳುತ್ತಾಳೆ. ಆಗ ಪಂಚ ಪಕ್ವಾನ್ನದ ಅಡಿಗೆ ಮಾಡಿ ಅದರಲ್ಲಿ ವಿಷ ಬೆರೆಸಿ ಊಟಕ್ಕೆಬ್ಬಿಸುತ್ತಾಳೆ.

ಪಂಚ ಪಕ್ವಾನ್ನ ಅಡಗಿ ಇಟ್ವಾಳೆ ಮಾಡಿ ತರುಣಿ
ಊಟಕ್ಕೆ ಏಳರಿನ್ನ ಕೋಲೆಣ್ಣ ಕೋಲೆ
ಇಸ ತಂದಳ ತರುಣಿ ಅದರೊಳಗೆ ಕಲಸ್ಯಾಳೆ
ಭೋಜನಕ ಏಳರಿನ್ನ ಕೋಲೆಣ್ಣ ಕೋಲೆ
ನೀರ ಇಟ್ಟಿಲ್ಲ ತರುಣಿ ತಟ್ಟಿ ಮುಚ್ಚಾಳೆ ಶ್ಯಾಣಿ
ನೀರಂತೆ ಬಿಟ್ಟನ ಪ್ರಾಣ ಕೋಲೆಣ್ಣ ಕೋಲೆ [೬೮]

ಹೀಗೆ ವಿಷ ಉಂಡು ನೀರಿಲ್ಲದೇ ಚಂದ್ರುಶ ಪ್ರಾಣ ಬಿಟ್ಟಾಗಲೇ ಗೆಳೆಯ ರಾಮಚಂದ್ರ ಬಂದು ನೋಡುತ್ತಾನೆ. ಅವನಿಗೆ ತುಂಬಾ ನೋವಾಗುತ್ತದೆ. ಗೆಳೆಯನ ಹೆಂಡತಿಯೆಂಬುದನ್ನು ಮರೆತು ಅವಳಿಗೆ ಕಠಿಣ ಶಿಕ್ಷೆಯನ್ನು ಕೊಡಿಸಿ ತನ್ನ ಗೆಳೆಯನ ಆತ್ಮಕ್ಕೆ ಮುಕ್ತಿ ನೀಡುತ್ತಾನೆ.

ಮೂಗು ತುರುಬ ಕೊಯ್ಯಿಸ್ಯಾರ ಕತ್ತಿನ ತರಸ್ಯಾರ
ಊರೊಳ ಆಕೀನ ಮೆರಸ್ಯಾನ ಕೋಲೆಣ್ಣ ಕೋಲೆ
ಬಾಗಲಕೋಟೆ ವರ್ತಮಾನ ಚಂದ್ರುಶ ಬಲವಾನ
ಮುಕ್ತಿ ಆಯಿತು ಅವನ ಕೋಲೆಣ್ಣ ಕೋಲೆ... [೬೯]

ಈ ರೀತಿಯಾಗಿ ಶೀಲ, ಪಾತಿವ್ರತ್ಯ ಕುರಿತಾದ ಅನೇಕ ಬುಲಾಯಿ ಹಾಡುಗಳನ್ನು ಅವುಗಳ ಆಶಯಗಳನ್ನು ಕಾಣಬಹುದು. ರತ್ನಮ್ಮನ ಹಾಡು, ಮಲ್ಲಮ್ಮನ ಹಾಡು, ನೀಲಕಂಠನ ಹಾಡು, ಮುಂತಾದವುಗಳು ಸಹ ಈ ರೀತಿಯ ಶೀಲಕ್ಕೆ ಸಂಬಂಧಿಸಿದ ಹಾಡುಗಳೇ ಆಗಿವೆ. ನೈತಿಕತೆ ಶಿಥಿಲಗೊಳ್ಳುತ್ತಿರುವ ಇಂದಿನ ಸಮಾಜಕ್ಕೆ ಇಂತಹ ಹಾಡುಗಳು ಅತಿ ಅವಶ್ಯವೆನಿಸುತ್ತವೆ. ಸಮಾಜದಲ್ಲಿ ಸುವ್ಯವಸ್ಥೆ, ನಿಯಮಗಳ ಚೌಕಟ್ಟಿನಲ್ಲಿ ಬದುಕಲು ಇವು ಮಾದರಿಗಳಾಗಿದ್ದು ಮಾರ್ಗದರ್ಶನ ಮಾಡುವಂತಹುಗಳಾಗಿವೆ ಎನ್ನಬಹುದು.

ಇಂತಹ ಪಾತಿವ್ರತ್ಯದ ಮಹತ್ವವನ್ನು ತಿಳಿಸುವ ಹಾಡುಗಳ ಕೊನೆಯ ಸಾಲಿನಲ್ಲಿ ಸೂಚಿಸುವ ಹಾಡುಗಳ ಸಾಲು ಮುತ್ತೈದಿತನವನ್ನು ಕೊಂಡಾಡುವಂತೆ ಕಂಡು ಬರುತ್ತವೆ.

ಹಾಡಿದವ್ವನ ಕ್ಷೀನ್ ಕೇಳಿದವ್ವನ ಕ್ಷೀನ್
ಈಬತ್ತಿ ತಂದವ್ವನ ಭಲೆ ಪುಣ್ಯ ಕೋಲೆಣ್ಣ ಕೋಲೆ
ಈಬತ್ತಿ ತಂದವ್ವಗ ಭಲೆ ಪುಣ್ಯ

ಮಲ್ಲಮ್ಮ ಮುತ್ತೈದಿತನ ಜಯ ಜಯ ಕೋಲೆಣ್ಣ ಕೋಲೆ [೭೦]

ಚಂದ್ರುಣಿ, ಚೆನ್ನಮ್ಮ, ಈರಮ್ಮ ಸಂಗಮ್ಮ ಮುಂತಾದ ಪತಿವ್ರತೆಯರ ಹಾಡಿನ ಕೊನೆಯ ಸಾಲಿನಲ್ಲಿ ಹೇಳುವ ಹಾಡಿನ ಆಶಯವೇ ಮುತ್ತೈದಿತನ ಬಿರುವಂತೆ ಕಂಡು ಬರುತ್ತದೆ. ಉದಾ:

ಪತಿವರತಿ ಹಾಡ ಚಿತ್ತಿಟ್ಟು ಕೇಳಿದರ
ಮುತ್ತೈದಿತನ ಜಯ ಜಯ ರನ್ನದ ಕೋಲು ಕೋಲೆ
ಹಾಡಿದವ್ವನಕ್ಕಿಂತ ಕೇಳಿದವ್ವನಕ್ಕಿಂತ
ಧನಿ ಕೊಟ್ಟವ್ವನ ಪುಣ್ಯ ಭಲೆ ಪುಣ್ಯ ರನ್ನದೇ ಕೋಲು ಕೋಲೆ
ಧನಿ ಕೊಟ್ಟವನ ಪುಣ್ಯ ಭಲೆ ಪುಣ್ಯ ಶಿವಮ್ಮ
ಮುತ್ತೈದಿತನ ಜಯ ಜಯ ರನ್ನದ ಕೋಲು ಕೋಲೆ [೭೧]

ಹೀಗೆ ಹಾಡಿದವ್ವ, ಬರದವ್ವ, ಹಾಡಿಸಿದವ್ವ, ಹಾಡ ಹಾಡಲಿಕ್ಕೆ ಜಾಗ ಕೊಟ್ಟವರ ಮುತ್ತೈದಿತನ ಜಯ ಜಯ ಎಂದೇ ಮುಗಿಯುವದನ್ನು ಕಾಣಬಹುದು. ಪತಿವ್ರತೆಯರು, ಮುತ್ತೈದಿಯರೇ ಆಗಿರುವದರಿಂದ ಬುಲಾಯಿ ಹಾಡುಗಳಲ್ಲಿ ಇಂತಹ ಅನೇಕ ಹಾಡುಗಳನ್ನು ಕಾಣಬಹುದು.

೩) **ಧಾರ್ಮಿಕ ವ್ಯವಸ್ಥೆ:**

ಪುರುಷ ಪ್ರಧಾನ ಸಮಾಜದಲ್ಲಿ ಪುರುಷರೇ ಮುಖ್ಯ. ಪ್ರಕೃತಿ ಮೂಲವಾದ ಕೆಲವು ಗುಣಗಳಿಂದ ಹೆಣ್ಣು ಹೆಚ್ಚಾಗಿ ಕುಟುಂಬದ ಒಳಗೆ ಉಳಿದಳು. ಅಡುಗೆ ಮನೆ, ಹೊಸ್ತಿಲು, ಮನೆಯ ಒಳ ಹೊರಗೆ, ಬಹಳವಾದರೆ ಅಂಗಳಕ್ಕೆ ಬಂದು ಕೃಷಿಯಲ್ಲಿ ಭಾಗವಹಿಸಿದರೂ ಪುರುಷನಿಗೆ ಅಧೀನವಾಗಿ ಮಾತ್ರ. ಹೆಣ್ಣಿಗೆ ಯಾವುದಕ್ಕೂ ಸ್ವಾತಂತ್ರ್ಯವಿಲ್ಲದ ಅವಸ್ಥೆ ಸಾಮಾಜಿಕ ವ್ಯವಸ್ಥೆಯಾಗಿ ರೂಪುಗೊಂಡಿತ್ತು. ಶಕ್ತಿಪೂಜೆ, ದೇವಾಲಯಗಳು, ದೇವದಾಸಿ ಪರಂಪರೆ, ಭಯದ ರೂಪವಾಗಿ ಅವತರಿಸಿದ ಅಗೋಚರ ದೇವತೆಗಳಿಗೆ ಬಲಿ,ಭೂತಶಕ್ತಿ, ಕ್ಷುದ್ರ ದೇವತೆಗಳು, ಮರದೈವ, ಕೊಳದೈವ, ಪ್ರಾಣಿದೈವ, ಹೀಗೆ ಸಹಸ್ರಾರು ಮುಖದ ನಂಬಿಕೆ, ರೂಢಿ, ಸಂಪ್ರದಾಯ, ಪದ್ದತಿ ಆಚರಣೆಗಳಲ್ಲಿ ಬೆಳೆದು ಬಂದವು ಎಂಬುದು ವಿದ್ವಾಂಸರ ಮತ.

ಇಂಥ ನಂಬಿಕೆಗಳಲ್ಲಿ ಎಲ್ಲವೂ ಮಾವನ ಪ್ರಪಂಚಕ್ಕೆ ಮಾರಕವಾಗಲಿಲ್ಲ. ಆದರೆ ಒಂದು ಸಾಮೂಹಿಕ ಹಿತಕ್ಕೆ ಒಬ್ಬ ವ್ಯಕ್ತಿಯನ್ನು ಕೊಲ್ಲುವುದು, ಕೆರೆಗೆ ಹಾರ ಕೊಡುವುದು ಇತ್ಯಾದಿ. ಕೆಲವು ನಂಬಿಕೆ, ವಿಧಿಗಳು ಸಮುದಾಯದಲ್ಲಿರುವ ವ್ಯಕ್ತಿಯ ಮೂಲ ಹಿತಕ್ಕೆ ಕೊಡಲಿ ಏಟು ಹಾಕುತ್ತವೆ. 'ಒಂದು ನಂಬುಗೆಯನ್ನು ಆಧರಿಸಿ ಜನ ಸಮುದಾಯಗಳ ಆಚರಣೆಯಲ್ಲಿ ವ್ಯಕ್ತವಾಗುವ ವಿಶಿಷ್ಟ ಅಂಶವೇ ಧರ್ಮ. ಈ ಹಂತದಲ್ಲಿಯೇ ಧರ್ಮ ಸಾಮಾಜಿಕ ಸ್ವರೂಪ ಹೊಂದುತ್ತದೆ. ಧರ್ಮ ಒಂದು ಸಾಮಾಜಿಕ ಕ್ರಿಯೆ'[೭೨] ಎಂಬ ಸಮಾಜ ಶಾಸ್ತ್ರಜ್ಞರ ಅಭಿಪ್ರಾಯ ಗಮನಾರ್ಹ.

ಧರ್ಮ ನಮ್ಮ ಸಮಾಜದ ಕೇಂದ್ರ ಬಿಂದು. ಪ್ರತಿಯೊಬ್ಬರ ಬದುಕಿನ ಚಟುವಟಿಕೆಗಳು ಅದರ ಸುತ್ತಲು ಸುತ್ತುತ್ತವೆ. ಜನಪದರು ತಮ್ಮ ಬದುಕಿಗೆ ಧರ್ಮ ಕಾರಣ, ಪ್ರೇರಕ ಹಾಗೂ ಪೋಷಕ ಶಕ್ತಿಯೆಂದು ಭಾವಿಸಿದ್ದಂತೆ ಕಂಡು ಬರುತ್ತದೆ. ಧರ್ಮದೇವರಿಲ್ಲದೇ ಯಾವುದು ಸಾಧ್ಯವಿಲ್ಲ. ಅದರಿಂದ ನಾವು ಎಂಬ ಬಲವಾದ ನಂಬಿಕೆಯನ್ನು ಹೊಂದಿದ್ದು ಗುರುತಿಸಬಹುದು. ಈ ಧರ್ಮ ದೇವರನ್ನು ಕುರಿತಾದ ಜನಪದರ ನಂಬಿಕೆ, ಆಚಾರ-ವಿಚಾರಗಳು ಅನೇಕ ಬುಲಾಯಿ ಹಾಡುಗಳಲ್ಲಿ ಕಾಣಬಹುದು.

ಧಾರ್ಮಿಕ ಹಿನ್ನಲೆಯಲ್ಲಿ ಮೂಡಿ ಬಂದಿರುವ ಬುಲಾಯಿ ಹಾಡುಗಳಲ್ಲಿ ಶಿವಶರಣರು,ಧಾರ್ಮಿಕ ಪುರುಷರು, ಪೌರಾಣಿಕ ಪುರುಷರು, ವರ್ತಮಾನ ಸಾಧು-ಸಂತರನ್ನು ಕುರಿತಾದ ಅನೇಕ ವಿಶಿಷ್ಟವಾದ ಹಾಡುಗಳನ್ನು ಗುರುತಿಸಬಹುದಾಗಿದೆ.

ನೆನೆದೆನೋ ಗಣಪತಿ ಮಾಡುವೆ ನಿಮ್ಮ ಸ್ಮರತಿ
ವಿದ್ಯಕೆ ನೀವು ಅಧಿಪತಿ ರನ್ನದೇ ಕೋಲು ಕೋಲ
ವಿದ್ಯಕೆಯಕ್ಕೆ ನೀವು ಅಧಿಪತಿ ಗಣರಾಯ
ಬೇಡಿಕೊಂಬುವೆ ಕೈಯ ಮುಗಿದು ರನ್ನದೇ ಕೋಲು ಕೋಲ [೭೩]

ಹೀಗೆ ಬುಲಾಯಿ ಹಾಡನ್ನು ಹಾಡುವ ಅನೇಕ ಸಂದರ್ಭದಲ್ಲಿ ತಮ್ಮ ಇಷ್ಟ ದೇವರ ಸ್ಮರಣೆ ಮಾಡುವ ಹಾಡುಗಳನ್ನು ಕಾಣಬಹುದು. ಭಕ್ತಿ ಭಾವ ಇಟ್ಟ ಶಿವ, ಪಾರ್ವತಿ, ವಿಷ್ಣು, ಸರಸ್ವತಿ, ಲಕ್ಷ್ಮಿ, ಗಣಪತಿ, ಮಾರಮ್ಮ, ದುರಗಮ್ಮ ಮೊದಲಾದ ಸಾರ್ವತ್ರಿಕ ದೇವತೆಗಳಲ್ಲದೇ, ಪ್ರಾದೇಶಿಕವಾಗಿ ಪ್ರಾಮುಖ್ಯತೆ ಪಡೆದ ದೇವತೆಗಳೂ ಕಂಡು ಬರುತ್ತಾರೆ. ಇವರಲ್ಲದೇ ತಮ್ಮ ನಡೆ ನುಡಿಗಳಿಂದ ದೈವತ್ವಕ್ಕೇರಿದ ಶರಣರು ಜನಪದರಿಗೆ ಪೂಜ್ಯರೇ ಆಗಿರುವಂತೆ ಕಾಣುತ್ತದೆ. ಅಂತೆಯೇ ಹನ್ನೆರಡನೆಯ ಶತಮಾನದಲ್ಲಿದ್ದ ಬಸವಣ್ಣ, ನೀಲಮ್ಮ, ಚೆನ್ನಬಸವಣ್ಣ, ಅಕ್ಕನಾಗಮ್ಮ ಅಕ್ಕಮಹಾದೇವಿ, ಚಂಗಳೆವ್ವ ಮೊದಲಾದವರ ಕುರಿತಾದ ಹಾಡುಗಳನ್ನು ಕಾಣಬಹುದು.

ತದನಂತರ ಬದುಕಿ ಬಾಳಿ ಹೋದ ಶರಣಬಸವೇಶ್ವರ, ಹೇಮರೆಡ್ಡಿ ಮಲ್ಲಮ್ಮ ಇವರುಗಳ ಭಕ್ತಿ-ಭಾವಗಳ ಕುರಿತಾದ ಸುದಿರ್ಘವಾದ ಬುಲಾಯಿ ಹಾಡುಗಳು ವಿವಿಧ ಪಾಠಾಂತರಗಳಲ್ಲಿ ಕಂಡು ಬರುತ್ತವೆ. ಇತ್ತಿಚೆಗಿನ ಶರಣರಾದ ಭಾಲ್ಕಿಯ ಡಾ. ಚನ್ನಬಸವ ಪಟ್ಟದ್ದೇವರ ಕುರಿತು ಬುಲಾಯಿ ಹಾಡು ಸಹ ವಿಶಿಷ್ಟವಾಗಿದೆ. ಇವುಗಳ ಜೊತೆಯಲ್ಲಿ ರಾಮಾಯಣ- ಮಹಾಭಾರತ ಕುರಿತಾದ ಬುಲಾಯಿ ಹಾಡುಗಳು,ಸತ್ಯ ಹರಿಶ್ಚಂದ್ರನ,ಲೋಹಿತಾಶ್ವನ ಹಾಡು, ದಕ್ಷಬ್ರಹ್ಮನ ಹಾಡು ಮುಂತಾದ ಪುರಾಣ-ಪುಣ್ಯ ಪುರುಷರ ಹಾಡುಗಳಲ್ಲಿ ಅನೇಕ ಅಂಶಗಳ ಕುರಿತಾದ ವಿಶಿಷ್ಟ ಬುಲಾಯಿ ಹಾಡುಗಳನ್ನು ಕಾಣಬಹುದು.

ಮಲ್ಲಮ್ಮನ ಭಕ್ತಿಯ ಹಾಡು ತುಂಬಾ ವಿಶಿಷ್ಟವಾಗಿದೆ. ನಾಗರ ಪಂಚಮಿಯ ವಿಧಿ ವಿಧಾನ, ಆಚರಣೆಗಳನ್ನು ವಿವರಿಸುತ್ತಾ ಪ್ರಾರಂಭವಾಗುವ ಈ ಹಾಡು ಬುಲಾಯಿ ಹಾಕುತ್ತಾ

ಎಂತಹ ಹಾಡುಗಳನ್ನು ಹಾಡುತ್ತಾರೆ. ಯಾವ ರೀತಿಯಲ್ಲಿ ಭುಲಾಯಿಯನ್ನು ಹಾಕುತ್ತಾರೆಂಬುದನ್ನು ತಿಳಿಸುವುದು ತುಂಬ ಗಮನೀಯ ಹಾಡಾಗಿದೆ.

ನಾಗರ ಪಂಚಮಿ ನಾಳೀಗಿ ಬರುವುದು
ನಾಗಯ್ಯಗ ಹಾಲ ಎರೆವುದು ಕೋಲೆಣ್ಣ ಕೋಲೆ

ಎಂದು ಪ್ರಾರಂಭವಾಗಿ ಮುಂದೊರೆದು ಭುಲಾಯಿ ಕುರಿತು ಹೀಗಿದೆ

ನಾರಿಯರೆಲ್ಲ ನೆರೆದು ಹಾಡುತ್ತ ತಿರುಗುತ್ತ
ಭುಲಾಯಿ ಹಾಕಿ ನಲಿಯುತ್ತಾರೆ ಕೋಲೆಣ್ಣ ಕೋಲೆ
ಭುಲಾಯಿ ಹಾಕುತ್ತ ಕತಿಗಳ ಹಾಡುತ್ತ
ಮಲ್ಲಮ್ಮನ ಭಕ್ತಿಯ ಮೆರೆದಾರೆ ಕೋಲೆಣ್ಣ ಕೋಲೆ
ಹೇಮರಡ್ಡಿಯ ಮನಿಯೊಳು ಹುಟ್ಟಿದಳು ಮಲ್ಲಮ್ಮ
ಆಕಳ ಸೇವೆ ಮಾಡುವಳು ಕೋಲೆಣ್ಣ ಕೋಲೆ
ಆಕಳ ಸೇವೆ ಮಾಡುವಳು ಮಲ್ಲಮ್ಮ
ಬಂದ ಜಂಗಮರಿಗೆ ನೀಡುವಳು ನಮಿಸುವಳು ಕೋಲೆಣ್ಣ ಕೋಲೆ [೭೪]

ಎಂದು ಮಲ್ಲಮ್ಮ ಭಕ್ತಿ, ಜಂಗಮ ಪ್ರೀತಿಯನ್ನು ತಿಳಿಸುತ್ತಲೇ ಕತೆಯನ್ನು ಪ್ರಾರಂಭಿಸಿ ಆವಳ ಮದುವೆ, ಅತ್ತೆ-ನೆಗೆಣ್ಣಿಯರಿಂದ ಅವಳಿಗಾದ ತೊಂದರೆ,ಬಿಕ್ಷೆಗೆ ಬಂದ ಜಂಗಮ, ಮನೆಯಿಂದ ಹೊಲಕ್ಕೆ ಅಟ್ಟಿದ್ದು, ಅಲ್ಲಿಯೂ ಅವರ ಲಿಂಗ-ಜಂಗಮ ಪ್ರೇಮ ಮುಂತಾದ ವಿಷಯಗಳನ್ನು ತಿಳಿಸುವ ಈ ಹಾಡು ತುಂಬಾ ವಿಸ್ತಾರವಾಗಿದೆ. ಅದರಲ್ಲಿ ಕೆಲವೊಂದು ಪಾಠಾಂತರಗೊಂಡು ಹೆಚ್ಚು ಕಡಿಮೆಯಾಗಿರುವುದು ಕಂಡು ಬರುತ್ತವೆ. ಒಟ್ಟಾರೆ ಮಲ್ಲಮ್ಮನ ಮುಗ್ಧ ಭಕ್ತಿ, ಅತ್ತೆ-ನೆಗೆಣ್ಣಿಯರ ಕಾಟ ಆದರೂ ಕೊನೆಯಲ್ಲಿ ಮಲ್ಲಮ್ಮನ ಭಕ್ತಿಯಿಂದ ಇಡೀ ರೆಡ್ಡಿ ಕುಲಕ್ಕೆ ಬಡತನ ಬರಬಾರದೆಂದು ವರ ಪಡೆದು, ಎಲ್ಲರನ್ನು ಕ್ಷಮಿಸುವ ಅವಳ ಕ್ಷಮಾ ಗುಣ, ತ್ಯಾಗ, ಭಕ್ತಿ ಮುಂತಾದವು ಎಲ್ಲರಿಗೂ ಮಾದರಿಯ ವಿಷಯಗಳಾಗಿದ್ದು, ಪ್ರಸ್ತುತ ಸಮಾಜಕ್ಕೆ ಅವುಗಳ ಅವಶ್ಯಕತೆ ಅತಿಯಾಗಿರುವುದು ಕಂಡು ಬರುತ್ತದೆ. ಅವಳ ದೊಡ್ಡ ಗುಣಕ್ಕೊಂದು ನಿದರ್ಶನ.

ಜಂಗಮ ಬಂದ ಮರುದಿನ ಮನೆಗೆ ಬೆಂಕಿ ಹತ್ತಿ
ಮನಿಮಂದಿಗೆಲ್ಲಾ ಭವಬ್ಯಾನಿ ಕೋಲೆಣ್ಣ ಕೋಲೆ
ಸಿದ್ದಾಪುರ ಬಿಟ್ಟಾರ ಶ್ರೀಶೈಲಕ ಹೋಗ್ಯಾರ
ಮಲ್ಲಮ್ಮನ ಪಾದಕ ನಮಸ್ಕಾರ ಕೋಲೆಣ್ಣ ಕೋಲೆ
ಧನ್ಯನಾದೆನು ಮಗಳೇ ಏನು ಬೇಡತಿ ಬೇಡು
ಬೇಡಿದ್ದು ಕೊಡುವೆ ಮಲ್ಲಮ್ಮ ಕೋಲೆಣ್ಣ ಕೋಲೆ

ನಿಮಕ್ಕಿಂತ ಹೆಚ್ಚಿನದು ನಾ ಏನು ಬೇಡಲಿ

ರೆಡ್ಡಿಯ ಕುಲಕ ಬಡತನ ಬ್ಯಾಡ ಕೋಲೆಣ್ಣ ಕೋಲೆ [೨೫]

ಹೀಗೆ ಐತಿಹಾಸಿಕ ವ್ಯಕ್ತಿಯಾದರೂ ಮಲ್ಲಮ್ಮ ತನ್ನ ಭಕ್ತಿ ಮತ್ತು ಕ್ಷಮಾ ಗುಣಗಳಿಂದ ದೈವತ್ವಕ್ಕೇರಿ ಪೂಜ್ಯಳಾಗಿ ಪೂಜಿಸಲ್ಪಡುವ ದೇವತೆ ಎಂಬುದನ್ನು ನಾವಿಲ್ಲಿ ಗುರುತಿಸಬಹುದಾಗಿದೆ. ಅಂದರೆ ಒಬ್ಬ ಸಾಮಾನ್ಯನೂ ಸಹ ತನ್ನ ನಡೆ-ನುಡಿಗಳಿಂದ ಪೂಜ್ಯ ಸ್ಥಾನಕ್ಕೇರಲು ಸಾಧ್ಯವೆಂಬುದನ್ನು ಇಂತಹ ಹಾಡುಗಳಿಂದ ತಿಳಿಯಬಹುದು.

ಸತ್ಯದಿಂದ ಖ್ಯಾತಿ ಹೊಂದಿದ ಹರಿಶ್ಚಂದ್ರನ ಹಾಡು ಸಹ ತುಂಬಾ ವಿಶಿಷ್ಟವೆನಿಸುತ್ತದೆ.ಹಾಡು ಪ್ರಾರಂಭವಾಗುವುದು ರೀತಿಯಾಗಿದೆ.

ಸತ್ಯವಂತರ ಕತೆಯೇ ಕೇಳರಿ ಇಟ್ಟು ಪ್ರೀತಿ
ಹರಿಚಂದರ ರಾಜ ಏಕ ವ್ರತ ಕೋಲೆಣ್ಣ ಕೋಲೆ
ಉಮ್ರಾನೆ ಉಮ್ರಾವತಿ ಸಭೆ ನೆರದಿತು ಭರತಿ
ಬರೋರಸಿಗಿ ನಾಚ ಆಗದಾವಿತ್ರಿ ಕೋಲೆಣ್ಣ ಕೋಲೆ
ಅವರ ಸತಿ ತಾರಾಮತಿ ಲೋಹಿತ ಗುಣವಂತ
ಹೆಂತಾ ಪರಸಂಗ ಒದಗಿತ್ತು ಕೋಲೆಣ್ಣ ಕೋಲೆ [೨೧]

ಸತ್ಯವಂತನಾದ ಹರಿಶ್ಚಂದ್ರನನನ್ನು ಪರೀಕ್ಷಿಸಲು ವಿಶ್ವಾಮಿತ್ರ ಪರಿಪರಿಯಾಗಿ ಅವನನ್ನು ಕಾಡುತ್ತಾನೆ.ರಾಜ್ಯ, ರಾಣಿ, ಮಗ ಎಲ್ಲವನ್ನು ಕೊನೆಗೆ ತನ್ನನ್ನು ಮಾರಿಕೊಂಡು ತನ್ನ ಮಾತನ್ನು ಉಳಿಸಿಕೊಳ್ಳುತ್ತಾನೆ. ಎಂತಹ ಕಷ್ಟದ ಸಮಯದಲ್ಲೂ ತನ್ನ ಸತ್ಯತನವನ್ನು ಬಿಡುವುದಿಲ್ಲ. ಹೀಗಾಗಿ ಕೊನೆಯಲ್ಲಿ ಮಗನ ಸಾವು ತುಂಬಾ ಘಾಸಿಗೊಳಿಸಿದರೂ ಕರ್ತವ್ಯಕ್ಕೆ ಚ್ಯುತಿ ಬಾರದಂತೆ ನಡೆದುಕೊಳ್ಳುತ್ತಾನೆ. ಅಂತೆಯೇ ಕೊನೆಯಲ್ಲಿ ಶಿವ-ಪಾರ್ವತಿ ಬಂದು ಏನು ಬೇಡತಿ ಬೇಡು ಎಂದು ಕೇಳಿದಾಗ ಹರಿಶ್ಚಂದ್ರ ಏನನ್ನು ಕೇಳುವದಿಲ್ಲ. ಅವನು ಕೇಳಿದ್ದು

ಇದ್ದಂತ ಲೋಹಿತಾಶ್ವನ ಇದ್ದಂಗೆ ಮಾಡಯ್ಯ
ಮತ್ತೇನ ನಾನು ಬೇಡಲಿ ಕೋಲೆಣ್ಣ ಕೋಲೆ

ಎಂದು ಕೇಳಲು ತಕ್ಷಣವೇ ಶಿವನು ಮಗನನ್ನು ಎಬ್ಬಿಸಿದ್ದು ಹೀಗೆ

ತಲಿಮ್ಯಾಲ ಇಟ್ಟಾರ ಹಸ್ತ ಬಾಯಿದಾಗ ಇಟ್ಟಾರ ಅಮೃತ
ಕಂದ ಲೋಹಿತ ಎದ್ದೆ ಕುಂತ ಕೋಲೆಣ್ಣ ಕೋಲೆ [೨೨]

ಹೀಗೆ ನುಡಿದಂತೆ ನಡೆದು ಅದೇ ಜನ್ಮ ಕಡೆ ಮಾಡಿಕೊಂಡು ಜನರ ಮನದಲ್ಲಿದ್ದು ಪೂಜ್ಯರೆಂದು ಪೂಜಿಸಿಕೊಳ್ಳುವ ಅನೇಕ ಮಹನೀಯರು ಬುಲಾಯಿ ಹಾಡುಗಳನ್ನು ಕಾಣಬಹುದು.

ಅಧ್ಯಾತ್ಮಿಕ ತತ್ವಗಳನ್ನು ಒಳಗೊಂಡಿರುವ ಹಾಡುಗಳನ್ನು ಬುಲಾಯಿ ಹಾಡುಗಳಲ್ಲಿ ವಿರಳವಾಗಿ ಕಂಡು ಬರುತ್ತವೆ. ಹಳ್ಳಿಖೇಡದ ನಾಗನಾಥ ಪ್ರಭಾ ಅವರು ಅಧ್ಯಾತ್ಮಿಕ ತತ್ವಗಳ ಬುಲಾಯಿ ಹಾಡುಗಳನ್ನು ರಚಿಸಿದ್ದು ಕಂಡು ಬರುತ್ತದೆ.

ಮಾಯಾ ಮಸ್ಕಿದೊಳ ಮುಚ್ಚಿ ಮಣ್ಣಿನ ದೇಹಕ್ಕೆ ಮೆಚ್ಚಿ
ಇದಕೆ ನೀ ಹಿಡಿದಿದ್ದೀ ಘಚ್ಚಿ ಕೋಲು ಕೋಲ
ಯಮನ ಬಲಿಯೊಳು ಸಿಗುತಿ ನಿನಗಿಲ್ಲಾ ಇದು ಸ್ಮರ್ತಿ
ಗವದಾದೋ ಮಂದಮತಿ ಕೋಲು ಕೋಲ..
ಜಡಾ ದೇಹ ನೀನಲ್ಲಾ ಜಡಾ ದೇಹ ನಿಂದಲ್ಲಾ
ಮರುರೂಪ ನೀನಲ್ಲಾ ಕೋಲು ಕೋಲ
ಆರು ರೂಪ ನೀನೆ ನೋಡೋ ಅನುಮಾನ ಮಾಡಬೇಡೋ
ದೇಹಕೆ ಬಿಟ್ಟಿರು ನೋಡೊ ಕೋಲ ಕೋಲ
ನಾಮ ರೂಪವು ಎಲ್ಲಾ ನಾಗನಾಥ ಪ್ರಭಾಕರಲ್ಲಾ
ಗುರು ಪುತ್ರಾದವನೇ ಬಲ್ಲ ಕೋಲ ಕೋಲ [೭೮]

ಇಲ್ಲಿ ಮೋಹದಲ್ಲಿ ಮುಸುಕಿ ಕುಂತ ಜಡದೇಹಕ್ಕೆ ಎಚ್ಚರಿಸುವ ಧ್ವನಿಯನ್ನು ಕಾಣಬಹುದು. ಎಲ್ಲ ರೂಪ ನಿಂದಲ್ಲ ಎಂದು ಹೇಳುತ್ತಲೆ ಎಲ್ಲವೂ ನೀನೆ ಎಂದು. ಗುರುಪುತ್ರನಾಗದ ಹೊರತು ಏನೂ ಇಲ್ಲ. ಗುರುವಿನ ಸತ್ಸಂಗದಿಂದ ಮಾತ್ರ ಈ ಮಾಯಾ ಕಳಚಿ ಹೋಗಲು ಸಾಧ್ಯ. ಗುರುವಿಗೆ ಅರ್ಪಿತವಾದ ದೇಹವು ಮನೋನಿಗ್ರಹಕ್ಕೆ ಒಳಗಾದಾಗ ಜ್ಞಾನದ ಬೆಳಕು ಮೂಡಲು ಸಾಧ್ಯವಾಗುವ, ದೇಹ ಭಾವವನ್ನು ಅಳಿದು ಅತ್ಮಾನುಗತವಾದ ತತ್ವವನ್ನು ಇಲ್ಲಿ ಕಾಣಬಹುದು. ಹೀಗೆ ಅಧ್ಯಾತ್ಮಕ್ಕೆ ಸಂಬಂಧಿಸಿದ ಬುಲಾಯಿ ಹಾಡುಗಳು ಆತ್ಮದ ಉನ್ನತಿಗೆ, ಉದ್ದಾರಕ್ಕೆ ಹಿಡಿದ ಬೆಳಕಿನ ಕಿರಣಗಳು ಎನ್ನಬಹುದು.

೪) **ಅರ್ಥಿಕ ಸ್ಥಿತಿಗತಿ :**

ಪ್ರತಿಯೊಬ್ಬ ಮಾನವನಿಗೆ ಆಹಾರ, ಬಟ್ಟೆ, ವಸತಿ, ಔಷಧ ಮೊದಲಾದ ಜೀವನಾಶ್ಯಕ ವಸ್ತುಗಳು ಬೇಕು. ಇವುಗಳಿಲ್ಲದೇ ಅವನು ಜೀವಿಸಲಾರ. ಮಾನವನ ಈ ಬಯಕೆಗಳನ್ನು ತೃಪ್ತಿಪಡಿಸುವ ವಸ್ತುಗಳಿಗೆ ಮಾತ್ರ ಮಿತಿಯಿದೆ. ಆದ್ದರಿಂದ ಆ ವಸ್ತುಗಳನ್ನು ಬೆಲೆಕೊಟ್ಟು ಕೊಳ್ಳಬೇಕಾಗುತ್ತದೆ. ಅದಕ್ಕಾಗಿ ಅವನಿಗೆ ಹಣ ಬೇಕು. ಆ ಹಣವನ್ನು ದೊರಕಿಸಲು ಅವನು ದುಡಿಯಬೇಕಾಗುತ್ತದೆ. ದುಡಿದು ಗಳಿಸಿದ ಹಣದಿಂದ ಅವನು ತನಗೆ ಬೇಕಾದ ವಸ್ತುಗಳನ್ನು ಕೊಂಡು ಬಯಕೆಗಳನ್ನು ತೃಪ್ತಿಪಡಿಸಿಕೊಳ್ಳುತ್ತಾನೆ. ಹೀಗೆ 'ಹಣ ಗಳಿಸಲು ಕೈಕೊಂಡ ಚಟುವಟಿಕೆಗಳಿಗೆ ಅರ್ಥಶಾಸ್ತ್ರದಲ್ಲಿ ಆರ್ಥಿಕ ಚಟುವಟಿಕೆಗಳೆಂದು ಕರೆಯುತ್ತಾರೆ'.[೭೯] ಬಯಕೆಗಳೇ ಆರ್ಥಿಕ ಚಟುಟಿಕೆಗಳ ಮೂಲ ಎನ್ನಬಹುದು.

ಆದಿ ಮಾನವನ ಆರ್ಥಿಕ ಜೀವನವು ಬಹಳ ಸರಳವಾಗಿದ್ದಂತೆ ಕಂಡು ಬರುತ್ತದೆ. ತನಗೆ ಬೇಕಾದ ವಸ್ತುಗಳನ್ನು ತಾನೇ ತಯ್ಯಾರಿಸಿಕೊಳ್ಳುತ್ತಿದ್ದನು. ತನಗೆ ಬೇಕಾದ ಆಯುಧಗಳನ್ನು ತಾನೇ ಸಿದ್ಧಪಡಿಸಿಕೊಳ್ಳುತ್ತಿದ್ದನು. ಅವನ ಬಯಕೆಗಳು ಕೂಡ ಬಹಳ ಕಡಿಮೆಯಾಗಿದ್ದು ಅವುಗಳನ್ನು ಅವನು ಬಹಳ ಸುಲಭವಾಗಿ ಈಡೇರಿಸಿಕೊಳ್ಳುತ್ತಿದ್ದನೆಂಬುದು ಗಮನಾರ್ಹ. ಆದರೆ ಪ್ರಕೃತಿಯ ಕೋಪಕ್ಕೆ ತುತ್ತಾದಾಗ ಮನುಷ್ಯ ಏನೂ ಮಾಡಲಾರನು. ಕೊನೆಯಲ್ಲಿ ಸಾವೇ ಪರಿಹಾರವೆಂಬಂತೆ ಕಾಣುವ ಬರ ಹಾಗೂ ಬಡತನದ ಬುಲಾಯಿ ಹಾಡುಗಳನ್ನು ಇಲ್ಲಿ ಗಮನಿಸಬಹುದಾಗಿದೆ.

ದೇಶಕ್ಕೆ ಬರ ಬಿದ್ದ ಕಾಲದಲ್ಲಿ ನಡೆದ ಒಂದು ಭೀಕರ ಘಟನೆಯೇ ಈ ಬುಲಾಯಿ ಹಾಡಾಗಿರಬಹುದು. ೧೯೭೧ ರಲ್ಲಿ ಬೀದರದಲ್ಲಿಯೂ ಭೀಕರ ಬರ ಬಂದಿದ್ದು ಈ ಹಾಡಿನ ಹಿನ್ನಲೆಯೆಂದು ಇಟ್ಟುಕೊಳ್ಳಬಹುದು.

ಬರಗಾಲದಲ್ಲಿ ರೈತರ ಮನೆಯಲ್ಲಿ ಏನೂ ಇರುವದಿಲ್ಲ. ಒಬ್ಬಿಬ್ಬರು ಶ್ರೀಮಂತರನ್ನು ಬಿಟ್ಟರೆ ಉಳಿದವರಿಗೆ ಒಂದು ಹೊತ್ತಿನ ಊಟಕ್ಕೂ ಅಭಾವ. ಮಕ್ಕಳೊಂದಿಗರಿಗಂತೂ ದಿಕ್ಕೇ ತಪ್ಪುವುದು. ಅಂತಹ ವೇಳೆ ಅಣ್ಣ-ತಮ್ಮರಿಬ್ಬರಲ್ಲಿ ಅಣ್ಣನ ಹೊಲ ಬೆಳೆಯದು, ತಮ್ಮನ ಹೊಲ ಬೆಳೆಯುತ್ತದೆ. ಆಗ ಅಣ್ಣ ತಮ್ಮನ ಹೊಲಕ್ಕೆ ಕೂಲಿಗೆ ಹೋಗುತ್ತಾನೆ. ಕೂಲಿಯಲ್ಲಿ ಬಂದ ಸೇರು ಜೋಳವನ್ನು ತಂದು ಮಡದಿಯ ಕೈಗೆ ಕೊಟ್ಟಾಗ ಮಕ್ಕಳೆಲ್ಲ ಸೇರಿ ತಿಂದು ಬಿಡುತ್ತಾರೆ.

ಕೂಲಿಯಾರ ಮಾಡ್ಯಾನ ಸೇರ ಜೋಳ ತಂದಾನ ಕೋಲು ಕೋಲೆ
ಸೇರ ಜೋಳ ತಂದನ ಮಡದಿ ಕೈಲಿ ಕೊಟ್ಟಾನ ಕೋಲು ಕೋಲೆ
ಫಕ ಫಕ ಬುಕ್ಯಾರ ರೊಟ್ಟಿ ರೊಟ್ಟೆಂತ ಅಳತ್ತಾರ ಕೋಲು ಕೋಲ [೮೦]

ಆಗ ಅಣ್ಣ ಬೆಳ್ಳಿ ಕೊಟ್ಟು ಸೇರು ಜೋಳ ತಂದು ಮನೆಯಲ್ಲಿ ಹೆಂಡತಿಯ ಕೈಗೆ ಕೊಟ್ಟಾಗ ಅವಳು ಅದನ್ನು ಒಡೆದು ನುಚ್ಚು ಮಾಡಲು ಒಲೆಯ ಮೇಲಿಟ್ಟು ಹೊಳೆಯ ನೀರಿಗೆ ಹೋಗುತ್ತಾಳೆ. ಅಷ್ಟರಲ್ಲಿ ನೆರೆಯ ಮನೆಯ ನೆಗೆಣ್ಣಿ ಬೆಂಕಿಗೆಂದು ಹೋಗಿ ಬೆಂಕಿ ತಗೋಂಡು ಹಿಡಿಗಲ್ಲು ನುಚ್ಚಿಗೆ ಸುರುವಿ ಹೋಗುತ್ತಾಳೆ. ಹೊಳೆ ನೀರಿನಿಂದ ಬಂದ ಇವಳು ಕೊಡ ಇಳಿಸಿ ನೋಡಿ ಎದಿ ಬಾಯಿ ಬಡಕೊಳ್ಳುತ್ತಾಳೆ. ಮುಂದೆ ತವರು ಮನೆಗೆ ಹೋಗುತ್ತಾಳೆ. ಅಲ್ಲಿ ತಮ್ಮ ಸಹ ಅವಳಿಗೆ ಸಹಾಯ ಮಾಡದೇ ಕೊಟ್ಟ ತಾಳಿಯನ್ನು ಬೀಸಾಡುತ್ತಾನೆ. ಇದರಿಂದ ನೊಂದ ಹೆಣ್ಣು ಮಗಳು ಒಂದು ನಿರ್ಧಾರಕ್ಕೆ ಬರುತ್ತಾಳೆ.

ಈ ತಾಳಿ ತಗೋ ತಮ್ಮ ಹೇರ ಜೋಳ ಕೊಡು ತಮ್ಮ ಕೋಲೆಣ್ಣ ಕೋಲ
ಹೇರ ಜೋಳ ನಮ್ಮಲಿಲ್ಲಾ ಸೇರ ಜೋಳ ನಮ್ಮಲಿಲ್ಲ ಕೋಲೆಣ್ಣ ಕೋಲ
ಅಂಗೈದಾಗಿನ ತಾಳಿ ಅಂಗಳಿಗೆ ಒಗೆದಿದ್ದಳು ಕೋಲೆಣ್ಣ ಕೋಲ
ಬಗಲಾಗಿನ ಸಂಗಮ್ಮ ರೊಟ್ಟಿ ರೊಟ್ಟಿಯಂತ ಅಳುತ್ತಿದ್ದಳು ಕೋಲೆಣ್ಣ ಕೋಲೆ [೮೧]

ಅದಕ್ಕೆಂದೆ ದುಕಾನಕ್ಕೆ ಹೋಗಿ ತಾಳಿ ಕೊಟ್ಟು ಸೇರ ಅಕ್ಕಿ ಇಸ ತೆಗೆದು ಕೊಳ್ಳುತ್ತಾಳೆ. ಇಷ ಯಾಕೆ ಎಂದು ಅಂಗಡಿಯವನು ಕೇಳಿದಾಗ ಹೆಗ್ಗಣಿಗೆ ಎಂದು ಹೇಳುತ್ತಾಳೆ. ಮನೆಗೆ ಬಂದು ಅನ್ನ ಮಾಡಿ ಮೇಲೆ ಇಸ ಇಟ್ಟು ಒಂಬತ್ತು ಮಕ್ಕಳು ಗಂಡ ಹೆಂಡತಿ ಒಟ್ಟಿಗೆ ತಿಂದು ಮಲಗುತ್ತಾರೆ. ಆಗ ಸರಿರಾತ್ರಿಯಲ್ಲಿ ಭಯಂಕರ ತ್ರಾಸು ಆಗುತ್ತದೆ. ಅದಕ್ಕೆ ತಾಯಿ

ದೇಶಕ್ಕಿಲ್ಲದ ಬರ ಮಕ್ಕಳ ಪಾಲಿಗೆ ಬಂತು ಕೋಲೆಣ್ಣ ಕೋಲೆ
ರಾಜ್ಯಕ್ಕಿಲ್ಲದ ಬರ ರಾಯರ ಪಾಲಕೆ ಬಂತು ಕೋಲೆಣ್ಣ ಕೋಲೆ [೮೨]

ಎಂದು ಪರಿತಪಿಸುತ್ತಲೇ ಸತ್ತು ಹೋಗುತ್ತಾರೆ. ಆ ಕಡೆ ಅಣ್ಣನಿಗೆ ಕೆಟ್ಟ ಕನಸು ಬಿದ್ದು ತಂಗಿಯನ್ನು ನೋಡಲು ಬರುತ್ತಾನೆ. ಮೊದಲು ಜ್ವಾಳ,ಅಕ್ಕಿ ಬ್ಯಾಳಿ, ಹಿಟ್ಟು ಗೋಧಿ ಕೊಟ್ಟು ಕಳುಹಿಸುತ್ತಾನೆ. ಆದರೆ ಅದನ್ನು ಕೊಟ್ಟು ಹಿಂದಕ್ಕೆ ಹೋಗದ ಕಾರಣ ತಾನೇ ಬರುತ್ತಾನೆ. ಮುಚ್ಚಿದ ತಟ್ಟಿಯನ್ನು ಒದ್ದು ತೆರೆಯುತ್ತಾನೆ. ಒಳಗೆ ೧೧ ಜನರು ಸತ್ತಿರುತ್ತಾರೆ. ಆಗ ಅಣ್ಣ ಅವರೊಂದಿಗೆ ತಾನು ಪ್ರಾಣವನ್ನು ಬಿಡುತ್ತಾನೆ. ಇದು ಒಂದೇ ಕುಟುಂಬದ ಕಥೆಯಾದರೂ ಇದರಲ್ಲಿ ಅಡಕವಾಗಿರುವುದು ಮಾನವ ಕುಲದ ಮೂಲಭೂತ ಸಮಸ್ಯೆ ಎನ್ನುವುದು ಗಮನೀಯ ಅಂಶ.

ಇನ್ನೊಂದು 'ಬಡತನದ ಹಾಡು' ಬಡತನವೆನ್ನುವುದು ಜೀವಿಸಿರುವವರೆಗೆ ಒಂದು ಶಾಪವೆನ್ನಬಹುದು. ಸಾವು ಅನಿವಾರ್ಯ. ಬಡವನಿಗೆ ಸಾವು ಎನ್ನುವುದು ಬೇರೆ ಮತ್ತೊಂದಿಲ್ಲ. ಸಹಿಸಲಾಗದ ಹಸಿವೆಯಿಂದಾಗಿ ಬಡವರು ದಿನನಿತ್ಯ ಒಡಲ ಬೆಂಕಿಯಲ್ಲಿ ಬೆಂದು ಬೆಯುವ ಹೆಣಗಳೇ ಎನ್ನಬಹುದು. ಈ ಹಾಡಿನಲ್ಲಿ ಬಡತನದಿಂದ ಬಳಲಿ ಬೆಂಡಾದ ಸಂಗಮ್ಮ ಕೊನೆಯಲ್ಲಿ ತನ್ನ ತವರು ಮನೆಗೆ ಹೋಗುತ್ತಾಳೆ. ಅವಳು ಏಳು ಜನ ಅಣ್ಣಂದಿತ ಮುದ್ದಿನ ತಂಗಿ. ಅಣ್ಣಂದಿರು ಹೊಲಕ್ಕೆ ಹೋದ ಸಂದರ್ಭದಲ್ಲಿ ಮನೆಯಲ್ಲಿದ್ದ ಅತ್ತಿಗೆಯಂದಿರು ಮೂರು ದಿನದ ನುಚ್ಚು ಎಂಟು ದಿನದ ಮಜ್ಜಿಗೆಯನ್ನು ಉಣಬಡಿಸುತ್ತಾರೆ. ಗಂಡಂದಿರಲಿಗೆ ಅಮೃತದಡಿಗೆ ಮಾಡಿ ಬಡಿಸುತ್ತಾರೆ. ತಾವು ಉಣ್ಣುವಾಗ ತಮ್ಮ ತಂಗಿಗೆ ಉಣ್ಣಲು ಕರೆಯುತ್ತಾರೆ. ಅದಕ್ಕೆ ಸಂಗಮ್ಮ ತನ್ನ ಊಟ ಆಗಿದೆ ಎಂದು ಹೇಳುತ್ತಾಳೆ. ತಂಗಿಗೆ ಊರಿಗೆ ಹೋಗುವಾಗ ಅವಳ ಜೊತೆಯಲ್ಲಿ ಭತ್ತ, ಭರಣ, ಸೀರೆ,ಕುಪ್ಪಸ ಕೊಟ್ಟು ಕಳುಹಿಸಿ ಕೊಡಲು ಅಣ್ಣಂದಿರು ಹೇಳುತ್ತಾರೆ. ಆದರೆ ಆತ್ತಿಗೆಯರು ಉಸುಕು-ಹಳೆ ಅರಿವೆಗಳನ್ನು ಕಟ್ಟಿ ಗಂಟು ಮಾಡಿ ಕೊಡುತ್ತಾರೆ. ದಾರಿಯಲ್ಲಿ ಮಕ್ಕಳು ರೊಟ್ಟಿ ಎಂದು ಅತ್ತಾಗ ಬಿಚ್ಚಿ ನೋಡುತ್ತಾಳೆ. ಆಗ ಅವಳಿಗೆ ದುಃಖ ಉಕ್ಕಿ ಬರುತ್ತದೆ. ಅದು ಹಾಡಿನಲ್ಲಿ ಈ ರೀತಿಯಾಗಿದೆ.

ಮಕ್ಕಳ ತೆಕ್ಕಿಗಿ ಹಾಕ್ಕೊಂಡು ಅಳುತ್ತಾಳೆ ಸಂಗಮ್ಮ ಕೋಲೆಣ್ಣ ಕೋಲೆ
ಆ ಕಡೆ ಒಬ್ಬ ಹೊಲದಣ್ಣ ಬಂದಾನ ಕೋಲೆಣ್ಣ ಕೋಲೆ
ಯಾಕ ಅಳುತ್ತಿ ಸಂಗಮ್ಮ ಯಾಕ ಅಳುತ್ತಿ ತಂಗೆಮ್ಮಾ ಕೋಲು ಕೋಲೆ
ತೋಟದಾಗ ಹೋಗ್ಯಾರ ಕುಂಬಳಕಾಯಿ ತಂದಾರ ಕೋಲ ಕೋಲೆ [೮೩]

ಅವಳ ಸ್ಥಿತಿ ಕಂಡು ಅನುಕಂಪದಿಂದ ಅಣ್ಣನ ಸಮಾನನಾಗಿ ಹೊಲದಣ್ಣ ತನ್ನ ತೋಟದಲ್ಲಿ ಬೆಳೆದಿದ್ದ ಕುಂಬಳಕಾಯಿಯನ್ನು ಕೊಡುತ್ತಾನೆ. ಮನೆಗೆ ಬಂದ ಮೇಲೆ ಸಂಗಮ್ಮ ಅದನ್ನು ಒಡೆದಾಗ ಅದು ಬಂಗಾರವಾಗಿರುತ್ತದೆ. ಅದರಿಂದ ಅವರ ಬಡತನ ಹಿಂಗುತ್ತದೆ. ಮುಂದೆ ಅವಳು ಒಳ್ಳೆಯ ಬಂಗಲೆಯನ್ನು ಕಟ್ಟಿಸಿ ಒಡವೆ-ವಸ್ತುಗಳನ್ನು ಮಾಡಿಸಿಕೊಳ್ಳುತ್ತಾಳೆ.

ಹಸಿವೆಯಿಂದ ಕಂಗೆಟ್ಟು ಕೊನೆಯಲ್ಲಿ ವಿಷದನ್ನ ಸೇವಿಸಿ ಪ್ರಾಣಬಿಟ್ಟ **ಬರದ** ಕುಟುಂಬದ ದುಃಖಾಂತ ಒಂದೆಡೆಯಾದರೆ **ಬಡತನ**ದಿಂದ ಕಂಗೆಟ್ಟು ನಲುಗಿದ ಮನೆತನಕ್ಕೆ ನಂತರ ಸಿಕ್ಕ ಸಮೃದ್ಧಿಯಿಂದಾಗಿ ಸುಖಾಂತ ಇನ್ನೊಂದೆಡೆಯಲ್ಲಿ ಕಂಡು ಬರುತ್ತದೆ.

ಈ ರೀತಿಯಾಗಿ ಆರ್ಥಿಕತೆಯ ಅವಶ್ಯಕತೆ, ಮಹತ್ವವನ್ನು ಕುರಿತಾದ ಬುಲಾಯಿ ಹಾಡುಗಳಿಂದ ಬದುಕಿಗೆ ಆಹಾರ ಎಷ್ಟು ಮುಖ್ಯ, ಅದಿಲ್ಲದಿದ್ದರೆ ಬದುಕೇ ಇಲ್ಲ. ಸಾವೇ ಕೊನೆ ಎಂಬ ಅಂಶವನ್ನು ಕಾಣಬಹುದು. ಜೊತೆಗೆ ಬಡತನದಲ್ಲಿದ್ದರೆ ತನ್ನ ತವರು ಮನೆಯ ಅತ್ತಿಗೆಯಂದಿರು ಎಷ್ಟು ಕೀಳಾಗಿ ಕಾಣುತ್ತಾರೆ ಎಂಬುದನ್ನು ಕಾಣಬಹುದು. ಅಲ್ಲದೇ ಮನುಷ್ಯನು ಮಾನವೀಯತೆಯ ದೃಷ್ಟಿಯಿಂದ ಕಷ್ಟದಲ್ಲಿದ್ದವರಿಗೆ ತನ್ನ ಕೈಲಾದ ಸಹಾಯವನ್ನು ಮಾಡಿದರೂ ಅದೇ ಮುಂದೆ ಸಮೃದ್ಧಿಯ ಬದುಕಿಗೂ ನಾಂದಿಯಾಗಬಹುದು ಎಂಬುದನ್ನು ಸಹ ಹಾಡಿನಲ್ಲಿ ಕಂಡುಕೊಳ್ಳಬಹುದು. ಈ ಹಾಡುಗಳಿಂದ **ಬರ** ಮತ್ತು **ಬಡತನ** ಗಳ ಭೀಕರತೆಯ ಅರಿವಿನಿಂದ ಎಲ್ಲರೂ ಸದಾ ಜಾಗೃತರಾಗಿರಬೇಕೆಂಬುದು ತಿಳಿದು ಬರುತ್ತದೆ. ಆರ್ಥಿಕ ಸಮಸ್ಯೆಗಳಿಗೆ ಪರಿಹಾರವೆಂದರೆ ಉತ್ಪಾದನೆ, ಪರಸ್ಪರ ಸಹಕಾರ ಭಾವನೆ ಇತ್ಯಾದಿ ಅಂಶಗಳನ್ನು ಈ ಹಾಡುಗಳಲ್ಲಿ ಕಾಣಬಹುದು. ಹೀಗಾಗಿ ಆರ್ಥಿಕ ಸ್ಥಿತಿ-ಗತಿಗಳೂ ಸಹ ಬುಲಾಯಿ ಸಂಸ್ಕೃತಿಯ ನೆಲೆ ಎಂದು ಹೇಳಬಹುದು.

ಋ) **ಸುಸಂಸ್ಕೃತ ಬದುಕು :**

ಜನಪದರು ತಮ್ಮದೇ ಆದ ರೀತಿಯ ಬದುಕನ್ನು ಬಾಳಿದವರು. ಅವರದು ಅತ್ಯಂತ ಶ್ರೀಮಂತ ಬದುಕು. ಅದನ್ನು ನಾವು ಸುಸಂಸ್ಕೃತ ಬದುಕೆಂದು ಕರೆಯುತ್ತೇವೆ. ದೈವ ಭಕ್ತಿ, ಮಾನವ ಪ್ರೇಮ, ಸಹಕಾರ ಭಾವನೆ, ಹೊಂದಾಣಿಕ ಮುಂತಾದವು ಜನಪದರ ಬದುಕಿನ ಸಿರಿತನದ ಅಂಶಗಳು. ಇದನ್ನು ಅರಗಿಸಿಕೊಂಡು ಉಳಿದವರೂ ತಮ್ಮಂತೆ ಬದುಕಬೇಕೆಂದು ಆಶಿಸಿ, ಅದರಂತೆ ಜೀವನ ಪದ್ದತಿಗಳನ್ನು ರೂಪಿಸಿಕೊಂಡಂತೆ ಕಂಡು ಬರುತ್ತದೆ. ಇಂತಹ ಬದುಕಿನ ಹಲವು ಸಂದರ್ಭಗಳೇ ಬುಲಾಯಿ ಸಂಸ್ಕೃತಿಯ ನೆಲೆಯಾಗಿರುವದನ್ನು ನಾವು ಗಮನಿಸಬಹುದು.

'ಖಚಿತ ಜ್ಞಾನದ ಅಭಾವದ ಒಂದು ಕಾಲದಲ್ಲಿ ಜನಪದರು ತಮ್ಮ ಸುತ್ತಮುತ್ತಣ ಅನೇಕ ವಸ್ತುಗಳ ಮೂಲವನ್ನು ತಿಳಿದುಕೊಳ್ಳುವ, ಅರ್ಥೈಸುವ ಯತ್ನ ಮಾಡಿದಂತಿದೆ. ಸೂರ್ಯ ಮೂಡಿದಾಗ ಪ್ರಖರ ಪ್ರಕಾಶ, ಮುಳುಗಿದಾಗ ಭೂಮಂಡಲದಲ್ಲಿ ಕತ್ತಲೆ,

ಸೂರ್ಯನೊಬ್ಬ ದೇವ, ಪೃಥ್ವಿ ದೇವತೆ, ಭೂಮಿ ತನ್ನ ಅಕ್ಷದ ಸುತ್ತು ತಿರುಗುವ ಪರಿಣಾಮಗಳನ್ನಾಗಲಿ, ಹೇಳಿಕೊಡುವ ಯಾವ ಆಧಾರಗಳೂ ಇಲ್ಲದಂದಿನಿಂದಲೇ ಜನಪದರ ಸುಪ್ತ ಚೇತನದಲ್ಲಿ ಭೀತ, ಅದ್ಭುತಗಳನ್ನು ಮೂಡಿಸಿದ ಒಂದು ಬಿಧದ ಅತಿಮಾನುಷ ಪ್ರಭಾವದ ಕಾಲದಲ್ಲಿ ಜನಪದರು ವಿಧಿ ನಿಷೇಧಗಳಿಗೆ ತಲೆ ಬಾಗಿದ್ದರಲ್ಲಿ ಅಚ್ಚರಿಯಿಲ್ಲ. ವಿಧಿ ನಿಷೇಧಗಳು ಜನಪದ ಗುಂಪುಗಳನ್ನು ನಿಯಂತ್ರಿಸುತ್ತ, ತತ್ತ್ವ, ನೀತಿಸೂತ್ರ ನಡವಳಿಕೆಗಳ ರೂಪದ ನಂಬುಗೆಗಳು, ಸಮಾಜ, ಧಾರ್ಮಿಕ ಸ್ವರೂಪಕ್ಕೆ ಬುನಾದಿಯಾದುವೆಂಬ'[೮೪] ಅಭಿಪ್ರಾಯವು ಸೂಕ್ತವೆನಿಸುತ್ತದೆ.

ಎಲ್ಲಾ ಸಮಾಜಗಳು ಧಾರ್ಮಿಕ ನೆಲೆಗಳಲ್ಲಿ ನಿರ್ಮಾಣವಾಗಿದ್ದು ಕಂಡು ಬರುತ್ತದೆ. ಹೀಗಾಗಿ ಆಯಾ ಸಮಾಜಗಳ ಜೀವನ ವಿಧಾನ, ನಂಬಿಕೆಗಳು, ಆಚಾರ-ವಿಚಾರ ಮುಂತಾದವುಗಳು ಒಂದೇ ರೀತಿಯಲ್ಲಿರುವುದು ಗಮನಾರ್ಹ. ಬುಲಾಯಿ ಸಂಸ್ಕೃತಿಯೆಂದರೆ ಬೀದರ ಜಿಲ್ಲೆಯ ನಾಗರಪಂಚಮಿಯ ಸಂಸ್ಕೃತಿಯಾದ ಕಾರಣ ಈ ಸಂದರ್ಭದ ಆಚರಣೆ, ನಂಬಿಕೆ, ಮೌಲ್ಯ, ಸಂಪ್ರದಾಯ ಮುಂತಾದವುಗಳನ್ನು ಬುಲಾಯಿ ಹಾಡುಗಳಲ್ಲಿ ಕಾಣಬಹುದಾಗಿದೆ.

ಜನಪದರ ಬದುಕೆಲ್ಲಾ ಧಾರ್ಮಿಕ ನಿಷ್ಠೆ, ನಂಬಿಕೆಗಳಿಂದಾದುದರಿಂದ ದೈವಭಕ್ತಿ ಹಿನ್ನಲೆಗಿದ್ದೇ ಇರುತ್ತದೆ. ದೈವಭಕ್ತಿಯಿಲ್ಲದೇ ಅವರು ಬದುಕುವುದು ಅಸಾಧ್ಯ. ದೈನಂದಿನ ಜೀವನದಲ್ಲಿಯೂ ಪದೇ ಪದೇ ದೈವಿ ಸ್ಮರಣೆ ಮಾಡುವುದು ಕಂಡು ಬರುತ್ತದೆ. ಅವರಿಗೆ ದೈವವೆಂಬುದು ಎಂದೂ ತರ್ಕದ, ಚರ್ಚೆಯ ವಿಷಯವಲ್ಲ. ನಾಸ್ತಿಕತೆ, ನಿರೀಶ್ವರವಾದ, ಭೌತಿಕವಾದ ಇತ್ಯಾದಿ ವಾದ- ವಿವಾದಗಳನ್ನು ಅವರು ಕಂಡು ಕೇಳಿದವರಲ್ಲ. ಅವರಿಗೆ ಈ ಬಗ್ಗೆ ಜಿಜ್ಞಾಸೆಯೇ ಬೇಕಿಲ್ಲ. ಅವರಿಗೆ ದೈವ ಭಕ್ತಿ ಎಂಬುದು ತಮ್ಮ ನೆಲೆಯಾದ ಭೂಮಿ-ಆಕಾಶಗಳಷ್ಟೇ ಸತ್ಯವಾದುದು,ನಿತ್ಯವಾದುದು ಎಂಬ ಅಚಲ ನಂಬಿಕೆ ಉಳ್ಳವರು. ಅವರದು ಮುಗ್ಧ ಭಕ್ತಿ,ಮೂಢಭಕ್ತಿ, ಭಯದಿಂದ ಹುಟ್ಟಿದ ಭಕ್ತಿ ಎನ್ನಬಹುದು. ಕೇವಲ ಭಕ್ತಿಗಾಗಿಯೇ, ಮೋಕ್ಷ ಸಾಧನೆಗಾಗಿಯೇ ದೈವಪೂಜೆ, ಭಕ್ತಿ ಆಚರಣೆ ಮಾಡುವವರಲ್ಲ. ಪ್ರತಿಯೊಂದು ಶುಭ ಕಾರ್ಯ ಆರಂಭ ಮಾಡುವಾಗಲೆಲ್ಲಾ ಅವರು ತಪ್ಪದೇ ದೈವಪೂಜೆ ಮಾಡುವ ಪದ್ದತಿ ಕಂಡು ಬರುತ್ತದೆ. ಜನಪದರ ದೈವಭಕ್ತಿ ಬುದ್ಧಿ ಪ್ರಧಾನವಾದುದಲ್ಲ, ಧೃಢ ನಂಬಿಕೆಯಿಂದ, ಭಾವುಕತೆಯಿಂದ ಕೂಡಿರುವಂಥದು. ಅವರು ತಮ್ಮ ಇಷ್ಟ ದೈವಗಳನ್ನು ಅತ್ಯಂತ ಭಯ,ಭಕ್ತಿ, ನಿಷ್ಠೆ-ನೇಮಗಳಿಂದ ಪೂಜಿಸಿ ಆರಾಧಿಸುವುದನ್ನು ಕಾಣಬಹುದು. ಅಷ್ಟೇ ಸಲಿಗೆಯಿಂದ, ಆತ್ಮೀಯತೆಯಿಂದ, ನಿಕಟ ಪರಿಚಯದ ಹಿನ್ನಲೆಯ ಮಿತ್ರ ಭಾವದಿಂದ, ಪ್ರೀತ- ವಾತ್ಸಲ್ಯಗಳಿಂದ ಕಂಡು ಕೊಂಡಾಡಿರುವುದು ಕಂಡು ಬರುತ್ತದೆ. ಅವರ ಬದುಕಿನಂತೆ ಅವರ ದೈವ ಭಕ್ತಿಯೂ ಸಹ ಮುಗ್ಧ ಹಾಗೂ ಸರಳ ಭಕ್ತಿಯ ಸೂತ್ರ, ಪಾತ್ರ, ಪೂಜೆಯ ವಿಧಿ, ತಂತ್ರಗಳನ್ನು ಅವರು ಚೆನ್ನಾಗಿ ಬಲ್ಲವರಲ್ಲ. ತಮ್ಮ ಹಿರಿಯರು ಆಚರಿಸುತ್ತಿದ್ದ ಸಂಪ್ರದಾಯದಂತೆ ಆಚರಿಸುವರು.

ಪರಂಪರೆಯೊಂದನ್ನೇ ಅಧಿಕಾರವನ್ನಾಗಿ ತೋರುವವರು. ಹಾಗೆಂದು ಅವರು ಎಂದೂ ಎಡಮುಂದಾಗಿ (ಅಪ್ರದಕ್ಷಿಣ ಕ್ರಮದಲ್ಲಿ) ಧೂಪ,ದೀಪ, ಆರತಿ ಬೆಳಗುವುದಿಲ್ಲ. ಮಡಿ-ಮೈಲಿಗೆಗಳ ಪ್ರಜ್ಞೆ ಇಲ್ಲದೇ ಅಡುಗೆ ಕೋಣೆಗೆ, ದೇವರ ಗುಡಿಗೆ ನುಗ್ಗಿ ಬಿಡುವುದಿಲ್ಲ. ಈ ಎಲ್ಲಾ ಅಂಶಗಳು ಬುಲಾಯಿ ಸಂಸ್ಕೃತಿಗೂ ಅನ್ವಯಿಸುತ್ತವೆ.

ನಾಗರ ಪಂಚಮಿಯ ಹಬ್ಬದ ಆಚರಣೆ, ನಂಬಿಕೆ, ಸಂಪ್ರಾದಾಯ, ಪರಂಪರೆ ಮುಂತಾದವುಗಳನ್ನು ಬುಲಾಯಿ ಹಾಡುಗಳಲ್ಲಿಯೇ ಕಾಣಬಹುದಾಗಿದೆ. ಇಂತಹ ಅಂಶಗಳನ್ನು ಒಳಗೊಂಡಿರುವ ಹಾಡು ಹೀಗಿದೆ.

ಪಾಂಡವರ ಪಂಚಮಿ ದಿನ ನಾಡ ಮೇಲಿನ
ನಾರೆರೆಲ್ಲಾ ಬರುಬಿಸ್ತಾರ ಹೇಳಲಿ ಕೋಲೆಣ್ಣ ಕೋಲ
ರೊಟ್ಟಿ ಬುತ್ತಿ ಮಾಡಿಕೊಂಡು ಎತ್ತಿನ ಮ್ಯಾಲ
ಹೇರಿಕೊಂಡು ಬರುವ ಬಿಸ್ತಾರೇನು ಹೇಳಲಿ ಕೋಲೆಣ್ಣ ಕೋಲೆ
ಗುಡ್ಡದ ಮಣ್ಣ ತರಲಿಲ್ಲಾ ಅಣ್ಣ ಗುಲಗಂಜಿ ಹಚ್ಚಿ ಆಡಲಿಲ್ಲ
ಸುಳ್ಳ ಆಯಿತ್ತಲ್ಲ ಪಂಚಮಿ ಕೋಲೆಣ್ಣ ಕೋಲೆ
ನನ್ನ ಖಳಬಿ ಆರು ತಿಂಗಳಾಯ್ತು ತಿರುಗಿ ಒಬ್ಬರು ಬರುವದಿಲ್ಲ
ಅವ ನಮ್ಮಪ್ಪನ ಮನಸ ಬೇರೆ ಕೋಲೆಣ್ಣ ಕೋಲೆ
ನನ್ನ ಖಳಬಿ ಆರ ತಿಂಗಳಾಯ್ತು ತಿರುಗಿ ಒಬ್ಬರು ಬರುವದಿಲ್ಲ
ಆಕಿ ನಮ್ಮವ್ವನ ಮನಸ ಬೇರೆ ಕೋಲೆಣ್ಣ ಕೋಲೆ
ಸಾವಕಾರ ಅಣ್ಣ ತಮ್ಮರು ಸರಿತಿ ಪ್ಯಾಟಿಗಿ ಬರುವರೆಲ್ಲ
ದಾವ ಮತ್ತೊಂದು ಯಾರಿಗಿ ಹೇಳಲಿ ಕೋಲೆಣ್ಣ ಕೋಲೆ
ಕೆರಿ ಭಾವಿ ನೀರಿಗೆ ಹೋದ ಕೇರಿ ಅವನ ಕೇಳಿ ಬಂದ
ಬರುತ್ತಾರ ಈ ದಿನ ರಾತ್ರಿಗಿ ಕೋಲೆಣ್ಣ ಕೋಲೆ
ಚಿಂತಿ ಮಾಡುತ ಪರಿಚಯಂತದಾಗ ಕುಂತಿದಾಳ ಸಮುದ್ರಾದಾಗ
ಅಣ್ಣ ಬಂದನಾ ಮೂರಥೆಂಜೇಲಿ ಕೋಲೆಣ್ಣ ಕೋಲೆ
ಅಣ್ಣನ ಮಾರಿ ನೋಡಿ ಕಣ್ಣ ಥುಂಬ ನೀರು ತಂದು
ಮಾಡಿ ಕುಂತಾಳವ್ವ ಸಣ್ಣ ಮಾರಿ ಕೋಲೆಣ್ಣ ಕೋಲೆ
ಸಾಕ ತಂಗಿ ಸುಮ್ಮನ ಕೂಡು ಯಾಕ ತಂಗಿ ದುಃಖಿಸ್ಥಿದಿ
ಮೀರಿ ಹೋಗೋದಿಲ್ಲ **ಪಂಚಮಿ** ಕೋಲೆಣ್ಣ ಕೋಲೆ
ಊರಿಗೆ ಹೋದ ಮರು ದಿನ ಕೇಳುತ್ತಾನ ಅತ್ತಿ ಮಾವಗ
ಖಳಸರಿ ನಮ್ಮ ತಂಗಿಗೆ ಕೋಲೆಣ್ಣ ಕೋಲೆ
ರೊಟ್ಟಿ ಬುತ್ತಿ ಮಾಡಿಕೊಂಡು ಎತ್ತಿನ ಮ್ಯಾಲ ಹೇರಿಕೊಂಡು

ಯಾವಾಗ ನೋಡಲೆಣ್ಣ ತಾಯಿ ಮಾರಿ ಕೋಲೆಣ್ಣ ಕೋಲೆ
ಗುಡ್ಡ ಮೇಲಕ್ಕ ಆಯಿತಣ್ಣ ಹೊಡ್ಡ ಮೇಲಕ್ಕ ಬಂದಿತಣ್ಣ
ಯಾವಾಗ ನೋಡಲೆಣ್ಣ ಗೆಳೆದೇರ ಮಾರಿ ಕೋಲೆಣ್ಣ ಕೋಲೆ
ಊರಿಗೆ ಹೋದ ಮರುದಿನ ನೀರಿಗರ ಹೋಗಿದ್ದರು
ಕೂಡಿದರ ತಮ್ಮ ಗೆಳೆದೇರು ಕೋಲೆಣ್ಣ ಕೋಲೆ
ನಂದು ಹ್ಯಾಂಗೆ ನಿಂದು ಹ್ಯಾಂಗೆ ಅಂದಿದರ ಹ್ಯಾಂಗೆ
ಆಡಿದರ ಹ್ಯಾಂಗೆ ಆಡುತ್ತಾಳೆ ಅತ್ತಿ ಮನಿ ಮಾತು ಕೋಲೆಣ್ಣ ಕೋಲೆ
ಗಂಡಯೆನ್ನ ಮ್ಯಾಲ ಕೆಂಡಗಣ್ಣಿನ ಶಿವನ
ಗುಡ್ಡ ಬಡಿದಂಗ ಎದಿಮ್ಯಾಲ ಕೋಲೆಣ್ಣ ಕೋಲೆ
ಅತ್ತಿಯೆನ್ನ ಕಂಡು ಹೊತ್ತ ಹುರಿ ನೀಡುವಳು
ಅತ್ತಿಗಿ ನಾದುನದೆರು ನಿಂದ್ರಗುಡರು ಕೋಲೆಣ್ಣ ಕೋಲೆ
ಭಾವ ಮೈದುನದೆರು ಯೆನ್ನಗೆ ಕೋಲ ಗುದಲಿ ಹಿಡಿಯುವರು
ಮಾವಯೆನ್ನ ಮ್ಯಾಲ ಮಂಪಚ್ಯಾರಿ ಕೋಲೆಣ್ಣ ಕೋಲೆ
ನಾಗರ ಪಂಚಮಿ ನಾಡಿಗೆ ದೊಡ್ಡದು
ನಾನು ನನ್ನ ತಂಗಿ ಕೂಡಿದೆವು ಕೋಲೆಣ್ಣ ಕೋಲೆ
ಮೇಲ ದುಂಡಿನ ಸೀರಿ ಕೊಲಂಬರಿ ಕುಬುಸ
ಸಾಲ ಗಿಣಿಗೋಳು ಸೆರಗೆಲ್ಲ ಕೋಲೆಣ್ಣ ಕೋಲೆ
ಸಾಲ ಗಿಣಿಗೋಳು ಸೆರಗಿನ ಸೀರಿ ಉಟ್ಟುಕೊಂಡು
ನಾಗಣ್ಣಗ ಹಾಲ ಎರಿದೇವ ಕೋಲೆಣ್ಣ ಕೋಲೆ
ಒಡಿಯ ನನ್ನ ನಾಗನಾಥ ಅಡಿಗಡಿಗಿ ಭಜಿಸುವೆನು
ಚರಗೀಲಿ ಹಾಲ ಎರದೇವು ಕೋಲೆಣ್ಣ ಕೋಲೆ
ಚರಗೀಲಿ ಎಲೆಹಾಲ ಎರದು ನಾವು ಬೇಡಿದೆವು
ನಾಲವರು ಅಣ್ಣ ತಮ್ಮರು ಸುಖಿರಲಿ ಕೋಲೆಣ್ಣ ಕೋಲೆ
ಆಯಿತವ್ವ ಪಂಚಮಿ ಹೋಯಿತವ್ವ ಇಂದಿಗಿ
ಆಯ್ತು ಬರುವುದು ರಾತ್ರಿ ಗಳೆದು ಕೋಲೆಣ್ಣ ಕೋಲೆ
ಅಣ್ಣ ಹೇಳಿದ ಮಾತು ಶರಣಪ್ಪಾ ಮರತಾನ
ದೀವಳಗಿತನ ಧೈರ್ಯ ಮಾಡು ಕೋಲೆಣ್ಣ ಕೋಲೆ
ಎಸದಿನ ಇದ್ದಿದರ ತಾಸ ಹೊತ್ತಿ ಇದ್ದಂಗ
ಬ್ಯಾಸರ ಏನತಂಗಿ ತವರ ಮನಿ ಕೋಲೆಣ್ಣ ಕೋಲೆ
ಬ್ಯಾಸರ ಏನ ತಂಗಿ ತವರು ಮನೆಗೆ ಇರುವದಕ್ಕಿಂತ

ಲೇಸ ಹೋಗ ನಿನ್ನ ಒಗೆತಾನ ಕೋಲೆಣ್ಣ ಕೋಲೆ

ಲೇಸ ಹೋಗ ನಿನ್ನ ಒಗೆತಾನ ಇದ್ದರ

ಏಸಬಾರಿ ನಿನ್ನ ಕರಿಬಂದ ಕೋಲೆಣ್ಣ ಕೋಲೆ

ಏಸಬಾರಿ ನಿನ್ನ ಕರಿ ಬಂದು ಉಡಸಿದ

ರೇಶಮಿಭಾರಿ ಜರಾದಿತ್ತು ಕೋಲೆಣ್ಣ ಕೋಲೆ [೮೫]

ಸುಮಾರು ೩೦ ನುಡಿಗಳ ಈ ಹಾಡಿನಲ್ಲಿ ನಾಗರ ಪಂಚಮಿ ಹಬ್ಬಕ್ಕೆ ಹೆಣ್ಣು ಮಗಳು ತವರು ಮನೆಗೆ ಹೋಗಲು ತವಕಿಸುವದರಿಂದ ಕರೆಯಲು ಅಣ್ಣ ಬಂದಾಗ ಕಳುಹಿಸುವರೋ ಇಲ್ಲೋ ಎಂಬ ಆತಂಕ ತಂಗಿಯಲ್ಲಿ ಕಂಡು ಬರುತ್ತದೆ. ಆದರೆ ಅಣ್ಣ ಮಾತ್ರ ಧೃಢವಾಗಿ ಹೇಳುತ್ತಾನೆ ಕರೆದುಕೋಂಡೇ ಹೋಗುತ್ತೇನೆಂದು. ಅವಳು ತವರು ಮನೆಗೆ ಹೋಗುವಾಗ ರೊಟ್ಟಿ ಬುತ್ತಿ ಮಾಡಿ ಕಟ್ಟಿಕೊಂಡು ಹೋಗುವುದು ಗಮನಾರ್ಹ. ಆಗ ಇಂದಿನಂತೆ ಸಾಕಷ್ಟು ಸಾರಿಗೆ ಸೌಲಭ್ಯವಾಗಲಿ, ಬೇಕೆನಿಸಿದಾಗ ತಿನ್ನಲು ಉಣ್ಣಲು ಹೋಟೆಲುಗಳಾಗಲಿ ಇಲ್ಲದಿದ್ದುದ್ದೇ ಈ ರೀತಿಯಾಗಿ ಹಸಿದಾಗ ಉಣ್ಣಲು ರೊಟ್ಟಿ ಬುತ್ತಿ ಜೊತೆಯಲ್ಲಿ ಕಟ್ಟಿಕೊಂಡು ಹೋಗುತ್ತಿರಬಹುದು. ಇಲ್ಲಿ ಅವಳಿಗೆ ತನ್ನ ತಾಯಿ ಹಾಗೂ ಗೆಳತಿಯರನ್ನು ಯಾವಾಗ ನೋಡುತ್ತೇನೆಂಬ ಆತುರವೇ ಹೆಚ್ಚಾಗಿರುವಂತೆ ಕಾಣುತ್ತದೆ. ಊರಿಗೆ ಹೋದ ಮರುದಿನ ನೀರಿಗೆ ಹೋದಳೆಂಬುದು ಆಗಿನ ಕಾಲದ ಜೀವನ ಪದ್ಧತಿಯನ್ನು ಸಂಕೇತಿಸುತ್ತದೆ. ಇಂದಿನಂತೆ ಮನೆ-ಮನೆಗೆ ಅಂದು ನೀರಿನ ಸರಬುರಾಜಿರಲಿಲ್ಲವೆಂದೂ, ಊರಿನ ಪ್ರತಿಯೊಬ್ಬರು ಒಂದೇ ಕಡೆ ಎಂದರೆ ಊರ ಕೆರೆಯೋ, ಬಾವಿಯೋ, ನದಿಯೋ ಅಲ್ಲಿಗೆ ಹೋಗಿ ನೀರನ್ನು ತರಬೇಕಾದ ವ್ಯವಸ್ಥೆ ಕಂಡು ಬರುತ್ತದೆ. ಅಂತೆಯೇ ಎಲ್ಲಾ ಗೆಳತಿಯರು ಇವಳಿಗೆ ಸಿಗುವುದು ಅಲ್ಲಿಯೇ. ಅಲ್ಲಿ ಎಲ್ಲರೂ ತಮ್ಮ ತಮ್ಮ ಅತ್ತೆ, ಗಂಡ, ಭಾವ, ಮೈದುನ, ನಾದಿನಿ-ನೆಗೆಣ್ಣಿಯರ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರೂ ಮಾವನ ಬಗ್ಗೆ ಒಳ್ಳೆಯ ಅಭಿಪ್ರಾಯವಿರುವುದು ಗಮನಾರ್ಹವಾಗಿದೆ. ಹಬ್ಬಕೆಂದು ಬಂದಿದ್ದ ಅಕ್ಕ-ತಂಗಿಯರೆಲ್ಲಾ ಸೇರಿ ನಾಗಣ್ಣನಿಗೆ ಹಾಲು ಎರೆಯಲು ಸಾಲಗಿಣಿಗಳ ಸೆರಗಿನ ಸೀರೆಯನ್ನುಟ್ಟು ಹೋಗುವುದು ಸಹ ಗಮನೀಯವಾಗಿದೆ. ಅಲ್ಲಿ ನಾಗಣ್ಣನಿಗೆ ಹಾಲೆರೆದು ತಮ್ಮ ಅಣ್ಣ-ತಮ್ಮರ ಸೌಖ್ಯಕ್ಕಾಗಿ ಬೇಡಿಕೊಳ್ಳುವುದು ಅತಿ ಮಹತ್ವದ್ದಾಗಿದೆ. ನಾಗರ ಪಂಚಮಿ ಹೆಣ್ಣು ಮಕ್ಕಳ ಹಬ್ಬವಾಗಿದ್ದು ಆಗ ತಮ್ಮ ಸಹೋದರರ ಸೌಖ್ಯಕ್ಕಾಗಿಯೇ ವ್ರತ-ಪೂಜೆ ಮಾಡುವರೆಂಬುದು ಇಲ್ಲಿ ತುಂಬಾ ಮಹತ್ವದ್ದೆನಿಸುತ್ತದೆ. ಆದರೆ ಹಬ್ಬದ ಮರುದಿನವೇ ಮತ್ತೇ ಗಂಡನ ಮನೆಗೆ ಹೋಗುವದಕ್ಕೆ ಅವಳಿಗೆ ಬೇಸರ. ಆಗ ಅಣ್ಣ ಹೇಳುವ ಮಾತು ಸಹ ಬಹಳ ಮುಖ್ಯ. ಮತ್ತೆ ದೀವಳಿಗೆ ಕರೆಯಲು ಬರುತ್ತೇನೆಂಬುದು ಅಂದರೆ ಪಂಚೆಯಂತೆ ದೀಪಾವಳಿಗೂ ಹೆಣ್ಣು ಮಕ್ಕಳು ಹಬ್ಬಕ್ಕೆಂದು ತವರು ಮನೆಗೆ ಬರುವ ಸಂಪ್ರಾದಾಯವಿತ್ತೆಂಬುದು ಗಮನೀಯ. ಅದರಂತೆ ಅಣ್ಣ ನೀನು ನಿನ್ನ ಗಂಡನ ಮನೆಯಲ್ಲಿ ಚೆನ್ನಾಗಿದ್ದರೆ ನಾನೇಷ್ಟು ಬಾರಿ ನಿನ್ನ ಕರೆದುಕೊಂಡು

ಬಂದು ರೇಶಮಿ ಸೀರೆ ಉಡುಸುವೆನು ಎಂದು ಹೇಳುವುದು ಸಹ ವಿಶಿಷ್ಟವಾಗಿದೆ. ಹೆಣ್ಣು ಮಕ್ಕಳಿಗೆ ಗಂಡನ ಮನೆತನವೇ ಮುಖ್ಯ. ಅಲ್ಲಿ ಅವಳು ಚೆನ್ನಾಗಿ ಇದ್ದರೆ ಮಾತ್ರ ತವರಿನಲ್ಲಿ ಅವಳಿಗೆ ಪ್ರೀತಿ, ಉಡುಗೋರೆ ಸಿಗುವದೆಂಬ ಅಂಶವು ಇಲ್ಲಿ ಸೂಚ್ಯವಾಗಿರುವಂತೆ ಕಾಣುತ್ತದೆ. ಒಟ್ಟಾರೆ ನಾಗರ ಪಂಚಮಿಯ ಸಂಪ್ರದಾಯ, ಪರಂಪರೆ, ಆಚರಣೆ ಹೆಣ್ಣು ಮಗಳ ಮನಸ್ಸಿನ ಹೊಯ್ದಾಟ, ತವರು ಮನೆಯ ಹಂಬಲ, ಗೆಳೆತನ, ಅಕ್ಕ-ತಂಗಿ ಅಣ್ಣ ತಮ್ಮರ ಸ್ನೇಹ ಸಂಬಂಧ, ಗಂಡನ ಮನೆಯ ಮಹತ್ವ, ಮತ್ತೇ ದೀವಳಿಗೆ ತವರು ಮನೆಗೆ ಬರುವ ಕನಸು ಹೀಗೆ ಹತ್ತು ಹಲವು ಅಂಶಗಳನ್ನು ಈ ಹಾಡು ನಮಗೆ ತಿಳಿಸುವಂತಿದೆ. ನಾಗರ ಪಂಚಮಿಯ ಪಾರಂಪರಿಕ ಆಚರಣೆಯನ್ನು ತಿಳಿಸಿಕೊಡುವ ಇನ್ನೊಂದು ಜುಲಾಯಿ ಹಾಡನ್ನು ನೋಡಬಹುದು.

ನಾಗರ ಪಂಚಮಿ ನಾಳೀಗಿ ಬರುವುದು
ನಾಗಯ್ಯಗ ಹಾಲ ಎರೆವುದು ಕೋಲೆಣ್ಣ ಕೋಲೆ
ನಾಳೀಗಿ ಒಂದತ್ತು ನಾವುನೇ ಮಾಡುತ್ತಾ
ನಾಗಯ್ಯಗ ಹಾಲ ಎರೆವುದು ಕೋಲೆಣ್ಣ ಕೋಲೆ
ನಾಗರ ಪಂಚಮಿ ನಾಡಿಗಿ ದೊಡ್ಡದು
ನಾಗಣ್ಣಗ ಹಾಲ ಎರೆದೆವೆ ಕೋಲೆಣ್ಣ ಕೋಲೆ
ಹೊಸದೊಂದು ಉಟ್ಟಾರ ಹೊಸದೊಂದು ತೊಟ್ಟಾರ
ಗೆಳೆದೇರು ಕೂಡಿ ನಡೆದಾರ ಕೋಲೆಣ್ಣ ಕೋಲೆ
ನಾನುನೇ ತಂಗೆಮ್ಮಾ ಹುತ್ತೀಗಿ ಹೋದೆವೆ
ಹಾಲ ಕೊಬ್ಬರಿ **ಹಂಗನೂಲ** ಕೋಲೆಣ್ಣ ಕೋಲೆ
ಅರಸಿಣ ಕುಂಕುಮ ಗಂಧ ಕಸ್ತೂರಿ
ಪೂಜೆ ಮಾಡ್ಯಾರೆ ಮೂರ್ಯಾಳೆ ಕೋಲೆಣ್ಣ ಕೋಲೆ
ಅಕ್ಕ ಎಲ್ಲರ ಕರಿಯ ಟೆಂಗಿನಂಗ ನವಲ ಪರಿಯ
ದುರುಳ ನಾಗಣ್ಣಗ ಎಡಿಯ ಮಾಡ ಕೋಲೆಣ್ಣ ಕೋಲೆ
ಮುಟ್ಟ್ಯಾಗಳ್ಳವ ಹಿಡಿದು ನಾಗಣ್ಣಗ ಹಾಲನೆರೆದು
ಮತ್ಯಾಕ ನಾಗಣ್ಣ ಭುಸ್‌ನೆಂದ ಕೋಲೆಣ್ಣ ಕೋಲೆ
ಅಳ್ಳಿಗಳ್ಳವ ಕೊಟ್ಟ ಕೊಳ್ಳಿಗಿ ಹಂಗನೂಲ ಕೊಟ್ಟ
ಮತ್ಯಾಕ ನಾಗಣ್ಣ ಭುಸ್‌ನೆಂದ ಕೋಲೆಣ್ಣ ಕೋಲೆ
ಎದುರ ಬಾಜರಗೊಂಟ ಸದರ ಬೀದಿಯಗೊಂಟ
ಮುಟ್ಟ್ಯಾಗಿನ ಅಳ್ಳ ಉದುರುಸ್ತ ಕೋಲೆಣ್ಣ ಕೋಲೆ
ಹಾಲೆರೆದು ನಾರೆರೆಲ್ಲಾ ಸಾಲಗಟ್ಟಿ ಮನಿಗಿ ಬಂದು
ಕೂಡಿನೇ ಆಡಾರೆ ಜೋಕಾಲಿ ಕೋಲೆಣ್ಣ ಕೋಲೆ

ನಾಗರ ಪಂಚಮಿ ನಾಡಿಗೆ ದೊಡ್ಡದು
ನಾರಿಯರೆಲ್ಲಾ ನೆರೆದಾರೆ ಕೋಲೆಣ್ಣ ಕೋಲೆ
ನಾರಿಯರೆಲ್ಲಾ ನೆರೆದು ಹಾಡುತ್ತ ತಿರುಗುತ್ತ
ಭುಲಾಯಿ ಹಾಕಿ ನಲಿಯುತ್ತಾರೆ ಕೋಲೆಣ್ಣ ಕೋಲೆ
ಭುಲಾಯಿ ಹಾಕುತ್ತಾ ಕತಿಗಳ ಹಾಡುತ್ತಾ
ಮಲ್ಲಮ್ಮನ ಭಕ್ತಿಯ ಮೆರೆದಾರೆ ಕೋಲೆಣ್ಣ ಕೋಲೆ [೮೭]

ನಾಗರ ಪಂಚಮಿಯನ್ನು ಪರಂಪರಾಗತವಾಗಿ ಹೇಗೆ ಆಚರಿಸುತ್ತರೆಂಬುದು ಈ ಹಾಡಿನಲ್ಲಿ ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ನಾಳೆ ನಾಗರ ಪಂಚಮಿಯೆಂದರೆ ಇಂದೇ ಅಂದರೆ ಚವತಿಯಂದು ಸಹೋದರರ ಸಲುವಾಗಿ ಅವರ ಸೌಖ್ಯ-ಸಮೃದ್ಧಿಯ ಬದುಕಿಗಾಗಿ ಸಹೋದರಿಯರು ಕಡ್ಡಾಯವಾಗಿ ಉಪವಾಸ ವ್ರತವನ್ನು ಮಾಡಲೇಬೇಕು. ಮರುದಿನ ನಾಗಣ್ಣನಿಗೆ ಹಾಲೆರೆಯಲು ಹೊಸ ಬಟ್ಟೆ ಉಟ್ಟಿಯೇ ಹುತ್ತಕ್ಕೆ ಅಕ್ಕ- ತಂಗಿ ಅಥವಾ ಗೆಳತಿಯರು ಸೇರಿ ಹೋಗಬೇಕು. ಬಹುಶಃ ಹುತ್ತದಲ್ಲಿ ಹಾವಿರುತ್ತದೆಂಬ ನಂಬಿಕೆಯಿಂದ ಒಬ್ಬರೇ ಹುತ್ತಕ್ಕೆ ಹೋದರೆ ಆಕಸ್ಮತ್ತಾಗಿ ಹಾವನ್ನು ಕಂಡಾಗ ಭಯಗೊಳ್ಳಬಹುದೆಂಬ ಮುನ್ನೆಚ್ಚರಿಕೆಯ ಕ್ರಮದಲ್ಲಿ ಜೊತೆಯಾಗಿ ಹೋಗುವದನ್ನು ಕಡ್ಡಾಯಗೊಳಿಸಿರಬಹುದು.

ಹಾಲು, ಕೊಬ್ಬರಿ, ಅಳ್ಳು (ಜೋಳದ), ಗಂದ, ಕುಂಕುಮ, ಅರಸಿಣ ಮುಂತಾದ ಪೂಜಾ ಸಾಮಗ್ರಿಗಳು ಪೂಜೆಗೆ ಬೇಕು. ಅಲ್ಲಿಗೆ ಹೋಗಿ ಪೂಜೆಯಾದ ಮೇಲೆ ಹಂಗನೂಲ ಧರಿಸಬೇಕು. ಹಂಗನೂಲನ್ನು ಹೆಣ್ಣು ಮಕ್ಕಳು ಕೊರಳಲ್ಲಿ ಹಾಗೂ ಗಂಡು ಮಕ್ಕಳು ಕೈಯಲ್ಲಿ ಕಟ್ಟಿಕೊಳ್ಳುವುದು ಪದ್ದತಿ. ಆದರೆ ಇತ್ತೀಚಿಗೆ ಎಲ್ಲರೂ ಕೈಯಲ್ಲಿಯೇ ಕಟ್ಟಿಕೊಳ್ಳುವುದು ಕಂಡು ಬರುತ್ತಿದೆ. ಪೂಜೆಯ ನಂತರ ನಾಗಣ್ಣನಿಗೆ ಎಡೆ (ನೈವೇದ್ಯ) ಬೇಕೆ ಬೇಕು. ಹಾಲೆರೆದ ಮೇಲೆ ಮುಖ್ಯ ಪೇಟೆ ಮಾರ್ಗವಾಗಿ ಹೋದರೂ ಮುಟ್ಟಿಯಲ್ಲಿ ಅಳ್ಳನ್ನು ಹಿಡಿದು ಮಕ್ಕಳಾದರೆ ಉಡಿಯಲಿ ಹಾಕಿಕೊಂಡು ಒಂದೊಂದೇ ಉದುರಿಸುತ್ತಾ ಮನೆಗೆ ಹೋಗಬೇಕು. ಹಾಗೆ ಚೆಲ್ಲುತ್ತಾ ಬಂದಾಗ ಅದು ಹಾವಿನಂತೆ ಕಂಡು ಬರುತ್ತದೆ. ಬಹುಶಃ ಇದು ನಾಗದೇವತೆಯನ್ನು ಮನೆಗೆ ತಂದು ಪೂಜಿಸಿದ ಸಂಕೇತವಿರಬಹುದು. ಒಟ್ಟಾರೆ ಹೆಣ್ಣು ಮಕ್ಕಳು ಎಷ್ಟೊಂದು ಶ್ರದ್ದೆಯಿಂದ ನಾಗರಪೂಜೆಯನ್ನು ಪಾರಂಪರಿಕ ರೀತಿಯಲ್ಲಿ ಪೂಜಿಸುತ್ತಿದ್ದರೆಂಬುದನ್ನು ಚಾಚೂ ತಪ್ಪದಂತೆ ತಿಳಿಸುವದನ್ನು ಈ ಹಾಡಿನಲ್ಲಿ ಕಾಣಬಹುದು. ಹೀಗೆ ಬುಲಾಯಿ ಹಾಡುಗಳು ಅಂದಿನ ಸಂಪ್ರಾದಾಯ ಪರಂಪರೆಗಳ ಆಚರಣೆಗಳಿಗೆ ಹಿಡಿದ ಕನ್ನಡಿಯೆನಿಸುತ್ತವೆ.

ನಾಗರ ಪಂಚಮಿಯ ಸಂಪ್ರದಾಯದ ಆಚರಣೆಯಲ್ಲದೇ ಇನ್ನಿತರ ಪಾರಂಪರಿಕ ಆಚರಣೆಗಳನ್ನೂ ಸಹ ಬುಲಾಯಿ ಹಾಡುಗಳಲ್ಲಿ ಗುರುತಿಸಬಹುದಾಗಿದೆ.

ಪಾರಂಪರಿಕ ಆಚರಣೆಗಳು:

ಶಬ್ದ ಕೋಶಗಳಲ್ಲಿ ಸಂಪ್ರದಾಯವೆಂದರೆ ರೂಢಿ, ಆಚರಣೆ, ಪಾರಂಪರಿಕ ನಂಬಿಕೆ ಎಂಬ ಸಂವಾದಿ ಪದಗಳನ್ನು ಕಾಣಬಹುದು. ಸಂಪ್ರದಾಯಗಳಿಲ್ಲದೇ ಸಮಾಜವಿಲ್ಲ, ಸಂಸ್ಕೃತಿಯಿಲ್ಲ. ಅವು ಮಾನವ ಬದುಕಿನ ಉದ್ದಗಲಕ್ಕೂ ಹರಡಿಕೊಂಡಿರುವುದು ಕಂಡು ಬರುತ್ತದೆ. ಹೀಗಾಗಿ ಜಗತ್ತಿನಾದ್ಯಾಂತ ಎಲ್ಲಾ ಜನಾಂಗದವರು ತಮ್ಮದೇ ಆದ ರೀತಿಯಲ್ಲಿ ಸಂಪ್ರದಾಯಗಳ ಆಚರಣೆ ಮಾಡುವುದು ಕಂಡು ಬರುತ್ತದೆ. ತಲೆ ತಲಾಂತರಗಳಿಂದ ಬಂದ ಹಿರಿಯರ ಧಾರ್ಮಿಕ ಪರವಾದ ಆಚಾರ ವಿಚಾರ, ನಡೆ ನುಡಿಗಳನ್ನು ಚಾಚು ತಪ್ಪದೇ ಒಂದು ಕೇರಿ ಅಥವಾ ಒಂದು ಊರು ಅಥವಾ ಒಂದು ನಾಡಿನಲ್ಲಿ ವಾಸಿಸುವ ಜನಸಮೂಹವು ಒಟ್ಟುಗೂಡಿ ಆಚರಿಸುವಾಗ ಉಂಟಾಗುವ ಸಂಸ್ಕೃತಿಯ ಮೊತ್ತವನ್ನು ಸಂಪ್ರದಾಯ ಎಂದು ಕರೆಯಬಹುದೆಂಬುದು ವಿದ್ವಾಂಸರ ಅಭಿಪ್ರಾಯ. ಭಾರತದಲ್ಲಿ ಪ್ರಮುಖವಾಗಿ ಎರಡು ರೀತಿಯ ಸಂಪ್ರದಾಯಗಳ ಆಚರಣೆ ಕಂಡು ಬರುತ್ತದೆ. ವೇದಗಳಲ್ಲಿ ನಿರೂಪಿಸಿರುವಂತೆ ಮಂತ್ರೋಚ್ಚಾರಣೆ ಹೋಮ, ಯಜ್ಞಗಳನ್ನು ಮಾಡುತ್ತಾ ಷೋಡಶ ಸಂಸ್ಕಾರಗಳನ್ನು ಅನುಸರಿಸಿ ಮಾಡುವ ಆಚರಣೆಗಳು ಮತ್ತು ಜನಪದರು ತಮ್ಮ ಧಾರ್ಮಿಕ, ಸಾಮಾಜಿಕ ಪರಿಸ್ಥಿತಿಗನುಗುಣವಾಗಿ ಆಚರಿಸುವ ಜನಪದ ಸಂಪ್ರದಾಯಗಳು. ವೇದಗಳಲ್ಲಿ ನಿರೂಪಿಸಿರುವಂತೆ ಆಚರಿಸುವ ಜನಪದ ಸಂಪ್ರದಾಯಗಳಲ್ಲಿ ವೈವಿಧ್ಯತೆ ಕಂಡು ಬರುವದಿಲ್ಲ.ಮಂತ್ರ ಪಠನ, ಹೋಮ ಹವನ ಎಲ್ಲೆಡೆಗೂ ಏಕ ರೀತಿಯಾಗಿದ್ದು ಚಾಚೂ ತಪ್ಪದಂತೆ ಆಚರಿಸುವುದು ಕಂಡು ಬರುತ್ತದೆ. ಹೀಗಾಗಿ ಬುಲಾಯಿ ಹಾಡುಗಳಲ್ಲಿ ಕಂಡು ಬರುವ ಸಂಪ್ರದಾಯಗಳ ಆಚರಣೆಗಳನ್ನು ಹಾಡುಗಳ ಹಿನ್ನಲೆಯಲ್ಲಿ ವಿವರಿಸಲಾಗುವುದು.

ಐದೇಸಿ :

ಹೊನ್ನಮ್ಮನ ಹಾಡು, ನೀಲಕಂಠರಾಜನ ಹಾಡು ಮುಂತಾದವುಗಳಲ್ಲಿ ಐದೇಸಿ ಯ ಕುರಿತು ಪ್ರಸ್ತಾಪವಿರುವುದು ಕಂಡು ಬರುತ್ತದೆ.

ಒಂಬತ್ತು ತಿಂಗಳಿಗಿ ಹಡದಾಳ ನೀಲಮ್ಮ
ಗಣಸಮಗ ಪಡದಾಳ ಕೋಲೆಣ್ಣ ಕೋಲೆ
ಮೂರ ದಿನದ ಮೂರದೇಸಿ ಐದು ದಿನದ ಐದೇಸಿ
ಬಾರ ದಿನಕ ಬಾಲನ ತೊಟ್ಟಿಲು ಕೋಲೆಣ್ಣ ಕೋಲೆ [೮೭]

ಸಣ್ಣ ಬಸವಣ್ಣನ ಗುಡಿದಾಗ ರತ್ನಸಿಂಗ
ಮಗ ಹುಟ್ಟೆನೆ ಕೋಲೆಣ್ಣ ಕೋಲೆ
ಐದು ದಿನ ಐದೇಸಿ ಬಾರ ದಿನದಲ್ಲಿ
ತೊಟ್ಟಿಲ ಸರಬರಿ ಕೋಲೆಣ್ಣ ಕೋಲೆ [೮೮]

ಈ ಹಾಡುಗಳು ಬುಲಾಯಿ ಸಂಸ್ಕೃತಿಯ ಸಮಾಜದ ಸಂಸ್ಕಾರಗಳನ್ನು ತಿಳಿಸುವಂತಿವೆ. ಮಗು ಹುಟ್ಟಿದ ಐದನೇಯ ದಿನ ಮಗುವಿಗೆ ಕೊಡುವ ಮೊದಲ ಸಂಸ್ಕಾರವೆನ್ನಬಹುದು. ಹೆರಿಗೆಯಾದ ಐದು ದಿನಗಳವರೆಗೆ ಸೂತಕವೆಂದು ಇತರರು ಬಾಣಂತಿ ಮಗುವನ್ನು ಮುಟ್ಟಿಸಿಕೊಳ್ಳುತ್ತಿರಲಿಲ್ಲ. ಅಂದು ಸಾಮಾನ್ಯವಾಗಿ ಪ್ರಸೂತಿ ಮನೆಗಳಲ್ಲಿಯೇ ಸೂಲಗಿತ್ತಿಯರ ಸಹಾಯದಿಂದ ಮಾಡುತ್ತಲಿದ್ದರು. ಹೀಗಾಗಿ ಮನೆಯ ಪ್ರತ್ಯೇಕ ಕೋಣೆಯೊಂದರಲ್ಲಿ ಹೆರಿಗೆಯನ್ನು ಮಾಡಿ ಐದು ದಿನಗಳವರೆಗೆ ಅದೇ ಕೋಣೆಯಲ್ಲಿಡುತ್ತಿದ್ದರೆಂದು ತಿಳಿದು ಬರುತ್ತದೆ. ಇಂದು ಆಸ್ಪತ್ರೆಗಳಲ್ಲಿ ಹೆರಿಗೆಯಾಗುವದರಿಂದ ಅಂದಿನಂತಹ ಮಡಿ-ಮೈಲಿಗೆ-ಸೂತಕಗಳು ಅಷ್ಟಾಗಿ ಕಂಡು ಬರದಿದ್ದರೂ ಆ ರೀತಿಯ ಅನುಮಾನ ಪಡುವವರನ್ನು ಕಾಣಬಹುದು. ಅಂದು ಹೆರಿಗೆಯಾದ ಕೋಣೆಗೆ ಯಾರನ್ನು ಬಿಡುತ್ತಿರಲಿಲ್ಲವಂತೆ, ಬಹುಶಃ ಇಂದಿನ ವೈಜ್ಞಾನಿಕ, ವೈದ್ಯಕೀಯ ಕ್ಷೇತ್ರದ ಬೆಳವಣಿಗೆಯಲ್ಲಿರುವ ತೀವ್ರ ನಿಗಾಘಟಕಗಳಲ್ಲಿಯೂ ಸಹ ಸಾಮಾನ್ಯವಾಗಿ ಎಲ್ಲರನ್ನು ಒಳಗೆ ಬಿಡುವದಿಲ್ಲ. ಅಲ್ಲದೇ ಅಲ್ಲಿಯ ನಿಯಮಗಳನ್ನು ಅನುಸರಿಸಲಾಗುತ್ತದೆ. ಕಾರಣ ಸ್ವಚ್ಚತೆ, ಸೂಕ್ಷ್ಮಾಣುಗಳು ಬಾರದಂತೆ ನೋಡಿಕೊಳ್ಳುತ್ತಾರೆ. ಹಿಂದೆಯೂ ಇಂತಹದೇ ಕಾರಣಕ್ಕಾಗಿಯೇ ಮಗು- ಬಾಣಂತಿಯರು ಇರುವ ಸ್ಥಳಕ್ಕೆ ಯಾರನ್ನೂ ಬಿಡುತ್ತಿರಲಿಲ್ಲವೆನೋ ಎಂಬ ಉದ್ದೇಶವನ್ನು ಹೊಂದಿರಬಹುದು. ಅದಕ್ಕೆ ಅವರು ಮಡಿ-ಮೈಲಿಗೆಯ ರೂಪದಲ್ಲಿ ಅನುಸರಿಸುತ್ತಿರಬಹುದು. ಅಲ್ಲಿ ಮಡಿವಂತಿಕೆ ತನ್ನ ಪ್ರಭಾವ ಬೀರಿದ್ದನ್ನು ಕಾಣಬಹುದು. ಹೀಗಾಗಿ ಹೆರಿಗೆಯಾದ ಕೋಣೆಯಲ್ಲಿ ನಾಲ್ಕು ದಿವಸ ಯಾರನ್ನೂ ಬಿಡದೇ ಉಪಚರಿಸುವವರು ಮಾತ್ರ ಅಲ್ಲಿರುತ್ತಿದ್ದರಂತೆ. ಐದನೇಯ ದಿನ ಬೆಳಗ್ಗೆ ಬಾಣಂತಿ ಮತ್ತು ಮಗುವಿಗೆ ನೀರು ಹಾಕಿ ಅಲ್ಲಿಯ ಎಲ್ಲ ಬಟ್ಟೆ ಬರೆಗಳನ್ನು ಒಗೆದು ಮನೆ ಸಾರಿಸಿ ಶುದ್ಧಿಗೊಳಿಸುತ್ತಿದ್ದರು. ಅಲ್ಲಿಗೆ ಮೈಲಿಗೆ ಸೂತಕ ಕಳೆಯಿತು ಎಂಬುದು ಅವರ ತಿಳುವಳಿಕೆ. ಅಂದೇ ತಮ್ಮ ಧರ್ಮದ ಪ್ರಕಾರ ಮಗುವಿಗೆ ಮೊದಲನೇ ಸಂಸ್ಕಾರವನ್ನು ನೀಡುವುದು ಕಂಡು ಬರುತ್ತದೆ.

ಉದಾ: ವೀರಶೈವ-ಲಿಂಗಾಯತರಾಗಿದ್ದರೆ ಐನೋರನ್ನು ಕರೆಯಿಸಿ ಮನೆಯ ಪಡಸಾಲೆಯಲ್ಲಿ ಕುಳ್ಳಿರಿಸಿ ಬಾಣಂತಿ- ಮಗು ಇರುವ ಕೋಣೆಯಿಂದ ದಾರದ ಸುಸ್ತುರ(ಸೂತ್ರ) ಹಿಡಿದು ಆ ಮೂಲಕವೇ ಲಿಂಗಧಾರಣೆಯನ್ನು ಮಾಡಿಸುತ್ತಾರೆ. ಐನೋರ ಪಾದೋದಕದಿಂದ ಮತ್ತೊಮ್ಮೆ ಮನೆಯನ್ನೆಲ್ಲಾ ಸಿಂಪಡಿಸಿ ಶುದ್ಧಿಗೊಳಿಸುವುದು ಕಂಡು ಬರುತ್ತದೆ. ನಂತರ ಅವರಿಗೆ ಊಟ-ದಕ್ಷಿಣೆಯನ್ನಿತ್ತು ಕಳುಹಿಸುತ್ತಾರೆ. ಇತರರು ಐನೋರನ್ನು ಕರೆಸುವ ಸಂಪ್ರದಾಯವಿಲ್ಲ. ಅಂದು ಸಾಯಂಕಾಲ ಐದೇಸಿ ಮಾಡುತ್ತಾರೆ. ಅಂದರೆ ಕುದಿಸಿದ ಜೋಳ ಮತ್ತು ಗೋಧಿಯ ಕಡಬು, ಕಡ್ಲಿ ಪಲ್ಯ, ಹುಳಿ ಪಲ್ಲೆ, ಸಪ್ಪನ ಬ್ಯಾಳಿ, ಜೋಳದ ಬಾನ, ಅಂಬಲಿ ಮುಂತಾದವುಗಳನ್ನು ಮಾಡುತ್ತಾರೆ. ಮಗುವಿಗೆ ಹಳೆ ಬಟ್ಟೆಯಲ್ಲೊಂದು ಕುಲಾವಿ ಹಾಗೂ ಕುಂಚಿಯನ್ನು ಅಂದೇ ಹೊಲೆದು ಹೊಸ ಅಂಗಿ ತಂದು ಪೂಜಿಸುತ್ತಾರೆ. ಚೊಚ್ಚಿಲ ಬಾಣಂತನವಿದ್ದರೆ ಗಂಡನ ಮನೆಯವರು ಯೆಚ್ಚ ಮಾಡಲು ಅಂಟು, ಮೆಂತ್ಯೆ, ಸಬ್ಬಸ್ಸಗಿ, ಉಲುಲಿ(ಹುರುಳಿ)

ಮುಂತಾದವುಗಳನ್ನು ಕೊಟ್ಟು ಕಳುಹಿಸಿದ್ದನ್ನು ಐದೇಸಿ ದಿನವೇ ಪೂಜಿಸುತ್ತಾರೆ. ಅಂದು ಹೊರಸಿನ ನಾಲ್ಕು ಕಾಲಿಗೆ ಗೋಧಿ ಹಿಟ್ಟಿನಿಂದ ಮಾಡಿದ ಹಣತೆಗಳಲ್ಲಿ ದೀಪ ಹಚ್ಚಿಡುತ್ತಾರೆ. ಖಲ್‌ಬತ್ತಿ (ಖಲಗಲ್)ಗೆ ಹಾಗೂ ಒಂದು ಸಣ್ಣ ತೆಂಬಿಗೆಯಲ್ಲಿ ನೀರು ಹಾಕಿ ಮೇಲೆ ಒಂದು ಬಟ್ಟಲನಿಟ್ಟು **ಶೆಟಗೆವ್ವಾ** ಎಂದು ಪೂಜೆ ಮಾಡುತ್ತಾರೆ. ಖಲ್ ಬತ್ತಿ ಹಾಗೂ ಶೆಟಗೆವ್ವನ ತಂಬಿಗೆಯ ಮೇಲೂ ಒಂದೊಂದು ದೀಪವನ್ನು ಇಟ್ಟು ಮಗುವಿನ ಬಟ್ಟೆಗಳು, ಹಾಲುಗಡಗ(ತಾಮ್ರದ) ಇದ್ದರೆ ಶಟವಿ ರೂಪಗಳನ್ನು ಸಹ ಅಂದೇ ಪೂಜೆ ಮಾಡುತ್ತಾರೆ. ಅಂದು ರಾತ್ರಿಯ ಊಟಕ್ಕೆ ತಮಗೆ ಬೇಕಾದವರಿಗೆ ಹೆಚ್ಚಾಗಿ ಹಿರಿಯ ಹಾಗೂ ಬಸುರಿ ಹೆಣ್ಣು ಮಕ್ಕಳಿಗೆ ಕರೆಯುವುದು ವಿಶಿಷ್ಟವಾಗಿ ಕಾಣುತ್ತದೆ. ಸಾಯಂಕಾಲವೇ ಅಂತಹವರ ಮನೆಗಳಿಗೆ ಹೋಗಿ ಊಟಕ್ಕೆ ಹೇಳಿ ಬರುತ್ತಾರೆ. ಆಕಸ್ಮಾತ್ತಾಗಿ ಅವರ ಮನೆಗಳಲ್ಲಿ ಜವಳ ಕೂಸುಗಳಿದ್ದರೆ ಸುಮಾರು ಐದು ಮನೆಗಳಿಗಾದರೂ ಬಟ್ಟಲಲ್ಲಿ ಎಣ್ಣೆಯನ್ನು ಒಯ್ದು ಕೊಟ್ಟು ಉಣ್ಣಲು ಕರೆಯುವ ಸುಸಂಸ್ಕೃತಿ ಇನ್ನೂ ಬದುಕಿದೆ.

ಐದೇಸಿ ಊಟವನ್ನು ಎಲ್ಲರೂ ಮಾಡುತ್ತಾರೆಂದಿಲ್ಲ. ಕೆಲವರು ಅನುಮಾನ ಪಟ್ಟು ಮಡಿ-ಮೈಲಿಗೆ ಎಂದು ಬಾರದೇ ಇರುವದೂ ಕಂಡು ಬರುತ್ತದೆ. ಹೀಗಾಗಿ ಒಮ್ಮೆ ಹೇಳಿ ಕರೆದು ಬಂದರೆ ಪುನಃ ಮತ್ತೆ ಮತ್ತೆ ಕರೆಯಲು ಹೋಗುವದಿಲ್ಲ. ಒತ್ತಾಯದಿಂದ ಊಟಕ್ಕೆ ಹಾಕದೇ ಇಷ್ಟದಿಂದ ಊಟಕ್ಕೆ ಬಡಿಸುವುದು ಇದರ ಒಂದು ವಿಶಿಷ್ಟತೆ ಎನ್ನಬಹುದು. **ಊಟಕ್ಕೆಬರುವವರು ಬರಿಗೈಯಲ್ಲಿ ಬರದೇ ಕೈಯಲ್ಲಿ ಎಣ್ಣೆ ಬಟ್ಟಲು, ಊದಿನ ಕಡ್ಡಿಗಳನ್ನು ತೆಗೆದುಕೊಂಡು ಬರುತ್ತಾರೆ.** ಬಹುಶಃ ಅಂದು ಶಟವಿ ಬರುತ್ತಾಳೆಂದು ತಟ್ಟೆಯೂ ಮುಚ್ಚುವದಿಲ್ಲ. ಕಾರಣ ಇಡೀ ರಾತ್ರಿ ದೀಪ ಹಚ್ಚಿ ಬೆಳಕು ಮಾಡಿಡಲು ಅಥವಾ ಮಗುವಿನ ತಾಳಿಗೆಗೆ ಎಣ್ಣೆ ಹೂಯ್ಯಲೋ ಎಣ್ಣೆಯನ್ನು ತರುತ್ತಿದ್ದೀರಬಹುದು. ಎಣ್ಣೆ ತಂದ ಬಟ್ಟಲನ್ನು ಆಗಲೇ ವಾಪಸ್ಸು ಒಯ್ಯುವಂತಿಲ್ಲ. ಮರುದಿನ, ಅಥವಾ ಮತ್ತೇಂದಾದರೂ ಬಂದು ಒಯ್ಯಬೇಕು. ಅಂದು ಎಲ್ಲರ ಊಟ ಆದ ಮೇಲೆ ಅಂದು ಶೆಟವಿ ಬಂದು **ಮಗುವಿನ ಹಣೆ ಬರಹ**ವನ್ನು ಬರೆಯುತ್ತಾಳೆಂದು ಅವರಿರುವ ಕೋಣೆಯ ಬಾಗಿಲನ್ನು ಮುಚ್ಚದೇ ತೆರೆದಿಡುವ ಸಂಪ್ರಾದಾಯವೂ ಕಂಡು ಬರುತ್ತದೆ. ಹೀಗೆ ಮಗು ಹುಟ್ಟಿದ ಐದನೇಯ ದಿನದ ಬೆಳಗಿನಿಂದ ರಾತ್ರಿಯವರೆಗೆ ನಡೆಯುವ ಸರಬರಿಯ ಕಾರ್ಯವೇ **ಐದೇಸಿ** ಎಂದು ಕರೆಯಲ್ಪಡುತ್ತದೆ. ಇದು ಬೀದರ ಜಿಲ್ಲೆಯಲ್ಲಿ ಇಂದಿಗೂ ಕಂಡು ಬಂದರೂ ಹಳ್ಳಿಗಳಲ್ಲಿ ಮೇಲಿನಂತೆ ಹೆಚ್ಚು ಜನರನ್ನು ಕರೆಯುವದನ್ನು ಕಾಣಬಹುದು.

ಇಂದು ಆಸ್ಪತ್ರೆಗಳಲ್ಲಿ ಬಾಣಂತನವೋ, ಸಿಜೇರಿನೋ ಆಗುವದರಿಂದ ಈ ಸಂಪ್ರಾದಾಯದ ಆಚರಣೆಯಲ್ಲಿ ಬದಲಾವಣೆಯನ್ನು ಕಾಣಬಹುದು. ಮಗು- ಬಾಣಂತಿ ಆರೋಗ್ಯವಾಗಿದ್ದರೆ ಆಸ್ಪತ್ರೆಯಿಂದ ಮರು ದಿನ ಇಲ್ಲವೇ ಮೂರನೇ ದಿನಕ್ಕೆ ಮನೆಗೆ ಬಂದು ಈ ಕಾರ್ಯ ಮಾಡುವುದು ಕಂಡು ಬರುತ್ತಿದೆ. ಇನ್ನೂ ಸಿಜೇರಿನ್ ಆದರೆ ಹತ್ತೋ ಹನ್ನೆರಡು ದಿವಸಕ್ಕೆ ಮನೆಗೆ ಕರೆದುಕೊಂಡು ಹೋಗಿದ ದಿನವೇ ಈ ಕಾರ್ಯವನ್ನು ಮಾಡುವುದು

ಕಂಡು ಬರುತ್ತಿದೆ. ಊರು-ನಗರಗಳಲ್ಲಿ ಮನೆಯಲ್ಲಿಯೇ ಮಾಡಿಕೊಳ್ಳುವ, ಹಳ್ಳಿಗಳಲ್ಲಿ ಇತರರನ್ನು ಊಟಕ್ಕೆ ಕರೆದು ಹೆಚ್ಚಿನ ಪ್ರಮಾಣದಲ್ಲಿ ಮಾಡುವುದು ಕಂಡು ಬರುತ್ತದೆ. ಹೀಗೆ ಐದೇಸಿ ಎನ್ನುವುದು ಇಂದು ಐದನೇಯ ದಿನಕ್ಕೆ ಎಂದು ನಿರ್ಧಿಷ್ಟವಾಗಿರದೇ ಅನುಕೂಲಕ್ಕೆ ತಕ್ಕಂತೆ ಮಾಡುವದನ್ನು ಕಾಣಬಹುದು. ಒಟ್ಟಾರೆ ಅಂದಿನಂತೆ ಸಂಪ್ರಾದಾಯ ಬದ್ಧವಾಗಿ ಮಾಡುವುದು ಕಾಣದಿದ್ದರೂ ಈ ಆಚರಣೆಯನ್ನು ತಮ್ಮ ಅನುಕೂಲದಂತೆ ತಮಗಾದ ರೀತಿಯಲ್ಲಿ ಮುಂದೊರೆಸಿಕೊಂಡು ಹೋಗುವುದು ಮಾತ್ರ ಈ ಸಂಪ್ರಾದಾಯದ ಆಚರಣೆಯನ್ನು ಮರೆತಿಲ್ಲ ಎಂಬುದಕ್ಕೆ ಸಾಕ್ಷಿಯಾಗಿದೆ.

ಐದೇಸಿಯಾದ ಮೇಲೆ ಮುಂದಿನ ಕಾರ್ಯಕ್ರಮವೆಂದರೆ ತೊಟ್ಟಿಲಲ್ಲಿ ಹಾಕುವ ಸಮಾರಂಭವೆನ್ನಬಹುದು.

ತೊಟ್ಟಿಲಲ್ಲಿ ಹಾಕುವುದು :

ಹಾಡಿನಲ್ಲಿ ತಿಳಿಸಿರುವಂತೆ ಬಾಲನ ತೊಟ್ಟಿಲು ಬಾರ ದಿನಕೆ.ಅಂದರೆ ಗಂಡು ಮಗು ಹುಟ್ಟಿದರೆ ಆ ಮಗುವಿನ ನಾಮಕರಣ ಹನ್ನೆರಡನೇ ದಿವಸಕ್ಕೆ ನಡೆಸುವ ಸಂಪ್ರಾದಾಯ ಕಂಡು ಬರುತ್ತದೆ. ಹೆಣ್ಣು ಮಗುವಾದರೆ ಹದಿಮೂರನೆಯ ದಿವಸಕ್ಕೆ ತೊಟ್ಟಿಲಲ್ಲಿ ಹಾಕುವ ಶಾಸ್ತ್ರ ಮಾಡುತ್ತಿದ್ದುದ್ದು ಕಂಡು ಬರುತ್ತದೆ. ಆದರೆ ಈ ದಿನಗಳಲ್ಲಿ ಅನುಕೂಲವಾಗದಿದ್ದರೆ ಮುಂದೆ ತಮಗನುಕೂಲವಾದಾಗ ಪ್ರಸಕ್ತ ದಿನ ನೋಡಿ ತೊಟ್ಟಿಲಲ್ಲಿ ಹಾಕುವುದು ಕಂಡುಬರುತ್ತದೆ.

ಅಂದು ಬೆಳಿಗ್ಗೆ ಮಗು-ಬಾಣಂತಿಯರಿಗೆ ನೀರು ಹಾಕಿ ಒಳ್ಳೆಯ ಮೂರ್ತದಲ್ಲಿ ತೊಟ್ಟಿಲು ಪೂಜೆ ಮಾಡುತ್ತಾರೆ. ಇಂದು ಸಹ ತೆಂಬಿಗೆಯನ್ನಿಟ್ಟು ಶಟವಿಯ ಪೂಜೆಯನ್ನು ಮರೆಯದೇ ಮಾಡುತ್ತಾರೆ. ಅದು ತೊಟ್ಟಿಲ ಕೆಳಗೆ ತಮಗೆ ಬೇಕಾದ ಆಪ್ತರಿಷ್ಟರನ್ನು, ಬಂಧು ಬಳಗದವರನ್ನು ಊಟಕ್ಕೆ ಕರೆಯುತ್ತಾರೆ. ಹೆಣ್ಣು ಮಗಳ ಬಾಣಂತನವಾದರೆ ಅವಳ ಗಂಡನ ಮನೆಯವರೂ ಈ ಕಾರ್ಯಕ್ರಮಕ್ಕೆ ಸೊಸೆ-ಮಗುವಿಗೆ ಅಯ್ಯಾರಿ, ಬಂಗಾರ ತೆಗೆದುಕೊಂಡು ಬರುವದನ್ನು ಇತರೆ ಜಾನಪದ ಗೀತೆಗಳಲ್ಲಿ ಕಂಡು ಬರುತ್ತದೆ. ಆ ವೇಳೆಯಲ್ಲಿ ತೊಟ್ಟಿಲನ್ನು ಇಡಲು ಮನೆಯವರಷ್ಟೇ ಅಲ್ಲ, ಓಣಿಯವರನ್ನೆಲ್ಲಾ ಕರೆಯುವುದು ವಾಡಿಕೆ. ಒಂದೇ ಅಲ್ಲ ಎಲ್ಲಾ ಓಣಿಯವರಿಗೂ ತೊಟ್ಟಿಲು ಕಾರ್ಯಕ್ಕೆ ಕರೆಯುವುದು ಬುಲಾಯಿ ಹಾಡಿನಲ್ಲಿ ನೋಡಬಹುದು.

ಒಕ್ಕಲಗೇರೆಗೆ ಹೋಗ್ಯಾಳ ಹೊನ್ನಮ್ಮ
ಬಾಲನ ತೊಟ್ಟಲಕ ಬರರೆವ್ವ ಕೋಲೆಣ್ಣ ಕೋಲೆ
ಹಾರೂರಗೆರೆಗೆ ಹೋಗ್ಯಾಳ ಹೊನ್ನಮ್ಮ
ಕಂದನ ತೊಟ್ಟಿಲಕ ಬರರೆವ್ವ ಕೋಲೆಣ್ಣ ಕೋಲೆ
ಮುತ್ತೈದಿಯರು ಬಂದು ಭಾಳ ಹೊತ್ತಾಯ್ತು
ಬಾಲನ ತಾಯಿ ಬಾರೆ ಹೊರಗ ಕೋಲೆಣ್ಣ ಕೋಲೆ ”

ತೊಟ್ಟಿಲನ್ನು ನಡುಮನೆ ಅಥವಾ ಪಡಸಾಲೆಯಲ್ಲಿಡುವುದರಿಂದ ಬಂದಂತಹ ಮುತ್ತೈದೇರು ಬಾಣಂತಿಯನ್ನು ಹೊರಗೆ ಕರೆಯುವದನ್ನು ಗಮನಿಸಬಹುದು. ತೊಟ್ಟಿಲದ ಒಂದು ಕಡೆ ಬಾಣಂತಿಯನ್ನು ಮಗುವಿಗೆ ಕೊಟ್ಟು ಕುಳ್ಳಿರಿಸುತ್ತಾರೆ. ಮಗುವಿಗೆ ಯಾರಾದರೊಬ್ಬರು ಹೊಸ ಬಟ್ಟೆ ತೊಡಿಸುವರು. ತಾಯಿಗೆ ಸೀರೆ ಉಡಿಸುವರು. ದಂಡಿ ಕಟ್ಟಿ ಮಗುವನ್ನು ಅವಳ ಕೈಗೆ ಕೊಟ್ಟು ಉಡಿಯನ್ನು ತುಂಬುವರು. ಆ ವೇಳೆಯಲ್ಲಿಯೇ ಮತ್ತೆ ಯಾರಾದರೂ ಮಗುವಿಗೆ ಬಟ್ಟೆ, ಹಣ ಕೊಡುವದಿದ್ದರೆ ಕೊಡುತ್ತಾರೆ. ತೊಟ್ಟಲಿಗೆಂದು ಬಂದವರೆಲ್ಲಾ ಬಟ್ಟಲಲ್ಲಿ ಜೋಳ, ಅಕ್ಕಿ, ಗೋಧಿಯಲ್ಲಿ ಯಾವುದಾದರೊಂದು, ಒಳಗೆ ಬೆಳ್ಳೊಳ್ಳಿಗಳನಿಟ್ಟು ಕೊಂಡು ಬಂದು ಶೆಟವಿಯೆಂದಿಟ್ಟ ತಂಬಿಗೆಯ ಬದಿಯಲ್ಲಿ ಹಾಕುತ್ತಾರೆ.

ಬಟ್ಟೆ ಉಡುಗೊರೆಗಳಾದ ಮೇಲೆ ಮಗುವನ್ನು ತೊಟ್ಟಿಲಲ್ಲಿ ಹಾಕಲು ಮುತ್ತೈದೆಯರಿಗೆ ಬಾಗಿಣ ಕೊಡುತ್ತಾರೆ. ಅದು ವೀಳ್ಯದೆಲೆ ಮತ್ತು ಗುಗ್ಗರಿಯದ್ದಾಗಿರುತ್ತದೆ. ತೊಟ್ಟಿಲಿಗೆ **ಗುಗ್ಗರಿ** ಬೇಕು, ಅದು ಕಡ್ಡಾಯ. ಕಡಲೆ ಮತ್ತು ಗೋಧಿಗಳನ್ನು ಕೂಡಿಸಿ ಕುದಿಸಿ ಮಾಡಿದ ಗುಗ್ಗರಿ ಬಟ್ಟಲನ್ನು ತಂದ ಎಲ್ಲಾ ಹೆಣ್ಣು ಮಕ್ಕಳಿಗೆ ಅದರಲ್ಲಿ ಗುಗ್ಗರಿ ತುಂಬಿಯೇ ಕೊಡುತ್ತಾರೆ. ಇತರರಿಗೆ ಕೈಯಲ್ಲಿ ಕೊಡುತ್ತಾರೆ. ತೊಟ್ಟಿಲ ಕಾರ್ಯಕ್ಕೆ ಬಂದವರಿಗೆಲ್ಲಾ ಈ ಗುಗ್ಗರಿ ಹಂಚಿ ಕೊಟ್ಟು ಕಳುಹಿಸುವ ಸಂಪ್ರದಾಯ ಇಂದು ಕಂಡು ಬರುತ್ತದೆ. ತೊಟ್ಟಿಲಿಗೆ ಕರೆಯುವ ಗುಗ್ಗರಿ ಹಂಚುವದನ್ನು ಬುಲಾಯಿ ಹಾಡಿನಲ್ಲಿ ಹೀಗಿದೆ.

ವಾರಗಿ ಗೆಳದೆರು ನಾಗ ಹೆಂಡಲ್ಲದವರು
ಬಲ್ರಿಯೇ ತೊಟ್ಟಿಲ್ಲಿಗಿ ಕೋಲೆಣ್ಣ ಕೋಲೆ
ಐದ ಸೇರಿನ **ಗುಗ್ಗರಿ** ಹಂಚಿದಾರೆ
ಯಾರ ಮನಿಗಿ ಅವರೆ ಹೋಗಿದ್ದಾರೆ ಕೋಲೆಣ್ಣ ಕೋಲೆ [೬೦]

ಬಾಗಿಣ ತೆಗೆದುಕೊಂಡ ಮುತ್ತೈದೆಯರಲ್ಲಿ ಇಬ್ಬರು ಮೊದಲು ಮಗುವನ್ನು ತೆಗೆದುಕೊಂಡು ತೊಟ್ಟಿಲ ಮೇಲಿಂದ ಕೆಳಗಿಂದ ಒಬ್ಬರ ಕೈಯಲ್ಲಿ ಒಬ್ಬರು ಕೊಟ್ಟು ತೆಗೆದುಕೊಂಡು ಕೂಸನ್ನು ಆಡಿಸುತ್ತಾರೆ. ಆ ವೇಳೆಯಲ್ಲಿ **ಹಿಡಿಯೆವ್ವ ಸೂರ್ಯನ** ಎಂದು ಒಬ್ಬರಂದರೆ, ಮತ್ತೊಬ್ಬರು **ತಾರವ್ವ ಚಂದ್ರನ** ಎನ್ನುತ್ತಾರೆ. ಹೀಗೆ ಐದು ಸಲ ಬೇರೆ ಬೇರೆ ದೇವತೆಗಳ ಹೆಸರುಗಳನ್ನು ಹೇಳಿ ಕೂಸನ್ನು ಆಡಿಸಿ, ಒಬ್ಬರ ಕೈಯಿಂದ ಒಬ್ಬರಿಗೆ ಕೊಟ್ಟು ತೆಗೆದುಕೊಂಡು ಜೊತೆಯಾಗಿ ಇಬ್ಬರೂ ಆ ಮಗುವನ್ನು ತೊಟ್ಟಿಲಲ್ಲಿ ಮಲಗಿಸುತ್ತಾರೆ. ಅಲ್ಲಿಯವರೆಗೆ ಮೊದಲು ಮಗುವಿಗೆ ತೊಟ್ಟಿಲಲ್ಲಿ ಮಲಗಿಸುತ್ತಿರಲಿಲ್ಲ. ಆದರೆ ಇಂದು ಮಗು ಹುಟ್ಟಿದ ಕೂಡಲೇ ಆಸ್ಪತ್ರೆಗಳಲ್ಲಿ ತೊಟ್ಟಿಲಲ್ಲೇ ಮಲಗಿಸುವುದು ಕಂಡು ಬರುತ್ತಿದೆ. ಈ ತೊಟ್ಟಿಲ ಕಾರ್ಯವನ್ನು ಇಂದು ಮಾಡುವುದು ಕಂಡು ಬರುತ್ತದೆ. ಮಾಡುವ ರೀತಿ-ಸಂಪ್ರದಾಯ ಬದಲಾದರೂ ಇಂದು ಮೊದಲಿಗಿಂತ ತುಂಬಾ ಅದ್ಧೂರಿಯಾಗಿಯೇ ಮಾಡುವದನ್ನು ಕಾಣುತ್ತಿದ್ದೇವೆ. ಅದೊಂದು ಪ್ರತಿಷ್ಠೆಯೂ ಆಗಿ ಕಂಡು ಬರುತ್ತಲಿದೆ. ಎಲ್ಲಾ ಧರ್ಮದವರು ನಾಮಕರಣದ ಈ ಕಾರ್ಯಕ್ರಮ ತಮ್ಮದೇ ಆದ ರೀತಿಯಲ್ಲಿ ಅದ್ದೂರಿಯಿಂದಲೇ ಮಾಡುವುದು ಇಂದಿನ ರೀತಿಯೆನ್ನಬಹುದು.

ಮಗುವನ್ನು ತೊಟ್ಟಿಲಲ್ಲಿ ಹಾಕಿ ಜೋಗುಳದ ಪದಗಳನ್ನೇ ಹಾಡುವರು. ಅದರಲ್ಲಿ ಒಂದು ಸೋದರತ್ತೆಯ ಹಾಗೂ ಇನ್ನೊಂದು ಆಯಿ- ಮುತ್ತ್ಯಾನ ಹಾಡುಗಳು ಕಡ್ಡಾಯವಾಗಿರುವುದು ಇಂದಿಗೂ ಕಾಣುತ್ತೇವೆ. ಈ ಕಾರ್ಯದಲ್ಲಿ **ಸೋದರತ್ತೆ**ಯದೇ ಹೆಚ್ಚಿನ ಪಾತ್ರವಿರುತ್ತದೆ. ಸೋದರತ್ತೆಯೇ ಮಗುವಿಗೆ ಹೆಸರಿಡಬೇಕು. **ಆ ಚಾಜ** ಅವಳಿಗೆ ಮಾತ್ರ ಎನ್ನಬಹುದು. ಹಾಡು, ಹಾಡುವಾಗ ಬಾಗಿಣ ತೆಗೆದುಕೊಂಡ ಮುತ್ತೈದೆಯರು ಮಗುವಿನ ತಾಯಿ ಮತ್ತೆ ಬೇಕಾದವರು ತೊಟ್ಟಿಲನ್ನು ಹಿಡಿದು ಮೆಲ್ಲನೆ ತೂಗುತ್ತಿರುತ್ತಾರೆ. ಎಲ್ಲರಿಗೂ ಹಿಡಿಯಲು ಆಗದಿದ್ದರೆ ಒಬ್ಬರ ಕೈಗೆ ಮತ್ತೊಬ್ಬರು ಹಿಡಿದು ತೂಗುವುದು ಕಾಣಬಹುದು. ಹೀಗೆ ಹಾಡುಗಳು ಮುಗಿದ ಮೇಲೆ ಸೋದರತ್ತೆ ಮತ್ತೊಬ್ಬ ಮುತ್ತೈದೆಯರು ಮಗುವಿನ ಹೆಸರಿಡುತ್ತಾರೆ. ಆ ವೇಳೆಯಲ್ಲಿ ಉಳಿದ ನಾರಿಯರೆಲ್ಲಾ ಅವರ ಬೆನ್ನಿನಲ್ಲಿ ಗುದ್ದುತ್ತಾರೆ. ಅದೊಂದು ಸಂತೋಷದ ಗುದ್ದು ಎನ್ನಬಹುದು. ಹೆಸರಿಡುವಾಗಲೂ ಮೊದಲು ಮನೆಯ ಗುರುವಿನ, ದೇವರ ಹೆಸರಿಟ್ಟು ನಂತರ ತಮಗೆ ಬೇಕಾದ ಹೆಸರಿಡುವುದು ತುಂಬಾ ಮಹತ್ವದ್ದೆನಿಸುತ್ತದೆ. ಅಂದರೆ ಇಲ್ಲಿ ಮೊದಲು ಗುರು ಹಾಗೂ ದೇವರನ್ನು ನೆನೆಯುತ್ತಲೇ ಮುಂದಿನದನ್ನು ನಡೆಸುವುದು ಇವರ ಭಕ್ತಿ- ಮುಗ್ಧತೆಗಳನ್ನು ಸೂಚಿಸುತ್ತವೆ.

ಇಷ್ಟೇಲ್ಲಾ ಮುಗಿದ ಮೇಲೆ ಕೊನೆಯಲ್ಲಿ ಎಲ್ಲರೂ ಕುಳಿತು ಬಾಣಂತಿಯ ಎದುರಿನ ನೆಲದ ಮೇಲಿಟ್ಟ ಆರತಿಯನ್ನು ತಿರುಗಿಸುತ್ತ ಮಂಗಳಾರತಿ ಹಾಡನ್ನು ಹಾಡುತ್ತಾರೆ. ಅದಾದ ನಂತರ ಕಮಾಯಿಕೇಡ ಎಂದರೆ ಸಣ್ಣ ತಂಬಿಗೆಯನ್ನಿಟ್ಟು ಶೆಟವಿಯೆಂದು ಪೂಜೆ ಮಾಡುವ ಆ ತಂಬಿಗೆಯ ಮೇಲೆ ದೀಪ ಹಚ್ಚಿ ನೆಲದಿಂದ ಅವಳ ತಲೆಗೆ ಒಯ್ಯುತ್ತ **ಹಾಲ ಕೊಡ ತುಪ್ಪದ ಕೊಡ ಎಣ್ಣೆ ಕೊಡ ಬೆಣ್ಣೆ ಕೊಡ ಎಂದು ಗಂಡನ ಹೆಸರು ಹೇಳಿ ಗಂಡ ಮಾಡಿದ ಕಮಾಯಿ ಕೊಡ ಹಳ್ಳುಗದಾ ಒಜ್ಜಿಯದ ?** ಎಂದು ಕೇಳುವರು. ಆಗ ಸಾಮಾನ್ಯವಾಗಿ ಅವಳು ಹಳ್ಳುಗದಾ ಎಂದೇ ಹೇಳುವುದು ಕಂಡು ಬರುತ್ತದೆ. ಇಲ್ಲಿ ಕಮಾಯಿ ಕೊಡ ಎಂದರೆ ಗಳಿಕೆಯ ಕೊಡ, ತುಂಬಿದ ಕೊಡ ಪೂರ್ಣತೆಯ ಸಂಕೇತ. ಹಾಲು- ತುಪ್ಪ, ಎಣ್ಣೆ-ಬೆಣ್ಣೆ ಇವುಗಳಿಂದ ತುಂಬಿದ್ದು ಎಂದರೆ ಮಾತೃತ್ವದ, ಸಮೃದ್ಧಿಯ ಸಂಕೇತವಾಗಿರಬಹುದು. ಗಂಡನಿಂದ ದೊರೆತ ತಾಯಿಯಾಗುವ ಭಾಗ್ಯವು ಸಂತೋಷದಾಯಕವಾಗಿದೆಯೇ(ಹಳ್ಳು) ಅಥವಾ ಭಾರವಾಗಿದೆಯೇ(ಒಜ್ಜಿ) ಎಂದು ಒಗಟಿನಲ್ಲಿ ಕೇಳಿದಂತೆ ಕಂಡು ಬರುತ್ತದೆ. ಹೀಗೆ ಸಂಪ್ರದಾಯವು ಬದುಕಿನ ವಿವಿಧ ಅರ್ಥಗಳನ್ನು ಪ್ರತಿಬಿಂಬಿಸುವ ಅಂಶವೆನ್ನಬಹುದು.

ತೊಟ್ಟಿಲಲ್ಲಿ ಹಾಕುವುದು ಇಂದು ಎಲ್ಲಾ ಧರ್ಮಗಳ ಸಂಪ್ರದಾಯವಾಗಿದ್ದು, ಅದು ಎಲ್ಲೆಡೆಗೂ ಕಂಡು ಬಂದರೂ ಇಂದಿಗೂ ಬೀದರ ಜಿಲ್ಲೆಯಲ್ಲಿ ಮಾತ್ರ ತುಂಬಾ ವಿಶಿಷ್ಟವಾಗಿದೆ ಎನ್ನಬಹುದು. ಆ ವೇಳೆಯಲ್ಲಿ ಹಾಡುವ ಹಾಡುಗಳು ತುಂಬಾ ಅರ್ಥಪೂರ್ಣವಾಗಿರುವುದು ಗಮನಾರ್ಹ. ಅಲ್ಲಿ ಸಂಬಂಧಿಗಳು, ಬಂಧುಗಳು ಉಡುಗೊರೆ ಮುಂತಾದ ಅಂಶಗಳನ್ನು ಗುರುತಿಸಬಹುದು. ಇಂದಿಗೂ ಇಂತಹ ಹಾಡುಗಳನ್ನು ನಾವು ಕೇಳಬಹುದಾಗಿದೆ.

ಮೈನೆರೆಯುವುದು:

ಮಗು ದೊಡ್ಡದಾಗಿ ಬೆಳೆಯುತ್ತ ಹೋದಂತೆ ಅದರಲ್ಲಿ ದೈಹಿಕ ಬದಲಾವಣೆಗಳು ಆಗುತ್ತಲೇ ಇರುತ್ತವೆ. ಹೆಣ್ಣು ಹುಡುಗಿಯರು ಹನ್ನೊಂದು- ಹನ್ನೆರಡು ವರ್ಷದವರಾದಾಗ ದೈಹಿಕ ಬದಲಾವಣೆಗಳು ಕಂಡು ಬರುತ್ತವೆ. ಸಾಮಾನ್ಯವಾಗಿ ಹನ್ನೆರಡರಿಂದ-ಹದಿನಾಲ್ಕು ವರ್ಷಗಳಲ್ಲಿ ಹೆಣ್ಣು ಮಕ್ಕಳು ಮೈನೆರೆಯುವದನ್ನು ಕಾಣಬಹುದು. ಮೈ-ನೆರೆ= ಮೈತುಂಬು, ಪಕ್ವತೆ ಉಂಟಾಗು ಎಂಬರ್ಥ ಧ್ವನಿಪೂರ್ಣವಾಗಿ ಕಾಣುತ್ತದೆ. ಗ್ರಾಮೀಣ ಪ್ರದೇಶದಲ್ಲಿ ದೊಡ್ಡಕಿ ಆಗ್ಯಾಳ, ಶಾಣ್ಯಾಕಿ ಆಗ್ಯಾಳ ಎಂದೂ ಹೇಳುತ್ತಾರೆ. ಬುಲಾಯಿ ಹಾಡುಗಳಲ್ಲಿಯೂ ಮೈನೆರೆದ, ದೊಡ್ಡವಳಾಗ್ಯಾಳ ಎಂಬ ಪದಗಳನ್ನು ಕಾಣಬಹುದು.

ಹೊನ್ನಮ್ಮ **ಮೈನೆರೆದು** ಇಂದಿಗೆ ಹನ್ನೆರಡು ವರುಷ
ಹೊನ್ನಮ್ಮಗ ಮಕ್ಕಳು ಇಲ್ಲವೇ ಶಿವನೇ ಕೋಲು ಕೋಲ
ಹೊನ್ನಮ್ಮಗ ಮಕ್ಕಳು ಇಲ್ಲವೇ ಶಿವನೇ
ಅನ್ನದಾನ ಮಾಡಬೇಕು ಅರಸ ಕೋಲು ಕೋಲ [೯೧]

ಲಗ್ನವಾದ ಮೂರು ತಿಂಗಳಿಗಿ ದೊಡ್ಡವಳಾಗ್ಯಾಳ
ಸೋಬಾನ ಮಾಡಬೇಕ್ರಿ ಧರಾಂಧುರಿ ಕೋಲ [೯೨]

ಹೆಣ್ಣು ಮಗುವನ್ನು ಪಡೆಯಲು ಅರ್ಹಳು ಎಂಬುದನ್ನು ಅವಳು ಋತುಮತಿಯಾಗುವದರಿಂದಲೇ ನಿರ್ಧರಿಸುತ್ತದೆ. ಹೀಗಾಗಿ ಹೆಣ್ಣು ಮಗಳು ಮೈನೆರೆಯುವುದೆಂದರೆ ಅದೊಂದು ಸಂಭ್ರಮ, ಸಂತಸದ ಪ್ರಸಂಗ. ಈಸಂತೋಷವನ್ನು ಸಂಭ್ರಮದಲ್ಲಿ ಹಂಚಿಕೊಳ್ಳುವ ಸಂಪ್ರಾದಾಯವನ್ನು ಕಾಣಬಹುದು. ಹೆಣ್ಣು ಮಗಳು ಮೈನೆರೆದಾಗ ಅವಳನ್ನು ಒಂದೆಡೆಗೆ ಕುಳ್ಳರಿಸಿ, ಮುತ್ತೈದೆಯರನ್ನು ಕರೆಯಿಸಿ, ಮದುವೆಯಲ್ಲಿ ಹಚ್ಚುವಂತೆ ಕಳಕಿಯ (ಜೋಳದ) ದಂಟಿಗೆ ಬೀಳ್ಯದೆಲೆಯನ್ನು ಕಟ್ಟಿ ಎಣ್ಣು ಹಚ್ಚುವರು. ಹೆಣ್ಣಿನ ಸಂಭ್ರಮ ಪ್ರಾರಂಭವಾಗುವುದೇ ಇಲ್ಲಿಂದ ಎನ್ನಬಹುದು. ಇಲ್ಲಿ ಸಹ ಮುತ್ತೈದೆಯರು ಎಣ್ಣೆ ಹಚ್ಚುವ ಹಾಡಗಳನ್ನು ಹಾಡಿ ಎಣ್ಣೆ ಹಚ್ಚುವರು. ನಂತರ ನೀರನ್ನು ಹಾಕುವಾಗ ಮನೆಯಲ್ಲಿಯ ಹಿರಿಯರೋ, ಸೋದರತ್ತೆಯೋ ಅಥವಾ ತಾಯಿಯೋ ಅವರಿಗೆ ಎರೆಯುವರು. ಅದಕ್ಕೆ **ಮುಟ್ಟೆರೆಯುವುದು** ಎನ್ನುವರು. ಅಂದರೆ ಅವಳನ್ನು ಒಂದೆಡೆ ಕುಳ್ಳರಿಸಿದಾಗ ಯಾರೂ ಮುಟ್ಟುವದಿಲ್ಲ. ಹೀಗಾಗಿ ಅವಳನ್ನು ಮುಟ್ಟಿ ಎರೆಯುವದಕ್ಕಾಗಿ ಆ ರೀತಿ ಕರೆಯುತ್ತಿರಬಹುದು. ಏಕೆಂದರೆ ಮುಂದೆ ಈ ರೀತಿ ಮುಟ್ಟೆರೆದವರಿಗೆ ಅವಳ ಮದುವೆಯಲ್ಲಿ ಗಂಡನ ಮನೆಯವರು ಸೀರೆ ಉಡಿಸುವ ಸಂಪ್ರದಾಯವೂ ಇತ್ತೆಂದು ಹೇಳುವುದು ಗಮನಾರ್ಹವಾಗಿದೆ. ಇಂದು ಈ ರೀತಿಯಾಗಿ ಮುಟ್ಟದೇ ಕೂಡಿಸುವದಾಗಲಿ, ಎಣ್ಣೆ ಹಚ್ಚಿ ಎರೆಯುವುದಾಗಲಿ, ಅಷ್ಟೇ ಏಕೆ ಹೆಣ್ಣು ಮಗಳು ದೊಡ್ಡವಳಾದ ವಿಷಯವೇ ಯಾರಿಗೂ ತಿಳಿಸದಂತಹ ಸ್ಥಿತಿಯನ್ನು ಕಾಣುತ್ತಿದ್ದೇವೆ. ಏಕೆಂದರೆ ಅಂದಿನಂತೆ ಇಂದು

ಅದರ ಬಗ್ಗೆ ಸಂಭ್ರಮ, ಸಂತಸ ಪಡುವ ಸಂದರ್ಭ ಎಂದು ಭಾವಿಸುವದಿಲ್ಲ. ಕಾರಣ ವೈಜ್ಞಾನಿಕ ಮನೋಭಾವ, ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವಗಳಿಂದ ತಂದೆ- ತಾಯಿಗಳೇ ಅದೊಂದು ನೈಸರ್ಗಿಕ ಕ್ರಿಯೆ ಎಂದು ಭಾವಿಸುವಾಗ ಈ ಸಂತಸ ಸಂಭ್ರಮಗಳು ಎಲ್ಲಿ ಕಾಣಬೇಕು? ಹೀಗಾಗಿ ಈ ಸಂಪ್ರದಾಯವು ನಮ್ಮಲ್ಲಿ ಮರೆಯಾಗುತ್ತಿರುವಂತೆ ಭಾಸವಾದರೂ, ಇನ್ನೂ ಕೆಲವೊಂದು ಸಂಪ್ರದಾಯಸ್ಥ ಕುಟುಂಬಗಳಲ್ಲಿ ಇಂತಹ ಸಂಭ್ರಮವನ್ನು ಕಾಣಬಹುದು.

ಹೀಗೆ ಎಣ್ಣೆ ಹಚ್ಚಿ ಎರೆದ ಮೇಲೆ ಮನೆಯ ಅಗಸತಿ ಕೊಟ್ಟ ಸೀರೆಯನ್ನೇ ಅವಳು ಉಡುವ ರೂಢಿ. ಐದು ದಿವಸಗಳಾದ ಮೇಲೆ ಮತ್ತೆ ನೀರೆರೆದು ಮೈಲಿಗೆ ತೆಗೆದು ಮನೆಯಲ್ಲಿ ಕರೆದುಕೊಳ್ಳುವುದು ಕಂಡು ಬರುತ್ತದೆ. ಆ ಐದು ದಿನ ಅವಳಿಗೆ ಕೊಬ್ಬರಿ-ಸಕ್ಕರೆ-ತುಪ್ಪವನ್ನು ಕಡ್ಡಾಯವಾಗಿ ಕೊಡುವರು. ಮೈನೆರೆದ ದಿನ ಎಳ್ಳು-ಬೆಲ್ಲದಿಂದ ತಯ್ಯಾರಿಸಿದ ಎಳ್ಳುಚಿಗಳಿ ಅವಳಿಗೆ ಹಾಗೂ ಆ ವೇಳೆಯಲ್ಲಿ ಬಂದಂತಹ ಎಲ್ಲರಿಗೂ ಹಂಚುವ ಪದ್ದತಿಯೂ ಕಂಡು ಬರುತ್ತದೆ. ಎಣ್ಣೆ ಹಚ್ಚಿದ ಮುತ್ತೈದೆಯರಿಗೆ ಹಾಗೂ ಬೇಕಾದವರಿಗೆ ಶ್ಯಾವಿಗೆ ಹುಗ್ಗಿ,ಅನ್ನ, ಸಾರು ಮಾಡಿ ಊಟಕ್ಕೆ ನೀಡುವುದುಂಟು. ಮೈನೆರೆದವಳಿಗೆ ನೆಂಟರು ಬಂದು- ಮಿತ್ರರೆಲ್ಲಾ ಊಟಕ್ಕೆ ತಂದು ಕೊಟ್ಟು ಉಡುಗೊರೆಯಲ್ಲಿ ಸೀರೆ, ಕುಬ್ಬಸ, ಹಣ್ಣುಗಳನ್ನು ಕೊಡುವ ಸಂಪ್ರದಾಯ ಕಾಣಬಹುದು. ಹೀಗೆ ಐದು, ಒಂಬತ್ತು, ಹನ್ನೊಂದು ಅಥವಾ ಹದಿನಾರು ದಿವಸಗಳವರೆಗೆ ಈ ರೀತಿಯ ಸಂಭ್ರಮವನ್ನು ಮಾಡುತ್ತಿದ್ದುದು ನೆನೆಪಿಸಿಕೊಳ್ಳಬಹುದು.

ಹಿಂದೆ ಸಾಮಾನ್ಯವಾಗಿ ಬಾಲ್ಯವಿವಾಹವಾಗುತ್ತಿದ್ದರಿಂದ ಮದುವೆಯಾದ ಮೇಲೆ ಅವಳು ಮೈನೆರೆಯುವುದು. ಹೀಗಾಗಿ ಆಗಲೇ ಅವಳ ಸೋಬಾನೆಯ ಕಾರ್ಯವನ್ನಿಟ್ಟುಕೊಳ್ಳುವುದು ಕಂಡು ಬರುತ್ತದೆ. ಅದಕ್ಕೆಂದೆ ಅವಳು ದೊಡ್ಡವಳಾದಾಗಿನಿಂದ ಅವಳ ಜೊತೆಯಲ್ಲಿ ಒಂದು ಕಟ್ಟಿಗೆ ಗೊಂಬೆಯನ್ನು ಕೊಡುವುದು ಕಂಡು ಬರುತ್ತದೆ. ಅದು ಫಲವಂತಿಕೆಯ ಸಂಕೇತವಾಗಿದ್ದಿರಬಹುದು. ಮುಂದೆ ಅವಳಿಗೆ ಎರಡು ಅರಿಸಿಣ ತೊಳೆದ ಮೇಲೆಯೇ ಹೊರಗೆ ಅಡ್ಡಾಡಲು ಬಿಡುತ್ತಿದ್ದರು. ಆದರೆ ಇಂದು ಇಂತಹ ಕಟ್ಟು ನಿಟ್ಟಿನ ಆಚರಣೆಗಳು ಬೀದರ ಜಿಲ್ಲೆಯಲ್ಲಿಯೂ ಕಂಡು ಬರುತ್ತಿಲ್ಲ. ಏಕೆಂದರೆ ಶಾಲೆ-ಕಾಲೇಜಿಗೆ ಹೋಗುವ ಹೆಣ್ಣು ಮಕ್ಕಳು ಅಷ್ಟೊಂದು ದಿನ ಮನೆಯಲ್ಲಿ ಕೂಡಲು ಒಪ್ಪುವದಿಲ್ಲ. ಹೀಗಾಗಿ ಅಂತಹ ಆಚರಣೆಗಳೆಲ್ಲಾ ಸಡಿಲಾಗಿ ಸಂಭ್ರಮವಿಲ್ಲದ ಯಾಂತ್ರಿಕತೆಯ ಬದುಕು ಮೈಗೂಡಿಸಿಕೊಂಡದ್ದನ್ನು ಎಲ್ಲೆಡೆಗೂ ಕಾಣಬಹುದಾಗಿದೆ.

ಸಂಭ್ರಮವನ್ನು ಪಡುವವರು ಮುಂದಿನಂತೆ ಆಚರಣೆಗಳನ್ನು ಕೈಗೊಳ್ಳುವುದು ಕಂಡು ಬರುತ್ತದೆ. ಆ ಸಂದರ್ಭದಲ್ಲಿ ರಾತ್ರಿ ಅವಳನ್ನು ಅಲಂಕಾರ ಮಾಡಿ ಕುರ್ಚಿಯಲ್ಲೋ, ಮಂಟಪ ಹಾಕಿ ಅದರಲ್ಲೋ ಕೂಡಿಸಿ ಎಲ್ಲಾ ಹೆಣ್ಣು ಮಕ್ಕಳು ಊಟ ತಿಂಡಿ ಮುಗಿಸಿಕೊಂಡು ಹಾಡಲು ಕುಳಿತರೆ ರಾತ್ರಿ ೧೧-೧೨ ರ ವರೆಗೂ ಹಾಡುವುದು ಅವರ ಸಂಭ್ರಮವನ್ನು ಸೂಚಿಸುತ್ತದೆ. ಈ ವೇಳೆಯಲ್ಲಿ ಸೋಬಾನೆ ಎಂಬ ರೀತಿ ಹಾಡಿದರೂ ಅವುಗಳಲ್ಲಿ ಹಾಸ್ಯ-ವಿನೋದ,

ಗಂಭೀರವಾದ ತತ್ವ ವಿಷಯ,ಕಥನ ಕವನ, ಶರಣರ ಕಥೆ, ಪತಿವ್ರತೆಯರ ಕುರಿತು ಹಾಡ್ಗತೆಗಳು ಈ ಹಾಡುಗಳಿಗೆ ವಸ್ತುವಾಗಿರುವುದು ಕಾಣಬಹುದು. ಆದರೆ ಇಂದು ಹಾಡುವ ಸಂದರ್ಭವೇ ಸಿಗದಿದ್ದಾಗ ಇಂತಹ ಹಾಡುಗಳೂ ಹಾಡುತ್ತಿಲ್ಲ. ಕೂಡುವವರು ಇಲ್ಲ ಹಾಡುವವರು ಇಲ್ಲ ಎಂಬ ಪರಿಸ್ಥಿತಿ ಬಂದಿದೆ. ಇಲ್ಲಿ ಇಂತಹ ಸಂದರ್ಭದಲ್ಲಿ ಎಷ್ಟೋ ಹೆಣ್ಣು ಮಕ್ಕಳ ಕಟ್ಟಿ ಹಾಡುವ ಹಾಡುಗಳು, ಅವರ ಪ್ರತಿಭೆ ಇಂದು ಮರೆಯಾಗಿ ಅದು ಸಮಾಜಕ್ಕಾಗುವ ನಷ್ಟವೆನ್ನಬಹುದು. ಮಹಿಳೆಯರು ಮನಬಿಚ್ಚಿ ಹಾಡುವುದು ಇಂತಹ ಸಂಪ್ರಾದಾಯಗಳ ಆಚರಣೆಗಳಲ್ಲಿಯೇ. ಈ ಆಚರಣೆಗಳೇ ಇಲ್ಲದಾದಾಗ ಅಂತಹ ಹಾಡುಗಳೂ ಮರೆಯಾಗುತ್ತವೆ. ಅಂತೆಯೇ ಇಂದು ಎಷ್ಟೋ ಕಾರ್ಯಗಳಲ್ಲಿ ಹಾಡುವರು ಇಲ್ಲದ ಕಾರಣ ಟೇಪರೆಕಾರ್ಡ, ಕ್ಯಾಸೆಟ್ಟುಗಳನ್ನು ಬಳಸುವುದು ಕಂಡು ಬರುತ್ತಿದೆ. ಸಂಪ್ರಾದಾಯಗಳ ಆಚರಣೆಯಿಂದಲೇ ಎಷ್ಟೋ ಹಾಡುಗಳು ಹುಟ್ಟುತ್ತಿದ್ದವೆಂಬುದಂತೂ ನಿಜ ಎನ್ನಬಹುದು.

ಮದುವೆ:

ಮೈನೆರೆದ ಹೆಣ್ಣಿಗೆ ಮದುವೆ ಮತ್ತೊಂದು ಮಹತ್ವದ ಸಮಾರಂಭವಾದರೆ ಗಂಡಿಗೆ ಬಾಲ್ಯದ ಕೆಲವು ಪ್ರಸಂಗಗಳು ಬಿಟ್ಟರೆ ಇದೇ ಪ್ರಮುಖವಾದುದೆನ್ನಬಹುದು.

ಬುಲಾಯಿ ಹಾಡಿನಲ್ಲಿಯೂ ಆಗಿನ ಸಂಪ್ರದಾಯಬದ್ಧವಾಗಿ ನಡೆಯುವ ಮದುವೆಯ ಕೆಲವೊಂದು ಹಂತಗಳನ್ನು ಆಯಾ ಆಚರಣೆಗಳನ್ನು ಗುರುತಿಸಬಹುದಾಗಿದೆ.

ಮದುವೆಯ ಪ್ರಕ್ರಿಯೆಗಳು ಪ್ರಾರಂಭವಾಗುವುದು ಹೆಣ್ಣು ನೋಡುವದರಿಂದ. ಸಾಮಾನ್ಯವಾಗಿ ಆಗ ವಧು ವರರಿಗೆ ತಮ್ಮ ಸಂಗಾತಿಗಳನ್ನು ಆಯ್ದುಕೊಳ್ಳುವ ಸ್ವಾತಂತ್ರ್ಯವಿದ್ದಂತೆ ತೋರದು. ಹೀಗಾಗಿ ಕನ್ಯೆ ನೋಡಲು ಮದುವೆ ನಿಶ್ಚಯಿಸಲು ಹಿರಿಯರು, ಹಿತೈಷಿಗಳು ಹೋಗಿ ಬರುವ ಸಂಪ್ರದಾಯ ಕಂಡು ಬರುತ್ತದೆ. ತಮ್ಮ ಗೌರವಕ್ಕೆ ತಕ್ಕಂಥ ತಮ್ಮದೇ ಜಾತಿಯ ಮನೆತನದ ಹೆಣ್ಣು ನೋಡಲು ಆಪೇಕ್ಷಿಸುವುದು ಕಂಡು ಬರುತ್ತದೆ. ಇದನ್ನು ಈ ಹಾಡಿನಲ್ಲಿಯೂ ಕಾಣಬಹುದು.

ಕುಂಕುಮ ಹಚ್ಚುವುದು:

ಗುಣಸುಂದರಿಯ ಹಾಡಿನಲ್ಲಿ ಹೆಣ್ಣು ನೋಡುವುದು, ಕುಂಕುಮ ಕಾರ್ಯ ಮಾಡುವುದು ಹೀಗೆ ಚಿತ್ರಿಸಲಾಗಿದೆ.

ನಾಲ್ಕು ಮಂದಿ ಗುಮಾಸ್ತೇರು ಖಾತೆ ಲೆಕ್ಕಾ ಬರಿಯುವರೆ
ಹೋಗಿ ಹೆಣ್ಣಿನಾನೋಡಿ ಬರ್ರಿ ಕೋಲ
ಕುದುರ್ಯಾಗ ತಂದಾರ ಜೀನಾರಾ ಜಿಗದಾರ
ಲಗು ಮಾಡಿ ಹೊಡೆದಾರೆ ರತ್ನಾಪೂರಕ ಕೋಲ

ಲಗು ಮಾಡಿ ಹೊಡೆದಾರೆ ರತ್ನಾಪೂರ ಪಟ್ಟಣಕ
ಬಂದಿಳುದಾರಕ್ಕ ಒಂದೇ ಕ್ಷಣಕ ಕೋಲ
ಹೆಣ್ಣಿನ ಕರಸ್ಯಾರ ಕಣ್ಣೀಲಿ ನೋಡ್ಯಾರೆ
ಲೀಕ್ವಾಳ ನಮ್ಮ ಧರಿತಕ್ಕಾ ಕೋಲ
ಮಣವ ಸಕ್ರೇವ ತಂದು ಹೂವಿನ್ನಂತ ಸೀರೆವ
ತಂದು ಉಂಗರಿಟ್ಟೆ **ಕುಂಕುಮ ಹಚ್ಚ್ಯಾರ** ಕೋಲ [೯೩]

ಹೆಣ್ಣು ನೋಡುವುದು ತಮಗೆ ಇಷ್ಟವಾದರೆ ಕೂಡಲೇ ಸಕ್ಕರೆ ತರಿಸಿ ಸೀರೆ ಉಡಿಸಿ, ಉಂಗುರವಿಟ್ಟು ನಿಶ್ಚಯ ಮಾಡುತ್ತಿದ್ದರೆಂಬುದು ಗಮನಾರ್ಹವಾಗಿದೆ. ಅಲ್ಲಿ ವರನ ಇರುವಿಕೆ ಅಷ್ಟೊಂದು ಮಹತ್ವದ್ದಿರಲಿಲ್ಲವೆಂಬುದು ಕಂಡುಬರುತ್ತದೆ. ಆದರೆ ಇಂದು ಕುಂಕುಮ ಕಾರ್ಯಕ್ಕೆ ವರನನ್ನು ಕರೆಯಿಸಿಕೊಂಡು ಅವನಿಗೂ ಹೊದಕಿ ಕೊಡುವುದು ಬೆಳೆದು ಬಂದಿದೆ. ಇಂದು ಉಂಗುರವನ್ನು ಪರಸ್ಪರರು ತೊಡಿಸುವುದು ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವವೆನ್ನಬಹುದು. ಆದರೆ ಈ ರೀತಿಯ ಪದ್ಧತಿಗಳು ಬುಲಾಯಿ ಹಾಡುಗಳಲ್ಲಿ ಕಂಡು ಬರುವದಿಲ್ಲ. ಈಗಂತೂ ಈ ಕುಂಕುಮ ಹಚ್ಚುವ ಆಚರಣೆಯು ಒಂದು ಬಡವರ ಮದುವೆಗಿಂತಲೂ ಅದ್ದೂರಿಯಾಗಿ ಮಾಡುತ್ತಿರುವದನ್ನು ಕಾಣಬಹುದು. ಮದುವೆಯ ಮಂಗಳಸೂತ್ರ ಧಾರಣೆಯನ್ನು ಬಿಟ್ಟರೆ ಉಳಿದೆಲ್ಲವೂ ಅದರಂತೆ ನಡೆಯುವುದು ಕಂಡು ಬರುತ್ತಿದೆ. ಪಾಶ್ಚಾತ್ಯರ ಪ್ರಭಾವವೂ ತುಂಬಾ ಗೋಚರಿಸುತ್ತಿದೆ. ಈ ವೇಳೆಯಲ್ಲಿಯೂ ಕೇಕನ್ನು ಕತ್ತರಿಸುವ ಹೊಸ ಆಚರಣೆ ಇತ್ತೀಚಿಗೆ ಶ್ರೀಮಂತರಲ್ಲಿ ಕಂಡು ಬರುತ್ತಲಿದೆ. ಇಂದು ಈ ಕಾರ್ಯಕ್ರಮದಲ್ಲಿ ಆತ್ಮೀಯತೆ ಸ್ನೇಹ-ಪ್ರೀತಿಗಳಿಗಿಂತ ಆಡಂಬರ, ಪ್ರತಿಷ್ಠೆಗಳೇ ಎದ್ದು ಕಾಣುವಂತಿದೆ. ಆದರೆ ಹಿಂದಿನ ಸಂಪ್ರಾದಾಯದಲ್ಲಿ ಹಿರಿಯರಲ್ಲಿ ಭಯ-ಭಕ್ತಿ ತೋರುವುದು, ಸರಳತೆ, ಸಂಪ್ರೀತಿ, ಸತ್ಕಾರಗಳು ತುಂಬಿ ತುಳುಕುವದನ್ನು ಕಾಣಬಹುದು.

ಹಿಂದೆ ಮದುವೆಯ ಸಿದ್ಧತೆಗಳು ಮಾತ್ರ ಸುಮಾರು ದಿನಗಟ್ಟಲೇ ಎಲ್ಲಾ ನೆಂಟರಿಷ್ಟರು ಸೇರಿ ಮಾಡುವುದು ಕಂಡು ಬರುತ್ತದೆ. **ಒಳಕಲ್ಲು ಪೂಜೆ, ಬೀಸಕಲ್ಲು ಪೂಜೆ, ಹಾಲಗಂಬ ತಂದು ಹಂದರ ಹಾಕುವುದು** ಮುಂತಾದವುಗಳನ್ನು ಸಂಪ್ರದಾಯದಂತೆ ಮಾಡಲು ಕನಿಷ್ಟ ಐದು ದಿವಸಗಳವರೆಗಾದರೂ ಮದುವೆಯ ಆಚರಣೆಗಳು ನಡೆಯುತ್ತಿದ್ದುದು ಗಮನಾರ್ಹ. ಮದುವೆಗಾಗಿ ಕುಟ್ಟುವ,ಬೀಸುವ, ಬೀದಿ ಮನೆಗಳನ್ನು ಸ್ವಚ್ಚಗೊಳಿಸುವ ಕಾರ್ಯಗಳು ಎಷ್ಟು ಭರದಿಂದ ನಡೆಯುತ್ತಿದ್ದವೆನ್ನುದನ್ನು ಹಾಡಿನಲ್ಲಿಯೇ ತಿಳಿಯಬಹುದು.

ಖಂಡಾಗ ಕುಟ್ಟ್ಯಾರ ಖಂಡಾಗ ಬೀಸ್ಯಾರ
ಲಗ್ನವ ಮಾಡುಬೇಕ್ರಿ ಅಲಂಕಾರ ಕೋಲ
ಹಾದೀಗಿ ಹಂದ್ರವ ಹಾಕಿ ಬೀದಿಗೆ ಛಳಿಯವ ಕೊಟ್ಟು
ಲಗ್ನವ ಅಗ್ಯಾವರಿ ಶಂಕರ ಕೋಲ [೯೪]

ಹೀಗೆ ಲಗ್ನಕ್ಕೆ ಬೇಕಾಗುವ ಊಟದ ತಯ್ಯಾರಿಯನ್ನು ಸಾಕಷ್ಟು ಪ್ರಮಾಣದಲ್ಲಿ ಮಾಡಿಟ್ಟು ಕೊಳ್ಳುತ್ತಿದ್ದರೆಂಬುದು ಕಂಡು ಬರುತ್ತದೆ. ಜೊತೆಗೆ ಹಾದಿಗಿ ಹಂದರ, ಬೀದಿಗಳನ್ನೆಲ್ಲಾ ಸಾರಿಸಿ ಸ್ವಚ್ಚ ಮಾಡಿ ತಳಿರು ತೋರಣಗಳಿಂದ ಅಲಂಕರಿಸುವುದು ಸಹ ಕಡ್ಡಾಯವಾಗಿದ್ದಂತೆ ತೋರುತ್ತದೆ. ಅಂತೆಯೇ ಮದುವೆ ಮಾಡಿ ನೋಡು ಎಂದು ಹೇಳುತ್ತಿದ್ದಿರಬಹುದು.

ಭಾಸುಣಕಿ :

ಮದುವೆಯ ಸಿದ್ಧತೆಗಳೆಲ್ಲಾ ಮುಗಿದ ಮೇಲೆ ಮದುವೆಗೆ ಹಿಂದಿನ ದಿನ ಭಾಸುಣಕಿಯ ಕಾರ್ಯಕ್ರಮ ಮಾಡುವುದನ್ನು ಕಾಣಬಹುದು. ಬಹುಶಃ ಈ ಭಾಸುಣಕಿಯು ಬೀದರ ಜಿಲ್ಲೆಯಲ್ಲಿಯೇ ವಿಶಿಷ್ಟ ರೀತಿಯಲ್ಲಿರುವುದು ಗಮನಾರ್ಹವಾಗಿದೆ.

ಮಾಳಿಗಿ ಮನಿದಾಗ ಹೋಳಿಗಿ ನಡೆದಾವ
ಏನು ಕಾರಣ ಮನಿದಾಗ ಕೋಲ
ಮಾಳಿಗಿ ಮನಿದಾಗ ಹೋಳಿಗಿ ನಡದಾರ
ಮಗಳ ಮಾದೇವಿಯ ಭಾಸುಣಕಿ ಕೋಲ
ಛಪ್ಪರ ಮನಿದಾಗ ಹಪ್ಪಳ ಸಂಡಿಗೆ ನಡದಾವ
ಏನು ಕಾರಣವ್ವ ಮನಿದಾಗ ಕೋಲ
ಏನುನೇ ಕಾರಣವಿಲ್ಲ ಎಂತುನೆ ಕಾರಣಿಲ್ಲ
ಮಗಳ ಮಾದೇವಿಯ **ಭಾಸುಣಕಿ** ಕೋಲ [೯೫]

ಎಂಬಲ್ಲಿ ಭಾಸುಣಕಿಗೆ ಹೋಳಿಗೆ, ಹಪ್ಪಳ ಸಂಡಿಗೆಗಳ ಅಡುಗೆಯನ್ನು ಮಾಡುತ್ತಿದ್ದರೆಂಬುದನ್ನು ಕಾಣಬಹುದು. ಅಂದು ಮದುಮಗನನ್ನು, ಮದುಮಗಳ ಮನೆಗೆ ಕರೆ ತಂದು ರಾತ್ರಿ ವೇಳೆಯಲ್ಲಿ ವಧು-ವರರಿಗೆ ಹೊಸ ಬಟ್ಟೆ-ಸೀರೆಗಳನ್ನು ವಸ್ತು-ಒಡವೆಗಳನ್ನು ಇಟ್ಟು, ಇಬ್ಬರನ್ನು ಜೊತೆಯಲ್ಲಿ ಕೂಡಿಸುವುದು, ಆ ಸಂದರ್ಭದಲ್ಲಿ ಕೆಲವೊಂದು ಸಂಪ್ರದಾಯದ ಹಾಡುಗಳನ್ನು ಹಾಡುತ್ತಾರೆ. ಇಲ್ಲಿ ಆಚರಿಸುವ ಪ್ರತಿಯೊಂದು ಸಂಪ್ರದಾಯಕ್ಕೂ ಅದರದ್ದೇ ಆದ ಪ್ರತ್ಯೇಕ ಹಾಡುಗಳಿರುವುದು ಗಮನಾರ್ಹ. ಅಂತೆಯೇ ಇಂತಹ ಹಾಡುಗಳಿಂದಲೇ ಅಂದಿನ ಆಚಾರ-ವಿಚಾರ, ರೂಢಿ, ನಂಬಿಕೆ, ರೀತಿ-ಪದ್ಧತಿಗಳನ್ನು ತಿಳಿಯಬಹುದಾಗಿದೆ.

ಆದರೆ ಇಂದು ಇಂತಹ ಸಂಪ್ರದಾಯಗಳು ಮೊದಲಿನಂತೆ ಕಟ್ಟುನಿಟ್ಟಾಗಿ ಕಂಡು ಬರದಿದ್ದರೂ ಅಲ್ಲಲ್ಲಿ ಅವುಗಳನ್ನು ಕಾಣಬಹುದಾಗಿದೆ. ಅಂದಿನ ಸಾಂಪ್ರದಾಯಿಕ ಊಟ ಇಂದು ಮರೆಯಾಗಿ, ವಿವಿಧ ರೀತಿಯ ಅನ್ಯ ಭಕ್ಷ್ಯಗಳು ಕಂಡು ಬರುತ್ತಲಿವೆ. ಒಟ್ಟಾರೆ ಇಂದು ನಾವು ನಮ್ಮ ಸಂಸ್ಕೃತಿಯನ್ನು ಬಿಟ್ಟು ಅನ್ಯ ಸಂಸ್ಕೃತಿಯನ್ನು ಅಳವಡಿಸಿಕೊಳ್ಳುತಿರುವುದನ್ನು ಕಾಣಬಹುದಾಗಿದೆ.

ಭಾಸುಣಕಿಯ ದಿನ ಹಾಗೂ ಮರುದಿನ ಮದು ಮಕ್ಕಳಿಗೆ ಸುರಗಿಯಲ್ಲಿ ಎಣ್ಣೆ-ಅರಸಿಣ ಹಚ್ಚಿ ನೀರೆರೆಯುವುದು, ಉಡಿಯಕ್ಕಿ ಹಾಕಿ ಕಂಕಣ ಕಟ್ಟುವುದು ಮುಂತಾದ ಆಚರಣೆಗಳನ್ನು ನಡೆಸುತ್ತಿದ್ದರು. ಇವುಗಳನ್ನು ಈ ಹಾಡಿನಲ್ಲಿ ಕಾಣಬಹುದಾಗಿದೆ.

ಸುರಗ್ಯಾರ ಸುತ್ತರಿ ಅರಸಿಣ ಹಚ್ಚರಿ
ಸೀರಿ ಉಡಸರಿ ಕೋಲ
ಸೀರಿನೆ ಉಡಸರಿ ನೀಲಮ್ಮಗ
ಕುಬ್ಬಸ ತೊಡಸರಿ ಕೋಲ
ಸೀರಿನೆ ಉಡಸರಿ ಕುಬ್ಬಸ ತೊಡಸರಿ
ಮುತ್ತಿನುಡಿಯಕ್ಕಿ ಹೊಯಸರಿ ಕೋಲ
ಮುತ್ತಿನುಡಿಯಕ್ಕಿ ಹೊಯಸರಿ ನೀಲಮ್ಮಗ
ಕಂಕಣ ಕಟ್ಟರಿ ಕೈಯ್ಯಾಗ ಕೋಲ [೯೭]
ಖಂಡಗ ಕುಟ್ಟ್ಯಾರ ಖಂಡಗ ಬೀಸ್ಯಾರೆ
ರಾಮದೇವರಿಗಲ್ಲಿ ಅರಸೀಣ ಕೋಲ [೯೭]

ಈ ರೀತಿಯಾಗಿ ಮದುವೆಗಾಗಿ **ಹಾಲಗಂಬ ತರುವುದು, ಬಾಸಿಂಗ ತರುವುದು, ಐರಾಣಿ ತರುವುದು, ಎದುರು ನೀರು ತರುವುದು, ಮುತ್ತೈದೇರು ಮಾಡುವುದು, ಹಂದರದಲ್ಲಿ ಸಂಡಿಗೆ ಕಡಿಯುವುದು, ಕರಮಣಿ-ತಾಳ ಪೋಣಿಸುವುದು** ಮುಂತಾದವುಗಳನ್ನು ಸಂಪ್ರದಾಯ ಬದ್ಧವಾಗಿ ಚಾಚೂ ತಪ್ಪದೇ ಅಂದು ಮಾಡುತ್ತಿದ್ದರು. ಈಗ ಇವುಗಳಲ್ಲಿ ಅನುಕೂಲಕ್ಕೆ ಆದಷ್ಟು ಪದ್ಧತಿಗಳನ್ನು ಮಾಡುವುದು ಕಂಡು ಬರುತ್ತದೆ. ಅಂದು ಕುಂಬಾರನ ಮನೆಗೆ ಎಲ್ಲಾ ದಿನಸಿಗಳು ಹಾಗೂ ಬಟ್ಟೆಗಳನ್ನು ಮರದಲ್ಲಿಟ್ಟುಕೊಂಡು ಬಾಜಿಯೊಂದಿಗೆ ಹೋಗಿ **ಐರಾಣಿ ಕೊಡ**ಗಳನ್ನು ತರುವ ಸಂಪ್ರದಾಯವಿತ್ತು. ಆದರೆ ಇಂದು ಆ ಕುಂಬಾರನ ಮನೆ ಎಲ್ಲೋ ಏನೋ ಎಂಬಂತೆ, ಯಾವುದಾದರೊಂದು ಗುಡಿಯಲ್ಲಿ ಮೊದಲೇ ತಂದಿಟ್ಟ ಐರಾಣಿ ಕೊಡಗಳನ್ನು ತರುವ ಸಂಪ್ರದಾಯವು ಮಾತ್ರ ಕಾಣಿಸುತ್ತದೆ. ಸಂಪ್ರದಾಯಗಳನ್ನು ಸಂಪೂರ್ಣವಾಗಿ ಆಚರಿಸುವುದು ಕಂಡು ಬರದಿದ್ದರೂ, ಅವುಗಳ ಇನ್ನೊಂದು ರೀತಿಯ ಆಚರಣೆಗಳು ಕಂಡು ಬರುತ್ತವೆ. ಇದು ಸಾಮಾಜಿಕ, ರಾಜಕಿಯ, ಆರ್ಥಿಕ, ಸಾಂಸ್ಕೃತಿಕ ಬದಲಾವಣೆಗಳ ಪ್ರಭಾವವು ಸಂಪ್ರದಾಯಗಳ ಮೇಲಾಗಿ ಅವು ಸಹ ಬದಲಾದ ರೂಪಗಳಲ್ಲಿ ಆಚರಿಸುವುದು ಗಮನಾರ್ಹ.

ಹೀಗೆ ಹಲವಾರು ಬಿಧ, ಪದ್ಧತಿಗಳು ಮದುವೆಯಲ್ಲಿ ಕಂಡು ಬರುತ್ತವೆ. ಅವುಗಳಲ್ಲಿ ಮುಂದೆ ನಡೆಯುವುದು, **ಮಾಂಗಲ್ಯ ಧಾರಣೆ, ಅಕ್ಷತಾ ಹಾಗೂ ಧಾರೆ ಎರೆಯುವ ಆಚರಣೆಗಳು.** ಇದಾದ ನಂತರವು ಹಲವು ಸಂಪ್ರದಾಯಗಳು ಆಚರಿಸುತ್ತಾರೆ. ಅವುಗಳಲ್ಲಿ ಮದು ಮಕ್ಕಳಿಗೆ **ಆಟ ಆಡಿಸುವುದು, ಕೂಸು ಒಪ್ಪಿಸುವುದು, ಭೂಮಾ ತುಂಬುವುದು** ಮುಂತಾದವುಗಳು. ಹಂದರದಲ್ಲಿ ಆಡಿಸುವ ಆಟಗಳ ಕುರಿತಾದ ಬುಲಾಯಿ ಹಾಡು ಹೀಗಿದೆ.

ಹಸಿಯ ಹಂದರದಾಗ ಬುರಜಗುಅಯ ಮ್ಯಾಲ
ಸರಿ ಬೆಸಿಯಾಡ ಹೆಣ್ಣ ಮಗಳ ಕೋಲ [೯೮]

ಇನ್ನೊಂದು ಹಾಡಿನಲ್ಲಿ ಬುರಜಗುಲಿ, ಹಂದರಗಳ ಪ್ರಸ್ತಾಪ ಈ ರೀತಿಯಾಗಿದೆ.

ಬಂಗಾರ ಬುರಜಗುಲಿ ಬೆಳ್ಳಿಯ ಹಂದರ
ರಾಮದೇವರಿಗಲ್ಲಿ ಲಗ್ನವ ಕೋಲ [೯೯]

ಮದುವೆಯ ಕುರಿತಾದ ಇಂತಹ ಪ್ರಮುಖ ಪಾರಂಪರಿಕ ಆಚರಣೆಗಳು ಬುಲಾಯಿ ಹಾಡುಗಳಲ್ಲಿ ಗುರುತಿಸಬಹುದು. ಮದುವೆ ಎಷ್ಟು ಮುಖ್ಯವೆಂದರೆ ಸತ್ತ ಹೆಣಕ್ಕೂ ಸಹ ಮದುವೆಯ ಶಾಸ್ತ್ರ ಮುಗಿಸಿ ಶವ ಸಂಸ್ಕಾರ ಮಾಡುವುದು ಕಂಡು ಬರುತ್ತದೆ. 'ಕಾಳಿಂಗರಾಯನ ಹಾಡಿನಲ್ಲಿ' ಸತ್ತ ಕಾಳಿಂಗರಾಯನ ಜೊತೆ ಮದುವೆ ಮಾಡಲು ಹೊನ್ನ ಹೇಳಿಕೊಂಡು ಹೆಣ್ಣ ಹುಡುಕುವ, ಬಡುವ ಉಪಾಧ್ಯಾ ತನ್ನ ಮಗಳಿಗೆ ಹೆಣಕ್ಕೆ ಕೊಡಲು ಒಪ್ಪಿಕೊಂಡು ಮಗಳನ್ನು ಕಳುಹಿಸುವುದು ಕಂಡು ಬರುತ್ತದೆ.

ಹಾರೂರಗೇರ್ಯಾಗ ಬಡವ ಉಪಾಧ್ಯ ಹಾನ
ಮಗಳ ಚೆನ್ನಮ್ಮಗ ಕುಡತೆವು ಕೋಲೆಣ್ಣ ಕೋಲೆ
ಜೌಳಿಗಿಲಿ ಹೊನ್ನ ತೊಕೋಂಡ ಮನಿಗರೆ ಬಂದನೆ
ಸಾರಿ ಚೆನ್ನಮಗ ನಡಿ ಅಂತಾನೆ ಕೋಲೆಣ್ಣ ಕೋಲೆ
ಆಡ್ಯಾಡಿ ಚೆನ್ನಮ್ಮ ಓಡಿ ಒಳಯ್ಯಾಕ ಬಂದು
ಯಾಕೆ ಹಡದಮ್ಮ ದುಕಮಾಡಿ ಕೋಲೆಣ್ಣ ಕೋಲೆ
ನಿಮ್ಮಪ್ಪ ಬುದ್ದಿಗೇಡಿ ಹೊನ್ನಿಗಾಶವ ಮಾಡಿ
ಸತ್ತ ಹೆಣಕ ನಿನಗ ಕುಡುತಾರಂತ ಕೋಲೆಣ್ಣ ಕೋಲೆ [೧೦೦]

ಈ ಹಾಡಿನಲ್ಲಿ **ಮದುವೆ ಇಲ್ಲದೇ ಮೋಕ್ಷವಿಲ್ಲ** ಎಂಬ ಭಾವನೆಯಿಂದ ಸಿರಿವಂತ ತಂದೆ ತಾಯಿಗಳು ತಮ್ಮ ಮಗ ಸತ್ತರೂ ಆತನಿಗೆ ಮೋಕ್ಷ ದೊರಕಿಸಲು ಜೀವಂತ ಹೆಣ್ಣನ್ನು ಹೊನ್ನು ಕೊಟ್ಟು ತರುವುದು ಅನಿಷ್ಟ ಸಂಪ್ರಾದಾಯದ ಪರಾಕಾಷ್ಟೆ ಎನ್ನಬಹುದು. ಸಂಪ್ರದಾಯಕ್ಕಾಗಿ ಬಡತನದಲ್ಲಿರುವ ಹೆಣ್ಣಿನ ಬಾಳನ್ನು ಮಣ್ಣು ಪಾಲು ಮಾಡುವ ದಾರುಣ ಚಿತ್ರವು ಈ ಹಾಡಿನಲ್ಲಿ ಕಾಣಬಹುದು. ಸಂಪ್ರದಾಯ ಹೆಸರಿನಲ್ಲಿ ಹೆಣ್ಣನ್ನು ಬಲಿ ಕೊಡುವುದು ಬುಲಾಯಿ ಹಾಡುಗಳಲ್ಲಿ ಬಹಳಷ್ಟು ಕಂಡು ಬರುತ್ತವೆ. ಊರಿನ ಕೋಟೆಗಾಗಿ ಕೆರೆಗಾಗಿ, ಶೀಲಕ್ಕಾಗಿ, ಧರ್ಮಕ್ಕಾಗಿ ಹೀಗೆ ಹತ್ತು ಹಲವು ರೀತಿಯಲ್ಲಿ ಹೆಣ್ಣನ್ನು ಸಂಪ್ರದಾಯಗಳ ಹೆಸರಿನಲ್ಲಿ ಬಲಿ ಕೊಡುವುದು ಅನೇಕ ಹಾಡುಗಳಲ್ಲಿ ಗುರುತಿಸಬಹುದು. ಬುಲಾಯಿ ಹಾಡುಗಳಲ್ಲಿ ವೈಭವೀಕರಿಸಿ ಹೆಚ್ಚಾಗಿ ಸುಖಾಂತವನ್ನು ಮಾಡುವದರಿಂದ ಸತ್ತ ಕಾಳಿಂಗರಾಯನಂತೆ ಕೊನೆಯಲ್ಲಿ ಜೀವಂತವಾಗುವುದು ಕಂಡು ಬರುತ್ತದೆ.

ಒಟ್ಟಾರೆ ಮದುವೆ ಎಂಬುದು ಬುಲಾಯಿ ಸಂಸ್ಕೃತಿಯಲ್ಲಿ ಜೀವನದ ಪ್ರಮುಖ ಅಂಶವೆಂದು ಹೇಳಬಹುದು. ಹೀಗಾಗಿ ಇದಕ್ಕೆ ತುಂಬಾ ಮಹತ್ವ ನೀಡಿದಂತೆ ಕಂಡು ಬರುತ್ತದೆ. ಆದರೆ ಇಂದು ಮದುವೆ ವಿಧಿ-ವಿಧಾನಗಳಲ್ಲಿ ಬಹಳಷ್ಟು ಬದಲಾವಣೆಗಳು ಕಂಡು ಬರುತ್ತವೆ.

ಸೋಬನ:

ಮದುವೆಯ ನಂತರ ಸಂತಾನವ ಫಲ ಒದಗಲಿ ಎಂಬ ಶುಭ ಹಾರೈಕೆಯೇ ಸೋಬನವಾಗಿರಬಹುದು. ಆಗಿನ ಕಾಲದಲ್ಲಿ ಬಾಲ್ಯ ವಿವಾಹವಾಗುತ್ತಿದ್ದರಿಂದ ಹೆಚ್ಚಾಗಿ ಈ ಸಂಪ್ರದಾಯವು ಅವಳು(ಹೆಣ್ಣು) ಮೈನೆರೆದ ಮೇಲೆ ಗಂಡಿನ ಮನೆಯವರಿಗೆ ವಿಷಯ ತಿಳಿಸಿ ನಿಶ್ಚಯಿಸಿದ ಶುಭ ದಿನದಂದು ಅವರಿಬ್ಬರಿಗೆ ಹೊಸ ಬಟ್ಟೆಗಳನ್ನು ಕೊಟ್ಟು ಉಡಿ ತುಂಬಿ ಸೋಬಾನೆ ಪದಗಳನ್ನು ಹಾಡಿ ಆರತಿ ಮಾಡಿ ದಂಪತಿಗಳನ್ನು ಕೋಣೆಗೆ ಕಳುಹಿಸುವುದು. ಸೋಬನದ ಉದ್ದೇಶ ಮದುವೆಯಾದ ದಂಪತಿಗಳು ಒಂದುಗೂಡುವುದು, ಸಂತಾನವನ್ನು ಪಡೆಯುವುದು ಒಳ್ಳೆಯ ದಾಂಪತ್ಯ ಜೀವನಕ್ಕೆ ಅಡಿಪಾಯ ಹಾಕುವದಾಗಿ ಕಂಡು ಬರುತ್ತದೆ. ಅಂತೆಯೇ ಸೋಬನ ಸಂಪ್ರದಾಯವನ್ನು ತುಂಬಾ ಧರಾಂಧುರಿಯಾಗಿ ಆಚರಿಸುತ್ತಿದ್ದುದ್ದು ಬುಲಾಯಿ ಹಾಡಿನಲ್ಲಿ ಕಾಣಬಹುದು.

ಲಗ್ನವಾದ ಮೂರು ತಿಂಗಳಿಗಿ ದೊಡ್ಡವಳಾಗ್ಯಾಳ
ಗುಣಸುಂದರಿ ಸೋಬಾನ ಮಾಡಬೇಕ್ರಿ ಧರಾಂಧುರಿ ಕೋಲ

ಬಸುರ ಬಯಕೆ:

ಸೋಬಾನಾದ ಆರು ತಿಂಗಳಿಗಿ ಗರ್ಭನಾಗ್ಯಾಳ
ಗುಣಸುಂದರಿ ಆಕೆ ಆಗ್ಯಾಳರಿ ಭಾಳ ಶಾಲಾ ಕೋಲ [೧೦೧]

ಮದಿಯ ಆದ ಆರು ತಿಂಗಳಿಗಿ ಹೊನ್ನನ
ತಂಗಿ ನೀಲಮ್ಮ ಬಸರಾಳ ಕೋಲೆಣ್ಣ ಕೋಲೆ [೧೦೨]

ಒಂದು ಹೆಣ್ಣಿನ ಜೀವನದಲ್ಲಿ ವಧುವನ್ನು ನೋಡಿ ನಿಶ್ಚಯಿಸಿ ಮದುವೆಯಾಗಿ ಸೋಬಾನವಾಗುವವರೆಗೆ ಒಂದು ಘಟ್ಟವಾದರೆ, ಚೊಚ್ಚಲ ಗರ್ಭಿಣಿಯಾಗಿ ಗಂಡನ ಮನೆಯ ವಂಶ ಬೆಳೆಯಿಸುವ ಘಟ್ಟ ಮುಂದಿನದು. ಚೊಚ್ಚಲ ಗರ್ಭಿಣಿಗೆ ಮಾಡುವ ಕುಪ್ಪಸ ಕಾರ್ಯಕ್ರಮವು ಒಂದು ಸಂಪ್ರದಾಯ. ಈ ವೇಳೆಯಲ್ಲಿ ತವರು ಮನೆಯವರೇ ಎಲ್ಲಾ ಖರ್ಚು-ವೆಚ್ಚವನ್ನು ನಿಭಾಯಿಸಿ ಕಾರ್ಯಕ್ರಮವನ್ನು ಮಾಡುತ್ತಾರೆ. ಮಗಳಿಗೆ ಕುಪ್ಪಸ ಮಾಡುವವರೆಗೆ ತವರುಮನೆಗೆ ಕರೆದುಕೊಂಡು ಹೋಗಲು ಬಾರದು. ಹೀಗಾಗಿ ಬಸುರಿಯಾದ ಐದನೇ ತಿಂಗಳಿಗೆ ಈ ಆಚರಣೆ ಹೆಚ್ಚಾಗಿ ಕಂಡು ಬರುತ್ತದೆ. ಅನಾನುಕೂಲವಾದರೆ ಏಳು ಅಥವಾ ಒಂಬತ್ತನೆ ತಿಂಗಳಲ್ಲಿಯೂ ಇದನ್ನು ಮಾಡುವುದು ಕಾಣಬಹುದು. ಆ ವೇಳೆಯಲ್ಲಿ ಸಮೃದ್ಧಿಯ

ಸಂಕೇತವಾಗಿ ಹಸಿರು ಸೀರೆ, ಕುಬ್ಬಸ, ಬಳೆಗಳನ್ನು ತೊಡಿಸುವುದು ಸಂಪ್ರದಾಯ. ಈ ಸಂದರ್ಭದಲ್ಲಿಯೇ ಬಸುರಿಗೆ ಬಯಕೆ ಉಂಟಾಗುವದರಿಂದ ಹಲವು ರೀತಿಯ ಉಟೋಪಚಾರಗಳನ್ನು ಮಾಡುವುದು ಕಂಡು ಬರುತ್ತದೆ. ಬಹುಶಃ ಎಲ್ಲಾ ರೀತಿಯ ಪೌಷ್ಠಿಕ ಆಹಾರವನ್ನು ಅವಳಿಗೆ ಕೊಟ್ಟು ಅವಳ ಹಾಗೂ ಹೊಟ್ಟೆಯಲ್ಲಿ ಬೆಳೆಯುವ ಮಗುವಿನ ಆರೋಗ್ಯ ಕಾಪಾಡಲು ಈ ರೀತಿಯ ಬಯಕೆ ಊಟವನ್ನು ತವರು ಮನೆ, ನೆಂಟರಿಷ್ಟರು ಮೊದಲಾದವರು ತಂದು ಕೊಡುವಂತೆ ಕಂಡು ಬರುತ್ತದೆ. ಆ ವೇಳೆಯಲ್ಲಿ ಗರ್ಭಿಣಿಯರಿಗೂ ಕೆಲವೊಂದು ಪದಾರ್ಥ ತಿನ್ನುವ, ಉಡುವ, ತೊಡುವ ಆಸೆಗಳಾಗುತ್ತವೆ ಎನ್ನುವುದನ್ನು ಬುಲಾಯಿ ಹಾಡುಗಳಲ್ಲಿಯೂ ಕಾಣಬಹುದು.

ಒಂದಾ ದಿನ ಅನ್ನೊದು ಒಂದೇ ತಿಂಗಳಾಗಿ
ಒಂದಾದರೇನ ಬಗಸ್ಯಾಳ ಅಕ್ಕನಾಗಮ್ಮ ಕೋಲೆಣ್ಣ ಕೋಲೆ
ಒಂದೇಲಿ ಅಡಿಯ ಉಣಸಿ ತಿನಬೇಕಂತ
ಅಣ್ಣ ನನ್ನ ಜೀವ ಬಗಸ್ಯಾದೆ ಬಸವಣ್ಣ
ಅಣ್ಣಾನೆ ನನ್ನ ಜೀವ ಬಗಸ್ಯಾದೆ ಬಸವಣ್ಣ
ತಿನ್ನವಲಕ್ಕಿಂತ ಮೊದಲ ತರಸ್ಯಾರ ಕೋಲೆಣ್ಣ ಕೋಲೆ
ಎಡ್ಡದಿನ ಎಂಬುದು ಎಡ್ಡ ತಿಂಗಳ ಕಡಿಯ
ಬಳಿ ಕೈತುಂಬ ಇಡಬೇಕೆಂತೆ ಕೋಲೆಣ್ಣ ಕೋಲೆ
ಬಳೆಯೇ ಕೈತುಂಭ ಇಡಬೇಕಂತೆ ಎಲೆ
ಅಣ್ಣ ನನ್ನ ಜೀವ ಬಗಸ್ಯಾದೆ ಕೋಲೆಣ್ಣ ಕೋಲೆ
ಮೂರು ದಿನ ಅಂಬುದು ಮೂರೆ ತಿಂಗಳ
ಮೂರಗೇನ ಬಗಸ್ಯಾಳ ಅಕ್ಕನಾಗಮ್ಮ ಕೋಲೆಣ್ಣ ಕೋಲೆ
ಮೂಡಲ ಝುರಿಯ ತಿಳಿನೀರು ಕುಡಿಬೇಕಂತ
ಅಣ್ಣ ನನ್ನ ಜೀವ ಬಗಸ್ಯಾದ ಕೋಲೆಣ್ಣ ಕೋಲೆ [೧೦೩]

ಹೀಗೆ ಒಂಬತ್ತು ತಿಂಗಳವರೆಗೆ ಅವಳ ಬಯಕೆಗಳೇನು ಎಂಬುದನ್ನು ಈ ಹಾಡಿನಲ್ಲಿ ತಿಳಿಸಲಾಗಿದೆ. ಗರ್ಭಿಣಿ ಏನು ಬಯಸುವಳೋ ಅದನ್ನೆಲ್ಲಾ ಕೊಡಬೇಕು. ಇಲ್ಲದಿದ್ದರೆ ಮುಂದೆ ಹುಟ್ಟಿದ ಮಗುವಿನ ಕಿವಿ ಸೋರುವುದು ಎಂಬ ಕುರುಡ ನಂಬಿಕೆಯನ್ನು ಕಾಣಬಹುದು. ಇದರ ಅರ್ಥ ಅವಳ ಮನಸ್ಸಿನಲ್ಲಿ ಯಾವ ಕೊರಗು ಇಲ್ಲದೇ ಬಯಸಿದುದೆಲ್ಲವೂ ತಿನ್ನಲಿ, ಅವಳು ಸಂತೋಷದ ಮನಸ್ಥಿತಿಯಿಂದಿರಲಿ ಎಂಬ ಉದ್ದೇಶದಿಂದ ಹೀಗೆ ಪ್ರಚಾರದಲ್ಲಿ ತಂದಿರುವ ಸಾಧ್ಯತೆ ಕಂಡು ಬರುತ್ತದೆ.

ಗರ್ಭಿಣಿ ಬಯಸುವ ವಸ್ತುಗಳು ಕೆಲವು ಸಲ ಸಾಮಾನ್ಯವೆನಿಸುತ್ತದೆ. ದೇಹದಲ್ಲಾಗುವ ಬದಲಾವಣೆಯೊಂದಿಗೆ, ಮಾನಸಿಕ ತೊಳಲಾಟ, ಆತಂಕ, ಆರಂಭದ ದಿನಗಳಲ್ಲಿ ಕಂಡು

ಬರುತ್ತದೆ. ಮನೆಯವರ ಪ್ರೀತಿಯ ಉಪಚಾರದಿಂದ ಅವಳಿಗೆ ಧೈರ್ಯ ಬರುವುದುಂಟು.

ಈ ಕುಪ್ಪಸ ಮಾಡುವ ಸಮಾರಂಭ ಚೊಚ್ಚಿಲ ಬಸುರಿಗೆ ಮಾತ್ರ ಇರುವ ಸಂಪ್ರದಾಯ. ಮುಂದೆ ಅವಳು ಎಷ್ಟು ಸಲ ಬಸುರಾದರೂ ಮತ್ತೇ ಇಂತಹ ಸಮಾರಂಭ ಮಾಡುವುದು ಕಂಡು ಬರುವದಿಲ್ಲ. ಇಂದು ಬಹಳಷ್ಟು ಆಚರಣೆಗಳು ಮರೆಯಾಗಿರುವಂತೆ ತೋರುತ್ತದೆ. ಮದುವೆಯ ಹಲವು ಪ್ರಕ್ರಿಯೆಗಳಲ್ಲಿ ಬಹಳಷ್ಟು ಆಚರಣೆಗಳು ಇಂದು ಕಂಡು ಬರುತ್ತಿಲ್ಲ. ಉದಾ: ಐರಾಣಿ ತರುವುದು, ಹಿರಿಯರೇ ಹೋಗಿ ಹೆಣ್ಣು ನೋಡುವುದು, ಭೋಮ ಕೊಡುವುದು ಮುಂತಾದವು ಇಂದು ಮಾಯವಾದಂತಿವೆ. ಇವು ಇಂದಿನ ಬದುಕಿಗೆ ಅಪ್ರಸ್ತುತವೂ ಎನಿಸುತ್ತವೆ. ಅಪ್ರಸ್ತುತವೆನಿಸುವ ಯಾವುದೇ ವಸ್ತು ಕಾಲಕ್ರಮೇಣದಲ್ಲಿ ತಾವಾಗಿಯೇ ಮಾಯಾವಾಗುವುದು ಸೃಷ್ಟಿಯ ನಿಯಮ ಎನ್ನಬಹುದು. ಅದಕ್ಕೆ ಬದಲಾಗಿ ಜನ ಹೊಸದನ್ನು ಸೃಷ್ಟಿಸಿಕೊಳ್ಳುವುದು ಕಂಡು ಬರುತ್ತದೆ. ಜನರು ಕಾಲಧರ್ಮಕ್ಕನುಗುಣವಾಗಿ ಸ್ಪಂಧಿಸುವುದು ಕಾಣಬಹುದು. ಹೀಗಾಗಿ ಹೊಸ ಸಂಪ್ರದಾಯಗಳಲ್ಲಿ ಹುಟ್ಟು ಹಬ್ಬದ ಆಚರಣೆ, ವಿಡಿಯೋ ಚಿತ್ರಿಕರಣ, ವೈಭವದ ಔತಣಕೂಟ. ಮದುವೆಯ ವಾರ್ಷಿಕೋತ್ಸವಗಳು, ಬೆಳ್ಳಿ ಹಬ್ಬದ ಆಚರಣೆಗಳು ದಿನೇ ದಿನೇ ಜನಪ್ರೀಯವಾಗುತ್ತಿರುವುದು ಗಮನೀಯ. ಇವುಗಳಲ್ಲಿ ಆಡಂಬರ, ಪ್ರದರ್ಶನ, ಹೊರತಾಗಿ ಹಿಂದಿನ ಸಂಪ್ರದಾಯಗಳಲ್ಲಿರುವಂತೆ ಆತ್ಮೀಯತೆ, ಸಂಭ್ರಮ, ಸಂತಷ, ಸಹೃದಯತೆ, ಸರಳತೆಗಳು ಕಂಡು ಬರುವದಿಲ್ಲ.

ನಂಬಿಕೆಗಳು :

ಸಂಸ್ಕೃತಿಯ ಧ್ಯೋತಕವಾದ ಸಂಪ್ರದಾಯಗಳಿಗೆ ಪೂರಕವಾದುದು ನಂಬಿಕೆ ಮತ್ತು ಆಚರಣೆಗಳು. ನಂಬಿಕೆ ಮತ್ತು ಸಂಪ್ರಾದಾಯಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಸಂಪ್ರದಾಯಗಳನ್ನು ಆಚರಣೆಯಲ್ಲಿ ತರುವಾಗ ನಂಬಿಕೆಗಳೇ ಅವಕ್ಕೆ ಆಧಾರವಾಗಿದ್ದು ಪ್ರೇರಣೆಯನ್ನೊದಗಿಸಿದಂತೆ ಕಂಡು ಬರುತ್ತವೆ. ನಾಗರಿಕತೆ ಬೆಳೆಯದ ಪ್ರಾಚೀನ ಜನರಲ್ಲಿ ಪ್ರಾಣಿಗಳನ್ನು ಪೂಜಿಸುವದರಿಂದ ತಮಗೆ ಅವುಗಳ ಕೃಪೆಯಾಗುವದೆಂಬ ನಂಬಿಕೆ ಬೆಳೆದು ಬಂದಿತ್ತು. ಅದಕ್ಕಾಗಿ ಅವುಗಳಿಗೆ ಪೂಜೆ ಮಾಡಿ ಪ್ರಸಾದ ಇಟ್ಟು ದೂರದಿಂದ ಕೈ ಮುಗಿದಾಗ ತಮಗೆ ತೊಂದರೆ ಕೊಡದ ಜನರಿಗೆ ಏನೂ ಮಾಡದೇ ಆ ಪ್ರಾಣಿಗಳು ಹೊರಟು ಹೋಗಿರಬೇಕು. ಅದೇ ಮುಂದುವರೆದು ಇಂದಿಗೂ ಆಚರಣೆಯಲ್ಲಿರುವುದು ಕಂಡು ಬರುತ್ತದೆ. ಈ ನಂಬಿಕೆಗಳನ್ನು ದೃಢಗೊಳಿಸಲು ಕೆಲವೊಂದು ಸಲ ಅಲೌಕಿಕ ಕಾರಣ ಕೊಟ್ಟು ಗೊಡ್ಡು ನಂಬಿಕೆಗಳು, ರೂಢಿಗಳು ಉಳಿದುಕೊಂಡಂತೆ ಕಾಣುತ್ತವೆ. ನರ ಬಲಿ ಕೊಟ್ಟರೆ ಕೋಟೆ, ಕೊತ್ತಲಗಳು, ಸೇತುವೆಗಳು ನಿಲ್ಲುತ್ತವೆಂಬ ನಂಬುಗೆಯಾಗಲಿ, ಕೆರೆ ಬಾವಿಗಳು ಕಟ್ಟಿಸಿದಾಗ ಮನೆಯ ಸೊಸೆಯನ್ನು ಬಲಿಕೊಟ್ಟರೆ ನೀರು ಬರುತ್ತವೆಂಬುದಾಗಲಿ ಅರ್ಥವಿಲ್ಲದವುಗಳೆನಿಸುತ್ತವೆ. ಆದರೆ ಈ ವದಂತಿಗಳೇ ನಂಬುಗೆಗಳಾಗಿ ಬೇರೂರಲು ಕೆಲವು ಹಿತಾಸಕ್ತಿಗಳು ತಮ್ಮ

ಸ್ವಾರ್ಥಕೋಸ್ಕರ ಕೆಲಸ ಮಾಡುತ್ತಿರಬಹುದು. ಯಾವುದೇ ನಂಬಿಕೆ, ಆಚರಣೆಗಳನ್ನು ಜನತೆ ಪ್ರಾರಂಭದಲ್ಲಿ ಒಳ್ಳೆಯ ಉದ್ದೇಶವನ್ನಿಟ್ಟುಕೊಂಡೇ ಆರಂಭಿಸಿರುವಂತೆ ಕಂಡು ಬಂದರೂ ಬರುಬರುತ್ತ ಅರ್ಥ ರಹಿತ ಆಚರಣೆಗಳು, ಮೂಢನಂಬಿಕೆಗಳ ರೂಪದಲ್ಲಿ ಸೇರಿಕೊಂಡು ಹಾಗೆಯೇ ಚಲಾವಣೆಯಲ್ಲಿ ಬಂದಂತೆ ಕಂಡು ಬರುತ್ತವೆ. ಇಂತಹ ಮೂಢನಂಬಿಕೆಯನ್ನು ಪ್ರತಿಬಿಂಬಿಸುವ ಬುಲಾಯಿ ಹಾಡು ಈ ರೀತಿಯಾಗಿದೆ.

ಬುಟ್ಟ ಬುಧವಾರ ದಿನ ಹುಟ್ಟಿತು ಈ ಕೂಸು
ಹುಟ್ಟಿದಾ ಮನಿಗಿ ಜಯಬಿಲ್ಲ ಕೋಲು ಕೋಲೆ
ಹುಟ್ಟಿಬಿದಾ ಮನಿಗಿ ಜಯಬಿಲ್ಲ ಈ ಕೂಸು
ಬಿಟ್ಟಿ ಬರ್‍ರಿ ಹರಿಯ ಜಲದಾಗೆ ಕೋಲು ಕೋಲೆ
ಬಾಳಿ ಎಲಿಯ ತಂದು ಸೀಳಿ ತೆಪ್ಪವ ಮಾಡಿ
ಅದರಾಗ ಕೂಸಿಗಿ ಮನಗುಸಿ ಕೋಲು ಕೋಲೆ
ನಿಂಬಿಯ ಎಲಿಯ ತಂದು ಥುಂಬಿ ತೆಪ್ಪವ ಮಾಡಿ
ಅದರಾಗ ಕೂಸಿಗಿ ಮನಗುಸಿ ಕೋಲ ಕೋಲೆ
ಅದರಾಗ ಕೂಸಿಗಿ ಮನಗುಸಿ ಈ ಕೂಸಾ
ಬಿಟ್ಟು ಬಂದಾರ ಹರಿಯೋ ಜಲದ್ಯಾಗೆ ಕೋಲಕೋಲೆ [೧೦೪]

ಹೀಗೆ ಬುಧವಾರ ದಿನ ಹೆಣ್ಣು ಹುಟ್ಟಿದರೆ ಅದು ಮನೆಗೆ ಒಳ್ಳೆಯದಲ್ಲ ಎಂಬ ಮೂಢನಂಬಿಕೆಯಿಂದ ಹುಟ್ಟಿದ ಆ ಕೂಸನ್ನು ತೆಪ್ಪೆಯಲ್ಲಿ ಮಲಗಿಸಿ ಬಿಟ್ಟು ಬಂದರೆಂಬುದು ಸಹ ಆಗಿನ ಕಾಲದ ನಂಬಿಕೆಯನ್ನೇ ಸೂಚಿಸುವಂತಿದೆ. ಆಗಿನ ಸಂಪ್ರದಾಯದಲ್ಲಿ ಬುಧವಾರ ದಿನ ಹೆಣ್ಣು ಹುಟ್ಟಿದರೆ ಮನೆಗೆ ಜಯಬಿಲ್ಲವೆಂದು ನಂಬಿದ್ದಿರಬಹುದು. ಆದರೆ ಇಂದು ಅಂತಹ ನಂಬಿಕೆ ಕಾಣಸಿಗದು. ಏಕೆಂದರೆ ವೈಚಾರಿಕತೆ, ನಾಗರಿಕತೆಗಳು ಬೆಳೆದಂತೆ ಸಂಪ್ರದಾಯ, ನಂಬಿಕೆಗಳು ಸಡಿಲಗೊಳ್ಳುತ್ತಿರುವುದು ಕಾಣಬಹುದು.

ಹಾಗೆಯೇ ಅಂದಿನ ನಂಬಿಕೆಗಳೆಲ್ಲವೂ ಮೂಢ ನಂಬಿಕೆಗಳೆಂದು ಹೇಳಲಾಗದು. ಉದಾ: ಮನೆಯಲ್ಲಿ ಯಾರಾದರೂ ಸತ್ತಾಗ ಕೆಲವೊಮ್ಮೆ ಮನೆ ಬಿಡುವ, ಅಂದರೆ ಕೆಲವು ನಿರ್ಧಿಷ್ಟ ಸಮಯದವರೆಗೆ ಬೇರೆ ಕಡೆ ವಾಸಿಸಿ, ನಂತರ ಪುನಃ ಅದೇ ಮನೆಗೆ ಪೂಜೆ ಮಾಡಿಸಿ ಬಂದು ವಾಸಿಸಬಹುದೆಂಬ ನಂಬಿಕೆಯಲ್ಲಿ ಒಳ್ಳೆಯ ಬಿಚಾರವೇ ಅಡಗಿದ್ದು ಕಂಡು ಬರುತ್ತದೆ. ಮರಣದಿಂದ ಹೆದರಿದ ಭಯಗೊಂಡವರಿಗೆ ಕೆಲವು ದಿನ ಬೇರೆಡೆಗೆ ವಾಸವಾಗಿದ್ದ ಮೇಲೆ ಕ್ರಮೇಣ ಹೆದರಿಕೆ ಮಾಯವಾಗಿ ಪೂಜೆಯಿಂದ ಮನ ಒಂದು ತಹಬಂದಿಗೆ ಬರಬಹುದು. ಇದರಿಂದ ಮತ್ತೆ ಅದೇ ಮನೆಯಲ್ಲಿ ವಾಸವಾಗಿರಲು ಬಂದಾಗ ಮಾನಸಿಕ ನೆಮ್ಮದಿ ಕಾಣಬಹುದು.

ಈ ರೀತಿಯ ನಂಬುಗೆಗಳು, ಸಂಪ್ರದಾಯಗಳು ಉಳಿವಿಗಾಗಿ ಸಹಕರಿಸುತ್ತವೆನ್ನಬಹುದು. ಜನಜೀವನ ಸುಗಮವಾಗಲು ಆಗಾಗ ಹೊಸ ನಂಬಿಕೆಗಳು ಹುಟ್ಟಿಕೊಳ್ಳುವುದು ಕಂಡುಬರುತ್ತದೆ. ಅವು ಜನರಲ್ಲಿ ಹೊಸ ಹುಮ್ಮಸ್ಸು ಹುಟ್ಟುವಂತೆ ಮಾಡಬಹುದು. ಸಂಪ್ರಾದಾಯಗಳು ಆಚರಣೆಯಲ್ಲಿರಲು, ನಂಬಿಕೆಗಳು ಹೆಚ್ಚು ಸಹಕಾರಿಗಳಾಗಬಹುದು. ನಂಬಿಕೆಗಳು ಬಹುಪಾಲು ಧಾರ್ಮಿಕ ಮೂಲದಿಂದ ಬಂದವುಗಳೆನ್ನಬಹುದು. ಇವು ಶ್ರದ್ದೆಗಳಿಂದ ಬಂದು ಮಾನಸಿಕ ಬಲವನ್ನು ನೀಡುವಂತಹವು. ನಂಬಿ ಕೆಟ್ಟವರಿಲ್ಲವೋ ಎಂಬ ದಾಸ ವಾಣಿಯೂ ಸಹ ಇದನ್ನೆ ಪುಷ್ಟೀಕರಿಸುವಂತೆ ಕಾಣುತ್ತದೆ.

ನಂಬಿಕೆಗಳನ್ನು ಉಳಿಸಿಕೊಳ್ಳಲೇಬೇಕೆಂದಿಲ್ಲ. ಅವು ಅಜ್ಞಾನದಿಂದ ಬಂದಿರುವದಾದರೆ ತ್ಯಜಿಸಬೇಕು. ಜನರಲ್ಲಿ ತಿಳುವಳಿಕೆಯನ್ನು ಹೆಚ್ಚಿಸಬೇಕು. ಅವುಗಳ ಆಚರಣೆಯ ಸಾರಾಸಾರ ವಿಚಾರವಾಗಲಿ ಪ್ರಯೋಜನ ಅಪ್ರಯೋಜನವಾಗಲಿ ಮನದಟ್ಟಾದಾಗ ಅಂತಹ ನಂಬಿಕೆ, ಆಚರಣೆಗಳು ಜನರಿಂದ ಕ್ರಮೇಣ ಮರೆಯಾಗುತ್ತವೆ. ಉದಾ: ಕೆರೆ, ಕೋಟೆಗಳಿಗೆ ನರಬಲಿ, ನಂಬಿಕೆ ಮತ್ತು ಸಂಪ್ರದಾಯಗಳು ಪರಸ್ಪರರ ಪೂರಕರ ಪ್ರೇರಕವಾಗಿ ಉಳಿಯುತ್ತವೆ.

ಉದಾ: ನಾಗರ ಪಂಚಮಿಯ ಹಿಂದಿನ ದಿನ ಸಹೋದರರ ಹೆಸರಿನಲ್ಲಿ ಉಪವಾಸವಿದ್ದರೆ ಅವರಿಗೆ ಒಳ್ಳೆಯದಾಗುತ್ತದೆ ಎಂಬ ನಂಬಿಕೆ, ಅಂತೆಯೇ ಅಂದು ಹೆಣ್ಣು ಮಕ್ಕಳು ಉಪವಾಸವಿರುವ ಸಂಪ್ರದಾಯ ಇಂದಿಗೂ ಮುಂದುವರೆದು ಬಂದಿರುವದನ್ನು ಕಾಣಬಹುದು. ಹಾಡಿನಲ್ಲಿ ಹೀಗಿದೆ.

ನಾಗರ ಪಂಚಮಿ ನಾಳೀಗಿ ಬರುವುದು
ನಾಗಯ್ಯಗ ಹಾಲ ಎರೆವುದೇ ಕೋಲೆಣ್ಣ ಕೋಲೆ
ನಾಳಿಗಿ ಒಂದತ್ತು ನಾವುನೇ ಮಾಡುತ್ತ
ನಾಗಯ್ಯಗೆ ಹಾಲ ಎರೆವುದೇ ಕೋಲೆಣ್ಣ ಕೋಲೆ [೧೦೪]

ದೇವರ ಪೂಜೆಗೆ ಮೈಲಿಗೆ ನಡೆಯದು ಎಂಬುದೊಂದು ನಂಬಿಕೆ. ಒಂದು ವೇಳೆ ಹಾಗೇನಾದರೂ ಆಚಾತುರ್ಯವಾದರೆ ಅದನ್ನು ಆಗಲೇ ಯಾವುದೇ ರೂಪದಲ್ಲಿ ನಮಗೆ ತಿಳಿಸಿಕೊಡುವರೆಂದೂ ನಂಬಿಕೆಯಿದೆ. ಅಂತೆಯೇ ನಾಗಣ್ಣನಿಗೆ ಹಾಲ ಎರೆಯಲು ಹೋದ ಹೆಣ್ಣು ಮಗಳ ಮೈಲಿಗೆಯನ್ನು ಗುರುತಿಸಿದ ನಾಗಣ್ಣ ಭುಸ್ ಎಂದು ಕಾಣಿಸಿಕೊಂಡ ಎಂಬುದನ್ನು ಭುಲಾಯಿ ಹಾಡಿನಲ್ಲಿ ಕಂಡು ಬರುತ್ತದೆ.

ನಾಗರ ಪಂಚಮಿ ನಾಡಿಗಿ ದೊಡ್ಡದು
ನಾಗಣ್ಣಗ ಹಾಲು ಎರಿಯುವರೇ ಕೋಲೆ
ನಾನುನೆ ತಂಗೆಮ್ಮ ಹುತ್ತಿಗೆ ಹೋದೆವೆ
ಶ್ರೀಗಂಧ ಸಿಂಪಿಯ ಮರತೇವ ಕೋಲೆ
ಶ್ರೀಗಂಧದ ಸಿಂಪಿ ಮರೆತೆವ ತಂಗೆಮ್ಮ

ಓಡೋಳ್ಗಿ ಝುಗ್ಗಂತ ತರಬಾರದೆ ಕೋಲೆ
ಓಡೋಡಿ ಹೋಗ್ಯಾಳೆ ಝುಗ್ಗಂತ ಅಂತೆ ನಿಂತಾಳ
ಒಳಗೆ ಭಾವಯ್ಯನ ಸಳ ಮಂಚ ಕೋಲೆ
ಬಿಡೋ ಬಿಡೋ ಭಾವಯ್ಯ ಬಿಳಿ ಮುತ್ತ ಉದುರ್ಯಾವೋ
ಕೈಯಾಗಿನ ಕುಣಿಕಿ ಸಡಲಾವೆ ಕೋಲೆ
ಆಗ ಬಿಗವ ಕೊಟ್ಟು ಆ ಸಿಂಪಿ ತಕ್ಕೊಂಡು
ಆಗೆ ಬಂದಳೆ ತಂಗಿ ಹುತ್ತಿಗೆ ಕೋಲೆ
ಆಗ ಬಂದಳೆ ತಂಗಿ ಹುತ್ತಿಗೆ ಕೋಲೆ
ಅರಸಿಣ ಕುಂಕುಮ ಗಂಧ ಕಸ್ತೂರಿಯಿಂದ
ಪೂಜೆ ಮಾಡ್ಯಾಳರಿ ಹರುಷದಿಂದ ಕೋಲೆ
ಮುಟ್ಯಾಗ ಅಳ್ಳ ಹಿಡಿದು ನಾಗಣ್ಣನ ಹಾಲ ಎರೆದು
ಮತ್ಯಾಕ ನಾಗಣ್ಣ ಭುಸ್ ನೆಂದ ಕೋಲೆ
ತಂಗೆಮ್ಮಾ ನಿನ್ನ ಸೀರಿ ಚಂದಕ್ಕೆ ಉಡಸಿದ
ಯ್ಯಾಕೆ ತಂಗ್ಯಮ್ಮ ನಿಱಿಡೊಂಕೆ ಕೋಲೆ
ತಂಗ್ಯೆಮ್ಮ ನಿನ್ನ ಕೂದಲು ಚಂದಾಗಿ ಕಟ್ಟಿದೆ
ಯ್ಯಾಕೆ ತಂಗ್ಯಮ್ಮ ಸಡಲ್ಯಾವೆ ಕೋಲೆ [೧೦೭]

ಎಂಬಲ್ಲಿ ತಂಗಿ-ಭಾವನಿಂದ ಮೈಲಿಗೆಯಾಗಿ ಬಂದದ್ದಕ್ಕೆ ನಾಗಣ್ಣ ಭುಸ್ ಎಂದಿರಬಹುದೆಂಬುದು ಇಲ್ಲಿ ಕಾಣಬಹುದು.

ಸಂಪ್ರದಾಯ-ನಂಬಿಕೆಗಳನ್ನು ಅನುಸರಿಸುವುದು ಹಳೆಯ ಕಾಲದ ಮನೋಧರ್ಮ. ಅರ್ಥಹೀನವಾದ್ದು, ಇಂದಿನ ವೈಚಾರಿಕ ಬದುಕಿನಲ್ಲಿ ಮೌಲ್ಯ ಕಳೆದುಕೊಂಡಿರುವ ಆಚರಣೆಗಳು ಇವು ಎನ್ನಲಾಗದು. ಸಂಪ್ರದಾಯಗಳನ್ನು ಆಚರಿಸುವ ಪ್ರಗತಿಪರರೆನ್ನುವವರೂ ಸಮಾಜದ ಎಲ್ಲ ರೀತಿ ನೀತಿ ಬಿಟ್ಟವರೂ ಆಗಿರಲಾರರು. ಅವರ ಮನದ ಮೂಲೆಯಲ್ಲಿಯೂ ಎಲ್ಲೋ ಒಂದೆಡೆ ಸಂಪ್ರದಾಯಗಳಿಗೆ ಮಾನ್ಯತೆ ಕಂಡು ಬರುತ್ತದೆ. ಜಗತ್ತಿನ ಅತ್ಯಂತ ಹಿಂದುಳಿದ ಬುಡಕಟ್ಟು ಜನರಿರಲಿ, ನಾಗರಿಕತೆಯ ತುತ್ತು ತುದಿಯಲ್ಲಿರುವವರಿರಲಿ ಅವರ ಅಂತರಂಗದಲ್ಲಿ ಸಂಪ್ರದಾಯದ ಆಚರಣೆಗಳಿಗೆ ಸ್ಥಾನವಿರುವುದು ಕಂಡು ಬರುತ್ತದೆ.ಕೆಲವೊಂದು ಗೊಡ್ಡು ಸಂಪ್ರದಾಯ ಹಾಗೂ ಮೂಢ ನಂಬಿಕೆಗಳನ್ನು ಬಿಟ್ಟರೆ ಇಂತಹ ಆಚರಣೆಗಳಿಂದ, ನಂಬಿಕೆಗಳಿಂದ ಜನರ ಜೀವನಕ್ಕೊಂದು ನೆಲೆ, ಸಾಂತ್ವನ, ಅಶ್ರಯ ಸಿಗುವ ಸಾಧ್ಯತೆಯನ್ನು ಕಾಣಬಹುದು. ಯಾವ ಕಾನೂನುಗಳು ಮಾಡದ ಕೆಲಸ ನೈತಿಕ ಬಲವನ್ನು ಸಂಪ್ರದಾಯಗಳು ತಂದು ಕೊಡಬಹುದಾಗಿದೆ. ಇದರಿಂದ ಮಾನಸಿಕ ಶಾಂತಿ, ನೆಮ್ಮದಿ ದೊರಕಲು ಪರಸ್ಪರ ಸಹಕಾರ ಮನೋಭಾವ ಬೆಳೆಯಲು ಸಹಾಯಕವಾಗುತ್ತವೆ. ಇಂದಿನ ಒಂಟಿತನ, ಅಶಾಂತಿ,

ಒತ್ತಡಗಳ ಬದುಕಿಗೆ ಹಿಂದಿನವರ ಜೀವನ ಕ್ರಮದ ಒಳಿತು ಕೆಡಕುಗಳು, ಲೋಪದೋಷಗಳನ್ನು ಕಂಡು ಅರ್ಥಹೀನ ಆಚರಣೆಗಳನ್ನು ಬಿಟ್ಟು ಒಳ್ಳೆಯ ಆಚರಣೆಗಳನ್ನು ಆಚರಿಸುವದರ ಹಿಂದಿರುವ ಅರ್ಥ ಮತ್ತು ಮಹತ್ವವನ್ನು ಅರಿತುಕೊಳ್ಳುವುದು ಇಂದು ಅತಿ ಅವಶ್ಯಕವೆನಿಸುತ್ತದೆ.

೬) **ಜನರ ಮನೋಭಾವ:**

ಸಾಹಿತ್ಯ ನಿರ್ಮಾಣದಲ್ಲಿ ಸಮಾಜದ ಪರಂಪರೆಯ ಪಾತ್ರವನ್ನು ಕಾಣಬಹುದು. ಅಂತೆಯೇ ಯಾವುದೇ ಒಂದು ಪ್ರಕಾರದ ಸಾಹಿತ್ಯದಲ್ಲಿ ಆಯಾ ಕಾಲದ ಜನರ ಮನೋಭಾವಗಳನ್ನು ಸಹ ಕಾಣಬಹುದು. ಬುಲಾಯಿ ಹಾಡುಗಳು ಇದಕ್ಕೆ ಹೊರತಾಗಿಲ್ಲ. ಜೀವದಯೆ ಎನ್ನುವುದು ಬಹು ಮುಖ್ಯವಾದ ಅಂಶ. ನಮ್ಮ ಸಮಾಜದಲ್ಲಿ ಒಂದೆಡೆ ಆಕಳನ್ನು ದೇವತೆಯೆಂದು ಪೂಜಿಸಿದರೆ ಮತ್ತೊಂದೆಡೆಗೆ ಕಟುಕರಿಗೆ ಕೊಟ್ಟು ಕೊಲ್ಲಲು ಬಿಡುವುದನ್ನು ಕಾಣಬಹುದು. ಹೀಗೆ ಪ್ರಾಣಿಯ ನೋವನ್ನು ಪ್ರತಿಬಿಂಬಿಸುವ ಬುಲಾಯಿ ಹಾಡುಗಳನ್ನು ಸಹ ಗುರುತಿಸಬಹುದು. ಅಂದರೆ ಜೀವ ದಯೆಯ ಭಾವವಿದ್ದು ತಾನೇ ಆಕಳೆಂದು ಆರೋಪಿಸಿಕೊಂಡು ಮಾನವನಿಗೆ ಪ್ರಶ್ನಿಸುವ ಹಾಡು ಈ ರೀತಿಯಾಗಿದೆ.

ಭಾರತ ಭೂಮಿ ಮ್ಯಾಲ ನ್ಯಾಯವು ಉಳಿದಿಲ್ಲ.
ನಮ್ಮ ದುಃಖ ಕೇಳುವರಿಲ್ಲ ಕೋಲೆಣ್ಣ ಕೋಲೆ
ನೀವು ತಿಳಿದು ನೋಡರಿ ಆಲೋಚನೆ ಮಾಡಿರಿ
ಮುತ್ತೈದೆರೆಲ್ಲ ಕೂಡಿರಿ ಕೋಲೆಣ್ಣ ಕೋಲೆ
ಕರದಲ್ಲಿ ಬರುವಕಿ ಕಟ್ಟದಲ್ಲಿ ಕೂಡುವಕಿ
ಹಾಕಿದರ ತಿನುವಕಿ ಕೋಲೆಣ್ಣ ಕೋಲೆ
ನನ ಆಕಳ ಹೆಂಡಿ ಸಾರಿಸಿ ಮನಿಗ್ವಾಡಿ
ಧರಸುವೆ ವಿಭೂತಿ ಮಾಡಿ ಕೋಲೆಣ್ಣ ಕೋಲೆ
ಕೊಯ್ಯದರೆ ಭೂರಿನಿಟ್ಟ ಆಗಿದೆ ಎಷ್ಟು ಕಷ್ಟ
ಬಡಿದಾಡಿ ಜೀವ ಬಿಟ್ಟ ಕೋಲೆಣ್ಣ ಕೋಲೆ
ಉಂಡರೆ ಹಾಲು ಮೊಸರು ಉಪಕಾರ ಉಳಿಯಲಿಲ್ಲ
ಬಿಚ್ಚಿ ತೆಗೆದಾರ ತೊಗಲುಪೂರ ಕೋಲೆಣ್ಣ ಕೋಲೆ [೧೦೭]

ಆಕಳು ಭಾರತದಲ್ಲಿ ಗೋಮಾತೆ ಅಂತಲೇ ಪೂಜಿಸಲ್ಪಡುವುದು. ಆಕಳಿಂದ ಸಿಗಬಹುದಾದ ಎಲ್ಲಾ ಲಾಭವನ್ನು ಪಡೆದುಕೊಂಡು ನಂತರ ಅದನ್ನು ಕಟುಕರಿಗೆ ಮಾರುವದೂ ಕಾಣಬಹುದು. ಅಂತಹ ಸಂದರ್ಭದಲ್ಲಿ ಪ್ರಾಣಿಯನ್ನು ಅದರಲ್ಲೂ ಆಕಳನ್ನು ಕೊಲ್ಲುವುದು ಸರಿಯಲ್ಲ ಎಂಬ ಮನೋಭಾವವನ್ನು ವ್ಯಕ್ತಪಡಿಸಿದ್ದನ್ನು ಇಲ್ಲಿ ಕಾಣಬಹುದು. ಏಕೆಂದರೆ ಆಕಳಿನಿಂದ ನಾವು ಎಷ್ಟೆಲ್ಲಾ ಪಡೆದರೂ ಕೊನೆಗೆ ಖಟುಕರಿಗೆ ಒಪ್ಪಿಸಿದಾಗ ಅವರು

ನಿರ್ದಯದಿಂದ ಥೂಲಿಯಿಟ್ಟು ಕೊಯ್ದು ಅದರ ಮಾಂಸ, ತೊಗಲುಗಳನ್ನು ಸಹ ಬಿಡದೇ ಪಡೆಯುವ ರೀತಿಯನ್ನು ಇಲ್ಲಿ ಎತ್ತಿ ತೋರಿದಂತೆ ಕಂಡು ಬರುತ್ತದೆ. ಏಕೆಂದರೆ ಆಕಳ ಹಾಲಿನಿಂದ ಅದರ ಸಗಣಿಯವರೆಗೂ ನಾವು ಅನೇಕ ರೀತಿಯಲ್ಲಿ ಅದನ್ನು ಬಳಸಿಕೊಂಡು ಕೊನೆಗೆ ಕೃತಘ್ನತೆಯಿಂದ ಅದರ ಜೀವನವನ್ನು ಲೆಕ್ಕಸಿದೇ ಕೊಲ್ಲುವ ಕಟುಕರಿಗೆ ಮಾರುವುದು ಸರಿಯಲ್ಲ ಎಂಬುದನ್ನು ಈ ಹಾಡಿನಲ್ಲಿ ಕಾಣಬಹುದು. ಅದನ್ನು ಉಪಕಾರ ಉಳಿಯಲಿಲ್ಲ ಎಂದು ಹೇಳುವಲ್ಲಿ ಗುರುತಿಸಬಹುದು. ಇದು ಕೇವಲ ಆಕಳಿಗೆ ಮಾತ್ರ ಅನ್ವಯಿಸದೆ, ನಮಗೆ ಉಪಕಾರ ಮಾಡಿದವರೆಗೆ ನಾವು ಎಂದೂ ಅಪಕಾರ ಮಾಡಕೂಡದು ಎಂಬ ನೀತಿಯನ್ನು ಬೋಧಿಸುವಂತೆ ಕಂಡು ಬರುತ್ತದೆ. ಇಲ್ಲಿ ಜನರ ಉಪಕಾರ ಸ್ಮರಣೆಯ ಮನೋಭಾವವನ್ನು ಕಾಣಬಹುದು. ಜನರು ಒಬ್ಬರಿಗೊಬ್ಬರು ಕೃತಜ್ಞತೆಯನ್ನು ಸೂಚಿಸಿಕೊಳ್ಳುವುದರ ಜೊತೆಗೆ ಪ್ರಾಣಿಯಿಂದ ಪಡೆದ ಉಪಕಾರವನ್ನು ಸ್ಮರಿಸಬೇಕು ಎಂಬುದನ್ನು ವ್ಯಕ್ತಪಡಿಸಿದಂತೆ ಕಂಡು ಬರುತ್ತದೆ. ಅದರ ಜೊತೆಗೆ ಬೇಕಾದಾಗ ಬಳಸಿಕೊಂಡು ಬೇಡವಾದಾಗ ಬಿಡುವುದು, ಕೊಲ್ಲಲು ಕೊಡುವುದು ಸರಿಯಲ್ಲ ಎಂಬ ಧೋರಣೆಯನ್ನು ಸಹ ಗುರುತಿಸಬಹುದು. ಅಂತೆಯೇ ಇನ್ನೊಂದು ಹಾಡಿನಲ್ಲಿ ಮಾನವನನ್ನು ಪ್ರಶ್ನಿಸುವಂತೆ ಆಕಳ ಕೇಳುವ ಪ್ರಶ್ನೆಯು ತುಂಬಾ ಮಾರ್ಮಿಕವಾಗಿ ಮೂಡಿ ಬಂದಿದೆ.

ಇಟ್ಟರೆ ಹೆಂಡಿನಾಗಿ ಬಡದರ ಕುಳ್ಳನಾದೆ
ಹತ್ತು ದೇವರಿಗೆ ಪರಸಾದನಾದೆ ಕೋಲು ಕೋಲೆ
ಹತ್ತು ದೇವರ ಮುಂದೆ ಪರಸಾದಾದೇವು
ನಾವು ಯಾರಿಗೆ ಹೀನಾದೇವು ಕೋಲು ಕೋಲೆ
ಎರಡು ರತ್ತಿನ ಬಿಳಿಯನಾದ ಎತ್ತಿನ ಕೊಳ್ಳಗ ಜತ್ತಿಗಿನಾದ
ಪುತ್ರನ ಕಾಲೊಳಗೆ ಕಿರಿಯ ಮೆಟ್ಟು ಕೋಲು ಕೋಲೆ
ಪುತ್ರನ ಕಾಲೊಳಗೆ ಕಿರಿಮೆಟ್ಟು ನಾನಾದಾಗ
ಆವಾಗ ನಮಗ್ಯಾರು ನೆನೆದಿರಿ ಕೋಲು ಕೋಲೆ [೧೦೮]

ಎಂಬಲ್ಲಿ ಸಹ ಮೇಲಿನ ಧೋರಣೆಯೇ ವ್ಯಕ್ತವಾದಂತೆ ಕಂಡು ಬರುತ್ತದೆ. ಇದು **ನೀನಾರಿಗಾದೆಯೋ ಎಲೆ ಮಾನವ** ಎಂಬ ಪದ್ಯವನ್ನು ಸಹ ಪ್ರತಿಬಿಂಬಿಸುವಂತೆ ಕಂಡು ಬರುತ್ತದೆ. ಒಟ್ಟಾರೆ ಜೀವನ ಮೌಲ್ಯಗಳು ಜನರ ಮನೋಭಾವದಲ್ಲಿ ಕಂಡು ಬರುವ ಬುಲಾಯಿ ಹಾಡುಗಳನ್ನು ಕಾಣಬಹುದು.

ಉದಾ: ಸತ್ಯಕ್ಕಾಗಿ ಹರಿಶ್ಚಂದ್ರನ ಹಾಡು, ಧರ್ಮಕ್ಕಾಗಿ ಮಹಾಭಾರತ ಹಾಡು, ಪಾತಿವ್ರತ್ಯಕ್ಕಾಗಿ ಕಾಶಿಬಾಯಿ, ಈರಮ್ಮ, ನೀಲಗಂಗಾ, ಮುಂತಾದವರ ಹಾಡು, ಸ್ನೇಹಕ್ಕಾಗಿ ಸೋಮರಾಯ-ಭೀಮರಾಯರ ಹಾಡು, ಉಪಕಾರಕ್ಕಾಗಿ ಆಕಳ ಹಾಡು, ವೀರಕ್ಕಾಗಿ ಧರ್ಮಪ್ರಕಾಶಕರ ಹಾಡು, ತ್ಯಾಗಕ್ಕಾಗಿ ಕೆರೆಕಟ್ಟಾ ಹಾಡು ಹೀಗೆ ಹಲವಾರು ಬುಲಾಯಿ

ಹಾಡುಗಳನ್ನು ಕಾಣಬಹುದಾಗಿದೆ. ಜನರ ಮನೋಭಾವೆಯನ್ನು ಸಹ ಬುಲಾಯಿ ಹಾಡುಗಳ ನೆಲೆಯಾಗಿರುವದನ್ನು ಇಂತಹ ಹಾಡುಗಳಲ್ಲಿ ಕಾಣಬಹುದು.

೭) ಸಾಹಿತ್ಯಕ ಹಿನ್ನಲೆ:

ಬುಲಾಯಿ ಹಾಡುಗಳಿಗೆ ಜನಪದ ಸಾಹಿತ್ಯದ ಪ್ರಕಾರಗಳಾದ ಕಥನಗೀತೆಗಳು, ಕೋಲು ಪದ, ಸೋಬಾನ ಪದ, ಅಲಾಯಿ ಹಾಡು ಮುಂತಾದವುಗಳ ಪ್ರಭಾವ-ಪರಿಣಾಮಗಳನ್ನು ಕಾಣಬಹುದಾಗಿದೆ. ಅನೇಕ ಬಗೆಯ ಕಥನಗೀತೆಗಳ, ಕೋಲು ಪದಗಳ, ಸೋಬಾನ ಪದಗಳ ವಿಷಯ ವಸ್ತುಗಳೇ ಬುಲಾಯಿ ಹಾಡುಗಳಲ್ಲಿಯೂ ಕಾಣಬಹುದು. ಕೆಲವೊಂದು ಹಾಡುಗಳ ಹೆಸರುಗಳನ್ನು ಸಹ ಕಾಣಬಹುದಾಗಿದೆ.

ಉದಾ: ನೀಲಗಂಗಾನ ಹಾಡು, ಬರದ ಹಾಡು,ಕಾಳಿಂಗರಾಯನ ಹಾಡು, ಎಳ್ಳಮಾಸೆಯ ಹಾಡು, ಅವ್ವಮ್ಮನ ಹಾಡು, ಸಂಘವ ಮಾಡ್ಯಾಳ ನಿಮ ತಂಗಿ, ನೀಲಕಂಠರಾಜನ ಹಾಡು, ಮುಂತಾದ ಹಾಡುಗಳು ಬುಲಾಯಿ ಹಾಡುಗಳಲ್ಲಿಯೂ ಅದೇ ಹೆಸರುಗಳಲ್ಲಿ ಕಾಣಬಹುದು. ಇವುಗಳ ಪ್ರಭಾವ- ಪ್ರೇರಣೆಯನ್ನು ಮುಂದಿನ ಅಧ್ಯಾಯದಲ್ಲಿ ಚರ್ಚಿಸುವದರಿಂದ ಪ್ರಸ್ತುತ ಸ್ತ್ರೀವಾದಿ ಸಾಹಿತ್ಯದ ನೆಲೆಗಳನ್ನು ಕುರಿತು ನೋಡುವಾ.

ಸ್ತ್ರೀವಾದ ಎಂದರೆ ಮಹಿಳಾ ಬದುಕಿನ ಪರವಾಗಿ ನಿಂತು ಮಂಡಿಸುವ ಒಂದು ವಾದ, ಚಿಂತನೆ ಎಂದು ಸುಲಭವಾಗಿ ಹೇಳಬಹುದು. ಇಂಥ ಒಂದು ಪ್ರಜ್ಞಾಪೂರ್ವಕ ಚಿಂತನೆಗೆ ತೊಡಗಿಸಿಕೊಳ್ಳುವ ಅವಕಾಶವು ಮಹಿಳೆಯರಿಗೆ ಲಭ್ಯವಾದದ್ದು ತೀರಾ ಇತ್ತೀಚಿಗೆ. ಇದಕ್ಕೆ ಸುಮಾರು ನೂರೈವತ್ತು ವರ್ಷಗಳ ಇತಿಹಾಸ ಕಾಣಬಹುದಷ್ಟೇ. ಸ್ತ್ರೀವಾದಿ ಚಿಂತನೆಯನ್ನು ಕುರಿತು ಅಭಿಪ್ರಾಯವೂ ಈ ರೀತಿಯಾಗಿದೆ. "ಸ್ತ್ರೀವಾದಿ ಚಿಂತನೆಯ ಫಲ ಸುಸಂಘಟಿತ ಸಮುದಾಯಿಕ ಚಳುಗಳಲ್ಲಿ ಮಾತ್ರವೇ ಕಾಣಬೇಕೆಂದೇನೂ ಇಲ್ಲ. ಉದಾ: ಗೃಹಿಣಿಯೊಬ್ಬಳು ತನ್ನ ಮನೆಯೊಳಗಿದ್ದುಕೊಂಡೇ ಏಕಾಂಗಿಯಾಗಿಯೇ ಸ್ತ್ರೀವಾದಿ ಚಿಂತನೆಯನ್ನು ಜಾರಿಗೊಳಿಸಲು ಸಾಧ್ಯ. ಈ ಗೃಹಿಣಿ ಸ್ತ್ರೀವಾದಿ ಚಿಂತನೆಯನ್ನು ಕುರಿತು ಓದಿಕೊಂಡಿರ -ಬೇಕೆಂದಿಲ್ಲ. ಏಕೆಂದರೆ ಆ ಚಿಂತನೆಗೆ ಬೌದ್ಧಿಕ ಆಯಾಮವೂ ಹೆಚ್ಚಾಗಿ ಬಲವನ್ನು ಒದಗಿಸುತ್ತದೆಂಬುದು ನಿಜವಾದರೂ ಜೀವನದ ಅನುಭವ ಹಾಗೂ ಅದನ್ನು ಕುರಿತ ತನ್ನ ಪ್ರತಿಕ್ರಿಯೆಗಳು ಮತ್ತು ಇವುಗಳನ್ನು ಕ್ರೀಯಾಶೀಲವಾಗಿಸುವ ಧೈರ್ಯಗಳೇ ಈ ಚಿಂತನೆಯ ಮೂಲ ದ್ರವ್ಯ" [೧೦೮] ಎಂಬುದು ಗಮನಾರ್ಹವಾಗಿದೆ. ಬುಲಾಯಿ ಹಾಡುಗಳಲ್ಲಿ ಇಂತಹ ಅನುಭವ ಹಾಗೂ ಪ್ರತಿಕ್ರಿಯೆಗಳನ್ನು ಕ್ರೀಯಾಶೀಲಗೊಳಿಸುವ ಧೈರ್ಯವನ್ನು ನಾವು ಕಾಣಬಹುದು. ಏಕೆಂದರೆ ಹೋರಾಟ, ಪ್ರತಿಭಟನೆ ಜನಪದ ಕಾವ್ಯದ ಮೂಲ ಎಂಬುದನ್ನು ಆಯಾ ಪ್ರಕಾರದ ಕಾವ್ಯಗಳಲ್ಲಿ ಕಾಣಬಹುದಾಗಿದೆ. ಬುಲಾಯಿ ಹಾಡಿನಲ್ಲಿ ಇಂತಹ ಅನೇಕ ಹಾಡುಗಳನ್ನು ಕಾಣಬಹುದಾಗಿದೆ. ಉದಾಃ ಸಾವುಕಾರನ ಹಾಡಿನಲ್ಲಿ ಅವಳ ಹೋರಾಟ ಪ್ರತಿಭಟನೆಯನ್ನು ಹೀಗೆ ಕಂಡು ಬರುತ್ತದೆ.

ದೊಡ್ಡ ಸಾವುಕಾರನ ಮಗ ಬಲ ಬೇತಲ ಪೋರಿ
ಹರಿಚೀರ ಬಾಯಾ ನದರನಿಟ್ಟ ಕೋಲೆಣ್ಣ ಕೋಲೆ
ಎಡಕೈಯಾಗ ಮುತ್ತಿನ ಸಿಂಬಿ, ಬಲಗೈಯಾಗ ತಾಮ್ರದ ಕೊಡ
ನಡುದಾಳೆ ಬಾಲಿ ಸೈಯಾ ನೀರು ಕೋಲೆಣ್ಣ ಕೋಲೆ
ನೀರಾನೆ ದಾರೆಗೆ ತರಬಿ ಕೇಳುತಾನೆ
ಎತ್ತುತ್ತೆನೆ ಬಾಲಿ ನಿನ ಕೊಡ ಕೋಲೆಣ್ಣ ಕೋಲೆ
ನನ್ನ ಕೊಡ ಎತ್ತುಲ್ಯಾಕೆ ನೀನಾರ ಮಗನಯ್ಯ
ನಿನ್ನಕಿನ ದುರುಳ ಮನಿಪುರುಷ ಕೋಲೆಣ್ಣ ಕೋಲೆ ^000^

ಎಂದು ಧೈರ್ಯದಿಂದ ಅವನನ್ನು ಉತ್ತರಿಸಿ, ಎಚ್ಚರಿಸಿ ಮನೆಗೆ ಬರುತ್ತಾಳೆ. ಇಲ್ಲಿ ಆ ಕಾಲದಲ್ಲಿ ಊರ ಸಾವುಕಾರನೆಂದರೆ ಊರಿನ ರಾಜನಂತೆ. ಅಂತಹ ಮನೆ ಮಗನ ಕಣ್ಣು ಒಬ್ಬ ಗೃಹಿಣಿಯ ಮೇಲೆ ಬೀಳುತ್ತದೆ. ಆಗ ಅವನು ನೀರು ತರಲು ಹೋದ ಅವಳಿಗೆ ತರುಬಿ ಕೊಡ ಎತ್ತುವ ನೆಪ ಒಡ್ಡುತ್ತಾನೆ. ಆಗಲೇ ಅವಳು ನೀನ್ಯಾರು ? ಎಂಬ ಪ್ರಶ್ನೆ, ನನ್ನ ಮನಿಪುರುಷ ನಿನಗಿಂತ ದುರುಳ ಎಂದು ಎಚ್ಚರಿಕೆ ಕೊಡುವಲ್ಲಿ ಅವಳ ಧೈರ್ಯವನ್ನು ಕಾಣಬಹುದು. ಊರ ದೊರೆಯ ಮಗನಾದರೆ ತನಗೇನು? ತನ್ನ ಸ್ವಾಭಿಮಾನಕ್ಕೆ ಭಂಗ ಬರದಂತೆ ಪ್ರತಿಕ್ರಿಯಿಸುವದನ್ನು ಕಾಣಬಹುದು.

ಆ ಕಡೆ ಸಾವುಕಾರನ ಮಗ ಮನೆಗೆ ಹೋಗಿ ಮಂಚದ ಮೇಲೆ ಮಲಗಿ ಬಿಡುತ್ತಾನೆ. ಆಗ ಮನೆಯಲ್ಲಿ ತಾಯಿ-ತಂದೆ, ಅಣ್ಣ-ಅತ್ತಿಗೆಯರು ಮಲಗಿದ ಕಾರಣ ಕೇಳಿದಾಗ, ತನಗಾವ ಬೇನೆ ಇಲ್ಲ, ನಾರಿಯ ಹಂಬಲ ಎನಗೆ ಎಂದು ವಿಷಯವನ್ನು ತಿಳಿಸುತ್ತಾನೆ. ಅದಕ್ಕೆ ಅತ್ತಿಗೆ ಮೈದುನನಿಗೆ ನಿಮ್ಮ ಮನಸ್ಸಿಗೆ ಬಂದಂತೆ ಮಾಡು ಹೋಗಿ ಎಂದು ಹೇಳುತ್ತಾಳೆ. ಆಗ ಅವನು ಮತ್ತೆ ಅವಳು ನೀರಿಗೆ ಹೋಗುವಾಗ ಬಂದು ಅವಳನ್ನು ನಿಲ್ಲಿಸಿ ಮಾತಾಡುವುದು ಹೀಗಿದೆ.

ನೀರಾನೆ ತರುವಾಗ ತರಬಿ ಕೇಳುತ್ತಾನೆ ದಾರೆಗ
ನಿನ್ನ ಮೊಕ್ಕಮ ಜಾಗ ನನಗ್ಹೇಳೆ ಕೋಲೆಣ್ಣ ಕೋಲೆ
ಸಂದ ಸಂದೆಲ್ಲಾ ಸರದೀಪ ಸಾಲುಗಳು
ಸಲಬಿದ ನಾಯಿ ಹದಿನಾರೆ ಕೋಲೆಣ್ಣ ಕೋಲೆ
ನಿಂಬಿಯ ಬನಕ ಹೋಗರ ನಡಿಯೇ ಕೋಲೆಣ್ಣ ಕೋಲೆ
ನಿಂಬಿಯ ಬನದಾಗ ರಂಬೇರ ಕಾವಲಿ ನಾವಲ್ಲಿ
ಅಲ್ಲಿ ನಾವು ಹೋಗದಿಲ್ಲ ಕೋಲೆಣ್ಣ ಕೋಲೆ
ಬಾಳಿಯ ಬನಕ ಹೋಗರ ನಡಿಯೇ ಕೋಲೆಣ್ಣ ಕೋಲೆ
ಬಾಳಿಯ ಬನದಾಗ ಬಾಲೆರ ಕಾವಲಿ
ಅಲ್ಲಿಗಿ ನಾವು ಬರೋದಿಲ್ಲ ಕೋಲೆಣ್ಣ ಕೋಲೆ

ಹೀಗೆ ಅವನು ಕೇಳುವ ಒಂದೊಂದು ಪ್ರಶ್ನೆಗೂ ಮಾತಿಗೂ ದಿಟ್ಟತನದಿಂದ ಉತ್ತರಿಸುತ್ತಾಳೆ. ಅವನನ್ನು ಶಪಿಸುತ್ತಾಳೆ. ಅಲ್ಲಿ ಅವನು ಅವಳ ಪಾಲಿಗೆ ಒಬ್ಬ ಕಾಮುಕ ಮಾತ್ರ. ಊರ ಸಾಹುಕಾರನ ಮಗನೆಂಬ ಭಯವಾಗಲಿ, ಗೌರವವಾಗಲಿ ಇಲ್ಲ. ಹೀಗಾಗಿತನಗೆ ಹೊಳೆದಂತೆ ಬಯ್ದು,ಧಿಕ್ಕರಿಸಿ ಬರುವಾಗ ಅವಳ ಮೈಯೆಲ್ಲಾ ಧೂಳಿ ಮುತ್ತಿಕೊಂಡಿರುತ್ತದೆ. ಮೈಯೆಲ್ಲ ಧೂಳಿಯಾದುದ್ದನ್ನು ಕಂಡ ಅತ್ತೆ ಸುಮ್ಮನಿರದೆ ಸೊಸೆಯನ್ನು ಕೇಳುತ್ತಾಳೆ. ಅದಕ್ಕೆ ಸೊಸೆಯೂ ಉತ್ತರಿಸುತ್ತಾಳೆ. ಅದು ಈ ರೀತಿಯಾಗಿದೆ.

ಮೈಯೆಲ್ಲಾ ಕೆಂಪು ಧೂಳಿ, ಕೈಯೆಲ್ಲಾ ಕೆಂಪು ಧೂಳಿ
ಎಲ್ಲಿ ಮುದ್ದಾಡಿ ಬಂದೆ ಸೊಸಿ ಮುದ್ದ ಕೋಲೆಣ್ಣ ಕೋಲೆ
ಬಸವಣ್ಣನ ಘೂಳಿ ಬೆನ್ನಗೊಂಡೆ ಕೋಲೆಣ್ಣ ಕೋಲೆ
ತೇಳಿಗೆ ತೆಲಿನಿಲ್ಲ ಕೋಳಿಗಿ ಮಲಿನಿಲ್ಲ
ಅತ್ತಿ ನನ್ನ ಮಾತು ನಿಜಬಿಲ್ಲ ಕೋಲೆಣ್ಣ ಕೋಲೆ [೧೧೨]

ಈ ಹಾಡಿನಲ್ಲಿ ಹೆಣ್ಣು ಮಗಳ ದಿಟ್ಟತನ, ಪ್ರತಿಕ್ರಿಯೆ ತನ್ನನ್ನು ತಾನು ಕಾಪಾಡಿಕೊಳ್ಳುವ ರೀತಿಗಳಲ್ಲಿ ಪ್ರತಿಭಟನೆ ಮತ್ತು ಹೋರಾಟಗಳು ಕಂಡು ಬರುತ್ತವೆ. ಸಾಹುಕಾರನನ್ನು ಪ್ರತಿಭಟಿಸುತ್ತಲೇ ಹೋರಾಟ ನಡೆಸಿ ಮನೆಗೆ ಬರುತ್ತಾಳೆ, ಮನೆಯಲ್ಲಿ ಅತ್ತೆಯ ಪ್ರಶ್ನೆಗೆ ಅವಳು ಕೊಡುವ ಉತ್ತರ ತುಂಬಾ ಮಾರ್ಮಿಕವಾದುದು. **ಬಸವಣ್ಣನ ಘೂಳಿ ಬೆನ್ನಗೊಂಡೆ** ಎಂಬುದು ಧ್ವನಿಪೂರ್ಣವಾಗಿದೆ. ಘೂಳಿ ಎಂದರೆ ಗೂಳಿ = ಎತ್ತು, ದೇವರ ಹೆಸರಿನಲ್ಲಿ ಬಿಟ್ಟಿರುವ ಹೋರಿ. ದೇವರ ಹೆಸರಿನಲ್ಲಿ ಬಿಟ್ಟಿರುವುದರಿಂದ ಇಂತಹ ಹೋರಿಗೆ ಯಾರೂ ಯಾವುದಕ್ಕೂ ತಡೆಯುವುದಿಲ್ಲ. ಹೀಗಾಗಿ ಅದು ಮನಬಂದಂತೆ ತಿರುಗುತ್ತದೆ, ತಿನ್ನುತ್ತದೆ, ಅಡ್ಡಾಡುತ್ತದೆ. ಕಡಿವಾಣವಿಲ್ಲದ ಪ್ರಾಣಿ. ಅದು ಬಸವಣ್ಣನ ಹೆಸರಿನಲ್ಲಿ ಬಿಟ್ಟದ್ದು, ಅಂತಹದ್ದು ಬೆನ್ನು ಹತ್ತಿತ್ತು ಎಂದು. ಅದರಿಂದ ತಪ್ಪಿಸಿಕೊಂಡು ಬರುವಾಗ ಮೈಕೈಯೆಲ್ಲಾ ಕೆಂಪು ಧೂಳು ಮೆತ್ತಿಕೊಂಡಿತು ಎಂದು ದಿಟ್ಟತನದಲ್ಲಿ ಉತ್ತರಿಸುವುದು ಗಮನಾರ್ಹವಾಗಿದೆ. 'ಘೂಳಿ' 'ಕೆಂಪು ಧೂಳಿ' ಇವು ಬೀದರವನ್ನು ಸಂಕೇತಿಸುವ ಪದ ಮತ್ತು ಮಣ್ಣು ಎಂಬುದು ಸಹ ಗಮನೀಯವಾಗಿದೆ. "ತನ್ನ ಆತ್ಮಾಭಿಮಾನಕ್ಕೆ ಕುಂದುಂಟಾಗದಂತೆ ಅದರೊಂದಿಗೆ ಕುಟುಂಬದ ಸೌಹಾರ್ದ ಹಾಳಾಗದಂತೆ ಕಾಯ್ದುಕೊಳ್ಳುವ ಅವಳ ಪ್ರಯತ್ನವೂ ಸುಸಂಗತವಾದ ಸ್ತ್ರೀವಾದಿ ಚಿಂತನೆಯೇ"[೧೧೩] ಎಂಬ ಮಾತು ಈ ಹಾಡಿನ ಹೆಣ್ಣು ಮಗಳಿಗೆ ಅಕ್ಷರ ಸಹ ಅನ್ವಯಿಸುವಂತಹವು. ಹೀಗಾಗಿ ಬುಲಾಯಿ ಹಾಡುಗಳಲ್ಲಿ ಸ್ತ್ರೀವಾದಿ ಚಿಂತನೆಯನ್ನು ಕಾಣಬಹುದು. ಕೊನೆಯಲ್ಲಿ ಅವಳು ತನ್ನ ಅತ್ತೆಗೆ ಹೇಳುವ

ತೇಳಿಗಿ ತೆಲಿನಿಲ್ಲ, ಕೋಳೀಗಿ ಮಲಿನಿಲ್ಲ
ಅತ್ತಿ ನನ್ನ ಮಾತು ನಿಜಬಿಲ್ಲ

ಎಂಬುದು ಅವಳ ದಿಟ್ಟತನ, ಸತ್ಯತನ ಹಾಗೂ ಸ್ಥಿತ ಪ್ರಜ್ಞತೆಯನ್ನು ಬಿಂಬಿಸುವಂತಹು -ಗಳೆನ್ನಬಹುದು.

ಜನಪದ ಮಹಿಳೆಗೆ ತನ್ನ ಬಗ್ಗೆ ಪೂರ್ಣ ವಿಶ್ವಾಸವಿರುವುದು ಕಂಡು ಬರುತ್ತದೆ. ಗಂಡಿಗಿಂತ ತಾನೇನು ಕಡಿಮೆಯಲ್ಲ ಎಂಬುದು ವ್ಯಕ್ತವಾಗುತ್ತದೆ. ಇದುವರೆಗೆ ಶಿಷ್ಟ ಸಾಹಿತ್ಯದಲ್ಲಿ ಮಹಾಭಾರತದ ದ್ರೌಪದಿಯನ್ನು ಕೇವಲ ಸೀರೆ ಸೆಳೆಯಿಸಿಕೊಂಡು, ಅಜ್ಞಾತದವರೆಗಿನ ವನವಾಸ ಮಾಡಿದ ಕುರುಕ್ಷೇತ್ರ ಯುದ್ಧಕ್ಕೆ ಹುರಿದುಂಬಿಸಿದ ಸ್ತ್ರೀ ಪಾತ್ರದಲ್ಲಿಯೇ ಓದಿದ್ದು, ಕೇಳಿದ್ದು, ನೋಡಿದ್ದು ಕಂಡು ಬರುತ್ತದೆ. ಆದರೆ ನಮ್ಮ ಗರತಿಯರು ಅಷ್ಟಕ್ಕೆ ಬಿಡುವುದಿಲ್ಲ. ದ್ರೌಪದಿಯನ್ನು ಸಹ ಪ್ರತಿ ಜೂಜಾಟಕ್ಕೆ ಹಚ್ಚಿ ಧರ್ಮರಾಜನು ಸೋತದ್ದನ್ನೆಲ್ಲಾ ಹಿಂತಿರುಗಿಸಿ ಪಡೆದುಕೊಂಡಿರುವ ಚಿತ್ರಣವನ್ನು ಬುಲಾಯಿ ಹಾಡಿನಲ್ಲಿ ಕಂಡು ಬರುವುದು ವಿಶಿಷ್ಟವಾಗಿದೆ. ಇದು ನಮ್ಮ ಹೆಣ್ಣು ಮಕ್ಕಳ ಸ್ತ್ರೀಪರ ಚಿಂತನೆಯೆಂದೇ ಕರೆಯಬಹುದು. ಹಾಗೇ ನೋಡಿದರೆ ಜನಪದ ಹೆಣ್ಣು ಮಕ್ಕಳು ಎಂದಿನಿಂದಲೂ ಸ್ತ್ರೀವಾದವನ್ನು ಚಲಾಯಿಸುತ್ತಲೇ ಬಂದಿರುವುದನ್ನು ಕಾಣಬಹುದು. **ಕುಡುಕ ಗಂಡನಿರಲಿ, ಹೊಡೆವ ಗಂಡನಿರಲಿ ಅವರನ್ನು ಪ್ರಶ್ನಿಸುವ, ಪ್ರತಿಭಟಿಸುವ ಧ್ವನಿಗಳನ್ನು ಜನಪದ ಸಾಹಿತ್ಯದಲ್ಲಿ ಕಾಣುತ್ತೇವೆ.** ಶಿಷ್ಟ ಸಾಹಿತ್ಯ ವಸ್ತುವನ್ನು ಪಡೆದು, ತನ್ನದೇ ಆದ ರೀತಿಯಲ್ಲಿ ಅಲ್ಲಿಯ ಸ್ತ್ರೀ ಪಾತ್ರವನ್ನು ಚಿತ್ರಿಸಿದ, ಪ್ರತಿಭಟಿಸಿ ಹೋರಾಡಿದ್ದನ್ನು 'ಧುರಪತಿ ಗರತಿ ಹಾಡು' ಎಂಬ ಬುಲಾಯಿ ಹಾಡಿನಲ್ಲಿ ಕಾಣಬಹುದಾಗಿದೆ.

ಸುಮಾರು ೧೨೨ ನುಡಿಗಳಲ್ಲಿರುವ ಈ ಹಾಡನ್ನು ಮಹಾಭಾರತದ ಕಥೆಯೆನ್ನೆಲ್ಲಾ ಚಿತ್ರಿಸುತ್ತಾರೆ. ದುರ್ಯೋಧನ ಧರ್ಮರಾಜನನ್ನು ಹಸ್ತಿನಾವತಿಗೆ ಕರೆಯಿಸಿಕೊಳ್ಳುವುದು, ಜೂಜಾಡುವುದು, ಜೂಜಿನಲ್ಲಿ ಧರ್ಮರಾಯ ತನ್ನೆಲ್ಲಾ ಆಸ್ತಿ ಪಾಸ್ತಿ ತನ್ನವನು ಕೊನೆಗೂ ತನ್ನನ್ನು ಸೋಲುವುದು, ದುಶ್ಯಾಸನನು ದ್ರೌಪದಿಗೆ ಎಳೆದುಕೊಂಡು ಸಭೆಗೆ ತರುವುದು, ಅಲ್ಲಿ ಅವಳ ಸೀರೆ ಸೆಳೆಯುವುದು ಎಲ್ಲವನ್ನು ಶಿಷ್ಟ ಸಾಹಿತ್ಯದಂತೆ ಹಾಡುವುದು ಕಂಡು ಬರುತ್ತದೆ. ಅಲ್ಲಿಂದ ಮುಂದೆ

ನಾನಿನ್ನು ಸೀರಿ ಸೆಳೆದು ಕೈಯೆಲ್ಲ ನೊಂದಿದಾವ
ನಾರೀ ನೀ ಹೋಗ ಅರಮನಿಗೆ ಕೋಲೆಣ್ಣ ಕೋಲೆ
ಬರಲಾಕ ಬಂದಿದ ಹಿಂದಕ್ಹ್ಯಾಂಗ ಹೋಗತಿನಿ
ಹಚ್ಚಂದಳ ಪಗಡಿ ಪತಿ ಜೂಜ ಕೋಲೆಣ್ಣ ಕೋಲೆ
ಮಿತ್ರ ನಿನ್ನ ಸೀರಿ ಸೆಳೆದು ಬಟ್ಟೆಲ್ಲಾ ನೋಯ್ದವ
ಮಿತ್ರಿ ನೀ ಹೋಗ ಅರಮನಿಗ ಕೋಲೆಣ್ಣ ಕೋಲೆ
ಬಾರಪ್ಪ ದುಸವಾಸ ಕೇಳಪ್ಪ ನನ್ನ ಮಾತು
ಹೋಗಿ ದುರಪತಿನಿ ಖಳವಿ ಬಾರೋ ಕೋಲೆಣ್ಣ ಕೋಲೆ
ಬರಲಾಕ ಬಂದಿದ ಹಿಂದಕ್ಹ್ಯಾಂಗ ಹೋಗಲಿ
ನೀ ಹಚ್ಚಂದಳ ಪಗಡಿ ಪತಿ ಜೂಜ ಕೋಲೆಣ್ಣ ಕೋಲೆ
ಆಳ ಅರಸಕಿನ ಗೆದ್ದ ಕೂಡ ಪಲ್ಲಕಿನ ಗೆದ್ದ

ಸಾರಂಗದ ಪ್ಯಾಟಿ ಮಾಳಗಿನ ಗೆದ್ದ ಕೋಲೆಣ್ಣ ಕೋಲೆ
ಸಾರು ಅಂಗದ ಪ್ಯಾಟಿ ಮಾಳಗಿ ಮ್ಯಾಲನಾಗ
ಇರುವ ತನ್ನಗ ಗೆದ್ದಾಳ ದುರುಪತಿ ಕೋಲೆಣ್ಣ ಕೋಲೆ [೧೧೪]

ಈ ರೀತಿಯಾಗಿ ದುರ್ಯೋಧನನಿಗೆ ಪಣ ಒಡ್ಡಿ ಧರ್ಮರಾಜ ಸೋತಿದ್ದ ತನ್ನೆಲ್ಲವನ್ನು ಮತ್ತೆ ಗೆದ್ದುಕೊಳ್ಳುವುದು ಈ ಬುಲಾಯಿ ಹಾಡಿನಲ್ಲಿ ಮಾತ್ರ ಕಂಡು ಬರುತ್ತದೆ. ಅಂತೆಯೇ ಜನಪದ ಮಹಿಳೆ ಸದಾ ಬದುಕಿನೊಂದಿಗೆ ಹೋರಾಡುವದನ್ನು ಕಾಣಬಹುದು. ಇಂತಹ ಹೋರಾಟವನ್ನು ಈ ಹಾಡಿನಲ್ಲಿ ಕಾಣಬಹುದು. ದ್ರೌಪದಿಯು ತಾನು ಹಿಂದಕ್ಕೆ ಹೋಗದೆ ಮತ್ತೊಮ್ಮೆ ಆಟ ಆಡಲು ಕೇಳುತ್ತಾಳೆ. ಮೊದ ಮೊದಲು ಬೇಡ ಹೋಗು ಎಂದು ತಿರಸ್ಕರಿಸುವ ದುರ್ಯೋಧನ ಮುಂದೆ ಪಗಡಿಯಾಡುತ್ತಾನೆ. ಆದರೆ ಅಲ್ಲಿ ದುರುಪತಿ ಎಲ್ಲವನ್ನು ಗೆದ್ದುಕೊಂಡು ಬಿಡುತ್ತಾಳೆ. ಇಂತಹ ಧೈರ್ಯದ ಪ್ರಸಂಗವನ್ನು ಚಿತ್ರಿಸಿದ್ದು ಇಲ್ಲಿ ಕಂಡು ಬರುತ್ತದೆ. ಇದು ಸ್ತ್ರೀವಾದದ ಅಂಶವೇ ಎನ್ನಬಹುದು. ಹೀಗೆ ಬುಲಾಯಿ ಹಾಡುಗಳಲ್ಲಿ ಹಲವಾರು ಹಾಡು ಸ್ತ್ರೀವಾದದ ಅಂಶಗಳನ್ನು ಪ್ರತಿಬಿಂಬಿಸುವುದು ಕಂಡುಬರುತ್ತದೆ. ಅಂತೆಯೇ ಬುಲಾಯಿ ಸಂಸ್ಕೃತಿಯ ನೆಲೆಯನ್ನು ಸ್ತ್ರೀವಾದ ಸಾಹಿತ್ಯದಲ್ಲಿಯೂ ಕಾಣಬಹುದಾಗಿದೆ.

ಇಂತಹ ಸ್ತ್ರೀವಾದವನ್ನು ಪ್ರತಿಬಿಂಬಿಸುವ ಹಾಡುಗಳೆಂದರೆ 'ಧೋಲಿ ಮಗನ ಹಾಡು' 'ಹೆಣ್ಣು ಮಗಳ ಉಸಿರು', 'ಕೆರೆ ಕಟ್ಟಾ ಹಾಡು' ಮುಂತಾದವುಗಳು.

ಹೆಣ್ಣು ಮಗಳ ಉಸಿರು ಹಾಡಿನಲ್ಲಿ ತವರು ಮನೆಗೆ ಬಂದ ತಂಗಿಯನ್ನು ಅಣ್ಣ ಅಸಡ್ಡೆಯಿಂದ ಕಾಣುತ್ತಾನೆ. ಅಲ್ಲದೇ ತನ್ನ ಮಡದಿಯ ಪರ ವಹಿಸಿ ಮಾತನಾಡುತ್ತಾನೆ. ಕೆಲಸವನ್ನೆಲ್ಲಾ ತಂಗಿಗೆ ಮಾಡಲು ಹೇಳುತ್ತಾನೆ. ಆಗ ತಂಗಿ ಅತ್ತಿಗೆಯನ್ನು ಮಾಡಲು ಎಬ್ಬಿಸು ಎಂದಾಗಂ ಅಣ್ಣ ಮಾಡುವುದಾದರೆ ಮಾಡು ಇಲ್ಲದಿದ್ದರೆ ಬಂದ ಹಾದಿ ಹಿಡಿದು ಹೋಗು ಎನ್ನುತ್ತಾನೆ. ಅದಕ್ಕ ಅವಳು ಕುದುರೆಯನ್ನು ಕಟ್ಟಿ ಕಳುಹಿಸು ಎನ್ನುತ್ತಾಳೆ. ಆದರೆ ಅಣ್ಣ ಕಳುಹಿಸುವದಿಲ್ಲ. ಆಗ ತಂಗಿಯ ಸ್ವಾಭಿಮಾನ ಸಿಡಿದೆದ್ದು ಅಲ್ಲಿಂದ ಹೊರಟು ಹೋಗುತ್ತಾಳೆ.

ಅವಳು ಹೋದ ಮೂರು ದಿವಸಕ್ಕೆ ಮನಿ ಮಂದಿಗೆಲ್ಲಾ ಉರಿ ಛಳಿ ಬರುತ್ತವೆ. ಕೇಳಿಸಿ ನೋಡಿದಾಗ ದೇವರು-ದಿಂಡಿರು ಇಲ್ಲ ಮನಿ ಹೆಣ್ಣು ಮಗಳ ಉಸಿರು ಎಂದು ಹೇಳುತ್ತಾರೆ. ಆಗ ಅಣ್ಣ ಕುದುರೆಯನ್ನು ತೆಗೆದುಕೊಂಡು ಕರೆಯಲು ಹೋಗುತ್ತಾನೆ. ಅಣ್ಣ ಕರೆಯಲು ಬಂದಾಗ ಇವಳ ಆತ್ಮಾಭಿಮಾನವು ಪುಟಿದೆದ್ದು ಪ್ರತಿಕ್ರಿಯಿಸಲು ಪ್ರಾರಂಭಿಸುತ್ತಾಳೆ. 'ನಾನುನಿಮ್ಮ ಮನೆಗೆ ಬರುವುದಿಲ್ಲ. ನಮ್ಮ ಮನೆಯಲ್ಲಿ ಕೆಲಸದವರಿಲ್ಲ. ಅಡುಗೆ ಮಾಡುವವರಿಲ್ಲ. ಇಂತಹದ್ದನ್ನು ಬಿಟ್ಟು ಬರುವುದಿಲ್ಲ' ಎನ್ನುತ್ತಾಳೆ. ಅದಕ್ಕೆ ಅಣ್ಣ ನಿನಗೆ ಬೇಕಾದ ಎಲ್ಲಾ ಕೆಲಸದವರನ್ನು ಕೊಡುತ್ತೇನೆ ಮನೆಗೆ ಬಾ ಎಂದು ಬಿನ್ನವಿಸುತ್ತಾನೆ. ಅದು ಈ ರೀತಿಯಲ್ಲಿದೆ.

ಅಡಗಿ ಮಾಡುವರಿಗಿ ಕೊಡುತ ಉಳ್ಳಕ ನೀಡವರಿಗಿ ಕೊಡುತ
ಬರಬೇಕ ತಂಗಿ ಮದವೀಗ ಕೋಲು ಕೋಲೆ

ಹಸಿರು ಸೀರಿ ಉಡಸ್ತಿನಿ ಹಸಿರು ಕುಪ್ಪಸ ತೊಡಸ್ತಿನಿ
ಬರಬೇಕ ತಂಗಿ ಮದವೀಗ ಕೋಲು ಕೋಲೆ
ಹಸಿರು ಸೀರೆ ನಾವ್ಹೋಲ್ಲೆ ಹಸಿರು ಕುಪ್ಪಸ ನಾವ್ಹೋಲ್ಲೆ
ಉಡಸ್ಕೋಗೋ ನಿನ್ನ ಮಡದಿಗ ಕೋಲು ಕೋಲೆ
ತಪ್ಪಾಯ್ತು ನನ್ನಿಂದ ಮನ್ನಿಸ ಮನಿಗಿ ಬಂದು
ಹಿಂಗಾಗದವ್ವ ಮುಂದೆಂದು ಕೋಲು ಕೋಲೆ [೧೧೫]

ಎಂದು ತಪ್ಪೊಪ್ಪಿ ಕೊಳ್ಳುವವರೆಗೆ ಅವಳು ಬಿಡುವುದಿಲ್ಲ. ಈ ರೀತಿಯಾಗಿ ತನ್ನ ಸ್ವಾಭಿಮಾನಕ್ಕೆ ಕುಂದುಂಟಾದಾಗ ಹೆಣ್ಣು ಮಗಳು ಪ್ರತಿಭಟಿಸುವುದನ್ನು ಈ ಹಾಡಿನಲ್ಲಿ ಕಾಣಬಹುದು. ಹೊರಗಿನವರಿರಲಿ, ತನ್ನ ಸಂಬಂಧಿಯಾಗಿರಲಿ, ಸ್ವತಃ ಒಡ ಹುಟ್ಟಿದವನಿಂದಲೂ ಅವಳಿಗೆ ನೋವು, ಅನ್ಯಾಯ ಆದರೆ ಅವಳು ಪ್ರತಿಭಟಿಸುವುದು ಕಂಡು ಬರುತ್ತದೆ. ಅಣ್ಣನು ಮಾಡಿದ ಅವಮಾನವನ್ನು ಅವಳು ಸಹಿಸಲು ತಯ್ಯಾರಿಲ್ಲ. ಅದಕ್ಕೆ ಪ್ರತಿಯಾಗಿ ಕೆರಳಿ ಬಿಡುತ್ತಾಳೆ. ಅಂತೆಯೇ ನಮ್ಮ ಜನಪದದಲ್ಲಿ ಇಂದಿಗೂ ಹಳ್ಳಿಗಳಲ್ಲಿ ಮನೆಯ ಹೆಣ್ಣು ಮಕ್ಕಳನ್ನು ನೋಯಬಾರದು, ಅವರು ನೊಂದು ಉಸಿರು ಹಾಕಿದರೆ ಮನೆಗೆ ಶ್ರೇಯಸ್ಸಲ್ಲಾ ಎಂಬುದನ್ನು ಇಂದೂ ಹೇಳುವುದು ಕಂಡು ಬರುತ್ತದೆ. ಬಹುಶಃ ಅವಳು ಒಲಿದರೆ ನಾರಿ ಮುನಿದರೆ ಮಾರಿ ಎಂಬುದು ಸಹ ಇದನ್ನೆ ಪ್ರತಿಬಿಂಬಿಸುವಂತೆ ಕಾಣುತ್ತದೆ. ಅದಕ್ಕಾಗಿ ಹೆಣ್ಣು ಮಗಳೆಂದರೆ ಮನೆಯವರ ಪಾಲಿಗೆ ತುಂಬಾ ಗೌರವ, ಜೊತೆಗೆ ಭಯ ಕೂಡ. ಎಲ್ಲಿ ಅವಳು ಉಸಿರು ಹಾಕುತ್ತಾಳೋ, ಉಸಿರು ಹಾಕಿದರೆ ಅದು ಹತ್ತದೇ ಬಿಡದು ಎಂಬ ನಂಬಿಕೆಗಳು ಸಹ ಈ ಹಿನ್ನಲೆಯಲ್ಲಿಯೇ ಹುಟ್ಟಿರಬಹುದು.

ಇಂದಿನ ಸ್ತ್ರೀವಾದಿ ಚಿಂತನೆ, ಚಳುವಳಿಗಳು ಕೈಗೊಳ್ಳುತ್ತಿರುವ ಕಾರ್ಯಗಳನ್ನು ಅಂದಿನ ಜನಪದ ಮಹಿಳೆಯರ ಜೀವನದ ನಿತ್ಯ ಆಚರಣೆಗಳಾಗಿ ಕಂಡು ಬರುತ್ತವೆ.ಅಂತೆಯೇ ಜನಪದರಲ್ಲಿ ಶ್ರೀಸಾಮಾನ್ಯ ಸ್ತ್ರೀಯಿಂದ ರಾಜಮಾತೆಯವರೆಗೂ ತಮಗಾಗುವ ಅನ್ಯಾಯ, ಅವಮಾನಗಳ ವಿರುದ್ಧ ಧ್ವನಿ ತೆಗೆದದ್ದು, ಪ್ರತಿಭಟಿಸಿದ್ದನ್ನು ಕಾಣಬಹುದು. ಅಂತಹ ಜನಪದ ಜೀವನದ ವಿಷಯ ವಸ್ತುಗಳನ್ನು ಹೊಂದಿರುವ ಬುಲಾಯಿ ಹಾಡುಗಳಲ್ಲಿಯೂ ಇವುಗಳನ್ನು ಕಾಣಬಹುದಾಗಿದೆ. ಅಷ್ಟೇ ಅಲ್ಲ ಈ ಸಂಘಟನೆ, ಚಳುವಳಿಗಳ ಬದ್ದತೆಗಳಿಗೋ, ಸಿದ್ಧಾಂತಗಳಿಗೂ ಒಳಗಾಗಿ ಒಟ್ಟಿನಲ್ಲಿ ಹೋರಾಡುವುದು ಅಲ್ಲಿ ಕಂಡು ಬರುವುದಕ್ಕಿಂತ ಪ್ರತಿಯೊಬ್ಬ ಮಹಿಳೆಯು ತನ್ನ ತನಕ್ಕಾಗಿ ಹೋರಾಡಿದ, ಪ್ರತಿಭಟಿಸಿದ, ಪ್ರತಿಕ್ರಿಯೆ ವ್ಯಕ್ತಪಡಿಸಿದ ಬುಲಾಯಿ ಹಾಡುಗಳನ್ನು ಕಾಣಬಹುದು.

ಈ ರೀತಿಯಲ್ಲಿ ಬುಲಾಯಿ ಹಾಡುಗಳ ಸಾಂಸ್ಕೃತಿಕ ನೆಲೆಗಳನ್ನು ಹಲವು ರೀತಿಗಳಲ್ಲಿ ಕಾಣಬಹುದಾಗಿದೆ.

ಅಡಿ ಟಿಪ್ಪಣಿ

೧. ಚಂದ್ರಶೇಖರ ಪಾಟೀಲ : ಸಂಕ್ರಮಣ, ಸಂಪುಟ ೬೭, ಸಂಚಿಕೆ ೦೫.೦೬.೨೦೦೦, ಪುಟ ೩೯

೨. ಕಸ್ತೂರಿಬಾಯಿ ಮೈಲೂರ

೩. ಜಯಶ್ರೀ ರಾಜಪ್ಪ ಚಳಕಾಪೂರ

೪. ಡಾ॥ ಕಾಶಿನಾಥ ಅಂಬಲಗೆ : ಕೌದಿ, ೧೯೯೩, ಪುಟ ೪೮.

೫. ಡಾ॥ ದೇವೇಂದ್ರಕುಮಾರ ಹಕಾರಿ : ಜಾನಪದ ಸಾಮಾಜಿಕ ಕಥನಗೀತೆಗಳಲ್ಲಿ ದುಃಖಾಂತ ನಿರೂಪಣೆ, ೧೯೮೫, ಪುಟ ೧೯೦

೬. -ಅದೇ-

೭. ಡಾ॥ ತಿ.ನಂ. ತಪ್ಪಸ್ವಿಕುಮಾರ : ಕನ್ನಡ ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ ೧೯೮೨, ಪುಟ ೧೧೯

೮. ದೇಶಾಂಶ ಹುಡಗಿ : ಧರಿನಾಡಿನ ಕಾವ್ಯ, ೨೦೦೧, ಪುಟ ೧ ರಿಂದ ೮

೧೦. ಬಿರೂಪಾಕ್ಷಯ್ಯ ಶಿವಲಿಂಗಯ್ಯ ಮಠಪತಿ ಗೋರಟಾ : ಹೈದ್ರಾಬಾದ ಕರ್ನಾಟಕ ಜಲಿವಾಲಾಬಾಗ ಗೋರಾಟಾ ೨೦೦೬.

೧೧. ದೇಶಾಂಶ ಹುಡಗಿ : ಧರಿನಾಡಿನ ಕಾವ್ಯ, ೨೦೦೧, ಪುಟ ೭.

೧೨. -ಅದೇ-

೧೩. ಮಾದೇವಿ ನೀಲಕಂಠೆ ತಡೋಳಾ

೧೪. ಜಗನ್ನಾಥ ಹೆಬ್ಬಾಳೆ ಎಸ್ : ಬೀದರ ಜಿಲ್ಲೆಯ ಬುಲಾಯಿ ಹಾಡುಗಳು ೧೯೯೬, ಪುಟ ೧೬

೧೫. ಚ.ನ. ಶಂಕರಾವ್ : ಸಮಾಜಶಾಸ್ತ್ರ ಸಂಪುಟ ೧, ೧೯೯೮, ಪುಟ ೨೮೩

೧೬. ಡಾ॥ ನಂ. ತಪ್ಪಸ್ವಿಕುಮಾರ : ಕನ್ನಡ ಜನಪದಗೀತೆಗಳ ಸಾಂಸ್ಕೃತಿಕ ಅಧ್ಯಯನ, ೧೯೮೨, ಪುಟ ೫೬.

೧೭. ಗಂಗಮ್ಮಾ ನರಸಿಂಗ ಉಪ್ಪಾರ

೧೮. ಶೋಭಾ ಕಣಜಿ

೧೯. ಚಂದ್ರಮ್ಮ ಗುರುಪಾದಪ್ಪ ವಡಗಾಂವ

೨೦. ಮಲ್ಲಮ್ಮ ಕಾಸರತೂಗಾಂವ

೨೧. -ಅದೇ-

೨೨. -ಅದೇ-

೨೩. -ಅದೇ-

೨೪. -ಅದೇ-

೨೫. -ಅದೇ-

೨೬. -ಅದೇ-

೨೭. ಗೌರಮ್ಮ ನರಸಿಂಗ ಮರೂರು

೨೮. -ಅದೇ-

೨೯. -ಅದೇ-

೩೦. ಗಂಗಮ್ಮ ನರಸಿಂಗ ಉಪ್ಪಾರ

೩೧. -ಅದೇ-
೩೨. -ಅದೇ-
೩೩. ಗೌರಮ್ಮ ಕಾಡಾದಿ ಹುಲಸೂರ
೩೪. -ಅದೇ-
೩೫. ಕಮಳಾಬಾಯಿ ಮಾಮಾನೇ
೩೬. ಡಾ॥ ನಂ. ತಪಸ್ವೀಕುಮಾರ : ಕನ್ನಡ ಜನಪದಗೀತೆಗಳ ಸಾಂಸ್ಕೃತಿಕ ಅಧ್ಯಯನ ೧೯೮೨, ಪುಟ ೬೧
೩೭. ತೇಜಮ್ಮಾ ಮಣಗೀರೆ ಕನಕಟ್ಟಾ
೩೮. ಸಂಗಮ್ಮಾ ಹುಮನಾಬಾದ
೩೯. -ಅದೇ-
೪೦. -ಅದೇ-
೪೧. ಗಂಗವ್ವ ನರಸಿಂಗ ಪರತಾಪುರ
೪೨. -ಅದೇ-
೪೩. -ಅದೇ-
೪೪. -ಅದೇ-
೪೫. ಕಸ್ತೂರಿಬಾಯಿ ಮೈಲೂರು
೪೬. -ಅದೇ-
೪೭. ಶಕುಂತಲಾ ಹಾರಕುಡೆ ಕಣಜಿ
೪೮. ಗೌರಮ್ಮ ಉಪ್ಪಾರ ಬಾಲಕುಂದಿ
೪೯. ನರಸಮ್ಮ ಡೋಣಗಾಪುರ
೫೦. -ಅದೇ-
೫೧. -ಅದೇ-
೫೨. -ಅದೇ-
೫೩. -ಅದೇ-
೫೪. -ಅದೇ-
೫೫. -ಅದೇ-
೫೬. -ಅದೇ-
೫೭. -ಅದೇ-
೫೮. ಕಾಪಸೆ ರೇವಪ್ಪ : ಮಲ್ಲಿಗೆ ದಂಡೆ, ೧೯೯೦, ಪುಟ ೫೮.
೫೯. ಲಕ್ಷ್ಮಿನರಸಿಂಗ ತಾದಲಾಪೂರ
೬೦. -ಅದೇ-
೬೧. -ಅದೇ-
೬೨. -ಅದೇ-
೬೩. -ಅದೇ-
೬೪. -ಅದೇ-
೬೫. ನಾಗಮ್ಮಾ ಶಂಕ್ರೆಪ್ಪಾ ಕೋಟಗ್ಯಾಳ
೬೬. ಸುಲೋಚನಾ ಬಸವಕಲ್ಯಾಣ
೬೭. -ಅದೇ-
೬೮. -ಅದೇ-

೭೯. -ಅದೇ-
೭೦. ಶಕುಂತಾಲ ಬಸವಕಲ್ಯಾಣ
೭೧. ಗೌರವ್ವ ಕಾಡಾದಿ ಹುಲಸೂರ
೭೨. ಡಾ॥ ದೇವೇಂದ್ರಕುಮಾರ ಹಕಾರಿ: ಜಾನಪದ ಸಾಮಾಜಿಕ ಕಥನಗೀತೆಗಳಲ್ಲಿ ದುಃಖಾಂತ ನಿರೂಪಣೆ, ೧೯೮೫, ಪುಟ ೧೯೦
೭೩. ಪಾರ್ವತಿ ಹಾರಕುಡೆ ಮಲ್ಕಾಪೂರ
೭೪. ಸುಲೋಚನಾ ನಾರಾಯಣಪುರ
೭೫. -ಅದೇ-
೭೬. ಸುಶೀಲಮ್ಮ ಜಿ. ಆಳವಾಯಿ
೭೭. -ಅದೇ-
೭೮. ನಾಗನಾಥ ಪ್ರಭಾ : ಆತ್ಮಜ್ಞಾನ ೨೦೦೨, ಪುಟ ೧೫೬
೭೯. ಮಹಾಂತೇಶ ಗುಚ್ಚೀವಾಡ್ : ಜಾನಪದದಲ್ಲಿ ಆರ್ಥಿಕ ವಿಚಾರಗಳು, ೧೯೮೬, ಪುಟ-೧ ಪೀಠಿಕೆ
೮೦. ಚಂದ್ರಮ್ಮ ಹಾರಕೂಡೆ ಹುಲಸೂರ
೮೧. -ಅದೇ-
೮೨. -ಅದೇ-
೮೩. ಗಂಗಮ್ಮಾ ನರಸಿಂಗ ಉಪ್ಪಾರ
೮೪. ದೇವೇಂದ್ರಕುಮಾರ ಹಕಾರಿ : ಜಾನಪದ ಕಥನಗೀತೆಗಳಲ್ಲಿ ದುಃಖಾಂತ ನಿರೂಪಣೆ, ೧೯೮೫, ಪುಟ ೧೯೦
೮೫. ಶೋಭಾ ಶಂಕರ ಕಣಜಿ
೮೬. ಚಂದ್ರಮ್ಮಾ ಹಾರಕುಡೆ ಹುಲಸೂರ
೮೭. ನಾಗಮ್ಮ ಶಂಕರ ಬಸವಕಲ್ಯಾಣ
೮೮. ನರಸವ್ವ ಬಿ. ಹಣಮಂತವಾಡಿ
೮೯. ನಾಗಮ್ಮ ಶಂಕರ ಬಸವಕಲ್ಯಾಣ
೯೦. ನರಸವ್ವ ಬಿ. ಹಣಮಂತವಾಡಿ
೯೧. ನಾಗಮ್ಮ ಶಂಕರ ಬಸವಕಲ್ಯಾಣ
೯೨. ಶಾಂತಮ್ಮಾ ಹೊನ್ನಪ್ಪ ಬಗದಲ್
೯೩. ಗುಂಡಮ್ಮಾ ಮಲ್ಲಪ್ಪ ಚಿಟಗುಪ್ಪಾ
೯೪. ಮಾಡವ್ವ ಗುರಪ್ಪಾ ನಿರ್ಣಾ
೯೫. -ಅದೇ-
೯೬. ಗುರಮ್ಮಾ ಗುಂಡಪ್ಪಾ ಬೋಸಗಾ
೯೭. ಚಿನ್ನಮ್ಮ ಸಂಗಪ್ಪ ಸಂತಪೂರ
೯೮. ಪರ್ಯಾಗಬಾಯಿ ಬಿ. ಬೋಸಗಾ
೯೯. ಚಿನ್ನಮ್ಮ ಸಂಗಪ್ಪ ಸಂತಪೂರ
೧೦೦. ಕಸ್ತೂರಿಬಾಯಿ ಎಂ. ಮೈಲೂರು
೧೦೧. ಜಗನ್ನಾಥ ಹೆಬ್ಬಾಳೆ ಎಸ್. : ಬೀದರ ಜಿಲ್ಲೆಯ ಬುಲಾಯಿ ಹಾಡುಗಳು, ೧೯೯೬, ಪುಟ ೩೭
೧೦೨. ನಾಗಮ್ಮಾ ಎಸ್. ಬಸವಕಲ್ಯಾಣ

೧೦೩. ಗೌರಮ್ಮ ನಾರಾಯಣಪೂರ
೧೦೪. ಗಂಗಮ್ಮಾ ನರಸಿಂಗ ಉಪ್ಪಾರ
೧೦೫. ಚಂದ್ರಮ್ಮ ಹಾರಕುಡೆ ಹುಲಸೂರ
೧೦೬. ಬಸಮ್ಮ ಭೀಮರಾವ ಮಂದಕನಳ್ಳಿ
೧೦೭. ಪುತಳಾಬಾಯಿ ಬಿ. ಬಸವಕಲ್ಯಾಣ
೧೦೮. ಚಂದ್ರಮ್ಮ ರೇವಣಪ್ಪ ಹಲಬರ್ಗೆ
೧೦೯. ಡಾ॥ ಎಚ್.ಎಸ್. ಶ್ರೀಮತಿ : ಸ್ತ್ರೀವಾದ, ೨೦೦೩, ಪುಟ ೧೩.
೧೧೦. ಪುತಳಾಬಾಯಿ ಬಸವಕಲ್ಯಾಣ
೧೧೧. -ಅದೇ-
೧೧೨. -ಅದೇ-
೧೧೩. ಡಾ॥ ಎಚ್.ಎಸ್. ಶ್ರೀಮತಿ : ಸ್ತ್ರೀವಾದ, ೨೦೦೩, ಪುಟ ೧೩.
೧೧೪. ಚಂದ್ರಮ್ಮಾ ಹಾರಕುಡೆ ಹುಲಸೂರ
೧೧೫. ಚನ್ನವ್ವ ಗುಂಡಪ್ಪ ಮಲ್ಲಾಪೂರ

ಅಧ್ಯಾಯ - ೫

ಬುಲಾಯಿ ಹಾಡು ಹಾಗೂ ಇತರ ಜನಪದ ಹಾಡುಗಳ ತೌಲನಿಕ ಅಧ್ಯಯನ

ಅಧ್ಯಾಯ - ೫

ಬುಲಾಯಿ ಹಾಡು ಹಾಗೂ ಇತರ ಜನಪದ ಹಾಡುಗಳ ತೌಲನಿಕ ಅಧ್ಯಯನ

ಕನ್ನಡ ಜನಪದ ಹಾಡುಗಳು ಬಹುಮುಖವಾಗಿ ಬೆಳೆದು ಬಂದಿವೆ. ಅದರಲ್ಲಿ ಬೀಸುವ ಹಾಡು, ಕೋಲಿನ ಪದ, ದುಂದುಮೆ ಹಾಡು, ಸೀಗಿಯ ಹಾಡು, ಗೌರಿ ಹಾಡು, ಸೋಬಾನೆ ಪದ, ಹೋಳಿಯ ಹಾಡು, ಹಂತಿ ಹಾಡು, ಲಾವಣಿ ಹಾಡು, ದೇವರ ಹಾಡು, ಮೋಹರಂ ಹಾಡು, ಬುಲಾಯಿ ಹಾಡು ಇತ್ಯಾದಿಯಾಗಿ ಹಲವು ಬಗೆಗಳಲ್ಲಿ ಕಾಣಬಹುದು. ಇವುಗಳಲ್ಲಿ ಕೆಲವು ಹಾಡುಗಳು ಅವಕ್ಕೆ ಸಂಬಂಧಿಸಿದ ಕೆಲಸಗಳ ಹೆಸರಿನಲ್ಲಿ ಪ್ರಖ್ಯಾತವಾಗಿರುವುದು ಕಂಡುಬರುತ್ತದೆ. ಇನ್ನು ಹಲವು ಹಾಡುಗಳು ವಾದ್ಯ ವಿಶೇಷದೊಡನೆ ಕೇಳಿ ಬರುವುದರಿಂದ ಆಯಾ ವಾದ್ಯಗಳ ಹೆಸರಿನೊಂದಿಗೆ ಬಳಕೆಯಲ್ಲಿರುವುದು ಗಮನೀಯ. ಮತ್ತೆ ಕೆಲವು ಹಾಡುಗಳೊಂದಿಗೆ ವಾದ್ಯ, ನೃತ್ಯ ಸಮಾಗಮ ಹೊಂದಿರುವುದು ಕಂಡು ಬರುತ್ತವೆ. ಅಂತಹುಗಳಲ್ಲಿ ಕೋಲುಪದ, ಅಲಾಯಿ ಹಾಡುಗಳನ್ನು ಕಾಣಬಹುದು. ಇವುಗಳಲ್ಲಿ ಒಂದು ಪ್ರಕಾರದ ಹಾಡಿನ ಪ್ರಭಾವ ಇನ್ನೊಂದರ ಮೇಲೆ ಅಥವಾ ನೃತ್ಯದ ಪ್ರಭಾವ, ವಾಧ್ಯದ ಪ್ರಭಾವ ಮತ್ತೊಂದರ ಮೇಲೆ ಸಹಜವಾಗಿ ಆಗಿರುವುದು ಕಂಡುಬರುತ್ತದೆ. ಒಮ್ಮೊಮ್ಮೆ ಒಂದು ಪ್ರಕಾರದ ಹಾಡು ಇನ್ನೊಂದು ಹಾಡಿನ ಹುಟ್ಟಿಗೆ ಕಾರಣವೆನ್ನಬಹುದಾದರಷ್ಟು ಗಾಢ ಪ್ರಭಾವ ಬೀರಿರುವುದನ್ನು ನಾವು ಗುರುತಿಸುತ್ತೇವೆ. ಇದಕ್ಕೆ ವಾದ್ಯದ ಬಳಕೆ, ಸಾಹಿತ್ಯದ ರಚನೆ, ಹಾಡುವ ರೀತಿ, ನೃತ್ಯ ಮುಂತಾದವುಗಳು ಆಗಿರಬಹುದು. ಈ ಹಿನ್ನೆಲೆಯಲ್ಲಿ ವಾದ್ಯ ಪರಿಕರಗಳು ಇಲ್ಲದೆ ಹಾಡುವಂತಹ ಬುಲಾಯಿ ಹಾಡುಗಳು ಕೂಡ ಜನಪದ ಹಾಡಿನ ಇನ್ನೊಂದು ಪ್ರಕಾರವಾಗಿರುವ ಕೋಲಿನ ಪದ, ಅಲಾಯಿ ಹಾಡು ಹಾಗೂ ಕಥನ ಗೀತೆಗಳ ಪ್ರಭಾವಕ್ಕೊಳಗಾಗಿದೆಯೇ ಅನ್ನುವಂತಹ ಒಂದು ಸಂದೇಹ ಉಂಟಾಗುವುದರಿಂದ ಅವುಗಳಿಗಿಂತ ಬುಲಾಯಿ ಹಾಡುಗಳು ಹೇಗೆ ಭಿನ್ನ ಎಂಬುದನ್ನು ನಾವಿಲ್ಲಿ ತೌಲನಿಕವಾಗಿ ಅಧ್ಯಯನ ಮಾಡುವುದರೊಂದಿಗೆ ಅವುಗಳ ಸಾಮ್ಯ ವೈಷಮ್ಯಗಳನ್ನು ಗುರುತಿಸಬಹುದಾಗಿದೆ.

ಅಲಾಯಿ ಹಾಡು ಮತ್ತು ಬುಲಾಯಿ ಹಾಡು :

ಕನ್ನಡ ಜನಪದ ಗೀತೆಗಳಲ್ಲಿ ಮೊಹರಂ ಪದಗಳು ಪ್ರಮುಖವಾಗಿವೆ. **ಮೊಹರಂ** ಪದಗಳನ್ನು **ಕರ್ಬಲ್** ಪದಗಳೆಂದೂ, **ರಿವಾಯತ್** ಪದಗಳೆಂತಲೂ ವರ್ಣಿಸಲಾಗುತ್ತದೆ. ಅಲಾಯಿ ಕುಣಿತದ ವೇಳೆಯಲ್ಲಿ ಹಾಡುವ ಹಾಡುಗಳಾದುದರಿಂದ ಇವುಗಳಿಗೆ **ಅಲಾಯಿ ಹಾಡು**ಗಳೆಂದೂ ಕರೆಯುತ್ತಾರೆ. ಇಂತಹ ಹಾಡುಗಳನ್ನು ಮೊಹರಮ್ ಹಬ್ಬದ ಸಂದರ್ಭದಲ್ಲಿ ಮಾತ್ರ ಹಾಡುವುದು ಕಂಡುಬರುತ್ತದೆ. ಮೊಹರಂ ಹಬ್ಬವನ್ನು ಮೊಹರಂ ತಿಂಗಳಲ್ಲಿ ಆಚರಿಸುತ್ತಾರೆ. "ಸಾರ್ವಕಾಲಿಕ ಸತ್ಯದ ಹೋರಾಟದಿಂದ ಕೂಡಿದ ಕರ್ಬಲಾ ಕಾಳಗದ ಕಥೆಯನ್ನು ಮುಸಲ್ಮಾನರು ಮೊಹರಂ

ತಿಂಗಳಲ್ಲಿ ಹುತಾತ್ಮರ ಆತ್ಮಕ್ಕೆ ಶಾಂತಿಸಿಗಲೆಂದು ಆಚರಿಸುವ ಹಬ್ಬ. ಆ ವೇಳೆಯಲ್ಲಿ ಉಪವಾಸ, ಕುರಾನ್ ಪಠಣ, ದಾನಧರ್ಮ ಮಾಡುತ್ತಾ ಮೊಹರಂ ಆಚರಣೆ ಮಾಡುತ್ತಿದ್ದರೆಂಬುದನ್ನು ಇತಿಹಾಸದಲ್ಲಿ ಕಾಣಬಹುದು. ಇಂಥ ಆಚರಣೆ ತೈಮಾರಲೇನ್ (ಕ್ರಿ.ಶ. ೧೩೬೯) ಕಾಲದಲ್ಲಿ ವಿಕಾರ ರೂಪ ತಾಳಿ ಭಾರತದಲ್ಲಿ ಆಚರಿಸಲ್ಪಟ್ಟಿತು. ಸಾಮ್ರಾಟ ಅಕ್ಬರ್ (ಕ್ರಿ.ಶ. ೧೫೫೯-೧೯೧೫) ದೀನ್-ಎ-ಇಲಾಹಿ ಸ್ಥಾಪಿಸಿದ ನಂತರ ಮೊಹರಂ ಹಬ್ಬವನ್ನು ರಾಷ್ಟ್ರೀಯ ಹಬ್ಬವನ್ನಾಗಿ ಜಾನಪದರು ಆಚರಿಸತೊಡಗಿದರೆಂದು ಹೇಳಿಕೆ: ಆದಿಲ್ ಶಾಹಿ ರಾಜವಂಶಜರಿಂದ ಕರ್ಬಲಾವು ಸಂಸ್ಕಾರ ಪಡೆಯಿತೆಂದು ತಿಳಿದುಬರುತ್ತದೆ"[೧]

ಹೀಗಾಗಿ ಮೊಹರಂ ಆಚರಣೆ ಹಾಗೂ ಮೊಹರಂ ಪದಗಳು ಮೂಲದಲ್ಲಿ ಮುಸಲ್ಮಾನರಿಗೆ ಸೀಮಿತವಾಗಿದ್ದರೂ ಕಾಲಾಂತರದಲ್ಲಿ ಹಿಂದುಧರ್ಮ ಹಾಗೂ ಸಂಸ್ಕೃತಿಯ ಪ್ರಭಾವ ಅವುಗಳ ಮೇಲಾಗಿ ಹಿಂದುಗಳು ಅವುಗಳಲ್ಲಿ ಪಾಲ್ಗೊಳ್ಳಲಾರಂಭಿಸಿರಬಹುದು. ಅಂತೆಯೇ ಇಂದು ಮೊಹರಂ ಹಬ್ಬವನ್ನು ಎಲ್ಲಾ ಜಾತಿಯವರು ಭಾವೈಕ್ಯತೆಯಿಂದ ಆಚರಿಸುವುದನ್ನು ಕಾಣಬಹುದು. ಅಕ್ಬರನ ಜಾತ್ಯಾತೀತ ಭಾವನೆಯ ಸಂಕೇತವಾಗಿ ಇಂದಿಗೂ ಈ ಹಬ್ಬವನ್ನು ಎಲ್ಲಾ ಧರ್ಮದವರು ಒಟ್ಟಾಗಿ ಆಚರಿಸುವುದು ಗಮನಾರ್ಹವಾಗಿದೆ.

ಮುಸಲ್ಮಾನರ ವರ್ಷ, ತಿಂಗಳು, ವಾರ, ಹಬ್ಬಗಳಿಗೆ ಚಂದ್ರ ದರ್ಶನವೇ (ಚಾಂದರಾತ) ಕಾರಣವೆಂಬುದು ಅತಿ ಮಹತ್ವವೆನಿಸುತ್ತದೆ. ಹೀಗಾಗಿ ಅವರು ಚಂದ್ರನಿಂದಲೇ ತಮ್ಮ ಹಬ್ಬದ ದಿನವನ್ನು ನಿರ್ಧರಿಸುವುದು ಕಂಡುಬರುತ್ತದೆ. ಮೊಹರಂ ತಿಂಗಳು ಪಹಲಿ ತಾರೀಖಿನಂದು ಚಂದ್ರನನ್ನು ನೋಡಿ ಅಲಾಬಿಗೆ ಪಶ್ಚಿಮಾಭಿಮುಖವಾಗಿ ನಿಂತು ಮುಲ್ಲಾ ಸಾಹೇಬರು ಓದಿಕೆ ಹಾಕಿ ಗುದ್ದಲಿಯಿಂದ ಐದು ಸಾರೆ ಕಚ್ಚು ಹಾಕುವರು. ಅಲಾಬಿ ಎಂದರೆ ಬೆಂಕಿ. ಕೆಂಡದಿಂದ ಸಿದ್ಧಪಡಿಸಿದ ಕೊಂಡ ಎಂದರ್ಥ. ಬೇಡಿಕೊಂಡ ಶೋಕದಾಚರಣೆಯಂದು ತಿಳಿದುಕೊಂಡ ಮುಸ್ಲಿಂ ಬಾಂಧವರು ಅಂದಿನಿಂದ ಹತ್ತು ದಿನಗಳವರೆಗೆ ಉಪವಾಸ ಇರಲು ಆರಂಭಿಸಿ, ವಸ್ತ್ರದಾನ, ಅನ್ನದಾನ ಮಾಡುತ್ತ, ಕುರಾನ್ ಪಠಣ ಮಾಡುವ ಪರಿಪಾಠವನ್ನು ಕಾಣಬಹುದು.

ಮರುದಿನ ಮುಂಜಾನೆ ಓಣಿಯ ಮಕ್ಕಳು ಅಲಾಬಿಗೆ ಕಚ್ಚು ಬಿದ್ದುದು ಕಂಡು ಉತ್ಸಾಹದಿಂದ ಅಲಾಬಿ ತೋಡಿ ಗೂಡಿನಲ್ಲಿಯ ಮಣ್ಣಿನ ಕುಡಿಕೆಯನ್ನು ಹುಡುಕಿ ಅದರಲ್ಲಿಯ ದುಡ್ಡುಗಳೊಂದಿಗೆ ಮುಲ್ಲಾನವರ ಮನೆಗೆ ತಲುಪಿಸುವರು. ಆ ಹಣವನ್ನು ಬೇನೆ ಬಿದ್ದ ಮಕ್ಕಳ ಕೊರಳಲ್ಲಿ ಹಾಕಿದರೆ ರೋಗ ಗುಣವಾಗುವುದೆಂಬ ನಂಬಿಕೆಯಿದ್ದಂತೆ ಕಂಡುಬರುತ್ತದೆ.[೨]

ಗುದ್ದಲಿ ಹಾಕುವುದಕ್ಕಿಂತ ಮೊದಲು ಮುಸ್ಲಿಂರು ಮನೆಗೋಡೆಗಳಿಗೆ ಸುಣ್ಣ-ಬಣ್ಣ ಬಳಿದು, ಉಡುವ-ತೊಡುವ, ಹಾಸುವ-ಹೊದೆಯುವ ಅರಿವೆಗಳನ್ನು ನೀರಿಗೆ ಹಾಕಿ ಸ್ವಚ್ಛಗೊಳಿಸುವ ಪರಂಪರೆ ಕಂಡು ಬರುತ್ತದೆ. ಬಾಬು ಸ್ವೀಕರಿಸುವ ಮುಲ್ಲಾನವರು ದೇವರಿಡುವ ಕೋಣೆಯನ್ನು ಶುಭ್ರಗೊಳಿಸಿ ಉಡುಗೊರೆ ಹೊರತೆಗೆದು ಮಡಿ ಮಾಡಿ ಕೈ ದೇವರು (ಹಸೇನ, ಹುಸೇನರ ಹಸ್ತಗಳ ಸಂಕೇತಗಳು) ಬೆಳಗುವರು. ಕರ್ಬಲ್ ಕಾಳಗದ ಕಥೆ ಹೊತ್ತಿಗೆಗಳನ್ನು

ಹೊರತೆಗೆಯುವರು. ಹಾಡಬಲ್ಲವರು ಮತ ಬೇಧವಿಲ್ಲದೆ ಒಂದೆಡೆ ಕೂಡುವರು. ಹೆಜ್ಜೆ ಮಜಲುಗಳು ಹಾಕಿ ಕುಣಿಯಲು ಸಾಧನೆ ಪ್ರಾರಂಭಿಸುವವು.

ಹೀಗೆ ಹತ್ತು ದಿವಸಗಳ ವರೆಗೆ ಒಂದೊಂದು ರೀತಿಯ ಆಚರಣೆಗಳನ್ನು ಆಚರಿಸುವುದು ಮೊಹರಂ ಹಬ್ಬದ ವಿಶೇಷತೆಯನ್ನಬಹುದು. ಮೊಹರಂ ತಿಂಗಳ ಒಂಬತ್ತನೆಯ ದಿನ ರಾತ್ರಿಯಂದು ವೀರಮರಣ ಹೊಂದಿದ. ಇಮಾಮ ಹುಸೇನರ ಅನುಯಾಯಿಗಳ ನೆನಪಿಗಾಗಿ ಆಚರಿಸುವರು. ಅಂದು ಇಡೀ ಹಗಲು-ರಾತ್ರಿ ಅಗ್ಗಿ ತುಳಿದು ದೇವರೆದುರು ಶೋಕ ಗೀತೆಗಳನ್ನು ಹಾಡುತ್ತಾ ಕುಣಿಯುವರು ಇದೇ **ಅಲಾವಿ ಕುಣಿತ.**

ಅಲಾವಿ ಕುಣಿತ ಕೂಡಾ ಕಲಾ ಪ್ರದರ್ಶನವೆನ್ನಬಹುದು. ಇದು ಜನಪದರಲ್ಲಿ ಮಾತ್ರ ಕಂಡುಬರುವಂತಹ ಕಲೆ. ಕರ್ನಾಟಕದ ಉತ್ತರ ಭಾಗದಲ್ಲಿ ಮತ್ತು ಕರಾವಳಿ ಭಾಗದ ಉತ್ತರ ಕನ್ನಡ ಜಿಲ್ಲೆಯಲ್ಲಿ ಈ ಕುಣಿತವು ವಿಶೇಷವಾಗಿ ಕಂಡುಬರುತ್ತದೆಂಬುದು ವಿದ್ವಾಸಂರ ಮತ. ಮೊಹರಂ ತಿಂಗಳ ಹತ್ತನೆಯ ದಿನದಂದು ಮುಸಲ್ಮಾನ ಬಾಂಧವರು ಕರ್ಬಲ ಮೈದಾನದಲ್ಲಿ ನಡೆದ ಧರ್ಮಯುದ್ಧದಲ್ಲಿ ಆತ್ಮಾಹುತಿ ಮಾಡಿಕೊಂಡ ಇಮಾಂ ಹುಸೇನರ ನೆನಪಿಗಾಗಿ ಆಚರಿಸುವ ಆಚರಣೆಯಿದು.

"ಅಲಾವಿ ಕೊಂಡವನ್ನು ಮುಸಲ್ಮಾನರು ತಮ್ಮ ದೇವರ ಹಸ್ತದ ಮುಂಭಾಗದಲ್ಲಿ ಸಿದ್ಧಪಡಿಸುತ್ತಾರೆ. ಈ ಅಗ್ನಿಕೊಂಡದ ಸುತ್ತಲೂ ಕರ್ಬಲ ಪದಗಳನ್ನು ಹಾಡುತ್ತಾ ಕುಣಿಯುತ್ತಾರೆ. ಅಲಾವಿ ಕುಣಿಯುವವರು ಕಾಲಿಗೆ ಗೆಜ್ಜೆ ಕಟ್ಟಿಕೊಂಡಿರುತ್ತಾರೆ. ಒಂದು ಕೈಯಲ್ಲಿ ದೊಣ್ಣೆ ಮತ್ತೊಂದು ಕೈಯಲ್ಲಿ ಕರವಸ್ತ್ರವನ್ನು ಹಿಡಿದು, ತಲೆಗೆ ಪೇಟ ಸುತ್ತಿಕೊಂಡು ತಮಟೆ ವಾದ್ಯದ ಗತ್ತಿಗೆ ತಕ್ಕಂತೆ ವೈವಿದ್ಯಮಯ ಭಂಗಿಗಳಲ್ಲಿ ಹೆಜ್ಜೆ ಹಾಕುತ್ತಾರೆ. ಅಲಾವಿ ಗುಂಡಿಯ ಸುತ್ತ ಮೈದುಂಬಿದವರಂತೆ ಕುಣಿಯುತ್ತಾರೆ. ಕುಣಿಯುವಾಗ ಮಧ್ಯೆ ಮಧ್ಯೆ 'ಲಾಯ್ ತೋಯ್ ಧುಯ್' (ಯಾ ಇಮಾಮ್ ಥೀನ್) ಮತ್ತು 'ಯಾ ಹುಸೇನ, ಯಾ ಹುಸೇನ' ಎಂದು ಕೂಗುತ್ತಿರುತ್ತಾರೆ. ಹಸೇನ-ಹುಸೇನರ ತ್ಯಾಗ, ವೀರ, ಆದರ್ಶಗಳನ್ನು ಒಳಗೊಂಡ ಕರ್ಬಲ ಹಾಡುಗಳು ಉತ್ತರ ಕರ್ನಾಟಕದ ಬೀದರ, ಗುಲಬರ್ಗಾ, ರಾಯಚೂರು ಜಿಲ್ಲೆಗಳಲ್ಲಿ ಹೆಚ್ಚಾಗಿ ಕಂಡು ಬರುತ್ತವೆ. ಈ ಕುಣಿತದಲ್ಲಿ ಹಿಂದೂಗಳು ಸಹ ಭಾಗವಹಿಸುತ್ತಾರೆ. ಧರ್ಮಕ್ಕಾಗಿ ಹೋರಾಡಿ ಮಡಿದವರ ಕರುಣಾಜನಕವಾದ ಕಥೆ ಜನಪದರಲ್ಲಿಂದು ಸಾಂಸ್ಕೃತಿಕ ಜಾತ್ರೆಯಾಗಿ ಹಿಂದೂ-ಮುಸ್ಲಿಂಮರ ಧಾರ್ಮಿಕ ಹಾಗೂ ಸಾಂಸ್ಕೃತಿಕ ಬಾಂಧವ್ಯದ ಕೊಂಡಿಯಂತೆ ನಡೆದುಕೊಂಡು ಬರುತ್ತಲಿವೆ"[೩] ಎಂಬ ಅಭಿಪ್ರಾಯ ಗಮನಾರ್ಹವಾಗಿದೆ.

ಅಲಾಯಿ ಕುಣಿತ ಕುರಿತಾದ ಶಿರಹಟ್ಟಿಯವರ ಅಭಿಪ್ರಾಯವೂ ಉಲ್ಲೇಖನೀಯ -ವೆನಿಸುತ್ತದೆ. ಅದೇನೆಂದರೆ "ಊರಿನ ವಿಶಾಲ ಬಯಲಿನಲ್ಲಿ ಡೋಲಿ ಹಾಗೂ ಪೀರುಗಳನ್ನು ಕೂಡ್ರಿಸಿ ಮುಲ್ಲಾನವರು, ಹಿಲಾಲಿನವರು, ಕಾವಲಿಯವರು, ರಿವಾಯತ ಹಾಡುಗರರು, ಕರ್ಬಲಾ ಕಟ್ಟೀರ ಕಥೆಯನ್ನು ಕಾವ್ಯಮಾಡಿ ಯಜೀದನ (ವಜೀದನ) ಸೈನಿಕರು ಕೊಟ್ಟ ಕೀಟಲೆಗಳನ್ನು

ಬೆರೆಸಿ ಹಾಡುತ್ತ ಕೇಳುಗರನ್ನು ಅಳಿಸುವ ಸಂದರ್ಭವೆನ್ನಬಹುದು. ಹೀಗೆ ಹಾಡುವಾಗ ಇಮಾಮ ಹುಸೇನರ ಶೋಕದ ಸಂಕೇತವಾಗಿ ನಿಂತಲ್ಲಿಯೇ ನಿಂತು ಒಂಟುಕಾಲು ಹಾಕುತ್ತಾ ಎಂಟ್ಹತ್ತು ಜನ ಕೈ ಕೈ ಹಿಡಿದು ಸುತ್ತ ತಿರುಗುವರು. ಹಲಗೆಯ ಗತ್ತಿಗೊಮ್ಮೆಮ್ಮೆ ನೆಲಕ್ಕೆ ಕುಳಿತು ಮೇಲಕ್ಕೇಳುವರು ಕುಣಿಯುವವರ ಮುಂದೆ ಕರ್ಬಲಾ ಕಥಾನಕ, ಪವಾಡ ಕಥಾನಕ, ಇತರ ಕಥಾನಕ ವಸ್ತು ಕುರಿತು ಹಾಡುವ ಮುಮ್ಮೇಳ ಮತ್ತು ಹಿಮ್ಮೇಳಗಳು ಇರುವುದು ಕಂಡುಬರುತ್ತದೆ. ಈ ಮೇಳಗಳಿಗೆ ಭಜಂತ್ರಿಖಣ ಸಂಪ್ರದಾಯ, ಗೆಜ್ಜೆ ತಬಲಾಗಳನ್ನು ಅಳವಡಿಸುವರು ಕೆಲ ಊರುಗಳಲ್ಲಿ ಹೆಜ್ಜೆ ಮೇಳಗಳಿಗೆ (ಕುಣಿಯುವವರಿಗೆ) ಹಾಡುಗಾರರಿಗೆ ಸ್ಪರ್ಧೆಗಳನ್ನು ಏರ್ಪಡಿಸುವರು"[೪] ಹೀಗೆ ಅಲಾಬಿ ಮುಂದೆ ಕುಣಿಯುವುದೇ ಅಲಾಬಿ ಕುಣಿತ ಅಂತಹ ಸಂದರ್ಭದಲ್ಲಿ ಹಾಡುವ ಹಾಡುಗಳೇ **ಅಲಾಯಿ ಹಾಡುಗಳು** ಎಂಬುದು ಸೂಕ್ತವೆನಿಸುತ್ತದೆ.

'ಅಲಾಯಿ ಕುಣಿತ' 'ಅಲಾಯಿ ಹಾಡುಗಳು' ಮೊಹರಮ್ ಹಬ್ಬದಲ್ಲಿ ಕಂಡುಬಂದರೆ, 'ಭುಲಾಯಿ ಹಾಕುವುದು' ಬುಲಾಯಿ ಹಾಡುವುದು ನಾಗರ ಪಂಚಮಿ ಹಬ್ಬದಲ್ಲಿ ಕಂಡುಬರುತ್ತದೆ. 'ಅಲಾಯಿ' ಹತ್ತು ದಿನಗಳ ಆಚರಣೆಯಾದರೆ 'ಬುಲಾಯಿ' ನಾಗರ ಪಂಚಮಿ ಅಮವಾಸ್ಯೆಯಿಂದ ಸಿರಿಯಾಳ ಷಷ್ಠಿಯವರೆಗೆ ಕಾಣಬಹುದು. ಅಲ್ಲಿ ಹತ್ತನೆಯ ದಿನ ಊರ ಮೈದಾನದಲ್ಲಿ ಎಲ್ಲರೂ ಸೇರಿ 'ಅಲಾಯಿ ಕುಣಿತ' 'ಅಲಾಯಿ ಹಾಡು'ವುದು ಕಂಡುಬಂದರೆ, ಇಲ್ಲಿ ಪಂಚಮಿ ಮತ್ತು ಷಷ್ಠಿಯ ದಿನಗಳಲ್ಲಿ ಭುಲಾಯಿ ಹಾಕುವುದು ಮತ್ತು ಬುಲಾಯಿ ಹಾಡುವುದನ್ನು ಕಾಣಬಹುದು. ಅಲಾಯಿಯಲ್ಲಿ ಗಂಡು ಮಕ್ಕಳೇ ಕುಣಿಯುವುದು ಮತ್ತು ಹಾಡುವುದು ಕಂಡುಬಂದರೆ, ಬುಲಾಯಿಯಲ್ಲಿ ಹೆಣ್ಣುಮಕ್ಕಳೇ ಭುಲಾಯಿ ಹಾಕುವುದು, ಬುಲಾಯಿ ಹಾಡುಗಳನ್ನು ಹಾಡುವುದು ಕಂಡುಬರುತ್ತದೆ. ಗಂಡು ಮಕ್ಕಳು ಕಾಲಲ್ಲಿ ಗೆಜ್ಜೆ ಕಟ್ಟಿಕೊಂಡು ವಾದ್ಯದ ಗತ್ತಿಗೆ ತಕ್ಕಂತೆ ಕೈ ಕೈ ಹಿಡಿದು ಅಥವಾ ಒಂಟು ಕಾಲಿನಲ್ಲಿ ಕೂಡುತ್ತ, ಏಳುತ್ತಾ ಹೆಜ್ಜೆ ಹಾಕುತ್ತಾ ಸುತ್ತು ತಿರುಗುವುದು ಕಂಡುಬಂದರೆ, ಬುಲಾಯಿಯಲ್ಲಿ ಹೆಣ್ಣು ಮಕ್ಕಳು ಕೈ ಕೈ ಹಿಡಿದು ಹಾಡಿನ ಲಯಕ್ಕೆ ತಕ್ಕಂತೆ ಕ್ರಮಬದ್ಧತೆಯಲ್ಲಿ ಸುತ್ತುವುದು, ಹಾಡುವವರು ತಲೆಗೆ ತಲೆ ಹಚ್ಚಿ ಕೈಗಳನ್ನು ಜೀಕಿಸುವುದು ಕಂಡುಬರುತ್ತದೆ. ಆಲಾಯಿಯಲ್ಲಿ ಮುಮ್ಮೇಳ ಹಿಮ್ಮೇಳಗಳಲ್ಲಿ ಹಾಡುವುದು ಕಂಡುಬಂದರೆ ಬುಲಾಯಿಯಲ್ಲಿ ಹೆಚ್ಚಾಗಿ ಭುಲಾಯಿ ಹಾಕುವವರೇ ಮುಮ್ಮೇಳದಲ್ಲಿ ಇಬ್ಬರು ಹಾಡಿದರೆ ಹಿಮ್ಮೇಳದಲ್ಲಿ ಭುಲಾಯಿ ಹಾಕುವವರೆಲ್ಲರೂ ಹಾಡುವುದು ಕಂಡುಬರುತ್ತದೆ. ಅಲ್ಲಿ ಬೆಂಕಿಯ ಕುಂಡದ ಸುತ್ತ ಕುಣಿದರೆ ಇಲ್ಲಿ ಮಧ್ಯದಲ್ಲಿ ಮಕ್ಕಳನ್ನು ನಿಲ್ಲಿಸುವುದು ಕಂಡುಬರುತ್ತದೆ. ಅಲ್ಲಿ ದುಃಖ ತಪ್ತರಾಗಿ ಹುತಾತ್ಮರ ನೆನಪಿಗಾಗಿ ನೋವಿನಿಂದ ಹಾಡುವುದು ಕಂಡುಬಂದರೆ, ಇಲ್ಲಿ ಹಬ್ಬದ ಸಡಗರ ಸಂಭ್ರಮದಲ್ಲಿ ಹಾಡುವುದು ಕಂಡುಬರುತ್ತದೆ.

ಹೀಗೆ ಅಲಾಯಿ ಕುಣಿತ - ಭುಲಾಯಿ ಹಾಕುವುದರಲ್ಲಿ ಅನೇಕ ವೈಷಮ್ಯತೆಗಳನ್ನು ಕಾಣಬಹುದು. ಆದರೆ ಅಲಾಯಿ ಹಾಡು ಬುಲಾಯಿ ಹಾಡುಗಳಲ್ಲಿ ಸಾಮ್ಯತೆಗಳು ಹೆಚ್ಚಾಗಿ ಕಂಡುಬರುತ್ತವೆ. ಅಲಾಯಿ ಹಾಡುಗಳ, ವಿಷಯ ವಸ್ತು ಬುಲಾಯಿ ಹಾಡುಗಳಲ್ಲಿಯೂ

ಕಾಣಬಹುದು. ದುಃಖ, ಶೌರ್ಯ, ಬಲಿದಾನ ಮುಂತಾದ ನೋವಿನಿಂದ ಕೂಡಿದ ಹಲವು ಸಂದರ್ಭಗಳನ್ನು ಎರಡೂ ಹಾಡುಗಳಲ್ಲಿ ಕಾಣಬಹುದಾಗಿದೆ. ಎರಡೂ ಬಗೆಯ ಹಾಡುಗಳು ಹುಟ್ಟಿದ್ದು, ಹಾಡುವುದು ಧಾರ್ಮಿಕ ಹಿನ್ನೆಲೆಯಲ್ಲಿಯೇ ಎಂಬುದು ಗಮನಾರ್ಹವಾಗಿದೆ. ಅಲ್ಲಿ ಧಾರ್ಮಿಕ ವ್ಯಕ್ತಿಗಳ ತ್ಯಾಗ ಬಲಿದಾನಗಳೇ ಪ್ರಧಾನವಾಗಿದ್ದರೆ ಇಲ್ಲಿ ಪುರುಷರ ಜೊತೆಗೆ ಹೆಣ್ಣು ಮಕ್ಕಳ ತ್ಯಾಗ ಬಲಿದಾನಗಳು ಹೆಚ್ಚಾಗಿ ಕಾಣಬಹುದು. ಅಲಾಯಿ ಹಾಡುಗಳಲ್ಲಿ ಬುಲಾಯಿ ಹಾಡುಗಳಂತೆ ಧಾರ್ಮಿಕವಲ್ಲದೆ ಇತರ ಕಥಾನಕ ವಸ್ತುಗಳ ಹಾಡುಗಳೂ ಇತ್ತೀಚೆಗೆ ಕಂಡುಬರುತ್ತಿರುವುದು ಗಮನಾರ್ಹ. ಕರ್ಬಲಾದ ಕಥೆಯು ನಮ್ಮ ಗಂಡಸರ ಬಾಯಲ್ಲಿ ಅಪ್ಪಟ ದೇಶಿಯ ಪದದಂತೆ ಹಾಡುವುದು ವಿಶಿಷ್ಟವಾಗಿದೆ. ಹುಸೇನರು ಹುತಾತ್ಮರಾದ ಪ್ರಸಂಗದ ಹಾಡು ಈ ರೀತಿಯಾಗಿದೆ.

ಕುಂತ ಸಭೇಕ ನಾನು ಶಾಂತದಿ ಹೇಳುವೆ
ಕುಂತ ಕೇಳರಿ ನೀವು ಬಯನಾ
ಮಕ್ಕಾ ಮದೀನಾ ಮುತ್ಯಾನ ಸ್ಥಾನಾ
ಬಿಟ್ಟಾರೋ ಅಲ್ಲೆ ಹುಸ ನೈನಾ
ಹುಸನೈನಾ ಸ್ವಾಮಿ ಶರಣರು ಕುದುರಿಗೆ
ಜೀನಾ ಹಾಕಿ ಕುಂತಾರವರು /
ಕುದುರಿ ಕುಣಿಸುತ ಶರಣಾ / ಅಂದಾರೋ ದೀನ್ ದೀನಾ
ಕರ್ಬಲಕಾ ಹೋಗಿ ಮಾಡ್ಯಾರೇ ರಣಾ
ಕಣದಲ್ಲಿ ಹುಸನೈನಾ ನಿಂತಾರೋ ಆಕ್ಷಣಾ
ಕರೆದು ಕೇಳ್ಯಾರೋ ಆ ಯಜೀದಗ ಮಾಡಬ್ಯಾಡ ಅನುಮಾನ
ಕರೆಸು ನಿಮ್ಮ ಪೈಲ್ವಾನ / ಹಿಡಿರಿ ಅವನ ನಿಮ್ಮಲ್ಲಿ ಇದ್ದವನ
ನಡೆದಿತೋ ಜಂಗ ಒಂದೇ ಸವನಾ
ತೀರಿ ಹೋದಿತೋ ಹುಸನೈನ ದಂಡು ಆಗಿ ಹೈರಾಣಾ
ಮಾಡಲಿ ಇನ್ನೇನ ನಿಂತಿತೋ ಸತ್ಯವನ
ಮಾಡ್ಯಾರೋ ಯಜೀದ ಮಸಲಾತನಾ
ಹೇಳತಾನ ದಂಡಿಗೆ ಮಾಡಿದ್ಯಾಕ ಅನುಮಾನ
ಕೊಲ್ಲೂನು ನಡಿ ಹುಸನೈನ್ನಾ
ಹುಸನೈನ ಸ್ವಾಮಿ ಶರಣರು ನಮಾಜಿಗೆ ಕುಂತಿದ್ರೊ ಶುಕ್ರವಾರ ದಿನಾ
ಬಂದಾರೋ ಶುಮ್ರಲಹಿನಾ / ಕೊಂದಾರೋ ಗೋಣವನಾ
ಹರಿಹರ ಎಂದು ಬಿಟ್ಟಾರೋ ಪ್ರಾಣಾ
ಧರೆಯೊಳು ಬಾಗಲಕೋಟೆ / ಇರುವುದು ಮೋಜಿನ ಪ್ಯಾಟಿ

ಕೇಸು ಪೀರನ ದಯಾ ಸಂಪೂರಣಾ
ಲಚಮನಸಿಂಗ ಮಾಡಿದ ಸವಾಲನಾ
ನಾಗೂ-ಗೌಸ ನಿಂತ ಹೇಳುತಾರೋ ಸಭೆದಾಗ
ತೋಡಿಗೆ ತೋಡಿ ಮಾಡಿ ಕೊಡಬೇಕ ಲಗುಮಾಡಿ
ನಾಚಿಕೆಯಿಲ್ಲದ ಚೀಲಿ ನಿಂತಿಯಾಕೆ ಸುಮ್ಮನಾ"

ಅಲಾಯಿ ಹಾಡುಗಳಲ್ಲಿ ಮುಖ್ಯವಾಗಿ ಕಂಡು ಬರುವ ಧರ್ಮಕ್ಕಾಗಿ ತಮ್ಮ ಪ್ರಾಣವನ್ನೇ ಕೊಟ್ಟ ಹುಸೇನರ ಹಾಡಿನಂತೆ ಬುಲಾಯಿ ಹಾಡಿನಲ್ಲಿಯೂ ಆರ್ಯಧರ್ಮ (ಹಿಂದೂ) ಕ್ಕಾಗಿ ತನ್ನ ಪ್ರಾಣವನ್ನೇ ಕೊಟ್ಟು ಹುತಾತ್ಮರಾದ ಧರ್ಮ ಪ್ರಕಾಶನ ಹಾಡು ಕಾಣಬಹುದು. ಅಲ್ಲಿ ವಜೀದನ ಕ್ರೌರ್ಯ, ಶೋಷಣೆಗಳಿದ್ದಂತೆ, ಇಲ್ಲಿ ನಿಜಾಮನ ಕ್ರೌರ್ಯ, ಶೋಷಣೆಗಳು ಚಿತ್ರಿತವಾಗಿವೆ. ಒತ್ತಾಯದ ಮತಾಂತರವನ್ನು ಒಪ್ಪದ ತನ್ನ ಧರ್ಮವನ್ನು ಬಿಡದ ಧರ್ಮಪ್ರಕಾಶರ ಮೇಲೆ ರಜಾಕಾರರು ಕಣ್ಣಿಟ್ಟಿರುತ್ತಾರೆ. ಒಂದು ದಿನ ಅಮವಾಸ್ಯೆ ಕತ್ತಲಲ್ಲಿ ಧರ್ಮಪ್ರಕಾಶರು ಆರ್ಯ ಸಮಾಜದಲ್ಲಿ ಎಲ್ಲರನ್ನು ಭೆಟ್ಟಿಯಾಗಿ ಒಬ್ಬರೇ ಬರುತ್ತಿದ್ದಾಗ, ಮೊದಲೇ ನಿರ್ಧರಿಸಿದಂತೆ ಎಳೆಂಟು ಜನ ಮುಸ್ಲಿಂರು ಲಾಠಿಗಳನ್ನು ಹಿಡಿದುಕೊಂಡು ಧರ್ಮಪ್ರಕಾಶನ ಮೇಲೆ ಆಕ್ರಮಣ ಮಾಡುತ್ತಾರೆ. ಆಗ ಅವರು ಧೈರ್ಯದಿಂದ ಅವರೆಲ್ಲರನ್ನು ಎದುರಿಸುತ್ತಾರೆ. ಆ ವೇಳೆಯಲ್ಲಿ ಮುಸ್ಲಿಂರು ಅವರನ್ನು ಕುರಿತು

ಆಯಿತಿಲ್ಲೋ ತುರುಕಾ ನ್ಯಾಯ ನೀತಿ ಇಲ್ಲೆ ಮುಲ್ಲಾ,
ಮ್ಯಾಲಿಂದ ಬೀಳುತಾವ ಕಲ್ಲಾ ಕೋಲೆಣ್ಣ ಕೋಲೆ,

ಎಂದು ಮತಾಂತರಕ್ಕೆ ಒತ್ತಾಯಿಸುತ್ತಾರೆ. ಧರ್ಮಪ್ರಕಾಶರನ್ನು ಕೆಡವಿ ಜೀವಭಯವನ್ನು ಒಡ್ಡುತ್ತಾರೆ. ನೆಲಕ್ಕೆ ಬಿದ್ದ, ಮುಸ್ಲಿಂರ ಕೈಯಲ್ಲಿ ತನ್ನ ಪ್ರಾಣವಿದೆ ಎಂದು ಗೊತ್ತಿದ್ದರೂ ಪ್ರಕಾಶರು ಕೊಟ್ಟ ಉತ್ತರ ಅವರ ಧರ್ಮಾಭಿಮಾನವನ್ನು ಪ್ರತಿಬಿಂಬಿಸುತ್ತದೆ.

ಜೀವಾಹೋದರೂ ಹೋಗಾವಲ್ಲ ಮುಲ್ಲ ನಾನು ಆಗೋನಿಲ್ಲ,
ಆರ್ಯಧರ್ಮ ಬಿಡೋನಿಲ್ಲಾ ಕೋಲೆಣ್ಣ ಕೋಲೆ,

ತನ್ನ ಧರ್ಮಕ್ಕಾಗಿ ಪ್ರಾಣವನ್ನು ಲೆಕ್ಕಿಸದೆ ಒಂದೇ ಹಟದಿಂದ ಹೋರಾಡುತ್ತಾರೆ. ಎಷ್ಟು ಹೇಳಿದರೂ ಕೇಳದಿದ್ದಾಗ, ಎಲ್ಲರೂ ಸೇರಿ ಲಾಠಿ ಪ್ರಹಾರದಿಂದ, ಮೈಯೆಲ್ಲಾ ಬಡಿದು, ಭರ್ಚಿಯಿಂದ ಚುಚ್ಚಿ ಸಾಯಿಸುತ್ತಾರೆ. ಜೀವವಿರುವವರೆಗೂ ಧರ್ಮಪ್ರಕಾಶರು ಸಹ ಹೋರಾಡುತ್ತಲೆ ಸಾವನ್ನಪ್ಪಿದ್ದು ಹಾಡಿನಲ್ಲಿ ತಿಳಿದುಬರುತ್ತದೆ. ಧರ್ಮಪ್ರಕಾಶರು ತೀರಿಕೊಂಡ ಮೇಲೆ ಮುಸ್ಲಿಂಮರು ಓಡಿಹೋಗುತ್ತಾರೆ. ಈ ವಿಷಯ ಸ್ವಲ್ಪ ಹೊತ್ತಾದ ಮೇಲೆ ಸುತ್ತಲಿನ ಹಳ್ಳಿಗಳಿಗೆಲ್ಲಾ ತಲುಪುತ್ತದೆ.

......ಹೈದ್ರಾಬಾದಿಯ ಶಾರಾ ಸಸ್ತಾಪೂರ ನೀಲಂಗ ಸುದ್ದಿ ಕೋಲೆಣ್ಣ ಕೋಲೆ
ಅಲ್ಲಿ ಉದಗೀರ ಲಾತೂರ ಸಸ್ತಾಪುರ ನೀಲಂಗಿ
ಸುದ್ದಿ ಮುಟ್ಟಿತು ಪೂರಾ ಕೋಲೆಣ್ಣ ಕೋಲೆ

ಹೀಗೆ ಧರ್ಮಕ್ಕಾಗಿ ಹೋರಾಡಿ ಜೀವಕೊಟ್ಟ ಧರ್ಮಪ್ರಕಾಶರು ಎಲ್ಲರ ಗೌರವ ಪೂಜೆಗಳಿಗೆ ಅರ್ಹರಾಗುತ್ತಾರೆ.

ಮೆರೆಯುತ ಹೆಣಾ ಬಂತ ಊರ ಅಗಸೀಗಿ
ಹೂಹಾಕಿ ಪಾದಾಮುಟ್ಟಿ ನಮಿಸ್ಯಾರೋ ಜನರೆಲ್ಲಾ ಕೋಲೆಣ್ಣ ಕೋಲೆ [೬]

ಈ ರೀತಿ ಸಮಾಜಕ್ಕಾಗಿ, ಧರ್ಮಕ್ಕಾಗಿ ನ್ಯಾಯಕ್ಕಾಗಿ ಬಲಿದಾನರಾದವರನ್ನು ಜನಪದರು ಹಾಡುಕಟ್ಟಿ ಹಾಡಿದ್ದನ್ನು, ಗುಡಿಕಟ್ಟಿ ಪೂಜಿಸಿದ್ದನ್ನು, ಅವರನ್ನು ದೇವರನ್ನಾಗಿ ಕಂಡಿದ್ದನ್ನು ಅಲಾಯಿ ಬುಲಾಯಿ ಹಾಡುಗಳಲ್ಲಿ ಕಾಣಬಹುದಾಗಿದೆ. ಇಂತಹ ಆತ್ಮಾರ್ಪಣೆಗಳೇ ಅವರ ಜೀವನದ ಪರಮ ಮೌಲ್ಯಗಳೆನ್ನಬಹುದು.

ಇಂತಹ ತ್ಯಾಗ, ಬಲಿದಾನ, ಧೈರ್ಯ ಮುಂತಾದ ಮೌಲ್ಯಗಳನ್ನು ಆಲಾಯಿ-ಬುಲಾಯಿ ಹಾಡುಗಳಲ್ಲಿ ಗುರುತಿಸಬಹುದು ಜೊತೆಗೆ ಪ್ರಸ್ತುತ ಸಮಾಜದ ಹಲವು ವಿಷಯಗಳ ಕುರಿತಾದ ಹಾಡುಗಳನ್ನು ಕಾಣಬಹುದು. ಹೀಗಾಗಿ ಇವೆರಡೂ ಹಾಡುಗಳಲ್ಲಿ ಸಾಮ್ಯತೆಯನ್ನು ಗುರುತಿಸಿದ್ದು, ಅದು ಈ ರೀತಿಯಾಗಿದೆ. "ಮೊಹರಂ ಹಾಡುಗಳ ಸ್ವರೂಪದಂತೆ ಇರುವ ಬುಲಾಯಿ ಪದಗಳು ಮುಂದೆ ಹಾಡುವವರ ಗತಿಗೆ ತಕ್ಕಂತೆ ಹಾಡಿನ ಧಾಟಿ ಇರುತ್ತದೆ. ಹಿಗ್ಗಿಸಿ, ಕುಗ್ಗಿಸಿ ಹಾಡನ್ನು ಹೇಳುತ್ತಾರೆ" [೭] ಎಂಬಲ್ಲಿ ಈ ಎರಡೂ ಹಾಡುಗಳ ಸ್ವರೂಪದ ಸಾಮ್ಯತೆ ಎದ್ದು ಕಾಣುತ್ತದೆ. "ಬುಲಾಯಿ ಹಾಡುಗಳನ್ನು ಹಿಂದುಗಳಲ್ಲದೆ ಕೆಲವು ಕಡೆ ಮುಸ್ಲಿಂ ಮಹಿಳೆಯರೂ ಹಾಡುತ್ತಾರೆ. ಸ್ಪಷ್ಟವಾಗಿ ಕನ್ನಡವನ್ನು ಉಚ್ಚರಿಸುತ್ತಾರೆ. ಇಸ್ಲಾಂ ಧರ್ಮದ ಕರ್ಬಲ್ ಹಾಡುಗಳೂ, ಹೈದರಾಬಾದ ನಿಜಾಮರ ಹಾಡುಗಳೂ ಇಲ್ಲಿವೆ" [೮] ಎಂಬಲ್ಲಿ ಬುಲಾಯಿ ಹಾಡುಗಳಲ್ಲಿ ಆಲಾಯಿ ಹಾಡುಗಳ ವಿಷಯ ವಸ್ತುಗಳಿವೆ ಎನ್ನುವುದು ಸ್ಪಷ್ಟವಾಗುತ್ತದೆ.

ಬುಲಾಯಿ-ಅಲಾಯಿ ಹಾಡುಗಳ ವಿಷಯ ವಸ್ತುಗಳಲ್ಲಿ ಸಾಮ್ಯತೆಗಳಿದ್ದರೂ, ಹಾಡುವಲ್ಲಿ, ಹಾಡುವವರಲ್ಲಿ, ಹಾಡುವ ರೀತಿಯಲ್ಲಿ, ವ್ಯತ್ಯಾಸಗಳಿರುವುದನ್ನು ಅಲ್ಲಗಳೆಯುವಂತಿಲ್ಲ, ಧಾರ್ಮಿಕ ಹಿನ್ನೆಲೆಯಲ್ಲಿ ಹೆಚ್ಚು ಸಾಮ್ಯತೆಗಳಿದ್ದರೂ ಪ್ರಸ್ತುತ ವಿಷಯಗಳಾದ ವರದಕ್ಷಿಣೆ, ಗುಟಕಾ, ಮಧ್ಯಾಪಾನ, ಕುಟುಂಬಯೋಜನೆ ಮುಂತಾದ ವಿಷಯಗಳ ಕುರಿತಾದ ಮೊಹರಂ ಹಾಡುಗಳನ್ನು ಗುರುತಿಸಬಹುದು.

ಕರ್ಬಲಾದ ಮೈದಾನದಲ್ಲಿ ಧೈರ್ಯದಿಂದ ಹೋರಾಡಿ, ಧರ್ಮಕ್ಕಾಗಿ ತಮ್ಮ ಪ್ರಾಣವನ್ನು ಬಲಿದಾನ ಮಾಡಿದ ಪುರುಷರಂತೆ ಸಮಾಜದಲ್ಲಿಯ ಹೆಣ್ಣಿನ ತ್ಯಾಗ ಸಹನೆ, ಧೈರ್ಯ ಅಸಾಯಕತೆಯಿಂದ ಸಮಾಜಕ್ಕಾಗಿ ತ್ಯಾಗ ಮಾಡಿದ ಬುಲಾಯಿ ಹಾಡುಗಳನ್ನು ಕಾಣಬಹುದು. ಈ ಹಾಡುಗಳಲ್ಲಿ ಶೋಷಣೆ, ಗೌರವಗಳನ್ನು ಒಟ್ಟೊಟ್ಟಿಗೆ ಪಡೆದ ಹೆಣ್ಣು ಪ್ರಧಾನ ಪಾತ್ರವಹಿಸಿರುವುದು ವಿಶಿಷ್ಟವೆನಿಸುತ್ತದೆ. ಹೀಗೆ ತಮಗಾಗಿ ಸಮಾಜವು ಸಮಾಜಕ್ಕಾಗಿ ತಾವು ಎಂದು ತಿಳಿದು, ತ್ಯಾಗವನ್ನು ಬದುಕಿನ ಬಹುದೊಡ್ಡ ಮೌಲ್ಯವೆಂದು ಗೌರವಿಸಿದ್ದನ್ನು ಅಲಾಯಿ-ಬುಲಾಯಿಗಳ ಹಾಡುಗಳಲ್ಲಿ ಕಾಣಬಹುದು.

ಬುಲಾಯಿ ಹಾಡುಗಳಲ್ಲಿ ತನ್ನ ಧರ್ಮಕ್ಕಾಗಿ ಪ್ರಾಣದಾನ ಮಾಡಿದ ಧರ್ಮ ಪ್ರಕಾಶನ ಹಾಡಿನಂತೆ, ಸ್ನೇಹಕ್ಕಾಗಿ ಪ್ರಾಣದಾನ ಮಾಡಿಕೊಂಡ ಸೋಮರಾಯ - ಭೀಮರಾಯರ ಹಾಡು, ಶೀಲಕ್ಕಾಗಿ ತನ್ನ ಕರುಳ ಕಡಿಯನ್ನೇ ಬಲಿಕೊಟ್ಟ ಕಾಸಿಬಾಯಿಯ ಹಾಡು, ನಿರಪರಾದಿಯಾದರೂ ಅನಂತ ಕಷ್ಟ ಕೋಟಲೆಗಳಿಗೆ ಸಿಕ್ಕು ಸಂಕಟಪಟ್ಟ ಸಾಧ್ವಿಯೊಬ್ಬಳ ಕುರಿತಾದ ನೀಲಕಂಠ ರಾಜನ ಹಾಡು, ಮಲಮಗನನ್ನು ಬಯಸಿ ಕೊಲ್ಲಲು ಮನಸ್ಸು ಮಾಡಿ ತಾನೇ ಸತ್ತು ಹೋಗುವ ಶಾಲಿವಾನನ ಹಾಡು, ಕುಮಾರ ರಾಮನ ಹಾಡು ಇವೆಲ್ಲವೂ ಬದುಕಿನ ಒಂದೊಂದು ಮಗ್ಗುಲನ್ನು ಬಿಂಬಿಸುವ ವಿಷಯ ವಸ್ತುಗಳನ್ನು ಹೊಂದಿರುವುದು ಕಂಡುಬರುತ್ತದೆ.

ಅಲಾಯಿ-ಬುಲಾಯಿ ಹಾಡುಗಳಲ್ಲಿ ದುಃಖದ ಪ್ರಸಂಗಗಳನ್ನು ಪರಿಣಾಮಕಾರಿಯಾಗಿ ನಿರೂಪಿಸಿ, ಶ್ರೋತೃಗಳಲ್ಲಿ ಕರುಣೆ ಉಕ್ಕಿಸುವಂತೆ ಹಾಡುವುದು ಕಂಡುಬರುತ್ತದೆ. ಇಂತಹ ಹೃದ್ರಾವಕ ಸನ್ನಿವೇಶಗಳ ವರ್ಣನೆಯ ಹಾಡುಗಳು ಶ್ರೋತೃಗಳು ಕಣ್ಣೀರು ಹರಿಸುವಂತೆ ಪ್ರಭಾವಶಾಲಿಯಾಗಿರುವುದು ವಿಶೇಷವೆನಿಸುತ್ತವೆ. ಎರಡೂ ಪದಗಳಲ್ಲಿ ಕಥನ ಪರವಾದ ಗೀತೆಗಳೇ ಹೆಚ್ಚಾಗಿ ಕಂಡುಬರುತ್ತವೆ.

ಅಲಾಯಿ-ಬುಲಾಯಿ ಹಾಡುಗಳು ಕನ್ನಡದಲ್ಲಿ ರಚಿತವಾದರೂ ಅವುಗಳಲ್ಲಿ ಅನ್ಯ ಭಾಷೆಗಳ ಪದ ಬಳಕೆ ಹೇರಳವಾಗಿರುವುದನ್ನು ಗುರುತಿಸಬಹುದು. ಉರ್ದು, ಮರಾಠಿ, ಇಂಗ್ಲೀಷ್, ಪರ್ಶಿಯನ್ ಮುಂತಾದ ಭಾಷೆಗಳು ಬಳಕೆಗೊಂಡದ್ದು ಗುರುತಿಸಬಹುದು.

ಉದಾ : **ಅಲಾಯಿ ಪದ :**

ಸಂತ ಸಭೆ ದೈವನೆರದು ಕುಂತಿರಿ ಜನ
ಕತೆಯೊಂದು ಹೇಳುತಿನಿ ಮಾಡಿ ಬಯನಾ
ಪಂಚಾವನ್ನ ಛಪ್ಪನ್ನ ಇಸವಿಯ ಕಾರಣ
ಆಗಿದು ಹೇಳುವೆ ಕೇಳರಿ ಜನ ....[೯]

ಬುಲಾಯಿ ಪದ :

ದರಕಾಸ ಅಮಿನೂಗ ಬರೆದು ಕೊಟ್ಟಾರ ಆಗ
ಸುದ್ದಿ ಮುಟ್ಟಿತೋ ತಾಲ್ಲೂಕದಾರಾಗ ಕೋಲೆಣ್ಣಾ ಕೋಲೆ
ತಾಲ್ಲೂಕದಾರ ಓಡಿ ಬಂದು ಜವಾನರಿಗೆ ಚೌಕಾಸಿ ಮಾಡಿ
ಘಾತ ಮಾಡ್ಯಾರೋ ದುಸಮಾನರು ಕೋಲೆಣ್ಣಾ ಕೋಲೆ ......[೧೦]

ಈ ಹಾಡುಗಳಲ್ಲಿ ಬಯನಾ, ಪಂಚಾವನ್ನ, ಛಪ್ಪನ್ನ, ದರಕಾಸ, ಅಮೀನ, ದುಸಮಾನ, ಜವಾನ, ಚೌಕಸಿ ಮುಂತಾದ ಅನ್ಯಭಾಷಾ ಪದ ಪ್ರಯೋಗವನ್ನು ಗುರುತಿಸಬಹುದು.

ಒಟ್ಟಾರೆ ಅಲಾಯಿ-ಬುಲಾಯಿ ಹಾಡುಗಳಲ್ಲಿ ಹೆಚ್ಚು ಸಾಮ್ಯತೆಯನ್ನು ಕಾಣಬಹುದು. ಈ ಎರಡೂ ಹಬ್ಬಗಳ ಆಚರಣೆಯಲ್ಲಿ, ಜಾತಿ, ವರ್ಗಗಳ ಭೇದವಿಲ್ಲದೆ ಎಲ್ಲರೂ ಭಾತೃತ್ವಭಾವನೆ, ಸೌಹಾರ್ದತೆಯಿಂದ ಪಾಲ್ಗೊಳ್ಳುವುದು ಕಂಡು ಬರುತ್ತದೆ. ಇಂದಿನ ಅವಶ್ಯಕತೆಗಳಾದ ಪ್ರೀತಿ, ವಿಶ್ವಾಸ, ಸ್ನೇಹ ಭಾವನೆಗಳನ್ನು ಈ ಎರಡರಲ್ಲಿಯೂ ದಟ್ಟವಾಗಿ ಕಂಡುಬರುತ್ತವೆ. ಇದು ಸಮಾಜ ಸಾಹಿತ್ಯ, ಸಂಸ್ಕೃತಿಗೆ ಅಲಾಯಿ-ಬುಲಾಯಿ ಕೊಟ್ಟ ವಿಶೇಷ ಕೊಡುಗೆ ಎಂದು ಹೇಳಬಹುದು.

ಕೋಲುಪದ - ಬುಲಾಯಿ ಪದ :

'ಕೋಲಾಟ'ದ ವೇಳೆಯಲ್ಲಿ ಹಾಡುವ ಪದಗಳೇ ಕೋಲುಪದಗಳು. ಜನಪದ ಕಲೆಗಳಲ್ಲಿ ಹೆಚ್ಚು ಜನಪ್ರೀಯವಾದ ಕಲೆ ಕೋಲಾಟ. ಇದೊಂದು ನೃತ್ಯ ಪ್ರಧಾನ ಕಲೆಯಾಗಿದ್ದು. ಬಹುಶಃ ಕೋಲಾಟ, ಇಲ್ಲದ ಊರುಗಳೇ ಇಲ್ಲ ಎಂಬುದು ವಿದ್ವಾಂಸರ ಮತ. ಕರ್ನಾಟಕದ ಮೂಲೆಮೂಲೆಗಳಲ್ಲಿಯೂ ಕೋಲಾಟ ರೂಢಿಯಲ್ಲಿರುವುದು ಕಂಡುಬರುತ್ತದೆ. ಸುಗ್ಗಿಯ ದಿನಗಳಲ್ಲಿ, ಬೆಳದಿಂಗಳ ರಾತ್ರಿಗಳಲ್ಲಿ ಅಂದಂದಿನ ದಂದುಗಕ್ಕೆ ಮೈಸೋತು ಮನಸೋತ ಮಂದಿ ಮನರಂಜನೆಗಾಗಿ ಕೋಲು ಹುಯ್ಯುವುದನ್ನು ರೂಢಿಸಿಕೊಂಡಂತೆ ಕಂಡುಬರುತ್ತದೆ. ಕೈಯಲ್ಲಿ ಹಿಡಿಯಲು ಅನುಕೂಲವಾಗುವಂತೆ ಸುಲಭ ಅಳತೆಯ ಕೋಲುಗಳನ್ನು ಹಿಡಿದು, ಕಾಲಿಗೆ ಗೆಜ್ಜೆಕಟ್ಟಿ, ಹಾಡುಗಳನ್ನು ಹಾಡುತ್ತಾ, ಕುಣಿಯುತ್ತಾ ಕೋಲು ಹುಯ್ಯುವ ರೀತಿ ಆಕರ್ಷಣೀಯವಾದುದು.

"ಗಂಡಸರು ಮತ್ತು ಹೆಂಗಸರು ಪ್ರತ್ಯೇಕವಾಗಿ ಇಲ್ಲವೆ ಒಟ್ಟಾಗಿ ಸೇರಿ ಎದುರು ಬದುರಾಗಿ ನಿಂತು ಕೈಯಲ್ಲಿ ಹಿಡಿದ ಕೋಲುಗಳನ್ನು ದೇಹದ ವಿವಿಧ ಭಾಗಗಳ ಬಳಿ ಅಂದರೆ ತಲೆಯ ಮೇಲೆ, ಹೆಗಲ ಬಳಿ, ಸೊಂಟದ ಹಿಂಭಾಗ, ಮೊಳಕಾಲ ಬಳಿ, ಕಾಲಿನ ಕೆಳಗೆ ಹುಯ್ಯುತ್ತ ಅಥವಾ ಸಂಗಾತಿಗಳು ಹಿಡಿದಿರುವ ಕೋಲುಗಳಿಗೆ ವಿವಿಧ ವಿನ್ಯಾಸಗಳಲ್ಲಿ ಲಯಗಳಲ್ಲಿ ತಾಡಿಸುತ್ತ, ಹಾಡುತ್ತಾ ಕುಣಿಯುವ ಕುಣಿತವೇ ಕೋಲಾಟ" [೧೧] ಎಂಬ ಅಭಿಪ್ರಾಯದಲ್ಲಿ ಕೋಲಾಟವನ್ನು ಯಾರು ಆಡುತ್ತಾರೆ. ಹೇಗೆ ಆಡುತ್ತಾರೆ ಮುಂತಾದ ವಿಷಯಗಳನ್ನು ಗ್ರಹಿಸಬಹುದಾಗಿದೆ.

ಹಳ್ಳಿಗಳಲ್ಲಿ ಸಾಮಾನ್ಯವಾಗಿ ಅವರವರ ಗ್ರಾಮದ ವಿಶೇಷ ಸಂದರ್ಭಗಳಾದ ಹಬ್ಬ, ಜಾತ್ರೆ, ಹುಣ್ಣಿಮೆಗಳಲ್ಲಿ ಹಾಗೂ ಯಾವುದೇ ಸಮಾರಂಭ, ಉತ್ಸವ ಮುಂತಾದ ಮನರಂಜನೆಯ ಸಂದರ್ಭಗಳಲ್ಲಿ ಕೋಲಾಟವಾಡುವುದು ಕಂಡುಬರುತ್ತದೆ. ಅಂದರೆ ಕೋಲಾಟ ಯಾವುದೇ ಕಟ್ಟು ಪಾಡುಗಳಿಲ್ಲದೆ ಇಂಥ ಸಂದರ್ಭದಲ್ಲಿ ಮಾತ್ರ ಕಲೆಯನ್ನು ಪ್ರದರ್ಶಿಸಬೇಕೆಂದಾಗಲಿ, ಇಷ್ಟೇ ಜನ ಇರಬೇಕೆಂದಾಗಲೀ ನಿಯಮಗಳಿಲ್ಲದ **'ಮುಕ್ತಕಲೆ'** ಎನ್ನಬಹುದು. ಕೋಲಾಟದಲ್ಲಿ ಹಲವು ಪ್ರಕಾರಗಳು ಕಂಡುಬರುತ್ತವೆ.

ಮುಖ್ಯ ಕಲಾವಿದನು ತಾಳ ಹಾಕುತ್ತಾ ಹಾಡುವಾಗ ಆ ಹಾಡಿನ ಗತಿಗೆ ತಕ್ಕಂತೆ ಕಲಾವಿದರು ಹೆಜ್ಜೆ ಹಾಕುತ್ತಾ ಕೋಲು ಹುಯ್ಯುವುದು ಕಂಡು ಬರುತ್ತದೆ. ಸುಮಧುರ ಹಾಡುಗಳು,

ಲಘುವಾದ ಕುಣಿತ, ಕೋಲು ಮತ್ತು ಗೆಜ್ಜೆಗಳ ಗತ್ತು ಹಾಗೂ ಒಬ್ಬರ ಆಚೆ ಒಬ್ಬರು ನುಸುಳುವ ಚಮತ್ಕಾರ ಕೋಲಾಟದ ವಿಶೇಷಗಳೆನ್ನಬಹುದು.

ಕೋಲಾಟದ ಜೊತೆಗಿನ ಹಾಡಿಗಾರಿಕೆಯಲ್ಲಿ ತುಂಬಾ ವೈವಿಧ್ಯತೆ ಕಂಡುಬರುತ್ತದೆ. ವಿವಿಧ ರೀತಿಯ ಕೋಲು ಪದಗಳನ್ನು ಕಾಣಬಹುದು. ಜನಪದರ ಅನುಭವಕ್ಕೆ ಬರುವ ಎಲ್ಲಾ ಘಟನೆಗಳು ಮತ್ತು ಪೌರಾಣಿಕ, ಐತಿಹಾಸಿಕ, ಸಾಮಾಜಿಕ, ಸಮಕಾಲೀನ ವಿಷಯ ವಸ್ತುಗಳು ಕೋಲು ಪದಗಳಲ್ಲಿ ಕಾಣಬಹುದು. ಹೀಗಾಗಿ ಕೋಲಾಟದಲ್ಲಿ ಕೋಲು ಪದಗಳಿಗೆ ವಿಶಿಷ್ಟ ಸ್ಥಾನ ಕಂಡುಬರುತ್ತದೆ. ಹಾಡುಗಳಿಲ್ಲದೆ ಕೋಲಾಟವಿಲ್ಲ. ಆಟದ ಪ್ರಾರಂಭಕ್ಕೆ ಹಾಡುಗಳು ಅವಶ್ಯವಾಗಿ ಬೇಕೆಬೇಕು. ವಿನೋದ, ಪ್ರಣಯ, ಶೃಂಗಾರ, ದುರಂತ ವಸ್ತುಗಳನ್ನು ಒಳಗೊಂಡ ಕೋಲು ಪದಗಳು ಕೋಲಾಟದ ಅವಿಭಾಜ್ಯ ಅಂಗವೆನ್ನಬಹುದು.

'ಭುಲಾಯಿ ಹಾಕು'ವಾಗ ಹಾಡುವ ಬುಲಾಯಿ ಪದಗಳಲ್ಲಿಯೂ ಹೆಣ್ಣುಮಕ್ಕಳ ಅನುಭವಕ್ಕೆ ಬರುವ ಎಲ್ಲಾ ಘಟನೆಗಳು ಮತ್ತು ಪೌರಾಣಿಕ, ಐತಿಹಾಸಿಕ, ಸಾಮಾಜಿಕ, ಸಮಕಾಲೀನ ವಿಷಯ ವಸ್ತುಗಳು ಕಂಡುಬಂದರೂ, ಹೆಣ್ಣುಮಕ್ಕಳ ನೋವು ನಲಿವುಗಳನ್ನು ಹೆಚ್ಚಾಗಿ ಕಾಣಬಹುದು. ಬುಲಾಯಿ ಹಾಡುಗಳಿಲ್ಲದೆ 'ಭುಲಾಯಿ ಹಾಕು'ವುದೇ ಕಾಣದು. ಹಾಡುತ್ತಲೇ 'ಭುಲಾಯಿ ಹಾಕಲು' ಪ್ರಾರಂಭಿಸುವುದರಿಂದ ಬುಲಾಯಿ ಪದಗಳೂ 'ಭುಲಾಯಿ'ಯ ಅವಿಭಾಜ್ಯ ಅಂಗವೆನ್ನಬಹುದು.

ಕೋಲಾಟದಲ್ಲಿ ಗಂಡಸರು, ಹೆಂಗಸರು ಮಕ್ಕಳು ಎನ್ನದೇ ಎಲ್ಲಾ ವರ್ಗದವರು ಭಾಗವಹಿಸಬಹುದು. ಆದರೆ 'ಭುಲಾಯಿ'ಯಲ್ಲಿ ಹೆಣ್ಣುಮಕ್ಕಳು ಮಾತ್ರ ಯಾವ ವಯಸ್ಸೆನ್ನದೇ ಭಾಗವಹಿಸುವುದನ್ನು ಕಾಣಬಹುದು. ಕೋಲಾಟ ಆಡಲು ನಿರ್ದಿಷ್ಟ ಕಾಲ ಎಂಬುದಿಲ್ಲ. ಹಬ್ಬಹರಿದಿನಗಳು, ಉತ್ಸವಗಳು, ಮದುವೆ, ಸಮಾರಂಭ, ಸಾಂಸ್ಕೃತಿಕ ಉತ್ಸವ ಮುಂತಾದ ಸಂದರ್ಭಗಳಲ್ಲಿ ಯಾವುದಾದರೂ ಸರಿಯೇ. ಎಲ್ಲಿ ಬೇಕಾದಲ್ಲಿ ಬಿಡುವು ದೊರೆತಾಗ ಕಾಲಿಗೆ ಗೆಜ್ಜೆ ಕಟ್ಟಿ, ಕೋಲುಗಳೆರಡನ್ನು ಕೈಯಲ್ಲಿ ಹಿಡಿದು ಹಾಡಿನೊಂದಿಗೆ ಕೋಲಾಟ ಪ್ರಾರಂಭಿಸಬಹುದು. ಆದರೆ 'ಭುಲಾಯಿ' ನಾಗರ ಪಂಚಮಿ ಹಬ್ಬದಲ್ಲಿ ಮಾತ್ರ ಹಾಕಲಾಗುವುದು. "ಕೋಲಾಟವು ಹೆಚ್ಚಾಗಿ ಹೋಳಿ ಹುಣ್ಣಿಮೆಯಿಂದ ಬಸವ ಜಯಂತಿಯವರೆಗೆ ಆಡುತ್ತಾರೆ"[೧೨] ಎಂಬ ಅಭಿಪ್ರಾಯವು ಕೋಲಾಟವನ್ನು ಹೆಚ್ಚಾಗಿ ಬೇಸಿಗೆಯಲ್ಲಿ ಆಡುತ್ತಾರೆಂಬುದನ್ನು ಸೂಚಿಸುವಂತಿದೆ. ಕೋಲಾಟ ಸಾಹಿತ್ಯ, ಸಂಗೀತ, ನೃತ್ಯಗಳ ಸಮ್ಮಿಶ್ರ ಜನಪದ ಕಲೆಯಾಗಿದೆ. 'ಭುಲಾಯಿ' ಯಲ್ಲಿ ಸಾಹಿತ್ಯ, ಸಂಗೀತ, ಒಂದು ರೀತಿಯ ಕ್ರಮಬದ್ಧ ನಡಿಗೆಯಲ್ಲಿ ಸುತ್ತು ತಿರುಗುವುದು ಕಂಡುಬರುತ್ತದೆ. ಕೋಲಾಟದಲ್ಲಿ ವಿವಿಧ ಭಂಗಿಗಳಲ್ಲಿ ಕೋಲು ಹುಯ್ಯುವುದು, ಹೆಜ್ಜೆ ಹಾಕಿ ಕುಣಿಯುವುದು ಕಂಡು ಬರುತ್ತದೆ, ಕೋಲಾಟ ಆಡುವವರು ತಮ್ಮ ಎರಡೂ ಕಾಲುಗಳಿಗೆ ಸರಗೆಜ್ಜೆಯನ್ನು ಕಟ್ಟಿಕೊಳ್ಳುತ್ತಾರೆ. ಮೊಳಕಾಲಿನವರೆಗೆ ಎತ್ತಿ ಕಟ್ಟಿದ ವೀರಗಚ್ಚೆ, ಕಸೆ ಅಂಗಿ, ಸೊಂಟಕ್ಕೆ ಅಡ್ಡಲಾಗಿ ಸುತ್ತಿದ ವಸ್ತ್ರ ಇವಿಷ್ಟು ವೇಷಭೂಷಣಗಳು, ಕೆಲವರು

ತಲೆಗೆ ಕೆಂಪು ಪಟ್ಟಿಯನ್ನು ಕಟ್ಟಿಕೊಳ್ಳುವುದನ್ನು ಕಾಣಬಹುದು. ಕೋಲಾಟದಲ್ಲಿ ದಮ್ಮಡಿ ಮತ್ತು ತಾಳಗಳು ಹಿಮ್ಮೇಳದ ವಾದ್ಯಗಳಾಗಿರುತ್ತವೆ.

ಭುಲಾಯಿ ಹಾಕುವಲ್ಲಿ ಎಲ್ಲರೂ ಕೈ ಕೈ ಹಿಡಿದುಕೊಂಡು ಗೋಲಾಕಾರದಲ್ಲಿ ಕ್ರಮಬದ್ಧತೆಯಲ್ಲಿ ತಿರುಗುವುದು ಕಂಡುಬರುತ್ತದೆ. ಒಂದೇ ಬಗೆಯಲ್ಲಿ ತಿರುಗುತ್ತಿರುತ್ತಾರೆ. ಬುಲಾಯಿ ಪದವನ್ನು ಭುಲಾಯಿ ಹಾಕುತ್ತಲೇ ಹೆಣ್ಣುಮಕ್ಕಳಿಬ್ಬರು ಮುಮ್ಮೇಳದಲ್ಲಿ ಉಳಿದವರೆಲ್ಲರೂ ಹಿಮ್ಮೇಳದಲ್ಲಿ ಭುಲಾಯಿ ಹಾಕುತ್ತಲೇ ಹಾಡುವುದು ವಿಶಿಷ್ಟವಾಗಿರುತ್ತದೆ. ಭುಲಾಯಿ ಹಾಕುವಾಗ ಸಾಮಾನ್ಯವಾಗಿ ಎಲ್ಲಾ ಹೆಣ್ಣುಮಕ್ಕಳು ಹೊಸಹೊಸ ಸೀರೆ, ವಸ್ತ್ರ, ಒಡವೆಗಳನ್ನು ಧರಿಸಿ, ಸಿಂಗಾರಗೊಂಡು, ಕೈಯಲ್ಲಿ ಹೊಸ ಬಳೆಗಳನ್ನು ಧರಿಸಿರುವುದು ಕಂಡುಬರುತ್ತದೆ.

ಎರಡೂ ಹಾಡುಗಳ ಸೊಲ್ಲಿನಲ್ಲಿ ಸಾಮ್ಯತೆಯನ್ನು ಕಾಣಬಹುದು. ಕೋಲೆಣ್ಣ ಕೋಲ ಎಂಬ ಸೊಲ್ಲು ಎರಡೂ ಪದಗಳಲ್ಲಿ ಕಂಡುಬರುತ್ತದೆ. ಎರಡರಲ್ಲಿಯೂ ವಿವಿಧ ವಿಷಯ ವಸ್ತುಗಳಿಗೆ ಸಂಬಂಧಿಸಿದ ಹಾಡುಗಳು ಕಂಡುಬರುತ್ತವೆ. ಕೆಲವು ಹಾಡುಗಳಂತೂ ಧಾಟಿಯಲ್ಲಿ ಭಿನ್ನತೆ ಬಿಟ್ಟರೆ ಎಲ್ಲವೂ ಒಂದೇ ಎನ್ನುವಷ್ಟರ ಮಟ್ಟಿಗೆ ಸಾಮ್ಯತೆಯನ್ನು ಹೊಂದಿರುವುದು ಗಮನಾರ್ಹವಾಗಿದೆ.

ಉದಾ: ಚೆನ್ನಮ್ಮನ ಹಾಡು, ಕಾಳಿಂಗರಾಯನ ಹಾಡು, ರಡ್ಡೇರ ಸಾವಿತ್ರಿ ಹಾಡು, ಶಿವನಲ್ಲಿ ಹೋಗ್ಯಾರ ಮುಂತಾದ ಹಾಡುಗಳಲ್ಲಿ ಸಾಮ್ಯತೆಯನ್ನು ಕಾಣಬಹುದು.

ಕೋಲುಪದಗಳ ಪ್ರಭಾವವು ಬಹುಶಃ ಬುಲಾಯಿ ಪದಗಳ ಮೇಲೆ ಇದ್ದಿರುವ ಸಾಧ್ಯತೆಯಿರುವುದರಿಂದ ಕೋಲುಪದಗಳನ್ನೇ ಬುಲಾಯಿ ಪದಗಳಲ್ಲಿಯೂ ಹಾಡಿರುವ ಸಾಧ್ಯತೆಯೂ ಕಾಣಬಹುದು.

ಕೋಹಿನೂರಿನಲ್ಲಿ ಹಾಗೂ ಅದರ ಸುತ್ತಲಿನ ಹಳ್ಳಿಗಳಲ್ಲಿ 'ನಾಗರ ಪಂಚಮಿ'ಗೆ ಕೋಲಾಟವಾಡುತ್ತಾರೆ.[೧೩] ಎಂಬಲ್ಲಿ ಮೊದಲು ಕೋಲಾಟವಾಡುತ್ತಿದ್ದು, ಕ್ರಮೇಣ 'ಭುಲಾಯಿ' ಆಗಿರುವ ಸಾಧ್ಯತೆಯು ಇರಬಹುದೆಂದು ಊಹಿಸಬಹುದು. ಈ ಹಿಂದೆ ಚರ್ಚಿಸಿದಂತೆ 'ಭುಲಾಯಿಗೆ'ಗೆ ಕೋಲಾಟದ ಪ್ರಭಾವ - ಪ್ರೇರಣೆಗಳು ಕಂಡುಬರುತ್ತದೆ. ಹೀಗಾಗಿ ಕೋಲುಪದ ಹಾಗೂ ಬುಲಾಯಿ ಪದಗಳು ಸಹ ಒಂದೇ ಆಗಿರುವ ಸಾಧ್ಯತೆಯೂ ಊಹಿಸಬಹುದು. ಹಾಡುವ ದಾಟಿ, ಬಳಸುವ ಭಾಷೆಗಳಿಂದ ಅವು ಅಲ್ಪಸ್ವಲ್ಪ ಬದಲಾವಣೆ ಹೊಂದಿದ್ದರೂ ಅವುಗಳ ಆಶಯ, ವಿಷಯಗಳಲ್ಲಿ ಸಾಮ್ಯತೆಗಳನ್ನು ಕಾಣಬಹುದಾಗಿದೆ.

ಉದಾ : **"ಶಿವನಲ್ಲಿ ಹೋಗ್ಯಾರ"** ಎಂಬ ಕೋಲುಪದ ಹೀಗಿದೆ.

ಕೋಲೆನ್ನ ಕೋಲ ॥ ಪಲ್ಲ ॥

ಮಲಸೆಟ್ಟಿ ಮನಿಮುಂದ ಹನ್ನೆರಡು ನೇಗ್ಲೆತ್ತು ಕೋಲೆನ್ನ ಕೋಲೆ

ನೇಗ ಲ್ಹೊಡದ ಎತಗೊಳು ನೆಲಸಾದಲ್ಹಿಡಿದಾವ

ನೇಗ ಲ್ಗೊಡದ ಎತಗೊಳ್ಗೆ ನುಚ್ಚೊಡದು ಇಟ್ಟಾರ

ನುಚ್ಚ ತಿಂದ ಎತ್ತಗೋಳು ಸತ ಸತ್ತು ಹೋದಾವ

ಧಡೆ ಬೆಳ್ಳಿ ತಗೊಂಡು ದುಕಾನ್ಕ ಹೋಗ್ಯಾನ

ಈ ಬೆಳ್ಳಿ ತೊಗೊಂಡು ಹೇರಜೋಳ ಕೊಡಿರಣ್ಣ

ಎರ್ಡತೂಕ ಬೆಳ್ಳನೆ ಒಂದು ತೂಕ ಜೋಳಾನೆ

ಕೊಳ್ಳಾನಗುಳ್ಳ ತೊಗೊಂಡು ಅಣ್ಣನ ಮನಿಗೆ ಹೋಗ್ಯಾಳ[೧೪]

ಮೇಲಿನ ವಿಷಯ ಹಾಗೂ ಆಶಯ ಹೊಂದಿದ ಬುಲಾಯಿ ಪದ **"ಬರದ ಹಾಡು"** ಹೀಗಿದೆ.

ಕಲಸೆಟ್ಟಿ ಮನೆಮುಂದ ಹನ್ನೆರಡು ಆಲಿನ ಎತ್ತೊ ಕೋಲುಕೋಲ

ಹನ್ನೆರಡು ಆಲಿನ ಎತ್ತು ಹನ್ನೆರಡು ಖಂಡಗ ಜೋಳ ಕೋಲುಕೋಲ

ಭರ ಭರ ಒಡೆದರೆ ಎತ್ತುಗಳಿಗೆ ಹಾಕಿದರ ಕೋಲುಕೋಲ

ಎತ್ತುಗಳ ತಿಂದವ ಎತ್ತುಗಳ ಸತ್ತವಾ ಕೋಲುಕೋಲ

ಅಣ್ಣನ ಹೊಲ ಬೆಳೆದಿಲ್ಲ ತಮ್ಮನ ಹೊಲಬೆಳೆದಿತ್ತು ಕೋಲುಕೋಲ

ತಮ್ಮನ ಹೊಲಕ ಅಣ್ಣ ಕೂಲಿಗೆ ಹೋದ ಕೋಲುಕೋಲ

ಕೂಲಿಯಾರ ಮಾಡ್ಯಾನ ಸೇರಜ್ವಾಳ ತಂದಾನ ಕೋಲುಕೋಲ

ಸೇರಜ್ವಾಳ ತಂದಾನ ಮಡದಿ ಕೈಲಿ ಕೊಟ್ಟಾನ ಕೋಲು ಕೋಲ

ಫಕಫಕ ಬುಕ್ಯಾರ ರೊಟ್ಟಿ ರೊಟ್ಟೆಂತ ಅಳತ್ತಾರ ಕೋಲು ಕೋಲ

ದಢಿಯ ಬೆಳ್ಳಿಯವ ತೆಗೆದು ಗಂಡನ ಕೈಲಿ ಕೊಟ್ಟಾಳ ಕೋಲುಕೋಲ

ಆ ಬೆಳ್ಳಿಯ ತಕ್ಕೊಂಡು ದುಕಾನಕೆ ಹೋದನು ಕೋಲುಕೋಲ

ಈ ಬೆಳ್ಳಿ ತಗೋರಣ್ಣಾ ಸೇರ ಜ್ವಾಳ ಕೊಡರಣ್ಣಾ ಕೋಲುಕೋಲ

ಸೇರು ಜ್ವಾಳ ತಂದಾನ ಮಡದಿ ಕೈಲಿ ಕೊಟ್ಟಾನ ಕೋಲುಕೋಲ

ಭರ ಭರ ಒಡೆದಳಾ ಒಲಿಮ್ಯಾಲ ಹಾಕಿದಳು ಕೋಲುಕೋಲ

ಒಲಿಮ್ಯಾಲೆ ಹಾಕಿದಳು ಹೊಳಿ ನೀರಿಗೆ ಹೋಗಿದಳು ಕೋಲುಕೋಲ

ನೆರೆಮನಿ ನೆಗೆಣ್ಣಿ ಬೆಂಕಿಗಂತ ಬಂದಿದಳು ಕೋಲುಕೋಲ

ಬೆಂಕಿಗಂತ ಬಂದಿದಳು ಹಿಡಗಲ್ಲ ಒಗದಿದ್ದಳು ಕೋಲುಕೋಲ

ಹೊಳಿ ನೀರಿನಿಂದ ಕೊಡನಾದರ ಇಳಿಸ್ಯಾಳ ಕೋಲುಕೋಲ

ಕೊಡನಾದರ ಇಳಿಸಿದಳು ಅಡಿಗಿ ಮನಿಗಿ ಹೋಗಿದಳು ಕೋಲುಕೋಲ

ಎದಿಬಾಯಿ ಬಡಕೊಂಡು ಹೊರಗರ ಬಂದಾಳ ಕೋಲುಕೋಲ

ಹೊರಗರ ಬಂದಾಳ ಹೊಲಕಾದರ ಹೋಗ್ಯಾಳ ಕೋಲುಕೋಲ

ನೆರೆಮನಿ ನೆಗೆಣ್ಣಿ ಬೆಂಕಿಗಂತ ಬಂದಿದಳು ಕೋಲುಕೋಲ
ಗಂಡ ಹೆಂಡಿರು ಕೂಡಿ ಮನಿಗಾರ ಬಂದಾರ ಕೋಲುಕೋಲ
ತವರವರು ಕೊಟ್ಟದ್ದು ಹನ್ನೊಂದು ಹೂಬಿನ ತಾಳಿ ಕೋಲುಕೋಲ
ಆ ತಾಳಿ ತಕ್ಕೊಂಡು ತವರ ಮನೆಗೆ ಹೋಗಿದಳು ಕೋಲುಕೋಲ [೧೫]

ಈ ಮೇಲಿನ ಎರಡೂ ಹಾಡುಗಳ ವಿಷಯ ವಸ್ತು ಒಂದೆಯಾಗಿದ್ದು, ವಿವರಣೆಯಲ್ಲಿ ಭಿನ್ನತೆಯನ್ನು ಕಾಣಬಹುದು. ಕೋಲಿನ ಹಾಡಿನಲ್ಲಿ 'ಶಿವನಲ್ಲಿ ಹೋಗ್ಯಾರ' ಎಂಬ ಶೀರ್ಷಿಕೆ ಬುಲಾಯಿ ಪದದಲ್ಲಿ 'ಬರದ ಹಾಡು' ಎಂದು ಕಂಡುಬರುತ್ತದೆ. ಬರ-ಬಡತನಗಳ ತೀವ್ರತೆಯನ್ನು ಪ್ರತಿನಿಧಿಸುವ ಈ ಹಾಡುಗಳು ೮ ಸಾಲು ಹಾಗೂ ೨೫ ಸಾಲುಗಳಲ್ಲಿರುವುದು ಗಮನೀಯ ಎರಡರಲ್ಲಿಯೂ ಬೆಳ್ಳಿಯನ್ನು ಒಯ್ದು ಜೋಳ ತರುವ ಚಿತ್ರಣ ಕಂಡುಬರುತ್ತದೆ. ಎರಡರಲ್ಲಿಯೂ ಕೊನೆಗೆ ಕೊರಳ ತಾಳಿಯನ್ನು ತೆಗೆದುಕೊಂಡು ತವರಿಗೆ ಹೋಗುವುದನ್ನು ಕಾಣುತ್ತೇವೆ.

ಕೋಲು ಪದದಲ್ಲಿ ಮಲಸೆಟ್ಟಿಯಾದರೆ ಬುಲಾಯಿ ಹಾಡಿನಲ್ಲಿ ಕಲಸೆಟ್ಟಿ ಎಂಬ ಹೆಸರುಗಳು ಕಂಡುಬರುತ್ತವೆ. ಕೋಲು ಪದದಲ್ಲಿ ಜೋಳ ಕಡಿಮೆಯಾದ ಕಾರಣ ತವರವರ ಸಹಾಯ ಕೇಳಲು ಹೋಗುತ್ತಾಳೆ. ಬುಲಾಯಿ ಪದದಲ್ಲಿ ತಂದ ಜೋಳವನ್ನು ಮಕ್ಕಳು ಹಾಗೆ ಫಕಫಕ ತಿನ್ನುವುದರಿಂದ ಮತ್ತೆ ರೊಟ್ಟಿಯೆಂದು ಅಳುವುದರಿಂದ ಒಲೆಯ ಮೇಲಿಟ್ಟ ನುಚ್ಚಿನ ಗಡಿಗೆಯಲ್ಲಿ ನೆಗೆಣ್ಣಿ ಹಿಡಿಗಲ್ಲ ಹಾಕಿದ್ದರಿಂದ ತವರ ಮನೆಗೆ ಹೋಗುತ್ತಾಳೆ. ಈ ಹಾಡಿನಲ್ಲಿ ಬಡತನ, ಬರ, ಹಸುವಿನಿಂದ ಕಂಗೆಟ್ಟ ಮಕ್ಕಳ ಸ್ಥಿತಿ ಕರುಳು ಚುರ್ ಎನ್ನುವಂತೆ ಚಿತ್ರಿತವಾಗಿದ್ದು, ವಿಶಿಷ್ಟವೆನಿಸುತ್ತದೆ. ಹೆಣ್ಣುಮಕ್ಕಳು ತಾವು ಕಂಡ ದೃಶ್ಯವನ್ನೋ, ಕೇಳಿದ ವಿಷಯವನ್ನೋ ತಮ್ಮದೇ ಆದ ರೀತಿಯಲ್ಲಿ ಸ್ಪಂದಿಸಿ, ತಮ್ಮ ಭಾಷೆಯಲ್ಲಿ ಅಭಿವ್ಯಕ್ತಿಸುವುದರಿಂದ ಅದು ಮನಮುಟ್ಟುವಂತೆ ಸಹಜ ಹಾಗೂ ನೇರ ರೀತಿಯಲ್ಲಿರುವಂತೆ ಕಂಡುಬರುತ್ತದೆ. ಇಲ್ಲಿ ಬೆಳ್ಳಿಕೊಟ್ಟು ತಂದ ಜೋಳ ಒಡೆದು ಒಲೆಯ ಮೇಲಿಟ್ಟು ನೀರಿಗೆ ಹೋದಾಗ ನೆರೆ ಮನೆ ನೆಗೆಣ್ಣಿ (ತಮ್ಮನ ಹೆಂಡತಿ) ಬಂದು ಹಿಡಿಗಲ್ಲು ಹಾಕುವ ದ್ವೇಷಭಾವವನ್ನು ತುಂಬಾ ಮಾರ್ಮಿಕವಾಗಿ ಮೂಡಿಬಂದಿದೆ. ಆಗ ಅವಳು ತಾನೇನು ಅನ್ನದೆ ತಮ್ಮನ ಹೊಲದಲ್ಲಿ ದುಡಿಯಲು ಹೋದ ಗಂಡನ ಬಳಿಗೆ ಹೋಗಿ ವಿಷಯವನ್ನು ತಿಳಿಸಿ, ಮನೆಗೆ ಬಂದ ನಂತರ ಗಂಡನ ಹೇಳಿಕೆಯಂತೆ ತಾಳಿಯನ್ನು ತೆಗೆದುಕೊಂಡು ತನ್ನ ಅಣ್ಣನ ಮನೆಗೆ ಹೋಗುವಂತೆ ಚಿತ್ರಿತವಾಗಿದೆ. ಇಲ್ಲಿ ಹೆಣ್ಣಿನ ಸಹನೆ, ಪರತಂತ್ರತೆ, ಗಂಡನ ಆದೇಶ ಪಾಲನೆ ಬರ ಮತ್ತು ಬಡತನದ ಬೇಗೆ ಮುಂತಾದ ವಿಷಯಗಳನ್ನು ಕಾಣಬಹುದು. ಈ ಹಾಡಿನ ಕೊನೆಯಲ್ಲಿ ಅವಳು ತವರುಮನೆಯಿಂದ ಅವಮಾನಿತಳಾಗಿ ಬಂದು, ಅದೇ ತಾಳಿಯಿಂದ ಅಕ್ಕಿ-ವಿಷ ಎರಡನ್ನು ತಂದು ಮಕ್ಕಳಿಗೆ ತಿನಿಸಿ, ತಾವು ಗಂಡ-ಹೆಂಡತಿ ತಿಂದು ಬಾಗಿಲು ಮುಚ್ಚಿ ಮಲಗುವ, ಬರದ ಸ್ಥಿತಿ ತಮಗೆ ಒದಗಿ ಬಂದಿತ್ತೆಂಬ ನಿಟ್ಟುಸುರಿನೊಂದಿಗೆ ಸಾವನ್ನಪ್ಪುವ ಹೃದ್ರಾವಕ ಚಿತ್ರವು ಮನಸ್ಸನ್ನು ಕಲಕುವಂತೆ ಚಿತ್ರಿತವಾಗಿದ್ದು, ಕಂಡುಬರುತ್ತದೆ.

ಬಹುಶಃ ಕೋಲು ಪದದ ಪ್ರೇರಣೆ ಪ್ರಭಾವದಿಂದಲೇ ಬುಲಾಯಿ ಪದವನ್ನು ಕಟ್ಟಿದ್ದರೂ, ಕೋಲು ಪದಕ್ಕಿಂತ ಬುಲಾಯಿ ಪದದ ಕೆಲವೊಂದು ಸಾಲುಗಳು ಮನಸ್ಸನ್ನು ತಟ್ಟಿ, ಕರುಣೆ ಉಕ್ಕಿಸುವುದನ್ನು ಕಾಣಬಹುದು. ಗಂಡ-ಹೆಂಡತಿ ಮಕ್ಕಳು ವಿಷ ಸೇವಿಸಿ ಸಾಯುವ, ಅವಳು ಬರ-ಬಡತನಕ್ಕೆ ಶಪಿಸುವ ರೀತಿ ಮನಮಿಡಿಯುವಂತಿದೆ. ಹೀಗೆ ಒಂದೇ ವಿಷಯ ವಸ್ತು ಆಗಿದ್ದರೂ ಧಾಟಿ, ಸಾಲುಗಳಲ್ಲಿ ಭಿನ್ನತೆಯನ್ನು ಕಾಣಬಹುದು. ಕೋಲುಪದಗಳ ವಿಷಯ ವಸ್ತುವನ್ನು ಬುಲಾಯಿ ಹಾಡುಗಳಲ್ಲಿ ಕಂಡುಬಂದರೂ, ತಮ್ಮದೇ ಆದ ರೀತಿಯಲ್ಲಿ ಅವುಗಳನ್ನು ಪಾಠಾಂತರಗೊಳಿಸಿ ಹಾಡಿದಂತೆ ಕಂಡುಬರುತ್ತದೆ. ಅವು ಬೀದರ ಭಾಷೆ, ಹೇಳುವ ರೀತಿ, ಬಳಸುವ ಪದ ಹಾಗೂ ಹಾಡುವ ಧಾಟಿಗಳಿಂದ ಹೊಸ ಸೃಷ್ಟಿಗಳಂತೆ ಕಂಡುಬರುತ್ತವೆ. ಆದರೆ ಎರಡೂ ಹಾಡುಗಳು ಸಂಸ್ಕೃತಿ ಪ್ರಸಾರದ ಪ್ರತೀಕಗಳಂತೆ ಕಂಡುಬರುತ್ತವೆ.

ಕೋಲುಪದಗಳನ್ನೇ ಹೋಲುವ ಅನೇಕ ಬುಲಾಯಿ ಪದಗಳನ್ನು ಕಾಣಬಹುದು. ಆದರೆ ಎಲ್ಲಾ ಕೋಲು ಪದಗಳು ಬುಲಾಯಿ ಪದಗಳಾಗದಿರುವುದು ಗಮನಿಯ. ಹೆಣ್ಣು ಮಕ್ಕಳು ತಮಗೆ ಹಿಡಿಸಿದ, ಬೇಕಾದ ವಿಷಯಗಳನ್ನು ಮಾತ್ರ ಕೋಲುಪದಗಳಿಂದ ಆಯ್ದುಕೊಂಡು 'ಬುಲಾಯಿ ಪದ' ಗಳನ್ನು ಕಟ್ಟಿ ಹಾಡಿದಂತೆ ಕಂಡುಬರುತ್ತದೆ. ಅವುಗಳಲ್ಲಿ ಶಿವಶಿಂಪಿಗ ಕೋಲು ಪದವನ್ನು 'ಶಿವ-ಗೌರಿ' ಬುಲಾಯಿ ಪದ, ಚಂಗಳಾದೇವಿ ಕೋಲು ಪದವನ್ನು ಚೆಂಗಳೆವ್ವನ ಹಾಡು, ರಡ್ಡೇರ ಸಾವಿತ್ರಿ ಕೋಲುಪದವನ್ನು ಅವ್ವಮ್ಮನ ಹಾಡೆಂದು, ಶಿವನಲ್ಲಿ ಹೋಗ್ಯಾರ ಕೋಲುಪದವನ್ನು ಬರದ ಹಾಡೆಂದು - ಹೀಗೆ ಅನೇಕ ಹಾಡುಗಳು ಕಂಡು ಬರುತ್ತವೆ. ಇಂತಹ ಹಾಡುಗಳ ವಿಷಯ ವಸ್ತು, ಆಶಯಗಳು ಒಂದೇ ಆಗಿರುವುದು ಗಮನಹಾರ್ಯವಾಗಿದೆ. ಹೀಗಾಗಿ ಕೋಲುಪದಗಳು ಬುಲಾಯಿ ಹಾಡುಗಳ ಮೂಲದ್ರವ್ಯವೆನ್ನಬಹುದು.

ಕಥನಗೀತೆಗಳು ಬುಲಾಯಿ ಹಾಡುಗಳು :

ಜನಪದ ಸಾಹಿತ್ಯ ಪ್ರಕಾರಗಳಲ್ಲಿ ಪ್ರಮುಖವಾಗಿ ಭಾವಗೀತೆ, ಖಂಡಕಾವ್ಯ, ಮಹಾಕಾವ್ಯಗಳು ಇರುವಂತೆ ಕಥನಕಾವ್ಯಗಳು ಇದ್ದು, ಜನ ಮೆಚ್ಚಿಗೆಯನ್ನು ಪಡೆದುಕೊಂಡಂತೆ ಕಂಡುಬರುತ್ತದೆ. ವಾಕ್ ಸಂಪ್ರದಾಯದಲ್ಲಿ ಉಳಿದು ಬಂದಿರುವ ಜನಪದ ಗೀತೆ ಸಾಹಿತ್ಯವನ್ನು ಸ್ಥೂಲವಾಗಿ ಭಾವ ಗೀತಾತ್ಮಕ ಮತ್ತು ಕಥಾನಾತ್ಮಕ ಎಂದು ವರ್ಗೀಕರಿಸಿಕೊಳ್ಳಬಹುದೆಂಬುದು ವಿದ್ವಾಂಸರ ಅಭಿಪ್ರಾಯ ಇವುಗಳಲ್ಲಿ ಒಂದು ಭಾವ ನಿಷ್ಠವಾದರೆ ಇನ್ನೊಂದು ವಸ್ತು ನಿಷ್ಠವಾದಂತಹುದು. ಆದರೆ ಎರಡೂ ಹಾಡಲ್ಪಡುವಂತಹವುಗಳೆಂಬುದು ಗಮನಾರ್ಹ.

ಜನಪದ ಸಾಹಿತ್ಯದ ಪ್ರಮುಖವಾದ ಅಂಶವೆಂದರೆ ಈ ಹಾಡುಗಳೆಲ್ಲ ಒಂದೊಂದು ವಿಶಿಷ್ಟ ಸಂದರ್ಭ ಮತ್ತು ಸಮಯಗಳಲ್ಲಿ ಮಾತ್ರ ಹಾಡಲ್ಪಡುವಂತೆ ಕಂಡುಬರುತ್ತವೆ. ಎಲ್ಲೆಂದರಲ್ಲೆ, ಹೇಗೆಂದರೆ ಹಾಗೆ ಹಾಡುವಂತೆ ಕಾಣಸಿಗದು. ಹಬ್ಬ, ಹರಿದಿನ, ಜಾತ್ರೆ-ಉತ್ಸವ, ಸುಗ್ಗಿಯ ಸಂದರ್ಭಗಳಲ್ಲಿ ಇವು ಹೆಚ್ಚು ಹಾಡಲ್ಪಡುವುದನ್ನು ಕಾಣಬಹುದು. ಇಂತಹ

ಸಂದರ್ಭದಲ್ಲೆಲ್ಲ ಸನ್ನಿವೇಶ, ಗಾಯಕವರ್ಗ, ಹಿಮ್ಮೇಳ, ಮುಮ್ಮೇಳ, ವಾದ್ಯ ಸಲಕರಣೆಗಳು ಮತ್ತು ಆಸಕ್ತ ಶ್ರೋತೃಗಳು ಇರಬೇಕಾದುದು ಅವಶ್ಯವೆಂದು ಕಂಡುಬರುತ್ತದೆ. ಕಥನಗೀತೆಗಳಿಗೂ ಅಷ್ಟೇ. ಅಂತೆಯೇ ಕಥನ ಗೀತೆಗಳು ನಿರೂಪಣೆಯ ಧಾಟಿ, ರೀತಿ, ಗತ್ತು ಮತ್ತು ಗೇಯತೆ ಮೊದಲಾದ ಅಂಶಗಳಿಂದ ಕೂಡಿದ ಒಂದು ಬಗೆಯ ಸಂಕೀರ್ಣವಾಗಿರುವ ಕಲಾಸೃಷ್ಟಿ ಎಂಬ ವಿದ್ವಾಂಸರ ಅಭಿಪ್ರಾಯ ಸೂಕ್ತವೆನಿಸುತ್ತದೆ.

"ಪುರಾಣ, ಪವಾಡ, ಚರಿತ್ರೆ, ಪರಾಕ್ರಮ, ಶೌರ್ಯ, ತ್ಯಾಗ, ಬಲಿದಾನ ಮೊದಲಾದ ಘಟನಾವಳಿಗಳನ್ನುಳ್ಳ ಗೀತೆಗಳೆಂದು ಕರೆಯಲಾಗಿದೆ. ಅವು ಸಮಾಜದ ಜೀವಂತ ಚಿತ್ರಣಗಳಾಗಿವೆ. ಘಟನೆಯ ವಾಸ್ತವಿಕಾಂಶ ಹೃದಯ ಸ್ಪರ್ಶಿ ಗೀತೆಗಳೇ ಜನಪದ ಕಥನ ಗೀತೆಗಳಾಗಿವೆ. ಕನ್ನಡ ಜನಪದ, ಸಾಹಿತ್ಯದಲ್ಲಿ ಜನಪದ ಕಥನ ಗದ್ಯ ಕತೆಗಳಿಗಿರುವಷ್ಟೇ ಮಹತ್ವ ಈ ಕಥನಗೀತೆಗಳಿಗಿದೆ"[೧೬] ಎಂಬುದು ಕಥನಗೀತೆಗಳ ವಿಷಯವಸ್ತು, ಸ್ವರೂಪ ಹಾಗೂ ಮಹತ್ವಗಳನ್ನು ಎತ್ತಿ ತೋರಿಸುವಂತೆ ಕಂಡುಬರುತ್ತದೆ.

ಕಥನ ಗೀತೆಗಳು ಖಂಡಕಾವ್ಯ, ಮಹಾಕಾವ್ಯದ ವಸ್ತುವನ್ನು ಪಡೆಯುವುದರಿಂದ ಅವು ಲಾವಣಿಗಿಂತ ಭಿನ್ನವಾಗಿರುವಂತೆ ಕಂಡುಬರುತ್ತವೆ. ವಾಚಿಕ ಸಂಪ್ರದಾಯದ ಕಥಾನಾತ್ಮಕ ಭಾಗದಲ್ಲಿ ಲಾವಣಿ, ಕಥನಗೀತೆ, ಖಂಡಕಾವ್ಯ, ಮಹಾಕಾವ್ಯ ಮೊದಲಾದವು ಜನಪದ ಸಾಹಿತ್ಯದ ಸತ್ವಪೂರ್ಣ ಅಂಶಗಳಾಗಿವೆ ಎಂಬುದು ವಿದ್ವಾಂಸರ ಮತ. ಇವು ಮೇಲ್ನೋಟಕ್ಕೆ ಹಲವು ಬಗೆಯ ಸಾಮ್ಯತೆಯನ್ನು ಪಡೆದಿದ್ದರೂ ವಾಸ್ತವವಾಗಿ ಅವುಗಳಿಗೆ ಸ್ವತಂತ್ರವಾದ ಅಸ್ತಿತ್ವವಿರುವುದು ಕಂಡುಬರುತ್ತದೆ.

ಕಥನಗೀತೆಗಳಂತೆ ಬುಲಾಯಿ ಹಾಡುಗಳು ಸಹ ಪುರಾಣ, ಪವಾಡ, ಚರಿತ್ರೆ, ಪರಾಕ್ರಮ, ಶೌರ್ಯ, ತ್ಯಾಗ, ಬಲಿದಾನ ಮೊದಲಾದ ಘಟನಾವಳಿಗಳನ್ನುಳ್ಳ ಹಾಡುಗಳಾಗಿರುವುದು ಗಮನಾರ್ಹ. ಇವು ಸಹ ಸಮಾಜದ ಅದರಲ್ಲೂ ಹೆಣ್ಣುಮಕ್ಕಳ ಸಂವೇದನೆಗಳ ಜೀವಂತ ಚಿತ್ರಣಗಳೆನ್ನಬಹುದು ಜೊತೆಗೆ ವಾಸ್ತವಿಕಾಂಶಗಳನ್ನು ಹೊಂದಿದ ಅನೇಕ ಹೃದಯ ಸ್ಪರ್ಶಿ ಬುಲಾಯಿ ಹಾಡುಗಳನ್ನು ಸಹ ಕಾಣಬಹುದು.

"ಅನೇಕ ಸಂದರ್ಭದಲ್ಲಿ ಸಂಪ್ರದಾಯದ ಕಥೋಪ ಜೀವಗಳು ಸಮಗ್ರ ರಾತ್ರಿ ಹಾಡುವ ಸುಪ್ರಸಿದ್ಧ ಕಥೆಗಳ ವಿಸ್ತಾರ ಒಂದು ಬಗೆಯದಾದರೆ, ನಾಡಿನ ಹೆಣ್ಣು ಮಕ್ಕಳು ತಮ್ಮ ಬದುಕಿಗೆ ಹತ್ತಿರವಾಗುವಂತೆ ತಮ್ಮ ಹೃದಯದ ರಾಗ ಭಾವಗಳಿಗೆ ಸಮೀಪವರ್ತಿಯಾದಂತೆ ಹಾಡಿಕೊಳ್ಳುವ ಮನೋಜ್ಞ ಕಥನಗೀತೆಗಳ ವೈವಿಧ್ಯ ಇನ್ನೊಂದು ಬಗೆಯದು ತಮ್ಮ ಬಿಡುವಿನ ವೇಳೆಯನ್ನು ಕೆಲಸದ ಸಂದರ್ಭಗಳನ್ನು ಸುಂದರ ಕಥೆಗಳನ್ನು ಹಾಡುವುದರ ಮೂಲಕ ಸಾರ್ಥಕಪಡಿಸಿಕೊಳ್ಳುವ ಅವರು ವಿಶೇಷವಾಗಿ ಆದರ್ಶ ಸ್ತ್ರೀ ಪಾತ್ರಗಳನ್ನೇ ಪ್ರತಿನಿಧಿಸುತ್ತಾರೆ. ಜನಪದರ ಒಲವು ಕೂಡ ಹೆಚ್ಚು ತೋರುತ್ತದೆ. ಹೆಣ್ಣಿನ ದುಃಖವನ್ನು ಸಂಕಷ್ಟವನ್ನು, ತ್ಯಾಗವನ್ನು ಬಲಿದಾನಗಳನ್ನು ಸಮರ್ಥವಾಗಿ ಚಿತ್ರಿಸುವುದು, ಸಮರ್ಪಕವಾಗಿ ಪ್ರತಿಬಿಂಬಿಸುವ ಅಪರಿಮಿತ

ಕಥನ ಗೀತೆಗಳು ಕನ್ನಡ ಜನಪದ ಸಾಹಿತ್ಯದ ಅನರ್ಘ್ಯ ರತ್ನಗಳೇ ಆಗಿವೆ. ಇಂಥ ಗಂಭೀರ ಸ್ವರೂಪದ ಕಥೆಗಳನ್ನು ಹೆಣ್ಣುಮಕ್ಕಳೇ ಹಾಡುತ್ತಾರೆ. ಅಲ್ಲದೇ ಹಲವು ಗಂಡಸರು ಹಾಡುವುದು ಕೂಡ ಉಂಟು. ಹೆಣ್ಣುಮಕ್ಕಳ ಹಾಡ್ಗತೆಗಳು ಹೆಚ್ಚು ಭಾವಗರ್ಭಿತವಾಗಿರುತ್ತವೆ. ಕಥಾ ಕ್ರಿಯೆಗಿಂತಲೂ ಅಲ್ಲಿ ವರ್ಣನೆಗೆ, ನೋವಿನ ಚಿತ್ರಣಕ್ಕೆ ಹೆಚ್ಚಿನ ಪ್ರಾಶಸ್ತ್ಯ"[೧೭] ಎಂಬುದು ಕಥನಗೀತೆಗಳ ಕುರಿತಾದ ಅಭಿಪ್ರಾಯವಾಗಿದ್ದು, ಇವು ಹೆಣ್ಣು ಮಕ್ಕಳೇ ಹೆಚ್ಚಾಗಿ ಹಾಡುವುದು ಕಂಡುಬರುತ್ತವೆ ಎಂಬ ಮಾತು ಗಮನಾರ್ಹವಾಗಿದೆ.

ಬುಲಾಯಿ ಹಾಡುಗಳಲ್ಲಿಯೂ ಹೆಚ್ಚಾಗಿ ಹೆಣ್ಣುಮಕ್ಕಳ ದುಃಖ, ಸಂಕಷ್ಟ, ತ್ಯಾಗ - ಬಲಿದಾನ ಕುರಿತಾದ ಹಾಡುಗಳೇ ಕಂಡು ಬರುತ್ತವೆ. ಇಂತಹವುಗಳನ್ನು ಸಮರ್ಥವಾಗಿ ಚಿತ್ರಿಸಲು ಹೆಣ್ಣು ಮಗಳು ಕಥನಗೀತೆಗಳನ್ನೇ ಬಳಸಿಕೊಂಡಿರುವ ಸಾಧ್ಯತೆ ಕಂಡುಬರುತ್ತದೆ. ಹೀಗಾಗಿ ಬುಲಾಯಿ ಹಾಡುಗಳಲ್ಲಿ ಭಾವಗರ್ಭಿತವಾದ ಹಾಡ್ಗತೆಗಳು ಕಂಡುಬರುತ್ತವೆ.

ಉದಾ: ಸಂಗಮ್ಮನ ಹಾಡು, ಈರಮ್ಮನ ಹಾಡು, ಅವ್ವಮ್ಮನ ಹಾಡು, ಸೀತಾದೇವಿ ಹಾಡು, ದ್ರೌಪದಿ ಹಾಡು, ಗೋಪೆಮ್ಮನ ಹಾಡು, ಪತಿವರತೆಯ ಹಾಡು ಹೀಗೆ ಹತ್ತು ಹಲವು ನೋವಿನ ಬಲಿದಾನದ, ತ್ಯಾಗದ ಹಾಡುಗಳನ್ನು ಸುದೀರ್ಘವಾಗಿ ಹಾಡುವುದು ಬುಲಾಯಿ ಹಾಡುಗಳಲ್ಲಿ ಕಾಣಬಹುದು.

ಕಥನ ಗೀತೆಗಳಂತೆ ಬುಲಾಯಿ ಹಾಡುಗಳನ್ನು ವಿಶಿಷ್ಟ ಸಂದರ್ಭ ಅಂದರೆ ನಾಗರ ಪಂಚಮಿ ಹಬ್ಬದಲ್ಲಿ ಹಾಡುವುದನ್ನು ಕಾಣಬಹುದು. ಕಥನಗೀತೆಗಳಿಗೆ ನಿರೂಪಣೆಯ ದಾಟಿ, ರೀತಿ, ಗತ್ತು ಗೇಯತೆಗಳಿರುವಂತೆ, ಬುಲಾಯಿ ಹಾಡಿಗೂ ಸಾಹಿತ್ಯ, ದಾಟಿ, ಸೊಲ್ಲು ಗೇಯತೆಗಳಿರುವುದು ಕಂಡುಬರುತ್ತದೆ. ಬಹುತೇಕ ಜನಪದದ ಎಲ್ಲ ಸ್ತರಗಳ ಹಾಡುಗಳನ್ನು ಬುಲಾಯಿ ಹಾಡುಗಳಲ್ಲಿ ಕಾಣಬಹುದು. ಆದರೆ ಅವುಗಳನ್ನು ತನ್ನದೇ ಆದ ಧಾಟಿ, ಸೊಲ್ಲುಗಳಲ್ಲಿ ಹಾಡುವುದು ಗಮನಾರ್ಹ.

ಬುಲಾಯಿ ಹಾಡುಗಳಲ್ಲಿ ಅನೇಕ ಕಥನಗೀತೆಗಳ ವಿಷಯ ವಸ್ತು, ಆಶಯಗಳು ಕಂಡುಬರುತ್ತವೆ. ಆದರೆ ಹಾಡುವ ರೀತಿ, ಧಾಟಿಗಳಿಂದ ಪಾಠಾಂತರದಲ್ಲಿ ಇವು ಸ್ವತಂತ್ರ ಹಾಡುಗಳಂತೆ ಕಂಡುಬರುತ್ತವೆ. ಕೆಲವೊಂದು ಮಾರ್ಪಾಡು, ಪಾಠಾಂತರಗಳೊಂದಿಗೂ ಬುಲಾಯ ಹಾಡುಗಳಾಗಿರುವ ಸಾಧ್ಯತೆ ಕಂಡುಬರುತ್ತದೆ. ಒಂದೇ ವಿಷಯ ಕುರಿತಾದ ವಿವಿಧ ಬಗೆಯ ಭಿನ್ನ ಹಾಡುಗಳು ಕಂಡುಬರುತ್ತವೆ. ವಾಕ್ ಸಂಪ್ರದಾಯದಲ್ಲಿ ಮುಂದೊರೆದು ಬರುವ ಬುಲಾಯಿ ಹಾಡುಗಳಲ್ಲಿ ಅನೇಕ ಬದಲಾವಣೆ, ಪಾಠಾಂತರಗಳಾಗುವುದು ಸಹಜವೆನಿಸುತ್ತದೆ. ಹಾಡುವವರ ಧಾಟಿ, ಅನುಕೂಲಕ್ಕೆ ತಕ್ಕಂತೆ ವಿವಿಧ ಮಾರ್ಪಾಡುಗಳು ಆಗಿರುವ ಸಾಧ್ಯತೆಗಳೂ ಇರಬಹುದು. ಕಥನ ಗೀತೆಗಳಾಗಿರುವ 'ಗೋವಿನ ಹಾಡು ಹಾಗೂ 'ಕೆರೆಗೆ ಹಾರ' 'ಚೆನ್ನಮ್ಮನ ದಂಡಿ', 'ಮುಂತಾದವು ಬುಲಾಯಿ ಹಾಡಿನಲ್ಲಿ 'ಆಕಳ ಹಾಡು' 'ಕೆರೆಕಟ್ಟಾ ಹಾಡು', 'ಚಿಕ್ಕ ಚೆನ್ನಮ್ಮನ ಹಾಡು' ಗಳೆಂದು ಕಂಡುಬರುತ್ತವೆ. ಅಲ್ಲದೇ 'ಕಾಳಿಂಗರಾಯನ ಹಾಡು'

'ನೀಲಗಂಗಾನ ಹಾಡು', 'ಬಡತನದ ಹಾಡು' ಮುಂತಾದವುಗಳು ಅದೇ ರೀತಿಯಲ್ಲಿ ಬುಲಾಯಿ ಹಾಡುಗಳಲ್ಲಿ ಹಾಡುವುದನ್ನು ಕಾಣಬಹುದು.

ಪ್ರಸ್ತುತ 'ಗೋವಿನ ಹಾಡು', 'ಕೆರೆಗೆ ಹಾರ' ಕಥನ ಗೀತೆಗಳು ಬುಲಾಯಿ ಹಾಡಿನಲ್ಲಿ 'ಆಕಳ ಹಾಡು', 'ಕೆರೆ ಕಟ್ಟಾ ಹಾಡು' ಗಳನ್ನು ಕುರಿತು ನೋಡುವಾ.

ಧರಣಿ ಮಂಡಲ ಮಧ್ಯದೊಳಗೆ
ಮರೆಯುತಿಹ ಕರ್ನಾಟ ದೇಶ
ದೊಳಿರುವ ಕಾಳಿಂಗನೆಂಬ ಗೊಲ್ಲನ
ಪರಿಯ ನಾನೆಂತು ಪೇಳ್ವೆನು ....[೧೮]

ಎಂದು ಪ್ರಾರಂಭವಾಗುವ ಕಥನ ಗೀತೆಯಲ್ಲಿ ಕಾಳಿಂಗನೆಂಬ ಗೊಲ್ಲನ ದಿನಚರಿಯಿಂದ ಆಕಳುಗಳ ಹಾಲು ಕರೆಯುವುದು, ಅವುಗಳಿಗೆ ಮೇಯಲು ಬಿಡುವುದು, ಮೇದು ಹಿಂತಿರುಗಿ ಬರುವಾಗ, ಪುಣ್ಯಕೋಟಿ ಎಂಬ ಗೋವು ಎಲ್ಲರಿಗಿಂತ ಮೊದಲು ಬಂದಾಗ ಹಸಿದ ಹುಲಿಯನ್ನು ಕಂಡು ಭಾಷೆ ಕೊಟ್ಟು, ಕಂದನಿಗೆ ಮೊಲೆ ಉಣಿಸಿ, ಹೇಳಿ ಹೋಗಲು ಬಂದು ತನ್ನ ಸ್ಥಿತಿಯನ್ನು ತಿಳಿಸಿ, ಕಂದನಿಗೆ ಬುದ್ಧಿಮಾತು ಹೇಳಿ, ತನ್ನ ಜೊತೆಯ ಹಸುಗಳಿಗೆ ತಬ್ಬಲಿಯ ಕರುವನ್ನು ಚೆನ್ನಾಗಿ ನೋಡಿಕೊಳ್ಳಿರೆಂದು ವಿನಂತಿಸಿಕೊಳ್ಳುತ್ತದೆ. ಪುನಃ ಹುಲಿಯ ಬಳಿಗೆ ಹೋಗಿ ತನ್ನನ್ನು ತಿಂದು ಹೊಟ್ಟೆಯ ಹಸಿವನ್ನು ಹಿಂಗಿಸಿಕೊಳ್ಳು ಎಂದು ಹೇಳುತ್ತದೆ. ಆಕಳ ಸತ್ಯವನ್ನು ಕಂಡ ಕ್ರೂರ ಹುಲಿಯೂ ಕರಗುತ್ತದೆ. ಮತ್ತೆ ಆಕಳವನ್ನು ಮನೆಗೆ ಕಳುಹಿಸಲು ತಾನೇ ತನ್ನ ಪ್ರಾಣವನ್ನು ತ್ಯಾಗ ಮಾಡುವ ಕಥೆಯನ್ನು ಈ ಗೀತೆಯಲ್ಲಿ ಕಾಣಬಹುದು.

ಸಾಮಾಜಿಕ ಮೌಲ್ಯವನ್ನು ಎತ್ತಿ ತೋರಿಸುವ ಈ ಗೀತೆ ಒಂದೆಡೆ ಗೋವಿನ ಸತ್ಯ ಪರಿಪಾಲನೆಯನ್ನು ಇನ್ನೊಂದೆಡೆಗೆ ಹುಲಿರಾಯನ ತ್ಯಾಗವನ್ನು ಪ್ರತಿಬಿಂಬಿಸುವಂತೆ ಕಂಡುಬರುತ್ತದೆ. ಸತ್ಯ ಇಲ್ಲಿಯ ಆದರ್ಶವೂ ಹೌದು, ಮೌಲ್ಯವೂ ಹೌದು.

ಕಥನಗೀತೆಯ ಆಶಯ, ವಸ್ತು, ವಿಷಯವನ್ನು ಪಡೆದರೂ, 'ಬುಲಾಯಿ ಹಾಡು' ಭಿನ್ನ ರೀತಿಯಲ್ಲಿ ಮೂಡಿಬಂದಿರುವುದು ವಿಶಿಷ್ಟವೇನಿಸುತ್ತದೆ. ಹೆಣ್ಣು ಮಕ್ಕಳು ಸಾಮಾನ್ಯವಾಗಿ ಓದು - ಬರಹ ಬಾರದವರಾಗಿದ್ದು, ಭಾವನೆಗಳನ್ನು ಮಾತ್ರ ಸೊಗಸಾಗಿ ಅಭಿವ್ಯಕ್ತಿಸಿದ್ದನ್ನು ಕಾಣಬಹುದು. ಇಲ್ಲಿ ಅವಳಿಗೆ ಕಾಳಿಂಗನ ವಿಷಯ ಬೇಕಿಲ್ಲ. ಏನಿದ್ದರೂ ಗೋಪೆಮ್ಮನೇ ಮುಖ್ಯ. ಹಾಗಾಗಿ ಶಿಷ್ಟರಂತೆ ಗೋವು ಎನ್ನಳು. ಮಾತೆಯೆಂದು, ಗೋಪೆಮ್ಮ ಎಂದು ಆದರ, ಆತ್ಮೀಯತೆಯಿಂದ ಕರೆಯುವುದು ಅರ್ಥಪೂರ್ಣವೇನಿಸುತ್ತದೆ. ಅವಳ ಹಾಡಿನಲ್ಲಿ ಯಾವ ಕೃತಕತೆಯಾಗಲಿ, ಹೊಗಳಿಕೆಯಾಗಲಿ ತರದೆ ಸರಳವಾಗಿ, ಸುಂದರವಾಗಿ ವಿಷಯ ನಿರೂಪಣೆ ಮಾಡುವುದು ಕಂಡುಬರುತ್ತದೆ. ಹೀಗಾಗಿ ಬುಲಾಯಿ ಹಾಡುಗಳಲ್ಲಿ ಸಹಜವಾದ ನೇರ ನುಡಿಗಳನ್ನು ಕಾಣಬಹುದು.

ಹಚ್ಚನ ಹುಲ್ಲ ಕಂಡು ಹಳಿಯ ಮೇಯಲ್ಲಿ ಹೋದ
ಅತ್ತಿಂದ ಬಂದ ಹುಲಿರಾಜ ಕೋಲೆಣ್ಣ ಕೋಲೆ
ಅತ್ತಿಂದ ಎಲೆ ಬಂದ ಹುಲಿರಾಜ ಗೋಪೆಮ್ಮಾ
ತಿಲ್ಲೇನೆ ಗೋಪಿ ನಿನ್ನಗ ಕೋಲೆಣ್ಣ ಕೋಲೆ
ತಿಂದಾರ ತಿನ್ನತಿದ್ದಿ ಮನಿದಾಗ ಕಂದಾಹಾನ
ಮಲಿನಾದರ ಕುಡಿಸಿ ಬರುತೆ ಕೋಲೆಣ್ಣ ಕೋಲೆ
ಬರುತಿನಂತ ಹೇಳುತಿ ಖರೆ ಹ್ಯಾಂಗ ತಿಳಿಬೇಕ
ಮಾಡವ್ವ ಗೋಪಿ ಪರಮಾಣ ಕೋಲೆಣ್ಣ ಕೋಲೆ
ಹಳಿಯ ನೀರಿನ ಆಣಿ ಬಿಡುವ ಘಾಳಿಯ ಆಣಿ
ನಿನ್ನಾಣಿ ಹುಲಿರಾಜ ಬರುತಿನೋ ಕೋಲೆಣ್ಣ ಕೋಲೆ
ಭಿರಿ ಭಿರಿ ಗೋಪೆಮ್ಮಾ ಮನಿಗಾದರ ಬಂದಿದಾಳೆ
ತೆಲಿಹಚ್ಚಿ ತಲುಪ ತೆಗೆದಾಳ ಕೋಲೆಣ್ಣ ಕೋಲೆ
ತೆಲಿಹಚ್ಚಿ ಎಲೆ ತಲುಪ ತೆಗೆದಾಳ ಗೋಪೆವ್ವಾ
ಮಲಿ ಕುಡಿಯಲು ಕಂದಾನ ಕರದಾಳೆ ಕೋಲೆಣ್ಣ ಕೋಲೆ
ಮಲಿ ಕುಡಿಯಲಿ ಎಲೆ ಕಂದಾನ ಕರದಾಳೆ ಕರದೂನೆ
ಹೇಳುತಾಳ ತನ್ನ ಒಳ ಮಾತ ಕೋಲೆಣ್ಣ ಕೋಲೆ
ಒಳ್ಳನೆ ಕಲ್ಲಿನ ಮ್ಯಾಲ ಬಿಸದಾಣಿ ಇಡುತಾರ
ಓಡೋಡಿ ಹೋಗಿ ಬುಕ್ಕ ಬ್ಯಾಡ ಕೋಲೆಣ್ಣ ಕೋಲೆ
ಓಡೋಡಿ ಹೋಗಿ ಬುಕ್ಕ ಬ್ಯಾಡ ನನ್ನ ಕಂದ
ಕಲ್ಕು ಕಲ್ಲು ಹಚ್ಚಿ ಹೊಡದಾರೋ ಕೋಲೆಣ್ಣ ಕೋಲೆ
ಕಲ್ಲುನೆ ಕಲ್ಲ ಹಚ್ಚಿ ಹೊಡೆದಾರೋ ನನ್ನ ಕಂದ
ತಾಯಿ ತಾಯಿಯಂತ ಹೊರಳಿಯೋ ಕೋಲೆಣ್ಣ ಕೋಲೆ
ಬೀಸಾನೆ ಕಲ್ಲಿನ ಮುಂದ ಬಿಸುದಾಣಿ ಇಡುತಾರ
ಸತಿ ಮಾಡಿ ನೀನು ತಿನಬ್ಯಾಡೋ ಕೋಲೆಣ್ಣ ಕೋಲೆ
ಸತಿ ಮಾಡಿ ಎಲೆ ನೀನು ತಿನುಬ್ಯಾಡೋ ನನ ಕಂದಾ
ಗ್ಲೂಟ ಗ್ಲೂಟಲ್ಲಚ್ಚಿ ಹೊಡದಾರು ಕೋಲೆಣ್ಣ ಕೋಲೆ
ಗ್ಲೂಟನೆ ಗ್ಲೂಟಲ್ಲಚ್ಚಿ ಹೊಡೆದಾರೋ ನನ್ನ ಕಂದಾ
ತಾಯಿ ತಾಯಿಯಂತ ಹೊರಳಿಯೋ ಕೋಲೆಣ್ಣಾ ಕೋಲೆ
ಊರ ಮುಂದಿನ ಹೊಲದಾಗ ಜ್ವಾಳಾನೆ ಬಿತ್ತುತ್ತಾರೆ

ಹಕ್ಕ ಮಾಡಿ ನೀನು ತಿನುಬ್ಯಾಡ ಕೋಲೆಣ್ಣ ಕೋಲೆ
ಹಕ್ಕನೆ ಹಕ್ಕು ಮಾಡಿ ತಿನಬ್ಯಾಡೋ ನನ ಕಂದ
ಚಬುಕ ಚಬುಕಿಲಿ ಹೊಡೆದಾರೋ ಕೋಲೆಣ್ಣ ಕೋಲೆ
ಇಷ್ಟೆಲ್ಲ ಹೇಲುತ್ತಿ ಇಷ್ಟೆಲ್ಲಾ ಕೇಳುತ್ತಿ
ನೀ ಎಲ್ಲಿ ಹೋಯ್ತೆ ಹಡದವ್ವ ಕೋಲೆಣ್ಣ ಕೋಲೆ
ಮುಂದ ಮುಂದ ಗೋಪೆವ್ವ ಹಿಂದ ಹಿಂದ ಎಳೆಗರು
ನಡದಾರವರು ಅಡವಿಗಿ ಕೋಲೆಣ್ಣ ಕೋಲೆ
ಹರಿಯ ನೀರಿನ ಆಣಿ, ಬಿಡುವ ಘಾಳಿಯ ಆಣಿ
ನಿನ್ನಾಣಿ ರಾಜ ಹುಲಿ ತಿನುಬಾರೋ ಕೋಲೆಣ್ಣ ಕೋಲೆ
ಬರುವುದು ಬಂದೀದಿ ಕಂದಗ್ಯಾಕ ತಂದೀದಿ
ಕಂದನ ತಾಯಾಗಿ ಇರು ಹೋಗೆ ಕೋಲೆಣ್ಣ ಕೋಲೆ...[೧೯]

ಈ ಹಾಡಿನಲ್ಲಿಯೂ 'ಗೋವಿನ ಹಾಡಿ' ನಲ್ಲಿನಂತೆ ಸತ್ಯ, ವಚನ ಪರಿಪಾಲನೆ ಹಾಗೂ ಹುಲಿಯ ತ್ಯಾಗ ಗುಣಗಳು ಮೌಲ್ಯಗಳಾಗಿ ಕಂಡಬಂದರೂ **'ಆಕಳ ಹಾಡು'** ಶೀರ್ಷಿಕೆಯಿಂದ ಇಡೀ ಹಾಡು ಸರಳವಾಗಿ ಸಹಜ ರೀತಿಯಲ್ಲಿರುವುದು ಗಮನಾರ್ಹವಾಗಿದೆ. ಹೆಣ್ಣು ಮಗಳು ತಾನು ಯಾವ ರೀತಿಯಲ್ಲಿ ತನ್ನ ಮಗುವಿನೊಂದಿಗೆ ಮಾತನ್ನಾಡುವಳೋ ಅದೇ ರೀತಿಯಲ್ಲಿ ಆಕಳು ತನ್ನ ಕರುವಿನೊಂದಿಗೆ ಮಾತಾಡಿದಂತೆ ಹಾಡುವುದು ವಿಶಿಷ್ಟವೆನಿಸುತ್ತದೆ. ತನ್ನ ಮಗುವಿಗೆ ಹಿತನುಡಿಗಳನ್ನು ಮುನ್ನೆಚ್ಚರಿಕೆಯ ಮಾತುಗಳನ್ನು ಹೇಳುವುದು ತುಂಬಾ ಮಾರ್ಮಿಕವಾಗಿಯೂ, ಹೃದಯ ಸ್ಪರ್ಷಿಯಾಗಿಯೂ ಮೂಡಿಬಂದಿದೆ. **ಇಷ್ಟೆಲ್ಲಾ ಹೇಳುವ ನೀನೆಲ್ಲಿ ಹೋಗುವಿ** ಎಂದು ತಾಯಿಯನ್ನು ಹಿಂಬಾಲಿಸುವ ಕರುವಿನ ಚಿತ್ರ ಒಂದು ಮಗು ಹಠ ಮಾಡುತ್ತಾ ತನ್ನ ತಾಯಿಯನ್ನು ಹಿಂಬಾಲಿಸುವ ಚಿತ್ರವನ್ನು ಕಣ್ಮುಂದೆ ನಿಲ್ಲಿಸುವಂತೆ ಕಂಡು ಬರುತ್ತದೆ. ನಿಸರ್ಗದಲ್ಲಿ ಹರಿಯುವ ನೀರು, ಬೀಸುವ ಗಾಳಿ ಹಾಗೂ ಹುಲಿಯ ಮೇಲೆ ಆಣೆಯಿಟ್ಟು ಹೋದ ಅವಳು, ತನ್ನ ವಚನ ಪಾಲನೆಯನ್ನು ನಡೆಸುವುದು ಸಹಜ ಹಾಗೂ ಸರಳತೆಗೆ ಸಾಕ್ಷಿಯೆನಿಸುತ್ತದೆ. ಜನಪದ ಹೆಣ್ಣುಮಗಳು ಸತ್ಯ, ದೇವರು ಎನ್ನದೆ, ನೀರು, ಗಾಳಿಗಳಿಗೇ ದೇವರ ಸ್ವರೂಪ ನೀಡಿದಂತೆ ಕಂಡುಬರುತ್ತದೆ. ಇಲ್ಲಿಯ ಅಂತ್ಯವು ಸಹ ತುಂಬಾ ವಿಶಿಷ್ಟ ಪೂರ್ಣವಾಗಿ ಕಂಡುಬರುತ್ತದೆ. 'ಗೋವಿನ ಹಾಡಿ' ನಲ್ಲಿಯಂತೆ ಹುಲಿ ಕಣ್ಣೀರು ಸುರಿಸಿ ಹಾರಿ ಪ್ರಾಣ ಬಿಡುವುದಿಲ್ಲ, 'ಕಂದನ ತಾಯಾಗಿ ಇರು ಹೋಗೆ' ಎಂದು ಹರಸಿ ಬೀಳ್ಕೊಡುವುದು, ನಮ್ಮ ಹೆಣ್ಣು ಮಕ್ಕಳ ಜೀವಪರ ಧೋರಣೆ, ಆಶಾವಾದಿತನವನ್ನು ಬಿಂಬಿಸುವಂತಿದೆ. ಅವರು ಸಾವಿಗಿಂತ ಬದುಕಿಗೆ ಹೆಚ್ಚಿನ ಆದ್ಯತೆ ನೀಡಿದಂತೆ ಕಂಡುಬರುತ್ತದೆ. ಈ ಹಾಡಿನಲ್ಲಿ ವಚನ ಪರಿಪಾಲನೆ ಮಾಡಿದ ಆಕಳು ಹಾಗೂ ಅದರಿಂದ ಮನಪರಿವರ್ತನೆಗೊಂಡು ಕಂದನನ್ನು ನೋಡಿ ಹಿಂತಿರುಗಿಸಿ ಕಳುಹಿಸುವ 'ಹುಲಿ' ಎರಡೂ ಮೌಲ್ಯಗಳ ಪ್ರತಿ ನಿಧಿಗಳಾಗಿ ನಿಲ್ಲುವುದು ತುಂಬಾ ಮಹತ್ವದ್ದೆನಿಸುತ್ತದೆ.

ಇದು ಹೆಣ್ಣುಮಕ್ಕಳು ಕಥನಗೀತೆ ಕೇಳಿ ತನ್ನದೇ ಆದ ಬುಲಾಯಿ ಸಂಸ್ಕೃತಿಯಂತೆ ಪಾಠಾಂತರ ಮಾಡಿಕೊಂಡು, ಪ್ರಾದೇಶಿಕ ಭಾಷೆಯನ್ನು ಯಥೇಚ್ಛವಾಗಿ ಬಳಸಿ, ತನ್ನ ಭಾವನೆಗಳಿಗೆ ಅನುಗುಣವಾಗಿ 'ಬುಲಾಯಿ ಹಾಡಾಗಿ' ಹಾಡಿರುವುದು ನಿಜಕ್ಕೂ ಸ್ವತಂತ್ರ ರಚನೆಯೇ ಎಂಬಂತೆ ಕಂಡುಬರುತ್ತದೆ. ಹೀಗೆ ಬುಲಾಯಿ ಹಾಡುಗಳ ವಿಷಯವಸ್ತು ಆಶಯಗಳು 'ಕಥನಗೀತೆಗಳಂತೆ' ಕಂಡು ಬಂದರೂ ಈ ಹಾಡುಗಳಿಗೆ ತನ್ನದೇ ಆದ ಸ್ವಂತಿಕೆಯ ಛಾಪು ಕಂಡುಬರುವುದು ಗಮನಾರ್ಹ.

'ಕೆರೆಗೆ ಹಾರ' ಕಥನಗೀತೆ

ಕಲ್ಲನ ಕೇರಿ ಮಲ್ಲನ ಗೌಡಾ ಕೆರೆಯೊಂದ ಕಟ್ಟಿಸ್ಯಾನು
ಕೆರೆಯೊಂದ ಕಟ್ಟಿಸ್ಯಾನು ಸೆರೆಮುಕ್ಕ ನೀರಿಲ್ಲ
ಸೆರೆಮುಕ್ಕ ನೀರಿಲ್ಲ ಹೊತ್ತಿಗೆ ತಗಸ್ಯಾರು
ಹೊತ್ತಿಗೆ ತಗಸ್ಯಾರು ಜೋಯಿಸ ಕೇಳ್ಯಾರು
ದೇವರಿಲ್ಲ ದಿಂಡ್ರಿಲ್ಲ ದೇವ್ವಲ್ಲ ಭೂತಲ್ಲ
ಹಿರಿಸೊಸೆ ಮಲ್ಲವ್ವನ ಹಾರ ಕೊಡಬೇಕು
ಹಾರವ ಕೊಟ್ಟರೆ ನೀರು ಬೀಳೂವಂದ್ರೂ
ಹಿರಿಸೊಸಿನ ಕೊಟ್ಟರೆ ಹಿರಿತನಕ ಯಾರಿಲ್ಲ
ಕಡೆಸೊಸಿ ಬಾಗೀರತಿನ್ನ ಹಾರವ ಕೊಡಬೇಕು
ಹಾರ ಕೊಡಬೇಕಂತ ಮಾತಾತುಮನಿಯಾಗ.....[೨೦]

ಹೀಗೆ ಪ್ರಾರಂಬವಾಗುವ ಈ ಹಾಡು ಸಹ ಕೋಲೆನ್ನ ಕೋಲೆ ಸೊಲ್ಲನ್ನು ಹೊಂದಿರುವುದು ಗಮನಾರ್ಹವಾಗಿದೆ. ಕಟ್ಟಿಸಿದ ಕೆರೆಗೆ ನೀರು ಇಲ್ಲದಾಗ ಜೋಯಿಸರನ್ನು ಕೇಳುವುದು. ಹಿರಿಯ ಸೊಸೆಗೆ ಹಾರ ಕೊಡಬೇಕೆಂದು ಹೇಳುವುದು, ಹಿರಿಸೊಸಿನ ಕೊಟ್ಟರ ಹಿರಿತನಕ ಯಾರಿಲ್ಲವೆಂದು ಕಿರಿಯ ಸೊಸೆಯನ್ನು ಹಾರ ಕೊಡಲು ನಿರ್ಧರಿಸುವುದನ್ನು ಈ ಸಾಲುಗಳಲ್ಲಿ ಕಾಣಬಹುದು. ಹೀಗೆ ಸಂಕೀರ್ಣವಾದ ಸಂಪ್ರದಾಯ, ಆಚರಣೆ, ನಂಬಿಕೆಗಳಿಗೆ ಅನೇಕ ನಿಷ್ಪಾಪ ಜೀವಗಳು ಬಲಿಯಾಗಿರುವುದು ಕಥನಗೀತೆಗಳಲ್ಲೂ ಕಾಣಬಹುದು. ತನ್ನ ಮನಸ್ಸಿನ ನೋವು ಸಂಕಟವನ್ನು ಯಾರ ಎದುರಿನಲ್ಲೂ ಹೇಳದೆ ಭಾಗೀರತಿ ಕೊನೆಯದಾಗಿ ಎಂಬಂತೆ ಎಲ್ಲರನ್ನೂ ಅಂದರೆ ತಂದೆ-ತಾಯಿ, ಅಣ್ಣ-ತಮ್ಮರನ್ನು ಭೇಟ್ಟಿಯಾಗುತ್ತಾಳೆ. ಆದರೆ ಗೆಳತಿಯ ಮುಂದೆ ಮಾತ್ರ ತನ್ನೆಲ್ಲ ನೋವವನ್ನು ಹೊರಹಾಕುವುದು ಕಂಡುಬರುತ್ತದೆ. ಅವಳ ಗಂಡ ಸಹ ಬೇರೆ ಊರಲ್ಲಿ ದಂಡಿನಲ್ಲಿರುವ ಕಾರಣ ಭಾಗೀರಥಿ ಗೆಳತಿಗೆ ಹೇಳಿಕೊಂಡಿರಬಹುದು. ಎಲ್ಲರನ್ನು ಭೆಟ್ಟಿಯಾಗಿ ಬಂದ ಮೇಲೂ ಅವಳ ದುಃಖ ಕಣ್ಣೀರಲ್ಲಿ ಹರಿಯುವುದು ಕಂಡುಬರುತ್ತದೆ. ಅವಳನ್ನು ಅತ್ತೆ ಕೇಳಿದರೆ ಹಸನು ಮಾಡುವ ಅಕ್ಕ್ಯಾಗಿನ ಹಳ್ಳ ಕಣ್ಣಲ್ಲಿ ಬಿತ್ತೆಂದು ಹೇಳುತ್ತಾಳೆ. ಹೀಗೆ ಪ್ರತಿಯೊಂದು ಬಾರಿಯೂ ಒಂದೊಂದು ನೆಪ ಹೇಳುವುದು ಅವಳ ಮನೋವೇದನೆಗೆ

ಹಿಡಿದ ಕನ್ನಡಿಯೆನಿಸುತ್ತದೆ. ಒಟ್ಟಾರೆ ಯಾವುದಕ್ಕೂ ಯಾವ ಸೊಸೆಯಂದಿರು ಮುಂದಾಗದಿದ್ದಾಗ ಭಾಗೀರಥಿಯೇ ಜಳಕಮಾಡಿ ಬಂಗಾರ ಬುಟ್ಟಿ ಸಿಂಗಾರ ಸಿಂಬಿ ತೆಗೆದುಕೊಂಡು ಮುಂದಾಗುತ್ತಾಳೆ. ಎಲ್ಲವೂ ಮೌನದಲ್ಲಿಯೇ. ಯಾರೂ ಇಂದು ಇವಳಿಗೆ ಹಾರ ಕೊಡುತ್ತಿದ್ದಾರೆಂದಾಗಲಿ, ಕೊಡುವರೆಂದಾಗಲಿ ಒಂದೆಡೆಯೂ ಪ್ರಸ್ತಾಪಿಸದಿರುವುದು ಗಮನಾರ್ಹ. ಹೀಗೆ ಅವಳ ಹಿಂದೆ ಎಲ್ಲರೂ ಹೋಗಿ ಗಂಗೆ ಪೂಜೆ ಮಾಡುತ್ತಾರೆ. ಹಿಂತಿರುಗಿ ಬರುವಾಗ ಬಂಗಾರ ಬಟ್ಲ ಮರೆಯುತ್ತಾರೆ. ಅದನ್ನು ತರಲು ಯಾರೂ ಹೋಗದಿದ್ದಾಗ ಭಾಗೀರತಿಯೇ ಹೋಗುತ್ತಾಳೆ. ಆಗ ಅವಳು ಬಟ್ಟಲನ್ನು ತೆಗೆದುಕೊಂಡು ಬರುವಾಗ

ಒಂದು ಮೆಟ್ಲೇರುದಕ ಪಾದಕ ಬಂದಳು ಗಂಗಿ
ಎರಡು ಮೆಟ್ಲೇರುದಕ ಪಾದ ಮುಣಿಗಿಸ್ಯಾಳು ಗಂಗಿ
ಮೂರು ಮೆಟ್ಲೇರುದಕ ಮೊಣಕಾಲಿಗೆ ಬಂದಳು ಗಂಗಿ
ನಾಕು ಮೆಟ್ಲೇರುದಕ ನಡುಮಟ ಬಂದಳು ಗಂಗಿ
ಐದು ಮೆಟ್ಲೇರುದಕ ತುಂಬಿ ಹರಿದಾಳು ಗಂಗಿ
ಸಣ್ಣ ಸೊಸಿ ಭಾಗೀರತಿ ಕೆರೆಗ್ಹಾರವಾದಳು...[೨೧]

ಹೀಗೆ ಅನ್ಯಾಯವಾಗಿ ಮೂಢನಂಬಿಕೆಗೆ ಬಲಿಯಾದ ಭಾಗೀರಥಿಯ ಕಥನಗೀತೆಯಿಂದ ಪ್ರೇರಣೆ ಹೊಂದಿರುವ ಹೆಣ್ಣುಮಗಳು ಬಹುಶಃ ತನ್ನದೇ ಆದ ರೀತಿಯಲ್ಲಿ 'ಕೆರೆಗೆ ಬಲಿ' ಕೊಡುವ ಘಟನೆಯೊಂದನ್ನು ಬುಲಾಯಿ ಹಾಡಿನಲ್ಲಿ ಹಾಡಿರುವಂತೆ ತೋರುತ್ತದೆ. ಅಲ್ಲಿ ಒಬ್ಬ 'ಪತಿವರತಿಯ ಬಲಿ'ಯನ್ನು ಕುರಿತು ಹಾಡುವ ಹಾಡು ಹೀಗಿದೆ.

ಕೆರಿಕಟ್ಟಾ ಕೆರಿಕಟ್ಟಾ ಕೆದರಿ ಅಣ್ಣಗಳಿರಾ
ಕೆರಿದಾಗ ಚಾರಿ ಫಕ್ಕಿ ನೀರನಿಲ್ಲ ಕೋಲೆಣ್ಣ ಕೋಲೆ
ಕೆರಿದಾಗ ಚಾರಿ ಫಕ್ಕಿ ನೀರಿಲ್ಲದಿದ್ದರ ಕೇಳಸಿ
ನೋಡಲ್ಲಿ ನಡದಾರ ಕೋಲೆಣ್ಣ ಕೋಲೆ
ಕೇಳಿಸಿ ನೋಡಿದಾರೆ ದೇವರಿಲ್ಲ ದಿಡ್ಡರಿಲ್ಲ
ಪತಿವರತೆಂಬಾಕೀಗಿ ಬೇಡುತದ ಕೋಲೆಣ್ಣ ಕೋಲೆ
ಆರು ಸಾವಿರ ಹೊನ್ನ ಆನಿಮ್ಯಾಲ ಹೇರಿಕೊಂಡು
ಒಕ್ಕಲಗೇರಿ ಒಳಗೆಲ್ಲಾ ಕೋಲೆಣ್ಣ ಕೋಲೆ
ಹತ್ತು ಸಾವಿರ ಹೊನ್ನು ಎತ್ತಿನ ಮ್ಯಾಲ ಹೇರಿಕೊಂಡು
ಹಾರೂರಗೇರಿ ಒಳಗೆಲ್ಲಾ ಕೋಲೆಣ್ಣ ಕೋಲೆ
ಕಟ್ಟೆಯ ಮ್ಯಾಲಿ ಕುಂಟಾಡಾ ಚೆನ್ನಮ್ಮ
ಮನಿದಾಗ ನಮ್ಮವ್ವ ಪತಿವರತಿ ಕೋಲೆಣ್ಣ ಕೋಲೆ
ಹೊಟ್ಟಿಲ್ಹುಟ್ಟಿದೆ ವೈರಿ ಬೆನ್ನೀಲಿ ಬಿದ್ದಿದೆ ವೈರಿ

ನನಗ ವೈರಿಯಾದ ಮಗಳು ಚೆನ್ನಮ್ಮ ಕೋಲೆಣ್ಣ ಕೋಲೆ
ದೇವರ ಮನಿದಾಗ ಮಜಗಿಯ ಮಾಡೋ ಅತ್ತೆವ್ವ
ಹೋಗಿ ಬರುವೆ ನಾ ಗಂಗಮ್ಮ ಥಡಿಗೆ ಕೋಲೆಣ್ಣ ಕೋಲೆ
ಹೋದರ ಹೋಗವ್ವ ಹೊಸ್ತಲ ದಾಟವ್ವ ಹಿರಿಗೊಳ
ಪುಣ್ಯಯಿದ್ರ ಬಂದೀ ಹೋಗ ಕೋಲೆಣ್ಣ ಕೋಲೆ

ಹೀಗೆ ಈ ಹಾಡಿನಲ್ಲಿ ''ಪತಿವರತಿ''ಯನ್ನು ಕೆರೆಗೆ ಬಲಿ ಕೇಳಿರುವುದು ಗಮನೀಯವಾಗಿದೆ. ಇಲ್ಲಿಯೂ ಕೇಳಿಸಿ ನೊಡುವುದು ಕಂಡುಬರುತ್ತದೆ. ಅಲ್ಲಿ ಮನೆಯಲ್ಲಿ ಎಲ್ಲರೂ ಸೇರಿ ಯಾರನ್ನು ಬಲಿ ಕೊಡುವುದೆಂಬುದು ನಿರ್ಧರಿಸಿದರೆ, ಈ ಹಾಡಿನಲ್ಲಿ ಹೊನ್ನನ್ನು ತೆಗೆದುಕೊಂಡು ಕೇರಿ ಕೇರಿ ಅಡ್ಡ್ಯಾಡುವಾಗ ಕಟ್ಟೆಯ ಮೇಲೆ ಆಡುತ್ತಿದ್ದ ಮಗಳು ಚೆನ್ನಮ್ಮ ನಮ್ಮವ್ವ 'ಪತಿಪರತಿ' ಎಂದು ಹೇಳಿದಾಗ, ಅವಳು ಅಲ್ಲಿಯೇ ತನ್ನ ಮಾತಿನಿಂದ ವಿರೋಧಿಸುವುದು ಕಂಡುಬರುತ್ತದೆ. 'ಹೊಟ್ಟಿಲ್ಲುಟ್ಟಿದೆ ವೈರಿ ಬೆನ್ನೀಲಿ ಬಿದ್ದಿದೆ ವೈರಿ, ನನಗ ವೈರಿಯಾದ ಮಗಳು ಚೆನ್ನಮ್ಮ' ಎಂದು ತನ್ನ ಅಸಮಾಧಾನ ಹಾಗೂ ನಿರಾಕರಣೆಯನ್ನು ವ್ಯಕ್ತಪಡಿಸುವುದು ಗಮನಾರ್ಹವಾಗಿದೆ. ಒಲ್ಲದ ಮನಸ್ಸಿನಿಂದಲೇ ಮನೆಯಲ್ಲಿ ಎಲ್ಲರನ್ನೂ ಹೇಳಿ ಹೋಗುತ್ತಾಳೆ.

ಹೊಸ ಬುಟ್ಟಿ ಹೊಸ ಮರ ಖುಸುಕ ಬಾಳಿಯ ಹಣ್ಣು ತೆಗೆದುಕೊಂಡು ಸಡಗರದಿಂದ ಹೋಗುತ್ತಾಳೆ. ಆದರೆ ತಾನು ಪತಿವರತಿ ಅಲ್ಲ ಎಂಬಂತೆ ಹಲವಾರು ವಿಷಯಗಳನ್ನು ತಿಳಿಹೇಳುವುದು ಸಹ ಅವಳ ನಿರಾಕರಣೆಯನ್ನೇ ಸೂಚಿಸುವಂತೆ ಕಂಡುಬರುತ್ತದೆ.

ದೇವರ ಮನಿದಾಗ ಮಾವಗ ಉಳ್ಳಾಕ ನೀಡಿ
ತೆಲಿಯ ಮ್ಯಾಲಿನ ಸೆರಗು ಮರತಿದ ನಾನೇ ಕೋಲೆಣ್ಣ ಕೋಲೆ
ತೆಲಿ ಮ್ಯಾಲಿನ ಸೆರಗ ಮರತೀದ ಗಂಗಮ್ಮ ತಾಯಿ
ಇದು ಒಂದೇ ಮಾತು ತಪ್ಪು ಕ್ಷಮಾ ಮಾಡೆ ಕೋಲೆಣ್ಣ ಕೋಲೆ
ಹೀಗೆ ತಾನು 'ಪತಿವರತಿ' ಅಲ್ಲ ಎಂದು ನಿರೂಪಿಸುತ್ತಲೇ
ಒಂದು ಮರವ ನೀರು ಬಳಬಳಿದು ಥಲ್ಲಟಗೆ
ಪಾದಕ ನೀರು ತುಳುಕತಾವ ಕೋಲೆಣ್ಣ ಕೋಲೆ
ಎರಡು ಮರವ ನೀರು ಬಳ ಬಳಿದು ಥಲ್ಲಟಗೆ
ಮೊಳಕಾಲಿಗಿ ನೀರು ತುಳುಕತಾವ ಕೋಲೆಣ್ಣ ಕೋಲೆ
ಮೂರುಮರವ ನೀರು ಬಳಬಳಿದು ಥಲ್ಲಟಗೆ
ಟೊಂಕೀಗಿ ನೀರು ತುಳುಕತಾವ ಕೋಲೆಣ್ಣ ಕೋಲೆ
ನಾಲ್ಕು ಮರವ ನೀರು ಬಳಿಬಳಿದು ಥಲ್ಲಟಗೆ
ಎದೀಗಿ ನೀರು ತುಳಕತಾವ ಕೋಲೆಣ್ಣ ಕೋಲೆ
ಶಿವಶಿವ ಎಂತಾ **ನೆನಿತಾಳ** ಕೋಲೆಣ್ಣ ಕೋಲೆ....."

ಕಥನ ಗೀತೆಯಲ್ಲಿ ಕೆರೆಗೆ ಭಾಗೀರತಿಯು ಹಾರ ಆದರೆ ಬುಲಾಯಿ ಹಾಡಿನಲ್ಲಿ ಶಿವಶಿವ ಎಂದು ನೇನಿತಾಳ ಎಂಬಲ್ಲಿಯೇ ಹಾಡು ಮುಗಿಯುವುದು ವಿಶಿಷ್ಟವಾಗಿ ಕಂಡುಬರತ್ತುದೆ. ಅದರಲ್ಲಿ ಮುಂದೆ ಭಾಗೀರತಿಯ ಗಂಡ ಮಹಾದೇವನಿಗೆ ಕೆಟ್ಟ ಕನಸು ಬಿದ್ದು ಗಡಬಡಿಸಿ ಬಂದು ಹೆಂಡತಿಯನ್ನು ಹುಡುಕುತ್ತಾನೆ. ಆದರೆ ಯಾರಿಂದಲೂ ಹೆಂಡತಿಯ ವಿಷಯದ ಸತ್ಯ ತಿಳಿಯದು ಕೊನೆಗೆ ತನ್ನ ಹೆಂಡತಿಯ ಗೆಳತಿಯ ಬಳಿಗೆ ಹೋದಾಗ ಎಲ್ಲ ವಿಷಯ, ಸತ್ಯ ತಿಳಿದು ನೊಂದು, ತನ್ನ ಹೆಂಡತಿ ಹಾರ ಆದ ಕೆರೆಯ ಬಳಿ ಬರುತ್ತಾನೆ. ಅಲ್ಲಿ ಅವಳ ಗುಣಗಾನವನ್ನು ಮಾಡಿ, ಶೋಕಿಸಿ, ತಾನೂ ಕೆರೆಯಲ್ಲಿ ಬಿದ್ದುಬಿಡುತ್ತಾನೆ. ಹೀಗೆ ಅಲ್ಲಿ ಗಂಡ-ಹೆಂಡತಿಯರಿಬ್ಬರ ಜೀವಬಲಿಯ ಕಥೆಯು ಕರುಳು ಕಿವುಚುವಂತೆ ಕಂಡುಬರುತ್ತದೆ. ಬುಲಾಯಿ ಹಾಡಿನಲ್ಲಿ ಕೆರೆಗೆ ಹಾರದ ವಿಷಯವೇ ಭಿನ್ನ ರೂಪದಲ್ಲಿ ವ್ಯಕ್ತವಾದಂತೆ ಕಂಡುಬರುತ್ತದೆ. ಇಲ್ಲಿ ಒಲ್ಲದ ಮನಸ್ಸಿನಿಂದ ಸಬೂಬುಗಳನ್ನು ಹೇಳುತ್ತಲೇ 'ಪತಿವರತಿ' ಕೆರೆಗೆ ಬಲಿಯಾಗುವುದು ಸಹ ಸಹಾನುಭೂತಿಯನ್ನು ಹುಟ್ಟಿಸುವಂತೆ ಕಂಡುಬರುತ್ತದೆ. ಒಟ್ಟಾರೆ ಸಮಾಜದ ಮೂಢರೂಢಿ, ನಂಬಿಕೆಗಳಿಗೆ ಹೆಣ್ಣುಮಕ್ಕಳು ಬಲಿಯಾಗುವುದು ಸರ್ವಕಾಲಗಳಲ್ಲಿಯೂ ನಡೆದುಬಂದ ಸಂಪ್ರದಾಯ ಎಂಬುದು ಈ ಹಾಡುಗಳಿಂದ ತಿಳಿದುಬರುತ್ತದೆ. ಒಂದು ರೀತಿಯಲ್ಲಿ ಹೆಣ್ಣುಮಕ್ಕಳ ಶೋಷಣೆ, ಅಸಹಾಯಕ ಸ್ಥಿತಿ, ಅವರ ತ್ಯಾಗ ಮನೋಭಾವ ಮುಂತಾದ ಅಂಶಗಳು ಈ ಹಾಡುಗಳಲ್ಲಿ ಮೂಡಿಬಂದಿರುವುದನ್ನು ಕಾಣಬಹುದು.

ಇದೇ ರೀತಿಯಾಗಿ ನೀಲಗಂಗಾನ ಹಾಡು, ಗಂಗೀ ಗೌರಿ ಹಾಡು, ಕಾಶೀಬಾಯಿ ಹಾಡು, ಬರದ ಹಾಡು, ಸಂಗವ ಮಾಡ್ಯಾಳ ನಿಮತಂಗಿ, ಅಕ್ಕ ನಾಗಮ್ಮನ ಹಾಡು ಮುಂತಾದ ಕಥನಗೀತೆಗಳ ವಸ್ತು, ವಿಷಯ ಹಾಗೂ ಆಶಯಗಳುಳ್ಳ ಬುಲಾಯಿ ಹಾಡುಗಳನ್ನು ಕಾಣಬಹುದು. ಕಾರಣ ಬುಲಾಯಿ ಹಾಡುಗಳಿಗೆ ಕಥನಗೀತೆಗಳು ತುಂಬಾ ವಿಷಯವನ್ನು ಒದಗಿಸಿಕೊಟ್ಟು, ಪ್ರಭಾವ ಬೀರಿವೆಯೆಂದು ತಿಳಿಯಬಹುದು. ಆದರೆ ಬುಲಾಯಿ ಹಾಡುಗಳ ಭಾಷೆ, ಶೈಲಿ, ಸಹಜತೆ, ನೇರನುಡಿಗಳಿಂದ ಅವು ಸ್ವತಂತ್ರ ರಚನೆಗಳಂತೆಯೇ ಕಂಡುಬರುತ್ತವೆ.

ಒಟ್ಟಾರೇ ಬುಲಾಯಿ - ಅಲಾಯಿ - ಕೋಲುಪದ ಮತ್ತು ಕಥನಗೀತೆಗಳಲ್ಲಿ ಮೇಲ್ನೋಟಕ್ಕೆ ಹಲವು ಬಗೆಯ ಸಾಮ್ಯತೆಯನ್ನು ಪಡೆದಿದ್ದರೂ ಸಹ ವಾಸ್ತವವಾಗಿ ಬುಲಾಯಿ ಹಾಡುಗಳು ಸ್ವತಂತ್ರ ರಚನೆಗಳಂತೆ ಕಂಡುಬರುತ್ತವೆ ಎನ್ನಬಹುದು. ಆದರೂ ಅವುಗಳ ಸ್ವರೂಪ, ವಸ್ತು, ವಿವೇಚನೆ, ಅಭಿವ್ಯಕ್ತಿಯ ಹಲವು ಸಂದರ್ಭಗಳಲ್ಲಿ ಈ ಎಲ್ಲ ಪ್ರಕಾರಗಳಿಗೆ ಋಣಿಯಾಗಿರುವುದನ್ನು ಅಲ್ಲಗಳೆಯಲಾಗುವುದಿಲ್ಲ.

ಅಡಿ ಟಿಪ್ಪಣಿ

೧. ಡಾ॥ ಎಸ್.ಎಮ್.ವೃಷಭೇಂದ್ರ ಸ್ವಾಮಿ : ಸಂ. ಜಾನಪದ ಹಬ್ಬಗಳು : ಜಾನಪದ ಸಾಹಿತ್ಯ ದರ್ಶನ ಭಾಗ - ೧೦, ೧೯೮೭, ಪುಟ ೧೮೨.

೨. ಕ್ಷೇತ್ರ ಕಾರ್ಯದಲ್ಲಿ ಸಿಕ್ಕ ಮಾಹಿತಿ :

೩. ಡಾ॥ ಚಿ.ಸಿ. ಸಿಂಗಣ್ಣಾ : ಸಂ. ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ, ೨೦೦೮, ಪುಟ ೪೭೪.

೪. ಡಾ॥ ಎಸ್.ಎಮ್.ವೃಷಭೇಂದ್ರ ಸ್ವಾಮಿ : ಸಂ. ಜಾನಪದ ಹಬ್ಬಗಳು : ಜಾನಪದ ಸಾಹಿತ್ಯ ದರ್ಶನ ಭಾಗ - ೧೦, ೧೯೮೭, ಪುಟ ೧೮೭.

೫. ಎಚ್. ಕಾಮಶೆಟ್ಟಿ : ಸಂ. ಜನಪದ ಸಾಹಿತ್ಯ ಸಂಗ್ರಹ, ೨೦೦೮, ಪುಟ ೫೫.

೬. ಬಸಮ್ಮ ನೀಲಕಂಠೆ ತಡೋಳಾ

೭. ಹೆಬ್ಬಾಳೆ ಜಗನ್ನಾಥ : ಸಂ. ಬೀದರ ಜಿಲ್ಲೆಯ ಬುಲಾಯಿ ಹಾಡುಗಳು, ೧೯೯೬, ಪ್ರಸ್ತಾವನೆ XI

೮. ಡಾ॥ ಮಲ್ಲಿಕಾರ್ಜುನ ಲಠ್ಠೆ : ಸಂ. ಜಾನಪದ ಸಂಪದ, ೧೯೮೨, ಪುಟ ೮೫

೯. ಯಲ್ಲಪ್ಪಾ ತುಕ್ಕಪ್ಪಾ ಪಾಲದೊಡ್ಡಿ

೧೦. ಚಂದ್ರಮ್ಮ ಹಲಬುರ್ಗೆ

೧೧. ಡಾ॥ ಚಿ.ಸಿ. ಸಿಂಗಣ್ಣಾ : ಸಂ. ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ, ೨೦೦೮, ಪುಟ ೪೮೭.

೧೨. ಜಿ.ಆರ್. ಪಾಲಿ : ಸಂ. ಚೆಂಬೆಳಕು ನೆನಪಿನ ಸಂಚಿಕೆ, ೧೯೯೪, ಪುಟ ೪೩.

೧೩. ಅದೇ

೧೪. ಡಾ॥ ಎಮ್.ಎಸ್. ಸುಂಕಾಪುರ : ಸಂ. ಜೀವನ ಜೋಕಾಲಿ ಭಾಗ-೮, ಕೋಲು ಪದ, ೧೯೭೬, ಪುಟ ೧೨೩.

೧೫. ಚಂದ್ರಮ್ಮ ಸಂಗಪ್ಪಾ ಹುಲಸೂರ

೧೬. ಡಾ॥ ಪಿ.ಕೆ. ಖಂಡೋಬಾ, ಡಾ॥ ಟಿ.ಎಮ್. ಭಾಸ್ಕರ್ : ಸಂ. ಜನಾಪದ ಕಥನಗೀತೆಗಳು, ೨೦೦೪ ಪ್ರಸ್ತಾವನೆ,ಪುಟ ೩

೧೭. ರಾಜಪ್ಪಾ ದಳವಾಯಿ : ಸಂ. ಕನ್ನಡ ಸಾಹಿತ್ಯಕೋಶ, ೨೦೦೩, ಪುಟ ೪೮೧

೧೮. ಅದೇ : ಪುಟ ೧೫

೧೯. ಗುಂಡಮ್ಮಾ ತಳಮಡಗಿ

೨೦. ಡಾ॥ ಪಿ.ಕೆ. ಖಂಡೋಬಾ, ಡಾ॥ ಟಿ.ಎಮ್. ಭಾಸ್ಕರ್ : ಸಂ. ಜನಾಪದ ಕಥನಗೀತೆಗಳು, ೨೦೦೪ ಪ್ರಸ್ತಾವನೆ ಪುಟ ೨೦.

೨೧. ಅದೇ : ಪುಟ ೨೨

೨೨. ರತ್ನಮ್ಮಾ ತೊಗಲೂರು

ಅಧ್ಯಾಯ - ೬

ಜನಪದ ಹಾಡುಗಳಲ್ಲಿ ಬುಲಾಯಿ ಹಾಡುಗಳ ಸ್ಥಾನಮಾನ

ಜನಪದ ಹಾಡುಗಳಲ್ಲಿ ಬುಲಾಯಿ ಹಾಡುಗಳ ಸ್ಥಾನಮಾನ

ಕೆಮ್ಮಣ್ಣಿನ ಕ್ರಾಂತಿಯ ಬೀಡು, ಸಮಾನತೆ ಸಾರಿದ ಅಣ್ಣ ಬಸವಣ್ಣನ ಕಾರ್ಯದ ನಾಡಾದ ಬೀದರ ಜಿಲ್ಲೆ ಕರ್ನಾಟಕದ ಉತ್ತರದಿಕ್ಕಿನಲ್ಲಿ ಅದರ ಕಳಸ ಪ್ರಾಯದಂತಿರುವ ಪುಟ್ಟ ಜಿಲ್ಲೆ. ವ್ಯಾಪ್ತಿ ಸಣ್ಣದಾದರೂ ಕೀರ್ತಿದೊಡ್ಡದಾಗಿದ್ದು, ಶತಮಾನಗಳ ಇತಿಹಾಸ ಹಾಗೂ ಉಜ್ವಲವಾದ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವುದು ಗಮನಾರ್ಹ ಸಂಗತಿ.

'ಇಡೀ ಮಹಮ್ಮದೀಯ ಇಂಡಿಯಾದಲ್ಲಿ ಬೀದರ ಮುಖ್ಯ ನಗರ ಎಂದು ರಷ್ಯನ್ ಪ್ರಾವಾಸಿ ಅಥನಾಸಿ ನಿಕಿಟಿನ್‌ನಿಂದ ಗುರುತಿಸಲಾದ ಬೀದರ ಐತಿಹಾಸಿಕವಾಗಿ, ರಾಜಕೀಯವಾಗಿ, ಸಾಂಸ್ಕೃತಿಕವಾಗಿ ತುಂಬ ಮಹತ್ವದ ನಗರ ಕೇವಲ ಬೀದರ ನಗರ ಮಾತ್ರವಲ್ಲ. ಈಗಿನ ಇಡೀ ಜಿಲ್ಲೆ ಸೇರಿದಂತೆ ಹಳೆಯ ಬೀದರ ಪ್ರಾಂತ್ಯ ಭಾರತದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡುವಂತದ್ದು...[೧] ಎಂಬ ಅಭಿಪ್ರಾಯವು ಬೀದರ ಜಿಲ್ಲೆಯ ಮಹತ್ವವನ್ನು ಮನಗಾಣಿಸುವಂತಹದು.

ಬೀದರ, ಬಿದರಿ, ಕ್ಬಾಟಿ ಮತ್ತು ಮಹಮ್ಮದಾಬಾದ ಬೀದರ, ಕುಂತಳ ನಾಡು, ಅಟ್ಟಳೆ ನಾಡು, ಕಲ್ಯಾಣ ಗಡ್ಡೆಯೆಂಬ ಹಲವು ರೀತಿಯಾಗಿ ಕರೆಯಿಸಿಕೊಳ್ಳುವ ಬೀದರ ಪಟ್ಟಣ ಇಂದು ಜಿಲ್ಲಾ ಕೇಂದ್ರ ಸ್ಥಳವಾಗಿದೆ.

ಬೀದರ ಜಿಲ್ಲೆಯು ಕಾಲಕಾಲಾಂತರಕ್ಕೆ ಸಾಮ್ರಾಜ್ಯ ಮೌರ್ಯ ಶಾತವಾಹನ, ರಾಷ್ಟ್ರಕೂಟ, ಕಲ್ಯಾಣಿ ಚಾಲುಕ್ಯ, ಕಾಕತೀಯ, ಖಿಲ್ಜಿ, ಬಹಮನಿ, ಮೊಘಲ್ ಹಾಗೂ ಹೈದ್ರಾಬಾದ ನಿಜಾಮ ಮುಂತಾದವರ ಆಡಳಿತಕ್ಕೊಳಪಟ್ಟಿದ್ದು ಐತಿಹಾಸಿಕ ಸಂಗತಿ. ಹೀಗಾಗಿ ಬೀದರ ಇತಿಹಾಸ ಅತ್ಯಂತ ಸುಪ್ರಸಿದ್ಧವಾದುದು. ಬೇರೆ ಬೇರೆ ಭಾಗದ ಭಿಭಿನ್ನ ಧರ್ಮದ ಹಲವಾರು ಸಾಮ್ರಾಟರು ಈ ಜಿಲ್ಲೆಯನ್ನು ಆಡಳಿತಕ್ಕೊಳಪಡಿಸಿಕೊಂಡದ್ದರಿಂದ ಇಲ್ಲಿಯ ಸಂಸ್ಕೃತಿಯೂ ಕೂಡ ವೈವಿಧ್ಯಮಯವಾಗಿದ್ದು ಕಂಡು ಬರುತ್ತದೆ. ವಿವಿಧ ಧರ್ಮಗಳು ಪ್ರಾಚೀನ ಕಾಲದಿಂದಲೂ ಆಚರಿಸಲ್ಪಟ್ಟಿದ್ದರಿಂದ 'ವಿವಿಧತೆಯಲ್ಲಿ ಏಕತೆಯನ್ನು ಇಲ್ಲಿ ಕಾಣಬಹುದು. ವಿವಿಧ ಧರ್ಮಗಳ ವಿಭಿನ್ನ ಸಂಸ್ಕೃತಿಗಳ ಜನರ ಬದುಕು ಇಲ್ಲಿ ಬೆಳಕಾಗಿ ನಿಂತಿದ್ದು ಕಂಡು ಬರುತ್ತದೆ. ಹೀಗಾಗಿ ವಿವಿಧ ಸಂಸ್ಕೃತಿಗಳ ಸಂಕರವೂ ಈ ಜಿಲ್ಲೆಯ ಧಾರ್ಮಿಕ ಸಂಸ್ಕೃತಿಗೆ ಒಂದು ಹೆಗ್ಗುರುತೆಂದು ಹೇಳಬಹುದು.

ಉದಾ: ಅಲಾಯಿ ಕುಣಿತ (ಹಿಂದೂ-ಮುಸ್ಲಿಂರ ಭಾವೈಕ್ಯತೆ, ಎರಡು ಸಂಸ್ಕೃತಿಗಳ ಸಮ್ಮಿಲನ)

ಬೀದರ ಜಿಲ್ಲೆ ಜನಪದ ಕಲೆಗಳಿಗೆ ಹೆಚ್ಚಿನ ಆದ್ಯತೆವನ್ನು ನೀಡಿದ್ದು ಕಂಡುಬರುತ್ತದೆ. ಗೊದಲಿಗರು ಭೂತೇರು, ಪುರವಂತಿಕೆ, ಬಹುರೂಪಿ, ಕೋಲಾಟ, ದೊಡ್ಡಾಟ, ದಪ್ಪಿನಾಡ, ಭಜನೆ, ಹುಲಿವೇಷ, ಅಲಾಯಿ ಕುಣಿತ, ಭುಲಾಯಿ ಮೊದಲಾದ ಕಲೆಗಳು ಇಲ್ಲಿ ಸಾಕಷ್ಟು

ಪ್ರಮಾಣದಲ್ಲಿ ಬೆಳೆದುಬಂದುದನ್ನು ಕಾಣಬಹುದು. ಜನ ಸಾಮಾನ್ಯರಲ್ಲಿ ಧಾರ್ಮಿಕ ಮನೋಭಾವ ನೆಲೆಗೊಳಿಸಲು ಪ್ರಯತ್ನಿಸುವಂತಹ ಈ ಕಲೆಗಳಲ್ಲಿ ಪ್ರಸ್ತುತ ಅಧ್ಯಯನದ 'ಭುಲಾಯಿ'ಯು ಈ ಜಿಲ್ಲೆಯ ಜನ್ಯ ಹಾಗೂ ಬಿಶಿಷ್ಟ ಕಲೆ ಎನ್ನಬಹುದು. ವಿದ್ವಾಂಸರ ಮತ ಈ ಬಿಶಿಷ್ಟ ಕಲೆಯ ಸಂದರ್ಭದಲ್ಲಿ ಹಾಡುವ ಹಾಡುಗಳೇ 'ಬುಲಾಯಿ ಹಾಡುಗಳು', ನಾಗರ ಪಂಚಮಿಯ ಸಂದರ್ಭದಲ್ಲಿ ಹಾಡುವ ಈ ಹಾಡುಗಳ ವೈಶಿಷ್ಟ್ಯ ಹಾಗೂ ಮಹತ್ವಗಳನ್ನು, ಜನಪದ ಹಾಡುಗಳಲ್ಲಿ ಬುಲಾಯಿ ಹಾಡುಗಳ ಸ್ಥಾನಮಾನವನ್ನು ಕುರಿತು ಚರ್ಚಿಸೋಣ.

ಜನಪದ ಹಾಡುಗಳಲ್ಲಿ ಮುಖ್ಯವಾಗಿ ಗಂಡಸರ ಹಾಡುಗಳು, ಹೆಂಗಸರ ಹಾಡುಗಳು ಮತ್ತು ಮಕ್ಕಳ ಹಾಡುಗಳು ಎಂದು ಗುರುತಿಸಬಹುದು. ಗಂಡುಮಕ್ಕಳು ಹಾಡುವ ಹಾಡುಗಳು ಗಂಡಸರ ಹಾಡುಗಳಾದರೆ ಹೆಣ್ಣು ಮಕ್ಕಳು ಹಾಡುವ ಹಾಡುಗಳು ಹೆಂಗಸರ ಹಾಡುಗಳು ಎಂದು ಕರೆಯುವುದು ಕಂಡುಬರುತ್ತದೆ. ಇಂತಹ ಹಾಡುಗಳನ್ನು ಆಯಾ ಸಂದರ್ಭಗಳಲ್ಲಿ ಮಾತ್ರ ಹಾಡುವುದನ್ನು ಕಾಣಬಹುದು. ಈ ಹಾಡುಗಳು ಮನರಂಜನೆಯ ಜೊತೆಗೆ ನೀತಿ ಬೋಧನೆಯನ್ನು ಮಾಡುವಂತಹವುಗಳು. ಯಾವ ಆಡಂಬರವಿಲ್ಲದೆ ನೇರನುಡಿಗಳಲ್ಲಿ ಸರಳ ಶೈಲಿಯಲ್ಲಿ ಮೂಡಿಬಂದಂತೆ ಕಂಡುಬರುತ್ತವೆ. ಮುಚ್ಚುಮರೆಗಳಿಗೆ ಅವಕಾಶ ಕಾಣಸಿಗದು. ಹೀಗಾಗಿ ಇವು ಕೂಡಲೇ ಮನಮುಟ್ಟಿ, ಮನಸ್ಸು ಮಿಡಿಯುವಂತೆ ಮಾಡುವಂತಹವುಗಳೆನ್ನ-ಬಹುದು. ಅಂತೆಯೇ ಅನೇಕರು ಇಂತಹ ಹಾಡುಗಳನ್ನು ಕೇಳುತ್ತಲೇ ಕಣ್ಣೀರು ಸುರಿಸುವುದನ್ನು ಕಾಣಬಹುದು. ಒಂದರ್ಥದಲ್ಲಿ ಸಂವೇದನಾಶೀಲವಾದವುಗಳೆನ್ನಬಹುದು.

ಹೆಂಗಸರ ಹಾಡುಗಳಲ್ಲಿ ಕ್ರಿಯಾತ್ಮಕವಾದ ಹಾಡುಗಳೇ ಹೆಚ್ಚಾಗಿ ಕಂಡುಬರುತ್ತವೆ. ಹೆಂಗಸರು ಹಾಡುವ ಹಾಡುಗಳೆಂದರೆ, ಕುಟ್ಟುವ ಹಾಡು, ಬೀಸುವ ಹಾಡು, ಹಚ್ಚೆಯ ಹಾಡು, ಜೋಗುಳ ಹಾಡು, ಮದುವೆಯ ಹಾಡು, ಜೋಕುಮಾರನ ಹಾಡು, ಸತ್ತವರ ಹಾಡು, ಭುರ್ ಭುರ್ ಪೋಚಮ್ಮನ ಹಾಡು, ಬುಲಾಯಿ ಹಾಡು ಮುಂತಾದವುಗಳು. ಇವುಗಳನ್ನು ಮನೆಯ ಕೆಲಸ ಕಾರ್ಯಗಳಲ್ಲಿ, ಸಂಪ್ರದಾಯಗಳ ಆಚರಣೆಗಳಲ್ಲಿ, ಹಬ್ಬ ಹರಿದಿನಗಳ ಆರಾಧನೆಗಳಲ್ಲಿ ಹಾಡುವುದನ್ನು ಕಾಣಬಹುದು. ಬುಲಾಯಿ ಹಾಡುಗಳು ಹೆಂಗಸರೇ ಹಾಡುವುದರಿಂದ ಜನಪದ ಹಾಡುಗಳಲ್ಲಿಯೂ ಹೆಂಗಸರೇ ಹಾಡುವ ಹಾಡುಗಳನ್ನು ಮಾತ್ರ ಅಧ್ಯಯನದ ಅನುಕೂಲಕ್ಕಾಗಿ ಬಳಸಲಾಗಿದೆ.

ಕುಟ್ಟುವ ಹಾಡು :

ಹಿಂದೆ ಭತ್ತ, ರಾಗಿ, ದ್ವಿದಳ ಧಾನ್ಯ ಮುಂತಾದವುಗಳನ್ನು ಒಳ್ಳಿನಲ್ಲಿ ಹಾಕಿ ಒನಕೆಯಿಂದ ಕುಟ್ಟಿ ಹದ, ಮಾಡುತ್ತಿದ್ದರು. ಅಂತಹ ಸಂದರ್ಭದಲ್ಲಿ ಕುಟ್ಟುವಾಗ ಶ್ರಮವು ಕಾಣದಂತೆ, ಸಮಯ ತಿಳಿಯದಂತೆ, ಮನಸ್ಸು ಮುದಗೊಳ್ಳುವಂತೆ ಮಾಡಲು ಬಹುಶಃ ಇಂತಹ ಹಾಡುಗಳನ್ನು ಹಾಡುತ್ತಿದ್ದರಬಹುದು. ನಮ್ಮ ಜನಪದ ಮಹಿಳೆಯರು ಪ್ರತಿಯೊಂದು ಕೆಲಸ ಮಾಡುವಾಗ

ಹಾಡುವುದು ಕಂಡುಬರುತ್ತದೆ. ಹೀಗಾಗಿ ಅಂದು ಅವಶ್ಯವಾಗಿ ಹದಮಾಡಿ ಹಸನುಗೊಳಿಸುವುದಕ್ಕೆ ಕುಟ್ಟುವುದು ಅನಿವಾರ್ಯವಾಗಿತ್ತು. ಹೀಗಾಗಿ ಒಬ್ಬರು. ಇಬ್ಬರೂ ಒಬ್ಬರು ಕುಂತು ಇನ್ನೊಬ್ಬರು ನಿಂತು ಕುಟ್ಟುವರು. ಅನುಕೂಲಕ್ಕೆ ತಕ್ಕಂತೆ ಕುಟ್ಟುವುದನ್ನು ಮಾಡುತ್ತಿದ್ದರೆಂದು ಕಂಡುಬರುತ್ತದೆ. ಇಂತಹ ವೇಳೆಯಲ್ಲಿ ಅವರು ಹಾಡುವ ಹಾಡುಗಳು ಸಹ ತುಂಬಾ ಗಮನಾರ್ಹವಾದವು.

"ಕುಟ್ಟ ಒಳ್ಳಿನ ಮ್ಯಾಲ ಇಟ್ಟಿದ ಇಭೂತಿ
ಸತ್ಯ ಉಳ್ಳ ಶರಣರ ನೆನೆದಿದ ನಾರಿ
ಹಾಕವ್ವ ಯ್ಯಾರಿ
ಓಂ ಅಂತ ಕಟ್ಟೋಣ ಸೋಮನಂತ ಬೀಸೋಣ
ಓಂ ಸೋಂ ಎರಡೂ ತಿಳಿಯಬೇಕ ನಾರಿ
ಹಾಕವ್ವ ಯಾರಿ....[3]

ಇಲ್ಲಿ ಇಬ್ಬರು ಜೊತೆಯಲ್ಲಿ ಕುಟ್ಟುವ ಕ್ರಿಯೆ ನಡೆಸಿದ್ದು ಕಂಡುಬರುತ್ತದೆ. ಜೊತೆಗೆ ಅಧ್ಯಾತ್ಮದ ವಿಚಾರಗಳು ಹಾಡಿನಲ್ಲಿ ವ್ಯಕ್ತವಾಗುತ್ತವೆ. ಲೌಕಿಕ ಕ್ರಿಯೆಯ ಜೊತೆಯಲ್ಲಿ ಆಧ್ಯಾತ್ಮಿಕ ವೈಚಾರಿಕತೆಯು ಅವರ ಜೀವನ ದೃಷ್ಟಿಯನ್ನು ಪ್ರತಿಬಿಂಬಿಸುತ್ತದೆ. ಹೀಗೆ ಕುಟ್ಟುವ ಹಾಡುಗಳು ಹೆಚ್ಚಾಗಿ ಗುರು, ಶರಣ ಮುಂತಾದ ವೀರಶೈವ ಸಂಬಂಧಿ ವಿಚಾರಗಳನ್ನು ಹೊಂದಿರುವುದು ಕಂಡುಬರುತ್ತದೆ.

ಉದಾ: ಕುಟ್ಟುತ ನೆನದೀನ ಕೂಡಲ ಸಂಗಯ್ಯನ ಹಾಡು, ನೀಲಮ್ಮನ ಅರಸ ನಿಜಭಕ್ತ ತಂಗೆಮ್ಮ, ನೀರ ನೀರ ಗಮ್ಮತ, ನೀರಿನೊಳಗ ಹಿಮ್ಮತ, ನೀಲಮ್ಮನ ಅರಸ ನಿಜ ಭಕ್ತನೀರ ಎಸವ ಇತ್ಯಾದಿ.

ಮದುವೆ ಸಂದರ್ಭದಲ್ಲಿ ಹಾಡಿದಾಗ ಈ ಹಾಡುಗಳಿಗೆ ಚಾಜದ ಹಾಡುಗಳೆಂದು ಕರೆಯುವುದು ಕಂಡುಬರುತ್ತದೆ. ಅಲ್ಲದೆ ಜಾತ್ರೆ, ಇನ್ನಿತರ ಸಾಮಾಜಿಕ ಸಂದರ್ಭಗಳಲ್ಲಿಯೂ ಕುಟ್ಟುವ ಕಾರ್ಯ ನಡೆಯುತ್ತಿದ್ದದ್ದು ಕಂಡುಬರುತ್ತದೆ. ಆದರೆ ಇಂದು ಯಂತ್ರಗಳೇ ಈ ಕಾರ್ಯನಿರ್ವಹಿಸುತ್ತಿರುವುದರಿಂದ ಕುಟ್ಟುವ ಕ್ರಿಯೆ ಹಾಗೂ ಹಾಡುಗಳು ಮರೆಯಾಗುತ್ತಿರುವುದು ವಿಷಾದನೀಯ.

ಬೀಸುವ ಹಾಡು :

ನಮ್ಮ ಹಿರಿಯ ತಲೆ ಮಾರಿನವರು ಬೆಳಗಿನ ಜಾವದಲ್ಲಿ ಎದ್ದು ಆದಿನಕ್ಕೆ ಬೇಕಾಗುವಷ್ಟು ಜೋಳ, ಬೇಳೆ, ಗೋಧಿ ಮುಂತಾದವುಗಳನ್ನು ಬೀಸಿಕೊಳ್ಳುತ್ತಿದ್ದರೆಂಬುದು ಅವರಿಂದ ತಿಳಿದು ಬರುತ್ತದೆ. ಬೀಸದಿದ್ದರೆ ಹಿಟ್ಟಿಲ್ಲ, ಹಿಟ್ಟಿಲ್ಲದಿದ್ದರೆ ರೊಟ್ಟಿ ಇಲ್ಲ. ಹೀಗೆ ದೈನಂದಿನ ಬದುಕಿಗೆ ಬೀಸುವುದು ಅನಿವಾರ್ಯವಾಗಿತ್ತು. ಆಗ ಚಿಕ್ಕ ಮಕ್ಕಳು ಎದ್ದು ಅಳುತ್ತಿದ್ದರೆ, ತಾಯಿ ತನ್ನ ಕಾಲಿನ ಒಂದು ತೊಡೆಯ ಮೇಲೆ ಮಗುವನ್ನು ಮಲಗಿಸಿಕೊಂಡೇ ಬೀಸುತ್ತಿದ್ದರೆಂದು

ತಿಳಿದುಬರುತ್ತದೆ. ಅಂತಹ ಸಂದರ್ಭದಲ್ಲಿ ಹಾಡುವ ಹಾಡುಗಳೇ ಬೀಸುವ ಹಾಡುಗಳು ಇಂತಹ ಹಾಡುಗಳು ಸಹ ಮದುವೆ ಸಂದರ್ಭದಲ್ಲಿ ಹಾಡಿದಾಗ ಜಾಜದ ಹಾಡೇ ಎನಿಸುತ್ತವೆ. ಇಲ್ಲಿಯೂ ಒಬ್ಬರೇ ಬೀಸಬಹುದು ಅಥವಾ ಇಬ್ಬರು ಬೀಸಬಹುದು.

ಉದಾ: ಬೀಸಾಕ ಕುಂತಿನಿ ಕೇಸರಿ ನನಜ್ವಾಳ

ಕೂಸ ಕಂದಯ್ಯ ತೊಡಿ ಮ್ಯಾಲ ॥ ಪಲ್ಲ ॥
ತೊಟ್ಟಿಲದಾಗೊಂದ ತೊಳೆದ ಮುತ್ತನು ಕಂಡೆ
ಹೊಟ್ಟೆಮೇಲಾಗಿ ಮಲಗ್ಯಾನ
ಹೊಟ್ಟೆಯ ಮೇಲಾಗಿ ಮಲಗ್ಯಾನ ಕಂದಯ್ಯ
ಮುತ್ತಿನ ದೃಷ್ಟಿ ತೆಗದಿನಿ.... [೩]

ಮಗನ ವರ್ಣನೆಯನ್ನು ಮಾಡುತ್ತಲೇ ಬೀಸುವುದು ಕಂಡು ಬರುತ್ತದೆ. ಬಿಸುವ ಹಾಡಿನಲ್ಲಿಯೂ ಹೆಚ್ಚಾಗಿ ಶರಣರ ಹಾಗೂ ಅಧ್ಯಾತ್ಮದ ಕುರಿತಾದ ಹಾಡುಗಳೇ ಕಂಡುಬರುತ್ತವೆ.

ಉದಾ: ಶಿವಶಿವ ದಾರಿ ಬೀಡೋ, ಕಲ್ಯಾಣದಯ್ಯ ಬಂದ, ಆಕರ ಈಯಾಗ ಮುಂತಾದವುಗಳು.

ಇಲ್ಲಿಯೂ ಸಹ ಇಂದು ಈ ಕ್ರಿಯೆ ಅತ್ಯಂತ ವಿರಳವಾಗಿಕಂಡುಬರುತ್ತದೆ. ಹೀಗಾಗಿ ಹಳ್ಳಿಗಳಲ್ಲಿ ಮಾತ್ರ ಅಷ್ಟಿಷ್ಟು ಕಾಣಬಹುದು. ಬೀಸುವ ಹಾಗೂ ಕುಟ್ಟುವ ಕ್ರಿಯೆಗಳು ಗರತಿಗೆ ವ್ಯಾಯಾಮವನ್ನು ಕಲ್ಪಿಸಿಕೊಟ್ಟು ಶಾರೀರಿಕವಾಗಿ ಅವಳನ್ನು ಸದೃಢಗೊಳಿಸುತ್ತಿದ್ದುವೆಂದು ಕಂಡು ಬರುತ್ತದೆ.

ಹಚ್ಚೆಯ ಹಾಡುಗಳು :

ಸಾಮಾನ್ಯವಾಗಿ ಹೆಣ್ಣು ಮಕ್ಕಳ ಹಣೆ, ಗದ್ದ ಹಾಗೂ ಕೈಗಳ ಮೇಲೆ ಹಚ್ಚೆ ಹಾಕುವುದು ಕಂಡು ಬರುತ್ತದೆ. ಕೆಲವರು ಕೈಗಳಲ್ಲಿ ತಮಗೆ ಬೇಕಾದವರ ಹೆಸರು. ಚಿತ್ರ, ಚಿತ್ತಾರಗಳನ್ನು ಬಿಡಿಸಿಕೊಳ್ಳುವುದು ಕಂಡುಬರುತ್ತದೆ ಹಿಂದೆ ಇದು ಒಂದು ಸಂಪ್ರದಾಯದಂತಿದ್ದು, ಇಂದು ಇದೊಂದು ಫ್ಯಾಷನ್ ಆಗಿ ಕಂಡುಬರುತ್ತಿದೆ. ಹೆಣ್ಣು ಮಕ್ಕಳ ಯಾರ ಬೆರಳು, ಕೈಗಳ ಮೇಲೆ ಹಚ್ಚೆ ಇರುತ್ತದೆಯೋ ಅವರ ಕೈಯ ಅಡುಗೆ ಹಳಸುವುದಿಲ್ಲ ಎಂಬ ನಂಬಿಕೆಯೂ ಇದ್ದಂತೆ ಕಂಡುಬರುತ್ತದೆ. ಹಚ್ಚೆ ಹಾಕುವಾಗ ಸೂಜಿಯ ಮೊನೆಯಿಂದ ಚುಚ್ಚುತ್ತಾರೆ. ಆಗ ಸ್ವಲ್ಪಾದರೂ ನೋವು ಆಗೇ ಆಗುತ್ತದೆ. ಹೀಗಾಗಿ ಆ ನೋವಿನ ಅರಿವು ಆಗದಂತೆ ಹಚ್ಚೆಹೊಡೆಸಿಕೊಳ್ಳುವವರ ಗಮನ ಸೆಳೆಯಲು ಹಾಡುವುದು ಕಂಡುಬರುತ್ತದೆ. ಆ ವೇಳೆಯಲ್ಲಿ ಹಾಡುವ ಹಾಡು ಹೀಗಿದೆ.

ಗಂಗವ್ವ ಚುಚ್ಚಾಕೊಂಡ ಹಣಚಿ ಬಟ್ಟು
ಗರತಿನ ಅಂತ
ಕುಂಕುಮ ಅಂತ ಕುಂಕುಮತಂತ .....[೪]

ಜೋಗುಳ ಹಾಡು :

ಮಗುವನ್ನು ತೊಟ್ಟಿಲಲ್ಲಿ ಅಥವಾ ತನ್ನ ಎದೆಯ ಮೇಲೆ ಮಲಗಿಸಿ ಹಾಡುವ ಹಾಡೇ ಜೋಗುಳ ಹಾಡು. ಜೋ ಜೋ ಎಂದು ಹೇಳುವ ಕಾರಣ ಅವುಗಳಿಗೆ 'ಜೋಗುಳ' ಎಂದು ಕರೆದಿರಬಹುದು. ಈ ಹಾಡುಗಳಲ್ಲಿ ಪೌರಾಣಿಕ, ಅಧ್ಯಾತ್ಮಿಕ, ಮಕ್ಕಳ ಗುಣಗಾನ ಮುಂತಾದ ವಿಷಯಗಳ ಹಾಡುಗಳನ್ನು ಕಾಣಬಹುದು. ಹಿಂದೆ ಮಾಳಿಗೆಯ ತೊಲೆಗೆ ತೊಟ್ಟಿಲನ್ನು ಕಟ್ಟಿ ಅದರಲ್ಲಿ ಮಗುವನ್ನು ಮಲಗಿಸಿ, ತೂಗುತ್ತಾ ಹಾಡಿದರೆ ಮಗು ಕೂಡಲೇ ಮಲಗಿ ಬಿಡುತ್ತಿತ್ತಂತೆ. ಇಂದು ಇರುವ ತೊಟ್ಟಿಲು ಸಹ ತೂಗಲು ಬಾರದ ಹಾಗೆ, ತೂಗುವ ತಾಯಿಯೂ ಜೋಗುಳ ಹಾಡದವಳು. ಹೀಗಾಗಿ ಇಂದು ಟೇಪ, ಸಿ.ಡಿ.ಗಳಲ್ಲಿ ಮಕ್ಕಳಿಗೆ ಲಾಲಿ ಪದಗಳನ್ನು ಕೇಳಿಸುವುದು ಕಂಡುಬರುತ್ತಲಿದೆ. ತಾಯಿಯ ಧ್ವನಿ ಹಾಗೂ ಸ್ಪರ್ಶಗಳ ಮಹತ್ವ ಅರಿತಿದ್ದ ನಮ್ಮ ಜನಪದ ಮಹಿಳೆಯರು ತಪ್ಪದೇ ಜೋಗುಳನ್ನು ಹಾಡುತ್ತಿದ್ದರೆಂಬುದು ಗಮನಿಯವಾಗಿದೆ.

ಸೀತಮ್ಮನ ಕರಸರಿ ಸುತ್ತರಿ ಸುರಗಿ
ಹಚ್ಚರ ಅರಸಿಣ ಕಟ್ಟರ ಕಂಕಣ
ಹಿಂಗೇ ಹಸಿಯ ಹಂದರದೊಳು
ಅರತಿ ಸೌಭಾಗ್ಯ ಜೋ ಜೋ ... [೫]

ಅತ್ತರ ಅಳುವವನಲ್ಲ ನಕ್ಕರ ನಗುವವನಲ್ಲ
ಲಕ್ಷಣವಂತ ಗುಣವಂತ ಜೋ ಜೋ
ಲಕ್ಷಣವಂತ ಗುಣವಂತ ಆನಂದ
ರೊಟ್ಟಿ ಮಾಡೆನೆಂದರ ಬಿಡವಲ್ಲ ಜೋ ಜೋ... [೬]

ಮದುವೆಯ ಹಾಡು :

ಮದುವೆಯ ಹಾಡುಗಳಿಗೆ ಚಾಜದ ಹಾಡುಗಳು ಎಂದೂ ಕರೆಯುವುದು ಕಂಡುಬರುತ್ತದೆ. ಮದುವೆ ಎಂಬುದು ಜನಪದರಿಗೆ ಸಂಭ್ರಮ ಸಂತೋಷದ ವಿಷಯ. ಅಂತೆಯೇ ಕುಂಕುಮ ಹಚ್ಚುವ ಕಾರ್ಯದಿಂದ ಮದುವೆಯಾದ ಮೇಲೆ ಬೀಗರನ್ನು ಕಳುಹಿಸುವವರೆಗೆ ವಿವಿಧ ಸಂದರ್ಭಗಳಲ್ಲಿ ವಿವಿಧ ಬಗೆಯ ಹಾಡುಗಳನ್ನು ಹಾಡುವುದು ಕಂಡುಬರುತ್ತದೆ. ಅಂತಹ ಹಾಡುಗಳು ಮದುವೆಯ ಸಂದರ್ಭಗಳಲ್ಲಿ ಮಾತ್ರ ಹಾಡುವುದರಿಂದ ಅವುಗಳಿಗೆ ಮದುವೆಯ ಹಾಡುಗಳು ಎಂದು ಕರೆಯುತ್ತಿರಬಹುದು. ಮದುವೆಯ ವೇಳೆಯಲ್ಲಿ ಒಳ್ಳ ಕಲ್ಲಿನ ಪದಗಳು ಕುಂಕುಮ ಪದ, ಭಾಸುಣಕಿ ಪದ, ಎಣ್ಣೆ ಹಚ್ಚುವ ಪದ, ಗುಗ್ಗುಳ ಪದ, ಬೀಗರಿಗೆ ಎದುರುಗೊಳ್ಳುವ ಪದ, ಕೂಸು ಒಪ್ಪಿಸುವ ಪದ, ಭೂಮದ ಪದ, ಬಾಗಿಲು ಹಿಡಿಯುವ ಪದ ಮುಂತಾದ ಹತ್ತು ಹಲವು ಮದುವೆಯ ಹಾಡುಗಳನ್ನು ಕಾಣಬಹುದು. ಇಷ್ಟೆಲ್ಲಾ ಹಾಡುಗಳು

ಇಂದು ಕಂಡುಬರುತ್ತಿಲ್ಲ. ಸಂಪ್ರದಾಯಕ್ಕೆಂಬಂತೆ ಒಂದೆರಡು ಬಗೆಯಲ್ಲಿ ಮಾತ್ರ ಹಾಡುವುದು ಕಾಣುತ್ತದೆ. ಆದರೆ ಮೊದಲು ಎಲ್ಲವನ್ನು ವಿಧಿ ವಿಧಾನಗಳಿಂದ ನಡೆಸಲು ಎಲ್ಲಾ ಬಗೆಯ ಹಾಡುಗಳನ್ನು ಕಡ್ಡಾಯವಾಗಿ ಹಾಡಿಯೇ ಮಾಡುತ್ತಿದ್ದರೆಂಬುದು ಗಮನಾರ್ಹ.

ಒಳ್ಳಕಲ್ಲಿಡುವ ಹಾಡು :

ಒಳ್ಳಕಲ್ಲಿಡಲು ನಮಗ್ಯಾರು ಕರಸ್ಯಾರ
ಸಾಲಮಾಳಗಿ ಮನೆಯವ್ರ
ಸಾಲ ಮಾಳಗಿ ಮನೆಯವ್ರ ಶರಣಪ್ಪ
ಒಳ್ಳಕಲ್ಲಿಡಲು ಕರಸ್ಯಾರ
ಕುಂಕುಮ ಇಲ್ಲಂತ ಮುತ್ತೈದೇರು ಮುಣದಾರ
ಕುಂಕುಮಕ ನಮಗ ಇಸವಾಸ.... [೭]

ಕುಂಕುಮ ಹಚ್ಚೊ ಪದ :

ಅತ್ತ ರಂಗಡಿ ಇತ್ತ ನೂರಂಗಡಿ
ಚಿತ್ರದ ಅಂಗಡಿ ತುಳಜಾಪೂರ / ಬಾಜರದಾಗ
ಕುಂಕುಮ ಬಂದಾವ ಮಗಳಿಗಿ
ಕುಂಕುಮ ಬಂದಾಮ ಮಗಳ ಅಕ್ಕಿನಿಗಿ
ಹಚ್ಚಿ ನೋಡ್ಯಾರೆ ಶುಭದಿಂದ

ಅತ್ತ ನೂರಂಗಡಿ ಇತ್ತ ನೂರಂಗಡಿ
ಚಿತ್ರದ ಅಂಗಡಿ ಸೊಲ್ಲಾಪುರ / ಬಾಜರದಾಗ
ಸೀರಿ ಬಂದಾವ ಮಗಳಿಗೆ
ಸೀರಿ ಬಂದಾವ ಮಗಳ ಅಕ್ಕಿನಿಗಿ
ಉಡಿಸಿ ನೋಡ್ಯಾರೆ ಶುಭದಿಂದ .... [೮]

ಭಾಸುಣಕಿ ಹಾಡು :

ಹಿರಿಯಪ್ಪ ಹಿರಿಯಪ್ಪ ಹಿರಿಯ ಸೋದರ್ಮಾವ
ಹಿರಿಯ ಮನಿಯಾಗ ಒಳಮಾತ
ಸುವ್ವಯ್ಯ ಅಂಗ ಸುವ್ವಯ್ಯ
ಹಿರಿಯ ಮನಿಯಾಗ ಒಳಮಾತ ಆಡಂತ
ಹಿರಿಯ ಮಗಳಿಗೆ ವರಬಂತ
ಸುವ್ವಯ್ಯ ಅಂಗ ಸುವ್ವಯ್ಯ .... [೯]

ಎಣ್ಣೆ ಹಚ್ಚುವ ಹಾಡು :

ಸುರಗಿಯ ಸುತ್ತಟಗೆ ಸಿರಿ
ಬಾಗಿಅಗಿ ಬಿಸಲು ಬಂದಾ
ನಾಲಾ ತೋಟದ ಎಲಿ ಬಂದಾ
ಹರಹರ ನಮ ಶಿವಗ ನೈಯೆಣ್ಣಿ
ನಾಲಾನೇ ತೋಟದ ಎಲಿಬಂದಾ
ಪ್ರಕಾಶ ಭಾಸಿಂಗ ಕಟ್ಬೋ ಬಲ ಬಂದಾ
ಹರಹರ ನಮಶಿವಗ ನೈಯೆಣ್ಣಿ .... [೧೦]

ಗುಗ್ಗಳ ಪದ :

ಇಂದು ನಮ್ಮವರು ದೇವಲಿಗಿ ಹೊಂಟಾರ
ನಂದೀ ಕೋಲು ಹೊರಗ ಗುಡಿಹೊರಗ ಶಿವಲಿಂಗ ಬನ್ನಿರೆ
ಏರಲ್ಲದ ಗುಡ್ಡ ಏರ‍್ಯಾರ ನಮ್ಮವರು
ನಂದಿಕೋಲ ಹೊರಗ ಗುಡಿ ಹೊರಗ ಶಿವಲಿಂಗ ಬನ್ನಿರೇ .... [೧೧]

ಕೂಸು ಒಪ್ಪಿಸುವ ಪದ :

ಒಂದರಬಿ ಹಾಸಿದ ಒಂದರಬಿ ಹಚ್ಚಿದ
ಒಂದರ ಮಾಡಿ ಸಲುಬಿದ
ಒಂದರ ಎಲೇ ಮಾಡಿ ಸಲುಬಿ ಸಾಕಿದ ಮಗಳ
ಮಾಬಿದ್ದ ಮನಿಗೀ ಕುಡರೆಂದ
ಎಡ್ಡರಬಿ ಹಾಸಿದ ಎಡ್ಡರಬಿ ಹಚ್ಚಿದ
ಎಡ್ಡರ ಎಲೆಮಾಡಿ ಸಲುಬಿ ಸಾಕಿದ ಮಗಳ
ಎಡ್ಡರ ಎಲೆಮಾಡಿ ಸಲುಬಿ ಸಾಕಿದ ಮಗಳ
ಅತ್ತಿ ಇದ್ದ ಮನಿಗೀ ಕುಡರೆಂದ ..... [೧೨]

ಬಾಗಿಲು ಹಿಡಿಯುವ ಪದ :

ಆನಿಯ ನಾ ಕುಡೆವೆ ಆನಿಯ ಮರಿ ಕುಡುವೆ
ಹಿಡಿದ ಬಾಗಿಲ ಬಿಡ ತಂಗಿSS
ಆನಿಯ ನಾಬಲ್ಲ ಆನಿಯ ಮರಿಬಲ್ಲ
ಹಿಡಿದ ಬಾಗಿಲ ಬಿಡೋನಿಲ್ಲ

ಒಂಟಿಯ ನಾ ಕುಡೆವೆ ಒಂಟಿಯ ಮಲಿ ಕುಡುವೆ
ಹಿಡಿದ ಬಾಗಿಲ ಬಿಡ ತಂಗಿss
ಒಂಟಿಯ ನಾಬಲ್ಲ ಒಂಟಿಯ ಮಲಿ ಒಲ್ಲ
ಹಿಡಿದ ಬಾಗಿಲ ಬಿಡೋನಿಲ್ಲ ..... [೧೩]

ಸೋಬಾನೆ ಪದ :

ನಾಗರ ಪಂಚಮಿ ಸನಿಯಾಕ ಬಂದಾದ
ನಮ್ಮಣ್ಣ ಬರಲಿಲ್ಲ ಕರಿಲಾಕ ಸೋಬಾನವೆ
ತಾಯಿ ತಂದೆ ತಬ್ಬಲಿ ಮಕ್ಕಳು ನಾವು
ನಮ್ಮಣ್ಣ ಅತ್ತಿಗಿ ನಮಗ ಹಡದವರು ಸೋಬಾನವೆ
ಅಣ್ಣಾನಾ ಹಾದಿಯು ಉಣ್ಣದೆ ಕಾಯ್ದಾಳ
ಯಾಕಣ್ಣ ಬರಲಿಲ್ಲೊ ಗಿಳಿರಾಮ ಸೋಬಾನವೆ
ಹೊಲಮನಿ ಕೆಲಸ ಊರೊಳಗಿನ ಕೆಲಸ
ನಮ್ಮಣ್ಣಗ ಹೆಚ್ಚಾಯಿತ್ತೇನು ಗಿಳಿರಾಮ ಸೋಬಾನವೆ
ಹಿಂಗಂತ ಮನಸ್ಸಗ ಸಮಾಧಾನ ಮಾಡ್ಯಾಳ
ನಡಕೊತ ಹೊಂಟಾಳ ತವರಿಗಿ ಸೋಬಾನವೆ
ಹೆಗಲಲಿ ಒಂದು ಬಗಲಲ್ಲಿ ಒಂದು ಕೂಸು
ನಡಸಿಕೊಂಡು ಮತ್ತೊಂದು ಕೂಸು ಸೋಬಾನವೆ
ಅನ್ನಂತ ನೀರಂತ ಅಳುವ ಮಕ್ಕಳ ಕರಕೊಂಡು
ತವರಿಗೆ ಹೋಗ್ಯಾಳ ಆ ನಾರಿ ಸೋಬಾನವೆ
ಅಣ್ಣನಾ ಹೆಂಡತಿ ಕಣ್ಣೆತ್ತಿ ನೋಡವಲ್ಲಳು
ಅಣ್ಣಾಗ ಕಣ್ಣ ಬಡಿತಾಳೆ ಸೋಬಾನವೆ
ತಾಯಿಲ್ಲದ ತವರಿಗಿ ಹೆಣ್ಣು ಮಕ್ಕಳು ಬರಬಾರದು
ನೀರಿಲ್ಲದ ಕೆರಿಗಿ ಆಕಳು ಹೋದಂತೆ ಸೋಬಾನವೆ
ಬಿಕ್ಕಿ ಬಿಕ್ಕಿ ಅಳುತ್ತಾಳ ಕೆರೆದಂಡಿಗಿ ಬರುತ್ತಾಳ
ಮಕ್ಕಳ ಕರಕೊಂಡು ಗಂಗ್ಯಾಗ ಕೂಡರೆಂದು ಸೋಬಾನವೆ
ಗಂಗ್ಯಾಗ ಹಾರಲಾಕ ಸಿದ್ಧಾಗಿ ನಿಂತಾಳ
ಶಿವ ಅಡ್ಡ ಬಂದಾ ಗುರು ಅಡ್ಡ ಬಂದಾ ಸೋಬಾನವೆ ....[೧೪]

ಹೀಗೆ ಕುಂಕುಮ ಹಚ್ಚುವದರಿಂದ ಸೋಬಾನೆ ವರೆಗಿನ ಹಾಡುಗಳನ್ನು ಮದುವೆ ಹಾಡುಗಳೆಂದು ಕರೆಯುವುದು ಕಂಡು ಬರುತ್ತದೆ.

ಜೋಕುಮಾರನ ಹಾಡು :

ಭಾದ್ರಪದಮಾಸದಲ್ಲಿ ಬರುವ ಹುಣ್ಣಿಮೆಗೆ ಜೋಕುಮಾರ ಹಬ್ಬವನ್ನು ಆಚರಿಸುವರು. ಆ ವೇಳೆಯಲ್ಲಿ ಜೋಕುಮಾರ ಹುಟ್ಟಿದ್ದು ಏಳು ದಿವಸಗಳ ಕಾಲ ಮಾತ್ರ ಅವನ ಜೀವನ ಅಷ್ಟರಲ್ಲೇ ಅಗಸರ ಹುಡುಗಿಯ ಬೆನ್ನು ಹತ್ತಿದ್ದಕ್ಕಾಗಿ ಎಲ್ಲರೂ ಅವನನ್ನು ಹೊಡೆದು ಸಾಯಿಸುತ್ತಾರೆಂದು, ಅವನು ಸಮೃಧಿಯ ಸಂಕೇತ, ಉತ್ತರ ಕರ್ನಾಟಕ ರೈತರ ವಿಶಿಷ್ಟ ದೇವರು ಮಳೆಗೂ ಜೋಕುಮಾರನಿಗೂ ಸಂಬಂಧವನ್ನು ಕಲ್ಪಿಸುವುದು ಕಂಡುಬರುತ್ತದೆ. ಅದಕ್ಕೆಂದೆ ಜೋಕುಮಾರನನ್ನು ಹೊತ್ತು ಮನೆಮನೆಗೆ ತಿರುಗುವರು ಹಾಡುವ ಹಾಡು ಈರೀತಿಯಲ್ಲಿರುವುದು ಗಮನಾರ್ಹವಾಗಿದೆ.

ಅಡ್ಡಡ್ಡ ಮಳಿ ಬಡಿದು
ದೊಡ್ಡಡ್ಡ ಕೆರಿ ತುಂಬಿ
ಗೊಡ್ಡುಗಳೆಲ್ಲಾ ಹೈನಾಗಿ ಜೋಕುಮಾರ
ಗೊಡ್ಡುಗಳೆಲ್ಲಾ ಹೈನಾಗಿ ಗೌಡರ
ಸೆಡ್ಡಿಯ ಮ್ಯಾಲೆ ಸಿರಿಬಂದು ಜೋಕುಮಾರ ..... [೧೫]

ಜೋಕುಮಾರನನ್ನು ಪೂಜಿಸಿದರೆ ಮಳೆ ಬೆಳೆಗಳ ಸಮೃದ್ಧಿಯಾಗುವುದು. ಬಂಜೆಯರಿಗೆ ಮಕ್ಕಳಾಗುವವೆಂಬ ನಂಬಿಕೆಯೂ ಕಂಡುಬರುತ್ತದೆ.

ಸತ್ತವರ ಹಾಡು :

ಹೆಸರೇ ಸೂಚಿಸುವಂತೆ ಸತ್ತಾಗ ಹಾಡುವ ಹಾಡುಗಳು, ಒಬ್ಬ ವ್ಯಕ್ತಿ ತೀರಿಕೊಂಡಾಗ ಅವನ ಸಂಬಂಧಿಕರು, ಸ್ನೇಹಿತರು ಹೆಣದ ಮೇಲೆ ಬಿದ್ದು, ಎದೆ ಗುದ್ದಿಕೊಳ್ಳುತ್ತ, ಹೊರಳಾಡುತ್ತ, ಚೀರುತ್ತ, ತಮ್ಮ ದುಃಖ, ಶೋಕವನ್ನು ರಾಗಬದ್ಧವಾಗಿ ಹೊರಹಾಕುವುದೇ 'ಸತ್ತವರ ಹಾಡು' ಎಂದು ಕರೆಯಲ್ಪಡುತ್ತವೆ. ಸಾವು ಮಾನವನ ಜೀವನದ ಕೊನೆಯ ಘಟ್ಟ. ಹೀಗಾಗಿ ಸತ್ತಾಗ ಯಾರನ್ನೂ ಒಯ್ಯುವುದರಿಂದ ಪ್ರಯೋಜನವಿಲ್ಲವೆನ್ನುವ ಮನೋಭಾವವು ಜನಪದರಲ್ಲಿ ಕಂಡುಬರುತ್ತದೆ.

ಏಯವ್ವ ನಾ ಹ್ಯಾಂಗ ಮಾಡ್ಲೆ
ನಾ ಎಲ್ಲಿ ಹೋಗ್ಲೆ, ಶಿವಾ
ಇಂಥ ಯ್ಯಾಳಿ ಯಾಕ ತಂದೋ
ನಾಯೇನ ಮಾಡಿದ್ದೋ
ನಂಗ ಹಿಂಥ ಯ್ಯಾಳಿ ಬರುತದಂತ
ಗೊತ್ತೇ ಆಗಿಲೆವ್ವಾ ! ....[೧೬]

ಮುಂತಾಗಿ ಸತ್ತವರ ಸಂಬಂಧಿಗಳ ಹೃದಯದ ತಳಮಳ, ಆಕ್ರೋಶ, ನೋವು, ನಿರಾಶೆ, ಆಕಸ್ಮಿಕ ಘಟನೆಯ ಒತ್ತಡ ಮುಂತಾದವುಗಳನ್ನು ಈ ಹಾಡುಗಳಲ್ಲಿ ಕಾಣಬಹುದು. ಅದು ಇನ್ನೂ ಉಳಿದಿರುವುದು ಮುಗ್ಧ ಹಳ್ಳಿಯ ಹೆಣ್ಣುಮಕ್ಕಳಲ್ಲಿ ಮಾತ್ರ. ಈ ರೀತಿಯಾಗಿ ರಾಗ-ಲಯ ಬದ್ಧವಾಗಿ ಹಾಡುತ್ತ ಅಳುವುದಕ್ಕೆ ಸಹ ಎಲ್ಲರಿಗೂ ಬರುವುದಿಲ್ಲ. ಕೇವಲ ಕೆಲವರಿಗೆ ಮಾತ್ರ ಈ ರೀತಿಯಾಗಿ ಹಾಡುತ್ತ ಅಳುವುದು ಬರುವುದು. ಹೀಗಾಗಿ ಅವರು ಆ ರೀತಿಯಲ್ಲಿ ಹಾಡುತ್ತ ಅತ್ತಾಗಲೇ ಹೆಣಕ್ಕೊಂದು ಕಳೆ ಮೂಡುತ್ತದೆ. ಅಂತೆಯೇ **'ಅತ್ತರೆ ಹೆಣ ಚಂದ ನಕ್ಕರೆ ಮದಿ ಚಂದ'** ಎಂಬ ಮಾತು ಕಂಡುಬರುತ್ತದೆ.

ಬುರ್ ಬುರ್ ಪೋಚಮ್ಮನ ಹಾಡು :

ಇದು ಸಹ ತಲೆಯ ಮೇಲೆ ಪೋಚಮ್ಮನನ್ನು ಹೊತ್ತಿಕೊಂಡು, ಕೊರಳಿಗೆ ಡೋಲಕ ಹಾಕಿಕೊಂಡು ಎರಡು ಕೈಯಲ್ಲಿ ಒಂದೊಂದು ಕಟ್ಟಿಗೆಯ ತುಂಡುಗಳನ್ನು ಹಿಡಿದು ಬುರ್-ಬುರ್ ಎನ್ನುವ ಶಬ್ದ ಹೊರಡಿಸುತ್ತ, ಬಾರಿಸುತ್ತ ಭಿಕ್ಷೆ ಬೇಡುವಾಗ ಹೇಳುವ ಪದಗಳೇ ಬುರ್-ಬುರ್ ಪೋಚಮ್ಮನ ಹಾಡು ಎಂಬ ಹೇಳುವುದು ಕಂಡುಬರುತ್ತದೆ. ಅಲ್ಲಿ ಹೆಣ್ಣು ಮಗಳೇ ಈ ರೀತಿಯಾಗಿ ಭಾರಿಸುತ್ತ ತಮ್ಮ ಬಾಯಿಗೆ ಬಂದ ಹೆಸರುಗಳು, ಮೂಡಿದ ಅನಿಸಿಕೆಗಳಿಗೆ ಆಶು ಕವಿಗಳಂತೆ ಅಲ್ಲಿಯೇ ಕಟ್ಟಿ ಹಾಡುವುದು ಕಂಡುಬರುತ್ತದೆ.

ಕಲ್ಲಮ್ಮ ನಾಗಮ್ಮ
ಒಂದಿಟು ದಾನ ಮಾಡಮ್ಮ
ನಿನ್ನ ಮಕ್ಕಳು ಮರಗಳು
ತಣ್ಣಗಿರಲವ್ವ
ಏನಾದರೂ ದಾನ ಮಾಡವ್ವ
ನಿನ್ನ ಹೊಟ್ಟಿ ಥಣ್ಣಗಿರಲಿ
ಒಂದೀಟು ನೀಡವ್ವಾ ಹಡದವ್ವ
ಪುಣ್ಯವಂತಿ, ಮಕ್ಕಳ ತಾಯಿ ......[೧೭]

ಎನ್ನುವ ವಿವಿಧ ರೀತಿಯಲ್ಲಿ ಬೇಡುವುದು, ಹರಸುವುದು ಕಂಡುಬರುತ್ತದೆ. ಯಾರಾದರೂ ನೀಡದೆ ಸತಾಯಿಸಿದರೆ ಬಯ್ಯುತ್ತಾ ಮುಂದೆ ಹೋಗುವುದೂ ಕಂಡುಬರುತ್ತದೆ.

ಬುಲಾಯಿ ಹಾಡು :

ನಾಗರ ಪಂಚಮಿಯ ಸಂದರ್ಭದಲ್ಲಿ ಹೆಣ್ಣುಮಕ್ಕಳು 'ಭುಲಾಯಿ' ಹಾಕುತ್ತಾ ಹಾಡುವ ಹಾಡುಗಳೇ ಬುಲಾಯಿ ಹಾಡುಗಳು. ಈ ಹಾಡುಗಳಲ್ಲಿಯೂ ಹೆಚ್ಚಾಗಿ ಹೆಣ್ಣಿನ ನೋವು-ನಲಿವು, ದುಃಖ-ದುಮ್ಮಾನ, ತ್ಯಾಗ-ಬಲಿದಾನಗಳ ಕುರಿತಾದ ಹಾಡುಗಳ ಜೊತೆಗೆ ಐತಿಹಾಸಿಕ, ಆರ್ಥಿಕ

ಹಾಗೂ ರಾಜಕೀಯ ಹತ್ತು ಹಲವು ವಿಷಯಗಳ ಕುರಿತಾದ ಬುಲಾಯಿ ಹಾಡುಗಳನ್ನು ಕಾಣಬಹುದು. ನಾಗರಾಧನೆಯ ಸಂದರ್ಭದಲ್ಲಿ ಹಾಡುವ ಹಾಡುಗಳಿವು.

ಹೀಗೆ ಹೆಂಗಸರ ಹಾಡುಗಳಲ್ಲಿ ಈ ಎಲ್ಲಾ ಪ್ರಕಾರದ ಜನಪದ ಗೀತೆಗಳನ್ನು ಕಾಣಬಹುದಾಗಿದೆ. ಅವುಗಳಲ್ಲಿ ಜನಪದ ಗೀತೆಗಳೇ ಹೆಚ್ಚಾಗಿವೆ. ಅವು ಹೆಚ್ಚಾಗಿ ಆಯಾ ಕ್ರಿಯೆಗಳಿಗೆ, ಸಂಪ್ರದಾಯಗಳಿಗೆ ಸಂಬಂಧಿಸಿದ ಹಾಡುಗಳಾಗಿರುವುದು ಗಮನೀಯ. ಇಂತಹ ಜನಪದಗೀತೆಗಳಲ್ಲಿ ಬುಲಾಯಿ ಹಾಡುಗಳ ಸ್ಥಾನಮಾನವನ್ನು ಕುರಿತು ನೋಡುವಾ. ಹಿಂದಿನ ಅಧ್ಯಾಯದಲ್ಲಿ ಇತರ ಜನಪದ ಗೀತೆಗಳಾದ ಅಲಾಯಿ ಹಾಡು, ಕೋಲುಪದ ಹಾಗೂ ಕಥನಗೀತೆಗಳ ಕುರಿತು ಚರ್ಚಿಸಲಾಗಿದೆ.

ಒಂದು ಪ್ರದೇಶದ ಭೌಗೋಳಿಕ, ಸಾಮಾಜಿಕ, ವ್ಯವಸ್ಥೆಗನುಗುಣವಾಗಿ ಅಲ್ಲಿಯ ಜನಪದಗೀತೆಗಳು ಹುಟ್ಟಿಕೊಂಡಿರುತ್ತವೆಂಬ ವಿದ್ವಾಂಸರ ಅಭಿಪ್ರಾಯ ಗಮನೀಯವಾಗಿದೆ. ಕರ್ನಾಟಕದಲ್ಲಿಯೂ ಮಲೆನಾಡಿನ ಕರಾವಳಿಯ, ಬಯಲು ಸೀಮೆಯ ಉತ್ತರ ಕರ್ನಾಟಕದ ಪ್ರದೇಶಗಳಲ್ಲಿ ವಿಭಿನ್ನ ರೀತಿಯ ಹಾಡುಗಳನ್ನು ಕಾಣುತ್ತೇವೆ. ವಿವಿಧ ಬಗೆಯ ಆಚಾರ - ವಿಚಾರ ನಂಬುಗೆ, ಸಂಪ್ರದಾಯಗಳಿಗೆ ತಕ್ಕಂತೆ ಅಲ್ಲಲ್ಲಿಯ ಹಾಡುಗಳ ವೈಶಿಷ್ಟ್ಯಗಳನ್ನು ಗುರುತಿಸಲು ಸಾಧ್ಯವಾಗುತ್ತದೆ. ಅಂತೆಯೇ ಬೀದರ ಜಿಲ್ಲೆಯ ಬುಲಾಯಿ ಹಾಡುಗಳ ವಿಶೇಷತೆ, ವೈಶಿಷ್ಟ್ಯತೆಗಳನ್ನು ಗುರುತಿಸಿ, ಜನಪದ ಗೀತೆಗಳಲ್ಲಿ ಅವುಗಳ ಸ್ಥಾನಮಾನವನ್ನು ಗುರುತಿಸಬಹುದು.

ಸಂಪ್ರದಾಯಗಳ ಆಚರಣೆಗಳನ್ನು ಬಲು ನಿಷ್ಠೆಯಿಂದ ಪಾಲಿಸಿಕೊಂಡು ಬರುವವರು, ಹಾಡುವವರು ಹೆಚ್ಚಾಗಿ ಹೆಣ್ಣುಮಕ್ಕಳೇ ಎಂಬುದು ಎಲ್ಲರಿಗೂ ತಿಳಿದ ವಿಷಯ, ಇವರಿಗೆ ಹೆಚ್ಚಿನ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಸ್ಥಾನಮಾನಗಳು ಮೊದಲು ಲಭಿಸಿದ್ದು ಕಂಡು ಬರುವುದಿಲ್ಲ. ಆರ್ಥಿಕವಾಗಿ ಸಬಲರಾದಂತೆ, ಶಿಕ್ಷಣ ಪಡೆದುಕೊಂಡು ಶೈಕ್ಷಣಿಕವಾಗಿ ಮುಂದೊರೆದಾಗ ನಂಬಿಕೆಗಳು, ಆಚರಣೆಯಲ್ಲಿ ನಿಷ್ಠೆ, ಭುಲಾಯಿ ಹಾಕುವುದು, ಹಾಡು ಕಲಿಯುವುದು, ಮುಂದುವರೆಯಿಸಿಕೊಂಡು ಬರುವುದು ಕಡಿಮೆಯಾಗುತ್ತಾ ಬರುತ್ತಿರುವುದು ಗಮನೀಯ ಅಂಶವೆನ್ನಬಹುದು. ಆದರೂ ಹಲವು ಕಡೆಗಳಲ್ಲಿ ಇನ್ನೂ ಉಳಿದುಕೊಂಡಿರುವ ಈ ಹಾಡುಗಳು ಇತರ ಜನಪದ ಗೀತೆಗಳಿಗಿಂತ ವಿಶಿಷ್ಟವಾದವು ಹಾಗೂ ಮಹತ್ವದ್ದವು ಎಂಬುದನ್ನು ಅಲ್ಲಗಳೆಯುವಂತಿಲ್ಲ.

ಕರ್ನಾಟಕದ ಬೀದರ ಜಿಲ್ಲೆಯಲ್ಲಿ ಮಾತ್ರ ವಿಶಿಷ್ಟವಾಗಿರುವ ಈ ಹಾಡುಗಳು ನಾಗರ ಪಂಚಮಿಯ ಸಂದರ್ಭದಲ್ಲಿ ಹಾಡುವಂತಹವು. "ಜನಪದ ಹಾಡುಗಳು ಒಂದು ನಾಡಿನ ಸಂಸ್ಕೃತಿಯ ವಾಹಕಗಳು ಎಂದು ಹೇಳಬಹುದು. ಜನಪದರ ಬದುಕಿನ ರೀತಿ, ನೀತಿ, ನಂಬಿಕೆ, ಆದರ್ಶ, ಆಲೋಚನೆ, ಕಲ್ಪನೆ, ಶೌರ್ಯ, ಸಾಹಸ ಮುಂತಾದ ಅಂಶಗಳು ಹಾಡಾಗಿ ಹೊರಹೊಮ್ಮುತ್ತವೆ. ಜನಪದರು ತಮ್ಮ ಅನುಭವಗಳಿಗೆ ಹಾಡಿನ ರೂಪಕೊಟ್ಟು ಹಾಡಿ

ತಣಿಯುತ್ತಾರೆ. ಆ ಮೂಲಕ ತಮ್ಮ ಸಂಸ್ಕೃತಿಯನ್ನು ಮೌಖಿಕವಾಗಿ ಮುಂದೊರೆಸಿಕೊಂಡು ಹೋಗುತ್ತಾರೆ"[೧೮] ಎಂಬುದು ಗಮನಾರ್ಹವಾಗಿದೆ. ಬುಲಾಯಿ ಹಾಡುಗಳಲ್ಲಿ ಈ ಅಂಶಗಳು ಸ್ಪಷ್ಟವಾಗಿ ಎದ್ದು ತೋರುತ್ತವೆ. ಇತರೆ ಸಂಸ್ಕೃತಿಗಳ (ಮರಾಠಿ ಮತ್ತು ಮುಸ್ಲಿಂ) ಪ್ರಭಾವದಿಂದಾಗಿ ಈ ಜಿಲ್ಲೆಯ ಕನ್ನಡ ಸಂಸ್ಕೃತಿಯು ಹೇಗೆ ವಿಶಿಷ್ಟವಾಗಿದ್ದು, ಶ್ರೀಮಂತವಾಗಿದೆ ಎಂಬುದನ್ನು ಬುಲಾಯಿ ಹಾಡುಗಳ ಮೂಲಕ ಗುರುತಿಸಬಹುದು.

ಬುಲಾಯಿ ಹಾಡುಗಳಲ್ಲಿ ಕೋಲು ಕೋಲೆ, ಕೋಲು ಕೋಲೆ, ಕೋಲೆಣ್ಣ ಕೋಲೆ, ಕೋಲು, ಕೋಲು ಕೋಲ ಕೋಲೆ, ರನ್ನದೆ ಕೋಲು ಕೋಲೆ, ಏ ಹೂವಿನ ಕೋಲು ಕೋಲೆ ಮುಂತಾದ ಸೊಲ್ಲುಗಳಲ್ಲಿ ನುಡಿಯ ಕೊನೆಗೆ ರಾಗ ಎಳೆಯುವುದನ್ನು ಕಾಣಬಹುದು. ಕೆಲವರು ಬುಲಾಯಿ ಹಾಡುಗಳಲ್ಲಿ ಇಂಥ ರಾಗಗಳನ್ನು ಸ್ವಲ್ಪ ಬದಲಾವಣೆ ಮಾಡಿಕೊಂಡು ಹಾಡುವುದೂ ಕಂಡುಬರುತ್ತದೆ. **ಊರಿಗೆ ಹಾದಿ ಏಸು ಹಾಡಿಗೆ ಧಾಟಿ ಏಸು** ಎಂಬಂತೆ ಬುಲಾಯಿ ಹಾಡುಗಳ ಮೂಲಭಾವನೆ ಒಂದೇ ಇದ್ದರೂ, ಕೆಲವು ಸಾಲುಗಳನ್ನು ಅಥವಾ ಶಬ್ದಗಳನ್ನು ಮಾತ್ರ ಸ್ಥಾನ ಪಲ್ಲಟಗೊಳಿಸಿ ಹಾಡುವುದು ಕಂಡುಬರುತ್ತದೆ.

ಉದಾ: ಮಲ್ಲಮ್ಮನ ಭಕ್ತಿಯ ಕುರಿತಾದ ಹಾಡುಗಳಲ್ಲಿ ಇದನ್ನು ಗುರುತಿಸಬಹುದು. 'ಭಕ್ತಿ' ಹಾಡುಗಳ ಮೂಲಭಾವವಾಗಿದ್ದರೂ ಪದಗಳು ಸಾಲುಗಳು ಮೇಲೆ ಕೆಳಗೆ, ಹಿಂದೆ ಮುಂದೆ ಮಾಡಿಕೊಂಡು ಹಾಡುವ ಸೃಜನ ಶೀಲತೆಯು ಬುಲಾಯಿ ಹಾಡುವವರಲ್ಲಿ ಕಾಣಬಹುದು.

ಬುಲಾಯಿ ಹಾಡುಗಳನ್ನು ಯಾರೇ ಹಾಡಿದರೂ ಜಿಲ್ಲೆಯಲ್ಲಿ ಮೂಲ ಧಾಟಿ ಒಂದೇ ಆಗಿರುವುದು ವಿಶಿಷ್ಟವೆನಿಸುತ್ತದೆ. ಇದರ ಧಾಟಿ ಹಾಗೂ ಹಾಡನ್ನು ಕೇಳಿದರೆ, ಬುಲಾಯಿ ಹಾಡ ಬಲ್ಲವರು ಅದು 'ಬುಲಾಯಿ ಹಾಡೆಂದು' ತಕ್ಷಣ ಗುರುತಿಸಬಹುದು. ಹೆಣ್ಣು ಮಕ್ಕಳೇ ವಾಕ್ ಸಂಪ್ರದಾಯದಲ್ಲಿ ಮುಂದೊರೆಸಿಕೊಂಡು ಹೋಗುವುದರಿಂದ ಈ ಹಾಡುಗಳು ಸರಳ, ನೇರ ನುಡಿಗಳಿಂದ ಕೂಡಿದ್ದು, ಮನಸ್ಸಿಗೆ ಮುಟ್ಟುವಂತ ಆಹ್ಲಾದಕರ ರಮಣೀಯ ಧಾಟಿಯಲ್ಲಿ ಹಾಡುವುದು ವಿಭಿನ್ನವೆನಿಸುತ್ತದೆ. ಈ ಹಾಡುಗಳನ್ನು ಯಾವುದೇ ವಾದ್ಯ ಪರಿಕರಗಳೊಂದಿಗೆ ಹಾಡದೇ, ಹಾಡುವ ಕಂಠಸಿರಿಯೇ ಇಲ್ಲಿ ಕೇಳುಗರನ್ನು ಮಂತ್ರಮುಗ್ಧರನ್ನಾಗಿಸುವುದು ತುಂಬಾ ಪರಿಣಾಮಕಾರಿಯೆನಿಸುತ್ತದೆ.

ಬುಲಾಯಿ ಹಾಡುಗಳು ಪ್ರಾರಂಭಿಸುವುದು ಹೆಚ್ಚಾಗಿ ದೇವತಾ ಸ್ತುತಿಯಿಂದ ಆದರೆ ಅದನ್ನು ಮುಗಿಸುವುದು ಬುಲಾಯಿ ಆರತಿಯ ಪದದಿಂದ ಎಂಬುದು ಇನ್ನೊಂದು ಮಹತ್ವದ ಅಂಶ. ಇದಕ್ಕಾಗಿ ಬುಲಾಯಿಯ ಆರತಿಯ ಪದವನ್ನು ಹಾಡುವುದು ಕಂಡುಬರುತ್ತದೆ. ಸಾಮಾನ್ಯವಾಗಿ ಆರತಿ ಪದ ಹಾಡುವಾಗ ಆರತಿ ಬೆಳಗುವುದು ಕಂಡು ಬರುತ್ತದೆ. ಆದರೆ ಇಲ್ಲಿ ಅಂತಹ ಯಾವ ಕ್ರಿಯೆಗಳಲ್ಲಿ ಕಂಡು ಬರುವುದಿಲ್ಲ. ಕೇವಲ ಹಾಡುಗಳನ್ನು ಮಾತ್ರ ಹಾಡುತ್ತಾರೆ ಅಂತಹ ಹಾಡುಗಳಲ್ಲಿ ಶರಣರ, ದೇವತೆಗಳ ಹೆಸರುಗಳನ್ನು ಕಾಣಬಹುದು.

[illegible]

ಉದಾ :

ಶರಣಪ್ಪಗ ಆರುತಿ ಗುರುಲಿಂಗ ಮೂರುತಿ
ತಾಯಿ ಮಾದೇವಿಗಿ ಆರುತಿ ಕೋಲೆಣ್ಣ ಕೋಲೆ
ಅಷ್ಟಗಂಧ ಪುಷ್ಪಗಳ ಜ್ಯೋತಿ ಅಕ್ಷರ ದೀಪ
ನಿಷ್ಠೆಲಿಂದ ಆರುತಿ ಬೆಳಗುವೆ ಕೋಲೆಣ್ಣ ಕೋಲೆ
ತಾಯಿನ ಗುಣಗೋಳು ಮನಸಿನ ಬತ್ತಿಗೋಳು
ಶಿರಬಾಗಿ ಆರುತಿ ಬೆಳಗುವೆ ಕೋಲೆಣ್ಣ ಕೋಲೆ
ಹಸ್ತವು ಜೋಡಿಸಿ ನಿನ್ನ ಪಾದಕ್ಕೆ ನಮಿಸಿ
ಅರುಬಿನ ಕರ್ಪೂರ ಬೆಳಗುವೆ ಕೋಲೆಣ್ಣ ಕೋಲೆ
ಧರಿಯೊಳ ಕಲಬುರ್ಗಿ ಶರಣ ಬಸಪ್ಪನ ಬೆಳಗ
ಶರಣಗೆ ಆರುತಿ ಬೆಳಗುವೆ ಕೋಲೆಣ್ಣ ಕೋಲೆ .... [೧೯]

ಬುಲಾಯಿ ಹಾಡುಗಳನ್ನು ಬೇರೆ ಯಾವ ಸಂದರ್ಭಗಳಲ್ಲಿಯೂ ಹಾಡದೆ ಪುನಃ ಒಂದು ವರ್ಷದ ನಂತರ ನಾಗರ ಪಂಚಮಿಯ ಹಬ್ಬದಲ್ಲಿ 'ಭುಲಾಯಿ ಹಾಕು' ವಾಗಲೇ ಹಾಡುವುದು ಕಂಡುಬರುತ್ತದೆ. ಅಂದರೆ ಒಂದು ವರ್ಷಕ್ಕೊಮ್ಮೆ ಮಾತ್ರ ಹಾಡುವ ಈ ಹಾಡುಗಳನ್ನು ಹೆಣ್ಣು ಮಕ್ಕಳು ನೆನಪಿಟ್ಟುಕೊಂಡು ಹಾಡುವುದು ಬಿಶೇಷವೆನ್ನಬಹುದು. ಅಂತೆಯೇ ಹಾಡುವಾಗ ಪಾಠಾಂತರಗಳು ಕಂಡುಬರುತ್ತವೆ. ಒಂದೇ ಬಿಷಯ, ಆಶಯ, ಹಾಡು ಇದ್ದರೂ ಹಾಡುವವರ ಪದ ಜೋಡನೆಗೆ ತಕ್ಕಂತೆ ಹಾಡುವುದು ಕಂಡುಬರುತ್ತದೆ. ಹೆಚ್ಚಾಗಿ ಅನಕ್ಷರಸ್ಥ ಮಹಿಳೆಯರೇ ಕಟ್ಟಿ ಹಾಡುವುದರಿಂದ ಇಂತಹ ಪಾಠಾಂತರಗಳನ್ನು ಕಾಣಬಹುದು.

ಬುಲಾಯಿ ಹಾಡುಗಳಲ್ಲಿ ಕಷ್ಟ ಸಹಿಷ್ಣುತೆ, ತ್ಯಾಗ, ಛಲ ದ್ವೇಷ, ಪ್ರೇಮ, ಸಾಹಸ, ನೋವು-ನಲಿವು, ಸ್ತ್ರೀ ಸಂವೇದನೆಗಳು ಇತ್ಯಾದಿ ಕಂಡುಬರುತ್ತವೆ. ಅಲ್ಲದೇ ರಾಜಕೀಯವಾಗಿ ರಜಾಕಾರರ ಹಾವಳಿ, ಹತ್ಯಾಕಾಂಡ, ದಬ್ಬಾಳಿಕೆಗಳು, ಧರ್ಮ ಹಾಗೂ ಸಮಾಜಕ್ಕಾಗಿ ಪ್ರಾಣ ತ್ಯಾಗ ಮಾಡಿದ ಬೀರರು, ಮಹನೀಯರು, ಹೆಣ್ಣಿನ ತ್ಯಾಗ-ಬಲಿದಾನ, ಹೀಗೆ ಹತ್ತು ಹಲವು, ಸಂಸ್ಕೃತಿಯ ಮೂಲ ಸ್ವರೂಪವನ್ನು ಈ ಹಾಡುಗಳಲ್ಲಿ ಕಾಣಬಹುದು.

ಪಾತಿವ್ರತ್ಯಕ್ಕಾಗಿ ಕರುಳಿನ ಕುಡಿಯನ್ನೇ ಕಡೆಗೆಣಿಸಿದ 'ಕಾಶೀಬಾಯಿ ಹಾಡು', 'ಶೀಲಕ್ಕಾಗಿ ಕಷ್ಟ-ಅಪಮಾನಗಳನ್ನು ಸಹಿಸಿಕೊಂಡ, ರತ್ನಮ್ಮನ ಹಾಡು', 'ನೀಲಕಂಠ ರಾಜನ ಹಾಡು', 'ಚಂದ್ರ ಪ್ರಭಾನ ಹಾಡು', 'ಎಳ್ಳ ಮಾಸೆಯ ಹಾಡು' ಮುಂತಾದವುಗಳು ಚಾರಿತ್ರ್ಯೆಯ ಮಹತ್ವವನ್ನು ಚಿತ್ರಿಸುವಂತೆ ಕಂಡುಬರುತ್ತವೆ.

'ಬರದ ಹಾಡು', 'ಚಿಕ್ಕ ಚೆನ್ನಮ್ಮನ ಹಾಡು' ಹಾಗೂ 'ಬಡತನದ ಹಾಡು' ಮುಂತಾದವು ಆರ್ಥಿಕ ಸ್ಥಿತಿ, ಅದರಿಂದುಂಟಾಗುವ ಜೀವನದ ಅಸ್ತವ್ಯಸ್ತತೆ ಹಾಗೂ ಒದಗುವ ದುರಂತಗಳನ್ನು ಪ್ರತಿಬಿಂಬಿಸಿ ಬಡತನದ ಘೋರ ಪರಿಣಾಮಗಳು, ದುರಂತವನ್ನು ಮನವರಿಕೆ ಮಾಡಿಕೊಡುವುದನ್ನು ಕಾಣಬಹುದು.

'ದಕ್ಷ ಬ್ರಹ್ಮನ ಹಾಡು', 'ಗಣಪತಿಯ ಹಾಡು', 'ಮೇಘರಾಜನ ಹಾಡು', 'ಶಿವ ಭದ್ರಿ ಹಾಡು', 'ಕೊರವಂಜಿ ಹಾಡು', 'ಸೀತಾನ ಹಾಡು', 'ದುರುಪತಿಯ ಹಾಡು', 'ಲವಕುಶರ ಹಾಡು', ಮುಂತಾದ ಹಾಡುಗಳಲ್ಲಿ ಇಲ್ಲಿಯ ಬೀದರ ಜಿಲ್ಲೆಯ ಮಹಿಳೆಯರ ಪೌರಾಣಿಕ ಪ್ರಜ್ಞೆ ಹಾಗೂ ಪದ್ಯ ರಚನೆಯ ಜಾಣ್ಮೆಯನ್ನು, ಅವರು ನಂಬಿಕೊಂಡ ನಂಬುಗೆಗಳನ್ನು ಕಾಣಬಹುದು.

'ಬಸವಣ್ಣನ ಹಾಡು', 'ಶರಣಬಸಪ್ಪನ ಹಾಡು', 'ಅಕ್ಕನಾಗಮ್ಮನ ಹಾಡು', 'ಹೇಮರಡ್ಡಿ ಮಲ್ಲಮ್ಮನ ಹಾಡು', 'ಚೆಂಗಳೆವ್ವನ ಹಾಡು', 'ಚೆನ್ನ ಬಸವಣ್ಣನ ಹಾಡು', ಮುಂತಾದವುಗಳಲ್ಲಿ ಅವರ ಧಾರ್ಮಿಕ ಶ್ರದ್ಧೆ ಹಾಗೂ ಭಕ್ತಿಗಳನ್ನು ಗುರುತಿಸಬಹುದು.

'ನಿಜಾಮನ ದಬ್ಬಾಳಿಕೆ', 'ರಜಾಕಾರರ ಹಾಡು', 'ಧರ್ಮಪ್ರಕಾಶರ ಹಾಡು', 'ಆರ್ಯ ಸಮಾಜದ ಹಾಡು', 'ಮುಂತಾದ ಹಾಡುಗಳಲ್ಲಿ ಐತಿಹಾಸಿಕ ಅಂಶಗಳು', ಸ್ಥಳಗಳ ಉಲ್ಲೇಖ, ಆಧಾರಗಳು ಹೊಸಕಲ್ಪನೆಗಳಿಗೆ ಎಡೆಮಾಡಿಕೊಟ್ಟು ಆಕರಗಳಾಗಬಹುದು.

'ಪಂಚಮಿಯ ಹಾಡು', 'ತಂಗಿ ಈರಮ್ಮನ ಹಾಡು', 'ಶೇಷನ ಸತಿ', 'ನಾಗರ ಪಂಚಮಿಯ ಹಾಡು', 'ಹರಸ್ಯಾಳ ಬಾಲಿ' ಮುಂತಾದ ಹಾಡುಗಳಲ್ಲಿ ನಾಗರ ಪಂಚಮಿಯ ಸಂಪ್ರದಾಯ, ಹೆಣ್ಣು ಮಕ್ಕಳ ಹಬ್ಬದ ಮಾಹಿತಿ, ನಾಗಪೂಜೆಯ ಆಚರಣೆ, ಅಡುಗೆ ಮುಂತಾದವುಗಳನ್ನು ಪ್ರತಿ ಬಿಂಬಿಸುತ್ತವೆ.

'ಸಾಹುಕಾರನ ಹಾಡು', 'ಒಕ್ಕಲಗಿತ್ತಿ ಥೋರಿಮಗನ ಹಾಡು' ಮುಂತಾದ ಹಾಡುಗಳಲ್ಲಿ ಹೆಣ್ಣಿನ ದಿಟ್ಟ ಗುಣ ಹಾಗೂ ಸ್ವಭಾವ ಚಿತ್ರಣ ಮತ್ತು ತನ್ನನ್ನು ತಾನು ರಕ್ಷಿಸಿಕೊಳ್ಳಬಲ್ಲ ಅವಳ ಧೈರ್ಯವನ್ನು ಬಿಂಬಿಸುವ ಸ್ತ್ರೀವಾದ ಚಿಂತನೆಯನ್ನು ಎತ್ತಿ ತೋರಿಸುತ್ತವೆ. 'ಕೆರೆಕಟ್ಟಾ ಹಾಡು', 'ಬೀದರ ಕ್ವಾಟಿಯ ಹಾಡು' ಮುಂತಾದವುಗಳು ಹೆಣ್ಣುಮಕ್ಕಳ ತ್ಯಾಗ - ಬಲಿದಾನಗಳನ್ನು, ಸಾಮಾಜಿಕ ಮೌಲ್ಯಗಳನ್ನು ಚಿತ್ರಿಸುವಂತಿವೆ.

'ಸೂರಜನ ಹಾಡು', 'ಅಣ್ಣ-ತಂಗಿಯ ಹಾಡು', 'ಹೊನ್ನಮ್ಮನ ಹಾಡು', 'ಭೀಮಶ್ಯಾನ ಹಾಡು', 'ಅತ್ತಿಗೆ-ಮೈದುನ ಹಾಡು', 'ಚಂಧ್ರುಶ ಬಲ್ವಾನನ ಹಾಡು', ಮುಂತಾದವುಗಳು ಸ್ವಾರ್ಥವನ್ನು ಪ್ರತಿಪಾದಿಸುವ, ಅದಕ್ಕಾಗಿ ಕೊಲೆಯನ್ನು ಮಾಡಲು ಸಹ ಹೇಸದ ಪ್ರವೃತ್ತಿಯವರನ್ನು ಪ್ರತಿನಿಧಿಸುವಂತಿವೆ.

'ಆಕಳ ಹಾಡು', 'ಎತ್ತಿನ ಹಾಡು', 'ಗೋಪೆಮ್ಮನ ಹಾಡು' ಮುಂತಾದವು ಮೂಕ ಪ್ರಾಣಿಗಳ ನೋವನ್ನು ವ್ಯಕ್ತಪಡಿಸುವ, ನೀ ನಾರಿಗಾದೆಯೋ ಎಲೇ ಮಾನವ ? ಎಂದು ಮನುಷ್ಯನನ್ನು ಪ್ರಶ್ನಿಸುವ ಪದ್ಯವನ್ನು ನೆನಪಿಸುತ್ತವೆ. ಪುಣ್ಯಕೋಟಿಯ ಕಥೆಯನ್ನು ಪ್ರತಿಪಾದಿಸುವಂತಿದೆ.

'ಬಸವಲಿಂಗಪ್ಪನ ಹಾಡು', 'ಚೆನ್ನ ಬಸವ ಪಟ್ಟದ್ದೇವರ ಹಾಡು', 'ಹಳೆಂಬುರ ವೀರಭದ್ರ ಗುರುಗಳ ಹಾಡು', 'ಕುರುಬರ ಭಾನಭಾಯಿ ಹಾಡು', ಮುಂತಾದ ವೈಯಕ್ತಿಕ ಹಾಡುಗಳು ಅವರ ಗುಣ-ಸ್ವಭಾವ ಹಾಗೂ ಕಾರ್ಯ-ಸಾಧನೆಗಳನ್ನು ಪರಿಚಯಿಸುವಂತಿವೆ.

ಹೀಗೆ ಬುಲಾಯಿ ಹಾಡುಗಳಲ್ಲಿ ಬದುಕಿನ ಪ್ರತಿಯೊಂದು ವಿಷಯ ವಸ್ತು, ಘಟನೆ, ಮೌಲ್ಯ, ನಂಬಿಕೆ, ಸಂಪ್ರದಾಯ ಭಾವನೆಗಳಿಗೆ ಸ್ಪಂದಿಸಿದಂತೆ ಕಂಡುಬರುತ್ತದೆ. ಅವರ ಜೀವನಾನು ಭವಗಳ ಒಟ್ಟು ಮೊತ್ತವೇ ಬುಲಾಯಿ ಹಾಡುಗಳಲ್ಲಿ ಕಾಣಬಹುದಾಗಿದೆ. ಒಂದರ್ಥದಲ್ಲಿ ಬುಲಾಯಿ ಹಾಡಿಗೆ ಸೇರಿದ ವಿಷಯವೇ ಇಲ್ಲ ಎನ್ನುವಷ್ಟರ ಮಟ್ಟಿಗೆ, ಈ ಹಾಡುಗಳಲ್ಲಿ ಬದುಕಿನ ಪ್ರತಿಸ್ತರ, ಸನ್ನಿವೇಶ, ಸೂಕ್ಷ್ಮಾತಿ ಸೂಕ್ಷ್ಮ ಭಾವನೆಗಳಿಗೂ ಸ್ಪಂದಿಸಿರುವುದು ವಿಶಿಷ್ಟವೆನಿಸುತ್ತದೆ. ಅವು ಪ್ರಸ್ತುತ ಬದುಕಿಗೆ ದಾರಿ ದೀವಿಗೆಗಳಾಗಿ ತುಂಬಾ ಮಹತ್ವದ್ದೆನಿಸುತ್ತವೆ. ಈ ಹಾಡುಗಳನ್ನು ಹೆಣ್ಣುಮಕ್ಕಳು ತಮ್ಮದೇ ಆದ ಭಾಷೆ, ಪದಗಳ ಬಳಕೆಯಿಂದ ಸರಳವಾಗಿ ಹಾಡಿದಂತೆ ಕಂಡುಬರುತ್ತದೆ. ಶುದ್ಧ ಕನ್ನಡ ಮಹಾ ಪ್ರಾಣಗಳು, ಮರಾಠಿ, ಉರ್ದು ಪದಗಳ ಬಳಕೆಯೂ ಹೇರಳವಾಗಿದ್ದುದು ಕಂಡುಬರುತ್ತದೆ.

ಉದಾ :

ಎಲ್ಲ ಕೆಲಸವ ಮಾಡಿ ಎಲ್ಲ **ದಗದವ** ಮುಗಿಸಿ
ಬಿಟ್ಟಿರುವ ಮೈಲಿಗಿಯನ್ನು ಒಗೆಯ ಕೋಲೆಣ್ಣ ಕೋಲೆ
ಐದು ದುಡ್ಡು ತೆರಗಿಯನು ಕೊಡು
ಕೊಟ್ಟು ನಿನ್ನ ಮಗನ **ದಫನ** ಮಾಡು ಕೋಲೆಣ್ಣ ಕೋಲೆ...[೨೦]
ಮಿತ್ರಗ **ಟಕ್ಕನಿಟ್ಟು** ನೋಡುತಾರ ಕಣ್ಣಮುಟ್ಟ
ಓಂನಂತೆ ಜೀವಬಿಟ್ಟ ಕೋಲೆಣ್ಣ ಕೋಲೆ
ಶ್ಯಾರ ಜೀದರ **ಕ್ಯಾಟಿ** ಬಗಲಿಗಿ ಹಾಕ್ಯಾರ ಲಾಟಿ
ಮೊಣ್ಣಿಗಿ ಬಂದಾರ ಘಟ್ಟಿ ಕೋಲೆಣ್ಣ ಕೋಲೆ
ಹೊಸಪ್ಯಾಟಿಗಿ ಹೊಯ್ತುಹೆಣಾ ನೋಡುತಾರ ಅಲ್ಲಿ ಜನಾ
ಸಾಟಿ ರೂಪಾಯಿ ಹೂವಿಗಿ ಇನ್ನು ಕೋಲೆಣ್ಣ ಕೋಲೆ ...[೨೧]
ಖಂಬವಕ ಹೊಂದಿ ಇರುವಂಥ **ಮರಿತೇಜಿ**
ತೇಜಿನ ಸೋತಾರೆ ಧರ್ಮರಾಜ ಕೋ ಕೋ
ತಾಯಿಯ ಬಂದಿದಳು ಮಂಚದಬಲ್ಲಿ ನಿಂತಿದಳು
ಯಾಕೋ ನನ ಮಗನೆ **ಮಕಬಾಡಿ** ಕೋ ಕೋ ....[೨೨]

ಬುಲಾಯಿ ಹಾಡುಗಳಲ್ಲಿ ಪೌರಾಣಿಕ ಹಾಡಾದ 'ದುರುಪತಿಯ ಹಾಡು' ಶಿಷ್ಟ ಸಾಹಿತ್ಯದಂತೆ ಯಥಾವತ್ತಾಗಿ ಹೇಳಿದರೂ, ಕೆಲವೊಂದು ಬದಲಾವಣೆಗಳನ್ನು ಮಾಡಿಕೊಂಡಿರುವುದು ಗಮನಾರ್ಹವೆನಿಸುತ್ತದೆ. ಎಲ್ಲಾ ಹಾಡುಗಳಂತೆ ದ್ರೌಪದಿಯ ಸೀರೆ ಸೆಳೆಯುವ ಸನ್ನಿವೇಶ ದೊಂದಿಗೆ ದ್ರೌಪದಿ ನುಡಿಯುವ ಮಾತು ತುಂಬಾ ಅದ್ಭುತವೆನಿಸುತ್ತವೆ.

ಧರ್ಮರಾಜನು ಪಗಡೆ - ಬ್ಯೂಜಿನಲ್ಲಿ ಸೋತು ಎಲ್ಲವನ್ನು ಕಳೆದುಕೊಂಡಾಗ, ಕೌರವನ ಆದೇಶದ ಮೇರೆಗೆ ದುಶ್ಯಾಸನ ದ್ರೌಪದಿಯನ್ನು ಕರೆದುಕೊಂಡು ಬಂದು ಅವಮಾನ

ಮಾಡಲೆತ್ನಿಸುತ್ತಾನೆ. ಕೊನೆಗೆ ಸೋತು ಸುಸ್ತಾಗಿ ಅವಳನ್ನು ಮನೆಗೆ ಹೋಗೆಂದಾಗ ಅವಳು ಪ್ರತಿಯಾಗಿ ಜೂಜಾಡಿ ಎಲ್ಲವನ್ನು ಪಡೆದುಕೊಂಡು, ಗೆಲ್ಲುವುದು ಅತ್ಯಂತ ಮಹತ್ವದ್ದಾಗಿದೆ. ದ್ರೌಪದಿಯ ರೂಪದಲ್ಲಿಯ ಹಳ್ಳಿ ಹೆಣ್ಣುಮಗಳ ದಿಟ್ಟತನವು ಇಲ್ಲಿ ವ್ಯಕ್ತವಾದಂತೆ ಕಂಡುಬರುತ್ತದೆ.

ಉದಾ :

ಬರಲಾಕ ಬಂದಿದ ಹಿಂದಕ್ಯಾಂಗ ಹೋಗತೀನಿ
ಹಚ್ಚಂದಳ ಪಗಡಿ ಪತಿಜೂಜ ಕೋಲೆಣ್ಣ ಕೋಲೆ .....

ಹೀಗೆ ಹಚ್ಚಿದ ಪ್ರತಿಜೂಜಿನಲ್ಲಿ ಧರ್ಮರಾಜ
ಸೋತಿದ್ದನ್ನೆಲ್ಲಾ ದ್ರೌಪತಿ ಒಂದೊಂದೆ ಗೆಲ್ಲುತ್ತಾಳೆ.

ಸಾರು ಅಂಗದ ಪ್ಯಾಟಿ ಮಾಳಗಿ ಮ್ಯಾಲನಾಗ
ಇರುವ ತನ್ನಗ ಗೆದ್ದಳ ದುರಪತಿ ಕೋಲೆಣ್ಣ ಕೋಲೆ ....

ಈ ರೀತಿಯಾಗಿ ಪ್ರತಿಯಾಟ ಹೂಡಿ ತನ್ನೆಲ್ಲಾ ವಸ್ತು, ಆಸ್ತಿ ಕೊನೆಗೆ ತನ್ನನ್ನೂ ಗೆದ್ದಿಕೊಂಡಳೆಂಬ ವಿಷಯ ಈ ಹಾಡು ಬಿಟ್ಟರೆ ಬಹುಶಃ ಶಿಷ್ಟ ಸಾಹಿತ್ಯದಲ್ಲೆಲ್ಲಿಯೂ ಕಾಣಸಿಗದು. ಹೀಗೆ ಬುಲಾಯಿ ಹಾಡಿನಲ್ಲಿ ಹೆಣ್ಣು ಮಕ್ಕಳ ವಿಶಿಷ್ಟ ಕಲ್ಪನೆಗಳು ಅಭಿವ್ಯಕ್ತಗೊಂಡಿದ್ದು, ಮಹತ್ವದೆನಿಸುತ್ತವೆ.

ಇಷ್ಟೆಲ್ಲಾ ಧೈರ್ಯತೋರಿ ಗೆದ್ದರೂ ಸಹ ಧುರಪತಿಗೆ ಬೆಂಕಿ ಪರೀಕ್ಷೆ ತಪ್ಪಲಿಲ್ಲ. ಇದು ಆಗಿನ ಮೌಲ್ಯದ ಪ್ರತೀಕ

ಇಂದ್ರ ಮಡಿಗಳನ್ನುಟ್ಟು ಹೂವಿನಕ್ಷಾಂತಿ ಪಿಡಿದು
ಹರಸಿಂದೆ ಅಗ್ನಿ ಛೀಡದಾಳ ಕೋಲೆಣ್ಣ ಕೋಲೆ .....

ಬೆಂಕಿಯಲ್ಲಿ ಬಿದ್ದರೂ ಒಂದು ಕೂದಲು ಸಹ ಸುಡಲಿಲ್ಲ. ಏಕೆಂದರೆ ಅವಳು ಪತಿವ್ರತೆ, ಹೀಗಾಗಿ ಅದನ್ನು ಸಾಬೀತುಗೊಳಿಸಲು ಅಗ್ನಿಪ್ರವೇಶ.

ಮೂರೆಂಬ ತಾಸಿಗಿ ಹೊರಿಯ್ಯಾಕ ದುರಪತಿ
ಕೂದಲ ಒಂದೂ ಸುಡಲಿಲ್ಲ ಕೋಲೆಣ್ಣ ಕೋಲೆ
ಪತಿವರತಿ ಹಾಡ ಚಿತ್ತಿಟ್ಟು ಕೇಳಿದರ
ಪತಿವರತಿ ತಾನ ಜಯಜಯ ಕೋಲೆಣ್ಣ ಕೋಲೆ
ಧುರಪತಿ ಗರತಿ ಪತಿವರತಿ ಕೋಲೆಣ್ಣ ಕೋಲೆ ....[೨೩]

ಇದು ನಮ್ಮ ಹೆಣ್ಣುಮಕ್ಕಳ ನಂಬುಗೆ 'ಪತಿವರತಿ' ಯಾಗಿದ್ದರೆ ಏನನ್ನಾದರೂ ಸಾಧಿಸಲು ಸಾಧ್ಯವೆಂದು ನಂಬಿದ್ದು ಈ ಹಾಡಿನಲ್ಲಿ ವ್ಯಕ್ತವಾದಂತಿದೆ.

ಹೀಗೆ ಬುಲಾಯಿ ಹಾಡುಗಳಲ್ಲಿ ಸ್ತ್ರೀ ಸಂವೇದನೆಗಳೂ ಕಂಡು ಬರುತ್ತವೆ. ಹೆಣ್ಣಿನ

ದಿಟ್ಟತನ, ನೋವು, ಶೋಷಣೆ ಮುಂತಾದವುಗಳು ಬುಲಾಯಿ ಹಾಡುಗಳಲ್ಲಿದ್ದು, ಅವು ಮಹತ್ವ ಪೂರ್ಣವೆನಿಸುತ್ತವೆ. ಸ್ತ್ರೀ ಪರ ಚಿಂತನೆಗಳು ಜನಪದರಲ್ಲಿಯೂ ಕಂಡುಬರುತ್ತವೆ.

'ಹೆಣ್ಣಿಗೆ ನ್ಯಾಯ ಮಾಡೋಲಿಲ್ಲ', 'ಹುಟ್ಟಿದ ಮನಿಗೀ ಜಯಬಿಲ್ಲ', 'ಚಿಕ್ಕ ಚೆನ್ನಮ್ಮನ ಹಾಡು' ಮುಂತಾದವುಗಳಲ್ಲಿ ಇಂತಹ ವಿಚಾರಗಳು ವ್ಯಕ್ತವಾಗಿರುವುದು ಗಮನಾರ್ಹ ಹೆಣ್ಣಿಗಾಗುವ ಅನ್ಯಾಯವನ್ನು ಬುಲಾಯಿ ಹಾಡಿನಲ್ಲಿ ಈ ರೀತಿಯಾಗಿದೆ.

ಆಲೂಕರ ಹಾದಿಯಿಲ್ಲ ಬೇಲೂರಕ ಬೇಲಿ ಇಲ್ಲ
ಹೈದ್ರಾಬಾದಿಗಿ ಗೌಡನಿಲ್ಲ ಕೋಲೆಣ್ಣ ಕೋಲೆ
ಹೈದ್ರಾಬಾದಿಗಿ ಗೌಡನಿಲ್ಲ ಮರುತ್ಯಾದ ಮ್ಯಾಲ
ಹೆಣ್ಣಿಗಿ ನ್ಯಾಯ ಮಾಡೋದಿಲ್ಲ ಕೋಲೆಣ್ಣ ಕೋಲೆ .....[೨೪]

ಅನೇಕ ಅಂಧ ಶ್ರದ್ಧೆ, ಮೂಢನಂಬಿಕೆಗಳು ಜನಪದರಲ್ಲಿದ್ದು, ಸಮಯ ದಿನ, ಮೂಹರ್ತಗಳಿಗೂ ಅವರು ನಂಬುವುದು ಕಂಡು ಬರುತ್ತದೆ. ಅದಕ್ಕೆಂದೆ ಬುಧವಾರದಿನ ಹೆಣ್ಣು ಮಗು ಹುಟ್ಟಿದರೆ ಮನೆಗೆ ಒಳ್ಳೆಯದಲ್ಲ ಎಂದು, ಮಗಳನ್ನು ಹರಿಯುವ ನೀರಿನಲ್ಲಿ ಬಿಟ್ಟಿ ಬಂದಂತಹ ಕರುಳ ಮಿಡಿಯುವ ಪ್ರಸಂಗ ಕುರಿತಾದ ಹಾಡು ಈ ರೀತಿಯಾಗಿರುವುದು.

ಬುಟ್ಟ ಬುಧವಾರ ದಿನ ಹುಟ್ಟಿತು ಈ ಕೂಸು
ಹುಟ್ಟಿದಾ ಮನಿಗಿನ ಜಯಬಿಲ್ಲ ಕೋಲು ಕೋಲೆ ಕೋಲೆನ್ನಿರೇ
ಹುಟ್ಟಬಿದ ಮನಿಗೀ ಜಯನಿಲ್ಲ ಈ ಕೂಸು
ಬಿಟ್ಟ ಬಗ್ರಿ ಹರಿಯ ಜಲದಾನ ಕೋಲು ಕೋಲೆ ಕೋಲೆನ್ನಿರೇ
ಬಾಳಿ ಎಲಿಯ ತಂದು ಸೀಳಿ ತೆಪ್ಪವ ಮಾಡಿ
ಅದರಾಗ ಕೂಸಿಗೀ ಮನಗಿಸಿ ಕೋಲು ಕೋಲೆ ಕೋಲೆನ್ನಿರೇ
ನಿಂಬಿ ಎಲಿಯ ತಂದು ಥುಂಬಿ ತೆಪ್ಪವ ಮಾಡಿ
ಅದರಾಗ ಕೂಸಿಗಿ ಮನಸಿಗಿ ಕೋಲು ಕೋಲೆ ಕೋಲೆನ್ನಿರೇ
ಅದರಾಗ ಕೂಸಿಗಿ ಮನಸಿಗಿ ಈ ಕೂಸಾ
ಬಿಟ್ಟ ಬಂದಾರ ಹರಿಯೋ ಜಲದಾಗೇ ಕೋಲು ಕೋಲೆ ಕೋಲೆನ್ನಿರೇ ....[೨೫]

"ಚಿಕ್ಕ ಚೆನ್ನಮ್ಮನ ಹಾಡು" ಕಾಳಿಂಗರಾಯನ ಹಾಡೆಂದು ಪ್ರಸಿದ್ಧ ಹೊಂದಿದೆ. ಇಲ್ಲಿ ಆಗೋಮ (ಮದುವೆ ಶಾಸ್ತ್ರ) ಕ್ಕಾಗಿ ತಂದೆಯ ಹಣದಾಸೆಗೆ, ರಾಜ ಪ್ರಭುತ್ವಕ್ಕೆ ಮುಗ್ಧ ಚೆನ್ನಮ್ಮ ಹೆಣದೊಡನೆ ಮದುವೆಯಾಗುವುದು ತುಂಬಾ ಹೃದಯ ದ್ರಾವಕವಾಗಿದೆ. ಬುಲಾಯಿ ಹಾಕುತ್ತಾ ಹಾಡುವಾಗ ಇದನ್ನು ಮೂರು ರೀತಿಯಲ್ಲಿ ಧ್ವನಿ ಬದಲಾಯಿಸಿ ಹಾಡುವುದು ಬಹಳ ವಿಶಿಷ್ಟವಾಗಿದೆ.

ಮಕ್ಕಳಿಲ್ಲವೆಂದು ಹಂಬಲಿಸುವ ಮದರಂಬಿಯು ಬಂಜೆಂಬ ಶಬುದ ಬಿಡಿಸಲು ಮಡಿಯುವ ಮಗನಾದರೂ ಸಲಿಯೆಂದು ಶಿವಪಾರ್ವತಿಯರಲ್ಲಿ ವರ ಪಡೆದುಕೊಂಡು ಬರುತ್ತಾಳೆ.

ಆರ ಕಂಬದ ನಡುವೆ ವಾಲಿ ಮಂಚವ ಹಾಕಿ
ಅತ್ತಿ ಬಂದಾರ ಮಂಚ ಇಳಿವಳ್ಳ ಮದರಂಬಿ
ನಿನಗಿಲ್ಲ ಹೋಗ ಫಲಗಳು ಕೋಲು ಕೋಲೆ...

ಯಾಕ ಅಳತೆ ಮದರಂಬಿ ಎಂತ ಅಳತೆ ಮದರಂಬಿ
ಯಾಕ ಅಳತೆ ನಮಗ್ಹೇಳ ಕೋಲು ಕೋಲೆ .....[೨೬]

ಹೀಗೆ ಪ್ರಾರಂಭವಾಗುವು ಹಾಡು ಕಾಳಿಂಗರಾಯ ಹುಟ್ಟುವವರೆಗೆ, ಬೇಟೆಗೆ ಹೋಗಿ ಚಿತ್ರದ ಹುಲಿಕಂಡು ಸಾಯುವವರೆಗೆ, ಅಲ್ಲಿಂದ ಚೆನ್ನಮ್ಮನನ್ನು ತಂದು ಆಗೋಮ ಮುಗಿಸುವವರೆಗೆ ಮುಂದೆ ಕಿಚ್ಚು ಕೊಡಲು ಹೋದಾಗ ಮಳೆ ಬಂದು ಎಲ್ಲಾ ಜನರು ಓಡಿ ಹೋಗುವತನಕ ಒಂದೇ ರೀತಿಯಲ್ಲಿ ಹಾಡುವುದು ಕಂಡುಬರುತ್ತದೆ. ತದನಂತರ ಮಣ್ಣಿನ ಬಸವಣ್ಣನ ಮೂರ್ತಿಯನ್ನು ಮಾಡಿ ಚನ್ನಮ್ಮ ತನ್ನ ದುಃಖವನ್ನೆಲ್ಲಾ ಹೇಳಿಕೊಳ್ಳುವಾಗ ಧ್ವನಿ ಬದಲಾಯಿಸಿ ಮತ್ತೊಂದು ರೀತಿಯಲ್ಲಿ ಹಾಡುವುದು ಕಂಡುಬರುತ್ತದೆ.

ಬಸವಣ್ಣನ ಮಾಡ್ಯಾಳೆ ಮನಸಿನ ದುಃಖ
ಹಾಡ ಮಾಡಿ ಹಾಡೇಳ ಕೋಲ

ಸೀರಿಯ ತಂದಾರ ಬಸವಾ
ನನ್ನ ಮುಂದೆರೆ ಇಟ್ಟಾರ ಬಸವಾ
ನಾನೇ ಉಟ್ಟಿಕೊಂಡೆ ಬಸವಾ
ನನಗ ಉಡಿಸೋರು ಯಾರಿಲ್ಲ ಬಸವಾ .....[೨೬]

ತನ್ನೆಲ್ಲಾ ದುಃಖವನ್ನು ಹೇಳಿಕೊಂಡ ಮೇಲೆ ಮತ್ತೆ 'ಹಣೆಬರಕ್ಕೆ ಧ್ವನಿಬದಲಾಯಿಸಿ ಈ ರೀತಿ ಹಾಡುತ್ತಾರೆ.

ಇಟೆಲ್ಲಾ ಹೇಳುತ್ತಾ ದುಃಖವ ಮಾಡುತ್ತಾ
ನನದೆಂಥ ಹಣೆಬಾರ ಕೋಲೆ.....[೨೬]

ಎಂದು ಹೆಣದೊಂದಿಗೆ ಮದುವೆಯಾಗುವ ಅವಳ ನೋವು ಕಲ್ಲೆದೆಯನ್ನೂ ಕರಗಿಸುವಂತಹದು. ಮದುವೆಯಾಗದೆ ಸತ್ತರೆ ಮದುವೆ ಶಾಸ್ತ್ರ ಮುಗಿಸಿ (ಆಗೋಮ ಮಾಡಿ) ಶವವನ್ನು ಸುಡಬೇಕು ಅಥವಾ ಸಂಸ್ಕಾರ ಮಾಡಬೇಕೆಂಬ ನಂಬಿಕೆ ಮುಗ್ಧ ಚನ್ನಮ್ಮನಿಗೆ ಹೆಣದ ಜೊತೆ ಮದುವೆಯಾಗುವಂತೆ ಮಾಡುತ್ತದೆ. ಚೆನ್ನಮ್ಮನ ತಂದೆಗೆ ಹಣ ದೊರೆಯುತ್ತದೆಂಬ ಆಸೆ. ಕಾಳಿಂಗನ ತಂದೆಗೆ 'ನಮ್ಮ ಮನೆಯಲ್ಲಿ ಹೊನ್ನಿಲ್ಲವೆ' ಎಂಬ ದರ್ಪ ಹೀಗಾಗಿ ಈ

ಸನ್ನಿವೇಶದಲ್ಲಿ ಬಲಿಯಾಗಬೇಕಾದುದು ಹೆಣ್ಣು ಹೀಗೆ ಸಮಾಜದ ಒಳಿತು ಕೆಡುಕಿಗಳಿಗೆಲ್ಲಾ ಹೆಣ್ಣನ್ನೇ ಬಲಿ ಮಾಡುವ ಪದ್ಧತಿಯು ನಮಗೆ ಈ ಹಾಡಿನಲ್ಲಿ ಗೋಚರಿಸುತ್ತದೆ. ಜೊತೆಗೆ ಆಯಾ ಕಾಲದ ರೀತಿ, ನೀತಿ ನಂಬುಗೆಗಳನ್ನು ಸಹ ಈ ಹಾಡುಗಳಲ್ಲಿ ತಿಳಿದುಬಹುದು. ಇಂದಿಗೂ ಮದುವೆಯಾಗದೆ ಸತ್ತ ಮಕ್ಕಳಿಗೆ ಎಕ್ಕೆ ಗಿಡದೊಂದಿಗೆ ಮದುವೆ ಶಾಸ್ತ್ರ ಮುಗಿಸಿಯೇ ಶವ ಸಂಸ್ಕಾರ ಮಾಡುವುದು ಕಂಡುಬರುತ್ತದೆ. ಆದರೆ ನಿಜವಾಗಿಯೂ ಒಂದು ಮುಗ್ಧ ಹೆಣ್ಣಿಗೆ ಹೆಣದೊಂದಿಗೆ ಮದುವೆ ಮಾಡಿ, ಅರಣ್ಯದಲ್ಲಿ ಹೆಣದೊಂದಿಗೆ ಒಬ್ಬಳನ್ನೇ ಬಿಟ್ಟು ಬರುವ ಪ್ರಸಂಗವು ಹೆಣ್ಣಿನ ಶೋಷಣೆಯ ಪರಾಕಾಷ್ಠತೆಯನ್ನು ತೋರುತ್ತದೆ.

ಬುಲಾಯಿ ಹಾಡುಗಳಲ್ಲಿ 'ಹಾದರದ ಹಾಡು' ಬಹಳ ವಿಶಿಷ್ಟವೂ ಬಹು ವಿಷಯಗಳ ಆಗರವೂ ಎನಿಸುತ್ತದೆ. ನಮ್ಮ ಹೆಣ್ಣು ಮಕ್ಕಳು ಸಹಜವಾಗಿ ಕಟ್ಟಿ ಹಾಡಿದ ಈ ಹಾಡಿನಲ್ಲಿ ಹಾದರದ ಬಗ್ಗೆ ತಿಳಿಯಬಯಸಿದ ಗೌರಿಗೆ, ಶಿವನು ತಿಳಿಸಿದ ರೀತಿ ಮನೋಜ್ಞವಾಗಿದೆ. ಜೊತೆಗೆ ಸೂಳೆಗಾರಿಕೆ, ಶಿವಸಿಂಪಿ ಕುಲ ಹಾಗೂ 'ಲಜ್ಜಾ ಗೌರಿ' ಮುಂತಾದ ವಿಷಯಗಳ ಮೇಲೂ ಬೆಳಕು ಚೆಲ್ಲುವಂತಿದೆ. ಈ ಹಾಡುಪ್ರಾರಂಬವಾಗುವುದು ಈ ರೀತಿಯಾಗಿದೆ.

ಶಿವನು ಸಿರಿಗೌರಮ್ಮ ನಂದೀಯ ಏರಿಕೊಂಡು
ಆರ್ಯಾಣದ ಹಾದಿ ಹಿಡದಾರ ರನ್ನದಾ ಕೋಲು ಕೋಲೆ
  ಆರ್ಯಾಣದ ಹಾದಿ ಹಿಡಿದಂತ ವ್ಯಾಳೆದಲ್ಲಿ
  ಹಾದರದ ಹೆಣ್ಣ ಎದುರಾಗಿ ರನ್ನದ ಕೋಲು ಕೋಲೆ
ಹಾದರನೆಂಬುದು ಅದು ಎಂತಹದಿರುವುದು
ತೋರಿಸಿಕೊಡರಿ ನಮಗಿಷ್ಟು ರನ್ನದಾ ಕೋಲು ಕೋಲೆ
  ಹಾದರನೆಂಬುದು ಹಾಲಮ್ಯಾಲಿನ ಕೆನಿಯೆ
  ಭ್ಯಾಡ ಸಿರಿಗೌರಿ ಭಂಡಾಟ ರನ್ನದಾ ಕೋಲು ಕೋಲೆ
ಭಂಡನಾದರಾಗಲಿ ತಲಿಯ ಒಡಿದು ಹೋಗಲಿ
ನಡು ಬೀದ್ಯಾಗ ರಕುತ ಹರಿಯಲಿ ರನ್ನದಾ ಕೋಲು ಕೋಲೆ ....[೨೯]

ಶಿವ-ಪಾರ್ವತಿ ನಂದಿಯ ಮೇಲೆ ಬರುವಾಗ ಅರಣ್ಯದಲ್ಲಿ ಹಾದರದ ಹೆಣ್ಣು ಎದುರಾಗುತ್ತಾಳೆ. 'ಹಾದರ' ಎಂಬ ಪದ ಕೇಳಿದ ಗೌರಿ ಹಾಗೆಂದರೇನು ? ಎಂದು ಕೇಳುತ್ತಾಳೆ. ಅದಕ್ಕೆ ಶಿವನು ಅದು ಹಾಲ ಮೇಲಿನ ಕೆನೆಯಂತೆ, ಅದನ್ನು ಬಿಟ್ಟು ಬಿಡು, ಅದು 'ಭಂಡಾಟ' ಎಂದು ತಿಳಿಸಿ ಹೇಳಿದರೂ ಕೇಳದೆ ಹಠ ಹಿಡಿಯುತ್ತಾಳೆ. ಆಗ ಶಿವ ನಾನು ಆರೆಂಟು ವರುಷ ಬರುವುದಿಲ್ಲ 'ಗದ್ದಿಗಿ' ಜೋಕೆ ಎಂದು ಹೇಳಿ ಹೋಗುತ್ತಾನೆ. ಬಾಳಿಯ ಬನಕ್ಕೆ ಹೋಗಿ ಅದರ ಎಲೆಯಿಂದ ಇಲಿ ಮಾಡಿ 'ಶಿವನ ಗದ್ದುಗಿ' ನುಚ್ಚು ನೂರಾಗಿ ಹೋಗುವಂತೆ ಮಾಡುತ್ತಾನೆ. ನಂತರ ಶಿವ ತಾನೇ ಬಂಗಾರ ಸೂಜಿ, ರೇಶಮಿದಾರದೊಂದಿಗೆ ಸಿಂಪಿಗನ ವೇಷಧರಿಸಿ ಒಕ್ಕಲಗೇರಿಯಲ್ಲಿ 'ಹರಿದ ಅರಬಿಗಳು ಹೊಲಸಿರಿ' ಎಂದು ಹೇಳುತ್ತಾ ಸುಳಿಯುತ್ತಾನೆ. ಆಗ

ಗೌರಿ ಓಡಿ ಹೋಗಿ ಸಿಂಪಿಗರಣ್ಣಾ ಎಂದು ಕರೆಯುತ್ತಾಳೆ. ಅದಕ್ಕೆ ಶಿವನು ಅಪ್ಪಾ, ಅಣ್ಣಾ ಅನ್ನ ಬೇಡ 'ಶಿವಸಿಂಪಿಗ' ಎಂದು ಕರೆಯೆನ್ನುತ್ತಾನೆ. ಅದಕ್ಕೆ ಒಪ್ಪಿದ ಗೌರಿಯು ಅವನಿಗೆ

ಹ್ಯಾಂಗ ಇದ್ದ ಕಂತಿ ಹಂಗೇ ನೀ ಮಾಡಿದರ
ಬೇಡಿದ ಕೂಲಿ ಕೊಡುತ್ತೀನಿ ರನ್ನದಾ ಕೋಲು ಕೋಲೆ
ಹ್ಯಾಂಗಿದ್ದ ಕಂತಿ ಹಂಗೇನಾ ಮಾಡುತಿನಿ
ಬೇಡಿದ ಕೂಲಿ ಕೊಡು ನನಗ ರನ್ನದಾ ಕೋಲು ಕೋಲೆ ....[೩೦]

ಎಂದು ಅದನ್ನು ಮೊದಲಿನಂತೆ ಮಾಡುತ್ತಾನೆ. ಆಗ ಗೌರಿ ಸಂತೋಷಗೊಂಡು ಮರದ ತುಂಬ ಮುತ್ತು, ಹರಿವಾಣದ ತುಂಬ ಹವಳ, ತೆಕ್ಕಿ ತುಂಬ ಬೆಳ್ಳಿ - ಬಂಗಾರ ಕೊಡಲು ಹೋದಾಗ ಸಿಂಪಿಗ ಅವುಗಳನ್ನು ನಿರಾಕರಿಸುತ್ತಾನೆ. ಇದರಿಂದ ಬೇಸತ್ತ ಗೌರಿ ಒಳಗೆ ಹೋಗಿ ಕಾಜಿನ ಕಂಬಕ ಮುಖಮಾಡಿ ಅಳುತ್ತಾಳೆ. ಆಗ ತನ್ನಕ್ಕೆ ತಾನು ಹೀಗೆನ್ನುತ್ತಾಳೆ.

ವಾರತಿ ಉಳ್ಳವರ ಮಗಳ ಕಿರುತಿ ಉಳ್ಳವರ ಸೊಸಿ
ಬಟ್ಟಿ ಹೊಲಿಯಣ್ಣನ ಬರಿಮಾತೇನು ರನ್ನದಾ ಕೋಲು ಕೋಲೆ
ಬಟ್ಟೆಯು ಹೊಲಿಯುವವ ಬರಿ ಮಾತು ಆಡುವಂತೆ
ಬರದಿತ್ತ ಏನೇ ಹಣೆ ಬರದಲ್ಲಿ ರನ್ನದಾ ಕೋಲು ಕೋಲೆ .....[೩೧]

ಅವಳು ಅಳುತ್ತಿದ್ದಾಗ ಸಿಂಪಿಗ ಶ್ಯಾವಿಗಿ ಹಾಕಿ ಸಕ್ಕರಿ ಹರವಿ, ಶಿವ ಉಂಡ ಗಂಗಾಳ ನನಗೆ ಕೊಡಬೇಕು. ಮಂಚವ ಹಾಕಿ ಮಲ್ಲಿಗಿ ಹರವಿ ಇಬ್ಬರೂ ಅದರ ಮ್ಯಾಲ ಕೂಡಬೇಕು ಎಂದು ಬೇಡುತ್ತಾನೆ. ಅದಕ್ಕೆ ಗೌರಿ.

ಕುಂತರ ಕೂಡಲಿ ನಿಂತರ ನಿಲ್ಲಲಿ
ಶಿವಬಂದ ಮ್ಯಾಲ ಹೇಳಬ್ಯಾಡ ರನ್ನದಾ ಕೋಲು ಕೋಲೆ

ಎನ್ನುತ್ತಾಳೆ. ಅದಕ್ಕೆ ಒಪ್ಪಿದ ಸಿಂಪಿಗ ಮುಂದೆ

ಹಾದರನೆಂಬುದು ಅದು ಎಂಥದೆನ್ನುತ
ಹ್ಯಾಂಗದ ಸಿರಿಗೌರಿ ಅನುತಾರ ಕನ್ನದಾ ಕೋಲು ಕೋಲೆ
ಹ್ಯಾಂಗದ ಸಿರಿಗೌರಿ ಭಂಡಾಟ ಎನುತಲಿ
ಶಿವಬಂದ ಎದುರಲಿ ರನ್ನದಾ ಕೋಲು ಕೋಲೆ
ಈ ಶಬುದ ಕೇಳ್ಯಾಳೆ ಭೂಮಿಯ ಬಡದಾಳೆ
ಶಿವಬಂದ ಎದುರಲಿ ರನ್ನದಾ ಕೋಲು ಕೋಲೆ
ಈ ಶಬುದ ಕೇಳ್ಯಾಳೆ ಭೂಮಿಯ ಬಡದಾಳೆ
ಭೂಮಿಯ ಒಳಗೆ ಇಳದಾಳೆ ರನ್ನದಾ ಕೋಲ ಕೋಲೆ ...[೩೨]

ಈ ರೀತಿಯಾಗಿ ಶಿವನು ಗೌರಿಗೆ 'ಹಾದರದ' ಪರಿಚಯವನ್ನು ಮಾಡಿಕೊಟ್ಟ ಘಟನೆಯು

ಚಿತ್ರಿತವಾಗಿದೆ. ಅದರೊಂದಿಗೆ ಶಿವನೇ ಸಿಂಪಿಯಾಗಿ ಬಂದ ಕಾರಣ, ಅದೊಂದು ಪಂಗಡ ಹುಟ್ಟಿದ ಪ್ರಸಂಗವು ಇದರಿಂದ ತಿಳಿದು ಬರುತ್ತದೆ. ಇಂದು 'ಶಿವಸಿಂಪಿ' ಪಂಗಡವು ನಮ್ಮಲ್ಲಿರುವುದು ಗಮನಾರ್ಹ. ಅಂತಹದ್ದೆ ಮಹತ್ವ ಪೂರ್ಣವಾದ 'ಲಜ್ಜಾಗೌರಿ' ಪ್ರಸಂಗವನ್ನು ವಿವರಿಸುವ ಜನಪದ ಕಥೆಯನ್ನು ಇದು ಪ್ರತಿಪಾದಿಸುವಂತಿದೆ. "ಸಿಂಪಿಗನು ನಿಜರೂಪದಲ್ಲಿ ಪ್ರತ್ಯಕ್ಷನಾದ. ಇದನ್ನು ನೋಡಿದ ಪಾರ್ವತಿಗೆ ಅತಿಶಯ ಲಜ್ಜೆಯುಂಟಾಗಿ ಕೆಳಗೆ ಹಾಕಿದ ಶಿರ ಕರಗಿಯೇ ಹೋಯಿತು. ಧಡವು ಮಾತ್ರ ಅದೇ ಅವಸ್ಥೆಯಲ್ಲಿ ಉಳಿದು ಬಿಟ್ಟಿತ" [೩೩] ಎಂಬ ಡಾ॥ ಜ್ಯೋತ್ಸ್ನಾ ಕಾಮತರ ಅಭಿಪ್ರಾಯ 'ಲಜ್ಜಾಗೌರಿ' ಅವಸ್ಥೆ ಹಾಗೂ ಚಿತ್ರಣಗಳನ್ನು ಬಿಂಬಿಸುತ್ತದೆ. ಹಾಗೇ 'ಲಜ್ಜಾಗೌರಿ' ಪ್ರಸಂಗವನ್ನು ತಿಳಿಸುವಂತಿದೆ. 'ಲಜ್ಜಾಗೌರಿ ಎಂಬ ವಿಲಕ್ಷಣ ವಿಗ್ರಹ ಶಿಷ್ಟಪದರ ಸೌಮ್ಯ ದೇವತೆಗಳಿಂದಲೂ, ಜಾನಪದರ ಉಗ್ರ ದೇವತೆಗಳಿಂದಲೂ ಇದು ಪ್ರತ್ಯೇಕವಾಗಿ ನಿಲ್ಲುವ ದೇವತೆ. ಜಾನಪದರು ಲಜ್ಜಾಗೌರಿ ವಿಗ್ರಹದ ಬಗೆಗೆ ಪ್ರತ್ಯೇಕ ಅನಿಸಿಕೆ, ನಂಬಿಕೆಗಳನ್ನು ಬೆಳೆಸಿಕೊಂಡು ಬಂದಿರುವುದು ಸಹಜ. ಇವುಗಳಲ್ಲಿ ಸರ್ವಸಾಮಾನ್ಯ ನಂಬಿಕೆಯೆಂದರೆ ಲಜ್ಜಾಗೌರಿ ಮಕ್ಕಳ ಫಲಕೊಡುವ ದೇವತೆ ಎಂಬುದು" [೩೪] ಎಂಬ ಡಾ॥ ಎಂ.ಎಂ. ಕಲಬುರ್ಗಿಯವರ ಅಭಿಪ್ರಾಯ ಗಮನಾರ್ಹ.

ಈ ರೀತಿಯಾಗಿ ಬುಲಾಯಿ ಹಾಡುಗಳಲ್ಲಿ ವಿವಿಧ ವಿಷಯಗಳನ್ನು ಹೆಕ್ಕಿ ತೆಗೆಯಬಹುದಾಗಿದೆ. ಅವು ಆಳವಾದ ಸಮುದ್ರದಂತಿದ್ದು, ಅಮೂಲ್ಯವಾದ ವಿಷಯ ಸಂಪತ್ತಿನ ಆಗರದಂತೆ ಕಂಡುಬರುತ್ತವೆ. ಹೀಗಾಗಿ ಬುಲಾಯಿ ಹಾಡುಗಳು ಅತ್ಯಂತ ಮಹತ್ವದ್ದಾಗಿದ್ದು, ವಿಶಿಷ್ಟವೆನಿಸುತ್ತವೆ.

ಬುಲಾಯಿ ಹಾಡುಗಳನ್ನು ಮುಮ್ಮೇಳ ಹಿಮ್ಮೇಳದಲ್ಲಿ ಹಾಡಲಾಗುತ್ತದೆ. ಹಾಡುಗಳು ಅತಿ ಚಿಕ್ಕವೆಂದರೆ ೮ ರಿಂದ ೧೦ ನುಡಿಗಳಿಂದ, ದೊಡ್ಡವಾದರೆ 100 ರಿಂದ 200 ನುಡಿಗಳವರೆಗೂ ಕಂಡುಬರುತ್ತವೆ. ದುರುಪತಿ ಹಾಡು, ಹರಿಚಂದ್ರನ ಹಾಡು, ಕಾಳಿಂಗರಾಯನ ಹಾಡು, ರಜಾಕಾರರ ಹಾಡು, ಧರ್ಮ ಪ್ರಕಾಶರ ಹಾಡು, ಹೇಮರಡ್ಡಿ ಮಲ್ಲಮ್ಮನ ಹಾಡು ಅತೀ ಹೆಚ್ಚು ನುಡಿಗಳಿಂದ ಕೂಡಿದ್ದರೆ, 'ಧೋರಿ ಮಗನ ಹಾಡು', 'ಗಜಮುಖನ ಹಾಡು', ಚೆಂಗಳೆವ್ವನ ಹಾಡು ಮುಂತಾದವು ಅತಿ ಚಿಕ್ಕ ಹಾಡುಗಳೆನ್ನಬಹುದು.

ಹಾಡಿನ ಪಾದಗಳು ಕೆಲವು ಹಾಡುಗಳಲ್ಲಿ ಪುನರಾವರ್ತನೆಗೊಳ್ಳುತ್ತವೆ.

ಉದಾ :

ಊರನೆ ಹೊರಗೊಂದು ಆಲದ ಗಿಡನಾದ
ಬೇರ ಬೇರಲ್ಲ ತಿಳಿನೀರ ಕೋಲು ಕೋಲೆ
ಬೇರ ಬೇರಲ್ಲ ತಿಳಿನೀರು ತುಂಬೊವಳಗ
ಅತ್ತಿಂದ ಬಂದ ಧೋರಿ ಮಗ ಕೋಲು ಕೋಲೆ
ಅತ್ತಿಂದ ಬಂದ ಧೋರಿಮಗ ಅನ್ನುತ
ಬಾಲಿ ನಿನ್ನ ಕೊಡ ಎತ್ತಲೇನ ಕೋಲು ಕೋಲೆ....[೩೫]

ಇದರಲ್ಲಿ ಎರಡನೆಯ ಸಾಲು ಪುನರಾವರ್ತನೆಯಾಗುವದು ಕಂಡುಬರುತ್ತದೆ. ಕೆಲವು ಹಾಡುಗಳು ಸಂಭಾಷಣಾ ರೂಪದಲ್ಲಿರುವುದು ಕಂಡುಬರುತ್ತದೆ.

ಪಂತ ಎತ್ತಿ ಋಷಿ ಹೋದ ಹರಿಚಂದರನ ಬದಲಿಬಂದ
ದಾನ ನೀಡಂತ ಬೇಡಿದ ಕೋಲೆಣ್ಣ ಕೋಲೆ
ಏನ ಬೇಡುತ್ತಿ ಬೇಡು ಬೇಡಿದ ಕೊಡುವೆ ನಾನು
ಏನೇನು ಬ್ಯಾಡ ಅನುಮಾನ ಕೋಲೆಣ್ಣ ಕೋಲೆ
ಆನೆಯ ನಿಲ್ಲಿಸಿ ದ್ರವ್ಯರಾಶಿಯ ತರಿಸಿ
ಅದರೆತ್ತಲೆನಗೆ ಅರಪುಸರಿ ಕೋಲೆಣ್ಣ ಕೋಲೆ ....[೩೭]

ಬೆಗಳೆಣಿಕೆಯಂತಹ ಕೆಲವು ಬುಲಾಯಿ ಹಾಡುಗಳು ಕಥನ ಕವನಗಳಾಗಿದ್ದು, ಸರಳ ರಗಳೆಯಂತೆ ಕಂಡುಬರುತ್ತವೆ.

ಕಲಶೆಟ್ಟಿ ಮನಿಮುಂದೆ ಹನ್ನೆರಡು ಆರಿನ ಎತ್ತೊ ಕೋಲು ಕೋಲೆ
ಹನ್ನೆರಡು ಆರಿನ ಎತ್ತೊ ಹನ್ನೆರಡು ಖಂಡಗ ಜ್ವಾಳ ಕೋಲು ಕೋಲೆ
ಭರಭರ ಒಡೆದಾರೆ ಎತ್ತುಗಳಿಗೆ ಹಾಕಿದಾರ ಕೋಲು ಕೋಲೆ
ಎತ್ತುಗಳು ತಿಂದವ ಎತ್ತುಗಳು ಸತ್ತವಾ ಕೋಲು ಕೋಲೆ
ಅಣ್ಣನ ಹೊಲ ಬೆಳದಿಲ್ಲ ತಮ್ಮನ ಹೊಲ ಬೆಳೆದಿತ್ತು ಕೋಲು ಕೋಲೆ
ತಮ್ಮನ ಹೊಲಕ ಅಣ್ಣ ಕೂಲಿಗೆ ಹೋದ ಕೋಲು ಕೋಲೆ
ಕೂಲಿಯಾರ ಮಾಡ್ಯಾನ ಸೇರ ಜ್ವಾಳ ತಂದಾನ ಕೋಲು ಕೋಲೆ
ಸೇರ ಜ್ವಾಳ ತಂದಾನ ಮಡದಿ ಕೈಲಿ ಕೊಟ್ಟಾನ ಕೋಲು ಕೋಲೆ
ಫಕಫಕ ಬುಕ್ಯಾರ ರೊಟ್ಟಿ ರೊಟ್ಟೆಂತ ಅಳತ್ತಾರ ಕೋಲು ಕೋಲೆ.....[೩೮]

ಹೆಚ್ಚಾಗಿ ಬುಲಾಯಿ ಹಾಡುಗಳು ದ್ವಿಪದಿಯಲ್ಲೇ ಇರುವುದು ಕಂಡು ಬಮದರೂ, ಕ್ವಚಿತ್ತಾಗಿ ಅಲ್ಲೊಂದು ಇಲ್ಲೊಂದು ಒಂದೇ ಸಾಲಿನ ಸರಳ ರಗಳೆಯಂತೆ ಕಂಡುಬರುವುದು ವಿಶಿಷ್ಟವೆನಿಸುತ್ತದೆ. ಇವು ಹೆಚ್ಚಾಗಿ ಹಳ್ಳಿಯ ಹೆಣ್ಣುಮಕ್ಕಳ ರಚನೆಗಳಾಗಿದ್ದರಿಂದ ನೇರನುಡಿ, ಜಿಚ್ಚುಮಾತು, ಭಾಷಾದೋಷಗಳು ಕಂಡುಬರುತ್ತವೆ. ಆದರೆ ಗಂಡಸರು ಅದರಲ್ಲೂ ವಿದ್ಯಾವಂತರು ಬರೆದವುಗಳಲ್ಲಿ ಶಿಷ್ಟತೆ ಕಂಡುಬಂದರೂ, ಭಾಷೆಯಲ್ಲಿ ಮಾತ್ರ ಆಡುನುಡಿಯ ಪ್ರಾಧಾನ್ಯತೆ ಎರಡರಲ್ಲಿಯೂ ಇರುವುದು ಗಮನಾರ್ಹ.

ಉದಾ :

ಶ್ಯಾವಕ್ಕಿ ಕುಟ್ಟಂದರ ಸೆರಗಹಾಕಿ ಮನಗ್ಯಾಲೋ
ಎಬ್ಬಿಸು ಎಣ್ಣಾ ಮಡದಿಗಿ ಕೋಲೆಣ್ಣ ಕೋಲೆ

ಮಡದಿಗಿ ಎಬ್ಬಿಸಿದರ ಅರನಿದ್ದಿ ಆಯ್ತಾದ
ಎರಡೊಬ್ಬಿ ಹಾಕಿ ತೆಗಿ ತಂಗಿ ಕೋಲೆಣ್ಣ ಕೋಲೆ
ಎರಡೊಬ್ಬಿ ಮಾಡಿದರ ಭರಡಕ್ಕಿ ಆಯ್ತಾವ
ಎಬ್ಬಿಸು ಎಣ್ಣಾ ಮಡದಿಗಿ ಕೋಲೆಣ್ಣ ಕೋಲೆ
ಎತ್ತರ ತರಸಣ್ಣಾ ಮುಟ್ಟದ ಬಿಗಿಯಣ್ಣಾ
ಹೊತ್ತುಟ್ಲೆ ನಮಗ ಖಳರೆಣ್ಣ ಕೋಲೆಣ್ಣ ಕೋಲೆ ...[೩೮]

ಈ ಹಾಡು ಹೆಣ್ಣುಮಕ್ಕಳ ರಚನೆಯೆನ್ನುದು ಸ್ಪಷ್ಟವಾಗಿ ಬಳಸಿದ ಪದ ನೇರನುಡಿಗಳಲ್ಲಿ ವ್ಯಕ್ತವಾದದದ್ದು ಗಮನಾರ್ಹ. ಕುಟ್ಟಂದರ, ಮನಗ್ಯಾಲೊ, ಎಣ್ಣಾ, ಹೊತ್ತುಟ್ಲೆ, ಖಳರಣ್ಣಾ ಇತ್ಯಾದಿ.

ಮಾಯಾ ಮುಸ್ಕಿದೊಳ ಮುಚ್ಚಿ ಮೊಣ್ಣಿನ ದೇಹಕ್ಕೆ ಮೆಚ್ಚಿ
ಇದಕೆ ನೀ ಹಿಡದಿದೀ ಫಚ್ಚಿ ಕೋಲ ಕೋಲ
ಯಮನ ಬಲಿಯೊಳು ಸಿಗುತಿ ನಿನಗಿಲ್ಲಾ ಇದುಸ್ಮರ್ತಿ
ಗವದಾದೋ ಮಂದಮತಿ ಕೋಲ ಕೋಲ
ಕ್ಷಣ ಹೊತ್ತಿನ ಈ ಸಂತಿ ಸತ್ಯ ತಿಳಿದು ಕುಂತಿ
ನಿನಗೆಂದಾ ದೊರದತು ಮುಕ್ತಿ ಕೋಲ ಕೋಲ
ಜಡ ದೇಹಕೆ ನಾನಂತಿ ನಿನಗೆ ಮರ್ತಿ ಕುಂತಿ
ಎಂದ ಹೋದತು ನಿನ್ನ ಭ್ರಾಂತಿ ಕೋಲ ಕೋಲ
ಭವಸಾಗರ ಎಂಬಾ ಮರುವು ಇದರೊಳ ಇಲ್ಲಾ ಅರವು
ಮುಳಗ್ಯಾರೋ ಬಹುಜನರೂ ಕೋಲ ಕೋಲ
ವ್ಯರ್ಥ ಕಳಿಬೇಡ ಹೊತ್ತು ನಾನ್ಯಾರೆಂಬುದು ಗೊತ್ತು
ಜಲದಿ ಮಾಡಿಕೋ ಗುರ್ತು ಕೋಲ ಕೋಲ
ಜಡದೇಹಾ ನೀನಲ್ಲಾ ಜಡದೇಹಾ ನಿಂದಲ್ಲಾ
ಮರುರೂಪ ನೀನಲ್ಲಾ ಕೋಲ ಕೋಲ
ಆರು ರೂಪ ನೀನೇ ನೋಡೋ ಅನುಮಾನ ಮಾಡಬೇಡೋ
ದೇಹಕೆ ಬಿಟ್ಟಿರು ನೋಡೋ ಕೋಲ ಕೋಲ
ನಾಮ ರೂಪವು ಎಲ್ಲಾ ನಾಗನಾಥ ಪ್ರಭಾಕರಲ್ಲಾ
ಗುರು ಪುತ್ರಾದವನೇ ಬಲ್ಲಾ ಕೋಲ ಕೋಲ .....[೩೯]

ಇದು ಹಾಡಿನಲ್ಲಿ ತಿಳಿಸಿದಂತೆ ನಾಗನಾಥ ಪ್ರಭಾ ಹಳ್ಳಿಖೇಡ ಇವರ ರಚನೆಯಾಗಿದ್ದು, ಬೀದರ ಭಾಷೆಯು ಕಂಡುಬರುತ್ತದೆ.

ಒಂದೇ ವಿಷಯ ಅಥವಾ ಘಟನೆ ಕುರಿತಾಗಿ ಬೇರೆ ಬೇರೆ ಊರುಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಹಾಡುವುದು ಕಂಡುಬರುತ್ತದೆ. ಇಲ್ಲಿ ಪಾಠಾಂತರವಿರಬಹುದು, ನುಡಿಗಳಲ್ಲಿ ವ್ಯತ್ಯಾಸವಿರಬಹುದು. ಆದರೆ ಭಾವ ಬಂಧದಲ್ಲಿ ಒಂದೇ ಎಂಬುದು ಗಮನಿಸಬೇಕಾದ ಅಂಶವಾಗಿದೆ.

ಉದಾ:

ಹೇಮರಡ್ಡಿ ಮಲ್ಲಮ್ಮನ ಹಾಡು
ಶ್ರೀ ಗುರು ರಾಯನ ಬೇಗನ ಬೇಡಿಕೊಂಬೆ
ನಾಗಭೂಷಣನ ನಮಿಸುವೆ ಕೋಲೆಣ್ಣ ಕೋಲೆ
ನಾಗನೇ ಭೂಷಣನ ಗೌರಿಯ ರಮಣನ
ಭಾಗ್ಯದಲ್ಲಿ ಹಾಡಿ ಹರಿಸುವೆನು ಕೋಲೆಣ್ಣ ಕೋಲೆ
ಸದ್ಭಕ್ತಿ ಶರಣೆಯರು ಶಿವಭಕ್ತಿ ಮಹಾತ್ಮೆಯರು
ಚಿತ್ತಿಟ್ಟು ಕೇಳರಿ ಕತಿಯನ್ನು ಕೋಲೆಣ್ಣ ಕೋಲೆ
ಮಕ್ಕಳು ನಾಲ್ವರು ಒಕ್ಕಲು ಮಾಡ್ವರು
ಶಿವರಡ್ಡಿ ಬಸವರಡ್ಡಿ ಹಿರಿಯರು ಕೋಲೆಣ್ಣ ಕೋಲೆ
ಅಮರೆಡ್ಡಿ ಬ್ರಹ್ಮರೆಡ್ಡಿ ಅವರಿಬ್ಬರು ಸಣ್ಣವರು
ನಾಕುಮಂದಿ ಮದುವೆ ಮಾಡುವರು ಕೋಲೆಣ್ಣ ಕೋಲೆ
ನಾಗಮ್ಮ ನಿಂಗಮ್ಮ ಬಸಮ್ಮ ಮಲ್ಲಮ್ಮ
ಕೂಡಿ ನಡದಾರ ಕುಟುಂಬ ಪ್ರೇಮ ಕೋಲೆಣ್ಣ ಕೋಲೆ ...[೪೦]

ಹೀಗೆ ೧೦೬ ನುಡಿಗಳಲ್ಲಿ ಮಲ್ಲಮ್ಮನ ಭಕ್ತಿ, ಅವಳಿಗೆ ಕೊಡುತಿದ್ದ ಕಷ್ಟ, ನಂತರ ಮನೆಯವರು ಅನುಭವಿಸುವ ನೋವು ಕೊನೆಯಲ್ಲಿ ಮಲ್ಲಮ್ಮನಿಗೆ ಕ್ಷೇಮೆ ಕೇಳಿ, ಮಲ್ಲಯ್ಯನ ಗುಡಿ ಕಟ್ಟಿಸಿ, ಹಾಡ ಕಟ್ಟಿದವರನ್ನು ಸ್ಮರಿಸುವುದು ಕಂಡುಬರುತ್ತದೆ. ಹಳ್ಳಿಕೇಡದವರಾದ ಕಾರಣ 'ನಾಗಣ್ಣನ' ಸ್ತುತಿ ಇಲ್ಲಿ ಸಮಂಜಸವೆನಿಸುತ್ತದೆ.

ಇನ್ನೊಂದು ಹಾಡಿನಲ್ಲಿ ಮಲ್ಲಮ್ಮನ ಭಕ್ತಿ, ಕಷ್ಟ ಅದರಂತೆ ನೋವುಂಡ ನೆಗೆಯಣ್ಣಿಯರು ಮಲ್ಲಮ್ಮನ ಪಾದ ಹಿಡಿದು ಕ್ಷಮೆ ಕೇಳುವಲ್ಲಿ ಮುಗಿಯುತ್ತದೆ. ಕೇವಲ ೨೨ ನುಡಿಗಳಲ್ಲಿ ಮೇಲಿನ ಹಾಡಿನ ಭಾವವನ್ನೇ ಇದು ಹೊಂದಿರುವುದು ಗಮನಾರ್ಹ. ಯಾವ ಸ್ತುತಿಯಿಲ್ಲದೆ ನೇರವಾಗಿ ಕಥೆ ಪ್ರಾರಂಭಿಸುವುದು ಕಂಡುಬರುತ್ತದೆ. ಈ ಹಾಡು ತಡೋಳಾದವರು ಹಾಡಿದ್ದು. ಹಾಡು ಈ ರೀತಿಯಾಗಿದೆ.

ಹೇಮರೆಡ್ಡಿಯ ಸೊಸೆ ಇದ್ದಾಳೆ ಪತಿವರತಿ
ಆಕಿ ಮಲ್ಲಮ್ಮ ಸಣ್ಣ ಸೊಸಿ ಕೋಲೆಣ್ಣ ಕೋಲೆ
ಬಡಿಯ ಮಲ್ಲಯ್ಯ ಬಂದು ನಡು ಅಂಗಳದಾಗೆ ನಿಂತು

ಭಿಕ್ಷನೆಂದಾರೆ ಭವ ಸಬುದು ಕೋಲೆಣ್ಣ ಕೋಲೆ

ಅರಮನೆಗೆ ಹೋಗಲಿಕ್ಕೆ ಮಾಲಿನಿಲ್ಲವೇ ಗುರುವೆ

ಕೈತುಂಬ ಹಿಟ್ಟು ನೀಡಿದಾಳೆ ಕೋಲೆಣ್ಣ ಕೋಲೆ

ಹಿಟ್ಟ ನೀಡದು ನೋಡಿ ನಾಗಮ್ಮ ಬಂದಾಳೆ ಓಡಿ

ಲಿಂಗಮ್ಮ ನೋಡಿ ಬಾಯಿ ಮಾಡಿ ಕೋಲೆಣ್ಣ ಕೋಲೆ

ಸಿಟ್ಟಿಲಿ ಬಂದಾಳೆ ಅತ್ತಿ ಎಡಗೈಲಿ ಬಡದಾಳೆ ನೆತ್ತಿ

ಪರಪಂಚ ಮಾಡದು ಇದೇ ರೀತಿ ಕೋಲೆಣ್ಣ ಕೋಲೆ ....[೪೧]

ಈ ರೀತಿಯಾಗಿ ಬುಲಾಯಿ ಹಾಡುಗಳು ಒಂದೇ ವಿಷಯ, ಭಾವವನ್ನು ಹೊಂದಿದ್ದರು ಹಲವಾರು ರೀತಿಯಲ್ಲಿ ಹಾಡುವುದು ವಿಶಿಷ್ಟವೆನಿಸುತ್ತದೆ. ಅಂತೆಯೇ ತಮಗೆ ಅನುಕೂಲವಾದ ರೀತಿಯಲ್ಲಿ ಹಿಗ್ಗಿಸಿ, ಕುಗ್ಗಿಸಿ ಹಾಡುವುದು. ಕಂಡುಬರುತ್ತದೆ. ಅದರಂತೆ ಸ್ತುತಿಯಿಂದ ಪ್ರಾರಂಭಿಸುವುದು ಅಥವಾ ನೇರವಾಗಿ ಪ್ರಾರಂಭಿಸುವುದೂ ಕಂಡುಬರುತ್ತದೆ. ಹೀಗಾಗಿ ಒಂದೇ ವಿಷಯ ಅಥವಾ ಘಟನೆಗೆ ಸಂಬಂಧಿಸಿದ ಹಲವಾರು ಹಾಡುಗಳು ಕ್ಷೇತ್ರ ಕಾರ್ಯದಲ್ಲಿ ದೊರೆತಿದ್ದು, ಅವು ವಿಶಿಷ್ಟವೂ ಗಮನೀಯವೂ ಎನಿಸುತ್ತವೆ. ವಾಕ್ ಸಂಪ್ರದಾಯದಲ್ಲಿದ್ದ ಈ ಹಾಡುಗಳು ಒಬ್ಬರಿಂದ ಮತ್ತೊಬ್ಬರ ಬಾಯಿಗೆ ಬಂದಾಗ ಇದ್ದುದ್ದನ್ನು ಬಿಟ್ಟು ಅಥವಾ ಚಾಣಾಕ್ಷರಾಗಿದ್ದರೆ ಹೊಸದನ್ನು ಸೇರಿಸಿ ಹಾಡಿರಬಹುದೆನಿಸುತ್ತದೆ. ಹೀಗಾಗಿ ಒಂದೇ ವಿಷಯದ ಹಲವಾರು ಹಾಡುಗಳು ಕಾಣಸಿಗುತ್ತವೆ. ನುಡಿ, ಸೊಲ್ಲು, ಪದಬಳಕೆಗಳಲ್ಲಿ ಬೇರೆ ಬೇರೆ ಎನಿಸಿದರೂ ಹಾಡುಗಳು ಭಾವ ಒಂದೇ ಆಗಿರುವುದು ವಿಶಿಷ್ಟವಾಗಿ ಕಂಡುಬರುತ್ತವೆ.

ಸ್ತ್ರೀಯರೆ ಹಾಡುವ ಹಾಡುಗಳಲ್ಲಿ ಸ್ತ್ರೀಯರ ಮನೋಭಾವನೆಗಳೆಲ್ಲ ವ್ಯಕ್ತವಾಗಿವೆ ಎಂದು ಹೇಳಲಾಗುವುದಿಲ್ಲ. ಈ ಹಾಡುಗಳು ರಚನೆಗೊಂಡ ಕಾಲದಲ್ಲಿ ಅವಿಭಕ್ತ ಕುಟುಂಬಗಳಿದ್ದ ಕಾರಣ ಮನೆಯ ಹಿರಿಯನೇ ಯಜಮಾನನಾಗಿರುತ್ತಿದ್ದ ಸೊಸೆಯಂದಿರರಿಗೆ ಯಾವ ಸ್ವಾತಂತ್ರ್ಯವೂ ಇರುತ್ತಿರಲಿಲ್ಲ. ತವರು ಮನೆಗೆ ಯಾವ ಸುದ್ದಿ ಕಳುಹಿಸಲು ಆಸ್ಪದವಿರಲಿಲ್ಲ. ಅಷ್ಟೆ ಏಕೆ ತವರವರು ಕರೆಯಲು ಬಂದರೂ ಹೋಗಲು ಧೈರ್ಯವಿಲ್ಲ. ತನ್ನ ಗಂಡ ಕಳುಹಿಸಿದ್ದಾಗ ಕೇವಲ ಕಣ್ಣೀರೊಂದೆ ಪರಿಹಾರ.

ಗಂಡನೆ ಅಂಬುವ ದಂಡುಳ್ಳ ದೇಸಾಯಿ

ಖಳಸಪ್ಪ ನನ್ನ ಮಗಳಿಗಿ ಕೋಲೆಣ್ಣ ಕೋಲೆ

ಬಳಸುವದಿಲ್ಲರಿ ಮಡದಿಗಿ ಕೋಲೆಣ್ಣ ಕೋಲೆ

ಛೀಲಿ ಛೀಲಿ ಮಾದೇವಿ ಬಾಗಿಲಿಗಿ ಬಂದಾಳ

ಬಾಗಿಲ ಹಿಡದೊಂದು ಅಳುತ್ತಾಳರಿ ಕೋಲೆಣ್ಣ ಕೋಲೆ ....[೪೨]

ಇಲ್ಲಿ ಹೆಣ್ಣಿನ ಅಸಹಾಯಕತೆ, ಅಭದ್ರತೆಯ ಚಿತ್ರವಿದೆ. ತನಗೊಂದು ರಕ್ಷಿತ ನೆಲೆಗಾಗಿ ಬಹುಶಃ ತ್ಯಾಗದ ಮೊಗವಾಡಧರಿಸಿ ಬದುಕುತ್ತಿರುವಂತೆ ಕಾಣುತ್ತದೆ.

ಹೆಣ್ಣಿನ ಶೋಷಣೆಯ ಹಲವು ಮುಖಗಳ ಮಧ್ಯದಲ್ಲೂ ಅಲ್ಲಲ್ಲಿ ತಮ್ಮತನ ಉಳಿಸಿಕೊಂಡ, ಪ್ರತಿಭಟಿಸುವ, ದಿಟ್ಟತನ ತೋರಿದ ಹೆಣ್ಣುಗಳ ಕುರಿತು ಹಾಡುಗಳು ಕಂಡುಬರುತ್ತವೆ.

ಅತ್ತಿಂದ ಬಂದ ಥೋರಿ ಮಗ ಅನ್ನುತ
ಬಾಲಿ ನಿನ್ನ ಕೊಡ ಎತ್ತಲೇನ ಕೋಲು ಕೋಲೆ
ನನ್ನ ಕೊಡ ಎತ್ತಲಾಕ ನೀ ಯಾರ ಮಗನಯ್ಯ
ನಿನಕ್ಕಿನ ದುರುಳ ಮನಿಪುರುಷ ಕೋಲು ಕೋಲೆ
ನಿನಕ್ಕಿನ್ನ ಎಳೆ ದುರುಳ ಮನಿ ಪುರುಷರ ಹೇಳಿದಾರ
ಕರಿ ಖಬ್ಬ ಮಾಡಿ ಕಾಡಿತಾನ ಕೋಲು ಕೋಲೆ [೪೩]

ಹೀಗೆ ಬುಲಾಯಿ ಹಾಡುಗಳಲ್ಲಿ ಹೆಣ್ಣಿನ ಶೋಷಣೆ, ತ್ಯಾಗ, ನೋವು, ನಲಿವು, ಧೈರ್ಯ ಮುಂತಾದವುಗಳನ್ನು ಕಾಣಬಹುದಾಗಿದೆ. ಇವುಗಳ ಜೊತೆಯಲ್ಲಿ ಪರಾಕ್ರ, ಆಯಾ ಕಾಲದ ಘಟನೆ, ಪೌರಾಣಿಕ, ಧಾರ್ಮಿಕ, ರಾಜಕೀಯ ಹಾಗೂ ಆರ್ಥಿಕ ವಿಷಯಗಳು, ಹೀಗೆ ಹತ್ತು ಹಲವಾರು ರಿತಿಯಲ್ಲಿ ಸಾಮಾಜಿಕ ಮೌಲ್ಯಗಳನ್ನು ಈ ಹಾಡುಗಳಲ್ಲಿ ಕಾಣಬಹುದು. ಒಟ್ಟಾರೆ ಈ ಪ್ರದೇಶದ ಸಂಸ್ಕೃತಿಯ ಚಿತ್ರಣವನ್ನೇ ಬುಲಾಯಿ ಹಾಡುಗಳು ನೀಡುವುದು ಗಮನೀಯವಾಗಿದೆ. “ಹಿಂದನವ ನಂಬಿರುವ ಮೌಲ್ಯಗಳು ಇಂದು ಅಪ್ರಸ್ತುತವಾಗಿರಬಹುದು. ಅವರ ಆಚರಣೆಗಳು ಇಂದು ಅರ್ಥಹೀನ ಎನಿಸಿದರೂ ಒಂದು ಕಾಲದ ಸಾಂಸ್ಕೃತಿಕ ಸಾಮಾಜಿಕ ಜೀವನ ಈ ಹಾಡುಗಳಿಂದ ನಮಗೆ ಲಭ್ಯವಾಗುತ್ತದೆ”[೪೪] ಎಂಬ ಮಾತು ಬುಲಾಯಿ ಹಾಡುಗಳಿಗೂ ಅನ್ವಯಿಸುವುದು ಗಮನಾರ್ಹ. ಡಾ॥ ಡಿ.ಬಿ. ನಾಯಕರು ಬುಲಾಯಿ ಹಾಡುಗಳ ಕುರಿತು ಹೇಳಿರುವ ಮಾತು ಬುಲಾಯಿ ಹಾಡುಗಳ ವೈಶಿಷ್ಟ್ಯ ಹಾಗೂ ಮಹತ್ವವನ್ನು ಎತ್ತಿ ತೋರುವಂತಿವೆ. “ಬೀದರ ಪ್ರದೇಶದ ಸಂಸ್ಕೃತಿಯ ಸಾಮಾಜಿಕ, ಧಾರ್ಮಿಕ ಹಾಗೂ ಪೌರಾಣಿಕ ಪ್ರಜ್ಞೆಯ ಚಿತ್ರಣವನ್ನು ಇವು ನೀಡುವುದ ಜೊತೆಗೆ ಇತಿಹಾಸದ ಪುನರ್ ರಚನೆಗೆ ಮಹತ್ವದ ಆಕರ ಸಾಮಗ್ರಿಗಳಾಗಿ ನಿಂತಿವೆ. ಭಾಷಾ ಪರಂಪರೆಯನ್ನು ಶ್ರೀಮಂತಗೊಳಿಸಿ ಅದರ ಅಧ್ಯಯನಕ್ಕೆ ಜೀವಂತವಾದ ಮೌಖಿಕ ಸಾಮಗ್ರಿಗಳಾಗಿವೆ”[೪೫].

ಈ ರೀತಿ ಬೀದರ ಜಿಲ್ಲೆಯ ಬುಲಾಯಿ ಹಾಡುಗಳು ಹೆಂಗಸರ ಹಾಡುಗಳಲ್ಲಿಯೇ ಅತ್ಯಂತ ವಿಶಿಷ್ಟವೂ ಮಹತ್ವದ್ದವೂ ಆಗಿ ಕಂಡುಬರುತ್ತವೆ. ಹೀಗಾಗಿ ಜನಪದ ಹಾಡುಗಳಲ್ಲಿ ಬುಲಾಯಿ ಹಾಡುಗಳು ವಿಶಿಷ್ಟವಾಗಿದ್ದು, ತನ್ನದೇ ಆದ ಸ್ಥಾನ ಮಾನವನ್ನು ಹೊಂದಿವೆ ಎನ್ನಬಹುದು.

ಬುಲಾಯಿ ಹಾಡುಗಳ ಭಾಷೆ:

ಬೀದರ ಜಿಲ್ಲೆಯ ಬುಲಾಯಿ ಹಾಡುಗಳು ಮುಖ್ಯವಾಗಿ ಜನಪದ ಮಹಿಳೆಯರ ಜಾನಪದ ಮೂಲದಿಂದ ಮೂಡಿ ಬಂದವು. ಇವರೆಲ್ಲಾ ಹೆಚ್ಚಾಗಿ ಅನಕ್ಷರಸ್ಥರು. ಅಕ್ಷರಸ್ಥರಾಗಿದ್ದವರೂ ತೀರ ವಿರಳ. ಅಕ್ಷರ ಜ್ಞಾನವಿರುವ ಗಂಡು ಮಕ್ಕಳು ಬುಲಾಯಿ ಹಾಡು ಕಟ್ಟಿದವರು ಮೋಡಿ, ಮರಾಠಿ, ಉರ್ದು, ಹಿಂದಿ ತೆಲಗುನಂಥ ಅನ್ಯ ಭಾಷಾ ಹಾಗೂ ಲಿಪಿಗಳಲ್ಲಿ ಶಿಕ್ಷಣ ಪಡೆದವರಾಗಿದ್ದರೇ ವಿನಃ ಕನ್ನಡದಲಲ್ಲಿ ಎಂಬುದು ಕ್ಷೇತ್ರ ಕಾರ್ಯದಲ್ಲಿ ತಿಳಿದು ಬಂದ ವಿಷಯ. ಇತ್ತೀಚಿಗೆ ಕನ್ನಡ ಅಕ್ಷರ ಜ್ಞಾನ ಪಡೆದು ಬುಲಾಯಿ ಹಾಡು ಕಟ್ಟಿದರೂ ಬೀದರ ಭಾಷೆಯನ್ನೇ ಬಳಸಿಕೊಂಡಿರುವುದನ್ನು ಕಾಣಬಹುದು. ಹೀಗಾಗಿ ಬುಲಾಯಿ ಹಾಡುಗಳನ್ನು ಕಟ್ಟುವವರು, ಹಾಡುವವರು ಕನ್ನಡ ಗ್ರಂಥಸ್ಥ ಶಿಷ್ಟ ಭಾಷೆಯಿಂದ ತೀರಾದೂರ ಉಳಿದು, ಬುಲಾಯಿ ಹಾಡುಗಳಿಗೆ ತಮ್ಮ ದೈನಂದಿನ ಬದುಕಿನಲ್ಲಿ ಬಳಕೆಯಾಗುವ ಜನಪದ ಭಾಷೆಯನ್ನೇ ತೀವ್ರವಾಗಿ ಅವಲಂಬಿಸಿದಂತೆ ಕಂಡುಬರುತ್ತದೆ.

ಉದಾ : ೧) ಆರದಿನ ಅಂಬುದು ಆರೇ ತಿಂಗಳನಾಗಿ
ಆರಗೇನ ಬಗಸ್ಯಾಳ, ಅಕ್ಕನಾಗಮ್ಮ ಕೋಲೆಣ್ಣ ಕೋಲೆ
ಹಾರುಕೇಗಿನ **ಬಾನ** ಕೆನಿಮೊಸರು ಉಣಬೇಕಂತ
ಅಣ್ಣ ನನ್ನ ಜೀವ ಬಗಸ್ಯಾದ ಬಸವಣ್ಣ
ಅಣ್ಣ ನನ್ನ ಜೀವ ಬಗಸ್ಯಾದ ಬಸವಣ್ಣ
ಉಣವಲಕಿನ್ನ ಮೊದಲ **ತರಸ್ಯಾರ** ಕೋಲೆಣ್ಣ ಕೋಲೆ
ಏಳದಿನ **ಅಂಬದು** ಏಳ ತಿಂಗಳಾಗಿ
ಏಳಾರಗೇನ ಬಗಸ್ಯಾಸ ಅಕ್ಕನಾಗಮ್ಮ ಕೋಲೆಣ್ಣ ಕೋಲೆ ....
ಕೇರ್ಯಾಗೀನ ಅವ್ವದೇರೆ ಊರಾಗೀನ ಅಕ್ಕದೇರೆ
ಕೇಳಿರಿ **ನಮ್ಮನಿ** ಹೊಸ ಸುದ್ದಿ ಕೋಲೆಣ್ಣ ಕೋಲೆ ....
ದೊಡ್ಡದೊಂದು **ಪಡಸಾಲ್ಯಾಗೆ** ದೊಡ್ಡರು **ಅತ್ತಿಗಿದೇರು**
ಮುದ್ದು **ಅರಿಲ್ಯಾಕ ಕುಂತಾರೆ** ಕೋಲೆಣ್ಣ ಕೋಲೆ....[೪೭]

೨) **ಬಿಂಡ್ಯಾಗಿರುವುದು** ಸಣ್ಣ ಬಣ್ಣದ ಸೀರಿ
ಉಡಕೂಡೆ ನಿಮ್ಮ ತಂಗೀನ ಕೋಲೆ
ಹಗ್ಗದ ಮ್ಯಾಲಿರುವ ಮಗಿ **ಜ್ಯಾಳಗಿ** ಕುಬಸ
ತೊಡಕುಡೆ ನಿಮ್ಮ ತಂಗೀಗಿ ಕೋಲೆ .....
ಡಬ್ಬ್ಯಾಗ ಇರುವದು **ಹತ್ತತುರಾಯಿ ನತ್ತ**
ಇಡಕೂಡೆ ನಿಮ್ಮ ತಂಗೀಗಿ ಕೋಲೆ .....

ಎತ್ತರ ತಾ ಭಾವ ಮುತ್ತರ ಬಿಗಿ ಭಾವ
ಹೊತುಟ್ಲೆ ನಮಗ **ಖಳವರಿ** ಭಾವ ಕೋಲೆ
ಎತ್ತಿನ **ಮ್ಯಾಲ** ಕುಂತು ಹಚ್ಚಡ ಮುಸಕನಿಕ್ಕಿ
ಎಂದ ಬರುತೆ ಬಾಲಿ ನನಗ್ಹೇಳೆ ಕೋಲೆ
ನಿಂಬಿಯ **ಚಿಗದಾಗ** ಬಾಳಿಯ **ಒಡೆದಾಗ**
ನಾ ಬಂದೆ ನನ್ನ ಮಗ ಬಂದ ಕಾಲಕ್ಕ
ಸಾಲ **ಮ್ಯಾಳಿಗಿ** ಸರಿಪಾಲ ಕೋಲೆ
ಸಾಲನೆ ಮ್ಯಾಳಿಗಿ ಸರಿಪಾಲ ಆದಾಗ
ನೆತ್ತರ ಕಾಳ್ಲಿ ಹರದವೆ ಕೋಲೆ ...[೪೭]

ಈ ಹಾಡುಗಳಲ್ಲಿ ಕಂಡುಬರುವ ಆರಗೇನ, ಬಗಸ್ಯಾಳ, ಬಾನ, ತರಸ್ಯಾರ, ಅಂಬದು, ಕೆರ್‍ಯಾಗೀನ, ಅವ್ವದೇರೆ, ಊರಾಗೀನ, ಅಕ್ಕದೇರೆ, ನಮ್ಮನಿ, ಪಡಸಾಲ್ಯಾಗ, ಅತ್ತಿಗಿದೇರು, ಅಲಿಲ್ಯಾಕ, ಕುಂತಾರೆ, ಬಿಂಡ್ಯಾಗಿರುವ, ಜ್ಯಾಳಿಗಿ, ಡಬ್ಬ್ಯಾಗ, ಹತ್ತತುರಾಯಿನತ್ತ, ಹೊತುಟ್ಲೆ, ಖಳವರಿ, ಮ್ಯಾಲ, ಎಂದ, ಬರುತೆ, ಚಿಗದಾಗ ಒಡೆದಾಗ, ಮ್ಯಾಳಿಗಿ, ನೆತ್ತರ ಕಾಳ್ಲಿ, ಹರದವೆ ಎಂಬಂಥ ಮೊದಲಾದ ಪದಗಳಾಗಲಿ, ಹಾಡಿನಲ್ಲಿ ವ್ಯಕ್ತವಾದ ಭಾಷಾ ಸ್ವರೂಪ ಹಾಗೂ ಅಭಿವ್ಯಕ್ತಗೊಂಡ ರೀತಿಯಾಗಲಿ ಬೀದರ ಜಿಲ್ಲೆಯ ಜಾನಪದ ಪರಿಸರದಲ್ಲಿ ಈಗಲೂ ಕಾಣಬಹುದು. ಇಂಥ ಭಾಷೆ ಅನಕ್ಷರಸ್ಥ ಹಾಗೂ ಕನ್ನಡ ಪುಸ್ತಕ ಭಾಷೆಯ ಪರಿಚಯವಿಲ್ಲದ ಮಹಿಳೆಯರಿಗೆ ಸಹಜ ಹಾಗೂ ಸಾಮಾನ್ಯವಾಗಿದೆ.

ಅಂತೆಯೇ ಅವರು ತಮ್ಮ ದೈನಂದಿನ ಜೀವನದಲ್ಲಿ ಉಣ್ಣುವ, ತಿನ್ನುವ, ಬಳಸುವ, ಕಾಣುವ, ಕೇಳುವ ಎಲ್ಲಾ ಪರಿಕರಗಳನ್ನು ಹಾಡುಗಳಲ್ಲಿ ಸಹಜವಾಗಿ ಬಳಸಿರುವುದನ್ನು ಕಾಣಬಹುದು. ಉದಾಃ ರೊಟ್ಟಿ-ಪಲ್ಯ, ರೊಟ್ಟಿ-ಬುತ್ತಿ, ಎಣ್ಣೆಗಾಯಿ ಬದನೆಕಾಯಿ, ಕೆನಿಮೊಸರು, ಅನ್ನ, ಹಿಂಡಿಪಲ್ಯ, ಗುಗ್ಗರಿ, ಹಾಲುಬಾನ, ಹೋಳಿಗಿ ತುಪ್ಪ, ಅಂಬಲಿ, ಕಡಬು, ಪರಡಿಪಾಯಸ, ಶ್ಯಾವಿಗೆ, ಹಪ್ಪಳ - ಸಂಡಿಗೆ ಮುಂತಾದ ಉಣ್ಣುವ-ತಿನ್ನುವ ಪದಾರ್ಥಗಳನ್ನು ಯಥೇಚ್ಚವಾಗಿ ಬುಲಾಯಿ ಹಾಡುಗಳಲ್ಲಿ ಬಳಸಿರುವುದನ್ನು ಕಾಣಬಹುದು. ಬುಟ್ಟಿ, ಮರ, ಸುಪ್ಪಲಿ, ಕೊಡ, ಭೋಗೋಣಿ ಮುಂತಾದ ಪಾತ್ರೆ ಪಗಡೆಗಳ ಹೆಸರುಗಳು, ಹೀರೆಕಾಯಿ, ಸೋರೆಕಾಯಿ, ಬದನೆಕಾಯಿ, ಕುಂಬಳಕಾಯಿ, ಬಾಳೇಕಾಯಿ ಮುಂತಾದ ಕಾಯಿ ಪಲ್ಯೆಗಳು, ಲಾಠಿ, ಭರ್ಚಿ, ಬಾಣ, ಖಡ್ಗ, ಭೂರಿ, ಬಂದೂಕು, ಬಾರದ ಗೋಲಿ, ಕೊಡ್ಲಿ ಮುಂತಾದ ಶಸ್ತ್ರಾಸ್ತ್ರಗಳು, ಹಾಲುಗಡಗ, ಹತ್ತತುರಾಯಿ ನತ್ತು, ಉಂಗುರು, ಬಿಂದಲಿ, ಜೋಡತುರಾಯಿ ನತ್ತು, ಸರಗಿ ಮುಂತಾದ ಒಡವೆಗಳು, ಆಕಳು - ಎತ್ತು, ಕುದುರೆ, ನಾಯಿ, ಕತ್ತೆ, ನಂದಿ, ಹಾವು ಸಾರಂಗ, ನವಿಲು ಮುಂತಾದ ಪಶು - ಪಕ್ಷಿಗಳ ಹೆಸರುಗಳನ್ನು ಬುಲಾಯಿ ಹಾಡುಗಳಲ್ಲಿ ಬಳಸಿರುವುದು ಕಂಡು ಬರುತ್ತವೆ.

ಅದರಂತೆ ಮಿಂಡ, ರಂಡಿ, ಸೂಳಿ, ಹಾದರ, ಉಚ್ಚಿ, ಕಚ್ಚಿ, ಕುಂಡಿ, ಗಯ್ಯಾಳಿ, ಬಂಗಾಲಿ ಮುಂತಾದ ಪದಗಳನ್ನು ಸಹ ಯಾವ ಮುಚ್ಚು ಮರೆಯಿಲ್ಲದೆ ಸಂದರ್ಭಕ್ಕೆ ಅನುಗುಣವಾಗಿ ಸಹಜ ಹಾಗೂ ನೇರವಾಗಿ ಬಳಸಿರುವುದು ಕಂಡುಬರುತ್ತವೆ. ಶಿಷ್ಟರು ಅಶ್ಲೀಲವೆಂದು ಬಳಸಲು ಮುಜುಗರ ಪಡುವ ಪದಗಳನ್ನು ಬುಲಾಯಿ ಹಾಡುಗಳಲ್ಲಿ ಅಳುಕಿಲ್ಲದೆ ಸಂದರ್ಭೋಚಿತವಾಗಿ ಬಳಸಿದ್ದು ತುಂಬಾ ಸಹಜವೆನಿಸುತ್ತವೆ.

ಬುಲಾಯಿ ಹಾಡುಗಳಲ್ಲಿ ಬಳಸಿರುವ ಎಲ್ಲಾ ಪದಗಳು ಹಾಗೂ ಭಾಷಾ ಸ್ವರೂಪವನ್ನು ಜನಪದ ಪರಿಸರದಲ್ಲಿ ಈಗಲೂ ಸಾಮಾನ್ಯವಾಗಿ ಕಾಣಬಹುದು. ಅಂದರೆ ದೈನಂದಿನ ಜನಪದ ಭಾಷೆಯೇ ಬುಲಾಯಿ ಹಾಡುಗಳಲ್ಲಿ ಕಂಡುಬರುತ್ತದೆ.

ಮಹಿಳೆಯರಲ್ಲದೆ ಓದುಬರಹ ಕಲಿತವರೂ ಸಹ ತಮ್ಮ ಬುಲಾಯಿ ಪದಗಳಿಗೆ ಇದೇ ಭಾಷೆಯನ್ನು ತೀವ್ರವಾಗಿ ಹಾಗೂ ಸಲೀಸಾಗಿ ಬಳಸಿದ್ದುದು ಕಂಡುಬರುತ್ತದೆ.

ಜಡದೇಹಕೆ ನಾನಂತಿ ನಿನಗೆ **ಮರತಿ ಕುಂತಿ**
ಎಂದ ಹೋದತು ನಿನ್ನ ಭ್ರಾಂತಿ ಕೋಲ ಕೋಳ
ಭವ ಸಾಗರ **ಎಂಬಾ** ಮರವು ಇದರೊಳೂ ಇಲ್ಲಾ ಅರವು
ಮುಳುಗ್ಯಾರೋ ಬಹುಜನರೂ ಕೋಲ ಕೋಲ
ವ್ಯರ್ಥ ಕಳಿಬೇಡ ಹೊತ್ತು ನಾನ್ಯಾರೆಂಬುದು ಗೊತ್ತು
ಜಲದಿ ಮಾಡಿಕೋ ಗುರ್ತು ಕೋಲ ಕೋಲ
ಜಡದೇಹ ನೀನಲ್ಲಾ ಜಡದೇಹ **ನಿಂದಲ್ಲಾ**
ಮರುರೂಪ ನೀನಲ್ಲಾ ಕೋಲ ಕೋಲ ...[೪೮]

ಮರತಿ, ಕುಂತಿ, ಎಂದ, ಹೋದತು, ಎಂಬಾ ಮುಳಗ್ಯಾರೋ, ಜಲದಿ, ನಿಂದಲ್ಲಾ ಮುಂತಾದ ಪದಗಳನ್ನು ಸಲೀಸಾಗಿ ತೀವ್ರವಾಗಿ ಬಳಸಿದ್ದನ್ನು ಕಾಣಬಹುದು.

ಹೀಗೆ ಬೀದರ ಜಿಲ್ಲೆಯ ಇಡೀ ಬುಲಾಯಿ ಹಾಡುಗಳ ಭಾಷೆ ಈ ಪ್ರದೇಶದ ಜನಪದ ಪರಿಸರದ ಒಡಲಿನಿಂದ ಮೂಡಿಬಂದುದ್ದಾಗಿಗೆ ಎನ್ನಬಹುದು.

ಬೀದರ ಜಿಲ್ಲೆ ಭೌಗೋಳಿಕವಾಗಿ ರಾಜಧಾನಿ ಬೆಂಗಳೂರಿನಿಂದ ಅತ್ಯಂತ ದೂರದಲ್ಲಿದ್ದು, ಆಂಧ್ರ ಪ್ರದೇಶ ಹಾಗೂ ಮಹಾರಾಷ್ಟ್ರ ರಾಜ್ಯಗಳ ಗಡಿಗಳಿಗೆ ಹೊಂದಿಕೊಂಡಿದೆ ಮೇಲಾಗಿ ಇದು ರಾಜಕೀಯವಾಗಿ ಬಹುಕಾಲದ (೧೩೨೧ ರಿಂದ ೧೯೪೮ರ) ವರೆಗೆ ಮುಸ್ಲಿಮ್ ಅರಸರ ಆಳ್ವಿಕೆಗೆ ಒಳಗಾಗಿತ್ತು, ಅವರ ಕಾಲದಲ್ಲಿ ಇಲ್ಲಿ ಉರ್ದು ಪ್ರಧಾನ ಭಾಷೆಯಾಗಿ, ಶಿಕ್ಷಣ ಮಾಧ್ಯಮವಾಗಿ ಚಾಲ್ತಿಯಲ್ಲಿದ್ದು ಬೆಳೆದದ್ದು ಕಂಡುಬರುತ್ತದೆ. ಹೀಗಾಗಿ ಈ ಜಿಲ್ಲೆಯ ಆಡು ಭಾಷೆಯ ಮೇಲೆ ಉರ್ದು, ಹಿಂದಿ, ಮರಾಠಿ ಹಾಗೂ ತೆಲುಗು ಭಾಷೆಗಳ ಪ್ರಭಾವ ದಟ್ಟವಾಗಿರುವುದು ಕಂಡುಬರುತ್ತದೆ. ನಂತರದಲ್ಲಿ ಇಂಗ್ಲೀಷ್ ಭಾಷೆಯ ಪ್ರಭಾವವೂ ಇಲ್ಲಿ

ಕಾಣಬಹುದು. ಹೀಗೆ ಅನ್ಯ ಭಾಷೆಗಳ ಪ್ರಭಾವದಿಂದ ಕೂಡಿದ ಈ ಆಡು ಭಾಷೆಯನ್ನೇ ಬೀದರ ಜಿಲ್ಲೆಯ ಬುಲಾಯಿ ಹಾಡುಗಳಲ್ಲಿ, ಹಾಡುಗಾರರು ಅಧಿಕೃತವಾಗಿ ಬಳಸಿಕೊಂಡಿದಂತೆ ಕಂಡುಬರುತ್ತದೆ. ಬುಲಾಯಿ ಹಾಡುಗಳಲ್ಲಿ ಕಂಡುಬರುವ ಆ ಭಾಷೆಗಳ ಪದಗಳಿಂದ ಖಚಿತಪಡಿಸಿಕೊಳ್ಳಬಹುದು.

ಲಡಾಯಿ, ಜಿಲ್ಲಾ, ಸೌ, ಧೋಕ, ದರಕಾಸ, ಹುಕುಂ, ಬಹಾದ್ದೂರ್, ಭೇತರ, ಶ್ಯಾರ, ಲಾಕೋ, ಪಂದರಾ, ದಫ್ತೂರ, ಫಾಸಿ, ಖೋಲ್ಲಿ, ಬಕ್ಸದು, ಭಾಯಿ, ಖತಲ್, ದಗದ, ಬಾರಾ, ಖೂನಾ, ಉಪರ್ಯಾಟ, ಲತ್ತಿ, ಚೌವಕಾಶಿ, ಲಗೂ, ಛೋಲೋ, ಸಾಲಿ, ದೋನ, ಪರಕಾರ, ಸಮಜಾಸಿ, ತೋಲ, ಅಡ್ರಾನೆ, ತೆಲಗುಂಬಿ, ನಾಚ, ಠಳಕ, ಬಂದಾಬಸ್ತ, ಖುಲ್ಲಾ, ತಕತಾ, ಠೇಷನ್, ಕಾರು, ಮೋಟಾರು, ತನಕ ರೇಲು, ಮಾಸ್ತರ, ಜೇಲು, ಇಂಥ ನೂರಾರು ಅನ್ಯಭಾಷೆಯ ಶಬ್ದಗಳು ಈ ಬುಲಾಯಿ ಹಾಡುಗಳಲ್ಲಿ ಕಂಡುಬರುತ್ತವೆ. ಅಲ್ಲದೆ ಶ್ರೀಸಾಮಾನ್ಯರ ಬಾಯಲ್ಲಿಯೂ ದಿನಬಳಕೆಯ ಪದಗಳಾಗಿ ಕುಣಿದಾಡುತ್ತಿರುವುದು ಕಂಡು ಬರುತ್ತವೆ. ಇಂದಿಗೂ ಇಲ್ಲಿ ಕಂಡುಬರುವ ಸಟ್ಟಂತ, ಝಟ್ಟಂತ, ಪೋರಿ, ಜ್ವಾಳ, ಜ್ವಾಕಿ, ರಜಾ, ಛೆಲ್ಲು, ಹೋಗಬಿ, ತೋಲ, ಬಾಗ್ಗೆ, ಏನಗಾ, ಒಲ್ಗೆ, ನಾಬಿ, ಕಿವ, ಕಕಿ, ಕಿಲ್ಲೆ, ಜಿಂಗ, ಹನ, ಖರೆ, ನಂಗಬಿ, ಢಿಗಾರಿ ಮುಂತಾದ ವಿಶಿಷ್ಟ ಪದಗಲು ಜನಬಳಕೆಯಲ್ಲಿರುವುದನ್ನು ಕಾಣಬಹುದು. ಇದು ಬೀದರ ಜಿಲ್ಲೆಯ ಪ್ರಾದೇಶಿಕ ಭಾಷಾ ವೈಶಿಷ್ಟ್ಯತೆಯೆನ್ನಬಹುದು. ಈ ಕುರಿತು "ಬೀದರ ಜಿಲ್ಲೆಯ ಪ್ರಾದೇಶಿಕ ಭಾಷಾ ವೈಶಿಷ್ಟ್ಯತೆಯ ಸತ್ವ ಗತ್ತು-ಗಮ್ಮತ್ತು ಮುಂತಾಗಿ ತಿಳಿಯಬೇಕಾದರೆ ಕನ್ನಡದ ಜೊತೆಗೆ ಹಿಂದಿ, ಉರ್ದು, ಮರಾಠಿ ಸ್ವಲ್ಪ ಮಟ್ಟಿಗೆ ತೆಲುಗು ಮೊದಲಾದ ಭಾಷೆಗಳ ಪರಿಚಯವಿರಬೇಕು. ಜೊತೆಗೆ ಪ್ರಾದೇಶಿಕ ಭಾವನೆ ಅರಿತುಕೊಳ್ಳಲು ಸಹೃದಯರಾಗಿರಬೇಕು"[೪೯] ಎನ್ನುವ ಮಾತು ತುಂಬಾ ಮಹತ್ವದ್ದೆನಿಸುತ್ತದೆ.

"ಮಾತನಾಡುವ ಯಾವುದೇ ಭಾಷೆಯಲ್ಲಿ ಪ್ರಾದೇಶಿಕತೆಗೊಂದು ಶಕ್ತಿ ಇದೆ. ಧ್ವನಿ ಇದೆ. ಅರ್ಥವ್ಯಾಪ್ತಿ ಇರುತ್ತದೆ. ಇವುಗಳಿಂದ ಕೂಡಿದ ವೈವಿಧ್ಯತೆ ಭಾಷಾ ಶ್ರೀಮಂತಿಕೆಯ ಸಂಕೇತವಲ್ಲದೆ ಬೇರೆ ಅಲ್ಲ"[೫೦] ಎಂಬುದು ಸತ್ಯವೆನಿಸುತ್ತದೆ. ಇದು ವೈವಿಧ್ಯತೆಯಿಂದ ಕೂಡಿದ ಬೀದರ ಪ್ರಾದೇಶಿಕ ಭಾಷೆಯ ಶ್ರೀಮಂತಿಕೆಯನ್ನು, ವಿಶಿಷ್ಟತೆಯನ್ನು ಎತ್ತಿತೋರಿಸುವಂತಿದೆ.

ಬುಲಾಯಿ ಹಾಡುಗಳು ಬೀದರ ಜಿಲ್ಲೆಯ ಹಾಡುಗಳಾಗಿದ್ದು ಇವು ಸಂಪೂರ್ಣವಾಗಿ ಬೀದರ ಭಾಷೆಯಲ್ಲಿರುವಂತೆ ಕಂಡುಬರುತ್ತವೆ. ಹೀಗಾಗಿ ಬೀದರ ಪ್ರಾದೇಶಿಕ ಭಾಷೆಯೇ ಬುಲಾಯಿ ಹಾಡುಗಳ ಭಾಷೆಯೆಂದು ಹೇಳಬಹುದು.

ಯಾವುದೇ ಒಂದು ಭಾಷೆಯಲ್ಲಿ ಭಿನ್ನ ಭಿನ್ನ ರಾಜಕೀಯ ಪರಿಸರ, ಭಿನ್ನ ಭಿನ್ನ ಆಡಳಿತಕ್ಕೆ ಒಳಪಟ್ಟ ಪ್ರದೇಶ, ಬೇರೆ ಬೇರೆ ಭಾಷಾ ರೂಪಗಳು ಹುಟ್ಟಿ ಭಾಷಾ ವ್ಯತ್ಯಾಸಗಳಾಗಿ, ಉಪಭಾಷೆಗಳು, ಭಾಷಾರೂಪಗಳು ಕಾಣಿಸಿಕೊಳ್ಳುತ್ತವೆ ಎಂಬುದು ಬಾಷಾತಜ್ಞರ ಮತ. ಇದಕ್ಕೆ ಬೀದರ ಜಿಲ್ಲೆ ಉತ್ತಮ ನಿದರ್ಶನವಾಗಿದೆ. ಒಂದು ಈ ಜಿಲ್ಲೆ ಮೇಲೆ ಹೇಳಿದಂತೆ. ಗಡಿಭಾಗದಲ್ಲಿದೆ.

ಇನ್ನೊಂದು, ಮುಸ್ಲಿಮರಲ್ಲದೆ ಇನ್ನೂ ಅನೇಕ ಅರಸುಮನೆತನಗಳು ಇದನ್ನು ಆಳಿವೆ. ರಾಷ್ಟ್ರಕೂಟ, ಕಲ್ಯಾಣಿ ಚಾಲುಕ್ಯ, ಕಲಚೂರಿ ಹಾಗೂ ಬಹಮನಿ ಅರಸರ ಕಾಲದಲ್ಲಿ ಈ ಜಿಲ್ಲೆಯ ಮೋರಖಂಡಿ, ಬಸವಕಲ್ಯಾಣ ಹಾಗೂ ಬೀದರ ಅನುಕ್ರಮವಾಗಿ ರಾಜಧಾನಿ ಕೇಂದ್ರಗಳಾಗಿದ್ದುದು ಐತಿಹಾಸಿಕ ಸತ್ಯ ಅಂದಿನಿಂದಿ ಇಲ್ಲಿ ವಿವಿಧ ಜಾತಿ, ಧರ್ಮ, ವರ್ಗ, ವೃತ್ತಿ ಹಾಗೂ ಬೇರೆ ಬೇರೆ ಭಾಷೆಗಳ ಜನರು ವಾಸವಾಗಿದ್ದುದು ಕಂಡುಬರುತ್ತದೆ. ಈ ಎಲ್ಲಾ ಜನರ ಗಾಢವಾದ ಸಂಪರ್ಕದಿಂದಾಗಿ ಇಲ್ಲಿನ ಕನ್ನಡ ಭಾಷೆ ಹಲವು ವ್ಯತ್ಯಾಸಗಳಿಗೆ ಒಳಗಾಗಿದ್ದು ಕಂಡುಬರುತ್ತದೆ. ಅಲ್ಪಪ್ರಾಣಗಳು ಮಹಾಪ್ರಾಣಗಳಾಗಿ, 'ಅ'ಕಾರ 'ಎ' ಕಾರವಾಗಿ 'ಎ' ಕಾರಾಂತ್ಯ ಶಬ್ದಗಳು 'ಇ' ಕಾರಾಂತ್ಯ, ಶಬ್ದಗಳಾಗಿ, 'ಏ'ಕಾರ ಶಬ್ದಗಳು 'ಯಾ' ಕಾರ ಶಬ್ದಗಳಾಗಿ, 'ಓ' ಕಾರ 'ವ' ಕಾರವಾಗಿ 'ನ' ಕಾರ 'ಎ' ಕಾರವಾಗಿ ಮಾರ್ಪಟ್ಟಿವೆ. ಹೀಗೆ ಅನೇಕ ಮಾರ್ಪಾಟುಗಳಿಗೆ ಒಳಗಾದ ಈ ಭಾಷೆಯನ್ನು ಬೀದರ ಜಿಲ್ಲೆಯ ಬುಲಾಯಿ ಹಾಡುಗಳಲ್ಲಿ ಸೊಂಪಾಗಿ ಬಳಸಿಕೊಂಡದ್ದು ಕಂಡುಬರುತ್ತದೆ. ಅವುಗಳಲ್ಲಿ ಆಯ್ದು ಗುರುತಿಸಿದ ಈ ಕೆಳಗಿನ ವ್ಯತ್ಯಾಸಗಳನ್ನು ಗಮನಿಸಬಹುದು.

ಅಲ್ಪಪ್ರಾಣ	**ಮಹಾಪ್ರಾಣವಾಗಿ**
ಚಳಿ	ಛಳಿ
ಗೂಳಿ	ಘೂಳಿ
ಕೊಂಬು	ಖೊಂಬು
ಸಂಜೆ	ಥಂಜೆ
ಕಟುಕ	ಖಟುಕ
ಜಳಕಾ	ಝಳಕಾ
ಗಟ್ಟ	ಘಟ್ಟ
ಗಂಧ	ಘಂದ
ಬಾವಿ	ಭಾವಿ, ಭಾಯಿ, ಇತ್ಯಾದಿ
ತುಂಬಿ	ಥುಂಬಿ
ಕಬ್ಬು	ಖಬ್ಬು

ಅಕಾರ ಎಕಾರ ಆಗಿ	**ಅಆಇಕಾರಗಳು**	**ಕಕಿಕೋ ಕಾರಗಳಾಗಿ**
ಅಣ್ಣ = ಎಣ್ಣ	ಅದು	ಕದು
ಅಕ್ಕ = ಎಕ್ಕ	ಅಲ್ಲಿ	ಕಲ್ಲಿ, ಕೊಲ್ಲಿ
ಅಪ್ಪ = ಎಪ್ಪ	ಅವನು	ಕವನು
ಅವ್ವ = ಎವ್ವ ಇತ್ಯಾದಿ	ಆಕೆ	ಕಕಿ

ಇಲ್ಲಿ	ಕಿಲ್ಲಿ	
ಇವನು	ಕಿವನು, ಕಿವ	
ಇದು	ಕಿದು	ಇತ್ಯಾದಿ

ಎಕಾರಾಂತ್ಯ ಶಬ್ದಗಳು	**ಇಕಾರಾಂತ್ಯವಾಗಿ**	
ಪೂಜೆ	ಪೂಜಿ	
ಚಿಂತೆ	ಚಿಂತಿ	
ಸೀರೆ	ಸೀರಿ	
ಸಿಂಪೆ	ಸಿಂಪಿ	
ಆಕೆ	ಆಕಿ	
ಬೆಂಕೆ	ಬೆಂಕಿ	
ಬಾಲೆ	ಬಾಲಿ	
ಶಾಲೆ	ಸಾಲಿ	
ಕತ್ತೆ	ಕತ್ತಿ	ಇತ್ಯಾದಿ

ಏಕಾರ ಶಬ್ದಗಳು	**ಯಾಕಾರ ಶಬ್ದಗಳಾಗಿ**	
ಬೇಸರ	ಬ್ಯಾಸರ	
ಬೇಸಿಗೆ	ಬ್ಯಾಸಗಿ	
ಬೇಡ	ಬ್ಯಾಡ	
ಮೇಲೆ	ಮ್ಯಾಲ	
ಬೇನೆ	ಬ್ಯಾನಿ	
ಬೇರೆ	ಬ್ಯಾರ	
ಪೇಟೆ	ಪ್ಯಾಟಿ	
ವೇಳೆ	ವ್ಯಾಳಿ, ಯ್ಯಾಳಿ	ಇತ್ಯಾದಿ

ಓಕಾರ ಶಬ್ದಗಳು	**ವಕಾರ ಶಬ್ದಗಳಾಗಿ**
ಕೋಟೆ	ಕ್ವಾಟಿ
ಜೋಳ	ಜ್ವಾಳ
ಜೋಕೆ	ಜ್ವಾಕಿ
ಗೋಡೆ	ಗ್ವಾಡಿ
ಹೋದ	ಹ್ವಾದ
ಕೋಣ	ಕ್ವಾಣಾ ಇತ್ಯಾದಿ

ನಕಾರ ಶಬ್ದಗಳು	ಎಕಾರ ಶಬ್ದಗಳಾಗಿ
ನನ್ನ	ಎನ್ನ
ನನಗೆ	ಎನಗೆ
ನಮಗೆ	ಎಮಗೆ
ನಮ್ಮವರು	ಎಮ್ಮವರು
ನನ್ನಗೆ	ಎನ್ನಗೆ

ನಕಾರವು ಲಕಾರವಾಗಿ, ಲಕಾರವು ನಕಾರವಾಗಿರುವ ಪದಗಳು ಕಂಡುಬರುತ್ತದೆ. ಜನ್ಮ > ಜಲ್ಮ ಲಿಂಗ > ನಿಂಗ ಇತ್ಯಾದಿ. ಹಳೆಗನ್ನಡ ಭಾಷಾರೂಪದ ಪದಗಳನ್ನು ಉಪಯೋಗಿಸಿದ್ದೂ ಕಂಡುಬರುತ್ತದೆ. ಹನ, ಹರಾ ಮುಂತಾದವು. ಈ ಪದಗಳ ರೂಪನಿಷ್ಪತ್ತಿಯನ್ನು ಹೀಗೆ ಗುರುತಿಸಬಹುದು.

ಅದಾನ್ > ಅಪ್ಪನ್ > ಅಹನ್ > ಹಾನ > ಹನಾ

ಅದಾರ್ > ಅಪ್ಪರ್ > ಅಹರ್ > ಹಾರ > ಹರಾ ಇತ್ಯಾದಿ

ಈ ಪದಗಳು ಬೀದರ ಜಿಲ್ಲೆಯ ಆಡು ಭಾಷೆಯಲ್ಲಿ ಇಂದಿಗೂ ಜೀವಂತವಾಗಿರುವುದನ್ನು ಕಾಣಬಹುದು. ಹೊಯ್‌ಮಲ್ಲಿ, ಬರ್ತಾನ, ಹೊಯ್ತಾನ, ಹೊಂಟಾನ್, ಕುಡ್ತಾ, ತರ್ತಾ, ಬರ್ತಾ, ಹೊಯ್ತು, ತಕೋ, ಕಲ್ಲಿ, ಇಟ್ಟಿದ, ಕೊಟ್ಟಿದ, ಕುಡಲ್ ಎಂಬಂಥ ಅಪ್ಪಟ ಗ್ರಾಮ್ಯ ಪದಗಳನ್ನು ಸಹ ಬುಲಾಯಿ ಹಾಡುಗಳಲ್ಲಿ ಹೇರಳವಾಗಿ ಬಳಸಿಕೊಂಡಿದ್ದು ಕಂಡುಬರುತ್ತದೆ. ಹೀಗೆ ಇಂಥ ಕುತೂಹಲಕಾರಿಯಾದ ಬಿದರಿ ಭಾಷೆಯನ್ನೇ ಅಧಿಕೃತವಾಗಿ ಬಳಸಿಕೊಂಡು ಸಮೃದ್ಧವಾಗಿ ಬುಲಾಯಿ ಹಾಡುಗಳನ್ನು ರಚಿಸಿದ್ದಾರೆಂದು ಹೇಳಬಹುದು.

ಬೀದರ ಭಾಷೆ ಕುರಿತು ಡಾ. ಎ. ಮುರಿಗೆಪ್ಪರವರ ಅಭಿಪ್ರಾಯವು ಉಲ್ಲೇಖನೀಯವೆನಿಸುತ್ತದೆ. "ಬೀದರ ಜಿಲ್ಲೆಯ ಕನ್ನಡಿಗರ ಭಾಷೆ ಕರ್ನಾಟಕದ ಇತರ ಪ್ರದೇಶದ ಕನ್ನಡ ಭಾಷೆಗಿಂತ ಭಿನ್ನವಾಗಿದೆ. ಇವರು ಬಳಸುವ ಧ್ವನಿ, ಪದ, ಪದರಚನೆ, ವಾಕ್ಯರಣ, ವಾಕ್ಯರಚನೆಯನ್ನು ಗಮನಿಸಿದಾಗ ಇವೆಲ್ಲಕ್ಕೂ ಮಿಗಿಲಾಗಿ ಬೀದರ ಕನ್ನಡದ ವಾಕ್ಯದ ಲಯ ಸ್ವರೂಪ, ಇತರ ಭಾಷಾ ರೂಪಗಳಿಂದ ಭಿನ್ನವಾಗಿದೆ. ಈ ಕಾರಣ ಕೆಲವೊಮ್ಮೆ ಇಲ್ಲಿನ ಕನ್ನಡವನ್ನು ಇತರ ಪ್ರದೇಶದ ಕನ್ನಡಿಗರು ಅರ್ಥಮಾಡಿಕೊಳ್ಳುವುದು ಕಷ್ಟವೇ. ಪದದ ಆದಿ ಸ್ಥಾನದಲ್ಲಿ ಮಹಾಪ್ರಾಣವನ್ನು ಉಚ್ಚಾರ ಮಾಡುವುದು, ಇತರ ಭಾಷೆಗಳಿಂದ ಪದಗಳನ್ನು ಸ್ವೀಕಾರ ಮಾಡುವುದು, ಕನ್ನಡ ಪದಗಳನ್ನು ಉರ್ದುಪದಗಳೊಂದಿಗೆ ಸೇರಿಸಿ ಪದಗುಚ್ಛವನ್ನು ರಚಿಸುವುದು. ಕನ್ನಡದಲ್ಲಿ ಇಲ್ಲದ ಇತರ ಭಾಷೆಗಳನ್ನು ಧ್ವನಿಗಳನ್ನು ಸ್ವೀಕರಿಸಿ

ಬಳಸುವುದು, ಕನ್ನಡದ ಪದಗಳ ರಚನೆಯನ್ನು ಅಥವಾ ಕನ್ನಡದ ಪದರೂಪಗಳನ್ನು ಬದಲಾಯಿಸಿ ಬಳಸುವುದು, ಕನ್ನಡದ ವಿಜಾತಿ ವ್ಯಂಜನ ದ್ವಿತ್ವಗಳನ್ನು ಸಜಾತಿಯಾಗಿ ಪರಿವರ್ತಿಸಿ ಸ್ವತಂತ್ರ ಬೆಳವಣಿಗೆಯನ್ನು ಮಾಡಿಕೊಂಡಿರುವುದು ಹಾಗೂ ಇನ್ನೂ ಇತರ ಚಿಕ್ಕ ಪುಟ್ಟ ಬದಲಾವಣೆಗಳಿಂದಾಗಿ ಬೀದರಿನ ಕನ್ನಡ ಇತರ ಪ್ರಾದೇಶಿಕ ಹಾಗೂ ಸಾಮಾಜಿಕ ಉಪಭಾಷೆಗಳಿಂದ ಭಿನ್ನವಾಗಿದೆ"[೫೦] ಇಂತಹ ಭಿನ್ನ ಭಾಷೆಯೇ ಬುಲಾಯಿ ಹಾಡುಗಳ ಭಾಷೆ ಎನ್ನಬಹುದು.

ಇನ್ನು ಬುಲಾಯಿ ಹಾಡುಗಳ ಶೈಲಿಯನ್ನು ಕುರಿತು ಒಂದೆರಡು ಮಾತುಗಳಲ್ಲಿ ಹೇಳಬಹುದಾದರೆ ಇಲ್ಲಿಯ ಹಾಡುಗಳು ಸರಳ, ಸುಲಭ, ನೇರ ಹಾಗೂ ಸುಂದರವಾಗಿ ಅಭಿವ್ಯಕ್ತಗೊಂಡಂತೆ ಕಂಡುಬರುತ್ತವೆ. ಬಳಸುವ ಪದಗಳಲ್ಲಿ ಕ್ಲಿಷ್ಟತೆಯ ಬೆಡಗು-ಬಿನ್ನಾಣಗಳು ಕಂಡುಬರುವುದಿಲ್ಲ. ದಿನನಿತ್ಯ ಬಳಕೆಯ ವಿಷಯ-ವಸ್ತುಗಳು, ಒಡವೆ-ವಸ್ತ್ರ, ತಿಂಡಿ-ತಿನಸು, ಪ್ರಾಣಿ-ಪಶು-ಪಕ್ಷಿ ಮುಂತಾದವುಗಳ ಬಳಕೆಯು ಹೇರಳವಾಗಿ ಕಂಡುಬರುತ್ತದೆ. ಇನ್ನು ಪ್ರಾಸ, ಲಯ, ತಾಳ, ರಾಗಗಳಿಂದ ಕೂಡಿದ ಸಂಗೀತದ ಸೊಗಸು ಹಾಡುಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ. ಭಿನ್ನ ಭಿನ್ನ ಧಾಟಿಗಳಲ್ಲಿ ಭಿನ್ನ ಭಿನ್ನ ಸೊಲ್ಲಗಳ ಬಳಕೆಯೂ ಕಂಡು ಬರುತ್ತದೆ. ಒಟ್ಟಾರೆ ಇವು ಬುಲಾಯಿ ಸಂಸ್ಕೃತಿಯ ವಿವಿಧ ಮಜಲುಗಳನ್ನು ಸ್ಪಷ್ಟವಾಗಿ ಪ್ರತಿಬಿಂಬಿಸುವಂತೆ ಕಂಡುಬರುತ್ತವೆ.

ಈ ರೀತಿಯಾಗಿ ಬುಲಾಯಿ ಹಾಡುಗಳು ಜನಪದ ಗೀತೆಗಳಲ್ಲಿ ಕಂಡುಬರುವ ಎಲ್ಲಾ ವಿಷಯ ವಸ್ತುಗಳನ್ನು ಒಳಗೊಂಡಿದ್ದು, ವಿಶಿಷ್ಟ ಭಾಷೆ-ಶೈಲಿಗಳನ್ನು ಹೊಂದಿವೆ. ಬದುಕಿನ ಸಮಸ್ತ ಆಯಾಮಗಳನ್ನು ಈ ಹಾಡುಗಳಲ್ಲಿ ಕಾಣಬಹುದಾಗಿದೆ. ಯಾವುದೇ ಒಂದು ಬಗೆಗೆ ಅಂಟಿಕೊಂಡಿರದೆ ಸಮಗ್ರ ವಿಷಯಗಳನ್ನೊಳಗೊಂಡ ವಿಶ್ವಕೋಶದಂತೆ ಕಂಡುಬರುತ್ತವೆ. ಹೀಗಾಗಿ ಬುಲಾಯಿ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಬುಲಾಯಿ ಹಾಡುಗಳು ಜನಪದ ಹಾಡುಗಳಲ್ಲಿ ತನ್ನದೇ ಆದ ವಿಶಿಷ್ಟ ಹಾಗೂ ಮಹತ್ವದ ಸ್ಥಾನಮಾನ ಹೊಂದಿವೆ ಎಂದು ಹೇಳಬಹುದು. ಈಗ ಮರೆಯಾಗುತ್ತಿರುವ ಈ ಹಾಡುಗಳಿಮದ ಈ ಜಿಲ್ಲೆಯ ಜನರ ಜೀವನ ಸಾಹಿತ್ಯ ಸಂಸ್ಕೃತಿ ಮನೋರಂಜನೆಯ ಹಾಗೂ ಸಂಸ್ಕೃತಿಯ ಪರಿಚಯ ಮಾಡಿಕೊಡುವ ಕಿರು ಪ್ರಯತ್ನವಿದು.

ಅಡಿ ಟಿಪ್ಪಣಿ

೧. ದೇವು ಪತ್ತಾರ, : ಬೀದರ ಉತ್ಸವ ಸ್ಮರಣ ಸಂಚಿಕೆ, ೨೦೦೬, ಪುಟ ೫.

೨. ಮಲ್ಲಮ್ಮ ಡಿ. ಕಮಲನಗರ

೩. ಶಾಂತಾ ಬಸಪ್ಪಾ ಬಸವಕಲ್ಯಾಣ

೪. ಅಂಬವ್ವ ತುಕರಾಮ ಗೊಂದಲಿಗ

೫. ಪಾರ್ಬತಿ ಶಂಕರ ಬಸವಕಲ್ಯಾಣ

೬. ಮಹಾದೇವಿ ಮಲ್ಕಾಪ್ಪಾ ಭಾಲ್ಕಿ

೭. -ಅದೇ-

೮. -ಅದೇ-

೯. ಮಲ್ಲಮ್ಮ ಡಿ. ಕಮಲನಗರ

೧೦. -ಅದೇ-

೧೧. -ಅದೇ-

೧೨. -ಅದೇ-

೧೩. -ಅದೇ-

೧೪. ಗೌರಮ್ಮ ಕಾಡಾದಿ ಹುಲಸೂರ

೧೫. ಅಂಬವ್ವ ಕಲ್ಲಪ್ಪ ಸಂತಪೂರ

೧೬. ಪಾರ್ಬತಿ ಓಮಣ್ಣಾ ಸಂತಪೂರ

೧೭. ಕ್ಷೇತ್ರ ಕಾರ್ಯದಲ್ಲಿ ಸ್ಕಿಕ ಮಾಹಿತಿ

೧೮. ಡಾ|| ಡಿ.ಬಿ.ನಾಯಕ : ಬುಲಾಯಿ ಹಾಡುಗಳು ೨೦೦೧, ಪುಟ ೩೮

೧೯. ಬಸಮ್ಮ ನೀಲಕಂಠೆ ತಡೋಳಾ

೨೦. ಮಲ್ಲಮ್ಮ ಶಾಂತಪ್ಪಾ ಹಳ್ಳಿಖೇಡ

೨೧. ಬಸಮ್ಮ ನೀಲಕಂಠೆ ತಡೋಳಾ

೨೨. ಗುರಮ್ಮಾ ಹುಲಸೂರ

೨೩. -ಅದೇ-

೨೪. ಗೌರಮ್ಮಾ ಉಪ್ಪಾರ ಬಾಲಕುಂದಿ

೨೫. ಗಂಗಮ್ಮಾ ಬಸವಕಲ್ಯಾಣ

೨೬. ಕಸ್ತೂರಿಬಾಯಿ ಮೈಲೂರು

೨೭. -ಅದೇ-

೨೮. -ಅದೇ-

೨೯. ಗೌರಮ್ಮ ಕಾಡಾದಿ ಹುಲಸೂರ

೩೦. -ಅದೇ-

೩೧. -ಅದೇ-

೩೨. -ಅದೇ-

೩೩. ಡಾ॥ ಜ್ಯೋತ್ಸ್ನಾಕಾಮತ್ : ಮಹಿಳೆ ಒಂದು ಅಧ್ಯಯನ, ೧೯೯೯, ಪುಟ ೧೩

೩೪. ಡಾ॥ ಶಶಿಕಲಾ ಮೋಳ್ದಿ : ವಂದನೆ, ೧೯೮೮, ಪುಟ ೧೩೨

೩೫. ಭಾಗೀರಥಿ ಉಪ್ಪೆ ಔರಾದ

೩೬. ಅನುಸೂಯಾ ಬಸವಕಲ್ಯಾಣ

೩೭. ಚಂದ್ರಮ್ಮಾ ಹುಲಸೂರ

೩೮. ನಾಗಮ್ಮಾ ಶಂಖರ ಬಸವಕಲ್ಯಾಣ

೩೯. ನಾಗನಾಥ ಪ್ರಭಾ ಹಳ್ಳಿಖೇಡ (ಬಿ)

೪೦. ಮಲ್ಲಮ್ಮಾ ಶಾಂತಬೀರ ಹಳ್ಳಿಖೇಡ

೪೧. ಮಾದೇವಿ ನೀಲಕಂಠೆ ತಡೋಳಾ

೪೨. ಸವಿತಾ ಸೋಮನಾಥ ಕಣಜಿ

೪೩. ಭಾಗೀರಥಿ ಉಪ್ಪೆ ಔರಾದ

೪೪. ಡಾ॥ ಯಶೋಧರಾ ಶಾಸ್ತ್ರಿ : ಗುಲಬರ್ಗಾ ಜಿಲ್ಲೆಯ ಸಂಪ್ರದಾಯಿಕ ಹಾಡುಗಳು ೧೯೯೯, ಪುಟ ೨೪೦

೪೫. ಡಾ॥ ಡಿ.ಬಿ. ನಾಯಕ : ಬುಲಾಯಿ ಹಾಡುಗಳು, ೨೦೦೧, ಪುಟ ೩೯

೪೬. ಗೌರಮ್ಮ ಉಪ್ಪಾರ ಬಾಲಕುಂದಿ

೪೭. ಬಸಮ್ಮ ಮಂದಕನಳ್ಳಿ

೪೮. ನಾಗನಾಥ ಪ್ರಭಾ ಹಳ್ಳಿಖೇಡ

೪೯. ಡಾ॥. ರಾಜೇಂದ್ರ ಯರನಾಳೆ : ಬೀದರ ಜಿಲ್ಲೆಯ ಪ್ರಾದೇಶಿಕ ಭಾಷಾ ವೈಶಿಷ್ಟ್ಯ ೨೦೦೦

೫೦. -ಅದೇ- ಪುಟ ೧೧

೫೧. ಡಾ॥ ಎ. ಮುರಿಗೆಪ್ಪ : ಬೀದರ ಜಿಲ್ಲೆಯ ಕನ್ನಡ, ೨೦೦೯, ಪುಟ ೪-೫

ಅಧ್ಯಾಯ - ೭

ಸಮಾರೋಪ

ಅಧ್ಯಾಯ - ೭

ಸಮಾರೋಪ

ಬೀದರ ಜಿಲ್ಲೆಗೆ ತನ್ನದೇ ಆದ ಐತಿಹಾಸಿಕ, ರಾಜಕೀಯ ಭೌಗೋಳಿಕ, ಧಾರ್ಮಿಕ ಮತ್ತು ಸಾಹಿತ್ಯಿಕ ಹಿನ್ನೆಲೆ ಇದೆ ಎಂಬುದನ್ನು ಹಾಗೂ ಅನೇಕ ಅರಸು ಮನೆತನಗಳು ಈ ಪ್ರದೇಶದಲ್ಲಿ ಆಳ್ವಿಕೆ ನಡೆಸಿದ್ದಾರೆ ಎಂಬುದನ್ನು ಈ ಹಿಂದೆ ಗಮನಿಸಲಾಗಿದೆ. ಇಲ್ಲಿ ಶಿವಶರಣರು ಹಾಗೂ ಅನುಭಾವಿ ಕವಿಗಳು, ಗರತಿಯರು, ಹಾಡಿ ಸಂಸ್ಕೃತಿಯ ಹಿರಿಮೆಯನ್ನು ಹೆಚ್ಚಿಸಿದ್ದಾರೆ. ಅನೇಕ ದೇವಾಲಯಗಳು, ತೀರ್ಥಕ್ಷೇತ್ರಗಳು, ವಿದ್ಯಾಪ್ರಸಾರ, ಸಂಗೀತ ಅಭ್ಯಾಸ ಕೇಂದ್ರಗಳು ಜನರ ಬದುಕನ್ನು ಉದಾತ್ತಗೊಳಿಸಿವೆ. ಇಲ್ಲಿಯ ಜನರು ಶೈಕ್ಷಣಿಕವಾಗಿ, ಆರ್ಥಿಕವಾಗಿ ಹಿಂದುಳಿದ ಜನ ಎನಿಸಿದ್ದರೂ. ಸಾಹಿತ್ಯ ಕ್ಷೇತ್ರದಲ್ಲಿ ಅಪಾರ ಶ್ರೀಮಂತಿಕೆಯನ್ನು ಗಳಿಸಿದ್ದಾರೆ. ಅದರಲ್ಲೂ ಜನಪದ ಸಾಹಿತ್ಯವೆಂಬ ಅಮೂಲ್ಯ ಸಂಪತ್ತನ್ನು ತಮ್ಮ ಬದುಕಿನುದ್ದಕ್ಕೂ ಉಳಿಸಿಕೊಂಡು, ಬೆಳೆಸಿಕೊಂಡು, ಪೋಷಿಸಿಕೊಂಡು ಬಂದಿದ್ದಾರೆ. ತನ್ಮೂಲಕ ಸಂಸ್ಕೃತಿಯ ಮಟ್ಟವನ್ನು ಎತ್ತರಿಸಿದ್ದಾರೆ.

ಉತ್ತರ ಹಾಗೂ ಪಶ್ಚಿಮಕ್ಕೆ ಮಹಾರಾಷ್ಟ್ರ ಹಾಗೂ ಪೂರ್ವಕ್ಕೆ ಆಂಧ್ರದ ಗಡಿಭಾಗಗಳನ್ನು ಹೊಂದಿರುವ ಬೀದರ ಜಿಲ್ಲೆ ಮರಾಠಿ, ತೆಲುಗು ಹಾಗೂ ಉರ್ದುಭಾಷೆ ಹಾಗೂ ಸಂಸ್ಕೃತಿಗಳ ಪ್ರಭಾವಕ್ಕೆ ಒಳಗಾಗಿದೆ. ಹನ್ನೆರಡನೆಯ ಶತಮಾನದ ಶರಣರ ಪ್ರಭಾವವೂ ಈ ಭಾಗದ ಸಂಸ್ಕೃತಿಯ ಮೇಲೆ ಇರುವುದು ಕಂಡುಬರುತ್ತದೆ. ಅನುಭಾವಿ ಕವಿಗಳ ಅನುಭಾವ ಸಾಹಿತ್ಯ ಹಾಗೂ ತತ್ವಪದಕಾರರ ತತ್ವಪದಗಳ ಪ್ರಭಾವವೂ ಕಂಡುಬರುತ್ತದೆ. ತತ್ವಪದಗಳ ಮೂಲ ನೆಲೆಯೇ ಕಲ್ಯಾಣವಿರಬೇಕೆಂದಿನಿಸುತ್ತದೆ.

ಜನಪದ ಸಾಹಿತ್ಯದಲ್ಲಿ ಪದ್ಯ ಸಾಹಿತ್ಯಕ್ಕೆ ಅಗ್ರಸ್ಥಾನವಿದೆ. ಈ ಸಾಹಿತ್ಯದ ಪ್ರಕಾರಗಳಾದ ಕುಟ್ಟುವ ಹಾಡು, ಬೀಸುವ ಹಾಡು, ಹಂತಿ ಹಾಡು, ಜೋಗುಳ ಪದ, ಸಂಪ್ರದಾಯದ ಹಾಡು, ಮದುವೆ ಮತ್ತು ಆಚರಣೆಯ ಹಾಡು, ಮೊಹರಂ ಪದಗಳು, ಡೊಳ್ಳಿನ ಪದಗಳು, ಕೋಲಿನ ಪದಗಳು, ಬುಲಾಯಿ ಹಾಡುಗಳು ಮುಂತಾದವುಗಳು ಈ ಜಿಲ್ಲೆಯಲ್ಲಿ ಸಮೃದ್ಧವಾಗಿವೆ. ಇವುಗಳನ್ನು ಹಾಡುವವರಲ್ಲಿ ಅನೇಕ ಜನಪದ ವೃತ್ತಿಗಾಯಕರೂ ಈ ಜಿಲ್ಲೆಯಲ್ಲಿ ಕಂಡುಬರುತ್ತಾರೆ. ಉದಾ: ಭೂತೇರು, ಗೊಂದಲಿಗರು, ಪುರವಂತರು ಮುಂತಾದವರು.

ಬಯಲಾಟ, ದೊಡ್ಡಾಟ, ಸಣ್ಣಾಟ, ಕೋಲಾಟ, ಅಲಾಯಿ ಕುಣಿತ, ಭುಲಾಯಿ ಹಾಕುವುದು, ಡೊಳ್ಳು ಕುಣಿತ, ನಂದಿಕೋಲು ಕುಣಿತ, ಪುರವಂತಿಕೆ ಮುಂತಾದ ಜನಪದ ಕಲೆಗಳು ಇಲ್ಲಿ ಮನೋರಂಜನೆ ಹಾಗೂ ಆರಾಧನಾ ಕಲೆಗಳಿವೆ. ಅಲಾಯಿ ಕುಣಿತ ಹಿಂದು - ಮುಸ್ಲಿಮರ ಬಾಂಧವ್ಯ ಹಾಗು ರಾಷ್ಟ್ರೀಯ ಭಾವೈಕ್ಯತೆಯನ್ನು ಹೆಚ್ಚಿಸುವಲ್ಲಿ ಫಲಕಾರಿಯಾಗಿದೆ.

ಮೊಹರಂ ಪದಗಳು ಮುಸ್ಲಿಂ ಹಾಗೂ ಡೊಳ್ಳಿನ ಪದಗಳು ಹಾಲುಮತದ ಸಂಸ್ಕೃತಿಯ ಪ್ರತೀಕಗಳೆನಿಸುತ್ತವೆ. ಹಾಗೆಯೇ ಬುಲಾಯಿ ಹಾಡುಗಳು ಬುಲಾಯಿ ಸಂಸ್ಕೃತಿಯ ಪ್ರತೀಕಗಳೆನಿಸುತ್ತವೆ. ಭುಲಾಯಿ ಹಾಡುಗಳು ಬುಲಾಯಿ ಸಂಸ್ಕೃತಿಯ ಸಂಕೇತಗಳೆನಿಸುತ್ತವೆ. 'ಭುಲಾಯಿ ಹಾಕು'ವುದು ಸಹಬಾಳ್ವೆಯ, ಸಹಕಾರ ಹಾಗೂ ಸಹಬಾಂಧವ್ಯಗಳನ್ನು ಹೆಚ್ಚಿಸುವಂತಿದೆ.

ಹೆಣ್ಣುಮಕ್ಕಳ ಭವ್ಯಬಾಳಿನ ಸತ್ಯಚಿತ್ರಣದ ಜೊತೆಗೆ ಆಯಾ ಸಂದರ್ಭಗಳ, ಆಯಾ ಕಾಲದ ರಾಜಕೀಯ, ಸಾಮಾಜಿಕ, ಧಾರ್ಮಿಕ, ಐತಿಹಾಸಿಕ, ಚಿತ್ರವನ್ನು ಬುಲಾಯಿ ಹಾಡುಗಳಲ್ಲಿ ಕಾಣಬಹುದಾಗಿದೆ ಹೀಗಾಗಿ ಇವು ಸಾಹಿತ್ಯ ಸಂಪತ್ತು ಸೂರೆಗೊಂಡು ಸಂಸ್ಕೃತಿಯ ಪ್ರತೀಕವಾಗಿ ಕಂಗೊಳಿಸುತ್ತಿವೆ. ಗರತಿಯ ಬದುಕಿನ ಸುಖ-ದುಃಖ ನಂಬಿಕೆ-ಸಂಪ್ರದಾಯ, ತ್ಯಾಗ-ಬಲಿದಾನ, ಇಚ್ಛೆ-ಅಭಿರುಚಿ, ಗೃಹಜೀವನ ಮುಂತಾದ ಭಾವಗಳೆಲ್ಲಾ ಇವುಗಳಲ್ಲಿ ತುಂಬಿ ಅವಳ ಇಡೀ ಬದುಕನ್ನೇ ಬಿಡಿಹಾಡುಗಳಲ್ಲಿ ಬಿಚ್ಚಿತೋರಿಸುತ್ತವೆ. ಬುಲಾಯಿ ಹಾಡುಗಳಲ್ಲಿ ಕಂಡುಬರುವ ಗ್ರಾಮ್ಯ ಬೈಯ್ಗುಳ ಬನಿಗಳಂತೂ ಭಾಷಾ ಸೌಂದರ್ಯವನ್ನು ಇನ್ನಷ್ಟು ಹೆಚ್ಚಿಸಿವೆ. ಇತಿಹಾಸಕಾರರು ಬರೆದಿಡದ ಐತಿಹಾಸಿಕ ವಿಷಯಗಳನ್ನು ಬುಲಾಯಿ ಹಾಡುಗಳಿಂದ ತಿಳಿಯಬಹುದಾಗಿದೆ.

"ಗರತಿಯ ಹಾಡು ನಮ್ಮ ಸ್ತ್ರೀ ಜೀವನದ ಒಳಗನ್ನಡಿ; ಅದು ನಮ್ಮ ಹೆಣ್ಣುಮಕ್ಕಳ ಹೃದಯದ ಪಡಿಗನ್ನಡಿ, ಅದರಲ್ಲಿ ಮಮತೆಯ ಮಾಧುರ್ಯವು ಮೈವೆತ್ತಿದೆ; ಪ್ರೇಮದ ಸತ್ವವು ಅಳವಟ್ಟಿದೆ. ಅದರಲ್ಲಿ ಹೆಣ್ಣಿನ ತ್ಯಾಗಬುದ್ಧಿಯು ತುಳುಕುತ್ತಿದೆ. ಕೌಟುಂಬಿಕ ಬಾಳಿನ ರಸವು ಪರಿಪಾಕಗೊಂಡಿದೆ"[7] ಎಂದು ಸಿಂಪಿ ಲಿಂಗಣ್ಣನವರು ಬರೆದದ್ದು ನೋಡಿದರೆ, ಬಹುಶಃ ಬುಲಾಯಿ ಹಾಡುಗಳ ಸಂಗ್ರಹವೊಂದನ್ನು ಅವರಿಗೆ ಕೊಟ್ಟರೂ ಅದಕ್ಕೂ ಮೇಲಿನ ಮಾತುಗಳನ್ನೇ ಬರೆಯುದರ ಜೊತೆಗೆ ಇವುಗಳ ಇನ್ನಷ್ಟು ವಿಷಯ ಹಾಗೂ ಮಹತ್ವಗಳ ಕುರಿತು ಬರೆಯುತ್ತಿದ್ದರೇನೋ ? ಏಕೆಂದರೆ ಗರತಿಯ ತ್ರಿಪದಿಗಳಲ್ಲಿ ಕಂಡುಬರುವ ಎಲ್ಲ ವಿಷಯಗಳ ಜೊತೆಗೆ ಈ ಜಿಲ್ಲೆಯ ಆಯಾಕಾಲದ ಸಾಮಾಜಿಕ, ರಾಜಕೀಯ, ಧಾರ್ಮಿಕ, ಐತಿಹಾಸಿಕ, ಆರ್ಥಿಕ ವಿಷಯಗಳನ್ನು ಸಹ ಇವು ದಾಖಲಿಸಿವೆ ಒಂದರ್ಥದಲ್ಲಿ ಇವು ಮಾಹಿತಿಗಳ ಆಗರವೆನ್ನಬಹುದು. ಜೊತೆಗೆ **ಇವು ಬೀದರ ಜಿಲ್ಲೆಯ ಬುಲಾಯಿ ಸಂಸ್ಕೃತಿಯ ಹಾಗೂ ಸಮಾಜದ ಒಳನೋಟಗಳನ್ನು ಕೊಡುವ ಹೆಣ್ಣಿನ ಧ್ವನಿಯಾಗಿವೆ. ಇವುಗಳಲ್ಲಿ ದಟ್ಟವಾಗಿ ಚಿತ್ರಿತವಾಗಿರುವ ಮಹಿಳಾಜೀವನದ ಚಿತ್ರಣವನ್ನೂ ನೋಡುತ್ತೇವೆ.**

ಆಧುನೀಕರಣ, ಸಾಮಾಜಿಕೀಕರಣ, ಸಾಂಸ್ಕೃತೀಕರಣ ಹಾಗೂ ಜಾಗತೀಕರಣಗಳ ಪ್ರಭಾವದಿಂದಾಗಿ ಬದುಕು ಆಡಂಬರವಾಗಿದೆ. ಯಾಂತ್ರಿಕ ಬದುಕಿನಲ್ಲಿ ಇಂದು ಮೌಲ್ಯಗಳು ಮರುಳುಗಾಡಿನ ಓಯಾಸಿಸಗಳಂತಾದರೆ, ಮಾನವತೆಯು ಜಿನುಗುವ ಚಿಲುಮೆ. ದಿನನಿತ್ಯದ ಸಮಸ್ಯೆಗಳು, ಕೆಲಸದ ಒತ್ತಡಗಳು ಮತ್ತು ಭಯೋತ್ಪಾದನೆಯ ರುದ್ರನರ್ತನ, ಆತ್ಮಹತ್ಯೆ ಪ್ರಸಂಗಗಳು ದಿನೇ ದಿನೇ ಹೆಚ್ಚಾಗುತ್ತಿವೆ. ಇವು ಯುವ ಜನಾಂಗದ ಮೇಲೆ ಗಾಢಪರಿಣಾಮವನ್ನು

ಜೀರುವಂತಹವು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಮೌಲ್ಯಗಳಿಲ್ಲದೆ ಹೋದರೆ ಬದುಕು ಜರ್ಜರಿತವಾಗುವುದು. ಆದುದರಿಂದ ಮೌಲ್ಯಗಳು ಕುಸಿಯುತ್ತಿರುವ ಇಂದಿನ ದಿನಗಳಲ್ಲಿ ಮಾನವೀಯತೆಯ ಬದುಕು, ಸಹಬಾಳ್ವೆ, ಸಮಾನತೆ ಸಾಮರಸ್ಯದ ಬದುಕು ನಮ್ಮದಾಗಬೇಕಾಗಿದೆ. ಇಂತಹ ಮೌಲ್ಯಗಳು ಬುಲಾಯಿ ಹಾಡುಗಳಲ್ಲಿ ಹೇರಳವಾಗಿ ಕಂಡುಬರುವುದನ್ನು ನಾವಿಲ್ಲಿ ಗಮನಿಸಬಹುದಾಗಿದೆ.

ಗ್ರಾಮ ಸಮಾಜದ ಸುವ್ಯವಸ್ಥಿತ ಜೀವನಕ್ಕೆ ಅಡಿಪಾಯವಾಗಿರುವಂತಹ ಸುಖ, ಶಾಂತಿ, ನೆಮ್ಮದಿ, ಶೀಲ, ಪಾತಿವ್ರತ್ಯ, ಸಚ್ಚಾರಿತ್ರ್ಯ, ಗುರುಹಿರಿಯರಲ್ಲಿ ಭಕ್ತಿ, ವಿಧೇಯತೆ, ವಿನಯ, ನೀತಿಯುತ ಮೌಲ್ಯಗಳು, ಪ್ರೀತಿ, ತ್ಯಾಗ, ಸಹನೆ ಮುಂತಾದ ಮಾನವೀಯ ಮೌಲ್ಯಗಳನ್ನು ಈ ಹಾಡುಗಳು ತಿಳಿಯಪಡಿಸುತ್ತವೆ. ಸ್ವಾರ್ಥ, ಅಹಂಭಾವಗಳಿಂದ ಕುಟುಂಬಗಳು ಒಡೆದು, ವಿಚ್ಛೇದನ ಪಡೆಯುತ್ತಿರುವವರಿಗೆ ಬುಲಾಯಿ ಹಾಡುಗಳು ಹೆಣ್ಣಿನ ತ್ಯಾಗ, ಸಹನೆ ಪ್ರೀತಿಗಳಿಂದ ಕುಟುಂಬದಲ್ಲಿ ಸುಖ-ಸಂತೋಷಗಳನ್ನು ಉಂಟುಮಾಡುವ ರೀತಿಯನ್ನು ತಿಳಿಯಪಡಿಸುತ್ತವೆ. ಹೆಣ್ಣಿನ ಶೀಲ-ಪಾತಿವ್ರತ್ಯಗಳಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಟ್ಟಿರುವುದು ಕಂಡುಬರುತ್ತದೆ. ಪರರ ಸಂತೋಷಕ್ಕೆ ತನ್ನ ಜೀವನವನ್ನು ತ್ಯಾಗ ಮಾಡುವವರಿಗೆ ಆದರ್ಶ ಪುರುಷ, ಆದರ್ಶ ಸ್ತ್ರೀ ಎಂದು ಗುರುತಿಸಿ, ಅವರನ್ನು ದೈವತ್ವಕ್ಕೂ ಒಯ್ದು, ಪೂಜಿಸುವ, ಸ್ತುತಿಸುವುದನ್ನು ಇಲ್ಲಿ ಕಾಣಬಹುದು. ಹೀಗಾಗಿ ಯುವ ಜನಾಂಗಕ್ಕೆ ಮೌಲ್ಯ ಶಿಕ್ಷಣವನ್ನು ನೀಡುವಲ್ಲಿ ಬುಲಾಯಿ ಹಾಡುಗಳು ತವನಿಧಿಯಂತಿವೆ. ಮೌಲ್ಯಯುತ ಬದುಕಿಗೆ ದಾರಿದೀಪಗಳಾಗಿವೆ ಎಂದು ಹೇಳಬಹುದು.

ಜನಪದ ಗೀತೆಗಳಲ್ಲಿ 'ಭುಲಾಯಿ ಪದ' ಪ್ರಕಾರಗಳನ್ನು ಸೇರಿಸಿದ್ದು ೧೯೭೯ರಲ್ಲಿ[೨]. ಅದಕ್ಕಿಂತ ಪೂರ್ವದಲ್ಲಿ ಬಹುಶಃ ಈ ಪ್ರಕಾರವನ್ನು ಜನಪದ ಗೀತೆಗಳಲ್ಲಿ ಗುರುತಿಸಿದಂತಿಲ್ಲ. 'ಈವರೆಗೆ ಗುರುತಿಸಲ್ಪಟ್ಟಿರುವ ಹಾಡುಗಾರಿಕೆಯ ಸಂಪ್ರದಾಯಗಳಿಗೆ ಇದೊಂದು ಹೊಸ ಜೋಡಣೆ''[೩] ಎಂದು ಭುಲಾಯಿ ಪದ ಕುರಿತು ಜೀಶಂಪ ಅವರು ಬರೆದದ್ದು ಇದನ್ನೇ ಸೂಚಿಸುತ್ತದೆ. ಬೀದರ ಜಿಲ್ಲೆಯನ್ನು ನಿರ್ಲಕ್ಷಿಸಿದಂತೆ ಇಲ್ಲಿಯ ವಿಶಿಷ್ಟ ಸಾಹಿತ್ಯ ನಿಧಿಯಾದ ಬುಲಾಯಿ ಹಾಡುಗಳನ್ನು ನಿರ್ಲಕ್ಷಿಸಲಾಗಿತ್ತು. ಹೆಣ್ಣಿನ ಕೌಟುಂಬಿಕ ಜೀವನದ ಜೊತೆಗೆ ಬದುಕಿನ ಇನ್ನಿತರ ವಿಷಯಗಳನ್ನು ಸಹ ತನ್ನ ವ್ಯಾಪ್ತಿಗೆ ಒಳಪಡಿಸಿಕೊಂಡ ಬುಲಾಯಿ ಹಾಡುಗಳ ವ್ಯಾಪ್ತಿ ತುಂಬಾ ವ್ಯಾಪಕವಾಗಿ ಕಂಡುಬರುತ್ತದೆ. ಆಯಾ ಕಾಲಗಳ, ಸಂದರ್ಭಗಳ ವಿಷಯ ವಸ್ತು ಈ ಹಾಡುಗಳಲ್ಲಿರುವುದು ಅದರ ಹರವಿಗೆ ಸಾಕ್ಷಿಯಾಗಿವೆ.

'ಭುಲಾಯಿ ಹಾಕು'ವುದು ಬೀದರದ ನೆರೆ ರಾಜ್ಯಗಳ ಗಡಿಭಾಗಗಳಾದ ಮಹಾರಾಷ್ಟ್ರ ಹಾಗೂ ಆಂಧ್ರ ಪ್ರದೇಶಗಳ ಕೆಲವು ಕಡೆಯಲ್ಲಿ ಕಂಡುಬರುತ್ತದೆ. ಹಳ್ಳಿಗಳಲ್ಲಿ ಇಂದಿಗೂ 'ಭುಲಾಯಿ ಹಾಕು'ವುದು, 'ಭುಲಾಯಿ ಹಾಡು' ಎಂದೇ ಹೇಳುತ್ತಾರೆ. ಇದು ಶಿಷ್ಟರ ಶಿಷ್ಟತೆಯಿಂದ ಅವರ ಕೈ ಹಾಗೂ ಬಾಯಿಯಲ್ಲಿ 'ಬುಲಾಯಿ' ಆದಂತೆ ಕಂಡುಬರುತ್ತದೆ. ಅಕ್ಷರಗಳಲ್ಲಿ

ಕಾಣುವ ಹಾಡುಗಳು 'ಬುಲಾಯಿ ಹಾಡುಗಳಾಗಿ'ವೆ. ವಾಕ್ ಸಂಪ್ರದಾಯದ ಪಾರಂಪರಿಕ ರೀತಿಯಲ್ಲಿ ಇನ್ನೂ 'ಭುಲಾಯಿ ಹಾಡು' ಭುಲಾಯಿ ಹಾಕುವುದು ಎಂದೇ ಹೇಳುವುದು ಕಂಡುಬರುತ್ತದೆ. ಅಂತೆಯೇ ಪ್ರಬಂಧದಲ್ಲಿ 'ಬುಲಾಯಿ ಹಾಡು' ಹಾಗೂ 'ಭುಲಾಯಿ ಹಾಕು'ವುದು ಎಂದೇ ಬಳಸಲಾಗಿದೆ. ಅಂತು ಕಲೆಯಲ್ಲಿ 'ಭುಲಾಯಿ ಹಾಕು'ವುದೆಂದೇ ಉಳಿದಿದೆ.

ಬೀದರ ಜಿಲ್ಲೆಯಲ್ಲಿ ನಾಗಪೂಜೆಯು ಸರ್ವಸಾಮನ್ಯವಾಗಿದ್ದಂತೆ ಕಂಡುಬರುತ್ತದೆ. ನಾಗರಪಂಚಮಿ ಸಂದರ್ಭದಲ್ಲಿ ಮಾತ್ರ ಅಲ್ಲದೆ ಉಳಿದಂತೆ, ವರ್ಷ ಇಡೀ ನಾಗಪೂಜೆಯು ಕಂಡುಬರುತ್ತದೆ. ಹಾಗಾಗಿ ಇಲ್ಲಿಯ ಪ್ರತಿಯೊಂದು ಗುಡಿಯಲ್ಲಿ ನಾಗಮೂರ್ತಿಗಳು ಕಡ್ಡಾಯವಾಗಿ ಕಂಡುಬರುತ್ತವೆ. ಇವು ವಿವಿಧ ಪ್ರಕಾರಗಳಲ್ಲಿವೆ. ಒಂಟಿ ನಾಗ, ಜೋಡಿ ನಾಗ, ಐದು ಹೆಡೆಯ ನಾಗ, ಏಳುಹೆಡೆಯ ನಾಗ, ಹಿರೋಡ್ಯಾ ಮುಂತಾದ ರೂಪಗಳನ್ನು ಕಾಣಬಹುದು. ಹೆಣ್ಣುಮಕ್ಕಳು ಮುಟ್ಟಿನ ದೋಷನಿವಾರಣೆಗೆ, ಸಂತಾನಾಭಿವೃದ್ಧಿಗಾಗಿ ಹಾಗೂ ಸುಖ-ಸಮೃದ್ಧಿಗಾಗಿ ನಾಗಪೂಜೆ ಮಾಡುವಂತಿದೆ. ಮನೆಗಳಲ್ಲಿಯೂ ಹುತ್ತ, ಹಿರೋಡ್ಯಾ, ನಾಗಶಿಲೆಯನ್ನಿಟ್ಟು ಪೂಜಿಸುವುದು ಕಂಡುಬರುತ್ತದೆ. ಈಗಲೂ ಜನರಿಗೆ ನಾಗಪೂಜೆ ವಿಷಯದಲ್ಲಿ ಮೊದಲಿನ ಶ್ರದ್ಧೆ, ಭಕ್ತಿಗಳು ಕಂಡುಬರುತ್ತವೆ. ವೈಜ್ಞಾನಿಕ ಯುಗದಲ್ಲಿಯೂ ಮುಟ್ಟಿನ ದೋಷ, ನಾಗದೋಷ ನಿವಾರಣೆಗೆ, ಕಲಿತವರೂ ಕೈಜೋಡಿಸಿ ಪೂಜಿಸುವ, ನಂಬುವ ಹರಕೆ ಹೊತ್ತಿ, ತೀರಿಸುವ ಪರಿಪಾಠಗಳು ಕಂಡುಬರುತ್ತವೆ. ನಾಗಮೂರ್ತಿಗಳಿಗೆ ಬೆಳ್ಳಿಯ ಹೊದಿಕೆ ಹಾಕಿಸಿದ್ದೂ ಕಾಣಬಹುದು. ಅಂತೆಯೇ ಈಗ ಕೆಲವು ಕಡೆ ನಾಗಮಂದಿರಗಳೂ ನಿರ್ಮಾಣವಾಗಿವೆ. ಇವು ಭಕ್ತರ, ದಾನಿಗಳ ಉದಾರ ಕೊಡುಗೆಯ ಫಲವೇ ಆಗಿರುತ್ತವೆ.

ಭಯೋತ್ಪಾದನೆ, ಕೋಮುಗಲಭೆಯ ಇಂದಿನ ಪರಿಸ್ಥಿತಿಯಲ್ಲಿ ಬುಲಾಯಿ ಹಾಡುಗಳು ಸಹಬಾಳ್ವೆ, ಸೌಹಾರ್ದತೆ, ಭಾವೈಕ್ಯತೆಯನ್ನು ಎತ್ತಿತೋರಿಸಿ, ಮಾರ್ಗದರ್ಶನ ನೀಡುತ್ತವೆ.

ಬುಲಾಯಿ ಹಾಡುಗಳಲ್ಲಿ ಒಂದೇ ವಿಷಯಕ್ಕೆ ಸಂಬಂಧಿಸಿದ ಹಲವಾರು ಹಾಡುಗಳು ಕಂಡುಬರುತ್ತವೆ. ಪಾಠಾಂತರದಿಂದ ತಮಗೆ ಅನುಕೂಲವಾದ ರೀತಿಯಲ್ಲಿ ಹಾಡಿದ್ದು, ಅವು ವಿಭಿನ್ನ ದಾಟಿಗಳಲ್ಲಿ ಹಾಡಲ್ಪಡುತ್ತವೆ. ಹೀಗಾಗಿ ಒಂದು ಹಾಡಿನಲ್ಲಿ ಸಿಗದ ಮಾಹಿತಿ ಅತಿ ಚಿಕ್ಕವುಗಳಾಗಿದ್ದರೆ ಇನ್ನೂ ಕೆಲವು ಇಡೀ ರಾತ್ರಿಯೆಲ್ಲಾ ಹಾಡುವ ಖಂಡಕಾವ್ಯಗಳಂತೆ ಕಾಣಿಸುತ್ತವೆ. ಅಂತೆಯೇ ಬುಲಾಯಿ ಹಾಡುಗಳನ್ನು ಇಡಿ ರಾತ್ರಿ ಹಾಡುತ್ತಿದ್ದರೆಂದು ಹೇಳುತ್ತಾರೆ.

ಇತರ ಜನಪದ ಗೀತೆಗಳ ಪ್ರಭಾವ-ಪ್ರೇರಣೆಗಳು ಬುಲಾಯಿ ಹಾಡುಗಳ ಮೇಲೆ ಆಗಿರುವ ಸಾಧ್ಯತೆಗಳು ಕಂಡುಬರುತ್ತವೆ. ಸಂಕರ ಸಂಸ್ಕೃತಿಯಾಗಿರುವ ಬುಲಾಯಿ ಸಂಸ್ಕೃತಿಯ ಸಾಹಿತ್ಯ ಸಹ ಇತರ ಜನಪದ ಗೀತೆಗಳನ್ನು ಅನುಸರಿಸಿದಂತೆ ಕಂಡುಬರುತ್ತದೆ.

ಭಾಷಾದೃಷ್ಟಿಯಿಂದ ನೋಡುವುದಾದರೆ, ಬೀದರ ಜಿಲ್ಲೆ ಬಹುಕಾಲದವರೆಗೆ ಮುಸ್ಲಿಮ್ ಅರಸರ ಆಳ್ವಿಕೆಗೆ ಒಳಗಾಗಿತ್ತು. ಹೀಗಾಗಿ ಉರ್ದು ಭಾಷೆ ಹಾಗೂ ನೆರೆರಾಜ್ಯಗಳಾದ ಮಹಾರಾಷ್ಟ್ರ ಹಾಗೂ ಆಂಧ್ರಗಳ ಮರಾಠಿ ಹಾಗೂ ತೆಲುಗು ಭಾಷೆಗಳ ಪ್ರಭಾವ ಬೀದರ ಕನ್ನಡ ಭಾಷೆಯ ಮೇಲೆ ಅಗಾಧವಾಗಿದೆ. ಬೀದರ ಕನ್ನಡ ಭಾಷೆಯಲ್ಲಿ ಮೇಲಿನ ಮೂರು ಭಾಷೆಗಳ ಎಷ್ಟೋ ಪದಗಳು ಬೆರತು ಹೋಗಿವೆ. ದುಸಮಾನ, ದರಕಾಸ, ದಫ್ತರ್, ಬಹಾದ್ದೂರ್ ಮೊದಲಾದ ಉರ್ದು ಭಾಷೆಯ ಪದಗಳು, ಸಾಲಿ, ಬಾರಾ, ಛಪ್ಪನ್ನ, ಲೀಕ, ಪರಕರ ಮುಂತಾದ ಮರಾಠಿ ಭಾಷೆಯ ಪದಗಳು. ಅಡಗತಿ, ಭಾಮಾ ಮುಂತಾದ ತೆಲುಗು ಭಾಷೆಯ ಪದಗಳು ಬುಲಾಯಿ ಹಾಡುಗಳಲ್ಲಿ ಸೇರಿಕೊಂಡಿವೆ. ಹೊತ್ತರಳಿ, ಮರಿತೇಜ, ಮಕಬಾಡಿ, ಮಡದೀನ ಮುಂತಾದ ಶಿಷ್ಟಭಾಷಾಪದಗಳ ಪ್ರಯೋಗ, ಥೀಡಿ, ಬಿಡಿ, ಬುಕ್ಕು ಫಕ್ಕಿ ಹೋಯ್ತು, ಬಿಸದಾಣಿ ಮುಂತಾದ ಗ್ರಾಮ್ಯ ಪದಗಳೂ ಈ ಹಾಡುಗಳಲ್ಲಿ ಬೆರೆತಿವೆ. ಠೇಶನ್, ಮೋಟಾರು, ಮಾಸ್ತರ, ರೇಲು ಮುಂತಾದ ಇಂಗ್ಲೀಷ್ ಪದಗಳೂ ಸೇರಿವೆ. ಅನ್ಯಭಾಷೆಗಳ ಇಂಥ ಪದಗಳೊಂದಿಗೆ ಕೂಡಿಕೊಂಡು ಹೊಸ ರೂಪ ಪಡೆದಿರುವ ಇಲ್ಲಿಯ ಕನ್ನಡ **ಬಿದರಿ ಕನ್ನಡ** ಎನಿಸಿದೆ. ಭಾಷಾಶಾಸ್ತ್ರಜ್ಞರು ಗುರುತಿಸಿದ್ದು ಕಲ್ಯಾಣ ಕನ್ನಡ ಅಥವಾ ಕಲಬುರಗಿ ಕನ್ನಡ, ಆದರೆ ಬುಲಾಯಿ ಹಾಡುಗಳಿರುವುದು 'ಬಿದರಿ ಕನ್ನಡ' ದಲ್ಲಿ. ಈ ಹಾಡುಗಳಲ್ಲಿ ದ್ವಿರುಕ್ತಿ ಪದಗಳಾದ ಛಿಲಿಛಿಲಿ, ಭರಭರ, ಫಕಫಕ, ರೊಟ್ಟಿ ರೊಟ್ಟಂತ, ಕಲ್ಲು ಕಲ್ಲು, ಗ್ದೂಟಗ್ದೂಟ ಮುಂತಾದವುಗಳ ಬಳಕೆಯು ಕಂಡು ಬರುತ್ತವೆ.

ಒಟ್ಟಿನಲ್ಲಿ ಬುಲಾಯಿ ಹಾಡುಗಳು ಹೆಣ್ಣುಮಕ್ಕಳ ಸಾಹಿತ್ಯ ಸೃಷ್ಟಿಯ ಸರ್ವೋತ್ತುಂಗ ರಸಾಫಲಗಳಾಗಿವೆ. ಹೆಣ್ಣಿನ ಜೀವನದ ನೋವು-ನಲಿವು, ಕಷ್ಟ-ನಷ್ಟ, ತ್ಯಾಗು-ಬಲಿದಾನ, ಪ್ರೀತಿ-ದ್ವೇಷ, ಸಹನೆ-ಸ್ವಾರ್ಥ ಹಾಗೂ ಸ್ತ್ರೀ ಸಂವೇದನೆಗಳಿಂದ, ಪೌರಾಣಿಕ, ಧಾರ್ಮಿಕ, ರಾಜಕೀಯ, ಐತಿಹಾಸಿಕ, ಧಾರ್ಮಿಕ, ಆಧ್ಯಾತ್ಮಿ (ಇವುಗಳಲ್ಲಿ ಕೆಲವು ಪುರುಷ ರಚನೆಗಳಿವೆ) ವ್ಯಾಪ್ತಿಯನ್ನು ಪಡೆದು ವ್ಯಾಪಿಸಿವೆ. ಈ ಹಾಡುಗಳಲ್ಲಿ ಬದುಕಿನ ಹಲವಾರು ಆಯಾಮಗಳಿಗೆ ಸ್ಪಂದಿಸಿದ್ದಾರೆ. ಹೀಗಾಗಿ ಜನಪದ ಗೀತೆಗಳಲ್ಲಿ ಇವು ವಿಶಿಷ್ಟ ಕೊಡುಗೆಯಾಗಿ, ಬೀದರ ಭಾಗದಲ್ಲಿ ಸಾಹಿತ್ಯ, ಭಾಷೆ, ಸಂಸ್ಕೃತಿಗಳ ಸಮನ್ವತೆಯನ್ನು ಮೆರೆದಿರುವುದು ವಿಶೇಷವಾಗಿದೆ.

ಇಂತಹ ವಿಶೇಷವಾದ ಬುಲಾಯಿ ಹಾಡುಗಳು ಹೆಚ್ಚಾಗಿ ಪ್ರಚಾರ ಪಡೆಯದೆ, ಈಗ ಮತ್ತೆ ಮರೆಯಾಗುತ್ತಿರುವುದರಿಂದ ಮಹಾ ಪ್ರಬಂಧದಲ್ಲಿ ಪರಿಪೂರ್ಣವಲ್ಲದೆ ಹೋದರೂ ಹಾಡುಗಳ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಅವುಗಳ ವಿಶ್ಲೇಷಣೆ ಹಾಗೂ ವೈಶಿಷ್ಟ್ಯಗಳ ಪರಿಚಯ ಮಾಡುವ ಒಂದು ಪ್ರಾಮಾಣಿಕ ಕಿರುಪ್ರಯತ್ನವಿದು ಎಂದು ನಾನು ಇಲ್ಲಿ ಭಾವಿಸಿದ್ದೇನೆ.

ಅಡಿ ಟಿಪ್ಪಣಿ

೧.	ಹುಸಂಗಿ ಚೆನ್ನಮಲ್ಲಪ್ಪ ಮತ್ತು ಗೆಳೆಯರು	:	ಗರತಿಯ ಹಾಡು ೧೯೬೦, ಅಲಿಕೆ ಪುಟ ೨೦
೨.	ಕ್ಯಾತನಹಳ್ಳಿ ರಾಮಣ್ಣ	:	ಬೀದರ ಜಿಲ್ಲೆಯ ಜನಪದಗೀತೆಗಳು, ೧೯೭೭, ಪುಟ ೮
೩.	-ಅದೇ-		
೪.	ಕ್ಷೇತ್ರ ಕಾರ್ಯದಲ್ಲಿ ಸಿಕ್ಕ ಮಾಹಿತಿ		

ಅನುಬಂಧ

ಬೀದರ ಜಿಲ್ಲೆಯ ನಕ್ಷೆ



೨೮.	ಲಕ್ಷ್ಮೀದಯಾ ಪ್ರಸಾದ	ಬಸವಕಲ್ಯಾಣ	೬೮ ವರ್ಷ	ಇಲ್ಲ	ಮೆನಗೆಲಸ
೨೯.	ಶಾಂತಾಬಾಯಿ ರಾಮರತನ	ಬಸವಕಲ್ಯಾಣ	೬೫ ವರ್ಷ	೩ನೇ ತರಗತಿ	ಮೆನಗೆಲಸ
೩೦.	ಶಾಂತಮ್ಮಾ ಶಿವಶರನಪ್ಪಾ	ಬಸವಕಲ್ಯಾಣ	೬೩ ವರ್ಷ	೪ನೇ ತರಗತಿ	ಗೃಹಿಣಿ
೩೧.	ಪುತಳಾಬಾಯಿ ತುಕ್ಕಪ್ಪಾ	ಮಂಠಾಳ	೬೦ ವರ್ಷ	ಇಲ್ಲ	ಹೊಲದ ಕೆಲಸ
೩೨.	ಶಿವಮ್ಮ ಮಡಿವಾಳ	ಮಂಠಾಳ	೬೬ ವರ್ಷ	ಇಲ್ಲ	ಬಟ್ಟೆ ತೊಳೆಯುವುದು
೩೩.	ಚಾಂಗುನಾ ಕಾವಳೆ	ಮಂಠಾಳ	೫೮ ವರ್ಷ	ಇಲ್ಲ	ಕೂಲಿ ಕೆಲಸ
೩೪.	ಲಕ್ಷ್ಮೀಬಾಯಿ ಕಾಂಬಳೆ	ಮಂಠಾಳ	೫೫ ವರ್ಷ	ಇಲ್ಲ	ಕೂಲಿ ಕೆಲಸ
೩೫.	ಭಾರತಿಬಾಯಿ ಟೊಂಪೆ	ಮಂಠಾಳ	೫೮ ವರ್ಷ	ಇಲ್ಲ	ಹೊಲದ ಕೆಲಸ
೩೬.	ಮಾಣಿಕಬಾಯಿ ತೆಲಂಗಿ	ಮಂಠಾಳ	೫೩ ವರ್ಷ	ಇಲ್ಲ	ಹೊಲದ ಕೆಲಸ
೩೭.	ಗೌರಮ್ಮಾ ಉಪ್ಪಾರ	ಬಾಲಕುಂದಿ	೬೦ ವರ್ಷ	ಇಲ್ಲ	ಕೂಲಿ
೩೮.	ಚೆನ್ನಮ್ಮ ಯಲ್ಲಪ್ಪಾ	ಪರತಾಪುರ	೭೦ ವರ್ಷ	ಇಲ್ಲ	ಹೊಲದ ಕೆಲಸ
೩೯.	ರತ್ನಮ್ಮ ಅಣ್ಣೆಪ್ಪಾ	ಶಿವಪುರ	೮೦ ವರ್ಷ	ಇಲ್ಲ	ಗೃಹಿಣಿ
೪೦.	ಬಸಮ್ಮಾ ನೀಲಕಂಠೆ	ಸಸ್ತಾಪುರ	೪೦ ವರ್ಷ	೧೦ನೇ ತರಗತಿ	ಅಂಗನವಾಡಿ ಶಿಕ್ಷಕಿ
೪೧.	ಕಮಳಾಬಾಯಿ ಮಾಮಾನೆ	ಗೌರ	೬೮ ವರ್ಷ	ಇಲ್ಲ	ಕುಲಿ
೪೨.	ಸುಲೋಚನ ಸುಬಾಷ	ನಾರಾಯಣಪುರ	೬೦ ವರ್ಷ	೫ನೇ ತರಗತಿ	ಗೃಹಿಣಿ
೪೩.	ನರಸವ್ವಾ ಭೀಮಪ್ಪಾ	ಹಣಮಂತವಾಡಿ	೮೦ ವರ್ಷ	ಇಲ್ಲ	ಕೂಲಿ
೪೪.	ಗುರಮ್ಮಾ ಗುಂಡಪ್ಪಾ	ಬೋಸಗಾ	೬೩ ವರ್ಷ	ಇಲ್ಲ	ಹೊಲದ ಕೆಲಸ
೪೫.	ಪರ್‍ಯಾಗಬಾಯಿ ಬಂಡೆಪ್ಪಾ	ಬೋಸಗಾ	೮೫ ವರ್ಷ	ಇಲ್ಲ	ಗೃಹಿಣಿ
೪೬.	ರತ್ನಮ್ಮ ಮಲ್ಲಪ್ಪ	ತೊಗಲೂರು	೫೦ ವರ್ಷ	೬ನೇ ತರಗತಿ	ಹೊಲಿಗೆ ಕೆಲಸ
೪೭.	ಅಂಬವ್ವ ಕಲ್ಲಪ್ಪ	ಬಸವಕಲ್ಯಾಣ	೮೦ ವರ್ಷ	ಇಲ್ಲ	ಸುಣ್ಣದ ಕೆಲಸ
೪೮.	ಪಾರ್ವತಿ ಶಂಕರ	ಬಸವಕಲ್ಯಾಣ	೪೫ ವರ್ಷ	೧೦ನೇ ತರಗತಿ	ಗೃಹಿಣಿ
೪೯.	ಪದ್ಮಾವತಿ ಬರುಡು	ತ್ರಿಪುರಾಂತ	೬೩ ವರ್ಷ	ಇಲ್ಲ	ಕೂಲಿ
೫೦.	ಪಾರ್ವತಿ ಶಂಕರ	ಬಸವಕಲ್ಯಾಣ	೫೦ ವರ್ಷ	ಪಿ.ಯು.ಸಿ.	ಗೃಹಿಣಿ
೫೧.	ಮಹಾದೇವಿ ಮಲ್ಕಪ್ಪಾ	ಬಸವಕಲ್ಯಾಣ	೪೮ ವರ್ಷ	೧೦ನೇ ತರಗತಿ	ಗೃಹಿಣಿ
೫೨.	ಕಮಲಾಬಾಯಿ ಬಸಪ್ಪ	ಸಿಂದಬಂದಗಿ	೬೮ ವರ್ಷ	ಇಲ್ಲ	ಮನೆ ಕೆಲಸ
೫೩.	ಪ್ರಯಾಗಬಾಯಿ ನಾಗಪ್ಪಾ	ರಾಜೇಶ್ವರ	೮೦ ವರ್ಷ	೩ನೇ ತರಗತಿ	ಗೃಹಿಣಿ
೫೪.	ಜಯಶ್ರೀ ರಾಜಪ್ಪ	ಚಳಕಾಪೂರ	೪೦ ವರ್ಷ	೧೦ನೇ ತರಗತಿ	ಗೃಹಿಣಿ
೫೫.	ಶಾಂತಮ್ಮಾ ಬಸಪ್ಪಾ	ಹಳ್ಳಿಖೇಡ (ಬಿ)	೫೦ ವರ್ಷ	ಇಲ್ಲ	ಹೊಲದ ಕೆಲಸ
೫೬.	ಲಕ್ಷ್ಮೀಬಾಯಿ ಭರತ	ಹಳ್ಳಿಖೇಡ (ಬಿ)	೬೫ ವರ್ಷ	ಇಲ್ಲ	ಕೂಲಿ

೫೭.	ಸಂಗಮ್ಮಾ ನಾನಕೇರೆ	ಹುಮನಾಬಾದ	೮೫ ವರ್ಷ	ಇಲ್ಲ	ಕೂಲಿ
೫೮.	ತೇಜಮ್ಮ ಮಟಿಗೀರೆ	ಕನಕಟ್ಟಾ	೮೦ ವರ್ಷ	ಇಲ್ಲ	ಹೊಲದ ಕೆಲಸ
೫೯.	ಗುಂಡಮ್ಮ ಮಲ್ಲಪ್ಪ	ಚಿಟಗುಪ್ಪಾ	೬೫ ವರ್ಷ	ಇಲ್ಲ	ಕೂಲಿ
೬೦.	ಮಾದವ್ವ ಗುರಪ್ಪಾ	ನಿರ್ಣಾ	೮೦ ವರ್ಷ	ಇಲ್ಲ	ಕೂಲಿ
೬೧.	ಚೆನ್ನಮ್ಮಾ ಬಸಪ್ಪಾ	ಮುಸ್ತಾಪುರ	೬೮ ವರ್ಷ	ಇಲ್ಲ	ಗೃಹಿಣಿ
೬೨.	ಗುಂಡಮ್ಮ ನಿಂಗಪ್ಪಾ	ತಳಮಡಗಿ	೭೦ ವರ್ಷ	ಇಲ್ಲ	ಕೂಲಿ
೬೩.	ಭಾಗೀರಥಿ ಬಿಶ್ವನಾಥ	ಔರಾದ	೭೫ ವರ್ಷ	ಇಲ್ಲ	ಹೊಲದ ಕೆಲಸ
೬೪.	ಚಂದ್ರಮ್ಮಾ ಗುರುಪಾದಪ್ಪಾ	ವಡಗಾಂವ	೬೮ ವರ್ಷ	ಇಲ್ಲ	ಹೊಲದ ಕೆಲಸ
೬೫.	ಚಿನ್ನಮ್ಮ ಬಸಪ್ಪಾ	ಧೂಪತ್‌ಮಹಾಗಾಂವ್	೫೮ ವರ್ಷ	೩ನೇ ತರಗತಿ	ಮನೆ ಕೆಲಸ
೬೬.	ಪಾರ್ಬತಿ ಓಮಣ್ಣ	ಸಂತಪೂರ	೪೦ ವರ್ಷ	ಪಿ.ಯು.ಸಿ.	ಗೃಹಿಣಿ
೬೭.	ಶಿವಮ್ಮ ಭೀಮಣ್ಣಾ	ಬೀದರ	೯೦ ವರ್ಷ	ಇಲ್ಲ	ಗೃಹಿಣಿ
೬೮.	ರತ್ನಮ್ಮಾ ಹೆಬ್ಬಾಳೆ	ನಾವದಗೇರಿ	೮೦ ವರ್ಷ	ಇಲ್ಲ	ಗೃಹಿಣಿ
೬೯.	ಗಂಗಮ್ಮಾ ಬಸಪ್ಪಾ	ಜನವಾಡಾ	೬೦ ವರ್ಷ	ಇಲ್ಲ	ಕೂಲಿ
೭೦.	ಬಸಮ್ಮಾ ಭೀಮರಾವ	ಮಂದಕನಳ್ಳಿ	೭೦ ವರ್ಷ	ಇಲ್ಲ	ಹೊಲದ ಕೆಲಸ
೭೧.	ಶೋಭಾ ಶಂಕರ	ಕಣಜಿ	೪೫ ವರ್ಷ	೮ನೇ ತರಗತಿ	ಹೊಲದ ಕೆಲಸ
೭೨.	ಗೌರಮ್ಮ ನರಸಿಂಗ	ಮರೂರು	೮೦ ವರ್ಷ	ಇಲ್ಲ	ಕೂಲಿ
೭೩.	ಶಾಂತಮ್ಮ ಹೊನ್ನಪ್ಪ	ಬಗದಲ್	೬೮ ವರ್ಷ	೩ನೇ ತರಗತಿ	ಹೊಲದ ಕೆಲಸ
೭೪.	ಯಲ್ಲಪ್ಪ ತುಕ್ಕಪ್ಪ	ವಾಲದೊಡ್ಡಿ	೭೦ ವರ್ಷ	ಇಲ್ಲ	ಹೊಲದ ಕೆಲಸ
೭೫.	ಸವಿತಾ ಸೋಮನಾಥ	ಕಣಜಿ	೪೦ ವರ್ಷ	೫ನೇ ತರಗತಿ	ಕಿರಾಣಿ ಅಂಗಡಿ
೭೬.	ಬಸಮ್ಮಾ ಚೆನ್ನಪ್ಪಾ	ಚಿಟ್ಟಾ	೬೫ ವರ್ಷ	ಇಲ್ಲ	ಕೂಲಿ
೭೭.	ಈರಮ್ಮ ದಯಾನಂದ	ಮೈಲೂರು	೬೦ ವರ್ಷ	ಇಲ್ಲ	ಕೂಲಿ
೭೮.	ಮಾದೇವಿ ಸಿದ್ರಾಮ	ಚಿದ್ರಿ	೬೫ ವರ್ಷ	ಇಲ್ಲ	ಹೊಲದ ಕೆಲಸ
೭೯.	ಕಸ್ತೂರಿಬಾಯಿ ಮಾರುತಿ	ಮೈಲೂರು	೬೦ ವರ್ಷ	ಇಲ್ಲ	ಚಹದಂಗಡಿ
೮೦.	ಲಕ್ಷ್ಮೀ ನರಸಿಂಗ	ತಾಜಲಾಪುರ	೪೩ ವರ್ಷ	೭ನೇ ತರಗತಿ	ಪರಿಚಾರಕಿ
೮೧.	ಪಾರ್ವತಿ ಹಾರಕೂಡೆ	ಮಲ್ಕಾಪುರ	೫೦ ವರ್ಷ	ಇಲ್ಲ	ಹೊಲದ ಕೆಲಸ
೮೨.	ನಂದಾದೇವಿ ಚಂದ್ರಕಾಂತ	ಮಲ್ಕಾಪುರ	೪೫ ವರ್ಷ	೫ನೇ ತರಗತಿ	ಗೃಹಿಣಿ

ಗ್ರಂಥ ಸಹಾಯ

ಕ್ರ. ಸಂ	ಲೇಖಕರು / ಸಂಪಾದಕರು	ವರ್ಷ	ಗ್ರಂಥ	ಪ್ರಕಾಶನ
೧.	ಅಂಬಳಿಕೆ ಹಿರಿಯಣ್ಣ	೧೯೮೪	ಜಾನಪದ ಕೆಲವು ವಿಚಾರಗಳು	ಪ್ರಜ್ವಲ ಪ್ರಕಾಶನ ಮೈಸೂರು
೨.	ಅಮರೇಶ ನುಡಗೋಣಿ	೨೦೦೩	ಹೈದ್ರಾಬಾದ ಕರ್ನಾಟಕ ಹಾಡು-ಪಾಡು	ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ
೩.	ಅಮರೇಶ ನುಡಗೋಣಿ	೨೦೦೪	ಬಸವಣ್ಣನವರ ವಚನಗಳು : ಸಾಂಸ್ಕೃತಿಕ ಮುಖಾಮುಖಿ	ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ
೪.	ಅರವಿಂದ ಮಾಲಗತ್ತಿ	೨೦೦೧	ದಲಿತ ಪ್ರಜ್ಞೆ ಸಾಹಿತ್ಯ ಸಮಾಜ ಮತ್ತು ಸಂಸ್ಕೃತಿ	
೫.	ಅರವಿಂದ ಮಾಲಗತ್ತಿ	೨೦೦೪	ಕನ್ನಡ ವಿಮರ್ಶೆಯ ಮಾರ್ಗ	ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ ಮಾನಸಗಂಗೋತ್ರಿ ಮೈಸೂರು
೬.	ಆರ್. ಇಂದಿರಾ	೨೦೦೨	ಮಹಿಳೆ ಸಮಾಜ ಮತ್ತು ಸಂಸ್ಕೃತಿ	ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ
೭.	ಆರ್.ಸಿ. ಹಿರೇಮಠ	೧೯೭೪	ಜಾನಪದ ಸಾಹಿತ್ಯ ದರ್ಶನ - ಒಂದು	ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿ.ವಿ. ಧಾರವಾಡ
೮.	ಇಮ್ರಾಪುರ ಸೋಮಶೇಖರ	೧೯೭೯	ಜಾನಪದ ವಿಜ್ಞಾನ	ಚೇತನಾ ಪ್ರಕಾಶನ ಧಾರವಾಡ
೯.	ಇಮ್ರಾಪುರ ಶಾಂತಾ	೨೦೦೧	ಧರ್ಮ ಮಹಿಳೆ ಮತ್ತು ಸಮಾಜ	ಚೇತನಾ ಪ್ರಕಾಶನ ಧಾರವಾಡ
೧೦.	ಇಮ್ರಾಪುರ ಶಾಂತಾ	೨೦೦೨	ಮಹಿಳಾ ಸಾಹಿತ್ಯ ಸಾಂಸ್ಕೃತಿ	ಚೇತನಾ ಪ್ರಕಾಶನ ಧಾರವಾಡ
೧೧.	ಉಷಾ ಎಂ.	೨೦೦೪	ಮಹಿಳಾ ಚಳುವಳಿ ಮತ್ತು ಮಹಿಳಾ ವಿಷಯಗಳು	ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ
೧೨.	ಎ. ಮುರಿಗೆಪ್ಪಾ	೨೦೦೬	ಬೀದರ ಜಿಲ್ಲೆಯ ಕನ್ನಡ	ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
೧೩.	ಎಚ್.ಎಸ್. ಶ್ರೀಮತಿ	೨೦೦೧	ಆಧುನಿಕ ಭಾರತದಲ್ಲಿ ಮಹಿಳೆ	ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ
೧೪.	ಎಚ್.ಎಸ್. ಶ್ರೀಮತಿ	೨೦೦೩	ಸ್ತ್ರೀವಾದ	ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ
೧೫.	ಎಚ್.ಟಿ. ಪೋತೆ	೨೦೦೧	ಜಾನಪದ ಸಿಂಗಾರ	ಕುಮಾರ ಪೂರ್ಣಿಮಾ ಪ್ರಕಾಶನ ರಾಯಚೂರ
೧೬.	ಎಚ್ಚೆಸ್ಕೆ	೧೯೮೫	ಅವಲೋಕನ : ಕರ್ನಾಟಕ ಪರಂಪರೆಯ ಸಮೀಕ್ಷೆ	ಕನ್ನಡ ಮತ್ತು ಸಂಸಕೃ ನಿರ್ದೇಶನಾಲಯ, ಬೆಂಗಳೂರು
೧೭.	ಎಚ್. ಕಾಮಶೆಟ್ಟಿ	೨೦೦೮	ಜನಪದ ಸಾಹಿತ್ಯ ಸಂಗ್ರಹ	ಪ್ರಸಾರಾಂಗ ಗುಲಬರ್ಗಾ ವಿಶ್ವವಿದ್ಯಾಲಯ ಗುಲ್ಬರ್ಗಾ
೧೮.	ಎಂ. ಚಿದಾನಮದ ಮೂರ್ತಿ	೧೯೯೩	ಹೊಸತು ಹೊಸತು	ಕನ್ನಡ ವಿಶ್ವವಿದ್ಯಾಲಯ ಹಂಪಿ
೧೯.	ಎಂ. ಚಿದಾನಂದ ಮೂರ್ತಿ	೨೦೦೨	ಜನ-ಜನಪದ-ಜಾನಪದ	ಸ್ವಪ್ನ ಬುಕ್ ಹೌಸ್, ಬೆಂಗಳೂರು
೨೦.	ಎಂ. ಜಿ. ಬಿರಾದಾರ	೧೯೮೧	ಜಾನಪದ ಸಮಾಲೋಕನ	ಚಿತ್ಕಾಳಾ ಪ್ರಕಾಶನ ಕಲಬುರ್ಗಿ
೨೧.	ಎಂ.ಎಸ್. ಲಠ್ಠೆ	೧೯೯೨	ಉತ್ತರ ಕರ್ನಾಟಕದ ಒಗಟುಗಳು	ಸತೀಶ ಪ್ರಕಾಶನ ಕಲಬುರ್ಗಿ
೨೨.	ಎಂ.ಎಸ್. ಲಠ್ಠೆ	೧೯೮೦	ಜಾನಪದ ಸಂಶೋಧನಾತ್ಮಕ ಪ್ರಬಂಧಗಳು	ಅಣ್ಣಾರಾವ್ ಜಿ. ಪಾಟೀಲ್, ಎಸ್.ಬಿ. ಪಾಟೀಲ್
೨೩.	ಎಂ.ಎಸ್. ಲಠ್ಠೆ	೧೯೮೨	ಜಾನಪದ ಸಂಪದ (ಡಾ. ಎಂ.ಎಸ್. ಸುಂಕಾಪುರ ಅಭಿನಂದನ ಸಮಿತಿ ಕಲಬುರ್ಗಿ	ದಾಲಮಿಲ್ ನೆಹರು ಗಂಜ ಕಲಬುರ್ಗಿ
೨೪.	ಎಂ.ಎಂ. ಕಲಬುರ್ಗಿ	೧೯೮೮	ಮಾರ್ಗ - ೧	ಕರ್ನಾಟಕ ಬುಕ್ ಏಜನ್ಸಿ ತುಂಗಾ ಕಾಂಪ್ಲೆಕ್ಸ್, ಗಾಂಧಿ ನಗರ, ಬೆಂಗಳೂರು
೨೫.	ಎಂ.ಎಂ. ಕಲಬುರ್ಗಿ	೨೦೦೪	ಮಾರ್ಗ - ೪	ಸ್ವಪ್ನ ಬುಕ್ ಹೌಸ್, ಬೆಂಗಳೂರು
೨೬.	ಎಂ.ಎಸ್. ಸುಂಕಾಪುರ	೧೯೮೦	ಜಾನಪದ ಸಾಹಿತ್ಯ ದರ್ಶನ ಭಾಗ - ೫	ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೨೭.	ಎಂ.ಎಸ್. ಸುಂಕಾಪುರ	೧೯೭೬	ಜೀವನ ಜೋಕಾಲಿ ಭಾಗ - ೭ (ಗಂಗಿ-ಗೌರಿಸುವಾದ)	ಕನ್ನಡ ಅಧ್ಯಯನ ಪೀಠ ಕ.ವಿ.ವಿ. ಧಾರವಾಡ
೨೮.	ಎಂ.ಎಸ್. ಸುಂಕಾಪುರ	೧೬೭೧	ಜೀವನ ಜೋಕಾಲಿ ಭಾಗ - ೧ (ಚೌಪದಿಗಳು) .	ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೨೯.	ಎಂ.ಎಸ್. ಸುಂಕಾಪುರ	೧೯೭೨	ಜೀವನ ಜೋಕಾಲಿ ಭಾಗ - ೩ (ಗರತಿಯರ ಗರಿಮೆ)	ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೩೦.	ಎಂ.ಎಸ್. ಸುಂಕಾಪುರ	೧೯೭೧	ಜೀವನ ಜೋಕಾಲಿ ಭಾಗ - ೨ (ಗರತಿಯರ ಮಹಿಮೆ)	ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೩೧.	ಎಂ.ಎಸ್. ಸುಂಕಾಪುರ	೧೯೭೬	ಜೀವನ ಜೋಕಾಲಿ ಭಾಗ - ೮ (ಕೋಲುಪದ)	ಕನ್ನಡ ಅಧ್ಯಯನ ಪೀಠ ಧಾರವಾಡ
೩೨.	ಎಲ್.ಎಸ್. ಶೇಷಗಿರಿರಾವ್	೧೯೯೪	ಕಿರಿಯರ ಕರ್ನಾಟಕ	ಕನ್ನಡ ವಿಶ್ವವಿದ್ಯಾಲಯ ಹಂಪಿ
೩೩.	ಎಮ್.ಎಸ್. ವೃಷಬೇಂದ್ರ ಸ್ವಾಮಿ	೧೯೮೭	ಜಾನಪದ ಸಾಹಿತ್ಯ ದರ್ಶನ ಭಾಗ - ೧೦ (ಹಬ್ಬಗಳು)	ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ
೩೪.	ಎಂ. ಸರಸ್ವತಿ, ಆರ್. ವಸಂತಕುಮಾರ	೨೦೦೫	ಕರ್ನಾಟಕ ಸಂಸ್ಕೃತಿ ಚಿಂತನೆ	ಕನ್ನಡ ವೇದಿಕೆ, ಶ್ರೀ ಭಗವಾನ ಮಹಾವೀರ ಜೈನ ಕಾಲೇಜು, ಬೆಂಗಳೂರು
೩೫.	ಎಚ್. ತಿಪ್ಪೆ ರುದ್ರಸ್ವಾಮಿ	೧೯೮೫	ಕರ್ನಾಟಕ ಸಾಂಸ್ಕೃತಿ ಸಮೀಕ್ಷೆ	ಡಿ.ವಿ.ಕೆ. ಮೂರ್ತಿ ಮೈಸೂರು
೩೬.	ಎಂ. ಚಂದ್ರಪೂಜಾರಿ	೨೦೦೫	ಸಂಶೋಧಕರು ಮತ್ತು ಕ್ಷೇತ್ರಕಾರ್ಯ	ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ
೩೭.	ಎಸ್.ಎಸ್. ತಾರಾನಾಥ	೨೦೦೧	ಶತಮಾನದ ಸಂಶೋಧನೆ	ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು
೩೮.	ಕಾಪಸೆ ರೇವಪ್ಪ	೧೯೯೪	ಮಲ್ಲಿಗೆ ದಂಡೆ	ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು
೩೯.	ಕಾಶಿನಾಥ ಅಂಬಲಗೆ	೧೯೯೩	ಕೌದಿ	ಪ್ರಗತಿ ಪ್ರಕಾಶನ ಕಲ್ಬುರ್ಗಿ
೪೦.	ಕಾಶಿನಾಥ ಅಂಬಲಗೆ	೨೦೦೬	ಚುಳುಕಾದಿರಯ್ಯ	ಪ್ರಗತಿ ಪ್ರಕಾಶನ ಕಲ್ಬುರ್ಗಿ
೪೧.	ಕಾಳೇಗೌಡನಾಗವಾರ, ಅಂಬಳಿಕೆ ಹಿರಿಯಣ್ಣ	೨೦೦೦	ಜೀಶಂಪ ಅವರ ಜಾನಪದ ಬರಹುಗಳು	ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು
೪೨.	ಕಾಳೇಗೌಡ ನಾಗವಾರ	೧೯೭೫	ತ್ರಿಪದಿ ರಗಳೆ ಮತ್ತು ಜನಪದ ಸಾಹಿತ್ಯ	ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು
೪೩.	ಕ್ಯಾತನಹಳ್ಳಿ ರಾಮಣ್ಣ	೧೯೭೬	ಬೀದರ ಜಿಲ್ಲೆಯ ಜನಪದ ಗೀತೆಗಳು	ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರ
೪೪.	ಕ್ಯಾತನಹಳ್ಳಿ ರಾಮಣ್ಣ	೧೯೭೨	ಫ್ಲೀಟರು ಸಂಗ್ರಹಿಸಿದ ಐದು ಐತಿಹಾಸಿಕ ಲಾವಣಿಗಳು	ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ ಮೈಸೂರು
೪೫.	ಕೀರ್ತಿನಾಥ ಕುರ್ತಕೋಟಿ	೧೯೯೫	ಕನ್ನಡ ಸಾಹಿತ್ಯ ಸಂಗಾತಿ	ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ
೪೬.	ಕೆ.ಆರ್. ದುರ್ಗಾದಾಸ	೨೦೦೦	ಅನು ಸಂಧಾನದ ಹೊಸಹಾದಿ	ಸಮತಾ ಪ್ರಕಾಶನ ಧಾರವಾಡ
೪೭.	ಕೆ. ಭೈರಪ್ಪ	೨೦೦೭	ಭಾರತೀಯ ಸಮಾಜ ಮತ್ತು ಸಾಮಾಜಿಕ ಚಿಂತನೆ ಭಾಗ - ೧	ಸಿದ್ಧಲಿಂಗೇಶ್ವರ ಪ್ರಕಾಶನ ಗುಲಬರ್ಗಾ
೪೮.	ಕೆ. ಆರ್. ಸಂಧ್ಯಾರೆಡ್ಡಿ	೨೦೦೩	ಮಹಿಳಾ ಜಾನಪದ	ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು
೪೯.	ಕೆ. ಸೀತಮ್ಮ	೨೦೦೮	ಮಹಿಳಾ ಅಧ್ಯಯನದ ಮಜಲುಗಳು	ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು
೫೦.	ಖಂಡೋಬಾ ಪಿ.ಕೆ.	೧೯೯೦	ತಾಂಡಾ ಸಂಸ್ಕೃತಿ	ಪ್ರಸಾರಾಂಗ ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ
೫೧.	ಖಂಡೋಬಾ ಪಿ.ಕೆ.	೧೯೮೮	ಲಂಬಾಣಿ ಸಂಸ್ಕೃತಿ	ತೇಜಸಿಂಗ್ ರಾಠೋಡ ಮೆಮೋರಿಯಲ್ ಟ್ರಸ್ಟ್ ಗುಲ್ಬರ್ಗಾ
೫೨.	ಖಂಡೋಬಾ ಪಿ.ಕೆ.	೧೯೯೩	ಜಾನಪದ ಮುನ್ನೋಟ	ಸಂಗಿತಾ ಪಬ್ಲಿಕೇಷನ್ಸ್ ಗುಲಬರ್ಗಾ
೫೩.	ಚಿ.ನ. ಮಂಗಳಾ	೧೯೯೪	ಮಾತೃಪೂಜೆ	ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ
೫೪.	ಚಿ.ಸಿ. ನಿಂಗಣ್ಣ	೨೦೦೮	ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ	ಸಿದ್ಧಲಿಂಗೇಶ್ವರ ಪ್ರಕಾಶನ ಗುಲ್ಬರ್ಗಾ
೫೫.	ಚೆನ್ನಣ್ಣ ವಾಲೀಕಾರ	೧೯೮೯	ಗುಲ್ಬರ್ಗಾ ಜಿಲ್ಲೆಯ ತ್ರಿಪದಿಗಳು	ಯುನಿವರ್ಸಲ್ ಪಬ್ಲಿಕೇಶನ್, ರಾಯಚೂರು
೫೬.	ಚೆನ್ನಣ್ಣ ವಾಲೀಕಾರ	೧೯೯೦	ಐದು ಜನಪದ ಸಮಾಜವಾದಿ ಕಾವ್ಯಗಳು	ಇಳಾ ಪ್ರಕಾಶನ ಬೆಂಗಳೂರು
೫೭.	ಚೆನ್ನ ಮಲ್ಲಪ್ಪ ಹಲಸಂಗಿ ಮತ್ತು ಗೆಳೆಯರು	೧೯೯೦	ಗರತಿಯ ಹಾಡು	ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರು
೫೮.	ಜಗನ್ನಾಥ ಹೆಬ್ಬಾಳೆ	೧೯೯೭	ಬೀದರ ಜಿಲ್ಲಾ ದರ್ಶನ	ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಬೀದರ
೫೯.	ಜಗನ್ನಾಥ ಹೆಬ್ಬಾಳೆ	೧೯೯೮	ಬೀದರ ಜಿಲ್ಲೆಯ ಸಾಹಿತ್ಯವಲೋಕನ	ಬೀದರ ಜಿಲ್ಲಾ ಹಾಗೂ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ಭಾಲ್ಕಿ

೬೦.	ಜಗನ್ನಾಥ ಹೆಬ್ಬಾಳೆ	೧೯೯೬	ಬೀದರ ಜಿಲ್ಲೆಯ ಬುಲಾಯಿ ಹಾಡುಗಳು	ನೀಲಗಂಗಾ ಪ್ರಕಾಶನ ನಾವದಗೇರಿ, ಬೀದರ
೬೧.	ಜಗನ್ನಾಥ ಹೆಬ್ಬಾಳೆ	೧೯೯೭	ಬುಲಾಯಿ ಹಾಡುಗಳು	ಕರ್ನಾಟಕ ಸಾಹಿತ್ಯ ಅಕಾಡೆಮಿ
೬೨.	ಜಗನ್ನಾಥ ಹೆಬ್ಬಾಳೆ	೨೦೦೩	ಅಕ್ಷರ ಪ್ರೀತಿ	ಪ್ರಸಾರಾಂಗ ಸ್ನಾತಕೋತ್ತರ ಕನ್ನಡ ಅಧ್ಯಯನ ಹಾಗೂ ಸಂಶೋಧನ ಕೇಂದ್ರ ಕರ್ನಾಟಕ ಕಾಲೇಜು, ಬೀದರ
೬೩.	ಜಯದೇವಿ ಎಂ. ಗಾಯಕವಾಡ	೨೦೦೫	ಹೈದ್ರಾಬಾದ ಕನಾರಟಕ ಮಹಿಳಾ ಕಾವ್ಯ	ಪ್ರಸಾರಾಂಗ ಗು.ವಿ. ಬೆಂಗಳೂರು
೬೪.	ಜಿ.ಶಂ. ಪರಮಶಿವಯ್ಯ	೧೯೭೯	ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು	ಪ್ರಸಾರಾಂಗ ಮೈಸೂರು ವಿ.ವಿ. ಮೈಸೂರು
೬೫.	ಜಿ.ಶಂ. ಪರಮಶಿವಯ್ಯ	೧೯೬೮	ಜಾನಪದ ಕೆಲವು ವಿಚಾರಗಳು	ಚೇತನ್ ಬುಕ್ ಹೌಸ್ ಮೈಸೂರು
೬೬.	ಜಿ.ಶಂ. ಪರಮಶಿವಯ್ಯ	೧೯೬೮	ಜಾನಪದ ಖಂಡ ಕಾವ್ಯಗಳು	ಶಾರದ ಮಂದಿರ (ಶರದ ವಿಲಾಸ ಕಾಲೇಜ) ಮೈಸೂರು
೬೭.	ಜಿ.ಬಿ. ವಿಸಾಜಿ	೧೯೮೭	ಭಾಲ್ಕಿ ತಾಲ್ಲೂಕು ದರ್ಶನ	ಪ್ರಸಾರಾಂಗ ಐ.ಬಿ.ಎಚ್. ಪ್ರಕಾಶನ ಬೆಂಗಳುರು
೬೮.	ಜಿ.ಎಂ. ಬೈರೊಡಗಿ	೧೯೯೦	ಬೀದರ ಜಿಲ್ಲೆಯ ಶಾಸನಗಳು	ಗುಲಬರ್ಗಾ ವಿಶ್ವವಿದ್ಯಾಲಯ ಗುಲ್ಬರ್ಗಾ
೬೯.	ಜಿ.ಎಸ. ಶಿವರುದ್ರಪ್ಪ	೧೯೮೧	ಸಾಹಿತ್ಯ ಮತ್ತು ಸಾಮಾಜಿಕ ಮೌಲ್ಯ	ಪ್ರಸಾರಾಂಗ ಬೆಂಗಳೂರು ವಿ.ವಿ. ಬೆಂಗಳೂರು
೭೦.	ಜಿ.ಎಸ್. ಉಪಾದ್ಯ	೨೦೦೬	ಮಹಾರಾಷ್ಟ್ರ ಕರ್ನಾಟಕ ಸಾಂಸ್ಕೃತಿಕ ಸಂಬಂಧ	ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
೭೧.	ಜ್ಯೋತ್ಸ್ನಾ ಕಾಮತ್	೧೯೯೯	ಮಹಿಳೆ ಒಂದು ಅಧ್ಯಯನ	ನವ ಕರ್ನಾಟಕ ಪ್ರಕಾಶನ ಬೆಂಗಳೂರು
೭೨.	ಡಿ.ಬಿ. ನಾಯಕ	೨೦೦೧	ಬುಲಾಯಿ ಹಾಡುಗಳು	ಬಂಜಾರ ಪ್ರಕಾಶನ ಗುಲ್ಬರ್ಗಾ
೭೩.	ಡಿ.ಬಿ. ನಾಯಕ	೨೦೦೨	ದೇಶಿ ಸಂಸ್ಕೃತಿ	ಬಂಜಾರ ಪ್ರಕಾಶನ ಗುಲ್ಬರ್ಗಾ
೭೪.	ಡಿ.ಬಿ. ನಾಯಕ	೨೦೦೫	ಜಾನಪದ ಲೇಖನಗಳು	ಪ್ರ.ಗು.ವಿ.ಗು.
೭೫.	ಡಿ.ಕೆ. ರಾಜೇಂದ್ರ	೧೯೮೨	ಜಾನಪದ ಸಂಪದ	ತಳಗವಾಡಿ ಪ್ರಕಾಶನ ಕನ್ನಡ ಅಧ್ಯಯನ ಸಂಸ್ಥೆ ಮಾನಸ ಗಂಗೋತ್ರಿ, ಮೈಸೂರು
೭೬.	ತಾಳ್ತಜೆ ವಸಂತಕುಮಾರ	೧೯೯೮	ಸಾಂಸ್ಕೃತಿಕ ಸಂಶೋಧನೆ : ಒಂದು ಮುನ್ನೋಟ	ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ
೭೭.	ತಾಳ್ತಜೆ ವಸಂತಕುಮಾರ	೧೯೮೮	ಕರ್ನಾಟಕದಲ್ಲಿ ಬೌದ್ಧ ಸಂಸ್ಕೃತಿ	ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ವಿಭಾಗದ ಪರವಾಗಿ ವಿನಯ ಪ್ರಕಾಶನ ಬೆಂಗಳೂರು.
೭೮.	ತಾಳ್ತಜೆ ವಸಂತಕುಮಾರ	೨೦೦೫	ಬೌದ್ಧಾಯನ	ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯ
೭೯.	ತಿ.ನಂ. ಶಂಕರನಾರಾಯಣ	೧೯೮೫	ದ್ರಾವಿಡ ಜಾನಪದ	ಕನ್ನಡ ವಿಭಾಗ ಸ್ನಾತಕೋತ್ತರ ಕೇಂದ್ರ ಜಿ.ಆರ್. ಪ್ರೊಜೆಕ್ಟ್ ಮೈ.ವಿ.ವಿ. ಮೈಸೂರು
೮೦.	ದಸ್ತಗೀರ ಅಲ್ಲೀಭಾಯಿ	೧೯೯೬	ಮುಸ್ಲೀಮರ ಹಬ್ಬ ಮತ್ತು ಉರುಸುಗಳು	ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ
೮೧.	ದೇಜಪರೇಗೌಡ	೨೦೦೧	ಜಾನಪದ ಅಧ್ಯಯನ	ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು
೮೨.	ದೇಶಾಂಶ ಹುಡಗಿ	೧೯೯೮	ಬೀದರ ಜಿಲ್ಲೆಯ ತತ್ವ ಪದಕಾರರು	ಪ್ರಸಾರಾಂಗ ಗು.ವಿ.ವಿ. ಗುಲ್ಬರ್ಗಾ
೮೩.	ದೇಶಾಂಶ ಹುಡಗಿ	೧೯೯೯	ಧರಿಸಾಡಿನ ಕಾವ್ಯ	ಕನ್ನಡ ಸಾಹಿತ್ಯ ಅಕಾಡೆಮಿ ಬೆಂಗಳೂರು
೮೪.	ದೇವೇಂದ್ರಕುಮಾರ ಹಕಾರಿ	೧೯೮೨	ಜಾನಪದಿಯ	ವಾಗ್ದೇವಿ ಪ್ರಕಾಶನ ಮೈಸೂರು
೮೫.	ದೇವೇಂದ್ರಕುಮಾರ ಹಕಾರಿ	೧೯೮೩	ಜಾನಪದ ಸಮ್ಮುಖ	ಗೋರಕನಾಥ ಪ್ರಕಾಶನ ಬೆಂಗಳೂರು
೮೬.	ಸಂ. ತಪಸ್ವೀಕುಮಾರ	೧೯೭೦	ಜನಪದ ಸಾಂಸ್ಕೃತಿ	ಪ್ರಬುದ್ಧ ಪ್ರಕಾಶನ ಮೈಸೂರು
೮೭.	ಸಂ. ತಪಸ್ವೀಕುಮಾರ	೧೯೮೧	ಜಾನಪದ ಅಧ್ಯಯನ ಸಂಕ್ಷಿಪ್ತ ಇತಿಹಾಸ	ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.

೮೮.	ನಾಗನಾಥ ಪ್ರಭಾಕರ	೨೦೦೨	ಆತ್ಮಜ್ಞಾನ	ನೀಲಮ್ಮ ತಾಯಿ ಪ್ರಕಾಶನ ಹಳ್ಳಿಖೇಡ (ಬಿ). ಜಿ॥ ಬೀದರ.
೮೯.	ಸಿರ್ಸೆ ಪ್ರೇಮಾ	೨೦೦೬	ಮಹಿಳೆ, ಸಮಾಜ ಮತ್ತು ಸವಾಲುಗಳು	ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು
೯೦.	ಫಾಲಾಕ್ಷ	೨೦೦೦	ಕರ್ನಾಟಕದ ಇತಿಹಾಸ ಪರಿಚಯ	ಶಶಿ ಪ್ರಕಾಶನ ತಿಪಟೂರು, ತುಮಕೂರು ಜಿಲ್ಲೆ
೯೧.	ಫಾಲಾಕ್ಷ	೨೦೦೩	ಸಮಗ್ರ ಕರ್ನಾಟಕ ಇತಿಹಾಸ ಮತ್ತು ಸಂಸ್ಕೃತಿ	ಶಶಿ ಪ್ರಕಾಶನ ತಿಪಟೂರು, ತುಮಕೂರು ಜಿಲ್ಲೆ
೯೨.	ಬಸವರಾಜ ಸಬರದ	೧೯೮೨	ಬೀದರ ಜಿಲ್ಲಾ ಸಾಂಸ್ಕೃತಿಕ ಅಧ್ಯಯನ	ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೯೩.	ಬಸವರಾಜ ಪೋ. ಪಾಟೀಲ	೨೦೦೧	ಜಾನಪದ ಚಿಂತನ	ಅಮರ ಪ್ರಕಾಶನ ಗುಲಬರ್ಗಾ
೯೪.	ಬಸವರಾಜ ಪೋ. ಪಾಟೀಲ	೨೦೦೩	ಭಾಷಾ ಸಂಗಮ	ಡಾ॥ ಸಂಗಮೇಶ ಸವದತ್ತಿಮಠ ಅಭಿನಂದನ ಸಮಿತಿ ಗುಲ್ಬರ್ಗಾ
೯೫.	ಬಸವರಾಜ ಪೋ. ಪಾಟೀಲ	೧೯೮೫	ಜಾನಪದ ಭಾರತಿ	ವಿದ್ಯಾಸಾಗರ ಪ್ರಕಾಶನ ಕಲಬುರ್ಗಿ
೯೬.	ಬಸವರಾಜ ಪೋ. ಪಾಟೀಲ	೨೦೦೧	ಹೈದ್ರಾಬಾದ ಕರ್ನಾಟಕ ಜನಪದ ಸಾಹಿತ್ಯ	ಅಮರ ಪ್ರಕಾಶನ ಗುಲ್ಬರ್ಗಾ
೯೭.	ಬಾ.ಹು. ರಮಾಕುಮಾರಿ	೨೦೦೬	ಮಹಿಳೆಯರ ಸ್ಥಾನಮಾನ ಸಂಘಟನೆ	ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
೯೮.	ಬಿ.ಬಿ. ಹೆಂಡಿ	೧೯೮೧	ಆಯ್ದ ಜನಪದ ಗೀತೆ ಕಥನಗೀತೆಗಳು	ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ
೯೯.	ಬಿ.ಎಸ್. ಸ್ವಾಮಿ	೧೯೮೯	ಜಾನಪದ ಟಿಪ್ಪಣಿಗಳು	ನವೀನ ಪ್ರಕಾಶನ ಗುಲ್ಬರ್ಗಾ
೧೦೦.	ಬಿ.ವಿ. ವೀರಭದ್ರಪ್ಪ	೨೦೦೬	ಭಾರತೀಯ ಮಹಿಳೆಯರ ಸಾಂಸ್ಕೃತಿಕ ವಿಕಾಸ	ಕನ್ನಡ ಸಾಹಿತ್ಯ ಪರಿಷತ್ತು ಬೆಮಗಳೂರು
೧೦೧.	ಬಿಳಿಮಲೆ ಪುರುಷೋತ್ತಮ	೧೯೯೦	ಕರಾವಳಿ ಜಾನಪದ	ಮಂಗಳ ಗಂಗೋತ್ರಿ ದ.ಕ.ಜಿಲ್ಲೆ
೧೦೨.	ಭಾಸ್ಕರ ಟಿ.ಎಮ್. / ಹತಗುಂದಿ ರಾಜಶೇಕರ	೨೦೦೫	ಕಲಬುರ್ಗಿ ಜಿಲ್ಲಾ ದರ್ಶನ	ಪ್ರಸಾರಾಂಗ ಗು.ವಿ.ವಿ. ಗುಲ್ಬರ್ಗಾ
೧೦೩.	ಮಹಾಂತೇಶ ಎಸ್.	೧೯೮೬	ಜಾನಪದದಲ್ಲಿ ಆರ್ಥಿಕ ವಿಚಾರಗಳು	ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೧೦೪.	ರಹಮತ್ ತರೀಕೆರೆ	೨೦೦೪	ಸಾಂಸ್ಕೃತಿಕ ಅಧ್ಯಯನ	ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು
೧೦೫.	ರಂಗಸ್ವಾಮಿ ದಿ.ಟಿ.	೧೯೮೪	ಭಾರತದ ಹಬ್ಬ ಹರಿದಿನಗಳು	ಸಮಾಜ ಪುಸ್ತಕಾಲಯ ಧಾರವಾಡ
೧೦೬.	ರಮೇಶ ಬಿ.ಗೋ.	೧೯೮೪	ಹಬ್ಬಗಳು ಜಾತ್ರೆಗಳು	ಹಂಸಧ್ವನಿ ಪ್ರಕಾಶನ ಬಸವ ಸಮಿತಿ, ಬನಹಟ್ಟಿ
೧೦೭.	ರಾಗೌ	೧೯೯೬	ಜನಪದ ಸಾಹಿತ್ಯ ರೂಪಗಳು	ವಾಗ್ದೇವಿ ಪುಸ್ತಕಗಳು, ದೇವರಾಜ ಅರಸ ರಸ್ತೆ, ಬೆಂಗಳೂರು
೧೦೮.	ರಾಜಪ್ಪ ದಳವಾಯಿ	೨೦೦೬	ಕನ್ನಡ ಸಾಹಿತ್ಯ ಕೋಶ	ಶ್ರೀ ರಾಘವೇಂದ್ರ ಪ್ರಕಾಶನ, ಬೆಂಗಳೂರು
೧೦೯.	ರಾಜೇಂದ್ರ ಯರನಾಳೆ	೧೯೯೪	ಶೀಗಿ ಹಾಡುಗಳು	ಸಿದ್ಧೇಶ್ವರ ಸಾಹಿತ್ಯ ಭಂಡಾರ ವಿರಕ್ತ ಮಠ ಕುಶನೂರು ಜಿ॥ ಬೀದರ.
೧೧೦.	ರಾಜೇಂದ್ರ ಯರನಾಳೆ	೨೦೦೦	ಬೀದರ ಜಿಲ್ಲೆಯ ಪ್ರಾದೇಶಿಕ ಭಾಷಾ ವೈಶಿಷ್ಟ್ಯ	ರವಿತೇಜ ಪ್ರಕಾಸನ ಕುಶನೂರು
೧೧೧.	ರಾಜೇಂದ್ರ ಯರನಾಳೆ	೨೦೦೪	ಬೀದರ ಜಿಲ್ಲೆಯ ಸಾಹಿತಿ ಕಲಾವಿದರು	ಕನ್ನಡ ಸಾಹಿತ್ಯ ಪರಿಷತ್ತು, ಬೀದರ
೧೧೨.	ರಾಜೇಂದ್ರ ಯರನಾಳೆ	೨೦೦೪	ಬೊಬ್ಬಿ ಹಾಡುಗಳು	ಕನ್ನಡ ಸಾಹಿತ್ಯ ಪರಿಷತ್ತು, ಬೀದರ
೧೧೩.	ಲಕ್ಕಪ್ಪ ಗೌಡ ಎಚ್.ಜೆ.	೧೯೮೩	ಮಲೆನಾಡು ಜಾನಪದ	ಸ್ನಾತ ಕೋತ್ತರ ಕೇಂದ್ರ, ಬಿ.ಆರ್. ಪ್ರಾಜೆಕ್ಟ್
೧೧೪.	ಲಕ್ಷ್ಮಣ ತೆಲಗಾಗಿ	೧೯೯೧	ಸಂಶೋಧನ (ಡಾ. ಎಂ. ಚಿದಾನಂದ ಮೂರ್ತಿ ಅಭಿನಂದನ ಸಮಿತಿ, ಬೆಂಗಳೂರು)	ಮೈಸೂರು ವಿಶ್ವವಿದ್ಯಾಲಯ
೧೧೫.	ವಾಮನಬೇಂದ್ರೆ	೧೯೭೪	ಸಾಹಿತ್ಯ ವಿರಾಟ್ ಸ್ವರೂಪ	ಸಮಾಜ ಪುಸ್ತಕಾಲಯ ಧಾರವಾಡ

೧೧೬.	ವಿಜಯಶ್ರೀ ಸಬರದ	೧೯೮೯	ಸಾಹಿತ್ಯ ಮತ್ತು ಮಹಿಳೆ	ನವಕರ್ನಾಟಕ ಪಬ್ಲಿಕೇಷನ್ಸ್ ಬೆಂಗಳೂರು
೧೧೭.	ವಿಜಯಶ್ರೀ ಸಬರದ	೨೦೦೫	ಮಹಿಳೆ ಶೋಷಣೆ ಸವಾಲುಗಳು	ಪ್ರ.ಗು.ವಿ.ವಿ.ಗುಲ್ಬರ್ಗಾ
೧೧೮.	ವಿಜಯಶ್ರೀ ಸಬರದ	೨೦೦೫	ವಿಮರ್ಶಾ ಲೇಖನಗಳು	ಪ್ರ.ಗು.ವಿ.ವಿ.ಗುಲ್ಬರ್ಗಾ
೧೧೯.	ವಿ.ಜಿ. ಪೂಜಾರ	೧೯೯೫	ಕನ್ನಡ ಸಾಹಿತ್ಯ ಸಂಬಂಧ	ಚೇತನ ಪ್ರಕಾಶನ ಸರಸ್ವತಿಪುರಂ ಗುಲ್ಬರ್ಗಾ
೧೨೦.	ವೀರಣ್ಣ ದಂಡೆ	೧೯೯೩	ಜನಪದ ಕಾವ್ಯ ಪ್ರಥಮ ವಿಮರ್ಶೆ	ಪ್ರಗತಿ ಪ್ರಕಾಶನ ಕಲಬುರ್ಗಿ
೧೨೧.	ವೀರಣ್ಣ ದಂಡೆ	೧೯೯೩	ಕನ್ನಡ ಜಾನಪದ ಪ್ರಜ್ಞೆ	ಕವಿ ಮಾರ್ಗ ಪ್ರಕಾಶನ, ಗುಲ್ಬರ್ಗಾ
೧೨೨.	ವೀರಣ್ಣ ದಂಡೆ	೧೯೮೧	ಜನಪದ ಕಥೆಯ ವಸ್ತು ಮತ್ತು ತಂತ್ರ	ಬಸವ ಪ್ರಕಾಶನ ಕಲಬುರ್ಗಿ
೧೨೩.	ವೀರೇಂದ್ರ ಸಿಂಪಿ	೧೯೯೯	ಬೀದರ ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರು	ಜಿಲ್ಲಾ ಆಡಳಿತ ಬೀದರ
೧೨೪.	ಶಶಿಕಲಾ ಮೋಳ್ದಿ	೧೯೮೮	ವಂದನೆ : ಡಾ.ಬಿ.ಬಿ. ಹೆಂಡಿಯವರ ಸಂಭಾವನಾ ಗ್ರಂಥ	ಡಾ॥ ಬಿ.ಬಿ. ಹೆಂಡಿಯವರ ಅಭಿನಂದನಾ ಸಮಿತಿ, ಕಲಬುರ್ಗಿ
೧೨೫.	ಶಶಿಕಲಾ ಮೋಳ್ದಿ	೧೯೮೯	ಬಾಜಿದ ಹಾಡುಗಳು	ಅರವಿಂದ ಪ್ರಕಾಶನ ಮಹಾಗಾಂವ
೧೨೬.	ಶಶಿಕಲಾ ಮೋಳ್ದಿ	೧೯೭೭	ಹರದೆಯರ ಹಾಡುಗಳು	ಅರವಿಂದ ಪ್ರಕಾಶನ ಮಹಾಗಾಂವ
೧೨೭.	ಸರ್ವಪಲ್ಲಿ ರಾಧಾಕೃಷ್ಣನ್	೧೯೭೦	ಯುಗಯಾತ್ರೀ ಭಾರತೀಯ ಸಂಸ್ಕೃತಿ ಸಂಪುಟ-೧	ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ ಮೈಸೂರು
೧೨೮.	ಸ್ವಾಮಿ ರಂಗನಾಥನಂದ	೨೦೦೧	ಪರಿವರ್ತನಾಶೀಲ ಸಾಮಾಜಿಕ ಶಾಶ್ವತ ಮೌಲ್ಯಗಳು	ಶ್ರೀ ರಾಮಕೃಷ್ಣ ಆಶ್ರಮ ಯಾದವಗಿರಿ ಮೈಸೂರು
೧೨೯.	ಸಿದ್ದಣ್ಣ ಲಂಗೋಟಿ	೧೯೯೪	ಬಸವಕಲ್ಯಾಣ ದರ್ಶನ	ಶ್ರೀ ವಿಜಯ ಮಹಾಂತೇಶ ನಗರ ರಾಮದುರ್ಗಾ ಜಿ॥ ಬೆಳಗಾವಿ
೧೩೦.	ಸಿ.ಕೆ. ನಾವಲಗಿ	೧೯೯೭	ವಚನ ಸಾಹಿತ್ಯ ಮತ್ತು ಜಾನಪದ	ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು
೧೩೧.	ಸಿ. ನಾಗಭೂಷಣ	೧೯೯೯	ಕನ್ನಡ ಸಾಹಿತ್ಯ ಸಂಸ್ಕೃತಿ ಶೋಧನೆ	ಅಮೃತ ವರ್ಷಿಣಿ ಪ್ರಕಾಶನ ಬೆಂಗಳೂರು
೧೩೨.	ಸಿಂಪಿಲಿಂಗಣ್ಣ	೧೯೭೦	ಜನಾಂಗದ ಜೀವಾಳ	ಶ್ರೀ ಅರವಿಂದ ಗ್ರಂಥಾಲಯ ಚಡಚಣ
೧೩೩.	ಸಿಂಪಿಲಿಂಗಣ್ಣ, ಪಿ. ಧೋಲಾ	೧೯೯೦	ಜೀವನ ಸಂಗೀತ	ಸಮಾಜ ಪುಸ್ತಕಾಲಯ ಧಾರವಾಡ
೧೩೪.	ಸೂಗಯ್ಯ ಹಿರೇಮಠ	೨೦೦೨	ರಂಜೇರಿನ ಸಿಂದರು	ಸಿದ್ಧಲಿಂಗೇಶ್ವರ ಪ್ರಕಾಶನ ಗುಲ್ಬರ್ಗಾ
೧೩೫.	ಸೋಮನಾಥ ಯಾಳವಾರ	೧೯೮೬	ಹುಮನಾಬಾದ ತಾಲ್ಲೂಕು ದರ್ಶನ	ಐ.ಬಿ.ಹೆಚ್. ಪ್ರಕಾಶನ ಬೆಂಗಳುರು
೧೩೬.	ಸೋಮನಾಥ ಯಾಳವಾರ	೨೦೦೬	ಬೀದರ ಜಿಲ್ಲೆಯ ಶರಣ ಸ್ಮಾರಕಗಳು	ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
೧೩೭.	ಸೋಮನಾಥ ಯಾಳವಾರ / ಪ್ರೇಮಾ ಸಿರ್ಸೆ	೨೦೦೫	ಬೀದರ ಜಿಲ್ಲಾ ದರ್ಶನ	ಪ್ರಸಾರಾಂಗ ಗುಲ್ಬರ್ಗಾ ವಿ.ವಿ. ಗುಲ್ಬರ್ಗಾ
೧೩೮.	ಹಂಪಾ ನಾಗರಾಜಯ್ಯ	೧೯೮೬	ಬೀದರ ಸಾಹಿತ್ಯ ಸಮ್ಮೇಳನ	ಕನನಡ ಸಾಹಿತ್ಯ ಪರಿಷತ್ತು ಬೆಂಗಳೂರು
೧೩೯.	ಹಾ.ಮಾ. ನಾಯಕ	೧೯೩೧	ಜಾನಪದ ಸ್ವರೂಪ	ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥ ಮಾಲೆ, ಮೈಸೂರು
೧೪೦.	ಹಾ.ಮಾ. ನಾಯಕ	೧೯೭೪	ಕನ್ನಡ ವಿಶ್ವಕೋಶ ಸಂಪುಟ-೭	ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ ಮೈಸೂರು
೧೪೧.	ಹಿ.ಶಿ. ರಾಮಚಂದ್ರಗೌಡ	೧೯೯೩	ಜನಪದರು ನಾವು	ಮಾನವಿ ಪ್ರಕಾಶನ ಮಾನಸ ಗಂಗೋತ್ರಿ ಮೈಸೂರು
೧೪೨.	ಹಿ.ಶಿ. ರಾಮಚಂದ್ರಗೌಡ	೨೦೦೪	ಜಾನಪದ ಗ್ರಹಿಕೆ : ಪರಿಕಲ್ಪನೆ	ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು
೧೪೩.	ಹಿ.ಚಿ. ಬೋರಲಿಂಗಯ್ಯ	೧೯೯೬	ಕರ್ನಾಟಕ ಜನಪದ ಕಲೆಗಳ ಕೋಶ	ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ
೧೪೪.	ಹೇಮಲತಾ ವಡ್ಡೆ	೨೦೦೬	ಬೀದರ ಜಿಲ್ಲೆಯ ಹಬ್ಬ ಹರಿದಿನಗಳು	ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳುರು

ಪಿಎಚ್.ಡಿ. ಪ್ರಬಂಧಗಳು ಃ

ಕ್ರ. ಸಂ	ಲೇಖಕರು / ಸಂಪಾದಕರು	ವರ್ಷ	ಗ್ರಂಥ	ಪ್ರಕಾಶನ
೧.	ಎಂ. ಚಿದಾನಂದ ಮೂರ್ತಿ	೧೯೯೯	ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ	ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ ಮೈಸೂರು
೨.	ಎಚ್.ಟಿ. ಪೋತೆ	೧೯೯೩	ಹೈದ್ರಾಬಾದ ಕರ್ನಾಟಕ ಜನಪದ ಪ್ರದರ್ಶನ ಕಲೆಗಳು	ಅಂಬು ಪ್ರಕಾಶನ ರಾಯಚೂರು
೩.	ಜಗನ್ನಾಥ ಹೆಬ್ಬಾಳೆ	೨೦೦೮	ಹೈದ್ರಾಬಾದ ಕರ್ನಾಟಕ ಜಾತ್ರೆಗಳು ಒಂದು ಸಾಂಸ್ಕೃತಿಕ ಅಧ್ಯಯನ	ಕನ್ನಡ ಸಾಹಿತ್ಯ ಪರಿಷತ್ತು
೪.	ದೇವೇಂದ್ರಕುಮಾರ ಹಕಾರ	೧೯೮೫	ಜಾನಪದ ಸಾಮಾಜಿಕ ಕಥನ ಗೀತೆಗಳಲ್ಲಿ ದುಃಖಾಂತ ನಿರೂಪಣೆ	ಕನ್ನಡ ಸಾಹಿತ್ಯ ಪರಿಷತ್ತು
೫.	ನಂ. ತಪಸ್ವೀಕುಮಾರ	೧೯೮೨	ಕನ್ನಡ ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ	ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ ಮೈಸೂರು
೬.	ಪಿ.ಕೆ. ಖಂಡೋಬಾ	೧೯೯೧	ಕರ್ನಾಟಕ ಲಂಬಾಣಿಗಳು ಒಮದು ಸಾಂಸ್ಕೃತಿಕ ಅಧ್ಯಯನ	ದಿ॥ ತೇಜಸಿಂಗ ರಾಠೋಡ ಮೆಮೋರಿಯಲ್ ಟ್ರಸ್ಟ್ ಗುಲ್ಬರ್ಗಾ
೭.	ಜಿ.ಎಸ್. ಗದ್ದಗಿಮಠ	೧೯೬೯	ಕನ್ನಡ ಜನಪದ ಗೀತೆಗಳು	ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ
೮.	ಬಸವರಾಜ ಪೊಲೀಸ ಪಾಟೀಲ	೨೦೦೧	ಹೈದ್ರಾಬಾದ ಕರ್ನಾಟಕ ಜನಪದ ಸಾಹಿತ್ಯ	ಅಮರ ಪ್ರಕಾಶನ ಗುಲ್ಬರ್ಗಾ
೯.	ಯಶೋಧರಾ ಶಾಸ್ತ್ರೀ	೧೯೯೯	ಗುಲ್ಬರ್ಗಾ ಜಿಲ್ಲೆಯ ಸಂಪ್ರದಾಯದ ಹಾಡುಗಳು	ಜ್ಯೋತಿರ್ಮಯಿ ಪ್ರಕಾಶನ ಗುಲ್ಬರ್ಗಾ
೧೦.	ವೈಜಿನಾಥ ಭಂಡೆ	೧೯೯೦	ಬೀದರ ಜಿಲ್ಲೆಯ ಸ್ಥಳನಾಮಗಳು	ಅಪ್ರಕಟಿತ
೧೧.	ಶೈಲಜಾ ಉಡಚಣ	೧೯೯೧	ವಚನಕಾರರ ದೃಷಟ್ಟಿಯಲ್ಲಿ ಸ್ತ್ರೀ	ಗ್ರಿನೋಬಲ್ಸ್ ಪ್ರಕಾಶನ ಕಲಬುರ್ಗಿ
೧೨.	ಸೋಮನಾಥ ಯಾಳವಾರ	೨೦೦೫	ಪುಲಿಗೆರೆಯ ಆದಯ್ಯ	ಚನ್ನಬಸವೇಶ್ವರ ಸಂಸ್ಥಾನ ಹಿರೇಮಠ ಹಾರಕೂಡ ತಾ॥ ಬಸವಕಲ್ಯಾಣ

ಪತ್ರಿಕೆಗಳು :

ಕನ್ನಡ ಪ್ರಭ	೫.೦೩.೨೦೦೮
ಪ್ರಜಾವಾಣಿ	೨೯.೦೭.೨೦೦೬
ಪ್ರಜಾವಾಣಿ	೧೯.೦೨.೨೦೦೯
ವಿಜಯಕರ್ನಾಟಕ	೧೮.೦೮.೨೦೦೬

ಸಂಕ್ರಮಣ	ಸಂಕ್ರಮಣ ಪ್ರಕಾಶನ ಧಾರವಾಡ
ಕವಿಮಾರ್ಗ	ವೀರಣ್ಣದಂಡೆ, ಬಸವ ಮುದ್ರಣಾಲಯ, ಗುಲ್ಬರ್ಗಾ
ಜನಪದ	ಆಯುಕ್ತರು, ವಾರ್ತಾ ಇಲಾಖೆ, ಬೆಂಗಳೂರು
ಪ್ರಬುದ್ಧ ಕರ್ನಾಟಕ	ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು
ಮಾನವಿಕ ಕರ್ನಾಟಕ	ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು
ಕನ್ನಡ ಅಧ್ಯಾಯನ	ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ
ಮಹಿಳಾ ಅಧ್ಯಯನ	ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ
ಅಭಿವ್ಯಕ್ತಿ	ಕರ್ನಾಟಕ ಸಂಘ (ರಿ.) ಮಂಡ್ಯ
ಟೀಚರ್	ಭಾರತ ಜ್ಞಾನ ವಿಜ್ಞಾನ ಸಮಿತಿ, ಬೆಂಗಳೂರು

ಸ್ಮರಣ ಸಂಚಿಕೆ :	ಚೆಂಬೆಳಕು	ಬೀದರ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ, ಭಾಲ್ಕಿ ೧೯೯೪
	ಕಲ್ಯಾಣ ಕನ್ನಡ	ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತ್, ಬೀದರ ೧೯೯೮
	ಬೀದರ ಉತ್ಸವ	ಜಿಲ್ಲಾ ಸಂಸ್ಕೃತಿ ಪರಿಷತ್ತ್, ಬೀದರ ೨೦೦೬
	ಬೀದರ ಉತ್ಸವ	ಜಿಲ್ಲಾ ಸಂಸ್ಕೃತಿ ಪರಿಷತ್ತ್, ಬೀದರ ೨೦೦೯

ನಿಘಂಟುಗಳು :	ಸಂಕ್ಷಿಪ್ತ ಕನ್ನಡ ನಿಘಂಟು	ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೨೦೦೧
	ಕನ್ನಡ ಇಂಗ್ಲೀಷ್ ಡಿಕ್ಷನರಿ ರೆ. ಕಿಟಲ್	ಎಶಿಯನ್ ಎಜ್ಯುಕೇಷನಲ್ ಸರ್ವಿಸ್, ಮದ್ರಾಸ್ ೧೯೯೪
	ಕನ್ನಡ ಪದನಿಧಿ	ಕನ್ನಡ ಸಂಘ ಸಂತ ಜೋಸೇಫ್ ಸಂಜೆ ಕಾಲೇಜು, ಬೆಂಗಳೂರು ೨೦೦೭
	ಕನ್ನಡ ನಿಘಂಟುಗಳು (ಸಂಪುಟ ೧ ರಿಂದ ೬)	ಕನ್ನಡ ಸಾಹಿತ್ಯ ಪರಿಷತ್ತು
	ಮಹಾರಾಷ್ಟ್ರ ಶಬ್ಧ ಕೋಶ	ಹ.ಅ. ಭಾವೇ ಪುಣೆ ೧೯೮೮

ಗೆಜೆಟಿಯರ್ :	ಕರ್ನಾಟಕ ರಾಜ್ಯ ಗೆಜೆಟಿಯರ್	ಕರ್ನಾಟಕ ರಾಜ್ಯ ಸರ್ಕಾರ ೧೯೮೬
	Bidar District Gazetteer of India	Govt. Of Karnataka 1977

ಛಾಯಾ ಚಿತ್ರಗಳು



ಸೀಮಿ ನಾಗಣ್ಣಾ ಹಳ್ಳಿಖೇಡ (ಬಿ)



ಮನೆಯಲ್ಲಿ ಬೆಳೆದ ಹುತ್ತ ಮೈಲೂರು



ಭರಮ ನಾಗಣ್ಣಾ ಮಂಠಾಳ



ಮನೆಯಲ್ಲಿನ ಹಿರೋಡ್ಯಾ ಬಸವಕಲ್ಯಾಣ



ಜೋಡಿ ನಾಗ ಸಂತಪೂರ



ಐದುಹೆಡೆಯ ನಾಗ ಹಲಬರ್ಗಾ



ಮನುಷ್ಯಾಕಾರದ ನಾಗ ಸಸ್ತಾಪೂರ



ಜೋಡಿ ಮನುಷ್ಯಾಕಾರದ ನಾಗ ಜಲಸಂಗಿ



ಮನೆಯ ಅಂಗಳದಲ್ಲಿ ಹಾಕುತ್ತಿರುವ ಭುಲಾಯಿ ಮೆಳಕುಂದಾ



ಗುಡಿಯ ಮುಂದೆ ಹಾಕುತ್ತಿರುವ ಭುಲಾಯಿ ಮಂದಕನಳ್ಳಿ



ಓಣಿಯಲ್ಲಿ ಹಾಕುತ್ತಿರುವ ಭುಲಾಯಿ ಹುಲಸೂರ



ಊರಿನವರೆಲ್ಲ ಸೇರಿ ಹಾಕುತ್ತಿರುವ ಭುಲಾಯಿ ಸುಲ್ತಾನಪೂರ



ತಲೆಗೆ ತಲೆ ಹಚ್ಚಿ ಹಾಡುತ್ತ ಭುಲಾಯಿ
ಹಾಕುತ್ತಿರುವುದು ಹಳ್ಳಿಖೇಡ (ಬಿ)



ಮನೆಯ ಮುಂದೆ ಭುಲಾಯಿ
ಹಾಕುತ್ತಿರುವುದು ಔರಾದ



ವಯಸ್ಸಾದವರು ಭುಲಾಯಿ ಹಾಕುತ್ತಿರುವುದು ಚಿಟ್ರಿ



ಸರಬೀಲದ ಮೇಲೆ ಶಿರೋಳಶೆಟ್ಟಿ
ಮಂಠಾಳ



ಗೌಡರ ಮನೆಯಲ್ಲಿ
ಶಿರೋಳಶೆಟ್ಟಿ ಬಸವಕಲ್ಯಾಣ